ಭೀಮಕವಿ ಬಸವಪುರಾಣ: ಸಾಂಸ್ಕೃತಿಕ ಅಧ್ಯಯನ

ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸಿದ ಅಧ್ಯಯನ ಪ್ರಬಂಧ

ಸಂಶೋಧಕರು

ಶ್ರೀ ಬಿ.ಎನ್. ತಂಬೂಳಿ
ಎಂ.ಎ. ಬಿ.ಇಡಿ

ಮಾರ್ಗದರ್ಶಕರು

ಡಾ.ಎಸ್.ಆರ್. ಗುಂಜಾಳ
ಎಂ.ಎ. ಎಂ.ಲಿಬ್ ಸೈನ್ಸ್. ಪಿಎಚ್.ಡಿ
ನಿವೃತ್ತ ಪ್ರಾಧ್ಯಾಪಕರು, ಗುಲ್ಬರ್ಗ ವಿಶ್ವವಿದ್ಯಾಲಯ, ಗುಲ್ಬರ್ಗ

ಅಧ್ಯಯನಾಂಗ
ಕನ್ನಡ ವಿಶ್ವವಿದ್ಯಾಲಯ ಹಂಪಿ
ವಿದ್ಯಾರಣ್ಯ-೫೮೩೨೭೬.

ಸಂಶೋಧನ ಕೇಂದ್ರ
ಲಿಂಗಾಯತ ಅಧ್ಯಯನ ಸಂಸ್ಥೆ
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ
ಗದಗ-೧

೨೦೧೨

480

ಭೀಮಕವಿ ಬಸವಪುರಾಣ: ಸಾಂಸ್ಕೃತಿಕ ಅಧ್ಯಯನ

ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸಿದ ಅಧ್ಯಯನ ಪ್ರಬಂಧ

ಸಂಶೋಧಕರು

ಶ್ರೀ ಬಿ.ಎನ್. ತಂಬೂಳಿ
ಎಂ.ಎ. ಬಿ.ಇಡಿ

ಮಾರ್ಗದರ್ಶಕರು

ಡಾ.ಎಸ್.ಆರ್. ಗುಂಜಾಳ
ಎಂ.ಎ., ಎಂ.ಲಿಬ್ ಸೈನ್ಸ್, ಪಿಎಚ್.ಡಿ

ನಿವೃತ್ತ ಪ್ರಾಧ್ಯಾಪಕರು, ಗುಲ್ಬರ್ಗ ವಿಶ್ವವಿದ್ಯಾಲಯ, ಗುಲ್ಬರ್ಗ

ಅಧ್ಯಯನಾಂಗ
ಕನ್ನಡ ವಿಶ್ವವಿದ್ಯಾಲಯ ಹಂಪಿ
ವಿದ್ಯಾರಣ್ಯ-೫೮೩೨೭೬

ಸಂಶೋಧನ ಕೇಂದ್ರ
ಲಿಂಗಾಯತ ಅಧ್ಯಯನ ಸಂಸ್ಥೆ
ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ
ಗದಗ-೧

೨೦೧೨

ಅಧ್ಯಯನಾಂಗ

ಕನ್ನಡ ವಿಶ್ವವಿದ್ಯಾಲಯ ಹಂಪಿ

ಶ್ರೀ ಬಿ.ಎನ್. ತಂಬೂಳಿ ಎಂ.ಎ. ಬಿ.ಇಡಿ
ಸಂಶೋಧಕರು
ಮೊ. ೯೪೪೯೧-೦೦೧೫೬

ಕನ್ನಡ ಭಾಷಾ ಶಿಕ್ಷಕರು,
ರಾಷ್ಟ್ರೀಯ ಪದವಿಪೂರ್ವ ಕಾಲೇಜು
(ಪ್ರೌಢಶಾಲಾ ವಿಭಾಗ)
ಬಿ.ಆರ್.ಪ್ರಾಜೆಕ್ಟ್., ಭದ್ರಾವತಿ (ತಾ.)
೫೭೭೧೧೫

ಅಭ್ಯರ್ಥಿಯ ಪ್ರಮಾಣಪತ್ರ

"ಭೀಮಕವಿ ಬಸವಪುರಾಣ: ಸಾಂಸ್ಕೃತಿಕ ಅಧ್ಯಯನ" ಎಂಬ ಶೀರ್ಷಿಕೆಯ ಈ ಸಂಶೋಧನ ಮಹಾಪ್ರಬಂಧವನ್ನು **ಡಾ.ಎಸ್.ಆರ್. ಗುಂಜಾಳ** ನಿವೃತ್ತ ಪ್ರಾಧ್ಯಾಪಕರು, ಗುಲ್ಬರ್ಗ ವಿಶ್ವವಿದ್ಯಾಲಯ, ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ. ಪ್ರಸ್ತುತ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿದ್ದೇನೆ. ಈ ಸಂಶೋಧನ ಮಹಾಪ್ರಬಂಧದ ಯಾವುದೇ ವಿಷಯವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶಕ್ಕಾಗಿ ಅಥವಾ ಪ್ರಕಟಣೆಗಾಗಿ ಬಳಸಿಕೊಂಡಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ : ಗದಗ

ದಿನಾಂಕ : ೨೬-೧೧-೨೦೧೨

(ಬಿ.ಎನ್. ತಂಬೂಳಿ)

ಅಧ್ಯಯನಾಂಗ

ಕನ್ನಡ ವಿಶ್ವವಿದ್ಯಾಲಯ ಹಂಪಿ

ಡಾ.ಎಸ್.ಆರ್. ಗುಂಜಾಳ
ನಿವೃತ್ತ ಪ್ರಾಧ್ಯಾಪಕರು, ಗುಲ್ಬರ್ಗ ವಿಶ್ವವಿದ್ಯಾಲಯ,
ಗುಲ್ಬರ್ಗ, ಸಂತೂಬಾಯಿ ಅಪಾರ್ಟಮೆಂಟ್, ಧಾರವಾಡ
ಮೊ. ೯೨೪೧೭-೩೦೩೭೫

ಸಂಶೋಧನ ಕೇಂದ್ರ
ಲಿಂಗಾಯತ ಅಧ್ಯಯನ ಸಂಸ್ಥೆ
ಶ್ರೀ ಜಗದ್ಗುರು ತೋಂಟದಾರ್ಯ
ಸಂಸ್ಥಾನಮಠ
ಗದಗ-೧

ಮಾರ್ಗದರ್ಶಕರ ದೃಢೀಕರಣಪತ್ರ

ಬಿ.ಎನ್. ತಂಬೂಳಿ ಅವರು **"ಭೀಮಕವಿ ಬಸವಪುರಾಣ: ಸಾಂಸ್ಕೃತಿಕ ಅಧ್ಯಯನ"** ಎಂಬ ಶೀರ್ಷಿಕೆಯ ಈ ಸಂಶೋಧನ ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಪಿಎಚ್.ಡಿ ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿದ್ದಾರೆ. ಈ ಮಹಾಪ್ರಬಂಧವು ಸಂಶೋಧಕರ ಸ್ವಂತ ಸಂಶೋಧನೆಯ ಮೇಲೆ ರೂಪುಗೊಂಡಿದೆ. ಈ ಮಹಾಪ್ರಬಂಧದ ಯಾವುದೇ ವಿಷಯವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶಕ್ಕಾಗಿ ಅಥವಾ ಪದವಿಗಾಗಿ ಬಳಸಿಕೊಂಡಿಲ್ಲವೆಂದು ದೃಢೀಕರಿಸುತ್ತೇನೆ.

ಎಸ್. ಆರ್. ಗುಂಜಾಳ

ಸ್ಥಳ : ಗದಗ
(ಡಾ.ಎಸ್.ಆರ್. ಗುಂಜಾಳ)

ದಿನಾಂಕ :

ನೆನವರಿಕೆ

ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಅಂತಿಮ ವರ್ಷದಲ್ಲಿ ಎಂ.ಎ. ಓದುತ್ತಿದ್ದಾಗಲೇ ನನಗೆ ಪ್ರೌಢಶಾಲಾ ಕನ್ನಡ ಶಿಕ್ಷಕರ ಹುದ್ದೆ ದೊರೆಯಿತು. ಕೆಲಸ ಸಿಕ್ಕ ಸಂತಸ ಒಂದು ಕಡೆಯಾದರೆ, ವಿಶ್ವವಿದ್ಯಾಲಯದ ಶೈಕ್ಷಣಿಕ ಪರಿಸರದಿಂದ ದೂರಾಗಬೇಕಲ್ಲ ಎಂಬ ಕೊರಗು ಇನ್ನೊಂದು ಕಡೆ. ವಚನಕಾರರ ಕುರಿತು ಅಧ್ಯಯನಾಸಕ್ತಿಯನ್ನು ಉಳಿಸಿಕೊಳ್ಳಬೇಕು ಎನ್ನುವ ಹಂಬಲ ಹಾಗೇ ವಿಶ್ವವಿದ್ಯಾಲಯದ ಸಂಬಂಧವನ್ನು ಬೆಳೆಸಿಕೊಳ್ಳಬೇಕೆಂಬ ಬಲವಾದ ಇಚ್ಛೆ ನನ್ನಲ್ಲಿ ಇತ್ತು. ಅದೃಷ್ಟವೋ ಎಂಬಂತೆ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಪರಿಸರದಿಂದ ದೂರಾದ ನನಗೆ ಶಿವಮೊಗ್ಗದ ಕುವೆಂಪು ವಿಶ್ವವಿದ್ಯಾಲಯದ ಸನಿಹದಲ್ಲೆ ವಾಸಿಸಬೇಕಾಗಿ ಬಂದುದು ಸಂಶೋಧನೆಯನ್ನು ಕೈಗೊಳ್ಳಬೇಕೆಂಬ ನನ್ನ ಆಸೆಗೆ ರೆಕ್ಕೆಪುಕ್ಕ ಬಂದಂತಾಯಿತು. ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಎಡತಾಕಿ ಸಂಶೋಧನೆ ಮಾಡಬೇಕೆಂದು ಅವಕಾಶ ಕೋರಿದರೂ ಸಹ ಒಂದೆರಡು ಸಂದರ್ಭಗಳು ಸ್ವಲ್ಪದರಲ್ಲಿ ಕೈತಪ್ಪಿ ಹೋದವು.

ಹೀಗಿರುವಾಗಲೇ ಹಂಪೆಯ ಕನ್ನಡ ವಿಶ್ವವಿದ್ಯಾಲಯ ಗದುಗಿನ ತೋಂಟದಾರ್ಯ ಸಂಸ್ಥಾನ ಮಠಕ್ಕೆ **'ಸಂಶೋಧನ ಕೇಂದ್ರ'**ವೆಂದು ಘೋಷಿಸಿ ಅದರಡಿಯಲ್ಲಿ ಅರ್ಹ ವಿದ್ಯಾರ್ಥಿಗಳಿಗಾಗಿ ಅರ್ಜಿ ಕರೆದ ವಿಚಾರವು ನನ್ನ ಸ್ನೇಹಿತರಿಂದ ತಿಳಿಯಿತು. ಆ ಸಂದರ್ಭದಲ್ಲಿ ವಿವರವಾದ ಮಾರ್ಗದರ್ಶನ ಮಾಡಿದವರು ನನ್ನ ಗುರುಗಳಾದ ಡಾ.ವೀರಣ್ಣ ರಾಜೂರ ಅವರು. ಅವರ ಸಲಹೆ-ಸಹಕಾರ ದೊರೆಯದೆ ಹೋಗಿದ್ದರೆ ಸಂಶೋಧನೆ ಕೈಗೊಳ್ಳುವ ಅಪೂರ್ವ ಸದವಕಾಶ ದೊರೆಯುತ್ತಿರಲಿಲ್ಲ. ಲಿಖಿತ ಮತ್ತು ಮೌಖಿಕ ಪರೀಕ್ಷೆಯ ನಂತರ ಸಂಶೋಧನಾ ಕೇಂದ್ರದ ಮೊಟ್ಟಮೊದಲ ವಿದ್ಯಾರ್ಥಿಗಳಾಗಿ ನಾನು ಮತ್ತು ನನ್ನ ಕೆಲವು ಸ್ನೇಹಿತರು ಆಯ್ಕೆಯಾದ ಸಂದರ್ಭವಂತೂ ಅವಿಸ್ಮರಣೀಯ.

ನನ್ನ ಸಂಶೋಧನ ವಿಷಯಕ್ಕೆ ಮಾರ್ಗದರ್ಶಕರಾಗುವ ಉದಾರತೆ ತೋರಿದವರು ವಿದ್ವಾಂಸರಾದ ಡಾ.ಎಸ್.ಆರ್.ಗುಂಜಾಳರು. ಮೊಟ್ಟಮೊದಲು ಸ್ನೇಹಿತನೊಡಗೂಡಿ ಅವರ ಮನೆಗೆ ಹೋದಾಗ ಅತ್ಯಂತ ಪ್ರೀತಿ ಪೂರ್ವಕವಾಗಿ ಕಂಡರು. ಅವರ ಶಿಸ್ತು, ಕ್ರಿಯಾಶೀಲತೆ, ಕರ್ತವ್ಯನಿಷ್ಠೆ ಮಾದರಿಯಾಗುವಂತಹ ಗುಣಗಳು. ಜ್ಞಾನವೃದ್ಧರೂ,ವಯೋವೃದ್ಧರೂ ಆದ ಅವರನ್ನು ನೋಡಿಯೇ ಕಲಿಯಬೇಕಾದುದು ಬಹಳಷ್ಟಿದೆ ಎಂದು ನನಗನ್ನಿಸಿದೆ. ನನ್ನ ಸಂಶೋಧನಾ ವಿಷಯದಲ್ಲಿ

ಸಂಪೂರ್ಣ ಸ್ವಾತಂತ್ರ್ಯ, ಸಹಕಾರ ಕೊಟ್ಟು ಕ್ರಿಯಾಶೀಲಗೊಳಿಸಿ ಪ್ರೀತಿಪೂರ್ವಕ ಒತ್ತಡ ಹಾಕಿ ನನ್ನಿಂದ ಕೆಲಸ ಮಾಡಿಸಿದ ತಾಳ್ಮೆಯ ಮೂರ್ತಿ ಅವರು. 'ಗ್ರಂಥಾಲಯದ ಅಂತರ್ಜಲ' ಎಂಬ ಅಭಿದಾನಕ್ಕೆ ಕಾರಣರಾದ ಇಂತಹ ಮಹನೀಯರ ಮಾರ್ಗದರ್ಶನ ಸಿಕ್ಕಿದ್ದು ನನ್ನ ಭಾಗ್ಯವೆಂದೇ ಭಾವಿಸಿದ್ದೇನೆ. ಶಿವಮೊಗ್ಗದಿಂದ ದೂರದ ಧಾರವಾಡಕ್ಕೆ ಬರವಣಿಗೆಯನ್ನು ಹಿಡಿದು ಹೋದಾಗ ಪ್ರೀತಿಯಿಂದ, ವಿಶ್ವಾಸದಿಂದ ವಿಚಾರಿಸಿ ಸೂಕ್ತ ಸಲಹೆ, ಮಾರ್ಗದರ್ಶನ ಮಾಡಿದ ಡಾ.ಎಸ್.ಆರ್.ಗುಂಜಾಳ ಹಾಗೂ ಅವರ ಧರ್ಮಪತ್ನಿ ಶ್ರೀಮತಿ ಶಾಂತಾದೇವಿ ಗುಂಜಾಳ ಅವರನ್ನು ಕೃತಜ್ಞತಾಪೂರ್ವಕವಾಗಿ ಸ್ಮರಿಸಿಕೊಳ್ಳುತ್ತೇನೆ.

ಗದುಗಿನ ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳು ಸಾಹಿತ್ಯಾಸಕ್ತರು, ಶಿಕ್ಷಣಪ್ರೇಮಿಗಳು. ತಮ್ಮ ವಿದ್ವತ್ಪೂರ್ಣ ಶ್ರೀನುಡಿಗಳಿಂದ ಸಂಶೋಧನ ಕಿಚ್ಚನ್ನು ಹತ್ತಿಸಿದವರು. ಆಶೀರ್ವಾದದ ನುಡಿಗಳನ್ನಾಡಿ ನನಗೆ ಮತ್ತು ನನ್ನ ಸಹಪಾಠಿ ವಿದ್ಯಾರ್ಥಿಗಳನ್ನು ಕುರಿತು **'ಪ್ರಥಮ ಬೆಳೆ ಹುಲುಸಾಗಿ ಬೆಳೆಯಲಿ'** ಎಂದು ಹೃದಯಪೂರ್ವಕವಾಗಿ ಹರಸಿದವರು. ಅವರಿಗೆ ಭಕ್ತಿ ಪೂರ್ವಕವಾಗಿ ವಂದಿಸುತ್ತೇನೆ.

ಲಿಂಗಾಯತ ಅಧ್ಯಯನ ಸಂಸ್ಥೆಯ ನಿರ್ದೇಶಕರಾದ ಡಾ.ಎಂ.ಎಂ.ಕಲಬುರ್ಗಿಯವರು ಸಂಶೋಧನ ಚಟುವಟಿಕೆಗಳನ್ನು ಗಮನಿಸುತ್ತಾ ಸೂಕ್ತ ಮಾರ್ಗದರ್ಶನ ನೀಡುತ್ತಾ ಬಂದಿದ್ದಾರೆ. ಅವರ ಒತ್ತಡವನ್ನು ವಿದ್ಯಾರ್ಥಿಗಳ ಮೇಲೆ ಪ್ರಯೋಗಿಸುತ್ತ ಸಂಶೋಧನೆ ಪೂರ್ಣಗೊಳಿಸುವಂತೆ ಪ್ರೀತಿಪೂರ್ವಕ ಆಗ್ರಹವನ್ನು ಮಾಡುತ್ತ ನಮಗೆ ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ಸಂಶೋಧನ ಕಮ್ಮಟಗಳನ್ನು ಯಶಸ್ವಿಯಾಗಿ ನಿರ್ವಹಿಸುತ್ತಾ ಸೂಕ್ತ ಮಾರ್ಗದರ್ಶನ, ಸಲಹೆ ಸಹಕಾರಗಳನ್ನು ನೀಡಿದವರು ಡಾ. ವೀರಣ್ಣ ರಾಜೂರ ಅವರು. ಈ ಗುರುದ್ವಯರಿಗೆ ಅನಂತ ವಂದನೆಗಳು.

ಸಂಶೋಧನಾ ಕಮ್ಮಟಗಳಲ್ಲಿ ಪಾಲ್ಗೊಂಡು ನನ್ನೆಲ್ಲ ಸಹಪಾಠಿ ಸಂಶೋಧನಾ ವಿದ್ಯಾರ್ಥಿಗಳಿಗೆ ಸೂಕ್ತ ಸಲಹೆ ಮಾರ್ಗದರ್ಶನ ಮಾಡಿದ ಡಾ.ಬಿ.ವಿ.ಶಿರೂರ, ಡಾ.ಬಿ.ಎಸ್.ಗೊರವರ, ಡಾ.ಪಿ.ಕೆ.ರಾಠೋಡ, ಡಾ.ವೀಣಾ ಹೂಗಾರ, ಸಂಶೋಧನಾ ಕೇಂದ್ರದ ಸಂಯೋಜನಾಧಿಕಾರಿಗಳಾದ ಡಾ.ಅರ್ಜುನ ಗೊಳಸಂಗಿ, ಇವರೆಲ್ಲರಿಗೆ ಗೌರವಪೂರ್ವಕ ವಂದನೆಗಳು. ನನ್ನ ಸಂಶೋಧನ ವಿಷಯ ಕುರಿತು ಚರ್ಚಿಸಲು ಹೋದ ಸಂದರ್ಭದಲ್ಲಿ ಸೂಕ್ತ ಮಾರ್ಗದರ್ಶನ ನೀಡಿ ವಿಷಯದ

ಒಳಹೊರಗನ್ನು ಕುರಿತು ಸೂಕ್ತ ತಿಳುವಳಿಕೆ ನೀಡಿ ಉಪಕರಿಸಿದ ಡಾ.ಎಸ್.ವಿದ್ಯಾಶಂಕರ ಮತ್ತು ಡಾ.ಬಿ.ಸಿ. ಜವಳಿಯವರಿಗೆ ಋಣಿಯಾಗಿದ್ದೇನೆ.

ಈ ಪ್ರಬಂಧದ ಬರವಣಿಗೆಯನ್ನು ಸೂಕ್ಷ್ಮವಾಗಿ ಗಮನಿಸಿ ಅಧ್ಯಯನದ ವಿವಿಧ ಸಾಧ್ಯತೆಗಳನ್ನು ಚರ್ಚಿಸಿ ಉಪಕರಿಸಿದ ಕುವೆಂಪು ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಪ್ರಾಧ್ಯಾಪಕರಾದ ಡಾ.ಶಿವಾನಂದ ಕೆಳಗಿನಮನಿ ಅವರಿಗೆ ವಂದನೆಗಳು.

ಈ ವಿಷಯಕ್ಕೆ ಸಂಬಂಧಿಸಿದ ಆಕರಗ್ರಂಥಗಳನ್ನು ಹಾಗೂ ಲೇಖನಗಳನ್ನು ಒದಗಿಸಿಕೊಡುವಲ್ಲಿ ನೆರವಾದ ಬೆಂಗಳೂರಿನ 'ಬಸವ ಸಮಿತಿ', ಬೆಳಗಾವಿಯ 'ನಾಗನೂರು ರುದ್ರಾಕ್ಷಿಮಠದ ಲಿಂಗಾಯತ ಸಂಶೋಧನ ಕೇಂದ್ರ ಗ್ರಂಥಾಲಯ', ಸಿರಿಗೆರೆಯ 'ತರಳಬಾಳು ಮಠ', ಸುತ್ತೂರಿನ 'ಶಿವರಾತ್ರಿದೇಶಿಕೇಂದ್ರ ಮಠ', ಗದುಗಿನ 'ತೋಂಟದಾರ್ಯ ಮಠದ ಗ್ರಂಥಾಲಯ', ಕರ್ನಾಟಕ ವಿಶ್ವವಿದ್ಯಾಲಯದ 'ಕೇಂದ್ರ ಗ್ರಂಥಾಲಯ', 'ಕುವೆಂಪು ವಿಶ್ವವಿದ್ಯಾಲಯದ ಗ್ರಂಥಾಲಯ' ಹಾಗೂ ಅಲ್ಲಿಯ ಸಿಬ್ಬಂದಿವರ್ಗದವರನ್ನು ನೆನೆಯುತ್ತೇನೆ. ಕುವೆಂಪು ವಿಶ್ವವಿದ್ಯಾಲಯದ ಗ್ರಂಥಾಲಯಾಧಿಕಾರಿಗಳಾದ ಶ್ರೀ ಆರ್. ತುಕಾರಾಂ, ಡಾ. ಆರ್. ಎಚ್. ವಾಲ್ಮೀಕಿ, ಶ್ರೀ ಎಸ್. ಬಿ. ಬಿರಾದಾರ ಇವರ ಸಹಕಾರ ಹಾಗೂ ಅಲ್ಲಿಯ ಸಿಬ್ಬಂದಿವರ್ಗದವರ ವಿಶ್ವಾಸನೀಯತೆಯನ್ನು ಆತ್ಮಪೂರ್ವಕವಾಗಿ ಸ್ಮರಿಸಿಕೊಳ್ಳುತ್ತೇನೆ.

ಅಧ್ಯಯನಕ್ಕೆ ಅನುಮತಿ ಕೊಟ್ಟು ಪ್ರೋತ್ಸಾಹಿಸಿದ ನನ್ನ ಮಾತೃಸಂಸ್ಥೆ ಶಿವಮೊಗ್ಗದ ಪ್ರತಿಷ್ಠಿತ ರಾಷ್ಟ್ರೀಯ ಶಿಕ್ಷಣ ಸಮಿತಿಯ ಕಾರ್ಯದರ್ಶಿಗಳಾದ ಶ್ರೀ ಎಸ್.ವಿ ತಿಮ್ಮಯ್ಯನವರು ಹಾಗೂ ದಿ.ಗಿರಿಮಾಜಿ. ಎನ್.ರಾಜಗೋಪಾಲ್ ಹಾಗೂ ಸಂಸ್ಥೆಯ ಎಲ್ಲ ಕಾರ್ಯಕಾರಿ ಮಂಡಳಿಯನ್ನು ಅತ್ಯಂತ ಕೃತಜ್ಞತೆಯಿಂದ ನೆನೆಯುತ್ತೇನೆ.

ನನ್ನ ವೃತ್ತಿ ಬದುಕಿನ ಕೇಂದ್ರಸ್ಥಳವಾದ ರಾಷ್ಟ್ರೀಯ ಪದವಿ ಪೂರ್ವ ಕಾಲೇಜು ಬಿ.ಆರ್.ಪ್ರಾಜೆಕ್ಟ್‌ನ ಪ್ರಾಚಾರ್ಯರು ಮತ್ತು ಸಿಬ್ಬಂದಿವರ್ಗ, ವಿಶೇಷವಾಗಿ ಪ್ರೌಢಶಾಲಾ ವಿಭಾಗದ ಸಹೋದ್ಯೋಗಿ ಮಿತ್ರರು ಮತ್ತು ಸಿಬ್ಬಂದಿವರ್ಗದವರ ಸ್ನೇಹಮಯ ವಾತಾವರಣ ಈ ಸಂಶೋಧನೆಗೆ ಪೂರಕ ವಾತಾವರಣ ಒದಗಿಸಿದೆ. ಅವರೆಲ್ಲರಿಗೂ ಅನಂತ ಧನ್ಯವಾದಗಳು.

ಹಂಪೆಯ ಕನ್ನಡ ವಿಶ್ವವಿದ್ಯಾಲಯ ಮತ್ತು ಸಂಶೋಧನ ವಿದ್ಯಾರ್ಥಿಗಳ ಮಧ್ಯ ಸೇತುವಾಗಿ ನಮ್ಮೆಲ್ಲ ಅನುಮಾನಗಳಿಗೆ ಉತ್ತರಿಸುತ್ತಾ ವಿಶ್ವವಿದ್ಯಾಲಯದ ನಿಯಮಾನುಸಾರ ನಮ್ಮ ವ್ಯಾಸಂಗ ಪೂರ್ಣಗೊಳ್ಳಲು ಸಹಕರಿಸಿದ, ಹಾಗೆಯೇ ಶ್ರೀಮಠಕ್ಕೆ ಹೋದಾಗ ನಮ್ಮೆಲ್ಲ ಅಗತ್ಯತೆಗಳಿಗೆ ಸ್ಪಂದಿಸಿದ

ಗದುಗಿನ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠದ ಲಿಂಗಾಯತ ಅಧ್ಯಯನ ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀ ಶಿವನಗೌಡರ ಅವರಿಗೆ ನನ್ನ ವಂದನೆಗಳು. ಶ್ರೀಮಠದ ಗ್ರಂಥಾಲಯ ಮೇಲ್ವಿಚಾರಕರಾದ ಶ್ರೀ ಪಿಂಗಳೆ ಅವರನ್ನೂ ಸಹ ಇದೇ ಸಂದರ್ಭದಲ್ಲಿ ನೆನೆಯುತ್ತೇನೆ.

ಸಂಶೋಧನಾ ವಿಷಯ ಕುರಿತಂತೆ ನನ್ನ ಅನೇಕ ಸ್ನೇಹಿತರೊಂದಿಗೆ ಚರ್ಚಿಸಿದ್ದೇನೆ. ಅವರೆಲ್ಲರೂ ಸೂಕ್ತ ಸಲಹೆ-ಸೂಚನೆಗಳನ್ನು ಕೊಟ್ಟು ಸಹಕರಿಸಿದ್ದಾರೆ. ಆ ಎಲ್ಲ ಬಳಗವನ್ನು ಆತ್ಮೀಯವಾಗಿ ನೆನೆಯುತ್ತೇನೆ. ಪ್ರಬಂಧದ ಕರಡು ಪ್ರತಿಯನ್ನು ಸಾದ್ಯಂತವಾಗಿ ಪರಿಶೀಲಿಸಿ ತಿದ್ದಿಕೊಟ್ಟ ಶ್ರೀ ಡಿ.ಜಿ. ಹಾದಿಮನಿ ಅವರಿಗೂ ವಂದನೆಗಳು.

ಬೆಳ್ಳಂಬೆಳಗಿನ ಸವಿನಿದ್ರೆಯಲ್ಲಿರುತ್ತಿದ್ದ ನನ್ನನ್ನು ಎಚ್ಚರಿಸಿ ಓದು ಬರಹದಲ್ಲಿ ತೊಡಗಿಸಿದ ನನ್ನ ಧರ್ಮಪತ್ನಿ ಶ್ರೀಮತಿ ಸುಮಂಗಲಾ ಹಾಗೂ ವಯೋಸಹಜ ತುಂಟಾಟಗಳಿಗೆ ತಡೆಯೊಡ್ಡಿ ನನ್ನ ವ್ಯಾಸಂಗಕ್ಕೆ ಪೂರಕ ವಾತಾವರಣ ಕಲ್ಪಿಸಿದ ಮುದ್ದು ಮಕ್ಕಳಾದ ಕುವರಿ ಸುಭಾಷಿಣಿ ಹಾಗೂ ಕುವರ ನಿತೀಶ್‌ಕುಮಾರ್ ಇವರೆಲ್ಲರ ಸಂದರ್ಭೋಚಿತ ವರ್ತನೆಯ ಅನನ್ಯತೆಯನ್ನು ಸ್ಮರಿಸಿಕೊಳ್ಳುತ್ತೇನೆ.

ಈ ಪ್ರಬಂಧದ ಡಿ.ಟಿ.ಪಿ. ಕಾರ್ಯವನ್ನು ಅತ್ಯಂತ ಸುಸಂಪನ್ನವಾಗಿ ಸಿದ್ಧಗೊಳಿಸಿ ಅಚ್ಚುಕಟ್ಟಾಗಿ ಮುದ್ರಿಸಿಕೊಟ್ಟ ಕಾವ್ಯ ಕಂಪ್ಯೂಟರ್ ಸೆಂಟರ್, ಶಂಕರಘಟ್ಟ ಇದರ ಮಾಲೀಕರಾದ ಶ್ರೀ ಲೋಕೇಶ್ವರಪ್ಪ ಟಿ. ಹೆಚ್. ಹಾಗೂ ಸಿಬ್ಬಂದಿಗಳಾದ ಕು. ಶಿಲ್ಪ, ಕು. ರುಕ್ಮಿಣಿ, ಕು. ಸೀಮಾ, ಕು. ಸಹನ, ಕು. ಶೃತಿ ಅವರಿಗೆ ಧನ್ಯವಾದಗಳು. ಹಾಗೂ ಈ ಪ್ರಬಂಧದ ಅಧ್ಯಯನ ಕಾರ್ಯಕ್ಕೆ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಸಹಕರಿಸಿದ ಎಲ್ಲಾ ಆತ್ಮೀಯ ಗೆಳೆಯರಿಗೂ, ಹಿತೈಷಿಗಳಿಗೂ ನನ್ನ ಪ್ರೀತಿಯ ಧನ್ಯವಾದಗಳು.

ಬಿ. ಎನ್. ತಂಬೂಳಿ ...

ಪರಿವಿಡಿ

ಅಧ್ಯಾಯ-ನಾಲ್ಕು : ಸಮಾಜ

ಅಧ್ಯಾಯ-ಒಂದು

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಅಧ್ಯಾಯ-ಒಂದು

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಕನ್ನಡ ಸಾಹಿತ್ಯ ಆರಂಭ ಕಾಲದಲ್ಲಿ ಪಂಡಿತಮುಖಿಯಾಗಿ ನಂತರ ಬಸವಾದಿ ಶಿವಶರಣರ ಪ್ರಯತ್ನದಿಂದ ಜನಸಮ್ಮುಖವಾಗತೊಡಗಿತು. ಶಿವಶರಣರ ಎಲ್ಲ ಕಾರ್ಯಚಟುವಟಿಕೆಗಳನ್ನು ತನ್ನ ಬಿಡಿಬಿಡಿಯಾದ ರಗಳೆಗಳ ಮೂಲಕ ರಸನಿಷ್ಠವಾದ ಕಾವ್ಯಮಾಧ್ಯಮದಲ್ಲಿ ಹಿಡಿದಿಟ್ಟವನು ಕವಿ ಹರಿಹರ. ಹರಿಹರನು ಶಿವಶರಣರ, ಪುರಾತನರ ಚರಿತ್ರೆಯನ್ನು ಬಿಡಿಬಿಡಿಯಾಗಿ ಬರೆದರೆ ಭೀಮಕವಿಯ ಬಸವಪುರಾಣದಲ್ಲಿ ಬಹುಪಾಲು ಶಿವಶರಣರ ಮತ್ತು ಪುರಾತನರ ಕಥಾ ವಿವರಗಳು ಇಡಿಯಾಗಿ ಕಂಡುಬರುತ್ತವೆ. ಭೀಮಕವಿಯ ಬಸವಪುರಾಣ ಇದು ತೆಲುಗು ಕವಿ ಪಾಲ್ಕುರಿಕೆ ಸೋಮನಾಥನ 'ಬಸವಪುರಾಣಮು' ಕೃತಿಯ ಅನುವಾದ. ಅನುವಾದ ಕೃತಿಗಳಲ್ಲಿ ಚಿತ್ರಣಗೊಳ್ಳುವ ಅನೇಕ ಸಂಗತಿಗಳು ಕೃತಿಕಾರನವಾಗಿರುವುದಿಲ್ಲ. ಆದರೆ ಈ ಕೃತಿಗಳನ್ನು ಅನುವಾದಿಸುವ ಮನಸ್ಸುಗಳ ಜೀವಂತಿಕೆ ಆ ಕಾಲದ ಅನೇಕ ಸಂಗತಿಗಳಿಗೆ ಸ್ಪಂದಿಸಿರುವುದನ್ನು ಅಲ್ಲಗಳೆಯಲಾಗುವುದಿಲ್ಲ.

ಭೀಮಕವಿಯಲ್ಲಿ ಭಾಮಿನಿಶಿಲ್ಪ ಹಾಗೂ ಶಿವಭಕ್ತಿಗಳೆರಡೂ ಮೇಳೈಸಿವೆ. ಧರ್ಮೋದ್ದೇಶ ಹಾಗೂ ಕಾವ್ಯೋದ್ದೇಶಗಳು ಇಲ್ಲಿ ಏಕಕಾಲದಲ್ಲಿ ಪ್ರವಹಿಸಿದ್ದು ಶಿವಭಕ್ತರ ಜೀವನ ಸಾಧನೆಗಳನ್ನು ತನ್ನ ಕಾವ್ಯವಸ್ತುವನ್ನಾಗಿ ಮಾಡಿಕೊಂಡು 'ರಗಳೆ' ಎಂಬ ನೂತನ ಸಾಹಿತ್ಯ ಪ್ರಕಾರಕ್ಕೆ ಮುನ್ನುಡಿ ಬರೆದ ಹರಿಹರ ಮತ್ತು ದ್ವಿಪದಿ ಛಂದಸ್ಸಿನಲ್ಲಿ ಬರೆದ ಪಾಲ್ಕುರಿಕೆ ಸೋಮನಾಥ ಭೀಮಕವಿಗೆ ದಿಕ್ಸೂಚಿಯಾದಂತೆ ಕಂಡುಬರುತ್ತದೆ. ಹರಿಹರ ಮಹಾಕವಿಯ ಎಲ್ಲ ರಗಳೆಗಳು ಬಸವಪುರಾಣದಲ್ಲಿ ಸಂಗ್ರಹಿತವಾಗಿ ದೊರೆಯುವುದೇ ಇದಕ್ಕೆ ಸಾಕ್ಷಿಯಾಗಿದೆ. ಒಂದು ದೃಷ್ಟಿಯಿಂದ ಹರಿಹರನ ರಗಳೆಗಳಿಗಿಂತ ಭೀಮಕವಿಯ ಬಸವಪುರಾಣ ಹೆಚ್ಚು ಜನಪ್ರಿಯವಾದ ಕೃತಿ ಎಂಬುದನ್ನು ಅಲ್ಲಗಳೆಯಲಾಗುವುದಿಲ್ಲ. ಒಂದೇ ಕೃತಿಯಲ್ಲಿ ದೊರೆಯುವ ಹೇರಳವಾದ ಶಿವಭಕ್ತರ ಕಥೆಗಳು ಅದರ ವಿಶಿಷ್ಟವಾದ ಶ್ರವ್ಯಗುಣಗಳು ಬಹುಪಾಲು ಶ್ರೋತೃಗಳನ್ನು ಹಿಡಿದಿಡುವಲ್ಲಿ ಯಶಸ್ವಿಯಾಗಿವೆ.

ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಬಸವಪೂರ್ವಯುಗ, ಬಸವಯುಗ, ಹಾಗೂ ಬಸವೋತ್ತರಯುಗಗಳು ಅತ್ಯಂತ ಮುಖ್ಯವಾದವುಗಳು. ಭಾಷೆ, ಛಂದಸ್ಸು, ಸಾಹಿತ್ಯ, ಧರ್ಮ

ಸಾಮಾಜಿಕ ಪರಿವರ್ತನೆಗಳ ದೃಷ್ಟಿಯಿಂದ ಬಸವಯುಗವಂತೂ ಅತ್ಯಂತ ಶ್ರೇಷ್ಠ ಸ್ಥಾನದಲ್ಲಿ ನಿಲ್ಲುತ್ತದೆ. ಈ ಯುಗವನ್ನು ಸಾಹಿತ್ಯ ಚರಿತ್ರೆಯ ದೃಷ್ಟಿಯಿಂದ ಒಂದು ಪ್ರಮುಖ ಘಟ್ಟವೆಂದು ಭಾವಿಸಬಹುದು. ಸಾಹಿತ್ಯ ಚರಿತ್ರೆಯ ದಿಕ್ಕನ್ನೇ ಬದಲಾಯಿಸಿದ ಈ ಯುಗವನ್ನು ಕುರಿತು ವಿಪುಲವಾದ ಅಧ್ಯಯನ ನಡೆದಂತೆ ಬಸವಪೂರ್ವಯುಗ ಹಾಗೂ ಬಸವೋತ್ತರಯುಗದ ಅಧ್ಯಯನ ನಡೆದಿಲ್ಲವೆಂದೇ ಹೇಳಬಹುದು. ಆದರೆ ಬಸವೋತ್ತರ ಯುಗದಲ್ಲಿ ರಚನೆಯಾದ ಭೀಮಕವಿಯ ಬಸವಪುರಾಣವು ಬಸವಯುಗಕ್ಕೆ ಕನ್ನಡಿಯಾಗಬಲ್ಲದು. ಇಷ್ಟೊಂದು ಮಹತ್ವಪೂರ್ಣವಾದ ಕೃತಿ ವಿದ್ವಾಂಸರ ತಲಸ್ಪರ್ಶಿ ಅಧ್ಯಯನದ ದೃಷ್ಟಿಯಿಂದ ಉಪೇಕ್ಷೆಗೆ ಒಳಗಾದದ್ದು ಕಂಡುಬರುತ್ತದೆ. ಇದಕ್ಕೆ ಕಾರಣಗಳನ್ನು ಈ ರೀತಿಯಾಗಿ ಊಹಿಸಬಹುದು. ೧. ಇದೊಂದು 'ಪುರಾಣ' ಎಂಬ ಆಧುನಿಕರ ಮನೋಭಾವ ೨. ಬಸವಪುರಾಣದಲ್ಲಿ ಕಥಾನಾಯಕ ಬಸವಣ್ಣನ ಕಥಾವಿವರಗಳಿಗಿಂತ ಪುರಾತನ ಶಿವಶರಣರ ಕಥೆಗಳೇ ಆದ್ಯತೆ ಪಡೆದುಕೊಂಡಿರುವುದು. ೩. ತೆಲುಗಿನ ಪಾಲ್ಕುರಿಕೆ ಸೋಮನಾಥನ 'ಬಸವಪುರಾಣಮು' ಕೃತಿಯ ಅನುವಾದ ಎಂಬ ದೃಷ್ಟಿಕೋನ ೪. ಪವಾಡಗಳೇ ಆಧಿಕ್ಯ ಪಡೆದು ವಸ್ತುನಿಷ್ಠ ವಿವರಗಳ ಕೊರತೆ ಕಂಡುಬರುವುದು. ೫.ಬಸವಪುರಾಣ ಮೌಖಿಕ ಪರಂಪರೆಗೆ ಒಗ್ಗಿ ಆ ಕ್ಷೇತ್ರದಲ್ಲಿ ಪಡೆದ ಜನಪ್ರಿಯತೆ ಕಾರಣವಾಗಿ ಶಾಸ್ತ್ರೀಯ ಅಧ್ಯಯನದ ದೃಷ್ಟಿಯಿಂದ ಉಪೇಕ್ಷೆಗೆ ಗುರಿಯಾಗಿರಬಹುದು. ೬. ಕೃತಿ ರಚನೆಯಾದ ಕಾಲ ಹಾಗೂ ಅದರ ಬೃಹದ್ಗಾತ್ರ. ೭. ಬಸವಣ್ಣನನ್ನು ಕುರಿತು ದೊರೆತ ಶಾಸನಗಳಲ್ಲಿಯ ವಸ್ತುನಿಷ್ಠತೆ ಪುರಾಣದಲ್ಲಿಯ ಅಂಶಗಳಿಗೆ ಹೊಂದಿಕೆಯಾಗದಿರುವುದು ೮. ಆಧುನಿಕ ಕನ್ನಡ ಸಾಹಿತ್ಯದ ವೈವಿಧ್ಯಮಯ ಕ್ಷೇತ್ರಗಳ ಅಧ್ಯಯನ ಮುಂದಾಗಿ ಈ ರೀತಿಯ ಪ್ರಾಚೀನ ಕೃತಿನಿಷ್ಠ ಅಧ್ಯಯನ ಹಿಂದಾಯಿತೆಂದು ಹೇಳಬಹುದು.

ಬಸವಪುರಾಣ ಕುರಿತಂತೆ ಅಧ್ಯಯನ ನಡೆದಿಲ್ಲವೆಂದು ಹೇಳಲಾಗುವುದಿಲ್ಲ. ಆದರೆ ಇಡಿಯಾದ ಅಧ್ಯಯನ ಈವರೆಗೂ ನಡೆದಿಲ್ಲವೆಂದೇ ಹೇಳಬಹುದು. ಈ ಕುರಿತು ಆಂಶಿಕ ಅಧ್ಯಯನಗಳು ನಡೆದಿವೆ. ಭೀಮಕವಿಯ ಬಸವಪುರಾಣ ನಿರಂತರವಾಗಿ ವಿಮರ್ಶೆ, ಚಿಂತನೆ, ಸಂಶೋಧನೆಗೆ ಒಳಪಡುತ್ತಲೆ ಸಮಕಾಲೀನ ಸಂವೇದನೆಯನ್ನು ಪ್ರಯೋಗ ಸೂಕ್ಷ್ಮಗಳನ್ನು ಅಭ್ಯಸಿಸುತ್ತಾ ಬಂದಿದೆ. ಈವರೆಗೆ ಭೀಮಕವಿಯ ಬಸವಪುರಾಣ ಕುರಿತು ಅಭ್ಯಸಿಸಿದ ಲೇಖಕ, ಕೃತಿ ಮತ್ತು ಚಿಂತನೆಯ ಲೇಖನಗಳನ್ನು ಈ ಕೆಳಗಿನಂತೆ ನೋಡಬಹುದು.

ಉತ್ತರದೇಶದ ಬಸವಲಿಂಗ ವಿರಚಿತ 'ಬಸವೇಶ್ವರಪುರಾಣದ ಕಥಾಸಾಗರ' ಎಂಬ ಕೃತಿಯು ಬಸವಪುರಾಣದಲ್ಲಿಯ ಅನೇಕ ಕಥೆಗಳ ಸಾರಾಂಶವನ್ನು ಕೊಡುವುದರ ಮೂಲಕ ಓದುಗರಿಗಿದ್ದ ದೊಡ್ಡ ತೊಡಕನ್ನು ನಿವಾರಿಸಿದೆ ಎಂದು ಹೇಳಬಹುದು. ಬಸವಪುರಾಣವನ್ನು ಆಳವಾಗಿ ಅಧ್ಯಯನ ಮಾಡುವ ನಿಟ್ಟಿನಲ್ಲಿ ಪ್ರಸ್ತುತ ಕೃತಿ ಅತ್ಯಂತ ಉಪಯೋಗಿಯಾಗಿದೆ.

ಬಿ.ಸಿ ಜವಳಿ ಅವರು 'ಬಸವಪುರಾಣದ ಸಾಹಿತ್ಯಿಕ ಅಧ್ಯಯನ' ಹಾಗೂ 'ಬಸವಪುರಾಣದ ಸಾಮಾಜಿಕ ಅಧ್ಯಯನ' ಎಂಬ ವಿಮರ್ಶಾತ್ಮಕ ಲೇಖನಗಳ ಮೂಲಕ ವಿದ್ವಾಂಸರ ಗಮನ ಸೆಳೆದಿದ್ದಾರೆ.

ವಿದ್ಯಾಶಂಕರ ಅವರು ಬರೆದಿರುವ 'ಭೀಮಕವಿಯ ಬಸವಪುರಾಣ: ಒಂದು ತುಲನಾತ್ಮಕ ಅಧ್ಯಯನ' ಎಂಬ ಕೃತಿ ಪಾಲ್ಕುರಿಕೆ ಸೋಮನಾಥನ ಬಸವಪುರಾಣ ಹಾಗೂ ಭೀಮಕವಿಯ ಬಸವಪುರಾಣಕ್ಕಿರುವ ಸಾಮ್ಯ ವ್ಯತ್ಯಾಸಗಳನ್ನು ಗುರುತಿಸುತ್ತದೆ. ಇದೇ ಲೇಖಕರು ಸಂಪಾದಿಸಿರುವ 'ಭೀಮಕವಿಯ ಬಸವಪುರಾಣ' (೨೦೧೦) ಎಂಬ ಕೃತಿಯ ಪ್ರಸ್ತಾವನೆ ಅತ್ಯಂತ ಉಪಯೋಗಿಯಾಗಿದೆ.

ಎಂ.ಎಂ. ಕಲಬುರ್ಗಿಯವರು 'ಬಸವಪುರಾಣದ ಪ್ರಭಾವ ಪರಂಪರೆ', 'ಬಸವಪುರಾಣ: ಶೈವ ದೀಕ್ಷಾಚಾರ್ಯರ ಮತಾಂತರ' ಎಂಬ ಲೇಖನಗಳು ವಿಮರ್ಶಾತ್ಮಕವಾಗಿವೆ.

ಫ.ಗು. ಹಳಕಟ್ಟಿಯವರು ಶಾಸನಗಳು, ವಚನಗಳು ಹಾಗೂ ಸಾಹಿತ್ಯ ಕೃತಿಗಳ ಆಧಾರದಿಂದ ಬಸವಣ್ಣನವರ ಜೀವನಚರಿತ್ರೆಯನ್ನು ಸೋದಾಹರಣವಾಗಿ ಚರ್ಚಿಸಿದ್ದಾರೆ.

ವೀರಣ್ಣ ರಾಜೂರ ಅವರು 'ಬಸವಪುರಾಣ ಪರಂಪರೆ' ಹಾಗೂ ಭೀಮಕವಿಯ ಭೃಂಗೀಶ್ವರ ದಂಡಕ' ಎಂಬ ಲೇಖನಗಳನ್ನು ಸಂಪಾದಿಸಿದ್ದಾರೆ.

ಎಸ್.ಆರ್. ಗುಂಜಾಳ ಅವರು ಬಸವಪುರಾಣದಲ್ಲಿ ಅಂತರ್ಗತವಾಗಿರುವ ಬಸವಣ್ಣನವರ ಅನೇಕ ವಚನಗಳನ್ನು ಶೋಧಿಸಿ "ಬಸವಣ್ಣನವರ ಸುತ್ತಮುತ್ತ" ಎಂಬ ಗ್ರಂಥದಲ್ಲಿ ವಿವರಿಸಿದ್ದಾರೆ.

ಎಂ. ಚಿದಾನಂದಮೂರ್ತಿಯವರ ಲೇಖನಗಳು ಹಾಗೂ ಎಂ.ಆರ್ ಶ್ರೀನಿವಾಸಮೂರ್ತಿಯವರ 'ಭಕ್ತಿಭಾಂಡಾರಿ ಬಸವಣ್ಣನವರು' ಕೃತಿಯ ಮೊದಲ ಪ್ರಕರಣ ಬಸವಪುರಾಣದ ಅಧ್ಯಯನಕ್ಕೆ ಪೂರಕವಾಗಿವೆ.

ಆರ್.ಸಿ. ಹಿರೇಮಠರು ಈ ಗ್ರಂಥವನ್ನು ಅತ್ಯುತ್ತಮವಾಗಿ ಸಂಪಾದಿಸಿದ್ದಾರೆ. ಅಲ್ಲದೇ ವಿಮರ್ಶಾತ್ಮಕವಾದ, ಮೌಲಿಕವಾದ ಪ್ರಸ್ತಾವನೆಯನ್ನು ಬರೆದು ಸಾಹಿತ್ಯಾಭ್ಯಾಸಿಗಳಿಗೆ ಅನುಕೂಲ ಕಲ್ಪಿಸಿದ್ದಾರೆ.

ಐತಿಹಾಸಿಕ ಮಹತ್ವವುಳ್ಳ ಪಾಲ್ಕುರಿಕೆ ಸೋಮನಾಥನ ದ್ವಿಪದ ಛಂದಸ್ಸಿನಲ್ಲಿಯ ಬಸವಪುರಾಣದ ಕೃತಿಯನ್ನು ಡಾ. ಪಿ.ವಿ ನಾರಾಯಣರು ಕನ್ನಡಕ್ಕೆ ಅನುವಾದಿಸಿದ್ದಾರೆ. ಆ ಮೂಲಕ ತೆಲುಗು ಭಾಷೆ ಬರದ ಕನ್ನಡ ವಿದ್ವಾಂಸರಿಗೆ ಪಾಲ್ಕುರಿಕೆ ಸೋಮನಾಥನ ಬಸವಪುರಾಣ ಹಾಗೂ ಭೀಮಕವಿಯ ಬಸವಪುರಾಣವನ್ನು ತೌಲನಿಕವಾಗಿ ಅಧ್ಯಯನ ಕೈಗೊಳ್ಳುವ ಸಾಧ್ಯತೆಯನ್ನು ಹೆಚ್ಚಿಸಿದ್ದಾರೆ. ಮೂಲ ಪಾಲ್ಕುರಿಕೆ ಸೋಮನಾಥನದ್ದೆಷ್ಟು, ಭೀಮಕವಿಯದ್ದೆಷ್ಟು ಎಂಬುದನ್ನು ತೂಗಿ ನೋಡಲು ಈ ಕೃತಿ ಅತ್ಯಂತ ಪ್ರಯೋಜನಕಾರಿಯಾಗಿದೆ.

ಅಲ್ಲದೇ ಇನ್ನೂ ಅನೇಕ ವಿದ್ವಾಂಸರ ಲೇಖನಗಳು, ವಿಚಾರ ಸಂಕಿರಣಗಳು, ಚರ್ಚೆಗಳು ಬಸವಪುರಾಣವನ್ನು ಅರ್ಥೈಸಿಕೊಳ್ಳುವ ನಿಟ್ಟಿನಲ್ಲಿ ಇಂದಿಗೂ ಪ್ರಯತ್ನಗಳು ಸಾಗುತ್ತಲೇ ಇವೆ. ಆದರೆ ಇವೆಲ್ಲವೂ ಲೇಖನನಿಷ್ಠ ಅಧ್ಯಯನಗಳೇ ಹೊರತು ಇಡಿಯಾಗಿ ಕೃತಿಸಾಧಿತ ಅಧ್ಯಯನಗಳಲ್ಲ. ಈ ಹಿನ್ನೆಲೆಯಲ್ಲಿ ಭೀಮಕವಿಯ ಬಸವಪುರಾಣ ಅನೇಕ ಅಧ್ಯಯನ ಸಾಧ್ಯತೆಗಳನ್ನು ಒದಗಿಸಿಕೊಡುವ ಗ್ರಂಥ. "ಬಸವಪುರಾಣ ಒಂದು ಅಧ್ಯಯನ", "ಬಸವಪುರಾಣ ಒಂದು ಸಾಹಿತ್ಯಿಕ ಅಧ್ಯಯನ", "ಹರಿಹರನ ಬಸವರಾಜ ದೇವರ ರಗಳೆ–ಪಾಲ್ಕುರಿಕೆ ಸೋಮನಾಥನ ಬಸವಪುರಾಣ–ಭೀಮಕವಿಯ ಬಸವಪುರಾಣಗಳ ತುಲನಾತ್ಮಕ ಅಧ್ಯಯನ" ಹೀಗೆ ಇನ್ನೂ ವ್ಯಾಪಕವಾಗಿ ಈ ಕುರಿತು ಅಧ್ಯಯನಗಳು ನಡೆಯುವ ಸಾಧ್ಯತೆಗಳಿವೆ. ಇದನ್ನು ಹೊರತುಪಡಿಸಿದರೆ ಬಸವಪುರಾಣ ಕುರಿತು 'ಸಾಂಸ್ಕೃತಿಕ ಅಧ್ಯಯನ' ಕೈಗೊಳ್ಳಬಹುದಾದ ಮಹತ್ವಪೂರ್ಣವಾದ ಮತ್ತೊಂದು ಅಧ್ಯಯನ ಪ್ರಕಾರ. ಈ ಮೇಲಿನ ಎಲ್ಲ ಅಧ್ಯಯನ ಪ್ರಕಾರಗಳಲ್ಲಿ **"ಭೀಮಕವಿಯ ಬಸವಪುರಾಣ: ಸಾಂಸ್ಕೃತಿಕ ಅಧ್ಯಯನ"** ಎಂಬ ಶೀರ್ಷಿಕೆಯಡಿಯಲ್ಲಿ ಬಸವಪುರಾಣವನ್ನು ಅಧ್ಯಯನಕ್ಕೆ ಒಳಪಡಿಸುವ ಪ್ರಯತ್ನವನ್ನಿಲ್ಲಿ ಮಾಡಲಾಗಿದೆ.

ಸಾಂಸ್ಕೃತಿಕ ಅಧ್ಯಯನವು ಇತ್ತೀಚೆಗೆ ಕನ್ನಡ ಸಾಹಿತ್ಯದಲ್ಲಿ ವ್ಯಾಪಕವಾಗಿ ತನ್ನ ವಿಸ್ತಾರವನ್ನು ಹೆಚ್ಚಿಸಿಕೊಳ್ಳುತ್ತಿರುವ ಕ್ಷೇತ್ರ. ಹಿಂದಿ ಹಾಗೂ ಇಂಗ್ಲೀಷ್ ಭಾಷೆಗಳಲ್ಲಿ ನಡೆದ ಸಾಂಸ್ಕೃತಿಕ ಅಧ್ಯಯನದ ಮಾದರಿಯಲ್ಲಿಯೇ ಕನ್ನಡದಲ್ಲಿಯೂ ಈ ರೀತಿಯ ಅಧ್ಯಯನ ಸಾಗಿದ್ದು ಸಾಹಿತ್ಯಕೃತಿಗಳು ಮಹತ್ವದ ಸುಳಿವನ್ನು ಅಂದಿನ ಬದುಕಿನ ಬಗ್ಗೆ ಕೊಡಮಾಡುತ್ತಿವೆ. ಕನ್ನಡದಲ್ಲಿ ಸಾಹಿತ್ಯ ಕೃತಿಗಳ ಅಧ್ಯಯನ ಮಾಡುವವರಿಗೆ ಎಂ. ಚಿದಾನಂದಮೂರ್ತಿಗಳ "ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ" (೨೦೦೮) ಹಾಗೂ ಪಿ.ವಿ. ನಾರಾಯಣರ "ವಚನ ಸಾಹಿತ್ಯ :ಒಂದು ಸಾಂಸ್ಕೃತಿಕ ಅಧ್ಯಯನ" (೧೯೮೩) ಎಂಬ ಕೃತಿಗಳು ಸಿದ್ಧಮಾದರಿಯನ್ನು ಒದಗಿಸುತ್ತವೆಂದು ಹೇಳಬಹುದು. ಅಲ್ಲದೇ ಸದಾನಂದ ಪಾಟೀಲರ "ಹರಿಹರನ ರಗಳೆಗಳು :ಒಂದು ಸಾಂಸ್ಕೃತಿಕ ಅಧ್ಯಯನ" (೧೯೯೯) ಎಂಬ ಕೃತಿ ಪ್ರಸ್ತುತ ಅಧ್ಯಯನಕ್ಕೆ ಪೂರಕವಾಗಿದೆ.

ಮೇಲಿನ ಈ ಕೃತಿಗಳು ಶಾಸನ, ವಚನಗಳನ್ನು ಹಾಗೂ ರಗಳೆಗಳನ್ನು ಆಧರಿಸಿ ಸಾಂಸ್ಕೃತಿಕ ವಿವರ ನೀಡಲು ಪ್ರಯತ್ನಿಸಿದ ಹಾಗೆ ಬಸವಪುರಾಣವನ್ನು ಆಧರಿಸಿ ಅಲ್ಲಿ ಹುದುಗಿರುವ ಸಾಂಸ್ಕೃತಿಕ ಚಿತ್ರಣವನ್ನು ಕಂಡುಕೊಳ್ಳುವ ಪ್ರಯತ್ನ ಇಲ್ಲಿದೆ.

ಸಾಹಿತ್ಯ ಜೀವನದ ಪ್ರತಿಬಿಂಬ. "ಒಂದು ನಾಡು ಎಂದರೆ ಅದನ್ನು ಆಳಿದ ರಾಜರು ಅಲ್ಲ. ಅಲ್ಲಿ ಬದುಕಿದ ಜನ. ಒಂದು ದೇಶದ ನಿಜವಾದ ಇತಿಹಾಸವೆಂದರೆ ಆ ಜನತೆಯ ಇತಿಹಾಸ. ಅಸ್ಥಿಪಂಜರದಂತಿದ್ದ ರಾಜರ ಇತಿಹಾಸಕ್ಕೆ ರಕ್ತಮಾಂಸಗಳನ್ನು ತುಂಬುತ್ತದೆ ಆ ನಾಡಿನ ಜನತೆಯನ್ನು ಕುರಿತು ಹೊರಟ ಸಾಂಸ್ಕೃತಿಕ ಅಧ್ಯಯನ".[೧೩] ಜನತೆ ಬದುಕಿದ ರೀತಿ,

ಅನುಸರಿಸಿದ ಧರ್ಮ, ಕಟ್ಟಿದ ಕಲೆ, ಅವರ ಜೀವನ ಸಮಸ್ಯೆಗಳು, ಅವರ ಜೀವನ ಮೌಲ್ಯಗಳು ಇತ್ಯಾದಿಗಳ ವಿವರಣೆಯೇ ಆ ದೇಶದ ಇತಿಹಾಸ. ಈ ಹಿನ್ನೆಲೆಯಲ್ಲಿ ಬಸವಪುರಾಣವಂತೂ ತತ್ಕಾಲದ ಅನೇಕ ಸಾಂಸ್ಕೃತಿಕ ಅಂಶಗಳನ್ನು ಒಳಗೊಂಡಿದೆ. ವರ್ತಮಾನದ ಚಟುವಟಿಕೆಗಳಿಗೆ ಕವಿಯೊಬ್ಬ ಕುರುಡಾಗಿರಲು ಸಾಧ್ಯವೇ ಇಲ್ಲ. ಆದ್ದರಿಂದ ಕವಿ ಬದುಕಿದ ಕಾಲಘಟ್ಟದಲ್ಲಿ ನಡೆದ ಅನೇಕ ಸಂಗತಿಗಳನ್ನು ಗ್ರಹಿಸಲು ಈ ಕೃತಿಯ ಅಧ್ಯಯನ ಸಹಕಾರಿಯಾಗುತ್ತದೆ. ಅಂದಿನ ಸಾಮಾಜಿಕ ಜೀವನದ ಗ್ರಹಿಕೆಗಳು, ಆಚಾರ-ವಿಚಾರ, ಪದ್ಧತಿಗಳ ಸ್ವರೂಪವನ್ನು ವಿಶ್ಲೇಷಣೆಗೆ ಒಳಗು ಮಾಡಲಾಗುವುದರ ಮೂಲಕ ಅಂದಿನ ಸಾಮಾಜಿಕ ಜೀವನದ ಕುರಿತಾದ ವಿವರಗಳನ್ನು ಶೋಧಿಸುವ ಉದ್ದೇಶವಿದೆ.

ವಚನ ಚಳುವಳಿಯಲ್ಲಿ ಸೇರಿಕೊಂಡವರು ಸಮಾಜದ ವಿವಿಧ ನೆಲೆಗಳಿಂದ, ವಿವಿಧ ವೃತ್ತಿಯ ಹಿನ್ನೆಲೆಯಿಂದ ಬಂದವರು. ಇದರಿಂದ ಅವರನ್ನು ಕುರಿತ ಬಸವಪುರಾಣದ ಸಾಂಸ್ಕೃತಿಕ ಅಧ್ಯಯನ ತುಂಬ ವೈವಿಧ್ಯಪೂರ್ಣವೂ, ಸಂಕೀರ್ಣವೂ ಎನಿಸಿ ಕನ್ನಡ ನಾಡಿನ ಒಂದು ಕಾಲಖಂಡದ ಜನಜೀವನವನ್ನು ಪುನಃ ಸ್ಥಾಪಿಸಲು ಸಾಧ್ಯವಾಗುತ್ತದೆ. ಈ ದೃಷ್ಟಿಯಿಂದ ಭೀಮಕವಿಯ ಕಾಲದ ಸಾಂಸ್ಕೃತಿಕ ಚಿತ್ರಣವನ್ನು ಕಂಡುಕೊಳ್ಳಲು ಈ ಅಧ್ಯಯನ ಸಹಾಯಕವಾಗುತ್ತದೆ. ಪ್ರಸ್ತುತ ಮಹಾಪ್ರಬಂಧ ಈ ಉದ್ದೇಶವನ್ನು ಹೊಂದಿದೆ.

ವಚನಗಳನ್ನು ಸೃಷ್ಟಿ ಮಾಡಿದ ಶರಣರಿಂದ ಕನ್ನಡ ಸಾಹಿತ್ಯದ ನಿಲುವೇ ಬದಲಾಯಿತು. ಅಂದರೆ ಸಾಹಿತ್ಯದ ಹೊಸ ಸಾಧ್ಯತೆಗಳಿಗೆ, ಬದುಕಿನ ಹೊಸ ವ್ಯವಸ್ಥೆಗೆ ವಚನಕಾರರು ಕಾರಣರಾಗಿ ಕ್ರಾಂತಿಕಾರಿಗಳಾದರು. ಅಂತಹ ವಚನಕಾರರನ್ನು ತನ್ನ ಕಾವ್ಯದ ವಸ್ತುವಾಗಿ ಸ್ವೀಕರಿಸಿ ಅವರ ಮೌಲ್ಯಗಳನ್ನು ತನ್ನ ದೃಷ್ಟಿಕೋನದಿಂದ ಭೀಮಕವಿ ಚಿತ್ರಿಸುತ್ತಾನೆ. ಹೀಗಾಗಿ ಬಸವಪುರಾಣದ ಸಾಂಸ್ಕೃತಿಕ ಅಧ್ಯಯನವೆಂದರೆ ಪ್ರಯೋಗಶೀಲ ವಚನಕಾರರ ಬದುಕಿನ ಅಧ್ಯಯನ ಹಾಗೂ ಭೀಮಕವಿಯ ಕಾಲಘಟ್ಟದ ಅಧ್ಯಯನವಾಗುತ್ತದೆ. ವ್ಯಕ್ತಿ ,ಕುಟುಂಬ, ಸಮಾಜ, ರಾಷ್ಟ್ರದ ಎಲ್ಲ ಬದುಕನ್ನು ಹಿಡಿದಿಟ್ಟ ಯಾವ ವಿಷಯಗಳು ಇವೆಯೋ ಅವೆಲ್ಲ ಸಾಂಸ್ಕೃತಿಕ ಅಧ್ಯಯನದಲ್ಲಿ ಬರುತ್ತವೆ. ಭುಜಬಲದ ಅರಸ, ಅಗ್ರಹಾರಗಳ ಪುರೋಹಿತ, ವ್ಯಾಪಾರ-ವಿನಿಮಯದ ವೈಶ್ಯ, ದುಡಿಮೆ ಮಾಡಿ ಇವರನ್ನು ಸಲಹಿದ ಶೂದ್ರ ಜನತೆಯ ಇತಿಹಾಸ ಇವರೆಲ್ಲ ಅನುಸರಿಸಿದ ಧರ್ಮ, ಕಲೆ, ಜೀವನ ಸಮಸ್ಯೆಗಳು, ಆಲೋಚನೆಗಳು, ಮೌಲ್ಯಗಳು ಇವೆಲ್ಲವೂ ನಾಡಿನ ಇತಿಹಾಸವಾಗುತ್ತವೆ. ಬಸವಪುರಾಣದಲ್ಲಿ ವ್ಯಕ್ತಗೊಂಡ ಇಂತಹ ಜನತೆಯ ಜೀವನಾಧ್ಯಯನವೇ ಬಸವಪುರಾಣದ ಸಾಂಸ್ಕೃತಿಕ ಅಧ್ಯಯನವಾಗಿದೆ. ಸಾರ್ವಕಾಲಿಕ ಹಾಗೂ ಸಾರ್ವದೇಶಿಕ ಮೌಲ್ಯಗಳನ್ನೊಳಗೊಂಡ ವಚನಕಾರರ ನುಡಿಮುತ್ತುಗಳು ಮಾನವನ ಸರ್ವತೋಮುಖ ಬದುಕಿಗೆ

ಕೈದೀವಿಗೆಗಳಾಗಿವೆ. ಅಂತಹ ಸರ್ವೋತ್ಕೃಷ್ಟ ಆಣಿಮುತ್ತುಗಳನ್ನು ಆಯ್ದು ಸಾಂಸ್ಕೃತಿಕವಾಗಿ ಅವುಗಳ ಮೌಲ್ಯಮಾಪನ ಮಾಡುವುದೇ ಈ ಅಧ್ಯಯನದ ಆಶಯ.

ಪ್ರಸ್ತುತ ಪ್ರಬಂಧ ಮುಖ್ಯವಾಗಿ "ಭೀಮಕವಿಯ ಬಸವಪುರಾಣ: ಸಾಂಸ್ಕೃತಿಕ ಅಧ್ಯಯನ" ಕುರಿತಾಗಿದ್ದು ಇದು ಕಾವ್ಯತ್ಮಾಕ ಮತ್ತು ಕಾವ್ಯೇತರ ಶಿಸ್ತುಗಳ ಮೂಲಕ ರೂಪಿಸಿದ ಅಧ್ಯಯನವಾಗಿದೆ. ಒಂದು ಕಾವ್ಯ ಕೃತಿಯನ್ನು ಅರ್ಥಮಾಡಿಕೊಳ್ಳಲು ವಿಶ್ಲೇಷಿಸಲು, ಮೌಲ್ಯನಿರ್ಧಾರ ಮಾಡಲು ಈ ಎರಡು ದೃಷ್ಟಿಗಳ ಅಧ್ಯಯನ ಒಟ್ಟೊಟ್ಟಿಗೆ ನಡೆಯಬೇಕೆಂಬುದು ಇಂದಿನ ವಿಮರ್ಶಕರ ಒಮ್ಮತದ ನಿಲುವಾಗಿದೆ.

ಕಾವ್ಯಾತ್ಮಕ ಅಧ್ಯಯನವೆಂದರೆ ಒಂದು ಸಾಹಿತ್ಯ ಕೃತಿ ಒಳಗಿನ ಪರಿಕರಗಳ ಕುರಿತ ಅಧ್ಯಯನ. ಇಲ್ಲಿ ಮುಖ್ಯವಾಗಿ ವಸ್ತು, ಭಾಷೆ, ಸ್ವರೂಪ, ಬಂಧ, ಶೈಲಿ, ತಂತ್ರ, ಮುಂತಾದವುಗಳು ಸೇರುತ್ತವೆ. ಜೊತೆಗೆ ಕಾವ್ಯೇತರ ಅಧ್ಯಯನ ಕೃತಿ ರೂಪಿಸಲು ಕಾರಣವಾದ ಸಮಾಜ, ಸಂಸ್ಕೃತಿ, ಪ್ರಭಾವ, ಇತ್ಯಾದಿಗಳನ್ನು ಒಳಗೊಳ್ಳುತ್ತದೆ.

"ಸಾಮಾನ್ಯವಾಗಿ ಒಂದು ಕಾವ್ಯ ಕೃತಿಯನ್ನು ಶಾಸ್ತ್ರೀಯವಾಗಿ ಸಂಪಾದಿಸಿ ಪ್ರಕಟಿಸುವುದು ಸಂಶೋಧನೆ. ಆ ಕಾವ್ಯ ಕೃತಿಯನ್ನು ಕುರಿತು ಮಾಡುವ ಆಸ್ವಾದನೆ, ವಿಶ್ಲೇಷಣೆ, ತೀರ್ಮಾನಗಳು, ವಿಮರ್ಶೆ"ಯೆಂದು ಎಂ. ಚಿದಾನಂದಮೂರ್ತಿಯವರು (ಸಂಶೋಧನೆ ೧೯೯೭) ಅಭಿಪ್ರಾಯ ಪಡುತ್ತಾರೆ. ಈ ಧೋರಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡು "ಭೀಮಕವಿಯ ಬಸವಪುರಾಣ: ಸಾಂಸ್ಕೃತಿಕ ಅಧ್ಯಯನ" ಎಂಬ ಶೋಧದ ನೆಲೆಯಲ್ಲಿ ಈ ಕೃತಿಯನ್ನು ಸಂಶೋಧನೆಗೆ ಒಳಪಡಿಸಲಾಗಿದೆ. ಆದರೆ ಯಾವುದೇ ಕಾವ್ಯಕೃತಿಯನ್ನು ಕುರಿತು ಅಧ್ಯಯನ ಮಾಡುವಾಗ ಸಂಶೋಧನೆ, ವಿಮರ್ಶೆ ಎರಡೂ ಕಾರಣಗಳು ಒಟ್ಟೊಟ್ಟಿಗೆ ನಡೆಯುತ್ತಿರುತ್ತವೆ. ಆದುದರಿಂದ ಸಂಶೋಧನೆ ಬೇರೆಯಲ್ಲ, ವಿಮರ್ಶೆ ಬೇರೆಯಲ್ಲ. ಇವೆರಡರ ಪರಿಕಲ್ಪನೆಗಳು ಮೇಲುನೋಟಕ್ಕೆ ಬೇರೆ-ಬೇರೆಯಾಗಿ ಕಂಡರೂ ಅವರೆಡೂ ಒಂದು ನಾಣ್ಯದ ಎರಡು ಮುಖಗಳಂತೆ ಕಾರ್ಯ ಮಾಡುತ್ತವೆ.

ಒಂದು ಕಾವ್ಯ ಕೃತಿಯನ್ನು ಕುರಿತು ಅಧ್ಯಯನ ಮಾಡುವಾಗ ಅದರ ಹಿಂದೆ ಶಾಸ್ತ್ರೀಯವಾದ ಶಿಸ್ತು ಇರುತ್ತದೆ. ಅದನ್ನು ಕುರಿತು ನಡೆಸಿದ ವ್ಯಾಖ್ಯಾನ, ವಿವರಣೆ, ತೀರ್ಮಾನಗಳ ವಿದ್ವತ್ತಿನ ವಿಮರ್ಶೆಯು, ಇರುತ್ತದೆ. ಅದರಲ್ಲೂ ಚಾರಿತ್ರಿಕ ವಸ್ತು ಬಿಟ್ಟರೆ ಸಮಕಾಲೀನ ಸಾಹಿತ್ಯದ ಸಂಶೋಧನೆ ಎಂದರೆ ವಿಮರ್ಶೆ ಎಂದೇ ಅರ್ಥ. ಈ ಹಿನ್ನೆಲೆಯಲ್ಲಿ ಪ್ರಬಂಧದ ಅಧ್ಯಯನ ನಡೆದಿದೆ.

ಇನ್ನು 'ಭೀಮಕವಿಯ ಬಸವಪುರಾಣ ಸಾಂಸ್ಕೃತಿಕ ಅಧ್ಯಯನ' ಸ್ವರೂಪಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ ೧೨ನೆಯ ಶತಮಾನದ ಬಸವಣ್ಣನವರ ಕುರಿತು ಮಹಾಕಾವ್ಯವೊಂದನ್ನು ತೆಲುಗಿನ ಕವಿ ಪಾಲ್ಕುರಿಕೆ ಸೋಮನಾಥ ರಚಿಸಿದ ಮಹಾಕಾವ್ಯವನ್ನು ಆಧಾರವಾಗಿಟ್ಟುಕೊಂಡು ಕನ್ನಡದ ಭೀಮಕವಿ ಆ ಮಹಾಕಾವ್ಯದ ಪ್ರಭಾವ-ಪ್ರೇರಣೆಗಳನ್ನು ಜೀರ್ಣಿಸಿಕೊಂಡು ಕನ್ನಡದ ಸಾಂಸ್ಕೃತಿಕ

ಮನಸ್ಸಿಗೆ ಒಗ್ಗುವ ಹಾಗೆ ಅನೇಕ ಚಾರಿತ್ರಿಕ ವಿವರಣೆಗಳೊಂದಿಗೆ ಘಟನೆ, ಸನ್ನಿವೇಶ, ಪಾತ್ರಚಿತ್ರಣ, ಪವಾಡ, ಕಾಯಕ, ಶರಣತತ್ವ, ಲಿಂಗವಿಚಾರ, ಮದುವೆ, ಸಮಾನತೆ, ದಾಸೋಹ, ಪ್ರಸಾದ, ವೃತ್ತಿ, ಕೌಶಲ್ಯಗಳು, ಲಿಂಗಸಮಾನತೆ, ಹೀಗೆ ಸಾಂಸ್ಕೃತಿಕವಾಗಿ ಒಳಪಡುವ ಅನೇಕ ಸಂಗತಿಗಳನ್ನು ಬಸವಪುರಾಣ ಕಾವ್ಯದ ಮೂಲಕ ಕನ್ನಡದಲ್ಲಿ ವೀರಶೈವ ಪುರಾಣ ಪರಂಪರೆಯ ಮಾರ್ಗವನ್ನು ಶೋಧಿಸಿಕೊಟ್ಟ ಕೀರ್ತಿ ಭೀಮಕವಿಯದು. ಜೊತೆಗೆ ಆ ಕಾಲದ ಸಾಂಸ್ಕೃತಿಕ, ಸಾಮಾಜಿಕ, ರಾಜಕೀಯ, ಪರಿಸ್ಥಿತಿಯ ಅನಿವಾರ್ಯತೆಯನ್ನು ಕಾವ್ಯಮುಖೇನ ಚರ್ಚಿಸಿರುವುದು ಈ ಕೃತಿಯ ವೈಶಿಷ್ಟ್ಯವೆನಿಸಿದೆ. ಈ ಹಿನ್ನೆಲೆಯಲ್ಲಿ 'ಭೀಮಕವಿಯ ಬಸವಪುರಾಣ: ಸಂಸ್ಕೃತಿಕ ಅಧ್ಯಯನ' ನಡೆದಿರುವುದು ಈ ಪ್ರಬಂಧದ ಉದ್ದೇಶವಾಗಿದೆ.

ಮೂಲತಃ ಪಾಲ್ಕುರಿಕೆ ಸೋಮನಾಥ ಶ್ರೀಶೈಲಕ್ಕೆ ಬಂದ ಭಕ್ತರಿಂದ ಬಸವಣ್ಣನ ಕಥೆ ಕೇಳಿ ಬಸವಪುರಾಣ ರಚಿಸಿದರೂ ಸಹ ಸಾಕಷ್ಟು ಐತಿಹಾಸಿಕ ಅಂಶಗಳು ಬಸವಣ್ಣನ ಜೀವನಕ್ಕೆ ತಳುಕು ಹಾಕಿಕೊಂಡಿವೆ. ಆದರೆ ಈ ಕೃತಿಯ ಭಾಷಾಂತರಕಾರನಾದ ಭೀಮಕವಿ ಪಾಲ್ಕುರಿಕೆ ಸೋಮನಾಥ ಹೇಳದ ಕೆಲವು ಪವಾಡಗಳನ್ನು ತನ್ನದೇ ಆದ ನೆಲೆಯಲ್ಲಿ ವಿಸ್ತರಿಸಿದ್ದಾನೆ. ಹೀಗೆ ಹಲಕೆಲವು ವ್ಯತ್ಯಾಸಗಳನ್ನು ಮಾಡಿಕೊಳ್ಳುವಾಗ ಸಾಂಸ್ಕೃತಿಕ ಪ್ರಜ್ಞೆಯ ನೆಲೆಯಲ್ಲಿ ಅನೇಕ ಅಂಶಗಳು ಮೂಡಿ ಬಂದದ್ದು ಕಂಡುಬರುತ್ತದೆ. ಅಲ್ಲದೇ ಲೋಕದ ಸೊಟ್ಟು-ಡೊಂಕುಗಳು, ಅನ್ಯಾಯಗಳು, ದೈನಂದಿನ ರೀತಿ-ನೀತಿಗಳು, ಆಚಾರ-ವಿಚಾರಗಳು, ಕಲೆ, ಧರ್ಮ, ಸಾಮಾಜಿಕ ಜೀವನ, ಪ್ರತಿಯೊಂದು ವಿಚಾರಗಳು ಪ್ರಜ್ಞಾಪೂರ್ವಕವಾಗಿ ಕವಿಯ ಕೃತಿಯಲ್ಲಿ ಪಡಿಮೂಡಿವೆ. ಈ ದೃಷ್ಟಿಯಿಂದ ಈ ಕೃತಿಯ ಅಧ್ಯಯನ ಅಂದಿನ ಸಮಗ್ರ ಬದುಕಿನ ಅಧ್ಯಯನವೂ ಆಗುತ್ತದೆ.

ಬಸವಪುರಾಣದಲ್ಲಿ ಬಸವಣ್ಣ ಕೇವಲ ನಿಮಿತ್ತಮಾತ್ರ. ಅವನ ಕಥೆ ಹೇಳುವ ಮೂಲಕ ಕವಿ ಇಡೀ ವಚನಕಾರರ ಸಮಗ್ರ ಬದುಕು, ಅವರ ಚಳವಳಿ, ಧಾರ್ಮಿಕ ಜೀವನ ಸಂಘರ್ಷ, ಸಾಮಾಜಿಕ ಸುಧಾರಣೆಗಳು ಇತ್ಯಾದಿಗಳನ್ನು ವಿವರಿಸುವ ಮೂಲಕ ಒಂದು ದೊಡ್ಡ ಪರಂಪರೆಯನ್ನು ಕೊಡುತ್ತಾನೆ. ಹನ್ನೆರಡನೇ ಶತಮಾನದ ಸಮಾಜ ಜೀವನದ ಜೊತೆಗೆ ಕವಿ ತನ್ನ ಸಮಕಾಲೀನ ಬದುಕಿನ ಹೊಳಹುಗಳನ್ನು ಚಿತ್ರಿಸುತ್ತಾನೆ. ಆ ಮೂಲಕ ಕವಿಯ ಸಮಕಾಲೀನ ಬದುಕಿನ ಅಂಶಗಳನ್ನು ತಿಳಿದುಕೊಳ್ಳುವುದು ಸಹ ಪ್ರಸ್ತುತ ಅಧ್ಯಯನದ ಉದ್ದೇಶವಾಗಿದೆ. ಈ ದೃಷ್ಟಿಯಿಂದ ಹನ್ನೆರಡನೆಯ ಶತಮಾನದ ಶಿವಶರಣರ ಕಥೆಯನ್ನು ಹದಿನಾಲ್ಕನೆಯ ಶತಮಾನದ ಭೀಮಕವಿ ಚಿತ್ರಿಸುವುದರಿಂದ ಇದು ಬಸವ ಹಾಗೂ ಬಸವೋತ್ತರ ಕಾಲದ ಸಾಂಸ್ಕೃತಿಕ ಅಧ್ಯಯನವೂ ಆಗುತ್ತದೆ.

ಪ್ರಸ್ತುತ ಪ್ರಬಂಧ ಎಂಟು ಅಧ್ಯಾಯಗಳಲ್ಲಿ, ವಿಭಜನೆಗೊಂಡಿದೆ. ಮೊದಲ ಅಧ್ಯಾಯದಲ್ಲಿ 'ಭೀಮಕವಿಯ ಬಸವಪುರಾಣ: ಸಾಂಸ್ಕೃತಿಕ ಅಧ್ಯಯನ' ಈ ಪ್ರಬಂಧದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿಯನ್ನು ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

ಎರಡನೆ ಅಧ್ಯಾಯದಲ್ಲಿ 'ಭೀಮಕವಿ ಬಸವಪುರಾಣ : ಸಾಂಸ್ಕೃತಿಕ ಅಧ್ಯಯನ'ವು ಪುರಾಣ ಮತ್ತು ಸಂಸ್ಕೃತಿ, ಪುರಾಣ ಸ್ವರೂಪ, ಪುರಾಣ ಲಕ್ಷಣಗಳು; ಪುರಾಣದ ಉಗಮ ಮತ್ತು ವಿಕಾಸ, ವೀರಶೈವ ಪುರಾಣಗಳು ಬಸವಪುರಾಣ ಸಂಪಾದನೆಯಲ್ಲಿ ಮಿಶನರಿಗಳ ಪರಿಸರ ಇತ್ಯಾದಿ ವಿಷಯ ಕರಿತು ಸ್ಥೂಲವಾಗಿ ನಿರೂಪಿಸಲಾಗಿದೆ.

ಅಧ್ಯಾಯ ಮೂರರಲ್ಲಿ ಕವಿ ಪೂರ್ವಾಪರಗಳು, ಸ್ಥಳ, ಕಾಲ, ವ್ಯಕ್ತಿತ್ವ ಜೊತೆಗೆ ಕೃತಿನಾಯಕನ ಪೂರ್ವಾಪರಗಳು, ಕಾಲ, ಜನನ, ಬಾಲ್ಯ, ಉಪನಯನ, ವಿವಾಹ, ಕಲ್ಯಾಣದಲ್ಲಿ ಮಂತ್ರಿಪದವಿ, ವಿಕಾಸ, ಕೃತಿನಾಯಕನ ಐಕ್ಯ, ವ್ಯಕ್ತಿತ್ವ ಹೀಗೆ ಕವಿ ಮತ್ತು ಕೃತಿನಾಯಕನ ಪೂರ್ವಾಪರಗಳ ಪರಂಪರೆಯನ್ನು ಸಂಕ್ಷಿಪ್ತವಾಗಿ ತಿಳಿಸಲಾಗಿದೆ.

ಅಧ್ಯಾಯ ನಾಲ್ಕರಲ್ಲಿ ಬಸವಪುರಾಣ ಕಾವ್ಯದಲ್ಲಿ ಅಂತರ್ಗತವಾದ ಪ್ರಜ್ಞೆಯ ವಿವಿಧ ಸ್ತರಗಳನ್ನು ಗುರುತಿಸಲು ಈ ಅಧ್ಯಯನವು ಮೀಸಲಾಗಿದೆ. ಇಲ್ಲಿ ಬಸವಣ್ಣನ ಕಾಲದ ಸಾಮಾಜಿಕ ವ್ಯವಸ್ಥೆ, ಜಾತಿವ್ಯವಸ್ಥೆ, ಸಂಸ್ಕೃತಿಗಳು, ಸಂಪ್ರದಾಯಗಳು, ವಚನಕಾರರ ಹೊಸ ಸಮಾಜದ ಕಾಣ್ಕೆ, ವೃತ್ತಿಗಳು, ಸ್ತೀಯರ ಸ್ಥಾನಮಾನ ಇತ್ಯಾದಿಯಾಗಿ ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಅಧ್ಯಾಯ ಐದರಲ್ಲಿ ೧೨ ನೇ ಶತಮಾನದ ಆಡಳಿತದ ವ್ಯವಸ್ಥೆ, ನಗರ, ಕೋಟೆ, ಕೊತ್ತಲಗಳು, ರಾಜ್ಯಾಡಳಿತ, ಆಳುವವರ್ಗ ಮತ್ತು ಪ್ರಜೆಗಳು. ಅಧಿಕಾರಿ ವರ್ಗ, ನ್ಯಾಯ ಪರಿಪಾಲನೆ, ಶಿಕ್ಷೆ ಪ್ರಕರಣಗಳು, ಮುಂತಾದ ಅಧಿಕಾರಶಾಹಿಯಿಂದ ಪ್ರಜಾಪ್ರಭುತ್ವದವರೆಗಿನ ವ್ಯಕ್ತಿ ವಿಶಿಷ್ಟತೆಯನ್ನು ಕುರಿತು ಈ ಅಧ್ಯಯನದಲ್ಲಿ ವಿವರಿಸಲಾಗಿದೆ.

ಅಧ್ಯಾಯ ಆರರಲ್ಲಿ ಧಾರ್ಮಿಕ ವ್ಯವಸ್ಥೆ, ೧೨ನೇ ಶತಮಾನದ ಧಾರ್ಮಿಕ ಸ್ಥಿತಿಗತಿ, ಶರಣಧರ್ಮದ ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲಗಳು ಹಾಗೂ ಆ ಕಾಲದ ಅನ್ಯಧರ್ಮಗಳ ಘರ್ಷಣೆ, ಸಂಘರ್ಷ, ಆಂತರಿಕ ತಿಕ್ಕಾಟಗಳು, ಮೇಲುಕೀಳಿನ ವೈಪರಿತ್ಯಗಳ ಕುರಿತು ಈ ಅಧ್ಯಾಯದಲ್ಲಿ ಅವಲೋಕಿಸಲಾಗಿದೆ.

ಅಧ್ಯಾಯ ಏಳರಲ್ಲಿ ಕಲೆ, ಸಂಗೀತ, ಕುಶಲಕಲೆ ಇತ್ಯಾದಿ ವಿಷಯಗಳಲ್ಲಿ ವಿವಿಧ ಸಮುದಾಯಗಳ ಕುಲಮೂಲದ ಪಾರಂಪರಿಕ ಕಲೆಗಳು ಸಂಗೀತ, ವಾದ್ಯ, ಕುಣಿತ, ಗೋಷ್ಠಿ, ರಂಗಕಲೆ, ನರ್ತನ, ಕೇಳಿಕೆ, ಆಭರಣಗಳು, ಉಡುಪು, ಕರಕುಶಲಗಳು ಇತ್ಯಾದಿಗಳ ಬಗ್ಗೆ ವಿವೇಚಿಸಲಾಗಿದೆ.

ಅಧ್ಯಾಯ ಎಂಟು ಭೀಮಕವಿಯ ಬಸವಪುರಾಣ–ಸಾಂಸ್ಕೃತಿಕ ಅಧ್ಯಯನ ಕುರಿತು ಕೈಗೊಂಡ ಸಂಶೋಧನೆಯ ಫಲಿತಗಳನ್ನು ಸ್ಥೂಲವಾಗಿ ಗುರುತಿಸಲಾಗಿದೆ. ಜೊತೆಗೆ ಮುಂದೆ ಭೀಮಕವಿಯ ಬಸವಪುರಾಣವನ್ನು ಕುರಿತು ಕೈಗೊಳ್ಳಬಹುದಾದ ಅಧ್ಯಯನ, ಸಂಶೋಧನ ವಿಧಾನಗಳ ಬಗ್ಗೆ ಸೂಚಿಸಲಾಗಿದೆ. ಅನುಬಂಧದಲ್ಲಿ ಅಧ್ಯಯನಕ್ಕೆ ಬಳಸಿಕೊಂಡ ಗ್ರಂಥಲೇಖನಗಳ ಸೂಚಿಯನ್ನು ಅಕಾರಾದಿಯಾಗಿ ಕೊಡಲಾಗಿದೆ. ಇದು ಈ ಪ್ರಬಂಧದ ವಿಷಯವ್ಯಾಪ್ತಿ.

ಅಧ್ಯಾಯ–ಎರಡು

ಪುರಾಣ ಮತ್ತು ಸಂಸ್ಕೃತಿ

ಅಧ್ಯಾಯ-ಎರಡು

ಪುರಾಣ ಮತ್ತು ಸಂಸ್ಕೃತಿ

ಮಕವಿಯ ಬಸವಪುರಾಣ: ಸಾಂಸ್ಕೃತಿಕ ಅಧ್ಯಯನ ಎಂಬ ಪ್ರಬಂಧದ ಶೀರ್ಷಿಕೆಯಲ್ಲಿ 'ಪುರಾಣ' ಹಾಗೂ 'ಸಂಸ್ಕೃತಿ' ಎಂಬೆರಡು ಮಹತ್ವದ ಪದಗಳ ಅರ್ಥಸ್ಪಷ್ಟತೆಯನ್ನು ಮನಗಂಡು ನಂತರ ಮುಂದಿನ ವಿಚಾರಗಳತ್ತ ಗಮನಹರಿಸೋಣ.

೧. ಅ. ಪುರಾಣದ ಅರ್ಥ ಹಾಗೂ ಸ್ವರೂಪ :

ಪುರಾಣಗಳನ್ನು ಭಾರತೀಯರು ಪೂಜ್ಯಾರ್ಹ ಗ್ರಂಥಗಳೆಂದೇ ಪರಿಭಾವಿಸಿದ್ದಾರೆ. ಭಾರತೀಯ ಸಂಸ್ಕೃತಿಯ ವ್ಯಾಸಂಗಕ್ಕೆ ಪುರಾಣಸಾಹಿತ್ಯ ಅತ್ಯಂತ ಸಹಕಾರಿಯಾದದ್ದು. ಪುರಾಣಗಳ ಸಹಾಯವಿಲ್ಲದೆ ಭರತಖಂಡದ ಪೂರ್ವ ಚರಿತ್ರೆಯನ್ನು ತಿಳಿದುಕೊಳ್ಳುವುದು ಅಸಾಧ್ಯ. ಭಾರತೀಯರ ನೈತಿಕ, ಸಾಮಾಜಿಕ ಪ್ರಗತಿ ಪುರಾಣಗಳಲ್ಲಿ ಚೆನ್ನಾಗಿ ವರ್ಣಿತವಾಗಿದೆ. ಭಾರತೀಯರ ಆರಾಧ್ಯದೇವತೆಗಳ ಸ್ವರೂಪ ವಿಚಾರಕ್ಕೆ ವೇದಗಳಂತೆಯೇ ಪುರಾಣಗಳು ಆಕರಗಳಾಗಿವೆ. ವೇದಗಳ ರಹಸ್ಯಗಳನ್ನು ವಿವರಿಸುತ್ತವೆ. ಆತ್ಮಜ್ಞಾನ ಸಾಧನೆಗೂ ನೆರವು ನೀಡುತ್ತವೆ. ಭಾರತದ ತೀರ್ಥಕ್ಷೇತ್ರಾದಿ ವಿಚಾರಗಳಿಂದ ಪುರಾಣಗಳು ನಿಬಿಡವಾಗಿ ಅವು ದೇಶಸ್ವರೂಪ ಪರಿಚಯಕ್ಕೂ ಆಕರಗಳಾಗಿವೆ.

ಪುರಾಣಗಳನ್ನು ಕುರಿತು 'ಎ.ಡಿ.ಪುಲಸ್ಕರ್' ಈ ರೀತಿಯಾಗಿ ಹೇಳುತ್ತಾರೆ. "ಪುರಾಣಗಳು ಪ್ರಾಮುಖ್ಯದಲ್ಲಿ ವೇದಗಳಿಗೆ ಮಾತ್ರ ಎರಡನೆಯವಾಗಿದ್ದು ವೇದಗಳೊಡನೆ ಅವು ಸಮಾನ ಪ್ರಾಚೀನತೆಯನ್ನು, ಪಾವಿತ್ರ್ಯವನ್ನು ಕೇಳುತ್ತವೆ. ರೂಪ, ತಿರುಳು ಎರಡರಲ್ಲೂ ಅವು ಮಹಾಕಾವ್ಯ ಹಾಗೂ ಸ್ಮೃತಿಗಳೊಡನೆ ನಿಕಟ ಸಂಬಂಧ ಹೊಂದಿವೆ. ತತ್ವಶಾಸ್ತ್ರ, ಧರ್ಮಗಳ ಚರಿತ್ರೆಗೆ ಪುರಾಣಗಳು ಅಮೂಲ್ಯ. ಹಿಂದೂಧರ್ಮದ ಎಲ್ಲ ಮುಖಗಳ ಒಳನೋಟಕ್ಕೆ ಒದಗುವ ಗಣಿಗಳಿವು." (ಸಿ.ಪಿ.ಕೆ. ಪುರಾಣಗಳ ಸ್ವರೂಪ. ಪು-೯ ಬಸವಪುರಾಣ ಪರಂಪರೆ: ಬಸವಮಾರ್ಗ-೮ (ಸಂ) ರಾಜೂರ ವೀರಣ್ಣ, ಕನ್ನಡ ಅಧ್ಯಯನ ಪೀಠ, ಕ.ವಿ.ವಿ.ಧಾರವಾಡ, ೧೯೯೪) "ಒಟ್ಟಾಗಿ ತೆಗೆದುಕೊಂಡಾಗ ಅವುಗಳನ್ನು ಪ್ರಾಚೀನ ಮತ್ತು ಮಧ್ಯಕಾಲೀನ ಹಿಂದೂಧರ್ಮದ ಅದರ ದಾರ್ಶನಿಕ, ಚಾರಿತ್ರಿಕ, ವೈಯಕ್ತಿಕ, ಸಾಮಾಜಿಕ ಮತ್ತು ರಾಜಕೀಯ ಮುಖಗಳ ಜನಪ್ರಿಯ ವಿಶ್ವಕೋಶ" (ವಿದ್ಯಾಶಂಕರ್ ಎಸ್. ೨೦೦೬: ಪುಟ-೩) ವೆಂದು ಕರೆಯಬಹುದು ಎಂದು 'ಪಾರ್ಗಿಟರ್' ಅವರು ಅಭಿಪ್ರಾಯ ಪಡುತ್ತಾರೆ. ಇವು ಸ್ಥೂಲವಾಗಿ ಪ್ರಾಚೀನ ಬದುಕು, ಜನಸಂಸ್ಕೃತಿಯ ಬದುಕಿನ ಪರಿಚಯದ

ದಾಖಲೆಗಳೆಂಬುದನ್ನು ಸೂಚಿಸುತ್ತವೆ. ಭಾರತೀಯ ಬದುಕಿನ ಹಲವು ಮುಖಗಳ ಸಂಸ್ಕೃತಿಯನ್ನು ಉಳಿಸಿಕೊಂಡು ಬಂದ ದಾಖಲೆಗಳು. ಹಿಂದಿನ ಯುಗದಲ್ಲಿ ನಡೆದುದೆಂದು ಹೇಳುವ ಸೃಷ್ಟಿ, ಪ್ರಳಯ, ಜನರು, ನಾಯಕರ, ದೇವತೆಗಳ ಉಗಮ, ವಿಕಾಸ ಮತ್ತು ಮಹಿಮೆಗಳನ್ನು ಅಲ್ಲಿನ ಸಂಸ್ಕೃತಿ ಮತ್ತು ಮತೀಯ ವಿಚಾರಗಳನ್ನು ವಿವರಿಸುವ ಕಥೆಯೇ ಪುರಾಣಗಳೆಂದು ವ್ಯಾಖ್ಯಾನಿಸಬಹುದಾಗಿದೆ. ಭಾರತೀಯ ಧಾರ್ಮಿಕ ಬದುಕಿನ ಸ್ಪಷ್ಟ ಪರಿಚಯಕ್ಕೆ ಪುರಾಣಗಳೇ ಏಕ ಮಾತ್ರ ಆಧಾರಗಳಾಗಿವೆ ಎಂಬುದನ್ನು ಅಲ್ಲಗಳೆಯುವಂತಿಲ್ಲ. ಭಾರತೀಯರಲ್ಲಿ ಪುರಾಣ ಕುರಿತಂತೆ ಪವಿತ್ರ ಭಾವನೆ ಇದ್ದುದರಿಂದ ಇವುಗಳಿಗೆ ಮಹತ್ವ ನೀಡಲಾಗುತ್ತಿತ್ತೇ ವಿನಹ ಅರ್ಥವಿಶ್ಲೇಷಣೆಗಳಿಗಲ್ಲ. ನಮ್ಮ ಪೂರ್ವಿಕರು ಈ ಬಗ್ಗೆ ಚಿಂತಿಸಿದವರಲ್ಲ. ಇವು ಯಾರ ಮೇಲೂ ನೇರ ಒತ್ತಡವನ್ನು ಹಾಕಲಾರದಿದ್ದರೂ ಧಾರ್ಮಿಕ ಭಯದ ನೆಲೆಯೊಳಗೆ ಭಾವನಾತ್ಮಕವಾಗಿ ಒಳಿತು-ಕೆಡುಕುಗಳೆಂಬ ಸರಳ ಲೆಕ್ಕಾಚಾರದಲ್ಲಿ ನಿಯಮಬದ್ಧ ಕ್ರಿಯೆಗಳಾಗಿ ಅನುಸರಿಸುವಂತೆ ಮಾಡುತ್ತವೆ. ಜತೆಗೆ ಪುರಾಣವು ಕಥೆ, ಮನರಂಜನೆ, ಮಾರ್ಗದರ್ಶನ, ಬದುಕಿನ ದುರಂತಗಳಿಗೆ ವಿಶೇಷ ಸಾಂತ್ವನ ನೀಡುವ ಕೆಲಸವನ್ನು ಸಮೂಹ ಬದುಕಿಗೆ ನೀಡುತ್ತಾ ಬಂದಿವೆ. ಈ ಬಗೆಯ ಸಾಧ್ಯತೆಗಳೇ ಪುರಾಣದ ಉಳಿವಿಗೆ ಮತ್ತು ಅಸ್ತಿತ್ವಕ್ಕೆ ಕಾರಣವಾಗಿವೆ. ಇವು ಮನುಷ್ಯ ಬದುಕಿನ ಧಾರ್ಮಿಕ ಹಾಗೂ ರಾಜಕೀಯ ವ್ಯವಸ್ಥೆಯನ್ನು ತಳುಕು ಹಾಕಿ ರೂಪುಗೊಂಡಿರುವುದನ್ನು ಕಾಣಬಹುದು. ಪುರಾಣಗಳ ಸಂಕೀರ್ಣಗಳು ಅವುಗಳ ಅರ್ಥವಂತಿಕೆಗೆ ಸಂಬಂಧಿಸಿದ್ದಾಗಿದೆ. ವಿಶಿಷ್ಟ ಕಥಾರೂಪವಾಗಿ ಕಾಣುವ ಪುರಾಣಗಳು ಇತಿಹಾಸ ಎಂಬ ಅರ್ಥದ ತೆಕ್ಕಗೂ ಒಗ್ಗಿಕೊಂಡಿದೆ. ಹೀಗೆ ಇದ್ದಿತೆಂದೂ, ಹೀಗೆ ನಡೆಯಿತೆಂದು ಹೇಳುವ ಗ್ರಂಥಗಳೆಂದೂ, ಪರಂಪರೆಯನ್ನು ಉಳಿಸಿ-ಬೆಳೆಸುವ ಮಾಧ್ಯಮವೆಂದೂ, ಕಳೆದುಹೋದ ಮತ್ತು ಮುಂದೆ ಬರುವ ಕಾಲ ವಿಷಯಗಳನ್ನು ತಿಳಿಸುತ್ತದೆಂಬ ಅರ್ಥವಿವರಣೆಯೂ ಇದೆ. ಪುರಾಣಗಳು ಮಾನವನ ಕನಸುಗಳ ಅಭಿವ್ಯಕ್ತಿಯಾಗಿದ್ದು, ಆತನ ವಿಧಿಗಳ ತಳಹದಿಯೂ ಆಗಿರುತ್ತದೆ. ಪುರಾಣ ಮತ್ತು ಅದರ ಅರ್ಥ ಯಾವುದೇ ನಿರ್ದಿಷ್ಟ ಅರ್ಥಕಕ್ಷೆಗೆ ಒಗ್ಗಿಕೊಳ್ಳದೆ ಎಲ್ಲಾ ಕಾಲಘಟ್ಟದ ಅರ್ಥವಿಶೇಷತೆಗಳನ್ನು ತನ್ನೊಳಗೆ ಜೀರ್ಣಿಸಿಕೊಂಡಿದೆ.

ಪುರಾಣಗಳು ಒಂದು ಬಗೆಯ ವಿಶಿಷ್ಟ ಕಥಾರೂಪವಾಗಿದ್ದು ಅದರ ಪ್ರಮುಖ ಪಾತ್ರಗಳೆಲ್ಲಾ ದೇವತೆಗಳು, ಪವಾಡ ಪುರುಷರು ಕಂಡು ಬರುತ್ತಾರೆ. ದೈವಿಕ ಅಥವಾ ಅತಿಮಾನುಷತೆ ಇಲ್ಲಿನ ಪ್ರಮುಖ ಗುಣವಾಗಿದೆ. ಪುರಾಣಗಳು ಮನುಷ್ಯ ಸೃಜನಶೀಲತೆ ಮತ್ತು ಪ್ರತಿಭೆಯ ಫಲಿತಾಂಶವೂ ಆಗಿದೆ. ಅಷ್ಟೇ ಅಲ್ಲದೇ ಮೇಲ್ನೋಟಕ್ಕೆ ಕಾಣುವುದಕ್ಕಿಂತ ಭಿನ್ನವಾದ, ವಿಶೇಷವಾದ ಅರ್ಥವೂ ಅಡಗಿದೆ. ನೇರವಾಗಿ ಹೇಳಲು ಅಸಾಧ್ಯವಾದ ವಿಚಾರಗಳನ್ನು ಗೂಡಾರ್ಥವಾಗಿ ತುಂಬಿ ನಿಂತಿವೆ.

ಪುರಾಣದ ಮೂಲ ದ್ರವ್ಯ ನಿಸರ್ಗವೇ ಆದರೂ ಅದು ಕೊಡುವ ಅಭಿವ್ಯಕ್ತಿ ಮಾನವೀಯ ನೆಲೆಯದ್ದು. ಮಾನವ ಅನುಭವಗಳನ್ನು ಅತಿಮಾನುಷ ಪಾತ್ರಗಳಲ್ಲಿ ತುಂಬುವ ಚಿತ್ರಣ ಪುರಾಣ

ಸೃಷ್ಟಿಯಲ್ಲಿ ಸರ್ವಸಾಮಾನ್ಯವಾಗಿದೆ. "ಪುರಾಣಗಳು ಪುರಾತನ ಕಾಲದಿಂದ ಸಾಗಿಬಂದಿರುವ ಸೃಷ್ಟಿಯ ವಿವರಣೆ, ಸಾಂಕೇತಿಕ ಕಟ್ಟುಕಥೆ, ರೂಪಕ, ಸಂಪ್ರದಾಯ, ಮತ, ಸಮಾಜನಿಯಮ ಮೊದಲಾದವುಗಳ ಲೋಕಪ್ರಿಯ ನಿರೂಪಣೆಗಳಾಗಿರಬೇಕೆಂಬ ಉದ್ದೇಶದಿಂದ ಕೂಡಿದ್ದವು." (ಅದೇ ಪು:೩) ಪುರಾಣಗಳಲ್ಲಿ ನಾವು ಕಾಣುವ ದೇವತೆಗಳು ರಾಕ್ಷಸರು, ಅತಿಮಾನುಷರು. ನಿಜವಾಗಿ ಸಾಮಾನ್ಯ ಮನುಷ್ಯರಲ್ಲದೇ ಬೇರೇನೂ ಅಲ್ಲ. ಮನುಷ್ಯ ಗುಂಪಿಗೆ ಅವರಿಂದ ಆಗಿರುವ ಅಪಕಾರ ಉಪಕಾರಗಳನ್ನು ಪುರಾಣಗಳು ಕಥೆಯ ರೂಪದಲ್ಲಿ ಹೇಳುತ್ತವೆ. ಪುರಾಣಗಳು ಹೊರನೋಟಕ್ಕೆ ಕಥೆಗಳಂತೆ ಕಂಡುಬಂದರೂ ಆಂತರ್ಯದ ಅರ್ಥಾಭಿವ್ಯಕ್ತಿ, ಉದ್ದೇಶ ಬೇರೆಯೇ ಆಗಿರುತ್ತದೆ. ಆಂತರ್ಯದಲ್ಲಿ ಈ ವಿವರಣೆಗಳು, ಪ್ರಕೃತಿ, ಮನುಷ್ಯ ಬದುಕಿನ ಚಿಂತನೆಯ ಕಣ್ಣುಗಳ ಮೂಲಕ ನೋಡಿದರೆ ಇವು ಸಾರ್ವತ್ರಿಕವಾಗಿ ಹೇಳುವ ಮೌಲ್ಯಗಳು ಒಂದಾಗಿದ್ದರೆ ಆಂತರ್ಯದಲ್ಲಿ ಕೆಲವು ವರ್ಗದ ಹಿತಾಸಕ್ತಿಯನ್ನು ಸ್ಥಾಪಿಸುವ ಶಕ್ತಿಗಳಾಗಿಯೂ ಕಂಡುಬರುತ್ತದೆ. ಈ ಮುಖೇನ ಯಥಾವತ್ತಾಗಿ ಸಮಾಜದ ಚಲನೆಯನ್ನು ಹಿಡಿದಿಡುವ ಪರೋಕ್ಷ ಶಕ್ತಿಗಳಾಗಿವೆ. ಸ್ಥಾಪಿತವರ್ಗದ ಹಿತಾಸಕ್ತಿಗೆ ಧಕ್ಕೆ ಬಂದಾಗ ಇವು ಎಚ್ಚರಿಕೆಯ ಗಂಟೆಗಳಾಗಿ ಕೆಲಸ ಮಾಡಿವೆ. ಮತ್ತು ಸ್ಥಾಪಿತವರ್ಗದ ಹಿತಾಸಕ್ತಿಗೆ ಅನುಗುಣವಾಗಿ ಕಾಲ, ರೂಪ, ಬಣ್ಣ ಬದಲಾಯಿಸಿಕೊಳ್ಳಬಲ್ಲದೂ ಆಗಿದೆ.

ಆ. ಪುರಾಣ ಲಕ್ಷಣಗಳು:

ಪುರಾಣ ಲಕ್ಷಣಗಳನ್ನು ಕುರಿತು ಅನೇಕ ಶಾಸ್ತ್ರಗಳು ವಿವಿಧ ರೀತಿಯಾಗಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿವೆ. ಅಮರಸಿಂಹನ ಅಮರಲೋಕದಲ್ಲಿ–

> **"ಆಖ್ಯಾಯಿಕೋಪಲಬ್ಧಾರ್ಥ ಪುರಾಣಂ ಪಂಚಲಕ್ಷಣಂ**
> **ಸರ್ಗಶ್ಚ ಪ್ರತಿಸರ್ಗಶ್ಚ ವಂಶೊ ಮನ್ವಂತರಾಣಿ ಚ**
> **ವಂಶಾನುಚರಿತಂ ಚೈವ ಪುರಾಣಂ ಪಂಚಲಕ್ಷಣಂ"** (ಸುಬ್ರಮಣ್ಯಶಾಸ್ತ್ರಿ, ಭಾರತೀಯ ಸಂಸ್ಕೃತಿ ದರ್ಶನ: ಪು. ೧೩೫)

ಅಂದರೆ ಸರ್ಗ, ಸೃಷ್ಟಿ– ಪುನಸೃಷ್ಟಿ, ದೇವತೆಗಳ ಪಿತೃದೇವತೆಗಳ ವಂಶವಿವರಣೆ, ಮನ್ವಂತರ– ಯಾವ ಮನುವು ಎಷ್ಟು ಕಾಲದವರೆಗೆ ಅಧಿಕಾರ ಮಾಡಿದನು ಎಂಬುದರ ವಿವರಣೆ, ವಂಶಾನುಚರಿತ– ಸೂರ್ಯಚಂದ್ರ ವಂಶಗಳ ಮತ್ತು ಆ ವಂಶದ ಪ್ರಸಿದ್ಧ ರಾಜರ ಚರಿತ್ರೆ ಎಂಬ ಈ ಐದು ಲಕ್ಷಣಗಳನ್ನೊಳಗೊಂಡದ್ದು ಪುರಾಣ. ಸಾಮಾನ್ಯವಾಗಿ ಪುರಾಣಗಳನ್ನು ಕುರಿತು ಪಂಚಲಕ್ಷಣಗಳೇ ಮುಖ್ಯವಾಗಿದ್ದರೂ ತದನಂತರದಲ್ಲಿ ದಶಲಕ್ಷಣಗಳು ಬೆಳಕಿಗೆ ಬಂದದ್ದು ಕಂಡುಬರುತ್ತದೆ.

> **"ಸರ್ಗೋಽಸ್ಯಾಥ ವಿಸರ್ಗಶ್ಚ ವೃತ್ತ ರಕ್ಷಾಂತರಾಣಿ ಚ।**
> **ವಂಶೋ ವಂಶಾನುಚರಿತಂ ಸಂಸ್ಥಾಹೇತುರ ಪ್ರಾಶ:॥**
> **ದಶಭಿರ್ಲಕ್ಷಣೈರ್ಯುಕ್ತಂ ಪುರಾಣಂ ತದ್ವಿದೋ ವಿದು:।**
> **ಕೇಚಿತರಿಚವಿಧಂ ಬ್ರಹ್ಮನ್ ಮಹದಲ್ಪತ್ಯವಸ್ಥಯಾ॥"** (ಪಾಂಡುರಂಗಯ್ಯ ಬಿ. ಪುರಾಣಗಳು ಮತ್ತು ವಿಶ್ವೋತ್ಪತ್ತಿ: ಪು. ೬೧)

ಎಂದು ಭಾಗವತದ ಈ ಶ್ಲೋಕದಲ್ಲಿ ಪುರಾಣದ ದಶಲಕ್ಷಣಗಳು ಹೇಳಲ್ಪಟ್ಟಿವೆ. ಭಾರತೀಯ

ಪುರಾಣಗಳೆಂದೂ ಮೇಲಿನ ಪಂಚಲಕ್ಷಣಗಳು ಹಾಗೂ ದಶಲಕ್ಷಣಗಳಿಗೆ ಲಕ್ಷಣರೇಖೆ ಹಾಕಿಕೊಂಡು ಕುಂತಿಲ್ಲ. ಕಾಲ ಹಾಗೂ ಸಂದರ್ಭಕ್ಕೆ ತಕ್ಕಂತೆ ಈ ಲಕ್ಷಣಗಳ ಜೊತೆಗೆ ಮತಧರ್ಮ, ನೀತಿ, ಸಾಮಾನ್ಯ ನೀತಿಗಳ ಬೋಧನೆ, ವ್ರತಗಳು, ದಾನ, ಭಕ್ತಿ, ಯೋಗ, ಹರಿಹರರ ಅವತಾರಗಳು, ವೈದ್ಯ, ಸಂಗೀತ, ವ್ಯಾಕರಣ, ಛಂದಸ್ಸು, ನಾಟಕಲಕ್ಷಣ, ಜೋತಿಷ್ಯ, ಶಿಲ್ಪ, ರಾಜನೀತಿ ಈ ಎಲ್ಲ ವಿಷಯಗಳನ್ನು ಒಳಗೊಂಡಿವೆ. ವಿಷಯಾಸಕ್ತರಾದವರಿಗೂ, ಜೀತೇಂದ್ರಿಯರಿಗೂ, ಯತಿಗಳಿಗೂ ಬ್ರಹ್ಮಚಾರಿಗಳಿಗೂ, ಗೃಹಸ್ಥರಿಗೂ, ವಾನಪ್ರಸ್ಥರಿಗೂ, ಸ್ತ್ರೀಶೂದ್ರರಿಗೂ ವಿಹಿತವೂ ಯೋಗ್ಯವೂ ಆದ ಧರ್ಮಗಳು ವರ್ಣಿತವಾಗಿವೆ. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ, ಸಂಕರಜಾತಿಗಳು, ಗಂಗಾದಿ ಮಹಾನದಿಗಳು, ಯಜ್ಞ-ಯಾಗಾದಿಗಳು, ಬಹು ವಿಧವಾದ ಸಂಖ್ಯಾದಿ ತತ್ವಗಳು, ಭಾಗವತ ಧರ್ಮಗಳು, ಭಕ್ತಿ, ಜ್ಞಾನ, ವೈರಾಗ್ಯ ಮಾರ್ಗಗಳು ಪರಹಿಂಸಾದಿ ಅಧರ್ಮ ಸ್ವರೂಪಗಳು, ಮನಸ್ಸಿನ ಕರ್ಮದಿಂದುಂಟಾಗುವ ಶುದ್ಧಿಕರ್ಮಗಳು, ಬ್ರಾಹ್ಮ, ಶೈವ, ವೈಷ್ಣವ, ಶಾಕ್ತೇಯ, ಅರ್ಹತ, ಸೌರ ಎಂಬ ಸ್ವರೂಪಸಿದ್ಧವಾದ ಆರು ದರ್ಶನಗಳು ಇತರ ವಿವಿಧ ವಿಷಯಗಳು ಈ ಪುರಾಣಗಳಲ್ಲಿ ವರ್ಣಿತವಾಗಿವೆ. "ಪುರಾಣಗಳು ಹೊಸ ಹೊಸ ಪುಸ್ತಕಗಳನ್ನು ಸತತವಾಗಿ ತುಂಬಿಕೊಳ್ಳುತ್ತಿರುವ ಪುಸ್ತಕ ಭಂಡಾರಗಳಿದ್ದ ಹಾಗೆ; ಆದರೆ ಹೊಸ ಪುಸ್ತಕಗಳನ್ನು 'ಷೆಲ್ಫ್'ನ ಕಡೆಯಲ್ಲಿ ಜೋಡಿಸಬೇಕೆಂಬ ನಿಯಮ ಮಾತ್ರ ಇಲ್ಲಿಲ್ಲ." (ಗೋಪಾಲಕೃಷ್ಣಯ್ಯ ಕೆ.ಎಲ್. ೧೯೯೮: ಪು.೫)

ಪುರಾಣಗಳಲ್ಲಿ ಉಕ್ತವಾದ ಪ್ರಮುಖ ಅಂಶ ಧರ್ಮ. ತೀರ ಇತ್ತೀಚೆಗೆ ಪುರಾಣಗಳಲ್ಲಿ ನಾನಾ ಬಗೆಯ ಕಲೆಗಳು ಮತ್ತು ವಿವಿಧ ಶಾಸ್ತ್ರಗಳಿಗೆ ಸಂಬಂಧಿಸಿದ ಸಾಮಗ್ರಿ ಸೇರಿಕೊಂಡಿದೆ. ನಾಟ್ಯಕಲೆ, ಶಿಲ್ಪಕಲೆ, ಅಲಂಕಾರಶಾಸ್ತ್ರ, ವೈದ್ಯ, ಜ್ಯೋತಿಷ್ಯ ಇವುಗಳ ವಿವರಣೆ ದೊರೆಯುತ್ತವೆ. ಬಗೆಬಗೆಯ ಆರಾಧನಾ ಸಂಪ್ರದಾಯಗಳು, ಭಕ್ತಿ ಪಂಥದ ನಡವಳಿಕೆಗಳು, ದೇವನ ಮಹಿಮೆಯನ್ನು ಕೊಂಡಾಡುವ ಕೀರ್ತನೆಗಳು, ಸ್ತವನ, ಭಜನೆ, ಪ್ರಾರ್ಥನೆಗಳು, ಕಾಲಕಾಲಕ್ಕೆ ಸಲ್ಲಿಸಬೇಕಾಗಿದ್ದ ನೈವೇದ್ಯ, ಬ್ರಾಹ್ಮಣರಿಗೆ ಕೊಡುವ ದಾನ-ದಕ್ಷಿಣೆಗಳು, ಸಂಕಲ್ಪ, ನೋವಿ, ವ್ರತಾಚರಣೆಗಳ ವಿವರ, ಶ್ರಾದ್ಧಾದಿ ಕರ್ಮಗಳು ಇತ್ಯಾದಿ ಅಂಶಗಳು ಪುರಾಣಗಳಲ್ಲಿ ಎಡೆ ಪಡೆದಿವೆ.

ಪುರಾಣಸಮಾಜದಲ್ಲಿ ಕಡೆಯ ಪಕ್ಷ ಎರಡು ನಿರ್ದಿಷ್ಟ ದರ್ಜೆಗಳನ್ನು ಗುರುತಿಸಬಹುದು. ಸ್ವರ್ಗವಾಸಿಗಳಾದ ಸುರರು ಮತ್ತು ಪಾತಾಳವಾಸಿಗಳಾದ ಅಸುರರು. ಪ್ರಾಚೀನ ವೈದಿಕಯುಗದ ಇಂದ್ರ ವರುಣಾದಿ ದೇವತೆಗಳನ್ನು ಮಾನವರ ದೈನಂದಿನ ಸಾಮಾಜಿಕ ವ್ಯವಹಾರಗಳನ್ನು ತದನಂತರ ಹಿಂದೂಯುಗದ ತ್ರಿಮೂರ್ತಿಗಳನ್ನು ವಿಶ್ವವ್ಯಾಪಕ ಆಗುಹೋಗುಗಳನ್ನು ಪುರಾಣಗಳು ಜವಾಬ್ದಾರರಾಗಿಸಿದಂತೆ ತೋರುತ್ತದೆ. (ಅದೇ ಪು.೬)

ಒಟ್ಟಿನಲ್ಲಿ ಕಾಲದಿಂದ ಕಾಲಕ್ಕೆ ಪುರಾಣಗಳು ವಿಸ್ತರಿಸಿಕೊಂಡು ಹೋಗಿದ್ದು ಕಂಡುಬರುತ್ತದೆ. ಇವುಗಳ ಅಶಿಷ್ಟ ಸಂಸ್ಕೃತ ಶೈಲಿ, ಅಸ್ಫುಟ ಕಥನಕ್ರಮ, ಚರ್ವಿತ-ಚರ್ವಣವಾದ ಧರ್ಮ ಜಿಜ್ಞಾಸೆ ಅಮಿತವಾಗಿ ತುಂಬಿಕೊಂಡಿರುವ ಸ್ತೋತ್ರ, ಪ್ರಾರ್ಥನೆ ಮುಂತಾದ ಅಂಶಗಳೆ ಇದಕ್ಕೆ ಸಾಕ್ಷಿ ನುಡಿಯುತ್ತವೆ. "ಪುರಾಣಗಳು ತುಂಬ ಮೆತುವಾದ ಲೋಹವಿದ್ದಂತೆ ಅವುಗಳನ್ನು ಅತ್ಯಂತ ತೆಳುವಾದ ರೇಕುಗಳಾಗಿ ಬಡಿಯಬಹುದು; ಉದ್ದುದ ತಂತಿಗಳಾಗಿ ಎಳೆಯಬಹುದು; ಬೇಕಾದ ಆಕಾರಕ್ಕೆ ತಿರುಗಿಸಬಹುದು." (ಅದೇ ಪು.೭) ಒಟ್ಟಂದದಲ್ಲಿ ನಿರಂತರವಾದ ಪರಂಪರೆಯಲ್ಲಿ ಹೊಸ ಹೊಸ ಸಂಪುಟಗಳನ್ನು ಸೇರಿಸಿಕೊಳ್ಳುತ್ತಾ ಹೇಗೆ ಬೇಕೋ ಹಾಗೆ ಬಾಗುತ್ತ, ಬಳಕುತ್ತ ವಿಸ್ತರಿಸಿಕೊಂಡು ಹೋಗುವ ತೊರೆಯಂತಿರುವ ಇವು ಹಿಂದೂಗಳ ಸಮಗ್ರ ಗ್ರಂಥಭಂಡಾರವೆಂದು ಪರಿಗಣಿಸಬಹುದಾದ ಪುರಾಣಗಳು ಇಂದಿಗೂ ಜಾನಪದ ಮತ್ತು ಮೌಖಿಕ ಸಂಪ್ರದಾಯದಲ್ಲಿ ತಿದ್ದುಪಡಿಗಳನ್ನು ಅಳವಡಿಸಿಕೊಂಡು ಮುಂದುವರೆಯುತ್ತಿವೆ ಎಂದು ಹೇಳಬಹುದು.

ಇ. ಪುರಾಣದ ಉಗಮ ಹಾಗೂ ವಿಕಾಸ :

ಇಷ್ಟು ಮಹತ್ವಪೂರ್ಣವಾದ ಕೃತಿಗಳ ಉಗಮ ಹೇಗಾಯಿತು? ಇವುಗಳ ಕರ್ತೃ ಯಾರು? ಎಂಬ ಬಗ್ಗೆಯೂ ಖಚಿತವಾದ ನಿಲುವಿಗೆ ಬರಲು ಸಾಧ್ಯವಾಗಿಲ್ಲ. ಈ ಎಲ್ಲ ವಿಚಾರಗಳು ಗೋಜಲು ಗೋಜಲಾಗಿ ಅಸ್ಪಷ್ಟವಾಗಿದೆ.

ಪುರಾಣಗಳು ವೇದವ್ಯಾಸಕೃತ ಎಂಬ ಪ್ರತೀತಿ ಇದೆ. ಆದರೆ ಇವುಗಳ ವಸ್ತು ಮತ್ತು ರಚನೆಗಳನ್ನು ದೃಷ್ಟಿಯಲ್ಲಿರಿಸಿ ಪರಿಶೀಲಿಸಿದರೆ ಏಕಕರ್ತೃತ್ವದ ಬಗ್ಗೆ ಅನುಮಾನವಾಗುತ್ತದೆ.

"ಅಥ ಪುರಾಣಂ ನಾಮ ವಿಶ್ವಸ್ಯ ಪೂರ್ವಾವಸ್ಥಾನಿರೂಪಕಂ
ವ್ಯಾಸಾದಿ ಮುನಿಪ್ರಣೀತಂ ಪಂಚಲಕ್ಷಣಾನ್ವಿತಂ ಶಾಸ್ತ್ರಂ" (ಸುಬ್ರಮಣ್ಯಶಾಸ್ತ್ರಿ, ಭಾರತೀಯ ಸಂಸ್ಕೃತಿ ದರ್ಶನ: ಪು.೧೩೮)

"ಪುರಾಣವೆಂದರೆ ಪ್ರಪಂಚದ ಪೂರ್ವಕಾಲದ ಅವಸ್ಥೆಯನ್ನು ನಿರೂಪಿಸುವುದಾಗಿ ವ್ಯಾಸರೆ ಮೊದಲಾದ ಮುನಿಗಳಿಂದ ರಚಿತವಾದ ಪಂಚ ಲಕ್ಷಣಸಮನ್ವಿತವಾದ ಶಾಸ್ತ್ರ" ಎಂಬ ಮಾತು ಇದನ್ನು ಸಮರ್ಥಿಸುತ್ತದೆ. ಆದರೆ ಒಬ್ಬ ವ್ಯಕ್ತಿ ಇಷ್ಟೆಲ್ಲ ಮಾಡಬಹುದೇ ಎಂಬ ಅನುಮಾನ ಉಂಟಾಗುತ್ತದೆ. ಅಲ್ಲದೇ ಅಷ್ಟಾದಶ ಪುರಾಣಗಳನ್ನು ವಿಷ್ಣು ಸಂಬಂಧೀ ಪುರಾಣಗಳು, ಬ್ರಹ್ಮಸಂಬಂಧಿ ಪುರಾಣಗಳು ಹಾಗೂ ಶಿವಸಂಬಂಧಿ ಪುರಾಣ ಮತ್ತು ಇತರೆ ರೀತಿಯ ಪುರಾಣಗಳು ಎಂದು ಸ್ಪಷ್ಟವಾಗಿ ವಿಭಾಗಿಸಬಹುದು. ಆದ್ದರಿಂದ 'ವ್ಯಾಸ' ಎಂಬುದು ಒಬ್ಬ ವ್ಯಕ್ತಿಯಲ್ಲ; ಅದು ಒಂದು ಬಿರುದು. 'ವ್ಯಾಸ' ಎಂಬ ಪದಕ್ಕೆ ವಿಂಗಡಿಸು, ವಿಭಾಗಿಸು ಎಂಬ ಅರ್ಥಗಳಿವೆ. ಅಸ್ತವ್ಯಸ್ತ ವೇದರಾಶಿ ಹಾಗೂ ಪುರಾಣರಾಶಿಗಳನ್ನೆಲ್ಲಾ ಸರಿಯಾಗಿ ವಿಂಗಡಿಸಿ ಜೋಡಿಸುವ ಕೆಲಸವನ್ನು ವೇದವ್ಯಾಸರು ಮಾಡಿದರೆಂದು ಹೇಳಬಹುದು. ಪುರಾಣಗಳನ್ನು ಇಂಥವರೆ ರಚಿಸಿದರೆಂದು ಹೇಳುವುದು ಕಷ್ಟ. ಗುರುಶಿಷ್ಯ ಪರಂಪರೆಯಿಂದ ಹರಿದು ಬಂದಿರಬಹುದೆಂದು ಹೇಳಲಾಗುತ್ತದೆ. ಆದಿಯಲ್ಲಿ

'ಪುರಾಣಸಂಹಿತೆ' ಒಂದೇ ಆಗಿದ್ದಿತು. ಹೀಗೆ ಏಕರೂಪವಾಗಿದ್ದ ಬೃಹತ್ಪುರಾಣಸಂಹಿತೆಯನ್ನು ಸತ್ಯವತೀಪುತ್ರನಾದ ವ್ಯಾಸ ಮಹರ್ಷಿಯು ಹದಿನೆಂಟು ಪುರಾಣಗಳಾಗಿ, ಲೋಕಕಲ್ಯಾಣಕ್ಕಾಗಿ ಪ್ರವರ್ತನಗೊಳಿಸಿದನೆಂದು ತಿಳಿದುಬರುತ್ತದೆ ಎಂದು 'ವಿದ್ವಾನ್ ಮೋಟಗಾನಹಳ್ಳಿ ಸುಬ್ರಮಣ್ಯಶಾಸ್ತ್ರಿ' ಅವರು ಅಭಿಪ್ರಾಯ ಪಡುತ್ತಾರೆ. ವೇದವ್ಯಾಸರು ವೇದಗಳನ್ನು ವಿಂಗಡಿಸಿದರೆಂದು ಪುರಾಣಗಳಲ್ಲಿ ಹೇಳಿದ್ದರೂ ವೇದಸಾಹಿತ್ಯವು ಈ ವಿಷಯದಲ್ಲಿ ಮೌನ ತಾಳಿದೆ. ಬೇರೆ ಬೇರೆ ಪುರಾಣಗಳು ಬೇರೆ ಬೇರೆಯವರಿಂದ ರಚಿತವಾಗಿರುವೆಂಬುದಕ್ಕೆ ಪುರಾಣಗಳಲ್ಲಿಯೇ ಬೇಕಾದಷ್ಟು ಆಧಾರಗಳು ಸಿಗುತ್ತವೆ. ಆದ್ದರಿಂದ ಹದಿನೆಂಟು ಪುರಾಣಗಳೂ, ಹದಿನೆಂಟು ಉಪಪುರಾಣಗಳನ್ನು ವೇದವ್ಯಾಸನೊಬ್ಬನೆ ರಚಿಸಿದನೆಂಬ ಹೇಳಿಕೆಯು ಅವನ ಬಗ್ಗೆ ಹುಟ್ಟಿದ ಗೌರವದ್ಯೋತಕವಾದ ಉಪಚಾರೋಕ್ತಿಯೆಂದು ಭಾವಿಸುವುದು ಯುಕ್ತವಾದುದೆಂದು ವಿದ್ಯಾಶಂಕರ್‌ರವರು ಅಭಿಪ್ರಾಯ ಪಡುತ್ತಾರೆ.

"ವೇದಗಳು ಮತ್ತು ಉಪನಿಷತ್ತಿನ ತರುವಾಯ ಪುರಾಣಗಳು ಹುಟ್ಟಿರಬೇಕು. ಪುರಾಣಗಳಲ್ಲಿ ಪ್ರತಿಪಾದಿತವಾದ ಮೂಲಭೂತ ತತ್ವಗಳು ವೇದೋಪನಿಷತ್ತುಗಳಲ್ಲಿ ಬೀಜರೂಪದಲ್ಲಿರುವುದನ್ನು ನೋಡಬಹುದು. ಸುಮಾರು ಕ್ರಿ.ಪೂ.೫ನೇಯ ಶತಮಾನದ ವೇಳೆಗೆ ವೈದಿಕಧರ್ಮ ಖಿಲವಾಗುತ್ತಿತ್ತು. ಜನಮನದಲ್ಲಿ ಮತ್ತೆ ವೈದಿಕಧರ್ಮ ನೆಲೆನಿಲ್ಲುವಂತೆ ಮಾಡುವ ಪ್ರಯತ್ನ ಪುರಾಣಗಳಿಂದ ಪ್ರಾರಂಭವಾಗಿರಬಹುದು." (ಭೀ.ಕ. ಪ್ರಸ್ತಾವನೆ: ೧೯೭೧ ಪು.೧೯) ಪುರಾಣಗಳು ಹೆಸರಿಗೆ ತಕ್ಕಂತೆ ಹಳೆಯವೆ. ಆದರೆ ಎಷ್ಟು ಹಳೆಯವು? ಎಂಬುದಕ್ಕೆ ವಿದ್ವಾಂಸರಲ್ಲಿ ಏಕಾಭಿಪ್ರಾಯವಿಲ್ಲ. ಪುರಾಣಗಳು ಕಾಲಕಾಲಕ್ಕೆ ಬದಲಾವಣೆ ಹೊಂದಿವೆ; ವಿಸ್ತೃತವಾಗಿವೆ; ಅನೇಕಾನೇಕ ವಿಷಯಗಳನ್ನೊಳಗೊಂಡು ವಿಪುಲವಾಗಿ ಬೆಳೆದಿವೆ. ಪುರಾಣಗಳ ಕಾಲ ಮಹಾಭಾರತ ರಚನೆಯಾದ ನಂತರ ಅಂದರೆ ಕ್ರಿ.ಶ.೨೦೦ರಲ್ಲಿ ಪುರಾಣ ಪ್ರಕಾರವು ಆರಂಭವಾಯಿತೆಂದು ಕೆ.ಎಲ್.ಗೋಪಾಲಕೃಷ್ಣಯ್ಯ ಅಭಿಪ್ರಾಯಪಡುತ್ತಾರೆ. ಪುರಾಣಗಳಲ್ಲಿಯ ವಿಷಯಗಳೆ ಅತ್ಯಂತ ಸಂಕೀರ್ಣವಾಗಿದ್ದು ಇವುಗಳ ಉಗಮ ಮತ್ತಷ್ಟು ಸಂಕೀರ್ಣವಾಗಿದೆ. ಆದರೆ ಪುರಾಣಗಳು ಸಂಕಲನಗೊಂಡ ಬಗ್ಗೆ ಕೆಲವು ಆಧಾರಗಳನ್ನು ಕಂಡುಕೊಳ್ಳಬಹುದು. ಮಹಾಭಾರತ ಯುದ್ಧಾನಂತರ ಯುಗವೆಂದು ಪ್ರತೀತವಾಗಿರುವ ಕ್ರಿ.ಪೂ.ಸುಮಾರು ೧೦೦೦ದ ಕಾಲ ಹಾಗೂ ಕ್ರಿ.ಶ ೪೦೦ ರಿಂದ ೬೦೦ವರೆಗಿನ ಗುಪ್ತವಂಶೀಯರ ಕಾಲವೆಂದು ಕೆ.ಎಲ್.ಗೋಪಾಲಕೃಷ್ಣಯ್ಯನವರು ತರ್ಕಿಸುತ್ತಾರೆ.

ಬೌದ್ಧ ಮತ್ತು ಜೈನಧರ್ಮಗಳು ಉತ್ಕರ್ಷ ಸ್ಥಿತಿಯಲ್ಲಿದ್ದಾಗ ಏಕದೇವೋಪಾಸನೆ, ದೈವಭಕ್ತಿ, ನಂಬಿಕೆಗಳು ಮುಸುಳಿಸುತ್ತಿದ್ದವು. ವೈದಿಕ, ಜೈನ ಹಾಗೂ ಬೌದ್ಧಮತಗಳ ನಡುವೆ ಘರ್ಷಣೆ ನಡೆದು ಜನತೆ ದಿಕ್ಕೆಟ್ಟಿದ್ದಿತು. ವೈದಿಕಧರ್ಮದ ಕಡೆಗೆ ಜನಮನ ಒಲಿಸಲು ಆಸಕ್ತಿ ಹುಟ್ಟಿಸಲು, ಶ್ರದ್ಧೆ ಬೆಳೆಸಲು, ನಂಬಿಕೆ ಬಲಗೊಳಿಸಲು ಪುರಾಣಗಳು ರಚನೆಯಾಗಿರಬಹುದು. ಯಾವೊಂದು ಪುರಾಣಕೃತಿಗೂ ಇಂಥದೇ ಎನ್ನುವ ಒಂದು ನಿರ್ದಿಷ್ಟ ಕಾಲಾವಧಿಯಿಲ್ಲ. ನಾಮಾಂಕಿತ ಪಡೆದ

ಪ್ರತಿಯೊಂದು ಕೃತಿಯೂ ಕಾಲದ ಗುಂಟ ಸಾಗಿಬರುವಾಗ ಆಯಾ ಚಾರಿತ್ರಿಕ ಯುಗದಲ್ಲಿ ಸಂಗ್ರಹಿಸಿಕೊಂಡ ಹಲವು ಬಗೆಯ ವಸ್ತುಗಳಿಂದ ವೃದ್ಧಿಗೊಂಡಂತೆ ತೋರುತ್ತದೆ. ಒಂದೊಂದು 'ಪುರಾಣ'ವೂ ಒಂದೊಂದು ವಿಶ್ವಕೋಶವಾಗಿ ಬೆಳೆದಿರುವುದನ್ನು ನೋಡಿದರೆ ಇವುಗಳ ಮಹತ್ವ ಗೊತ್ತಾಗುತ್ತದೆ.

ಹಿಂದೂಗಳಲ್ಲಿ ಸನಾತನ ಧರ್ಮ ಆಳವಾಗಿ ಬೇರೂರಿತ್ತು. ಆದರೆ ಈ ಧರ್ಮದಲ್ಲಿಯ ಕರ್ಮಾಚರಣೆಗಳು, ವರ್ಣವ್ಯವಸ್ಥೆ, ಪ್ರಾಣಿಬಲಿ, ಯಜ್ಞಯಾಗಾದಿಗಳು, ಅಂಧಶ್ರದ್ಧೆ ಮುಂತಾದ ಕ್ರೂರ ಆಚರಣೆಗಳಿಂದ ರೋಸಿ ಹೋದ ಒಂದು ವರ್ಗ ಧರ್ಮವಿಮುಖತೆ ಕೈಗೊಂಡಿರಬೇಕು. ಇದು ಕ್ರಮೇಣ ಉಲ್ಬಣಗೊಂಡು ಸರ್ವಗ್ರಾಹ್ಯವಾದ, ಸಾಮಾನ್ಯ ಜನರೂ ಆಚರಿಸಲು ಯೋಗ್ಯವಾದ ಧರ್ಮವೊಂದನ್ನು ಸ್ಥಾಪಿಸಬೇಕೆಂಬ ಹಿನ್ನೆಲೆಯಲ್ಲಿಯೇ ಜೈನ, ಬೌದ್ಧ ಧರ್ಮಗಳು ಮೂಡಿ ಬಂದವು. ಈ ಧರ್ಮದ ತತ್ವಗಳು ಅತ್ಯಂತ ಜನಾಕರ್ಷಣೆಗೊಳಗಾದಾಗ, ಹಾಗೂ ಈ ಅವೈದಿಕ ಧರ್ಮಗಳಿಂದ ವೈದಿಕಧರ್ಮದ ಮೇಲುಂಟಾಗುತ್ತಿರುವ ದುಷ್ಪರಿಣಾಮಗಳಿಂದ ಖತಿಗೊಂಡ ಸನಾತನಿಗಳು ಪುರಾಣ ರಚಿಸಲು ಮೊದಲು ಮಾಡಿರಬೇಕು.

ಒಟ್ಟಿನಲ್ಲಿ ಪುರಾಣಗಳು ಪುರಾತನ ಕಾಲದಿಂದಲೂ ನಿರಂತರವಾಗಿ ಮನುಷ್ಯನ ತತ್ಕಾಲೀನ ಪರಿಸ್ಥಿತಿಗೆ ಹೊಂದಿಕೊಂಡು, ಅವನ ಬೇಕುಬೇಡಗಳನ್ನು ಪೂರೈಸುತ್ತ, ಅವನ ಬದುಕಿಗೆ, ಅಭಿಲಾಷೆಗಳಿಗೆ ಅನುಗುಣವಾಗಿ ರೂಪುಗೊಳ್ಳುತ್ತ ಸ್ಥಿತಿಸ್ಥಾಪಕ ಗುಣವನ್ನು ಮೇಳೈಸಿಕೊಂಡು ಎಲ್ಲಿ ಹೇಗೆ ಬೇಕಾದರೂ ನಿರ್ವಹಿಸಬಲ್ಲ ಶಕ್ತಿಯನ್ನು ಹೊಂದಿರುವುದು ಕಂಡುಬರುತ್ತದೆ. ಧರ್ಮವನ್ನು ರಕ್ಷಿಸಿದ, ಬೆಳೆಸಿದ ಹಾಗೂ ಜನಜೀವನದಲ್ಲಿ ಧರ್ಮವು ಉಸಿರಾಗುವಂತೆ ಮಾಡಿದ ಕೀರ್ತಿ ಪುರಾಣಗಳಿಗೆ ಸಲ್ಲುತ್ತದೆ.

ವೀರಶೈವ ಪುರಾಣಗಳು ಮತ್ತು ತೌಲನಿಕತೆ:

ಚಾರಿತ್ರಿಕವಾಗಿ ಆಂಧ್ರಪ್ರದೇಶ, ತಮಿಳುನಾಡು ಹಾಗೂ ಕರ್ನಾಟಕದ ಸಂಬಂಧ ಹಳೆಯದು. ಪಲ್ಲವ ಒಂದನೇ ಮಹೇಂದ್ರವರ್ಮನ (ಕ್ರಿ.ಶ ೬೮೦) ಮೇಲೆ ಎರಡನೇ ಪುಲಕೇಶಿಯು ದಂಡೆತ್ತಿ ಹೋಗಿ ಜಯಶಾಲಿಯಾದದ್ದಲ್ಲದೆ ಚೋಳರು, ಪಾಂಡ್ಯರು ತನ್ನ ಭುಜಬಲದ ಮುಂದೆ ತಲೆಬಾಗುವಂತೆ ಮಾಡಿದ ಸಂಗತಿ ಕರ್ನಾಟಕ ಚರಿತ್ರೆಯಲ್ಲಿ ಪ್ರಸಿದ್ಧ. ಈ ನಾಡುಗಳ ನಡುವೆ ನಡೆದ ಪ್ರತಿಷ್ಠೆಯ ಕಾಳಗಗಳಿಂದ ಕನ್ನಡ ನಾಡಿನ ಗಡಿ ತಮಿಳನಾಡಿಗೂ, ಆಂಧ್ರಪ್ರದೇಶದ ಗಡಿ ನರ್ಮದೆಯ ಕನ್ನಡ ನಾಡಿಗೂ ಮುಂಚಾಚುವ ಹಿಂಚಾಚುವ ಆವರ್ಜನ–ನಿರಾವರ್ಜನ ಕ್ರಿಯೆ ಘಟಿಸಿತು. ರಾಜಕೀಯ ವಿಸಂಗತಿಗಳು ಏನೇ ಇರಲಿ ಎರಡೂ ಪ್ರಾಂತ್ಯಗಳ ಭಾಷೆ, ಆಚಾರ–ವಿಚಾರ ನಡಾವಳಿಗಳು; ಶಾರೀರಿಕ ಹಾಗೂ ಭೌಗೋಳಿಕ ರಚನೆಗಳು; ಆಹಾರ–ವಿಹಾರಗಳು ಈ ಪ್ರದೇಶಗಳಿರುವ ನಿಕಟ ಸಾಂಸ್ಕೃತಿಕ ಸಂಬಂಧವನ್ನು ಬಹುವಾಗಿ ಸ್ಪಷ್ಟಪಡಿಸುತ್ತಿವೆ.

ತಮಿಳುನಾಡಿನಲ್ಲಿ ನಡೆದಂತಹ ಧಾರ್ಮಿಕ ಆಂದೋಲನ ಕರ್ನಾಟಕದಲ್ಲಿ ೧೨ನೇ ಶತಮಾನದಲ್ಲಿ ಬಸವಾದಿ ಶಿವಶರಣರಿಂದ, ಆ ವೇಳೆಗಾಗಲೇ ಆಂಧ್ರಪ್ರದೇಶದಲ್ಲೂ ಆಚಾರಗಳಿಂದ ಹಳವಂಡವಾಗಿದ್ದ ಶೈವ ಹಾಗೂ ವೈದಿಕ ಧರ್ಮಗಳ ವಿರುದ್ಧ ನಡೆಯಿತು. ಕನ್ನಡನಾಡಿನ ಸುತ್ತೆಲ್ಲ ಈ ಕ್ರಾಂತಿಯ ಬೀರುಬೀಸು ಹರಡಿ ದೊಡ್ಡ ಮಟ್ಟದಲ್ಲಿ ವೈಚಾರಿಕ ಚಿಂತನೆ ನಡೆಯಿತು. ವರ್ಣ-ವರ್ಗಗಳ ಸಂಕೋಲೆ ಕಳಚಿ ಜನರೆಲ್ಲ ಮುದುವಾಗಿ ಚಳುವಳಿಯ ಸಾಫಲ್ಯಕ್ಕಾಗಿ ಶ್ರಮಿಸಿದರು. ಬಸವಣ್ಣನವರು ಇದಕ್ಕೆ ಸೂತ್ರಧಾರರಾದರು. ಸಾಮೂಹಿಕವಾದ ಮನಃಪರಿವರ್ತನೆಗಾಗಿ ವ್ಯಕ್ತಿವ್ಯಕ್ತಿಗಳ ಅಂತರಂಗದ ಮಿಡಿತ ಜೀವಂತ ಭಾಷೆಯತ್ತ ಕೈಚಾಚಿ ಸ್ಪಂದಿಸಿತು. ಮನದ ಆಲೋಚನೆಗಳಿಗೆ ಮಾತು ಜೀವ ತುಂಬಿತು. ಭಿನ್ನ ಭಿನ್ನ ನೆಲೆಯಲ್ಲಿ, ಅನುಭವದ ಸ್ತರಗಳಲ್ಲಿ ನುಡಿ ಮನದ ಉತ್ಕಟವಾದ ಆಲೋಚನೆಗಳನ್ನು ಹರಳುಗೊಳಿಸಿತು. ಭಾವನೆಗಳ ಅನುಪಮ ಮೈತ್ರಿಯಿಂದ ಹೃದಯ ಹೃದಯಗಳ ಮಿಡಿತ ಕೇಳುವಂತಾಯಿತು. ಅದರಿಂದ ಎಚ್ಚೆತ ಸಮಾಜ ಹೊಸಧರ್ಮದ ಉದಯಕ್ಕೆ ಸ್ವಾಗತಿಸಿದರು. ವೀರಶೈವ ಧರ್ಮ ಜೈನ ಹಾಗೂ ವೈದಿಕ ಧರ್ಮಗಳ ಪ್ರಭಾವವನ್ನು ಕಾಲಕ್ರಮೇಣ ಬದಿಗೊತ್ತಿ ವಿಶ್ವವಿಶಾಲವಾದ, ಸರ್ವಜನಾದರಣೀಯವೂ, ಸಾರ್ವಕಾಲಿಕವೂ ಆದ ತತ್ತ್ವಗಳನ್ನು ಮುಂದಿಟ್ಟು ಸುಖೀ ಸಮಾಜದ ನಿರ್ಮಾಣಕ್ಕೆ ಸನ್ನದ್ಧವಾಯಿತು.

ಆಂಧ್ರಪ್ರದೇಶದಲ್ಲಾಗಲೀ, ತಮಿಳುನಾಡಿನಲ್ಲಾಗಲೀ ಕನ್ನಡನಾಡಿನಲ್ಲಾಗಲೀ ಬೌದ್ಧ, ಜೈನ, ಧರ್ಮಗಳು ಭಕ್ತಿಯ ಉದ್ದೀಪನಕ್ಕೆ ಸಾಧನವಾದ ಸಾಹಿತ್ಯಸೃಷ್ಟಿ ಮಾಡಲಿಲ್ಲ. ಅವುಗಳು ದೈವದ ಅಸ್ತಿತ್ವದ ಬಗೆಗೆ ನಂಬುಗೆ ಹೊಂದಿರದ ಕಾರಣ ದೇವೋಪಾಸನೆ ಭಕ್ತಿಯ ಮೂಲಕ ಆದುದು ಆ ಧರ್ಮಗಳ ಸಾಹಿತ್ಯದಲ್ಲೆಲ್ಲೂ ಕಾಣಬರುವುದಿಲ್ಲ. ಶೈವಧರ್ಮವಾಗಲೀ ವೀರಶೈವ ಧರ್ಮವಾಗಲೀ ಭಕ್ತಿ ಪಂಥದಿಂದಲೇ ಶಕ್ತಿ ಸಂಚಯನ ಪಡೆದದ್ದು. ಅಪ್ಪರ್ ಸಂಬಂಧರ್ ಅವರ ತೇವಾರಂಗಳು ಭಕ್ತಿ ಗೀತಮಾಲಿಕೆಗಳೇ. ಅವು ಜನಮನವನ್ನು ಮಿಡಿದುದು, ಅರಳಿಸಿದುದು ಅಂತಃಕರಣವನ್ನು ಮುಟ್ಟುವ ತಮ್ಮ ಸಾಹಿತ್ಯ ಗುಣದಿಂದಲೇ. "ಅವು ಗಹನವಾದ ತತ್ತ್ವವಿಚಾರಗಳನ್ನು ಸುಲಭವಾದ ಭಾಷೆಯಲ್ಲಿ ಜನಸಾಮಾನ್ಯಕ್ಕೆ ಹೇಳುವುದರಲ್ಲಿ ತೊಡಗಿದ್ದವು. ತಮಿಳರ ಇಂತಹ ಹಾಡುಗಳನ್ನು ಕನ್ನಡಿಗರು ಅನುಸರಿಸಿರಬಹುದು" (ಡಿ.ಎಲ್.ಎನ್. (ಲೇ.) ಪೀಠಿಕೆ, ಪು.೪೪೨) ವಚನಗಳು "ಶಿವಶರಣರ ಹೃದಯವಿದ್ರಾವಕವಾದ ಗೀತೆಗಳು" ಎಂದು ಹೇಳುವ ಪ್ರೊ.ಡಿಎಲ್.ಎನ್.ರವರು ತೇವಾರಂಗಳು ವಚನಗಳ ನಿರ್ಮಾಣಕ್ಕೆ ಸ್ಫೂರ್ತಿಯನ್ನು ನೀಡಿರಬಹುದು ಎಂದು ಊಹಿಸುವರು. ಜೇಡರ ದಾಸಿಮಯ್ಯ, (ಜೇ.ದಾ.ವ.-೧೨) ಬಸವ[೧], (ಬ.ಷ.ವ.-೬೪೯) ಪ್ರಭುದೇವರ (ಅ.ಪ್ರವ.-೪೧೯) ವಚನಗಳಲ್ಲಿ 'ದೇಹಾರ'ದ ಪ್ರಸ್ತಾಪ ಬಂದಿದೆ. ಇದು ದೇವಾರವೆಂದಿದ್ದು ಸ್ತೋತ್ರ ಅಥವಾ ಪ್ರಾರ್ಥನೆ ಎಂದು ಅರ್ಥವಿರಬಹುದೇನೋ" (ಬ.ಷ.ವ., ಶಬ್ದಕೋಶ - ೩೨೪) ಎಂದು ಪ್ರೊ. ಬಸವನಾಳರವರು ಊಹಿಸಿರುವರು. (ಪು-೩೧೨-೩೧೨).

೧೨ನೇ ಶತಮಾನದಲ್ಲಿ ಕರ್ನಾಟಕದಲ್ಲಿ ನಡೆದ ಚಳವಳಿ ಕೇವಲ ಧಾರ್ಮಿಕವಲಯದಲ್ಲಿ ಮಾತ್ರವಾಗಲಿಲ್ಲ; ಸಾಮಾಜಿಕವಾಗಿ, ರಾಜಕೀಯವಾಗಿ, ಸಾಹಿತ್ಯಿಕವಾಗಿ ಬಹುಮುಖವಾದ ಚಾಲನೆಯನ್ನು ಈ ಚಳುವಳಿ ಪಡೆದುಕೊಂಡಿದ್ದಿತು. ಆಂಧ್ರ ಮತ್ತು ತಮಿಳುನಾಡಿನಲ್ಲಿ ಧಾರ್ಮಿಕ ವ್ಯವಸ್ಥೆಯ ಚೌಕಟ್ಟಿನಲ್ಲಿಯೇ ಚಳುವಳಿ ಪರಿಣಾಮಕಾರಿಯಾದ ಯಶಸ್ಸನ್ನು ಕಂಡುಕೊಂಡಿತು. ಕನ್ನಡನಾಡಿನಲ್ಲಿ ನಡೆದ ಚಳುವಳಿಯಲ್ಲಿ ಪ್ರಬಲವಾದ ಬ್ರಾಹ್ಮಣಧರ್ಮದ ವ್ಯವಸ್ಥೆಯ ವಿರುದ್ಧ ನಿಂತು ಸೆಣಸಲಾಯಿತು. ಸಾಮಾಜಿಕ ಮೌಲ್ಯಗಳ ಪುನರ್ನವೀಕರಣವಾಯಿತು. ಪರಂಪರಾಗತವಾಗಿ ಬಂದಿದ್ದ ಆಚರಣೆಗಳು, ಪದ್ಧತಿಗಳು ಬದಲಾದವು ಹುಟ್ಟಿನಿಂದ ಜಾತಿಯಲ್ಲ ವ್ಯಕ್ತಿಯ ಆಚರಣೆಯಿಂದ, ಗುಣದಿಂದ ಜಾತಿ ನಿರ್ಣಯಗೊಂಡಿತು. ಲಿಂಗವಂತ, ಭವಿ ಈ ಎರಡೇ ಜಾತಿಗಳು ಕೊನೆಯಲ್ಲಿ ಉಳಿದವು. ತಮಿಳುನಾಡಿನಲ್ಲಿ ನಡೆದ ಧಾರ್ಮಿಕ ಚಳುವಳಿ ಒಂದು ವಿಧದಲ್ಲಿ ಕನ್ನಡಿಗರಿಗೆ ಪ್ರೇರಣೆ ನೀಡಿದೆ, ಅಲ್ಲಿ ಸಮಾಜದ ಎಲ್ಲ ವರ್ಗದ ಜನ ಕಲೆತು ಚಳುವಳಿಯಲ್ಲಿ ಸಕ್ರಿಯವಾಗಿ ಪಾಲ್ಗೊಂಡರು.

ಕೆಳವರ್ಗದ ಜನ ತಾವು ಗಳಿಸಿ ಬೆಳೆಸಿದ ವಿಶಿಷ್ಟ ವ್ಯಕ್ತಿತ್ವದಿಂದ ಉತ್ತಮ ವರ್ಗದವರನ್ನು ಪ್ರಶ್ನಿಸುವ, ತಿರಸ್ಕರಿಸುವ, ಶಿಕ್ಷಿಸುವ ಶಕ್ತಿಗಳಿಸಿದ್ದರು. ಹಿಡಿದ ಕಾರ್ಯ ಯಾವುದೇ ಇರಲಿ, ಭಾವಶುದ್ಧ ಬಾಳ್ವೆಗೆ ಅಲ್ಲಿ ಬೆಲೆಯಿದ್ದಿತು. ಕರ್ನಾಟಕದಲ್ಲಿಯೂ ಎಲ್ಲ ಬಗೆಯ ಜನ ಒಂದಾಗಿ ಚಳುವಳಿಯಲ್ಲಿ ಪಾಲ್ಗೊಂಡರು. ಕೆಳವರ್ಗದ ಜನರ ಉದ್ಧಾರವೇ ಪ್ರಧಾನವಾದ ಈ ಚಳುವಳಿಯಲ್ಲಿ ಅವರ ಆಶೋತ್ತರಗಳು ಪೂರ್ಣಗೊಳ್ಳತೊಡಗಿತು. ಸೋಂಕಿಲ್ಲದೆ ಎಲ್ಲರೂ ಒಂದೆಡೆ ಸೇರಿ ಮುಕ್ತ ಮನಸ್ಸಿನಿಂದ ಚರ್ಚಿಸುವ ಅವಕಾಶ ಪ್ರಾಪ್ತವಾಯಿತು. ಕಾಯಕದಲ್ಲಿ ಅಧಮ ಉತ್ತಮ ಬಾಳುವೆ ಪ್ರಧಾನವಾಯಿತು. ಅಂಬಿಗರ ಚೌಡಯ್ಯ, ತುರುಗಾಹಿ ರಾಮಣ್ಣ, ಮೋಳಿಗೆಯ ಮಾರಯ್ಯ, ಮೇದರ ಕೇತಯ್ಯ, ಒಕ್ಕಲ ಮುದ್ದಯ್ಯ, ನುಲಿಯ ಚಂದಯ್ಯ, ವೈದ್ಯ ಸಂಗಣ್ಣ, ರಾಯಸದ ಮಂಚಣ್ಣ, ಗಾಣದ ಕಣ್ಣಪ್ಪ, ಮಡಿವಾಳ ಮಾಚಯ್ಯ, ಅನಾಮಿಕ ನಾಚಯ್ಯ, ಬೊಲ್ಲಯ್ಯ, ಕಲಕೇತ ಬೊಮ್ಮಯ್ಯ, ಬಹುರೂಪಿ ಚೌಡಯ್ಯ, ಹಡಪದ ಅಪ್ಪಣ್ಣ, ದಾಸೋಹದ ಸಂಗಣ್ಣ, ಹೊಡೆಹುಲ್ಲ ಬಂಕಣ್ಣ, ಜೋದರ ಮಾಯಣ್ಣ, ಸೂಳೆ ಸಂಕವ್ವೆ, ಕೊಟ್ಟಣದ ಸೋಮವ್ವೆ, ಹಾಡುವ ವೀರದೇವಮ್ಮ, ಕನ್ನಡಿ ಕಾಯಕದ ರೇವಮ್ಮ, ಕದಿರ ಕಾಯಕದ ಕಾಳವ್ವೆ, ಕೇಳಿಕೆಯ ಮಹಾದೇವಿ, ಮೋಳಿಗೆಯ ಮಹಾದೇವಿ, ನಿರಂಜನದ ಧವಳಾಯಿ, ಹುಗ್ಗಿಯ ದುಗ್ಗಳವ್ವೆ, ದಂಡಿಗೆಯ ಗುಡ್ಡಾದೇವಿ ಹೀಗೆ ನೂರಾರು ಮಂದಿ ಶರಣ ಶರಣೆಯರು ಕಾಯಕ ಸೂತ್ರ ಹಿಡಿದು ತನು–ಮನ ಬಳಲಿಸಿ ಗಳಿಸಿದರು. (ಮೊದಲಿಗೆ ಕಾಯಕ ಸೂತ್ರ ಹಿಡಿದು ತನು–ಮನ ಬಳಲಿಸಿ ಗಳಿಸಿದರು.) ಮೊದಲಿಗೆ ಕಾಯಕತತ್ವದ ನಿಜವಾದ ಅರ್ಥ ಗಳಿಸಿದವರು, ತಮಿಳುನಾಡಿನ ಪುರಾತನರು. ದುಡಿಮೆಯೇ ದೇವರೆಂದು ಭಾವಿಸಿ, ತಮ್ಮ ತಮ್ಮ ಕಾಯಕದಲ್ಲಿ ಪ್ರಾಮಾಣಿಕತೆಯನ್ನು ಅಳವಡಿಸಿ ದುಡಿಮೆಯ ಫಲವನ್ನು

ಮೊದಲಿಗೆ ಶಿವರೂಪಿ ಭಕ್ತರಿಗೆಂದು ನಂತರ ತಮಗೆ ವಿನಿಯೋಗಿಸಿ ನವೀನವಾದ ಆದರ್ಶವನ್ನು ಲೋಕಕ್ಕಿತ್ತರು. ತಿರುಕ್ಕುರಿಪ್ಪತ್ತೊಂಡ ನಾಯನಾರ್, ಇಳಯಾನ್‌ಗುಡಿ ಮಾರಯನಾಯನಾರ್, ಅತಿಭಕ್ತ, ಮೂರ್ಖನಯನಾರ್, ಮೊನ್ನೈಯಿಡುವಾರ್ ನಾಯನಾರ್, ವೇಶನಾಯನಾರ್ ಇವರೇ ಮೊದಲಾದವರ ಕಾಯಕ ನಿಷ್ಠೆ ಉದಾತ್ತ ಧ್ಯೇಯ ಅನುಕರಣೀಯ. ಬಹುಶಃ ಈ ಅನುಕರಣೀಯವಾದ ಕಾಯಕತತ್ವದ ಮಹತ್ವವನ್ನು ಚೆನ್ನಾಗಿ ಗ್ರಹಿಸಿ ಇನ್ನಷ್ಟು ವ್ಯಾಪಕವಾಗಿ ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡವರು ಕರ್ನಾಟಕದ ಶಿವಶರಣರು. ಗುರು–ಲಿಂಗ–ಜಂಗಮಗಳಿಗಿಂತ ಕಾಯಕನಿಷ್ಠೆಗೇ ಹೆಚ್ಚು ಮಹತ್ವವನ್ನು ನಮ್ಮ ಶರಣರು ಕೊಟ್ಟರು. ಆಯ್ದಕ್ಕಿ ಮಾರಯ್ಯ ಕಾಯಕದ ಮಹತ್ವವನ್ನು ಹೀಗೆ ಹೇಳಿರುವನು.

> ಕಾಯಕದಲ್ಲಿ ನಿರತನಾದರೆ, ಗುರುದರ್ಶನವಾದರೂ ಮಱೆಯಬೇಕು.
> ಲಿಂಗಪೂಜೆಯಾದರೂ ಮಱೆಯಬೇಕು.
> ಜಂಗಮ ಮುಂದಿದ್ದರೂ ಹಂಗು ಹಱೆಯಬೇಕು.
> ಕಾಯಕವೇ ಕೈಲಾಸವಾದ ಕಾರಣ
> ಅಮರೇಶ್ವರ ಲಿಂಗವಾಯಿತ್ತಾದರು ಕಾಯಕದೊಳಗು.

ಎಂದು ಹೇಳುವಲ್ಲಿ ಸಮಕಾಲೀನ ಬದುಕಿನ ಜೀವನ ಮೌಲ್ಯವನ್ನು, ಆದರ್ಶವನ್ನು ಎತ್ತಿ ತೋರಿದಂತಿದೆ. ಕಾಯಕಕ್ಕೆ ಹಾಗೂ ಭಕ್ತಿಗೆ ಜಾತಿಗೋತ್ರಗಳ ಸೀಮೆಯಿಲ್ಲ. ಕನ್ನಡಿಯ ಕಾಯಕದ ಆಮ್ಮಿದೇವಯ್ಯ ಹೇಳುವಂತೆ "ಆವಾವ ಜಾತಿ ಗೋತ್ರದಲ್ಲಿ ಬಂದರೂ ತಂತಮ್ಮ ಕಾಯಕ್ಕೆ ಭಕ್ತಿಗೆ ಸೂತಕವಿಲ್ಲದಿರಬೇಕು." ತಮಿಳುನಾಡಿನ ಚಳುವಳಿಯಲ್ಲಾಗಲೀ ಕನ್ನಡನಾಡಿನ ಚಳುವಳಿಯಲ್ಲಾಗಲೀ ಪಾಲ್ಗೊಂಡವರಲ್ಲಿ ಬಹುಪಾಲು ಮಂದಿ ಸಾಮಾನ್ಯರು. ಅವರುಗಳ ಮನೆಯಲ್ಲಿ ಬಡತನವಿರಬಹುದು, ಆದರೆ ಮನದಲ್ಲಲ್ಲ. ಸ್ವತಂತ್ರರೂ, ಧೀರರೂ ಆದ ಈ ಮಹಾನುಭಾವರನ್ನು ಕುರಿತು ಬಸವಣ್ಣನವರು "ಮನೆ ನೋಡಾ ಬಡವರು, ಮನ ನೋಡಾ ಘನ; ಸೋಂಕಿನಲ್ಲಿ ಸುಖಿ, ಸರ್ವಾಂಗ ಕಲಿಗಳು; ಪಸರಕ್ಕನುವಿಲ್ಲ ಬಂದ ತತ್ಕಾಲಕ್ಕುಂಟು ಕೂಡಲಸಂಗನ ಶರಣರು ಸ್ವತಂತ್ರ ಧೀರರು" (ಅದೇ) ಎಂದು ಹೇಳಿರುವುದು ಅರ್ಥಪೂರ್ಣವಾಗಿದೆ.

ಶೈವಧರ್ಮದಲ್ಲಿ ೬೩ ಮಂದಿ ಪುರಾತನರ ಬದುಕು ಶಿವನಲ್ಲಿ ನಿಷ್ಠಾಪೂರ್ಣವಾದುದು. ಆ ಅನುಪಮವಾದ ಭಕ್ತಿನಿಷ್ಠೆ, ಎಂತಹ ಉಗ್ರಪರೀಕ್ಷೆಯಲ್ಲೂ ಬಾಗದ ಮನಸ್ಸು ನಮ್ಮ ಶಿವಶರಣರಿಗೆ ಬಹಳ ಪ್ರಿಯವಾದುದು. ಕಾಡುವ ಬೇಡುವ ಶಿವನೂ ಇವರ ಮುಂದೆ ಸೋತು ಕೈ ಚೆಲ್ಲುವನು. ತಮ್ಮ ಶುಚಿಯಾದ ಬಾಳ್ವೆ, ನಿಷ್ಠಾಪೂರ್ಣವಾದ ಭಕ್ತಿ ಇವುಗಳಿಂದ ಶಿವನನ್ನು ಸಾಕ್ಷಾತ್ಕರಿಸಿಕೊಂಡು, ಆ ಲೋಕಶಕ್ತಿಯಿಂದಲೇ ಒಮ್ಮೊಮ್ಮೆ ಸೇವೆ ಸ್ವೀಕರಿಸಿ ಪುನೀತರಾದ ಆ ಪುರಾತನರ ಜೀವನ ಕಥನದ ನೆನಕೆ ಶರಣರಿಗೆ ಪ್ರಿಯವಾದುದು. ಆದುದರಿಂದಲೇ ಶರಣರ ವಚನಗಳಲ್ಲಿ ಇವರ ಬದುಕಿನ ಅಮೂಲ್ಯ ಘಟನಾವಳಿಗಳು ಕೋದು ನಿಂತಿವೆ. ಅರವತ್ತಮೂವರು ಪುರಾತನರುಗಳಲ್ಲಿ

ಹಲವರು ಲೌಕಿಕಕ್ಕೆ ವಿರುದ್ಧವಾಗಿ ಅತಿಮಾನವರಾಗಿ ತಮ್ಮ ಉಗ್ರಭಕ್ತಿಯನ್ನು ಶಿವನಲ್ಲಿನ ತಮ್ಮ ಅನನ್ಯ ನಿಷ್ಠೆಯನ್ನು ಪ್ರಕಟಿಸಿರುವರು. ಅವರ ವರ್ತನೆ ಲೋಕದ ಕಣ್ಣಿಗೆ ವಿಚಿತ್ರ; ಅಸದೃಶ. ಮಾನವ ಭಕ್ತಿಗೆ ಮೀರಿದುದು. ಇದನ್ನು ಗಮನದಲ್ಲಿಟ್ಟುಕೊಂಡೇ ಬಸವಣ್ಣನವರು "ಮುನ್ನಿನ ಪುರಾತನರೆಲ್ಲರೂ ತನುಮನಧನವಿತ್ತು ಮಾಡಿ ನೀಡಿ ಲಿಂಗದ ಕೂಡಿದ ಪರಿಗಳ ಅನುಭಾವದ ಅರ್ಥಯಿಸಿ ಹೇಳಬಹುದಲ್ಲದೆ ಮಾಡಿ ನೀಡಿ ತೋರಲು ಬಾರದು" ಎಂದಿರುವುದು.

ಶರಣರು ವಿಶಿಷ್ಟವಾಗಿ ನೆನೆದಿರುವುದು ಸಿರಿಯಾಳ ದಂಪತಿಗಳು, ನಂಬಿಯಣ್ಣ, ಬಲ್ಲಾಳ, ಸಿಂಧು ಮರಾಳ, ತಿರುನೀಲಕಂಠ ಇವರುಗಳ ಭಕ್ತಿ, ಭಕ್ತಿಯ ಪರೀಕ್ಷೆ, ಭಕ್ತನ ವಿಚಲಿತ ಮನಸ್ಸು, ಶುದ್ಧ ಭಕ್ತಿಗೆ ಸಿಗುವ ಪ್ರತಿಫಲ ಇವೆ ಮೊದಲಾದುವನ್ನು ಪ್ರಸ್ತಾಪಿಸುವಾಗ ನಿದರ್ಶನಾರ್ಥವಾಗಿ ಪುರಾತನರ ಭಕ್ತಿ ಹಾಗೂ ಅದರ ಪರೀಕ್ಷೆಯ ವಿಶೇಷತೆಯನ್ನು ವಚನಕಾರರು ಹೇಳಿರುವರು. ಸಿರಿಯಾಳ ಜಾತಿಯಲ್ಲಿ ವೈಶ್ಯ, ಆದರೂ ಶಿವನಲ್ಲಿ ಅಚಲವಾದ ಭಕ್ತಿ, ಲೌಕಿಕರಾದ ವೈಶ್ಯರಂತಲ್ಲ ಅವನು. 'ನೀಡುವರುಂಟು ಎಂಬುವುದಿಲ್ಲ' ಎಂಬ ಬಿರುದಿನ ಕಹಳೆ ಅವನದು. ಇವನ ಮನಸ್ಸನ್ನು ಒರೆಹಚ್ಚಿ ನೋಡಬೇಕೆಂದು ಇಪ್ಪತ್ತೊಂದು ದಿನ ಸತತವಾಗಿ ಶಿವ ಮಳೆಗರೆದ. ಅಂಜದ ಸಿರಿಯಾಳ ಅಡುಗೆಗೆ ಬೇಕಾದ ಸೌದೆಗಾಗಿ ಹುಲ್ಲು ಮನೆ ಮಾಳಿಗೆ ಎಲ್ಲವನ್ನೂ ಬಳಸಿದ. ಹಸಿದು ಬಂದ ಭಕ್ತರಿಗೆ ಉಣಬಡಿಸಿದ. (ಇಳೆಯಾಂಡಗುಡಿಮಾರನ ಕಥೆ) ಮತ್ತು ಪರೀಕ್ಷಿಸುವೆನೆಂದು ಶಿವ ಜಂಗಮ ರೂಪ ಧರಿಸಿ ಬಂದು ನರಮಾಂಸ ಬೇಕೆಂದನು. ದಂಪತಿಗಳು ತಮ್ಮ ಪುತ್ರ ಚೀಲಾಳನನ್ನೇ ಕೊಂದು ಪಾಕವಮಾಡಿ ಶಿವನಿಗೆ ಉಣಬಡಿಸಿದರು. ಮಾನವರಿಗೆ ಮೀರಿದ ಭಕ್ತಿ, ನಿಷ್ಠೆಯನ್ನು ಸಿರಿಯಾಳ ತೋರಿದ ಈ ಅಮಾನುಷ ವರ್ತನೆಯನ್ನು ಕಂಡು ಅಚ್ಚರಿಯಿಂದ ಬಸವಣ್ಣನವರು 'ಸೆಟ್ಟಿಯೆಂಬೆನೆ ಸಿರಿಯಾಳನ' (ಬ.ಷ.ವ. ವ.೩೪೭) ಎಂದುದು. ಅವನ ದಾನದ ವಿಶೇಷತೆಯನ್ನು 'ಉಂಬ ಉಡುವ ಠಾವ ಸಿರಿಯಾಳ ಬಲ್ಲ' (ಪ್ರ.ವ.ಸಂ.(ಎಂ. ಎಸ್. ಸುಂಕಾಪುರ) ವ-೭೯) ಎಂದು ಪ್ರಭು ಕೊಂಡಾಡಿದುದು. ಮನದ ಸ್ಥೈರ್ಯದ ಪರೀಕ್ಷೆ ಒಂದು ಬಗೆಯಲ್ಲಿ ಜೂಜು. ಈ ಜೂಜನಾಡ ಹೊರಟವರು ಮಹಾದೇವಿಯಕ್ಕ ಹೇಳುವಂತೆ ಸಿರಿಯಾಳ-ಜೇಡರ ದಾಸಿಮಯ್ಯ-ಬಸವ ಈ ಮೂವರು. ಕ್ರಮವಾಗಿ ಈ ಮೂವರೂ ಜೂಜಿನ ಪಣವಾಗಿ ಮಗ, ಸೀರೆ (ವಸ್ತ್ರ), ತನು, ಮನ, ಧನಗಳನ್ನು ಒಡ್ಡಿದರು.

> ಸಿರಿಯಾಳಂಗೆ ಜೇಡರ ದಾಸಿಮಯ್ಯಂಗೆ ಬಸವಂಗೆ
> ಆದ ರೇಹೆಯ ಬಿಟ್ಟು ಜೂಜನಾಡರೆ ನಮ್ಮವರಂದು?
> ಒಬ್ಬರಿಗೆ ಮಗನ ರಪಣ!
> ಒಬ್ಬಂಗೆ ಸೀರೆಯ ರಪಣ!
> ಒಬ್ಬಂಗೆ ತನು-ಮನ-ಧನ ರಪಣ!
> ಮೂವರು ಮೂದಲಿಸಿ ಮುಕ್ಕಣ್ಣನ ಗೆಲಿದರು
> ಎನ್ನ ದೇವ ಚನ್ನಮಲ್ಲಿಕಾರ್ಜುನ (ಅಕ್ಕನ ವಚನಗಳು (ಸಂ. ಎಲ್. ಬಸವರಾಜು), ವ. ೧೮೩)

ಭಕ್ತರ ಪರೀಕ್ಷೆಯಲ್ಲಿ ದೇವನದ್ದೇ ಸೋಲು, ಭಕ್ತರದ್ದೇ ಗೆಲವು. ಲೋಕದಲ್ಲಿ ಕಬ್ಬಿನ ಜಲ್ಲೆಯಲ್ಲಿ ಹೊಡೆದಾಡುವವರೆ ಬಹಳ, 'ಕಾಯದ ಹಣಿದವನಾಡು'ವವರು ವಿರಳ, ಕೂಡಲ ಸಂಗಮದೇವ 'ಇತ್ತಿದ ಜೂಜಿಂಗೆ ಹೊಯಿದು ಗೆದ್ದ ಸಿರಿಯಾಳ' (ಬ.ಷ.ವ.ವ.೬೮೭) ಶಿವನ ಭಕ್ತಿ ಪರೀಕ್ಷೆ ನಿಷ್ಕರುಣೆಯಿಂದ ಕೂಡಿದುದು, ಅಮಾನುಷವಾದುದು. ಈ ಕಾಡುವ ಕೈಯ ಕಾಟವನ್ನು ಸೈರಿಸುವ ಶಕ್ತಿ ಬಸವಣ್ಣನವರು ಹೇಳುವಂತೆ ಸಿರಿಯಾಳನಿಗೆ ಮಾತ್ರ ಸಾಧ್ಯ.

> ಹಗಹದಲ್ಲಿ ಬಿದ್ದವರ ಮೇಲೆ ಒರಳ ನೂಂಕುವರೇ?
> ಕೋಳದ ಮೇಲೆ ಸಂಕಲೆಯನಿಕ್ಕುವರೆ?
> ಬೆಂದ ಹುಣ್ಣ ಕಂಬಿಯಲಿ ಕೀಸುವರೆ ?
> ಕೂಡಲಸಂಗಯ್ಯನ ಕಾಡುವ ಕಾಟ
> ಸಿರಿಯಾಳಂಗಲ್ಲದೆ ಸೈರಿಸಬಹುದೇ ?

ನಂಬಿಯಣ್ಣನ ಭಕ್ತಿಗೆ ಮೆಚ್ಚಿದ ಶಿವ, ಅವನು ಭಕ್ತಿಪರವಶನಾಗಿ ಕೂಗಿ ಕರೆದಾಗ 'ಓ' ಎಂದ, ಅಷ್ಟೇ ಅಲ್ಲ, ನಂಬಿಗೆ ಕುಂಟಣಿಯೂ ಆಗುವನು. ಸಂಕಿಲೆಯನ್ನು ತಿರುವತ್ತಿಯೂರ ದೇವಾಲಯದಲ್ಲಿ ಕಂಡ ನಂಬಿಯಣ್ಣ ಕಾಮತಾಪದಿಂದ ಬಳಲಿದ. ಶಿವನಲ್ಲಿ ಸಂಕಿಲೆಯನ್ನು ನನಗೆ ಕೂಡಿಸಿ ಎಂದು ಬೇಡಿದ. ಶಿವ ತನ್ನ ಮಗ ನಂಬಿಯಣ್ಣನಿಗಾಗಿ ಸಂಕಿಲೆಯನ್ನು ಬೇಡಲು ಈಶಾನ್ಯತೆಡ್ಡಿಯ ಮನೆಗೂ ಹೋಗುವನು. 'ಸಂಕಿಲೆಯನ್ನು ಬಿಟ್ಟು ಹೋಗಲಾರೆ' ಎಂದು ಶಿವನ ಮುಂದೆ ಪ್ರತಿಜ್ಞೆ ತೊಟ್ಟು ಸಂಕಿಲೆಯ ಕೈ ಹಿಡಿಯುವನು. ಸಂಕಿಲೆಯ ಕಾಮಸಾಮ್ರಾಜ್ಯದಲ್ಲಿ ಮೈಮರೆತ ನಂಬಿಯಣ್ಣನಿಗೆ ದೇವಾಲಯಕ್ಕೆ ಹೋಗಿ ಪಡಿಹೊನ್ನು ಪಡೆಯಲು ಸಮಯವಾದರೂ ಎಲ್ಲಿದೆ? ಸಂಕಿಲೆಯ ಸ್ತನವನ್ನೇ ಲಿಂಗವೆಂದು ಭಾವಿಸಿ ಪೂಜಿಸಿ ಶಿವನ ಕೃಪೆ ಪಡೆಯುವನು. 'ನಂಬಿ ಕರೆದಡೋ' (ಅದೇ ವ. ೩೧೯) ಎಂಬುದು, ನಂಬಿಗೆ ಶಿವ ಕುಂಟಣಿಯಾದುದು, 'ನಂಬಿಯ ಹಡಪವ ಶಿವ ಹಿಡಿದುದು' (ಅದೇ ವ. ೫೪೦) ಒಪ್ಪಬಹುದು. ಆದರೆ ಮೊಲೆ ಲಿಂಗವೆಂದು ನಂಬಿದ ನಂಬಿಗೆ ಶಿವ ಕೃಪೆ ಮಾಡಿದುದನ್ನು (ಸ.ಪು.ವಚನಗಳು–೨, ಸಂ. (ಎಂ.ಎಸ್. ಸುಂಕಾಪುರ) ವ. ೧೯೬೦) ಹೇಗೆ ನಂಬುವುದು? 'ಅಂಗನೆಯ ಮೊಲೆ ಲಿಂಗವೇ? ಎಂದು ಪ್ರಭು ಪ್ರಶ್ನಿಸಿರುವನು. ಈ ಮಾತನ್ನು ಪ್ರಮಥರು ಮೆಚ್ಚುವರೆ? ಎಂದು ಪ್ರಭು ಸಂದೇಹಿಸಿರುವನು. (ಭಾವತೀವ್ರತೆಯಲ್ಲಿ ಎಲ್ಲವನ್ನು ಮೆಚ್ಚುವ ಬಸವಣ್ಣನಿಗೂ ತಾರ್ಕಿಕವಾಗಿ ವಿಚಾರ ಮಾಡಿ ಸಹಜವೆಂಬುದನ್ನು ಮಾತ್ರ ಒಪ್ಪುವ ಪ್ರಭುವಿಗೂ ನಿಲುವಿನಲ್ಲಿ ಎಷ್ಟು ವ್ಯತ್ಯಾಸವಿದೇ!)

ಶಿವಶರಣರಾದ ಭಕ್ತರು, ಸ್ಥಾವರಲಿಂಗ ಪೂಜಕರು. ವೈದಿಕ ಪದ್ಧತಿಯಲ್ಲಿ ಸ್ವಲ್ಪಮಟ್ಟಿಗೆ ವಿಶ್ವಾಸವುಳ್ಳವರು. ಕನ್ನಡನಾಡಿನ ಶಿವಶರಣರು ಇಷ್ಟಲಿಂಗದ ಪೂಜಕರು. ಅವರು ಸ್ಥಾವರಲಿಂಗವನ್ನೇ ಆಗಲಿ, ವೈದಿಕ ಪೂಜಾಕ್ರಮಗಳನ್ನೇ ಆಗಲಿ, ಆಚರಣೆಗಳನ್ನೇ ಆಗಲಿ ಒಪ್ಪದವರು. ದೇವಾಲಯ ನಿರ್ಮಾಣವನ್ನು ಖಂಡಿಸುವುದರಲ್ಲಿ ಅವರ ಒಟ್ಟು ಧೋರಣೆ ನಮಗೆ ಪರಿಚಯವಾಗುತ್ತದೆ.

ದೇವಾಲಯಕ್ಕೆ ಪರ್ಯಾಯವಾಗಿ ಅವರು 'ದೇಹವೇ ದೇವಾಲಯ' ಎಂಬ ಉಕ್ತಿಯನ್ನು ಬಳಕೆಗೆ ತಂದರು. ದೇವಾಲಯಗಳು ಉಚ್ಚವರ್ಣೀಯರ, ಉಳ್ಳವರ ಅನುಭೋಗದಲ್ಲಿದ್ದು, ಶೂದ್ರರಿಗೆ ಪ್ರವೇಶ ನಿರಾಕರಿಸಲ್ಪಟ್ಟಿದ್ದಿತು. ಈ ಸಾಮಾಜಿಕ ವ್ಯವಸ್ಥೆಗೆ ಬಹಿರಂಗ ವಿರೋಧವನ್ನು ವ್ಯಕ್ತಪಡಿಸುವ ಬದಲು ಅದಕ್ಕೆ ಪರ್ಯಾಯ ವ್ಯವಸ್ಥೆಯನ್ನು ಆ ಮೂಲಕ ಸಮಾಧಾನವನ್ನೂ ಸೂಚಿಸಹೊರಟದ್ದು ಶಿವಶರಣರ ಸಾಧನೆ. ಮೂಲಭೂತವಾಗಿ ತಮಿಳುಶೈವ ಹಾಗೂ ಕರ್ನಾಟಕದ ವೀರಶೈವರಲ್ಲಿ ಆಚರಣೆ ಹಾಗೂ ಧೋರಣೆಗಳಲ್ಲಿ ಪರಸ್ಪರ ವೈರುಧ್ಯಗಳಿದ್ದರೂ ವಚನಕಾರರು, ವೀರಶೈವ ಕವಿಗಳು ತಮಿಳುನಾಡಿನ ನಾಯನ್ಮಾರರನ್ನು ಮನಸಾರೆ ಸ್ತುತಿಸಿರುವರು. ಇವರ ಜೀವನ ಕಥನವನ್ನು ಸಂದರ್ಭೋಚಿತವಾಗಿ ಉಪಕಥೆಗಳ ರೂಪದಲ್ಲಿ ಹೇಳಿ ಇಲ್ಲವೆ ತಮ್ಮ ಕೃತಿಗೆ ಇವರ ಇಡೀ ಬದುಕನ್ನೇ ವಸ್ತುವಾಗಿಸಿ ಅಮರರನ್ನಾಗಿಸಿರುವುದು ವಿಶೇಷ.

ಈ ಹಿನ್ನಲೆಯಲ್ಲಿ ಆಂಧ್ರಪ್ರದೇಶದ ಪಾಲ್ಕುರಿಕೆ ಸೋಮನಾಥ ಬಸವಪುರಾಣವನ್ನು ಬರೆದಿರುವನು. ಅಂತೆಯೇ ತೆಲುಗಿನಲ್ಲಿಯೇ ಮೊದಲು ಬಸವಪುರಾಣವನ್ನು ಬರೆದಿದ್ದರ ಔಚಿತ್ಯವೇನು ಅಂದರೆ ಕರ್ನಾಟಕದಲ್ಲಿ ನಡೆದ ಶರಣ ಚಳುವಳಿ ಕೇವಲ ಕರ್ನಾಟಕಕ್ಕೆ ಮಾತ್ರ ಸೀಮಿತವಾಗಿರಲಿಲ್ಲ. ನೆರೆಯ ರಾಜ್ಯಗಳಾದ ಆಂಧ್ರಪ್ರದೇಶ ಮತ್ತು ತಮಿಳುನಾಡಿಗೂ ಇವರ ವ್ಯಾಪಕತೆ ಹಬ್ಬಿದ್ದು ಗೊತ್ತಾಗುತ್ತದೆ. ಕಾರಣ ಅಲ್ಲಿನ ಕವಿಗಳು ಭಾಷೆ, ಪ್ರದೇಶ ಭಿನ್ನವಾದರೂ ಕರ್ನಾಟಕದ ಸಾಂಸ್ಕೃತಿಕ ನಾಯಕರಾದ ಬಸವಣ್ಣನವರನ್ನು ಕುರಿತು ಬರೆದಿರುವುದರಿಂದ ಬಸವಣ್ಣನ ವಿಚಾರವಾಗಲಿ ಮತ್ತು ಶರಣ ಧರ್ಮದ ತತ್ವ ವಿಚಾರಗಳು ಬರೀ ಕರ್ನಾಟಕಕ್ಕೆ ಸೀಮಿತವಾಗಲಿಲ್ಲ. ಹೀಗಾಗಿ ಆಂಧ್ರಪ್ರದೇಶ ಮತ್ತು ತಮಿಳುನಾಡಿನಲ್ಲೂ ಇವರ ಪ್ರಭಾವಗಳು ವ್ಯಾಪಿಸಿದ್ದರಿಂದ ಬೇರೆ ಭಾಷೆಯ ಕವಿಗಳಲ್ಲೂ ಶರಣರ ಕುರಿತು ಸೃಜನಾತ್ಮಕವಾಗಿ ಮಹಾ ಕಾವ್ಯಗಳನ್ನು ರಚಿಸಿದ್ದಾರೆ.

ವೀರಶೈವ ಪುರಾಣಗಳ ಉಗಮ ಹೇಗಾಯಿತು? ಉಗಮಕ್ಕೆ ಮುಖ್ಯ ಕಾರಣಗಳೇನು? ಈ ಪ್ರಶ್ನೆಯನ್ನು ಬಿಡಿಸುತ್ತಾ ವೀರಶೈವ ಪುರಾಣಗಳು ಹುಟ್ಟುವುದಕ್ಕೆ ವೀರಶೈವ ಮತಪ್ರಾಬಲ್ಯವೇ ಮುಖ್ಯ ಕಾರಣವಾಗಿರುತ್ತದೆ. ಬಸವೇಶ್ವರಾದಿ ಮಹಿಮಾಪುರುಷರ ಪವಾಡ ವರ್ಣನೆಯೇ ಮೊಟ್ಟಮೊದಲು ಪುರಾಣಕರ್ತೃಗಳ ಉದ್ದೇಶವಾಗಿದ್ದಿತು. ಕ್ರಮೇಣ ಅವರು ಬೋಧಿಸಿದ ತತ್ವಗಳೂ, ಸ್ತೋತ್ರಗಳೂ ಪುರಾಣಗಳಲ್ಲಿ ಸೇರುತ್ತ ಬಂದಿವೆ., ಪರಮತ ಖಂಡನೆಯಲ್ಲಿಯೂ ಸ್ವಮತ ಪ್ರತಿಷ್ಠಾಪನೆಯುಲ್ಲಿಯೂ ಉದ್ಯುಕ್ತರಾದ ವೀರಶೈವರು ಜೈನರಂತೆ ತಮ್ಮಲ್ಲಿಯೂ ಪುರಾಣಗಳನ್ನು ಏರ್ಪಡಿಸಿಕೊಂಡುದು ಸಹಜವಾಗಿಯೇ ಇದೆ. ಒಂದು ಕಡೆ ಬ್ರಾಹ್ಮಣ ಮತ್ತು ಜೈನ ಮತಗಳಿಗೆ ಎದುರುಕಕ್ಷಿಯಾಗಿ ವೀರಶೈವ ಮತವು ನಿಲ್ಲಬೇಕಾಗಿದ್ದುದರಿಂದಲೂ ಮತ್ತೊಂದು ಕಡೆ ಪವಾಡಪುರುಷರ ಚರಿತ್ರೆಗಳನ್ನು ಆಧಾರವಾಗಿಟ್ಟುಕೊಂಡು ಮತಪ್ರಾಚುರ್ಯ ಕಾರ್ಯವನ್ನು ಮಾಡಬೇಕಾಗಿ ಬದುದರಿಂದಲೂ ವೀರಶೈವ ಪುರಾಣಗಳು ಹುಟ್ಟುವುದಕ್ಕೂ ಬೆಳೆಯುವುದಕ್ಕೂ ಅವಕಾಶವುಂಟಾಯಿತು.

ತೆಲುಗು ಸಾಹಿತ್ಯದಲ್ಲಿ ಈಗಾಗಲೇ ಸಾಕಷ್ಟು ಈ ಕೆಲಸ ನಡೆದಿದೆ.

ವೀರಶೈವ ತೆಲುಗು ಕೃತಿಗಳು

ಶುದ್ಧ

- ಪಂಡಿತಾರಾಧ್ಯ ಚರಿತ್ರೆ– ಶ್ರೀನಾಥ
- ಪ್ರಭುಲಿಂಗಲೀಲೆ (ದ್ವಿಪದಿ) ಪಡುಪರ್ತಿ ಸೋಮ
- ಪ್ರಭುಲಿಂಗಲೀಲೆ (ಚಂಪೂ) ಪಡುಪರ್ತಿ ಬಸವಪ್ಪ

ಪುರಾಣ

- ಬಸವಪುರಾಣಮು–ಪಾಲ್ಕುರಿಕೆ ಸೋಮನಾಥ
- ಪಂಡಿತಾರಾಧ್ಯ ಚರಿತೆ
- ಬಸವಪುರಾಣಮು –ಮಹಾದೇವ ಕವಿ
- ಚೆನ್ನಬಸವಪುರಾಣಮು –ಅತ್ತಲೂರಿ ಪಾಪಕವಿ
- ದೇವಾಂಗ ಪುರಾಣಮು –ಭದ್ರಕವಿ ಲಿಂಗಕವಿ
- ಬಸವಪುರಾಣಮು (ಚಂಪೂ) – ಪಡುಪರ್ತಿ ಸೋಮ
- ಮರಿಬಸವಪುರಾಣಮು–ಸಿದ್ಧಕವಿ

ಭೀಮಕವಿ ಬಸವಪುರಾಣ ಪಾಲ್ಕುರಿಕೆ ಸೋಮನಾಥನ ಬಸವಪುರಾಣವನ್ನು ಅನುಕರಿಸುತ್ತಿದ್ದರೂ ತೆಲುಗು ಬಸವಪುರಾಣದಲ್ಲಿಲ್ಲದ ಹತ್ತೊಂಬತ್ತು ಕಥೆಗಳು ಕನ್ನಡ ಬಸವಪುರಾಣದಲ್ಲೂ ಹಾಗೂ ಬಸವರಾಜ ವಿಜಯದಲ್ಲಿ ಕಂಡುಬರುತ್ತವೆ. ಹಾಗೆಯೇ ಸಂಸ್ಕೃತ ಬಸವಪುರಾಣದಲ್ಲಿಲ್ಲದ ಕೆಲವು ಕಥೆಗಳನ್ನು ಬಸವರಾಜವಿಜಯದಲ್ಲಿ ಕಾಣುತ್ತೇವೆ. ಈ ನಾಲ್ಕೂ ಕಾವ್ಯಗಳಲ್ಲಿ ಬಂದ ಮಹತ್ವದ ಸಂಗತಿ ಹಾಗೂ ಕಥೆಗಳನ್ನು ಒರೆಗೆ ಹಚ್ಚಿ ನೋಡಿದರೆ ಈ ಮಾತಿನ ಅರ್ಥವಾಗುವುದು.

ಪುರಾಣ ರಚನೆಗೆ ಮೂಲ ಅಂತಸ್ಸತ್ವ 'ಧರ್ಮ' ಎಂಬುದು ಗೊತ್ತಾಗುತ್ತದೆ. ವೀರಶೈವ ಪುರಾಣಗಳೂ ಸಹ ಈ ಹಿನ್ನೆಲೆಯಲ್ಲಿಯೇ ಮೂಡಿ ಬಂದಿದ್ದರೆ ಆಶ್ಚರ್ಯವಿಲ್ಲ. ವೀರಶೈವ ಪುರಾಣಗಳ ಹುಟ್ಟು ವೈದಿಕ ಹಾಗೂ ಜೈನ ಧರ್ಮಗಳ ಪ್ರಾಬಲ್ಯದಿಂದ ಆಯಿತೆನ್ನಬಹುದು. ವೀರಶೈವಧರ್ಮ ೧೨ನೇ ಶತಮಾನದಲ್ಲಿ ಆಗ ಪ್ರಬಲವಾಗಿದ್ದ ವೈದಿಕ ಹಾಗೂ ಜೈನಧರ್ಮದೊಡನೆ ಸ್ಪರ್ಧಿಸಿಯೇ ಮೇಲೆದ್ದು ಕಾಣಿಸಿಕೊಂಡಿತು. ವೀರಶೈವಧರ್ಮದ ಉದ್ಧಾರಕ್ಕಾಗಿ ಅವರ ಉದಾತ್ತ ತತ್ವಗಳ ಪ್ರಚಾರಕ್ಕಾಗಿ ವೀರಶೈವ ಪುರಾಣಗಳು ಹೊರಬಂದವು. ಪರಧರ್ಮಗಳೊಡನೆ ಸ್ಪರ್ಧೆ ಅನಿವಾರ್ಯವಾದಾಗ, ಸ್ವಧರ್ಮರಕ್ಷಣೆಗಾಗಿ, ಪರಧರ್ಮಖಂಡನೆ, ಸ್ವಧರ್ಮ ಮಂಡನೆಯಲ್ಲಿ ಎಲ್ಲ ಧರ್ಮದವರೂ ಪ್ರವೃತ್ತರಾದರು. ವೀರಶೈವರು ಇದಕ್ಕೆ ಹೊರತಲ್ಲ. ವೈದಿಕರು ವೈದಿಕ ಪುರಾಣಗಳನ್ನು ಜೈನರು ಜೈನ ಪುರಾಣಗಳನ್ನು ರಚಿಸಿದ ಹಾಗೆ ವೀರಶೈವರು ವೀರಶೈವ

ಪುರಾಣಗಳನ್ನು ರಚಿಸಿರುವುದು ಸಹಜವಾಗಿಯೇ ಇದೆ. "ವೀರಶೈವ ಸಾಹಿತ್ಯವೆಲ್ಲ ವೀರಶೈವ ಪುರಾಣಗಳಲ್ಲ. ಅಲ್ಲಿ ವಚನಸಾಹಿತ್ಯ, ಅದರ ಟೀಕೆ-ಟಿಪ್ಪಣಿ, ವ್ಯಾಖ್ಯಾನ, ಸಿದ್ಧಾಂತಗಳ ಸಾಹಿತ್ಯವಿದೆ. ವೀರಶೈವಸಾಹಿತ್ಯವನ್ನು ಶುದ್ಧಸಾಹಿತ್ಯ, ಪುರಾಣಸಾಹಿತ್ಯ, ಮಿಶ್ರಸಾಹಿತ್ಯವೆಂದು ಮೂರು ಭಾಗಗಳನ್ನಾಗಿ ಆರ್.ಸಿ.ಹಿರೇಮಠ ಅವರು ವಿಂಗಡಿಸುತ್ತಾರೆ." (ಹಿರೇಮಠ ಆರ್. ಸಿ.) ಬ.ಪು.ಪ್ರಸ್ತಾವನೆ, ಪು:೨೨) ವೀರಶೈವ ಪುರಾಣಗಳು ಕನ್ನಡ ಸಾಹಿತ್ಯದಲ್ಲಿ ಒಂದು ಪ್ರತ್ಯೇಕ ವರ್ಗವಾಗಿ ನಿಲ್ಲುತ್ತವೆ. ಇವುಗಳಿಗೆ ಪ್ರೇರಣೆ ವೈದಿಕ ಮತ್ತು ಜೈನ ಪುರಾಣಗಳಿಂದ ಒದಗಿ ಬಂದರೂ ಸಹ ಇದು ಕನ್ನಡದ್ದೇ ಬೆಳೆ; ದೇಸೀ ಸಂಪತ್ತು. (ನಾರಾಯಣ ಪಿ.ವಿ. ಬಸವಪುರಾಣಮು-ಬಸವಪುರಾಣ ಪು-೬೮-೮೦)

ವೇದ ಪುರಾಣಗಳೆಲ್ಲವ ಕೊಟ್ಟಣವ ಕುಟ್ಟುತ್ತ
ನುಚ್ಚು ತೌಡು ಕಾಣಭೋ.......

ವೇದವೆಂಬುದು ಓದಿನ ಮಾತು, ಶಾಸ್ತ್ರವೆಂಬುದು
ಸಂತೆಯ ಸುದ್ದಿ, ಪುರಾಣವೆಂಬುದು ಪುಂಡರಗೋಷ್ಠಿ......... (ಸ.ವ.ಸಂ. ವ: ೫೭೧)

ಆದಿಪುರಾಣ ಅಸುರರಿಗೆ ಮಾರಿ
ವೇದಪುರಾಣ ಹೋತಿಂಗೆ ಮಾರಿ........ (ಅದೇ ವ. ೫೭೧)

ಎಂದು ಮುಂತಾಗಿ ಪುರಾಣಪ್ರಪಂಚವನ್ನೆ ನುಚ್ಚು, ತೌಡು, ಪುಂಡರಗೋಷ್ಠಿ ಎಂದು ಸಿಟ್ಟಿನಿಂದ ಚುಚ್ಚಿದ ಶರಣರು ಗತಿಸಿದ ತರುವಾಯದಲ್ಲೇ ಅವರ ಜೀವನಚರಿತ್ರೆಗಳನ್ನು ದಾಖಲಿಸಿದವುಗಳಲ್ಲಿ ಪುರಾಣಗಳೂ ಸೇರಿವೆ. ಪುರಾಣಗಳ ಬಗೆಗೆ ಶರಣರು ಹೀಗೇಕೆ ಕೆಂಡಕಾರುತ್ತಾರೆ? ಎಂದು ಯೋಚಿಸಿದಾಗ ಉತ್ತರ ಹೊಳೆಯುತ್ತದೆ. ಮಹಾಭಾರತ ಮತ್ತು ರಾಮಾಯಣಗಳ ಪ್ರಭಾವದಿಂದ ನಮ್ಮಲ್ಲಿ ಹುಟ್ಟಿಕೊಂಡ ಪುರಾಣಗಳು ಅತಿಯಾದ ಅವಾಸ್ತವಿಕ, ಧಾರ್ಮಿಕ ಭಾವನೆಗಳನ್ನೊಳಗೊಂಡು ಸಮಾಜದ ಮೇಲೆ ಸಂಪೂರ್ಣ ಹಿಡಿತವನ್ನು ಹೊಂದಿ, ಜನರಲ್ಲಿ ಅತಿರೇಕವೆನಿಸುವಂತೆ ಅನರ್ಥಕಾರಿಯಾದ ಮೌಢ್ಯತೆ, ಸಂಪ್ರದಾಯವನ್ನು ಬಿತ್ತಿ ಮೋಸಗೊಳಿಸುತ್ತಿದ್ದವು. ಪುರಾಣಗಳಲ್ಲಿ ಒಳ್ಳೆಯ ಅಂಶಗಳಿದ್ದರೂ ಅವುಗಳನ್ನು ಆಚರಣೆಗೆ ತರದೆ ದುರುಪಯೋಗಪಡಿಸಿಕೊಂಡು ದುಡಿದು ಬದುಕುವವರನ್ನು ಬಡಿದು, ಹೆದರಿಸಿ, ತಾವು ಸುಖದಿಂದ ಬದುಕುವ ಒಂದು ದೊಡ್ಡ ಸೋಮಾರಿ, ಕಪಟಿಗಳ ವರ್ಗ ದೈತ್ಯಾಕಾರವಾಗಿ ಬೆಳೆಯಿತು. ಹೀಗಾಗಿ ಶರಣರು ಪುರಾಣಗಳ ವಿರುದ್ಧ ತಮ್ಮ ಆಕ್ರೋಶ ವ್ಯಕ್ತಪಡಿಸಿದರು.

ಶರಣರು ಪುರಾಣಗಳನ್ನು ಖಂಡನೆಯೊಂದಿಗೆ ತಿರಸ್ಕರಿಸಿದರೂ ವೀರಶೈವ ಕವಿಗಳು ಶರಣರ ಕುರಿತು ಪುರಾಣ ರಚಿಸಲು ಕಾರಣ ಜೈನ ಹಾಗೂ ವೈದಿಕಪುರಾಣಗಳ ಪ್ರಭಾವ. ಧರ್ಮಭೋಧನೆಯ ಮಾಧ್ಯಮವಾಗಿ ಇವು ಜನರ ಮೇಲೆ ಭಾರೀ ಪರಿಣಾಮವನ್ನು ಬೀರಿ ಅವರ ಬದುಕನ್ನು ಸುಧಾರಿಸುವಲ್ಲಿ ಮತ್ತು ತಮ್ಮ ತತ್ವವನ್ನು ಪ್ರತಿಷ್ಠಾಪಿಸುವಲ್ಲಿ ಯಶಸ್ವಿಯಾದವು. ಇದನ್ನು ಗಮನಿಸಿದ ವೀರಶೈವ ಕವಿಗಳು ಶರಣರ ನಂತರದಲ್ಲಿ ಶಿಥಿಲಗೊಳ್ಳುತ್ತಿದ್ದ ವೀರಶೈವಧರ್ಮದ

ಪುನರುಜ್ಜೀವನಕ್ಕಾಗಿ ಹರಿಹರ ರಾಘವಾಂಕರು ಶರಣರ ಶಿವಗಣದ ಚರಿತ್ರೆಗಳನ್ನು ರಗಳೆ-ಚರಿತ್ರೆಗಳಲ್ಲಿ ದಾಖಲುಗೊಳಿಸಿದರು. ಮುಂದೆ ತೆಲುಗಿನ ಪಾಲ್ಕುರಿಕೆ ಸೋಮನಾಥ ಹಾಗೂ ಕನ್ನಡದ ಭೀಮಕವಿ ನೇರವಾಗಿ 'ಪುರಾಣ' ಎಂಬ ಹೆಸರಿನಿಂದಲೇ ಶರಣರ, ಪುರಾತನರ, ಇತರ ಮಹಾಪುರುಷರ ಚರಿತ್ರೆಗಳನ್ನು ದಾಖಲಿಸುವುದರೊಂದಿಗೆ ವೀರಶೈವ ತತ್ವಗಳನ್ನು ಪ್ರಸಾರ ಮಾಡುತ್ತ ಧರ್ಮಜಾಗೃತಿಯನ್ನುಂಟುಮಾಡಿದರು.

"ವೀರಶೈವಪುರಾಣ ಎಂದರೆ ವೀರಶೈವ ಧರ್ಮಾನುಯಾಯಿಯಾಗಿ ಬಾಳಿದ ಮಹಾಪುರುಷರು ಮತ್ತು ಅವರು ಬೆಳಗಿದ ವೀರಶೈವ ಧರ್ಮದ ಸಂಬಂಧವಾದ ಪುರಾಣ" (ನಾರಾಯಣ ಪಿ.ವಿ. ಬಸವಪುರಾಣಮು-ಬಸವ ಪುರಾಣ ಪು-೬೮-೮೦) ವೀರಶೈವಪುರಾಣ ಪರಂಪರೆಗೆ, ವಸ್ತುವಿನ ಆಯ್ಕೆ, ವಸ್ತು ವಿನ್ಯಾಸ ಮೊದಲಾದ ವಿಷಯಗಳಲ್ಲಿ ಪ್ರಪ್ರಥಮ ಮಾರ್ಗದರ್ಶಕರೆಂದರೆ ಕನ್ನಡ ಸಾಹಿತ್ಯ ಕ್ಷೇತ್ರದ ದಿಕ್ಕುದೆಸೆ ಬದಲಿಸಿದ ಪ್ರಪ್ರಥಮ ವೀರಶೈವಕವಿಯಾದ 'ಹಂಪೆಯ ಹರೀಶ್ವರ' ಮತ್ತು ಆಂಧ್ರಸಾಹಿತ್ಯ ಕ್ಷೇತ್ರದಲ್ಲಿ ಧಾರ್ಮಿಕ ಕ್ಷೇತ್ರದಲ್ಲೂ ಅಪಾರ ಕೀರ್ತಿ ಗಳಿಸಿದ 'ಪಾಲ್ಕುರಿಕೆ ಸೋಮನಾಥ'. ಪಾಲ್ಕುರಿಕೆ ಸೋಮನಾಥನ ಕಾವ್ಯವನ್ನು ಹಲಕೆಲವು ವ್ಯತ್ಯಾಸಗಳೊಂದಿಗೆ ಅನುವಾದ ಮಾಡಿದ ಭೀಮಕವಿಯ ಬಸವಪುರಾಣವೇ ಕನ್ನಡದ ಮೊಟ್ಟ ಮೊದಲ ವೀರಶೈವ ಪುರಾಣ, ವಿಚಿತ್ರವೆಂದರೆ ಭೌಗೋಳಿಕವಾಗಿ ತನಗೆ ಅತ್ಯಂತ ಸಮೀಪನಾದ ಹರಿಹರನನ್ನು ಬಿಟ್ಟು ಪಾಲ್ಕುರಿಕೆ ಸೋಮನಾಥನನ್ನು ಭೀಮಕವಿ ಅನುಸರಿಸಿದ್ದು ಪುರಾಣ ಪರಂಪರೆಗಳನ್ನು ಹೊತ್ತು ತರಲೆಂದೇ ಎಂದು ಹೇಳಬಹುದು. ಏಕೆಂದರೆ ಹರಿಹರನ 'ಬಸವರಾಜದೇವರ ರಗಳೆ' ರಸನಿಷ್ಠವಾದ ಕಾವ್ಯ. ಬಸವಣ್ಣನವರ ವ್ಯಕ್ತಿಗತ ಚರಿತ್ರೆ ತಿಳಿದುಕೊಳ್ಳಲು ಇದು ತುಂಬ ಸಹಾಯಕವಾದ ಕೃತಿ. ಆದರೆ ಬಸವಪರಂಪರೆಯನ್ನು ತಿಳಿಯಲು, ಭಾವುಕರ ಹೃದಯಕ್ಕೆ, ನಂಬಿಕೆಯ ಮನಸ್ಸಿಗೆ ಭೀಮಕವಿಯ ನಿರೂಪಣೆ ಹೆಚ್ಚು ಪ್ರಿಯ. ಹರಿಹರನ ಕೃತಿಯಲ್ಲಿ ಐತಿಹಾಸಿಕತೆ ಮುಖ್ಯವಾದರೆ ಭೀಮಕವಿಯಲ್ಲಿ ಭಕ್ತಿಯೇ ಹೆಚ್ಚು. ಸಹಜವಾಗಿಯೇ ಹರಿಹರನ ಕಾವ್ಯವನ್ನು ಹಿಂದಿಕ್ಕಿ ಭೀಮಕವಿಯ ಬಸವಪುರಾಣ ಹೆಚ್ಚು ಜನಮನ್ನಣೆ ಪಡೆಯಿತು.

ಭೀಮಕವಿಯು ಕಾವ್ಯ ಯೋಜನೆಯನ್ನು ಹಾಗೆಯೇ ಉಳಿಸಿಕೊಂಡು ಕೆಲವೆಡೆ ಅದನ್ನು ಹಿಗ್ಗಿಸಿದ್ದಾನೆ. ಮೂಲದಲ್ಲಿ ಇಲ್ಲದ ಶಿವಶರಣರ ಕಥೆಗಳನ್ನು ಹೊಸದಾಗಿ ಸೇರಿಸುವುದರ ಜೊತೆಗೆ ಬಸವಣ್ಣನವರು ನಡೆಸಿದ ಕೆಲವು ಪವಾಡಗಳನ್ನು ಹೊಸದಾಗಿ ಸೇರಿಸಿದ್ದಾನೆ. ಬಸವಣ್ಣನವರ ಕಥಾ ಸೂತ್ರಕ್ಕೆ ಅನೇಕ ಶರಣಕಥಾಪವಳಗಳನ್ನು ಸೇರಿಸಿದ್ದಾನೆ. ಮುಖ್ಯಕಥೆ ಬಸವಣ್ಣನವರಿಗೆ ಸಂಬಂಧಪಟ್ಟದ್ದಾದರೂ ನಾನಾ ನೆವಗಳಿಂದ ಇತರ ಶರಣರ ಕಥೆಗಳೆಲ್ಲವೂ ಒಂದು ರೀತಿಯಲ್ಲಿ ಶಿವಭಕ್ತರ ಆಧಿಕ್ಯ ಹಾಗೂ ವೀರಶೈವ ವೈಶಿಷ್ಟ್ಯವನ್ನು ಹೇಳುತ್ತವೆ. ಭೀಮಕವಿಯೇ

ಆದಿಲಿಂಗರಹಸ್ಯಸಿದ್ಧಾಂ
ತಾದಿ ವೇದಪುರಾಣಸಮ್ಮತ
ವಾದ ಬಸವಪುರಾತನರಗೀತಾರ್ಥಮಾತೃಕದಿ
ಕೋದ ಮಣಿಗಣಸೂತ್ರದಂತಿರೆ
ಆದಿಗಣಚರಿತಂಗಳೊಳು ಸಂ
ವೇದಿಸಲು ಬಸವನಚರಿತೆಯಂ ಬಣ್ಣಿಸುವೆನೊಸೆದು..... (೧: ೨೫)

ಎಂಬಲ್ಲಿ ತನ್ನ ಪುರಾಣದ ಲಕ್ಷಣಗಳನ್ನು ಹೇಳಿಕೊಂಡಿದ್ದಾನೆ. ಅಂದರೆ ಇವನ ಪ್ರಕಾರ ಪುರಾಣಲಕ್ಷಣಗಳು ಎರಡು. ೧. ಬಸವಚರಿತೆ ೨. ಆದಿಗಣ ಚರಿತೆ. ಅಂದರೆ ಶರಣರ ಚರಿತೆಯನ್ನು ಬಸವಚರಿತೆಯೆಂಬ ಸೂತ್ರಕ್ಕೆ ಪವಣಿಸಿದೆ ಎಂಬುದು ನಿರ್ವಿವಾದ. ಆದರೆ ಇದು ಎಷ್ಟರ ಮಟ್ಟಿಗೆ ಸೂತ್ರಬದ್ಧವಾಗಿದೆ? ಬಂಧುರವಾಗಿದೆ ? ಎಂಬ ಪ್ರಶ್ನೆ ಇಲ್ಲಿ ಉದ್ಭವಿಸುವಂತಿಲ್ಲ. ಇದೊಂದು ಪುರಾಣವಾದುದರಿಂದ ನೀತಿತತ್ವ ಬೋಧನೆಯನ್ನೇ ಗುರಿಯಾಗಿಟ್ಟುಕೊಂಡದ್ದರಿಂದ ಭಕ್ತಿಭಾವದಿಂದ, ಮೈಮರೆತು ಆಲಿಸಿ ಧರ್ಮಪಾರಾಯಣ ಮಾಡಬೇಕೆಂಬುದೇ ಇದರ ಮೂಲೋದ್ದೇಶ. ಕಥಾನಾಯಕನ ವೃತ್ತಾಂತವನ್ನು ಆದಿ, ಮಧ್ಯ ಹಾಗೂ ಅಂತ್ಯ ಭಾಗದಲ್ಲಿ ಹೇಳಿ ಕಥಾನಾಯಕನ ಬದುಕಿಗೆ ನೇರವಾಗಿ ಸಂಬಂಧಿಸಿದವರ ಹಾಗೂ ಅವರ ಬದುಕಿನ ಮೇಲೆ ಗಾಢವಾಗಿ ಪರಿಣಾಮ ಬೀರಿದವರ ಕಥೆಗಳನ್ನು ಪೂರಕವಾಗಿ ಹೇಳುವ ರಚನಾಕ್ರಮ ತುಂಬ ವೈಶಿಷ್ಟ್ಯವಾಗಿದೆ.

ವೀರಶೈವ ಪುರಾಣಗಳು ಜನಸಾಮಾನ್ಯರನ್ನು ದೃಷ್ಟಿಯಲ್ಲಿಟ್ಟುಕೊಂಡು ರಚನೆಯಾದ ಕಾರಣ ಅವುಗಳು ಪುಟ್ಟ ಕಥಾಸರಿತ್ಸಾಗರಗಳೇ ಆಗಿವೆ. ಕಥಾನಾಯಕ ಇಲ್ಲವೆ ಕೃತಿಯಲ್ಲಿ ಬರುವ ಪಾತ್ರವು ವಿಚಿತ್ರ ಘಟನೆಯೊಂದನ್ನು ವಿವರಿಸುವಾಗ ಅದಕ್ಕೆ ಸದೃಶವಾದ ಪುರಾತನರ ಕಥೆಗಳನ್ನು ತನ್ನ ಆತ್ಮೀಯರಿಗೋ ಇಲ್ಲವೇ ಶಿಷ್ಯರಿಗೋ ತಿಳಿಸುವುದು. ಮಹಾಮಹಿಮನ ಬದುಕಿಗೆ ಸಂಬಂಧಿಸಿದ ಅಪೂರ್ವ ಘಟನೆ ಇಲ್ಲವೆ ಪವಾಡವನ್ನು ಕಂಡ ಭಕ್ತರು ಅದಕ್ಕೆ ಸದೃಶವಾದ ಪುರಾತನರ ಕಥೆಗಳನ್ನು ನೆನೆಯುವುದು. ಶರಣರ ಬದುಕಿನ ಮಹತ್ವವನ್ನು ತಿಳಿಸಲು ಶರಣರ ಮಹಿಮೆಯನ್ನು ಸಾರಲು ತಮಿಳುನಾಡಿನ ೬೩ ಪುರಾತನರು ಮಾಡಿದ ಪವಾಡಗಳಿಗೆ ಸದೃಶವಾದುವುಗಳನ್ನು ತಮ್ಮ ಕೃತಿನಾಯಕನೂ ಮಾಡಿದರೆಂಬುದನ್ನು ತಿಳಿಯಪಡಿಸಲು ವೀರಶೈವ ಪುರಾಣಕಾರರು ಇಂತಹ ಸಾದೃಶ್ಯಪರವಾದ ಕಥೆಗಳನ್ನು ಹೆಣೆದದ್ದು ಕಂಡುಬರುತ್ತದೆ. ಹೀಗೆ ಹಲಕೆಲವು ತಂತ್ರಗಳೊಂದಿಗೆ ವೀರಶೈವ ಪುರಾಣಗಳು ಬೆಳೆದುಬಂದದ್ದು ಕಂಡುಬರುತ್ತದೆ. ಅಲ್ಲದೆ ಬಸವಪುರಾಣದಿಂದ ಹಿಡಿದು ಆಧುನಿಕ ಪುರಾಣಗಳವರೆಗೆ ಅನೇಕ ಲಕ್ಷಣಗಳನ್ನೊಳಗೊಂಡು ಬೆಳೆದು ಬಂದದ್ದು ಕಂಡುಬರುತ್ತದೆ. ಲಕ್ಕಣ್ಣದಂಡೇಶನ ಶಿವತತ್ವಚಿಂತಾಮಣಿ, ವಿರೂಪಾಕ್ಷಪಂಡಿತನ ಚೆನ್ನಬಸವಪುರಾಣ, ಸಿದ್ಧನಂಜೇಶನ ಗುರುರಾಜಚಾರಿತ್ರ್ಯ ಈ ಕೃತಿಗಳಲ್ಲಿ ವೀರಶೈವಪುರಾಣದ ಲಕ್ಷಣಗಳು ಹೆಚ್ಚುತ್ತ ಹೋದದ್ದು ಕಂಡುಬರುತ್ತದೆ. ಒಟ್ಟಾರೆಯಾಗಿ ವೀರಶೈವಪುರಾಣ ಲಕ್ಷಣಗಳನ್ನು ಎಂ.ಆರ್.ಶ್ರೀನಿವಾಸಮೂರ್ತಿಯವರು ಈ ರೀತಿ ಗುರುತಿಸುತ್ತಾರೆ. (ಎಂ.ಆರ್. ಶ್ರೀ ಪು:೧೦೩–೧೦೪)

೧. ವೀರಶೈವಾಚಾರವು ಭೂಮಿಯಲ್ಲಿ ಖಿಲವಾಗುತ್ತಿರುವ ಸಮಾಚಾರವನ್ನು ನಾರದರು ಈಶ್ವರನ ಸಭೆಯಲ್ಲಿ ಭಿನ್ನವಿಸುತ್ತಾರೆ. ಆ ವೀರಶೈವಾಚಾರವನ್ನು ಉದ್ಧಾರ ಮಾಡಲು ಯಾರಾದರೂ ಗಣಗಳು ನೇಮಕವಾಗುತ್ತಾರೆ. ಈ ಗಣಗಳು ಕೆಲವು ವೇಳೆ ಸಾನ್ನಿಧ್ಯವನ್ನು ಬಿಟ್ಟು ಹೋಗಲು ಸಮ್ಮತಿಸುವುದಿಲ್ಲ. ಆಗ ಈಶ್ವರನು ತಾನು ಭೂಮಿಯಲ್ಲವತರಿಸಿ ದರ್ಶನವನ್ನು ಕೊಡುವುದಾಗಿ ಭರವಸೆಯನ್ನಿತ್ತು ಮನ್ನಿಸಿ, ಆ ಗಣಗಳನ್ನು ಕಳುಹಿಸುವನು.

೨. ಗಣಗಳು ಭೂಮಿಯಲ್ಲಿ ಅವತರಿಸಿ ಮಹಾಪವಾಡಪುರುಷರಾಗಿ ಜೈನ ವೈಷ್ಣವಾದಿ ಮತಗಳನ್ನು ಖಂಡನೆ ಮಾಡಿ ಶಿವಾಧಿಕ್ಯವನ್ನು ಸ್ಥಾಪಿಸಿ, ವೀರಶೈವಾಚಾರಕ್ಕೆ ಪ್ರಬಲ ಪ್ರೋತ್ಸಾಹವನ್ನು ಕೊಟ್ಟು ಅನೇಕರನ್ನು ವೀರಶೈವಮತಕ್ಕೆ ತಿರುಗಿಸಿದ ಈಶ್ವರನು ಪ್ರತ್ಯಕ್ಷನಾದ ಮೇಲೆ ಕೈಲಾಸಕ್ಕೆ ತೆರಳುವರು.

೩. ಈಶ್ವರನ ಪಂಚವಿಂಶತಿಲೀಲಾಕಥನಗಳೂ, ಪುರಾತನರ ಚರಿತ್ರೆಗಳೂ, ಲಿಂಗಾಂಗ ಸಾಮರಸ್ಯ ವಿಭೂತಿ ಪ್ರಸಾದಿಗಳ ಮಹಿಮಾ ನಿರೂಪಣವೂ ತುಂಬಿರುತ್ತದೆ.

೪. ಕೆಲವು ಪುರಾಣಗಳಲ್ಲಿ ಬ್ರಹ್ಮಾಂಡಸೃಷ್ಟಿ ವಿಷಯಗಳೂ, ಧರ್ಮಾಧರ್ಮ ಸ್ವರೂಪಗಳೂ ಕಂಡುಬರುತ್ತವೆ.

೫. ಈಶ್ವರನ, ಬಸವೇಶ್ವರನ ಮತ್ತು ಪುರಾತನ ಸ್ತೋತ್ರಗಳು ಅಲ್ಲಲ್ಲಿ ತುಂಬಿರುತ್ತವೆ.

೬. ಕೈಲಾಸವರ್ಣನೆಯೂ, ಈಶ್ವರಾಸ್ಥಾನವರ್ಣನೆಯೂ, ಈಶ್ವರ ಮತ್ತು ಪಾರ್ವತಿ, ಈಶ್ವರ ಮತ್ತು ನಂದಿ ಇವರುಗಳ ಸಂಭಾಷಣೆಗಳೂ ಆದಿಯಲ್ಲಿ ಬರುತ್ತವೆ.

೭. ಗ್ರಂಥಾರಂಭದಲ್ಲಿ ಈಶ್ವರನ ಸ್ತುತಿಯೂ ಅನಂತರ ಬಸವೇಶ್ವರ, ಸಿದ್ಧರಾಮ, ಅಲ್ಲಮ, ಚೆನ್ನಬಸವಾದಿಗಳ ಸ್ತೋತ್ರಗಳೂ ಇರುತ್ತವೆ.

೮. ಕೆಲವು ಗ್ರಂಥಗಳಲ್ಲಿ ಪವಾಡಪುರುಷರು ನಡೆಯಿಸಿದ ವಾಕ್ಯಾರ್ಥಗಳು, ವೇದ, ಆಗಮ, ಶ್ರುತಿ, ಸ್ಮೃತಿ, ಇತಿಹಾಸ, ಉಪನಿಷದ್ವಾಕ್ಯ ಇವುಗಳಿಂದ ಶಿವಾಧಿಕ್ಯ ಸ್ಥಾಪನೆಯೂ ಕಂಡುಬರುತ್ತದೆ.

೯. ಗ್ರಂಥಾಂತ್ಯದಲ್ಲಿ ಈಶ್ವರನು ಪ್ರತ್ಯಕ್ಷನಾಗಿ ಎಲ್ಲರನ್ನೂ ಕೈಲಾಸಕ್ಕೆ ಕರೆದುಕೊಂಡು ಹೋಗುವನು. ಒಂದೆರಡು ಪುರಾಣಗಳಲ್ಲಿ ಸಮಯೋಚಿತವಾದ ಕೆಲವು ಭೇದಗಳು ಕಂಡುಬರುವುದುಂಟು. ಜೀವನಚರಿತ್ರೆಯನ್ನು ಪವಾಡಗಳನ್ನು ಮಾತ್ರ ಹೆಚ್ಚಾಗಿ ವರ್ಣಿಸುತ್ತ ಕಥಾನಾಯಕನು ಕೈಲಾಸಕ್ಕೆ ಹೋಗುವಂತೆ ಕೆಲವು ಪುರಾಣಕರ್ತೃಗಳು ಬರೆದಿರುತ್ತಾರೆ.

ಮೇಲಿನ ನಿರ್ದಿಷ್ಟ ಅಂಶಗಳು ಎಲ್ಲ ಪುರಾಣಗಳಲ್ಲೂ ನಿಯಮಿತವಾಗಿ ಪ್ರಾತಿನಿಧ್ಯ ಪಡೆದಿವೆಯೆಂದರ್ಥವಲ್ಲ. ಪುರಾಣರಚಕರ ರುಚಿಗನುಗಣವಾಗಿ ಇವುಗಳು ಹೆಚ್ಚು ಕಡಿಮೆ ಇರುವುದೂ, ಕೆಲವಂಶಗಳು ಭಾಗಶಃ ಬಂದಿರುವುದೂ ಉಂಟು.

ಪುರಾಣಗಳಲ್ಲಿ ಕಥನದ ಅರಿವು ಪ್ರಾಧಾನ್ಯ. ಕಥೆ, ಅದ್ಭುತತೆ, ಅಗೋಚರ, ಅತಿಮಾನುಷ ಶಕ್ತಿಗಳಿಲ್ಲದೆ ಪುರಾಣಗಳು ಉಳಿಯುವಂತಿಲ್ಲ. ಕಥಾಗುಚ್ಛಗಳಾಗಿ ಬೆಳೆವ ಪುರಾಣವು ಕೇಂದ್ರಶಕ್ತಿ, ಘಟನೆ, ಪಾತ್ರಗಳ ಸುತ್ತವೇ ಕೇಂದ್ರೀಕೃತವಾಗಿದ್ದು ಬೆಳೆಯುತ್ತದೆ. ಕೇಂದ್ರಪಾತ್ರದ ಊರ್ಧ್ವಮುಖಿ ಚಲನೆಗೆ ಅನುಗುಣವಾಗಿ ಕಥೆ ಮತ್ತು ಉಳಿದ ಪಾತ್ರಗಳು ದುಡಿಯುತ್ತವೆ. ಕೇಂದ್ರಪಾತ್ರದ ಮೌಲ್ಯ ಸಮಕಾಲೀನ ಸಮಾಜದ ಕೇಂದ್ರಮೌಲ್ಯವೆಂದು ಪರಿಭಾವಿಸುವಂತಿರುತ್ತದೆ. ಪಾತ್ರಕ್ಕಿರುವ ಮಹತ್ವದಷ್ಟೆ ಪ್ರಾಧಾನ್ಯತೆ 'ಮೌಲ್ಯಕ್ಕೆ' ನೀಡಲಾಗುತ್ತದೆ. ಪುರಾಣದ ಅರ್ಥ ಅದರಲ್ಲಿರುವ ಪ್ರತ್ಯೇಕ ಘಟನೆಗಳಿಗಿಂತಲೂ ಅವುಗಳನ್ನು ಸಂಯೋಜಿಸಿದ ರೀತಿಯಲ್ಲಿರುತ್ತದೆ. ಕಾಲದಿಂದ ಕಾಲಕ್ಕೆ ವೀರಶೈವಸಿದ್ಧಾಂತದಲ್ಲಿ ವಿಶೇಷ ಬೆಳವಣಿಗೆಯಾದಂತೆ ಆ ಕಾಲದ ಪುರಾಣಗಳ ತತ್ವ ಸಿದ್ಧಾಂತಗಳನ್ನು ವಿಶಿಷ್ಟವಾಗಿಯೂ, ವಿವರವಾಗಿಯೂ ಹೇಳತೊಡಗಿದರು. ಧರ್ಮ, ಆಚಾರ ವಿಚಾರಗಳ ವಿವರಣೆಯೂ ಇದೇ ರೀತಿಯಾಗಿ ಬೆಳೆಯುತ್ತ ನಡೆದಿದೆ. ಹೀಗೆ ಬೆಳೆದು ನಿಂತ ವೀರಶೈವಪುರಾಣಪ್ರಪಂಚಕ್ಕೆ ಬಸವಪುರಾಣವೇ ಆದಿ, ಆದರ್ಶ.

ಉ. ಬಸವಪುರಾಣ ಸಂಪಾದನೆ ಮಿಶನರಿಗಳ ಪರಿಸರ:

ಭಾರತದಲ್ಲಿ ಕ್ರೈಸ್ತ ಮಿಶನರಿಗಳ ಕಾರ್ಯವೈಖರಿ ಹಾಗೂ ಅವರ ಪ್ರಭಾವಗಳನ್ನು ಸಾಮಾನ್ಯವಾಗಿ ಪರಸ್ಪರ ಹೊಂದಾಣಿಕೆ ಇಲ್ಲದ ಎರಡು ಸ್ತರಗಳಲ್ಲಿ ಚರ್ಚಿಸುವುದನ್ನು ಕಾಣುತ್ತೇವೆ. ಅವರ ದೃಢಬೆಂಬಲಿಗರು ಅಥವಾ ಅನುಯಾಯಿಗಳು ಮಿಶನರಿಗಳ ಸಾಧನೆಗಳನ್ನು ಮುಕ್ತವಾಗಿ ಹೊಗಳಿ ಕೊಂಡಾಡಿದರೆ ಅವರ ವ್ಯವಹಾರಗಳನ್ನು ವಿರೋಧಿಸುವ ಮಂದಿಗೆ ಅವರದೇ ಆದ ಮಾಹಿತಿ ಸಂಪತ್ತು, ತರ್ಕ, ಸರಣಿಗಳಿರುತ್ತವೆ. ಎರಡು ವೇದಿಕೆಗಳಲ್ಲೂ ವಾಗ್ಝರಿಗಳು ಹರಿಯುತ್ತವೆ; ಸತ್ಯದ ನೇರ ನೆಂಟಸ್ತನವನ್ನು ಸ್ಥಾಪಿಸಿಕೊಳ್ಳುವ ಪ್ರಯತ್ನಗಳು ನಡೆಯುತ್ತವೆ. ಎರಡು ವೇದಿಕೆಗಳಿಗೂ ಅನುಮೋದನಾಪ್ರಿಯರಾದ, ಕರತಾಡನಶೂರರಾದ ಶ್ರೋತೃವೃಂದಗಳಿರುತ್ತವೆ. ಎರಡು ಸಭೆಗಳಲ್ಲೂ ಕೃತಕೃತ್ಯರಾದ ಭಾವನೆಗಳು ಹೊರಸೂಸುತ್ತಿರುತ್ತವೆ. ಒಬ್ಬರು ತಮ್ಮ ಐತಿಹಾಸಿಕ ಸಾಹಸವನ್ನು ಹೊಗಳಿಕೊಳ್ಳುವ ಕಾಯಕದಲ್ಲಿ ಮಗ್ನರಾಗಿದ್ದರೆ, ಇನ್ನೊಬ್ಬರು ಅದನ್ನು ಐತಿಹಾಸಿಕ ದುರಂತವೆಂದು ಪ್ರತಿಪಾದಿಸುತ್ತಿರುತ್ತಾರೆ. ಸಮಾನಾಂತರ ರೇಖೆಗಳು ಸಂಧಿಸುವುದಿಲ್ಲ. ಆದಕಾರಣ ಈ ಎರಡು ಬಣಗಳೊಡನೆ ಮುಕ್ತ ಅರ್ಥಪೂರ್ಣ ಸಂವಾದ ಅಸಾಧ್ಯ ಎಂಬ ಭಾವನೆ ಏರ್ಪಟ್ಟಿದೆ. ಇತ್ತೀಚಿನ ದಿನಗಳಲ್ಲಿ ಈ ವಿಚಾರ ವಸ್ತುಗಳು ರಾಜಕೀಯದ ಮೇಲಾಟಕ್ಕೆ ಅಡವಾಗಿ ಹೋಗಿರುವುದರಿಂದ ಅವುಗಳನ್ನು ರಾಜಕೀಯದ ಹೊರತಾಗಿ ನೋಡುವುದು ಅಸಾಧ್ಯವೇನೊ ಎಂಬ ಪರಿಸ್ಥಿತಿ ನಿರ್ಮಾಣವಾಗಿದೆ. ಇಲ್ಲಿ ಅಲಿಪ್ತ ನೀತಿಯನ್ನು ಪ್ರತಿಪಾದಿಸುವವರೂ ರಾಜಕೀಯದ ದುರ್ಲೇಪನದಿಂದ ತಪ್ಪಿಸಿಕೊಳ್ಳಲು ಶಕ್ಯರಾಗುತ್ತಿಲ್ಲ. ಆದರೆ ಮಿಶನರಿ ಕಾರ್ಯಗಳನ್ನು ಅಥವಾ ಅವರ ಪ್ರಭಾವವನ್ನು ಸ್ವಲ್ಪ ತೆರೆದ ಮನಸ್ಸಿನಿಂದ, ಭಾವನಾತ್ಮಕ ಹುಚ್ಚು ಅಲೆಗಳನ್ನು ಮೀರಿ,

ಐತಿಹಾಸಿಕ ಸನ್ನಿವೇಶಗಳಲ್ಲಿ, ದೇಶ, ಕಾಲಗಳ ಪರಿಧಿಯಲ್ಲಿ ನೋಡುವ ಪ್ರಯತ್ನ ಮಾಡುವುದು ಅವಶ್ಯ.

ಮಿಶನರಿ ವಿಚಾರ-ವ್ಯವಹಾರಗಳನ್ನವಯ ಪರಸ್ಪರ ವಿರೋಧಿ ನೆಲೆಗಳಲ್ಲಿ ಕಾಣುವಾಗ ಅವುಗಳಲ್ಲಿ ಅರ್ಥಪೂರ್ಣ ಸಂವಾದಕ್ಕೆ ಎಡೆಯಿಲ್ಲ ಎಂಬ ಭಾವನೆ ಹುಟ್ಟಿದರೂ ಅವುಗಳನ್ನು ವಿಶ್ಲೇಷಣಾದೃಷ್ಟಿಯಲ್ಲಿ ಕಂಡಾಗ ಅಲ್ಲಿ ನಮಗೆ ಕೆಲವು ಗುರುತಿಸಬಹುದಾದ, ಅವುಗಳಲ್ಲಿ ಹಾಸುಹೊಕ್ಕಾದ ನಿರ್ಧಿಷ್ಟ ಎಳೆಗಳನ್ನು ಕಾಣಲು ಸಾಧ್ಯವಾಗುತ್ತದೆ. ವಿಶೇಷವಾಗಿ ಮಿಶನರಿ ಸಾಧನೆಗಳನ್ನು ವಿಜಯಗಾಥೆ ಎಂದೋ, ಪರ್ಯಾಯವಾಗಿ ಧಾರ್ಮಿಕ, ಸಾಂಸ್ಕೃತಿಕ ಆಕ್ರಮಣವೆಂದೋ ತಿಳಿಯುವುದು ಸಾಮಾನ್ಯ. ಒಂದು ಇನ್ನೊಂದರ ಹಿಮ್ಮುಖ ಅಷ್ಟೆ. ತಮ್ಮ ಯಶಸ್ಸಿನ ಬಗ್ಗೆ ಒಬ್ಬರು ವಿಜೃಂಭಿಸಿದರೆ, ತಮ್ಮ ಮೇಲೆ ನಡೆದ ಹಲ್ಲೆಯ ಬಗ್ಗೆ ಇನ್ನೊಬ್ಬರು ಆಕ್ರೋಶ ವ್ಯಕ್ತಪಡಿಸುತ್ತಾರೆ. ತಮ್ಮ ಧರ್ಮದ ಶ್ರೇಷ್ಠತೆಯನ್ನು ಎತ್ತಿ ಹಿಡಿದು, ಅದನ್ನು ಜಗತ್ತಿಗೆಲ್ಲ ಹಂಚುವ ಮಹತ್ವಾಕಾಂಕ್ಷೆ, ಕಾತರಗಳನ್ನು ಕ್ರೈಸ್ತಧರ್ಮವು ಯಾವಾಗಲೂ ಪ್ರಕಟಿಸಿತ್ತು. ಅದು ಧಾರ್ಮಿಕತೆಯ ನಿಜಲಕ್ಷಣವೆಂದು ನಂಬಿತ್ತು. ಇದನ್ನು ಯಾವ ಮುಚ್ಚುಮರೆಯೂ ಇಲ್ಲದೆ ಪ್ರತಿಪಾದಿಸಿತ್ತು. ಮುಸ್ಲಿಮರ ಅಧೀನದಲ್ಲಿದ್ದ ಕ್ರೈಸ್ತ ಪವಿತ್ರ ಸ್ಥಳಗಳನ್ನು ಪುನಃ ವಶಪಡಿಸಿಕೊಳ್ಳಲು ೧೧-೧೩ನೇ ಶತಮಾನಗಳಲ್ಲಿ ನಡೆಸಿದ ಧಾರ್ಮಿಕ ಯುದ್ಧಗಳು, ಪ್ರೊಟೆಸ್ಟೆಂಟ್ ಧರ್ಮಗಳು ಹುಟ್ಟಿಕೊಂಡನಂತರ ೧೬ನೇ ಶತಮಾನದಲ್ಲಿ ಯುರೋಪಿನಲ್ಲಿ ನಡೆದ ಧಾರ್ಮಿಕ ಕಲಹಗಳು ಮತ್ತು ಯುದ್ಧಗಳು, ಅಥವಾ ದಕ್ಷಿಣ ಅಮೇರಿಕಾದಲ್ಲಿ ಸ್ಪೈನಿನ ಆಕ್ರಮಣ-ಕೊಳ್ಳೆಗಾರರು ಧರ್ಮದ ಹೆಸರಿನಲ್ಲಿ ನಡೆಸಿದ ಕ್ರೌರ್ಯ, ಹೇಯತನಗಳು ಇತಿಹಾಸದ ಪುಟಗಳಲ್ಲಿ ಮಾಸಿಹೋಗಿಲ್ಲ ಇವುಗಳಲ್ಲಿ ಅನೇಕ ಪ್ರಲೋಭನೆಗಳು ಸೇರಿಹೋಗಿದ್ದರೂ ಧರ್ಮ ಪ್ರಚಾರದ ಉದಾತ್ತ ಧ್ಯೇಯ ಪತಾಕೆ ಹಾರಾಡುತ್ತಲೇ ಇತ್ತು. ಧರ್ಮ ಪ್ರಚಾರವು ಅನಾಗರಿಕ ಮಂದೆಗಳನ್ನು ನಾಗರಿಕ ಮಂದಿಗಳಾಗಿ ಮಾಡುವ ಒಂದು ಉತ್ತಮ ಕಾರ್ಯಕ್ರಮವೆಂದು ಗ್ರಹಿಸಲಾಗಿತ್ತು. ಯುರೋಪು ತ್ರಿವಿಕ್ರಮನಾಗಿ ತನ್ನ ಮೇರೆ ಮೀರಿ ಬೆಳೆದಂತೆಲ್ಲಾ ಧರ್ಮ ಪ್ರಚಾರ, ಪ್ರಸರಣಗಳೂ ಮಿಶನರಿಗಳ ಮುಂದಾಳತ್ವದಲ್ಲಿ ಮುಂದುವರಿದವು. ಆಕ್ರಮಣ, ವಿಜಯಗಳ ಭರಾಟೆಯೊಳಗೆ ನೈತಿಕತೆಯ ಸೋಗನ್ನು ಧರಿಸಿ, ನಾಗರಿಕತೆಯ ವಕ್ತಾರನಾಗಿ ಅದನ್ನು ಇತರರಿಗೆ ಒದಗಿಸುವ ಮಾಧ್ಯಮವಾಗಿ ಮುನ್ನುಗ್ಗಿದಾಗ ಮಿಶನರಿಗಳೂ ಅದರೊಡನೆ ಕೈಜೋಡಿಸಿದರು. ವಸಾಹತುಶಾಹಿ ಸಂದರ್ಭದಲ್ಲಿ 'ಧರ್ಮ ವಿಜಯ'ವೂ ಒಂದು ಗುರಿ ಎಂಬುದು ಸಂಕೀರ್ಣ ನೆಲೆಯಲ್ಲಿ ಸತ್ಯವೇ. ಕೆಲವೊಮ್ಮೆ ಅದನ್ನು ನೇರವಾಗಿ ಒಪ್ಪಿಕೊಳ್ಳಲು ಹಿಂಜರಿದರೂ ಅದು ವಸಾಹತುಶಾಹಿಯ ನಾಗರಿಕತೆಯ, ಆಧುನಿಕತೆಯ ದಿವ್ಯ ವಾಗ್ದಾನದೊಳಗೆ ಸೇರಿ ಹೋಗುವುದು ಸೂಕ್ತವೇ ಎಂಬ ಭಾವನೆ ಪ್ರಬಲವಾಗಿತ್ತು. ಮಿಶನರಿಗಳ 'ಧರ್ಮ ವಿಜಯ'ವು ವಸಾಹತುಶಾಹಿ ಪ್ರಕ್ರಿಯೆಯನ್ನು ತೀರ ಲೌಕಿಕತೆಯಿಂದ ಹೊರಗೆತ್ತಿ

ಉದಾತ್ತಗೊಳಿಸುತ್ತದೆ ಎಂಬ ಭಾವನೆಯನ್ನು ಬೆಳೆಸಿತ್ತು. ಇಲ್ಲಿ ವಿಜಯವನ್ನು ನೇರ ಆಕ್ರಮಣಕಾರೀ ಪ್ರಚಾರದ ಪರಿಣಾಮವಾಗಿ ಕಾಣದೆ ಜನಮನಗಳನ್ನು ಗೆಲ್ಲುವ ಕಾರ್ಯ ಎಂದು ಗ್ರಹಿಸಲಾಯಿತು. ತಮ್ಮ ಧರ್ಮಕ್ಕೆ ಹೊಸ ಅನುಯಾಯಿಗಳನ್ನು ಹುಡುಕುವುದೇನೋ ಮುಖ್ಯ. ಆದರೆ ಅದನ್ನು ಮೀರಿ ತಮ್ಮ ಧರ್ಮವು ಹೊಸ ನಾಗರಿಕತೆಯ ಹರಿಕಾರನಾಗಿ ಪರಿಣಮಿಸುವುದು ಅತ್ಯವಶ್ಯ ಎಂಬ ಆಶಯವು ಮೊಳೆದಿತ್ತು. ಅಂದರೆ ವಸಾಹತುಶಾಹಿ ಸಂದರ್ಭದಲ್ಲಿ 'ಧರ್ಮ ವಿಜಯ'ಕ್ಕೆ ಹೊಸ ಅರ್ಥವ್ಯಾಪ್ತಿ ಒದಗಿ ಬಂತು. ಇದು ಆಗಂತುಕ ಆಧುನಿಕತೆಯೊಡನೆ ಭಾರತವು ಸೆಣಸಿ, ಕಲೆತು, ಬೆರೆತು, ಕೆಲವೊಂದನ್ನು ಗ್ರಹಿಸಿ, ಇನ್ನಷ್ಟನ್ನು ತಿರಸ್ಕರಿಸಿ ಹೊಸ ಹಾದಿಯನ್ನು ತುಳಿದ ಅನುಭವದೊಳಗೆ ಸೇರಿಹೋಯಿತು.

ಹತ್ತೊಂಬತ್ತನೇ ಶತಮಾನದಲ್ಲಿ ವಸಾಹತುಶಾಹಿಯ ಬೆನ್ನೇರಿಬಂದ ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವದಿಂದ ಭಾರತದಲ್ಲಿ ನಗರ ಕೇಂದ್ರಿತ ಗಣ್ಯವಲಯವೊಂದು ಆಧುನಿಕತೆ, ಬದಲಾವಣೆಯತ್ತ ಮುಖಮಾಡಿತು. ಇದನ್ನು ಆಧುನಿಕ ಭಾರತದ 'ಪುನರುಜ್ಜೀವನ ಎಂದು ಇತಿಹಾಸದ ಪುಟಗಳಲ್ಲಿ ಉಲ್ಲೇಖಿಸಲಾಗಿದೆ. ಬಹುತೇಕ ಬ್ರಟಿಷ್ ಇತಿಹಾಸಕಾರರು ಇದನ್ನು ವಸಾಹತುಶಾಹಿ ವ್ಯವಸ್ಥೆಗೆ ಕೊಡಮಾಡಬಹುದಾದ ಯೋಗ್ಯತಾ ಪತ್ರವಾಗಿ ಬಳಸಿದ್ದಾರೆ. ಬ್ರಟಿಷ್ ಆಳ್ವಿಕೆಯು ಭಾರತವನ್ನು ಅಂಧಕಾರದಿಂದ ಬೆಳಕಿಗೆ, ಆಧುನಿಕತೆಯತ್ತ, ಪರಿವರ್ತನೆಯತ್ತ ಒಯ್ಯುವ ಉದ್ದೇಶ, ಸಾಮರ್ಥ್ಯ ಹೊಂದಿದೆ, ಎನ್ನುವುದಕ್ಕೆ ಇದು ಖಚಿತ ನಿದರ್ಶನ ಎಂದು ನಿರೂಪಿಸಲಾಗಿದೆ. ಹದಿನೆಂಟನೇ ಶತಮಾನದ ಯುರೋಪಿನ 'ಜ್ಞಾನೋದಯ' ಕಾಲದಲ್ಲಿ ಬೆಳೆದ ಮಾನವ ವಿವೇಚನಾ ಶಕ್ತಿಯ ಬಗ್ಗೆ ಅತೀವ ಆದರ, ಅದರಿಂದಲೇ ಆತ ತನಗೆ ಬಳುವಳಿಯಾಗಿ ಬಂದ ಹಳಸು ಮೌಢ್ಯಗಳನ್ನು ಪ್ರಶ್ನಿಸಿ, ತಿರಸ್ಕರಿಸಿ ಪ್ರಗತಿಯತ್ತ ಮುಂದುವರಿಯುತ್ತಾನೆ ಎಂಬ ತೀವ್ರ ನಂಬಿಕೆಯು ಪಾಶ್ಚಾತ್ಯ ಸಂಸ್ಕೃತಿಯ ಹರಿಕಾರರಲ್ಲಿ ಗಾಢವಾಗಿತ್ತು. ಇದು ವಸಾಹತುಶಾಹಿಯು ತನ್ನನ್ನು ತಾನು ಸಮರ್ಥಿಸುವ ಒಂದು ಪರಿಭಾಷೆಯೂ ಆಗಿತ್ತು. ಇದನ್ನು ಇಂಗ್ಲಿಷ್ ಶಿಕ್ಷಣದಲ್ಲಿ ತೊಯ್ದು ಹೋದ ಗಣ್ಯ ಸಂಕುಲವು ಬಹುಮಟ್ಟಿಗೆ ಒಪ್ಪಿತ್ತು. ಆಧುನಿಕತೆಗೆ, ಹೊಸ ಜ್ಞಾನದ ವರಪ್ರಸಾದಕ್ಕೆ ತಾವು ಅರ್ಹರು ಎಂದುಕೊಂಡ ಗುಂಪೊಂದು 'ಪುನರುಜ್ಜೀವನದ' ಪರಿಭಾಷೆಯನ್ನು ಸ್ವೀಕರಿಸಿತು. ಆಳರಸರ ವಿಶ್ವಾಸಕ್ಕೆ ಪಾತ್ರರಾಗಿ, ಅವರೊಡನೆ ಗೌರವಯುತವಾಗಿ ಕಲೆತು ಬೆರೆಯಲು, ಅವರ ಆಳ್ವಿಕೆಯಲ್ಲಿ ಸಕ್ರಿಯವಾಗಿ ಪಾಲುಗೊಳ್ಳಲು, ಅವರಿಂದ ಭೇಷ್ ಅನ್ನಿಸಿಕೊಳ್ಳಲು ಕಾತರರಾಗಿದ್ದ ಈ ಮಂದಿ ಭಾರತದಲ್ಲಿ ಉದಯಿಸಿತೆಂಬ ಹೊಸ ಯುಗವನ್ನು ಸಂಭ್ರಮದಿಂದ ಬರಮಾಡಿಕೊಂಡಿತು. ಈ ಸಂದರ್ಭದಲ್ಲಿ ಅನೇಕ ಸಂಕೀರ್ಣ ಸೆಲೆಗಳು ಹುಟ್ಟಿದ್ದು ಸಹಜ. ಭಾರತದೊಳಗಿನ ಧರ್ಮ, ಸಮಾಜಗಳ, ವಿವಿಧ ಅಂಶ, ಘಟಕಗಳನ್ನು, ಅವುಗಳ ಆಚರಣೆ ಅನುಷ್ಠಾನಗಳನ್ನು ವಿಶ್ಲೇಷಿಸಿ, ಟೀಕಿಸಿ, ಅಣಕಿಸಿ, ತಿರುಳನ್ನು ಸ್ವೀಕರಿಸಿ, ಜಳ್ಳನ್ನು ನಿರಾಕರಿಸಿ, ಆಧುನಿಕತೆಯನ್ನು ಸ್ವಾಗತಿಸುವುದನ್ನು ನಾವು ಕಾಣುತ್ತೇವೆ. ಪರ್ಯಾಯವಾಗಿ ಸಂಪ್ರದಾಯವಾದಿಗಳು ಪಾಶ್ಚಾತ್ಯ ವಿಚಾರಗಳನ್ನು ತಿರಸ್ಕರಿಸಿ,

ತಮ್ಮ ಪರಂಪರೆಯನ್ನಷ್ಟೇ ಪುರಸ್ಕರಿಸಿ, ತಮ್ಮಲ್ಲಿದ್ದುದು ಇನ್ನೆಲ್ಲಿಯೂ ಇಲ್ಲ, ಇನ್ನೊಬ್ಬರಿಂದ ಕಲಿಯುವಂಥದ್ದೇನೂ ಇಲ್ಲ ಎಂಬ ಸ್ವಾರಾಧನಾ ಪ್ರವೃತ್ತಿಯನ್ನು ಪ್ರಕಟಿಸಿದ್ದುಂಟು. ಅಥವಾ ಈಗಿನ ವಿಜ್ಞಾನ, ತಂತ್ರಜ್ಞಾನ, ಆಧುನಿಕತೆಯೆಲ್ಲಾ ನಮ್ಮಲ್ಲಿ ಬಹಳ ಹಿಂದೆಯೇ ಇತ್ತು; ಈ ಪಾಶ್ಚಾತ್ಯರೆಲ್ಲ ಇವುಗಳನ್ನು ಕದ್ದೊಯ್ದವರು, ಎಂಬ ವಿಲಕ್ಷಣ, ಕೆಲವೊಮ್ಮೆ ಹಾಸ್ಯಾಸ್ಪದ ಪ್ರತಿಪಾದನೆಯನ್ನು ಮಾಡಿದರು. ತೀವ್ರ ರಾಷ್ಟ್ರೀಯತೆಯ ಬೆಳವಣಿಗೆಗೆ ಇಂತಹ ಅತಿರೇಕಗಳು ಪೂರಕವಾದವು. ಇವುಗಳ ಗುಂಗು ನಮ್ಮಲ್ಲಿ ಇನ್ನೂ ಇದೆ.

ಭಾರತದ ಧರ್ಮ, ಸಮಾಜ, ರಾಜಕೀಯ ಪರಂಪರೆ ಹಾಗೂ ಒಟ್ಟು ಸಂಸ್ಕೃತಿಗಳನ್ನು ಟೀಕಿಸಿ, ನಿರಾಕರಿಸಿ ಅವುಗಳನ್ನು ನವ ಆಧುನಿಕತೆಯು ಹೊರಗಟ್ಟಬೇಕು ಎಂಬ ಆಕ್ರಮಣಕಾರೀ ನಿಲುವನ್ನು ತಾಳಿದವರಲ್ಲಿ ಜೆರೆಮಿ ಬೆಂಟಮ್ ಮತ್ತು ಆತನ ವೈಚಾರಿಕ ಅನುಯಾಯಿಗಳಾದ ಜೇಮ್ಸ್ ಮಿಲ್, ವಿಲಿಯಮ್ ಬೆಂಟಿಕ್, ಜೇಮ್ಸ್ ಫಿಟ್ಸ್, ಜೇಮ್ಸ್ ಸ್ಟಿವನ್ಸ್ ಮೊದಲಾದ ಯುರೋಪ್ ಹಾಗೂ ಸ್ಕಾಟಿಷ್ ಜ್ಞಾನೋದಯದ ವಕ್ತಾರರನ್ನು ಮುಖ್ಯವಾಗಿ ಗುರುತಿಸಬಹುದು. ಇವರನ್ನು ಯುಟಿಲಿಟೇರಿಯನ್ಸ್ (ಉಪಯುಕ್ತತಾವಾದಿಗಳು) ಎಂದೂ, 'ಫಿಲೊಸೋಫಿಕಲ್ ರ್‍ಯಾಟಿಕಲ್ಸ್' ಎಂದೂ ಕರೆಯಲಾಗಿದೆ. ಇವರು ತಮ್ಮ ಕಾರ್ಯಸೂಚಿಯಲ್ಲಿ ಧರ್ಮಪ್ರಚಾರವನ್ನು ಸೇರಿಸಿಕೊಳ್ಳಲಿಲ್ಲ. ಕಾನೂನಿನ ಚೌಕಟ್ಟನ್ನು ರೂಪಿಸಿ, ಅದನ್ನು ಓರಣವಾಗಿಟ್ಟು, ಅದರ ಅನುಷ್ಠಾನವನ್ನು ಸಾಧಿಸುವುದು, ಅದನ್ನು ಆಡಳಿತದಲ್ಲಿ ಅಳವಡಿಸುವುದು, ಹಾಗೂ ಈ ಧ್ಯೇಯ ಕಾರ್ಯಕ್ರಮಗಳನ್ನು ಉದಾರ ಶಿಕ್ಷಣದ ವ್ಯವಸ್ಥೆಯ ಮೂಲಕ ಜನರಿಗೆ ತಲುಪಿಸುವುದು, ಭಾರತದಲ್ಲಿ ಬ್ರಿಟಿಷ್ ಆಡಳಿತವನ್ನು ನವೀಕರಿಸುವ, ತನ್ಮೂಲಕ ಅವರ ಆಧಿಪತ್ಯವನ್ನು ಸದೃಢಗೊಳಿಸುವ ಬಗೆ ಎಂದು ಅವರು ಪ್ರತಿಪಾದಿಸಿದರು. ಇದರಿಂದ ಪೌರಸ್ತ್ಯ ದೇಶಗಳಿಗೆ ಇತಿಹಾಸದಲ್ಲಿ ಬಳುವಳಿಯಾಗಿ ಬಂದ, ಅವುಗಳ ಹಿನ್ನಡೆಗೆ, ಅನಾಗರಿಕತೆಗೆ ಕಾರಣವಾದ ನಿರಂಕುಶಪ್ರಭುತ್ವವನ್ನು ಕೊನೆಗಾಣಿಸಲು ಸಾಧ್ಯ ಎಂದು ನಂಬಿದ್ದರು. ಆಧುನಿಕತೆಯನ್ನು ರೂಪಿಸುವಲ್ಲಿ ಧರ್ಮ ಪ್ರಚಾರದ ಪಾತ್ರದ ಬಗ್ಗೆ ಅವರೇನೂ ಅತೀವ ಆಸಕ್ತಿ ತೋರಲಿಲ್ಲ. ಆದರೆ ಇಲ್ಲಿಗೆ ಬಂದ ಮಿಶನರಿಗಳೂ ಆಧುನಿಕತೆಯ, ನಾಗರಿಕತೆಯ ಪ್ರವರ್ತಕರಾಗಿಯೇ ಕಂಗೊಳಿಸಲು ಬಯಸಿದರು. ಅವರ ಪ್ರಕಾರ ಭಾರತದಲ್ಲಿ ಸ್ಥಿರಗೊಂಡ ಅನಾಗರಿಕತೆಯು ಅಲ್ಲಿನ ಕ್ಷುದ್ರ ಧರ್ಮಗಳ ಫಲ. ಅಜ್ಞಾನವನ್ನು ಬೆಳೆಸಿ, ಮೂಢನಂಬಿಕೆಗಳನ್ನು ಪ್ರಚುರಪಡಿಸಿ, ತಮ್ಮ ಪ್ರಭಾವವನ್ನು ವೃದ್ಧಿಸಿಕೊಂಡ ಬ್ರಾಹ್ಮಣ ಪುರೋಹಿತ ವರ್ಗವು ಸಮಾಜವನ್ನು ತಮ್ಮ ಅಂಕೆಯಲ್ಲಿ ಇಟ್ಟುಕೊಂಡು ಆಳುತ್ತಿದ್ದಾರೆ, ಸಮಾಜವನ್ನು, ಧರ್ಮವನ್ನು ಇವರಿಂದ ಮುಕ್ತಗೊಳಿಸಿ, ಕ್ರೈಸ್ತ ಧರ್ಮವನ್ನು ಸ್ಥಾಪಿಸಿದಾಗಲೇ ಭಾರತವು ಆಧುನಿಕತೆಯತ್ತ, ಪ್ರಗತಿಯತ್ತ ಮುಂದುವರಿಯಲು ಸಾಧ್ಯ ಎಂದು ಮಿಶನರಿಗಳು ನಂಬಿದ್ದರು. ಬೆಂಟಮ್, ಮಿಲ್‌ರಂತೆ ಮಿಶನರಿಗಳೂ ಭಾರತದ ಅನಾಗರಿಕತೆಯ ವಿವಿಧ ಮುಖಗಳನ್ನು ವಿವರಿಸಿ ಖಂಡಿಸಿದರು. ಸಮಾಜದಲ್ಲಿ ವಿಜೃಂಭಿಸುವ ಅಸಮಾನತೆ, ಶೋಷಣೆ, ಧರ್ಮದ ನೆವದಲ್ಲಿ ಅಥವಾ ದೇವರ ಹೆಸರಿನಲ್ಲಿ ನಡೆಯುವ ಕ್ರೌರ್ಯ,

ಅವಿಚಾರಗಳು ಹಾಗೂ ವೈಚಾರಿಕತೆಗೆ ಬೆನ್ನು ತೋರಿಸುವ ಹಲವು ನಂಬಿಕೆಗಳ ಬಗ್ಗೆ ಟೀಕಾಸ್ತ್ರಗಳನ್ನು ಎಸೆದರು. ಭಾರತದಲ್ಲಿ ಅನಾಗರಿಕತೆ ಮನೆ ಮಾಡಿದೆ ; ಅದನ್ನು ನಿಗ್ರಹಿಸಿ ಭಾರತೀಯರನ್ನು ಆಧುನಿಕತೆಯತ್ತ ಕೊಂಡೊಯ್ಯುವುದು ತಮ್ಮ ಕರ್ತವ್ಯ ಎಂದು ಉಪಯುಕ್ತತಾವಾದಿ, ಮಿಶನರಿಗಳಿಬ್ಬರೂ ನಂಬಿದ್ದರು. ಆದರೆ ಅದು ಹೇಗೆ, ಎಂಬುದರ ಬಗ್ಗೆ ಅವರೊಳಗೆ ಒಮ್ಮತ ಇರಲಿಲ್ಲ. ಒಬ್ಬರು ಸಮಸ್ಯೆಯನ್ನು ಲೌಕಿಕ ದೃಷ್ಟಿಯಲ್ಲಿ ಕಂಡರೆ ಇನ್ನೊಬ್ಬರು ಅದನ್ನು ಧರ್ಮಚಿಕಿತ್ಸೆಗೆ ಒಳಪಡಿಸಬೇಕಾದ ವಿಚಾರ ಎಂದು ಪರಿಭಾವಿಸಿದ್ದರು. ಆದರೆ ವಸಾಹತುಶಾಹಿಯು ಬೆಳೆಯುವ ಕಾಲದಲ್ಲಿ ಈ ಎರಡೂ ಅಭಿಪ್ರಾಯ, ಕಾರ್ಯಕ್ರಮಗಳಿಗೂ ಭಾರತದಲ್ಲಿ ಅವಕಾಶವಿದೆಯೆಂದು ಭಾವಿಸಿಕೊಂಡದ್ದರಿಂದ ಅವರೊಳಗೆ ಅದೇನೂ ದೊಡ್ಡ ಮಟ್ಟದ ಸಂಘರ್ಷಗಳು ನಡೆಯಲಿಲ್ಲ.

ಪಾಶ್ಚಾತ್ಯ ವೈಚಾರಿಕತೆ ಮತ್ತು ಮಿಶನರಿಗಳು ಭಾರತದೊಡನೆ ಮುಖಾಮುಖಿಯಾದಾಗ ಅವು ಕೆಲವು ಮೂಲಭೂತ ಪರಿಣಾಮಗಳನ್ನು ಉಂಟುಮಾಡಿದುವು. ಮುಖ್ಯವಾಗಿ ಅದು ಹಿಂದೂಧರ್ಮಕ್ಕೆ ಹೊಸ ನಿರ್ವಚನೆಯನ್ನು ನೀಡಿತು. ಕೆಲವು ಇತಿಹಾಸಕಾರರು ಅಭಿಪ್ರಾಯಪಟ್ಟಂತೆ ಅದು ಹಿಂದೂ ಧರ್ಮಕ್ಕೆ ಈಗಿನ ಸ್ವರೂಪವನ್ನು ನೀಡಿತು ಅಥವಾ ಸೃಷ್ಟಿಸಿತು. ಪಾಶ್ಚಾತ್ಯರಲ್ಲಿ ಧರ್ಮದ ಪರಿಕಲ್ಪನೆ ಯಹೂದಿ, ಕ್ರೈಸ್ತ ಹಾಗೂ ಇಸ್ಲಾಮೀ ಧರ್ಮಗಳ ಸೆಮೆಟಿಕ್ ಮೂಲದಿಂದ ಬಂದದ್ದು. ಅದರ ಪ್ರಕಾರ ಧರ್ಮಕ್ಕೊಂದು ಪ್ರವಾದಿ ಇರಬೇಕು; ಅದರ ಮೂಲಕ ಪ್ರಕಟಗೊಂಡ ಧರ್ಮಗ್ರಂಥ ಇರಬೇಕು; ಇವಿಲ್ಲದಿದ್ದರೆ ಧರ್ಮವೊಂದನ್ನು ಊಹಿಸುವುದೇ ಅಸಾಧ್ಯ. ಈ ಚಿಂತನೆಯ ಹೊರೆಯನ್ನು ಹೊತ್ತು ಬಂದ ಪಾಶ್ಚಾತ್ಯರು ಅಥವಾ ಧರ್ಮ ಪ್ರಚಾರಕರು ಭಾರತದಲ್ಲಿರುವ ಧರ್ಮಗಳನ್ನು ಪರಿಚಯ ಮಾಡಿಕೊಳ್ಳುವ ಸಂದರ್ಭದಲ್ಲಿ ತಮ್ಮ ಪ್ರಶ್ನೆಗಳಿಗೆ ಉತ್ತರವನ್ನು ಹುಡುಕಿದರು. ಸ್ವಾಭಾವಿಕವಾಗಿಯೇ ಅವರು ಇದನ್ನು ಅರಸಿದ್ದು ಇಲ್ಲಿಯ ಸಾಕ್ಷರಿ ವಲಯಗಳಲ್ಲಿ.

ದೇಶದ ಅನೇಕ ಧರ್ಮಗಳು, ಆರಾಧನಾ ಕ್ರಮಗಳು ನಗಣ್ಯವಾದವು. ಇದರಲ್ಲಿ ಗೆದ್ದದ್ದು ಇಲ್ಲಿನ ಪುರೋಹಿತಶಾಹಿ ವರ್ಗ ಮತ್ತು ಅದರ ವಿಚಾರ ಹಾಗೂ ಆಚರಣ ಕ್ರಮಗಳು. ಒಂದು ಪ್ರಮುಖ ಸಾಕ್ಷರ ವರ್ಗವು ದೇಶದ ಇಡೀ ಧಾರ್ಮಿಕ ಜಗತ್ತಿನ ಒಡೆತನವನ್ನು ಸಾಧಿಸಿದಂತಾಯಿತು. ಜ್ಞಾನವು ಆಧಿಪತ್ಯವನ್ನು ಸಾಧಿಸಲು ಸಾಧ್ಯ ಎಂಬುದನ್ನು ವಿಶದಪಡಿಸಿತು. ಇಲ್ಲಿರುವ ಬೃಹತ್ ದೇವಾಲಯಗಳು, ಅವುಗಳ ವಾಸ್ತುವೈಭವ, ಅವುಗಳಲ್ಲಿರುವ ಶಿಲ್ಪ ಸಂಭ್ರಮ, ಅವುಗಳ ಶ್ರೀಮಂತಿಕೆಗಳೂ ಹಿಂದೂಧರ್ಮಕ್ಕೆ ನಿರ್ಧಿಷ್ಟ ವಿಸ್ತಾರ ಹಾಗೂ ಜಾಹೀರಾತನ್ನು ನೀಡಿದುವು. ಸಮಾಜಶಾಸ್ತ್ರ–ಮಾನವ ಶಾಸ್ತ್ರಗಳಲ್ಲಿ ಹೇಳುವಂತೆ 'ಬೃಹತ್ ಪರಂಪರೆ'ಗಳು 'ಕುಬ್ಜಪರಂಪರೆ'ಗಳನ್ನು ಸೃಷ್ಟಿಸಿ, ಬದಿಗೊತ್ತಿ ಗೌಣಗೊಳಿಸುವ ಸಂದರ್ಭಗಳು ಅಪರೂಪವೇನಲ್ಲ. ಇದರಿಂದಾಗಿ ದೇಶದ ಅನೇಕ ಹಳೇ ನಂಬಿಕೆಗಳು, ಆರಾಧನಾ ವಿಧಿಗಳು ಅನಾಗರಿಕ ಮೂಢನಂಬಿಕೆಗಳಾಗಿ ಘೋಷಿಸಲ್ಪಟ್ಟವು; ಶಿಷ್ಟ ಸಂಸ್ಕೃತಿಯ ಹೆದ್ದಾರಿಯಿಂದ ಹೊರದಬ್ಬಲ್ಪಟ್ಟವು, ಅಥವಾ ಅಡ್ಡ ಪಂಕ್ತಿಯ ಗೌರವವನ್ನಷ್ಟೇ

ಪಡೆದುವು. ಹಿಂದೂಧರ್ಮದ ಆಧುನಿಕ ಆವಿಷ್ಕಾರವು ವೈದಿಕ ಧರ್ಮದ ಪೌರೋಹಿತ್ಯದಲ್ಲಿ ನಡೆಯಿತು. ಭಾರತದಲ್ಲಿ ಪಾಶ್ಚಾತ್ಯರ ಗ್ರಹಿಕೆಗೆ ಅನುಗುಣವಾದ 'ಧರ್ಮ'ವೊಂದಿತ್ತೇ ಎಂಬ ಸಂಶಯ ನಮ್ಮನ್ನಿನ್ನೂ ಕಾಡುವುದು ಸಹಜ. ಇಲ್ಲಿದ್ದದ್ದು ವೈವಿಧ್ಯಮಯವಾದ, ಸುಲಭ ಸೂತ್ರೀಕರಣಕ್ಕೆ ಒಗ್ಗಿಕೊಳ್ಳದ ನಂಬಿಕೆ ಆಚರಣೆ ಕ್ರಮಗಳು. ಅವುಗಳೊಳಗೆ ಸಂಬಂಧ–ವ್ಯವಹಾರಗಳು ಅಂತರ, ಅಥವಾ ಅದರೊಳಗೆ ನೆವ ಮಾತ್ರದ ಕೊಡು–ಕೊಳ್ಳುವಿಕೆಯನ್ನು ಒಳಗೊಂಡ ಸಂಕೀರ್ಣತೆಯದ್ದು. ಕೆಲವರು ಅಂತರವನ್ನು ಶಾಂತಿಯುತವಾಗಿ ರೂಢಿಸಿಕೊಂಡಿದ್ದರೆ ಇನ್ನು ಕೆಲವರು ಆಗಾಗ ಪರಸ್ಪರ ದುರುಗಟ್ಟುವುದರಲ್ಲಿ ಸೌಖ್ಯವನ್ನು ಕಾಣುತ್ತಿದ್ದರು. ಅವರು ಕೆಲವೊಮ್ಮೆ ಕೈಕೈ ಮಿಲಾಯಿಸಿಕೊಂಡದ್ದೂ ಇದೆ. ಕೆಲವು ಆಚರಣೆಗಳು ಉಳಿದವುಗಳಿಗೆ ತೀರ ಭಿನ್ನವಾಗಿದ್ದು ಅವುಗಳೊಳಗೆ ಯಾವ ಸಂಪರ್ಕವೂ ಏರ್ಪಡದಿದ್ದುದು ಅಪರೂಪವೇನಲ್ಲ. ಧಾರ್ಮಿಕವಾಗಿ ಈ ದೇಶದೊಳಗೆ ಇದ್ದಿದ್ದು ಒಂದು ತೀರ ಸಡಿಲಾದ ಒಕ್ಕೂಟ. ಜಾತಿ–ಉಪಜಾತಿಗಳು ಉಕ್ಕಿ ಹರಿಯುವ ಈ ದೇಶದಲ್ಲಿ ಧರ್ಮದ ಆಚರಣೆಗಳೂ ಅನೇಕ ಹಾಗೂ ವೈವಿಧ್ಯಮಯ. ಇದನ್ನು ಆಧರಿಸಿ ಆಳುವ ಶ್ರೇಣಿವ್ಯವಸ್ಥೆಯು ಈ ವೈವಿಧ್ಯವನ್ನು ಅಸಮಾನತೆಯ ವಾಡಿಕೆಯ ಚೌಕಟ್ಟಿನೊಳಗೆ ಸೇರಿಸಿಬಿಟ್ಟಿತು. ಹದಿನೆಂಟು–ಹತ್ತೊಂಭತ್ತನೇ ಶತಮಾನದಲ್ಲಿ ಹುಟ್ಟಿದ ಹೊಸ ಹಿಂದೂ ಧರ್ಮದ ಕಲ್ಪನೆಯೂ ಈ ಅಸಮಾನತೆಯನ್ನು ದೃಢೀಕರಿಸಿತು. ಬ್ರಾಹ್ಮಣ ನಿರ್ವಚಿತ ಧರ್ಮ–ಸಂಹಿತೆಗಳು ಅಧಿಕೃತ ಹಿಂದೂ ಧರ್ಮವಾಗಿ ಪರಿಗಣಿಸಲ್ಪಟ್ಟಿತು. ಹಿಂದೂ ಧರ್ಮಕ್ಕೆ ಧರ್ಮಗ್ರಂಥವೊಂದು ಅಧಿಕೃತವಾಗಿ ಲಭಿಸಿತು; ಪ್ರವಾದಿ ಸ್ಥಾನವನ್ನು ಅಲಂಕರಿಸುವ ಅವತಾರಪುರುಷನೊಬ್ಬ ಸಿಕ್ಕಿದ.

ಪಾಶ್ಚಾತ್ಯರ ಹಾಗೂ ಅವರ ವಿಚಾರಗಳ ಆಕ್ರಮಣಕಾರಿ ಉಪಸ್ಥಿತಿಯು ರಾಷ್ಟ್ರೀಯತೆಯನ್ನು ಹುಟ್ಟುಹಾಕಿತು. ಇದರೊಳಗೆ ಕೇವಲ ನಿರಾಕರಣೆ, ಆತ್ಮರಕ್ಷಣೆಗಳು ಮಾತ್ರ ಸೇರಿಲ್ಲ. ಬಂದ ಮೂದಲಿಕೆಯೊಡನೆ ಅನೇಕ ವೈಚಾರಿಕ ಸಂವಹನಗಳೂ ನಡೆದುವು. ಭಗವದ್ಗೀತೆಯ ಔನ್ನತ್ಯದ ಬಗ್ಗೆ ಮಿಶನರಿಗಳು ಹೆಚ್ಚೇನೂ ಉತ್ಸಾಹವನ್ನು ತೋರದಿದ್ದರೂ ಶೋಪನ್ ಹೇಯರನಂಥ ಯುರೋಪಿನ ಅನೇಕ ದಾರ್ಶನಿಕರು ಅದನ್ನು ಒಂದು ಶ್ರೇಷ್ಠ ವೈಚಾರಿಕ ಗ್ರಂಥ, ವಿವೇಕದ ಗನಿ, ಲೋಕಕ್ಕೇ ಮಾರ್ಗದರ್ಶನವನ್ನೀಯಬಲ್ಲ ಸ್ಫೂರ್ತಿಯ ಸೆಲೆ ಎಂದು ಕೊಂಡಾಡಿದರು. ಇದು ಹಿಂದೂ ಕೇಂದ್ರಿತ ಭಾರತೀಯತೆಗೆ ಹೊಸ ಶಕ್ತಿಯನ್ನು ನೀಡಿತು.

ದಾರ್ಶನಿಕ ಸಿದ್ಧಾಂತಗಳನ್ನು ಪ್ರತಿಪಾದಿಸಲು ಭಗವದ್ಗೀತೆಗೆ ಭಾಷ್ಯಗಳನ್ನು ಬರೆದಿದ್ದರೆ ಆಧುನಿಕತೆಯ ಸಂದರ್ಭದಲ್ಲಿ ಅದನ್ನು ಈ ನವ ದೃಷ್ಟಾರರು ಕಂಡದ್ದು ರಾಷ್ಟ್ರೀಯತೆಯ ವಕ್ತಾರರಾಗಿ. ಶ್ರೀಕೃಷ್ಣನ ಬೋಧನೆಗಳು ಅವರವರ ಸೈದ್ಧಾಂತಿಕ ಕಾರ್ಯಕ್ರಮಗಳ ಒಲವುಗಳನ್ನು ಸಮರ್ಥಿಸಲು ಶಕ್ತವಾಯಿತು ; ಅವರವರ ಸಂಶಯಗಳಿಗೆ ಪರಿಹಾರ ನೀಡಿತು. ರಾಷ್ಟ್ರೀಯತೆಯನ್ನು ಅಥವಾ ಅದರ ಚಳುವಳಿಯನ್ನು ಕ್ರಾಂತಿಯತ್ತ ಒಯ್ಯಲು, ಉದಾತ್ತ ಹಿಂಸಾಮಾರ್ಗವನ್ನು ಆಲಂಗಿಸಲು,

ಅಥವಾ ಅಹಿಂಸಾ ಧರ್ಮವನ್ನು ಅನುಸರಿಸಲು ಅವರವರಿಗೆ ಅನುಮತಿ ನೀಡಿತು. ನಮ್ಮ ನಮ್ಮ ಅವಶ್ಯಕತೆ, ಒಲವುಗಳಿಗನುಗುಣವಾಗಿ ದೇವಾಣಿಯು ಒದಗುತ್ತದೆ ಎಂದು ತಿಳಿಯಲಾಯಿತು.

ಭಾರತದಲ್ಲಿ ಬೆಳೆದ ರಾಷ್ಟ್ರೀಯತೆಗೆ ಪ್ರೇರಣೆಯಾದ ಇನ್ನೊಂದು ಶಕ್ತಿ ಪೌರಸ್ತ್ಯವಾದ. ಅದರ ಮೇಲೆ ಎಡ್ವರ್ಡ್ ಸೈದ್‌ನ ಹೊಸ ವ್ಯಾಖ್ಯಾನ ಬರುವ ಮುನ್ನ ಪೌರಸ್ತ್ಯವಾದವು ಯುರೋಪಿಯನ್ನರು, ಪ್ರಾಚ್ಯ ದೇಶ, ಸಂಸ್ಕೃತಿಗಳ ಬಗ್ಗೆ ತೋರಿದ ಆಸ್ಥೆ, ಸಂಭ್ರಮ ಹಾಗೂ ಸಂಶೋಧನಾಸಕ್ತಿ ಪ್ರತಿನಿಧಿಸುತ್ತಿತ್ತು. ವಿಲಿಯಮ್ ಜೋನ್ಸ್, ಹೆನ್ರಿ ಕೋಲ್‌ಬ್ರೂಕ್, ಚಾರ್ಲ್ಸ್ ವಿಲ್ಕಿನ್ಸ್, ನೆಥಾನಿಯಲ್ ಹಾಲ್‌ಹೆಡ್, ಹೊರೇಸ್ ಹೇಮನ್ ವಿಲ್ಸನ್, ಮ್ಯಾಕ್ಸ್‌ಮುಲ್ಲರ್ ಮೊದಲಾದವರು ಭಾರತದ ಭಾಷೀಯ, ಧಾರ್ಮಿಕ, ದಾರ್ಶನಿಕ, ವೈಚಾರಿಕ ಹಾಗೂ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಅರಸಿ, ಗುರುತಿಸಿ ಕೊಂಡಾಡಿದವರು; ಭಾರತೀಯರಿಗೆ ತಮ್ಮ ಹಿರಿಮೆಯನ್ನು, ಅಂತಃಸತ್ವವನ್ನು ತಿಳಿಸಿದವರು. ಮರೆವೆಗೊಳಗಾದ ಮಾರುತಿಗೆ ಆತನ ಶಕ್ತಿ, ಸಾಮರ್ಥ್ಯವನ್ನು ನೆನಪಿಸಿ ಕೊನರಿಸಿದ ಜಾಂಬವಂತನಂತೆ. ಇದರಿಂದ ಹಾಗೂ ಕೊಲೊತ್ತಾದಲ್ಲಿ ಸ್ಥಾಪಿಸಲಾದ ರಾಯಲ್ ಏಶ್ಯಾಟಿಕ್ ಸೊಸೈಟಿಯ ಕಾರ್ಯವೈಖರಿಯಿಂದ ಭಾರತದ ಇತಿಹಾಸ-ಸಂಸ್ಕೃತಿಗಳ ಉತ್ಸಾಹಿ ಸಂಶೋಧನೆಗೆ ಪ್ರಚೋದನೆ ಸಿಕ್ಕಿತು. ಯುರೋಪಿನ ಪೌರಸ್ತ್ಯವಾದ ಅಲ್ಲಿನ 'ಜ್ಞಾನೋದಯ' ಕಾಲದ ಹಾಗೂ ಅದರಿಂದ ಹುಟ್ಟಿ ಅದನ್ನು ಪ್ರತಿಭಟಿಸಿದ 'ರಮ್ಯಯುಗದ' ಒಂದು ಸಂಕೀರ್ಣ ಆವಿಷ್ಕಾರ: ಯುರೋಪಿಯನ್ ಉತ್ಸಾಹಿಗಳು ಭಾರತಕ್ಕೆ ಬಂದು ಇಲ್ಲಿಯ ಭಾಷೆ ಸಂಸ್ಕೃತಿಗಳನ್ನು ಕಲಿತು ಯುರೋಪಿಗೂ ಪರಿಚಯಿಸುವ ಕೀರ್ತಿಗೆ ಭಾಜನರಾಗಿದ್ದುದರ ಬಗ್ಗೆ ಸಾಕಷ್ಟು ವಿವರಗಳಿವೆ.

ಮಿಶನರಿಗಳ ಮಿಶನೇತರ ಕಾರ್ಯವೈವಿಧ್ಯಗಳನ್ನು ಕೆಲವರು ವೃತ್ತಿಪರ ಅವಶ್ಯಕತೆಯೆಂದು ಗ್ರಹಿಸಿದ್ದುಂಟು. ಯಾರನ್ನು ಮತಾಂತರಗೊಳಿಸಲು ಇಚ್ಛಿಸುತ್ತಾರೆಯೋ ಅವರ ಪೂರ್ತಿ ಪರಿಚಯವಾಗುವುದು ಅಗತ್ಯ. ಅವರ ಜಾತಿ-ರೀತಿಗಳು, ಭಾಷೆ, ವಿಚಾರಗಳನ್ನು ತಿಳಿದುಕೊಳ್ಳುವುದು ಕಾರ್ಯಸಾಧನೆಗೆ ಅವಶ್ಯ. ಒಂದು ರೀತಿಯಲ್ಲಿ ಇದು ಮಿಶನರಿಗಳು ತಮ್ಮ ಆದರ್ಶ, ಹಾಗೂ ವೃತ್ತಿಪರ ಗುರಿಯನ್ನು ತಲುಪಲು ನಡೆಸಿದ ಪೂರ್ವಸಿದ್ಧತೆ. ಮತಾಂತರವನ್ನು ಖಂಡಿಸುವವರು ಇದನ್ನು ಒಂದು ಬಗೆಯ ಹುನ್ನಾರವೆಂದು ತಿಳಿಯುವುದೂ ಇದೆ. ಆದರೆ ಅತಿರೇಕದ ಸಂಶಯದೃಷ್ಟಿ ಆರೋಗ್ಯಕರವಲ್ಲ. ಅನೇಕ ಮಿಶನರಿಗಳು ತಮ್ಮ ನೀತಿಯನ್ನು ಮೀರಿ ಪೌರಸ್ತ್ಯವಾದಿಗಳಾದುದನ್ನು ನಾವು ಇತಿಹಾಸದ ಪುಟಗಳಲ್ಲಿ ಕಾಣುತ್ತೇವೆ. ಇನ್ನೊಂದು ದೃಷ್ಟಿಯಲ್ಲಿ ಮಿಶನರಿಗಳ ಈ ಒಲವುಗಳನ್ನು ಹವ್ಯಾಸಿ ನೆಲೆಯಲ್ಲಿ ಗುರುತಿಸಲಾಗಿದೆ. ಅನೇಕ ಮತಪ್ರಚಾರಕರು ಹೊಸ ದೇಶ, ಜನ ಹಾಗೂ ಅವರ ಭಾಷೆ ಸಂಸ್ಕೃತಿಗಳಿಗೆ ಮಾರುಹೋದದ್ದು ನಿಜ. ಅದರಿಂದ ಅವರು ತಮ್ಮ ವೃತ್ತಿಯ, ಆಸಕ್ತಿಗಳ ಪರಿಧಿಯನ್ನು ವಿಸ್ತಾರಗೊಳಿಸಿದರು, ಎಂಬ ವಿಚಾರವನ್ನು ಮಂಡಿಸಲಾಗಿದೆ. ವೈಚಾರಿಕವಾಗಿ ಹಾಗೂ ಧಾರ್ಮಿಕವಾಗಿ ದಂಡೆತ್ತಿಬಂದವರು ಇಲ್ಲಿನ ಜನ ಸಂಸ್ಕೃತಿಗಳಿಗೆ ತಮ್ಮನ್ನು ತಾವು ಒಪ್ಪಿಸಿಕೊಂಡರು ಎಂಬ ಮಾತು ಉತ್ಪ್ರೇಕ್ಷೆಯಾದರೂ ಅದರಲ್ಲಿ ಸತ್ಯದ ಎಳೆಗಳು ಇಲ್ಲದೇನಿಲ್ಲ.

ವಸಾಹತುಶಾಹಿಯಲ್ಲಿ ಅಂತರ್ಗತವಾದ ಜನಾಂಗ ಭೇದಧೋರಣೆಯು ಮತ ಪ್ರಚಾರದಲ್ಲಿ ಹಲವು ಆತಂಕ, ಮುಜುಗರಗಳನ್ನು ಹುಟ್ಟುಹಾಕಿತು. ಆಧುನಿಕ ಇಂಗ್ಲಿಷ್ ಶಿಕ್ಷಣವನ್ನು ಹಾಗೂ ಕ್ರೈಸ್ತ ಮತ ವಿಚಾರಗಳನ್ನು ವೈಚಾರಿಕವಾಗಿ ಒಪ್ಪಿ ಕ್ರೈಸ್ತನಾದ ಮೈಕೆಲ್ ಮಧುಸೂದನದತ್ತನಿಗೆ ಶ್ರೇಷ್ಠ ಸಾಹಿತಿಯೆಂಬ ಗೌರವ ದೊರೆತರೂ ಆಳುವವರ ಆಪ್ತವಲಯದೊಳಗೆ ಆತನಿಗೆ ಪ್ರವೇಶ ಸಿಗಲಿಲ್ಲ. ಆತ ಆಳಿಸಿಕೊಳ್ಳುವ ಕರಿಮೋರೆಯ ಭಾರತೀಯ ಎಂಬ ಹಚ್ಚೆಹಾಕಿದ ಹಣೆಪಟ್ಟಿಯನ್ನು ಅಳಿಸಲಾಗಲಿಲ್ಲ. ಇವನೊಬ್ಬ ಧರ್ಮಭ್ರಷ್ಟನೆಂಬ ಹಿಂದೂ ಸಮಾಜದ ನಿಂದನೆಯನ್ನೂ ತಪ್ಪಿಸಿಕೊಳ್ಳಲಾಗಲಿಲ್ಲ. ಎರಡೂ ಬಣಗಳಿಂದ ಬೇರೆ ಬೇರೆ ಕಾರಣದಿಂದ ಹೊರದೂಡಲ್ಪಟ್ಟ ನೋವನ್ನು ಅನುಭವಿಸುವ ಸಂದರ್ಭ ಮೈಕೆಲ್ ಮಧುಸೂದನದತ್ತನಿಗೆ ಒದಗಿ ಬಂತು. ಹಾಗೆಯೇ ರಮಾಬಾಯಿ ಕ್ರೈಸ್ತಮತವನ್ನು ಆಲಂಗಿಸಿದಾಗ ಮತಪ್ರಚಾರಕರಲ್ಲಿ ಸಂಭ್ರಮವೆದ್ದಿತು. ಆದರೆ ಆಕೆಯ ತೀಕ್ಷ್ಣ ವೈಚಾರಿಕತೆ ಮತ್ತು ಸ್ವಂತಿಕೆ ಆಕೆಯನ್ನು ಸ್ವಾಗತಿಸಿದ ಮತವ್ಯವಸ್ಥೆಗೆ ಸಾಕಷ್ಟು ಇರುಸುಮುರುಸನ್ನು ಸೃಷ್ಟಿಸಿತು. ವೈದಿಕ ಸಂಪ್ರದಾಯವಾದಿಗಳಿಗೆ ಪ್ರತಿ ಸವಾಲು ಹಾಕಿದ ಈಕೆ ಅವರಿಂದ ದೂರವಾದದ್ದಷ್ಟೇ ಅಲ್ಲ, ಕ್ರೈಸ್ತಮತವನ್ನು ಆಲಂಗಿಸಿದ ಮೇಲೆ ಸುಧಾರಣಾವಾದಿಗಳೊಡನೆಯೂ ಸಂಪೂರ್ಣವಾಗಿ ಗುರುತಿಸಿಕೊಳ್ಳಲೂ ಆಕೆಗೆ ಸಾಧ್ಯವಾಗಲಿಲ್ಲ. ಕ್ರೈಸ್ತಳಾದ ಮೇಲೆ ಆಕೆ ಹಿಂದೂ ಸಮಾಜದ ಸುಧಾರಣೆಯನ್ನು ಕೈಕೊಳ್ಳಲು ಹೇಗೆ ಸಾಧ್ಯ, ಎಂಬುದು ಅವರ ವಾದ. ಹಿಂದೂ ಸಮಾಜದ ಸುಧಾರಣೆಯು ಆ ಸಮಾಜದ ಆಂತರಿಕ ವ್ಯವಹಾರ ರಮಾಬಾಯಿ ಹಿಂದೂಧರ್ಮವನ್ನು ತ್ಯಜಿಸಿದಾಗ ಆಕೆ ಪರಕೀಯಳಾದಳು; ಹಿಂದೂ ಸಮಾಜವನ್ನು ಸುಧಾರಿಸಬೇಕೆನ್ನಲು ಅನರ್ಹಳಾದಳು ಎಂದು ಅವರ ತರ್ಕ. ಹಾಗೆಂದು ಪಂಡಿತ ರಮಾಬಾಯಿಯ ಪ್ರಖರ ಸ್ವಂತಿಕೆಯನ್ನು ಕ್ರೈಸ್ತಮತ ವ್ಯವಸ್ಥೆಯು ಆಕೆಯ ವೈದಿಕ ಹುಟ್ಟು, ಶಿಕ್ಷಣಗಳ ದುಷ್ಫಲವೆಂದು ತಿಳಿಯಿತು. ಆಕೆ ಭಾರತೀಯಳು ಎಂಬ ಅನನ್ಯತೆ ಬೇರೆ. ಹಿಂದೂ ಸಮಾಜದ ಮೇಲೆ ಆಕೆ ನಡೆಸಿದ ಟೀಕೆ ಟಿಪ್ಪಣಿಗಳು ಮಿಶನರಿ ಕಾರ್ಯಕ್ರಮಗಳಿಗೆ ಅಪ್ಯಾಯಮಾನವೂ ಪೂರಕವೂ ಆಗಿದ್ದರೂ ಆಕೆಯ ಕ್ರೈಸ್ತಮತ ವಿಚಾರಗಳ ಬಗ್ಗೆ ಎತ್ತಿದ ಪ್ರಶ್ನೆ, ಮಾಡಿದ ಚರ್ಚೆಗಳು ಮತವ್ಯವಸ್ಥೆಯೊಳಗೆ ಮುಜಗುರವನ್ನು ಹುಟ್ಟಿಸಿತು. ನಡೆದದ್ದು ಒಂದು ಅಪೂರ್ಣ ಮತಾಂತರದ ದೃಷ್ಟಾಂತ ಎಂದು ಅದು ಗ್ರಹಿಸಿತು. ಸಂಪೂರ್ಣ ಕ್ರೈಸ್ತಳೆಂದು ತಿಳಿಯಲು ಸ್ವಲ್ಪ ಸಮಯ ಹಿಡಿಯಿತು. ಇದೆಲ್ಲಾ ಮಿಶನರಿಗಳ ಆದರ್ಶ, ವ್ಯವಹಾರಗಳೊಳಗೆ ಹುಟ್ಟಿದ ವೈರುಧ್ಯಗಳು. ಇದನ್ನು ಗುರುತಿಸಿ ಸಂಭಾಳಿಸುವುದು ಮಿಶನರಿಗಳಿಗೆ ಒಂದು ಸವಾಲಾಗಿಯೇ ಪರಿಣಮಿಸಿತು.

ಈ ಬಗೆಯ ವೈರುಧ್ಯವು ಚರ್ಚ್ ವ್ಯವಸ್ಥೆಯೊಳಗೂ, ಸಾಕಷ್ಟು ಮನೆ ಮಾಡಿತು. ವಿದೇಶದ ಮಿಶನರಿಗಳು ಸ್ಥಳೀಯರನ್ನು ಸಂಪರ್ಕಿಸಲು ಬಹುತೇಕ ಸ್ಥಳೀಯ ಪಾಸ್ತರರನ್ನು ಅವಲಂಬಿಸಿದ್ದರು. ಆದರೆ ಅವರು ಚರ್ಚಿನ ಶ್ರೇಣೀಕೃತ ವ್ಯವಸ್ಥೆಯಲ್ಲಿ ಸಾಕಷ್ಟು ಕೆಳಗಿನ ಸ್ಥಾನವನ್ನೇ ಅಲಂಕರಿಸಿದರು. ಇದರಿಂದ ಚರ್ಚಿನ ವ್ಯವಸ್ಥೆಯಲ್ಲಿ ಆಗಾಗ ಆತಂಕದ ಅಪಸ್ವರಗಳು ಕೇಳಿಬರುತ್ತಿದ್ದದ್ದು ಸಹಜ.

ಮಿಶನರಿಗಳ ವರದಿಗಳಲ್ಲಿ ಇದು ಅಶಿಸ್ತು, ಅನಾಗರಿಕ ವ್ಯವಹಾರ, ಅಪ್ರಾಮಾಣಿಕ ನಡತೆ ಎಂಬ 'ಬಂಡಾಯ ನಿಗ್ರಹ ಚಿತ್ರಣ'ದ ವಿವರಣಾ ಕ್ರಮದೊಳಗೆ ಪ್ರಕಟಗೊಳ್ಳುತ್ತದೆ. ಜನಾಂಗ ಭೇದವು ಪರಕೀಯ ಆಡಳಿತದೊಳಗೆ ಅಥವಾ ವ್ಯವಹಾರ ವರ್ತುಲದೊಳಗೆ ಅಂತರ್ಗತವಾಗಿದ್ದುದಕ್ಕೆ ಇದೊಂದು ನಿದರ್ಶನ. ಮತಾಂತರಗೊಂಡ ಸ್ಥಳೀಯರು ಹಾಗೂ ಅವರೊಳಗೆ ಮೊದಲಿಗರನ್ನು ಮತಪ್ರಚಾರಕ್ಕೆ ತರಬೇತುಮಾಡಿ ಅಣಿಗೊಳಿಸಿದವರು ವಿದೇಶಿ ಮಿಶನರಿಗಳೊಡನೆ ಸಮಾನರೀತಿಯಲ್ಲಿ ವ್ಯವಹರಿಸುವ ಅವಕಾಶ ಬಹಳಷ್ಟು ಇರಲಿಲ್ಲ.

ಸಮಾಜವು ಮಿಶನರಿಗಳ ವಿಚಾರ ಕಾರ್ಯಕ್ರಮಗಳಿಗೆ ಬೇರೆ ಬೇರೆ ರೀತಿಯಲ್ಲಿ ಸ್ಪಂದಿಸಿತು. ಆಧುನಿಕತೆಯ ಸಂಕೇತವಾಗಿ ಕೆಲವರು ಕ್ರೈಸ್ತಧರ್ಮವನ್ನು ಆಲಂಗಿಸಿದರೆ ಇನ್ನು ಕೆಲವರು ಇಲ್ಲಿಯ ಶ್ರೇಣೀಕೃತ ಸಮಾಜದ ದಬ್ಬಾಳಿಕೆಯಿಂದ ಹೊರಬೀಳಲು ಹೊಸ ಧರ್ಮವನ್ನು ಒಪ್ಪಿಕೊಂಡರು. ಅಂದರೆ ಉನ್ನತ ಜಾತಿಯವರೆಗೆ ಮಿಶನರಿಗಳು ಒಂದು ರೀತಿಯಲ್ಲಿ ತಲುಪಿದರೆ ಕೆಳಜಾತಿಯವರಿಗೆ ಅವರು ಪ್ರಿಯರಾದದ್ದು ಬೇರೆಯೇ ಕಾರಣಕ್ಕಾಗಿ. ಹಿಂದೂ ಧರ್ಮವನ್ನು ಆದರಿಸುವ ಮಂದಿ ಮಿಶನರಿಗಳ ಟೀಕೆಗಳನ್ನು ಧಾಳಿಯೆಂದು ತಿಳಿದು ಪ್ರತಿಭಟಿಸಿದರು. ವೈದಿಕ ಸಂಪ್ರದಾಯವಾದಿಗಳು ತಮ್ಮ ಧರ್ಮ ಆಚರಣೆಗಳೆಲ್ಲವೂ ಪರಿಪೂರ್ಣ, ಅವುಗಳಲ್ಲಿ ಸುಧಾರಣೆಗೆ ಸ್ಥಾನವೇ ಇಲ್ಲ ಎಂಬ ಹಟಮಾರಿ ಧೋರಣೆಯನ್ನು ಮುಂದಿಟ್ಟರು. ಆಧುನಿಕತೆಯ ಹೆಸರಿನಲ್ಲಿ ಕಾರ್ಯಪ್ರವೃತ್ತರಾದ ಸುಧಾರಣಾವಾದಿಗಳು ಪಾಶ್ಚಾತ್ಯ ವಿಚಾರಗಳಿಗೆ ಮಾರುಹೋಗಿ ಅವುಗಳಿಗೆ ತಮ್ಮನ್ನು ತಾವು ಅಡವಿಟ್ಟುಕೊಂಡವರು ಎಂದು ಕಟಕಿಯಾಡಿದರು.

ಆದರೆ ಮಿಶನರಿಗಳ ಪ್ರಭಾವವನ್ನು ಕ್ರೈಸ್ತಮತ ಪ್ರಚಾರ, ಅದರ ಜಯ-ಅಪಜಯಗಳ ಸೀಮಿತ ಚೌಕಟ್ಟಿನಲ್ಲಿ ನೋಡುವುದು ಸರಿಯಲ್ಲ. ಎಷ್ಟೋ ಕಡೆಯಲ್ಲಿ ಅಂಕಿ ಅಂಶಗಳು ಮಿಶನರಿಗಳ ಜಯಗಾಥೆಯನ್ನು ಸಮರ್ಥಿಸುವುದಿಲ್ಲ. ಆದರೆ ಅವರ ಆದರ್ಶಗಳನ್ನು ಮತ್ತು ಕಾರ್ಯವೈಖರಿಯನ್ನು ವಿಸ್ತೃತರೂಪದಲ್ಲಿ ನೋಡಿದಾಗ ಅವರು ಯಶಸ್ಸನ್ನು ಕಂಡಿದ್ದಾರೆ ಎಂದು ಭಾವಿಸಬೇಕಾಗುತ್ತದೆ. ಅವರು ಭಾರತದ ಸಮಾಜವನ್ನು ನೋಡಿ ವಿಶ್ಲೇಷಿಸಿದ ರೀತಿ ಅದರೊಡನೆ ಸಂವಾದಿಸಿದ ಬಗೆ, ಅದನ್ನು ಬದಲಾಯಿಸಲು ಮಾಡಿದ ಪ್ರಯತ್ನಗಳು ಹಾಗೂ ಅದರೊಂದಿಗೆ ತಾವೂ ಬದಲಾದ ಪರಿಯನ್ನು ಗಮನಿಸಿದಾಗ ಮಿಶನರಿಗಳ ಪ್ರಭಾವದ ವ್ಯಾಪ್ತಿ ಮತ್ತು ಆಳವನ್ನು ನಾವು ಮರುವಿಮರ್ಶೆಗೊಳಪಡಿಸಬೇಕಾಗುತ್ತದೆ. ಮತಾಂತರದ ನಿಯಮಿತ, ಸಂಕುಚಿತ ಪರಿಧಿಯನ್ನು ಮೀರಿ ಮಿಶನರಿಗಳು ಸಮಾಜದ ಮೇಲೆ ತಮ್ಮ ಪ್ರಭಾವವನ್ನು ಬೀರಿದ್ದಾರೆ. ಅವರಲ್ಲಿ ಹಲವರ ಮಾನವೀಯತೆ, ಸೇವಾನುರಕ್ತಿ, ಶಿಕ್ಷಣಪ್ರೇಮ, ಸಾಂಸ್ಕೃತಿಕ ಒಲವು ಮತ್ತು ಅದರ ವೈವಿಧ್ಯಮಯ ಕೃಷಿಯಂತಹ ಮತ ಪ್ರಚಾರವನ್ನು ಮೀರಿದ, ಅನೇಕ ವಿಚಾರಗಳು ಅವರ ಇರವನ್ನು ಉದಾತ್ತಗೊಳಿಸಿದುವು. 'ಸಾರ್ಥಕತೆಯ ಸಿದ್ಧಾಂತಕ್ಕೆ ಹೆಚ್ಚಿನ ಅರ್ಥ ಬರುವುದು ಇವುಗಳಿಂದ.

ಕ್ರಿಶ್ಚಿಯನ್ ಎಂಬುದು ನಾಮಪದವಷ್ಟೇ ಆಗಿ ಉಳಿಯಲಿಲ್ಲ, ಅದೊಂದು ನಾಮವಿಶೇಷಣವಾಗಿ ಪರಿಣಮಿಸಿತು ಎಂದು ರಾಬರ್ಟ್ ಪ್ರೈಕನ್ ಬರ್ಗ್ ಅಂದಿದ್ದರಲ್ಲಿ ಸತ್ಯ ಹುದುಗಿದೆ. ಸಮಾಜವನ್ನು ತಮ್ಮದೆ ಆದ ನೀಲಿ ನಕ್ಷೆಯಂತೆ ಅವರಿಗೆ ಬದಲಾಯಿಸಲಾಗದಿದ್ದರೂ ವಿವಿಧ ಜನಾಂಗ, ಸಮಾಜಗಳು ಕ್ರೈಸ್ತಧರ್ಮದ ವಿವಿಧ ಮೌಲ್ಯಗಳನ್ನು ಅಳವಡಿಸಿಕೊಳ್ಳುವ ಸ್ವಾತಂತ್ರ್ಯ ಚೈತನ್ಯವನ್ನು ತೋರಿದುವು. ಭಾಷೆ, ಸಂಸ್ಕೃತಿಗಳ ವಿವಿಧ ವಿಸ್ತೃತ ರಂಗಗಳಲ್ಲಿ ಮಿಶನರಿಗಳ ಕೊಡುಗೆಗಳನ್ನು ಕ್ರೈಸ್ತರಲ್ಲದವರೂ ಕೃತಜ್ಞತಾಪೂರ್ವಕವಾಗಿ ನೆನೆಯುತ್ತಾರೆ. ಮತಪ್ರಚಾರಕರಾಗಿ ಮಿಶನರಿಗಳ ಕಾರ್ಯವನ್ನು ಕ್ರಿಶ್ಚಿಯನರು ಕೊಂಡಾಡುವುದು ವಿಶೇಷವೇನಲ್ಲ. ಆದರೆ ಅವರ ಅನೇಕ ಇತರ ಕೆಲಸಗಳಿಗಾಗಿ ಇಡೀ ಸಮಾಜವು ಅವರಿಗೆ ಆಭಾರವನ್ನು ವ್ಯಕ್ತಪಡಿಸುತ್ತದೆ.

ಹರ್ಮನ್ ಮೊಗ್ಲಿಂಗ್‌ರಂಥ ದೊಡ್ಡ ಪಂಡಿತ ಪರಂಪರೆಯು ದೇಶದ ಸಾಂಸ್ಕೃತಿಕ ವಲಯವನ್ನು ಸಿರಿವಂತಗೊಳಿಸಿತು. ಭಾಷಾವಿಜ್ಞಾನ, ನಿಘಂಟು ರಚನೆ, ಸಾಹಿತ್ಯಕೃಷಿ, ಜಾನಪದ, ಪತ್ರಿಕೋದ್ಯಮ, ಮುದ್ರಣರಂಗ ಮೊದಲಾದ ಹತ್ತು ಹಲವು ಕ್ಷೇತ್ರಗಳಲ್ಲಿ ಈ ಮಹನೀಯರು ತಮ್ಮ ಕೊಡುಗೆಗಳನ್ನು ನೀಡಿದ್ದಾರೆ. ಇದನ್ನು ಗಮನಿಸಿದಾಗ ಮಿಶನರಿಗಳನ್ನು ಕೇವಲ ಮತಪ್ರಚಾರಕರೆಂದು ಪರಿಗಣಿಸುವುದು ಅದೆಷ್ಟು ಸೂಕ್ತ ಎಂಬ ಪ್ರಶ್ನೆ ನಮಗೆ ಎದುರಾಗುತ್ತದೆ. ಈ ಪ್ರಶ್ನೆಯನ್ನು ಗಂಭೀರವಾಗಿ ಪರಿಗಣಿಸಿದಾಗಲೇ ಅವರನ್ನು ಸಮಾಜದ ಒಟ್ಟು ಚೌಕಟ್ಟಿನಲ್ಲಿ ಮೌಲೀಕರಿಸಲು ಸಾಧ್ಯ.

ಮಿಶನರಿ ಜನರ ಆಗಮನದ ಮುಖ್ಯ ಉದ್ದೇಶ ಕ್ರೈಸ್ತಮತ ಪ್ರಸಾರ ಹಾಗೂ ಮತಾಂತರ ಇದನ್ನು ಸಾಧಿಸುವುದು ಸುಲಭವಾಗಿರಲಿಲ್ಲ. ಆದ್ದರಿಂದ ಅವರು ಜನರ ಮನಸ್ಸನ್ನು ತಮ್ಮ ಕಡೆಗೆ ಸಳೆದುಕೊಳ್ಳುವ ಉದ್ದೇಶದಿಂದ ಬೇರೆ ಮಾರ್ಗಗಳನ್ನು ಅನುಸರಿಸಬೇಕಾಯಿತು. ಅವರಿಗೆ ವಿಶೇಷತಃ ಪ್ರೊಟೆಸ್ಟಂಟರಿಗೆ ಮನವರಿಕೆಯಾಗಿದ್ದ ಒಂದು ವಿಷಯವೆಂದರೆ ಸಾಮಾನ್ಯ ಜನರಿಗೆ ಶಿಕ್ಷಣವನ್ನು ಕೊಟ್ಟದ್ದಾದರೆ, ಕ್ರೈಸ್ತ ವಿಚಾರಗಳನ್ನು ಅವರಿಗೆ ಮನದಟ್ಟಾಗುವಂತೆ ಹೇಳಬಹುದೆಂಬುದು. ಅಲ್ಲದೆ, ಇಂಗ್ಲಿಷ್ ಕಲಿಯುವಿಕೆಗೆ ಪ್ರಾಧಾನ್ಯ ಬಂದುದರಿಂದ ಇಂಗ್ಲಿಷ್ ಶಾಲಾಸ್ಥಾಪನೆಯ ಮೂಲಕ, ಮತಾಂತರ ಕಾರ್ಯವನ್ನು ಹೆಚ್ಚು ಸುಗಮಗೊಳಿಸಬಹುದೆಂದೂ ಅವರಿಗೆ ತೋಚಿತು. ಆದರೆ ಪಠ್ಯಪುಸ್ತಕಗಳು ಬೇಕಲ್ಲ? ಸರಿ, ಅಂಥ ಪಠ್ಯಪುಸ್ತಕಗಳನ್ನು ಬರೆಯುವುದಕ್ಕೆ ಗಮನವಿತ್ತರು. ಮತಪ್ರಸಾರಕ್ಕೆ ಅಗತ್ಯವಿದ್ದ ಇನ್ನೊಂದು ಸಾಮಗ್ರಿಯೆಂದರೆ ಬೈಬಲ್ ಹಾಗೂ ಇತರ ಧಾರ್ಮಿಕ ಗ್ರಂಥಗಳ ಅನುವಾದ. ಈ ಕಾರ್ಯವನ್ನು ಅತ್ಯಂತ ಶ್ರದ್ಧೆಯಿಂದ ಕೈಗೊಂಡರು. ಹೀಗೆ ಪಠ್ಯಪುಸ್ತಕಗಳು ಹಾಗೂ ಮತೀಯ ಗ್ರಂಥಗಳೇ, ಮಿಶನರಿಗಳ ವಾಙ್ಮಯ ಮೊತ್ತದಲ್ಲಿ ಪ್ರಮುಖವಾಗಿವೆ. ಇವುಗಳ ಸಾವಿರಾರು ಪ್ರತಿಗಳನ್ನು ಮುದ್ರಿಸಲು ಮುದ್ರಾಯಂತ್ರಗಳು ನಮ್ಮ ದೇಶದಲ್ಲಿ ಇರಲಿಲ್ಲ. ಆದ್ದರಿಂದ ಅವನ್ನು ತಂದರು. ಪಾಶ್ಚಾತ್ಯ ರೀತಿಯ ಶಿಕ್ಷಣ ಹಾಗೂ ಮತಪ್ರಸಾರ ಇವುಗಳಿಗೆ ಮುದ್ರಣವು

ಬೆನ್ನೆಲುಬಾಗಿ ನಿಂತಿತು. ಇಂತು ನಮ್ಮ ನಾಡಿಗೆ ಬಂದೊಡನೆ ಸ್ವತಃ ಕನ್ನಡವನ್ನು ಕಲಿಯುವುದು; ಬೈಬಲ್ ಮತ್ತಿತರ ಮತೀಯ ಕೃತಿಗಳ ಅನುವಾದ; ಕನ್ನಡ ಕೋಶ ವ್ಯಾಕರಣಗಳ, ಅದರಂತೆ ಪಠ್ಯಪುಸ್ತಕಗಳ ರಚನೆ; ಇವುಗಳ ಪ್ರಕಟಣೆ–ವಿತರಣೆ; ಜೊತೆಗೆ ತಂತಮ್ಮ ಆಸಕ್ತಿ ಹವ್ಯಾಸದ ವಿಷಯಗಳಿಗೆ ಸಂಬಂಧಿಸಿದ ಗ್ರಂಥಗಳ ರಚನೆ–ಈ ವ್ಯವಸ್ಥಿತ ಚೌಕಟ್ಟಿನಲ್ಲಿ ಮಿಶನರಿ ಜನರ ವಾಙ್ಮಯ ಕಾರ್ಯವು ಸಾಗಿ ಬಂದಿತು; ಹೊಸಗನ್ನಡ ಸಾಹಿತ್ಯ ಚರಿತ್ರೆಯಲ್ಲಿ ಅವರು ಪ್ರಮುಖ ಪಾತ್ರವನ್ನು ವಹಿಸುವಂತಾಯಿತು. ಅವರ ಯಾವುದೇ ಸಾಹಿತ್ಯಿಕ ಚಟುವಟಿಕೆಗೆ ಕ್ರೈಸ್ತಮತ ಪ್ರಸಾರವೇ ಪ್ರೇರಕವಾಗಿದ್ದರೂ ಯಾವುದೊಂದು ವಿಷಯವನ್ನು ಆಳವಾಗಿ ಅಭ್ಯಸಿಸಿ ಆ ಕುರಿತು ಗ್ರಂಥ ರಚನೆ ಮಾಡಿದಾಗ ಮತೀಯ ದೃಷ್ಟಿಯು ಹಿಂದುಳಿದು ಆ ಕೃತಿಯು ಸರ್ವಜನಗ್ರಾಹ್ಯವಾದ ಸಂದರ್ಭಗಳೂ ಸಾಕಷ್ಟು ಕಂಡುಬರುತ್ತವೆ.

ಹೊಸಗನ್ನಡದ ತೇರನ್ನು ಎಳೆಯುವಲ್ಲಿ ಮಿಶನರಿ ಜನರಿಗೆ ಆಡಳಿತಾಧಿಕಾರಿಗಳು ವಿಶೇಷವಾಗಿ ಸಹಕರಿಸಿದ್ದಾರೆಂಬುದನ್ನು ನೆನೆದಿರಬೇಕು. ಮಿಶನರಿಗಳು ಸ್ವಜಾತಿಬಾಂಧವರಿದ್ದರೂ ಬ್ರಿಟಿಷ್ ಅಧಿಕಾರಿಗಳು ಮೊದಮೊದಲಿಗೆ ಅವರನ್ನು ದೂರವಿರಿಸಬಯಸಿದರು. ಕ್ರಮೇಣ ಪರಸ್ಪರ ಸಹಾಯದ ಅಗತ್ಯವುಂಟಾಯಿತು. ಸರಕಾರದವರೇ ಸ್ಥಾಪಿಸಿದ ಶಾಲೆಗಳಿಗಾಗಿ ವ್ಯಾಕರಣ–ಕೋಶ ಮೊದಲಾದ ಗ್ರಂಥಗಳನ್ನು ರಚಿಸಲು ಅವರು ಮಿಶನರಿ ಜನರನ್ನು ಕೇಳಿಕೊಂಡಿದ್ದಾರೆ. ಬಹಿರಂಗವಾಗಿ ಅಲ್ಲದಿದ್ದರು ಅಪ್ರತ್ಯಕ್ಷವಾಗಿ ಆಡಳಿತರಂಗದಲ್ಲಿ ಮಿಶನರಿ ಜನರಿಗೆ ನೆರವಾಗಿದ್ದಾರೆ.

ಮಿಶನರಿ ಜನರ ವಾಙ್ಮಯ ಕಾರ್ಯವು ಸು.೧೬೬೦ಕ್ಕೆ ಆರಂಭವಾಗಿ ದ್ವಿತೀಯ ಮಹಾಯುದ್ಧದವರೆಗೆ (೧೯೧೫) ನಡೆದುಕೊಂಡು ಬಂದಿತು. ಸು. ೨೫೦ ವರ್ಷಗಳ ಈ ಸಾಹಿತ್ಯ ಚರಿತ್ರೆಯಲ್ಲಿಯ ಪ್ರಥಮ ಘಟ್ಟವು ೧೮೧೫ ಕ್ಕೆ ಅಂತ್ಯಗೊಂಡು, ಅಲ್ಲಿಂದ ದ್ವಿತೀಯ ಘಟ್ಟವು ಮೊದಲಾಗುತ್ತದೆ; ಕ್ರಿ ಶ ೧೬೬೦ ರಿಂದ ೧೮೧೫ರ ವರೆಗಿನ ಮೊದಲ ಘಟ್ಟವು, ಮುದ್ರಣಪೂರ್ವ ಯುಗವಾಗಿದೆ. ಅಲ್ಲದೆ ಇದುವರೆಗೆ ತಿಳಿದು ಬಂದತೆ ಆಗಿನ ಸಾಹಿತ್ಯಿಕರೆಲ್ಲರೂ ಕೆಥಲಿಕ್ ಪಂಥದ ಜೆಸುಯಿಟರು (ಸೊಸೈಟಿ ಆಫ್ ಜೀಸಸ್). ತಮ್ಮ ಧರ್ಮದ ಪ್ರಸಾರವಾಗಬೇಕಾದರೆ, ದೇಶ ಭಾಷೆಗಳಲ್ಲಿ ಗ್ರಂಥರಚನೆಯಾಗಬೇಕೆಂಬುದನ್ನು ಮನಗಂಡು, ಅವರು ಕೊಂಕಣಿ, ತಮಿಳು, ಕನ್ನಡ ಮುಂತಾದ ಭಾಷೆಗಳಲ್ಲಿ ಕೃತಿಗಳನ್ನು ಹೊರತಂದರು. ಮತೀಯ ಕೃತಿಗಳು ಹಾಗೂ ಭಾಷಾಭ್ಯಾಸದ ಸಾಧನಗಳು ಎಂಬೀ ದ್ವಿಮುಖ ಗ್ರಂಥರಚನಾ ಪರಂಪರೆಯನ್ನು ರೂಢಿಸಿದರು.

ಮೊಗ್ಲಿಂಗ್ ಯುಗ

ಹರ್ಮನ್ ಮೊಂಗ್ಲಿಗ್ ದೇಶಾಂತರಕ್ಕೆ ಹೋಗಿ ಮತಪ್ರಸಾರ ಮಾಡುವುದಕ್ಕೆ ಹೇಳಿ ಮಾಡಿಸಿದ ವ್ಯಕ್ತಿಯಾಗಿದ್ದನು. ಭಾವುಕತೆ, ಕಷ್ಟಸಹಿಷ್ಣುತೆ, ವಾಕ್ಪಟುತ್ವ ಹಾಗೂ ಭಾಷಾಪ್ರಭುತ್ವ– ಇವು ಅವನಲ್ಲಿಯ ಎದ್ದು ಕಾಣುವ ಗುಣಗಳಾಗಿದ್ದವು. ತೀಬಿಂಜೆನ್ ವಿಶ್ವವಿದ್ಯಾಲಯದಲ್ಲಿ ಶಿಕ್ಷಣವನ್ನು

ಮುಗಿಸಿಕೊಂಡು, ಬಾಸೆಲ್‌ಗೆ ತಾನಾಗಿ ಹೋಗಿ 'ಸುವರ್ತಿಕ'ನಾಗುವ ಅಪೇಕ್ಷೆಯನ್ನು ವ್ಯಕ್ತಪಡಿಸಿದನು. ಅದಾಗಲೇ ಹೆಬಿಕ್ ಮಂಗಳೂರಿಗೆ ಬಂದು ಮಿಶನ್ ಕೇಂದ್ರವನ್ನು ಸ್ಥಾಪಿಸಿದ್ದನಷ್ಟೆ. ಆದರೆ ಇಲ್ಲಿಯ ಭಾಷೆಗಳನ್ನು ಕಲಿಯುವುದರಲ್ಲಿ ಅಸಮರ್ಥನಾಗಿದ್ದನು. ಆದ ಕಾರಣ ಬಾಸೆಲ್ ಕೇಂದ್ರ ಕಚೇರಿಯವರು ಭಾಷಾತಜ್ಞನಾಗಿದ್ದ ಮೊಗ್ಲಿಂಗ್‌ನನ್ನು ಭಾರತಕ್ಕೆ ಕಳಿಸಿಕೊಟ್ಟರು.

ನಮ್ಮ ನಾಡಿನಲ್ಲಿ ನೆಲಸಿದ್ದ ಎರಡು ದಶಕಗಳಲ್ಲಿ ಅವನು ಒಂದೆಡೆ ನಿಲ್ಲದೆ ಸುತ್ತಾಡಿದನಾದರೂ, ಮಂಗಳೂರು, ಧಾರವಾಡ, ಹುಬ್ಬಳ್ಳಿ ಹಾಗೂ ಮಡಿಕೇರಿ ಇವು ಅವನ ಮುಖ್ಯ ಕಾರ್ಯಕ್ಷೇತ್ರಗಳಾಗಿದ್ದವು. ಧರ್ಮಪ್ರಸಾರ, ಸಾಹಿತ್ಯ ಮತ್ತು ಶಿಕ್ಷಣ–ಈ ಮೂರೂ ರಂಗಗಳಲ್ಲಿ ಅನುಪಮ ಕಾರ್ಯವನ್ನೆಸಗಿದ ಅವನು ಎರಡು ದಶಕಗಳ ಕಾಲ ಬಾಸೆಲ್ ಮಿಶನ್ನಿನ ನೇತಾರನಾಗಿದ್ದರಲ್ಲಿ ಸಂದೇಹವಿಲ್ಲ. ತಾನು ಮತಾಂತರಗೊಳಿಸಿದ್ದ ಆನಂದರಾಯ ಕೌಂಡಿಣ್ಯ ಮತ್ತು ಕೌಶಿಕ ಬಂಧುಗಳು ಸಹ ಸಾಹಿತ್ಯಿಕ ಕಾರ್ಯದಲ್ಲಿ ತೊಡಗುವಂತೆ ಮಾಡಿದ್ದನು. ಇಲ್ಲಿಯ ವಾಸ್ತವ್ಯದ ಉತ್ತರಾವಧಿಯಲ್ಲಿ ಕೊಡಗಿನಲ್ಲಿದ್ದನಾದ್ದರಿಂದ, ಆ ಪ್ರದೇಶದ ಪರಿಚಯವನ್ನು 'Coorg Memories' ಗ್ರಂಥದ ಮೂಲಕ ಮಾಡಿಕೊಟ್ಟಿದ್ದಾನೆ. ಕೊಡವರ ಶಿಕ್ಷಣಕ್ಕಾಗಿ ಪರಿಶ್ರಮಪಟ್ಟಿದ್ದಾನೆ.

ಮೊಗ್ಲಿಂಗ್‌ನು ಆನಂದರಾಯ ಕೌಂಡಿಣ್ಯನ ಮತಾಂತರವನ್ನು ಆಧರಿಸಿ 'ಈರಾರು ಪತ್ರಿಕೆ' ಎಂಬ ಕೃತಿಯನ್ನು ಹೊರತಂದನು. ಈರಾರು ಎಂದರೆ ೧೨–ಪತ್ರ–ಉತ್ತರಗಳುಳ್ಳದ್ದು ಈ ಪುಸ್ತಿಕೆಯು ಕನ್ನಡದ ಆದ್ಯ ಪತ್ರ ಸಾಹಿತ್ಯವಾಗಿದೆ.

ಇಲ್ಲಿಯ ಜನಕ್ಕೆ ಪ್ರಪಂಚ ಪರಿಚಯವನ್ನು ಮಾಡಿಕೊಡುವ ಸ್ಪಷ್ಟ ಉದ್ದೇಶದಿಂದ ಮೊಗ್ಲಿಂಗ್ ೧೮೪೩ ರಲ್ಲಿ ಪಕ್ಷ ಪತ್ರಿಕೆಯೊಂದನ್ನು ಹೊರಡಿಸತೊಡಗಿದ. ಇದುವೆ ಕನ್ನಡದ ಪ್ರಪ್ರಥಮ ಪತ್ರಿಕೆ–ಮಂಗಳೂರು ಸಮಾಚಾರ. ಇದರಲ್ಲಿ ಅವನು ಕೊಡಬೇಕೆಂದಿದ್ದ ವಿವಿಧ ಸಮಾಚಾರಗಳೆಂದರೆ "ವೂರ ವರ್ತಮಾನಗಳು; ಸರಕಾರೀ ನಿರೂಪಗಳು;– ಸುಬುದ್ಧಿಯನ್ನು ಹೇಳುವ ಸಾಮತಿಗಳು, ಹಾಡುಗಳು, ಕಥೆಗಳು ; ಸರ್ವರಾಜ್ಯ ವರ್ತಮಾನಗಳು"

ಪತ್ರಿಕೆಯು ಬಂದ 'ವೂರ ವರ್ತಮಾನ'ಗಳನ್ನು ಓದಿದಾಗ ದಕ್ಷಿಣ ಕನ್ನಡ ಜಿಲ್ಲೆಯ ಜನಜೀವನದ ಒಂದು ನಿಟ್ಟಿನ ಚಿತ್ರಣ ಕಣ್ಣಿಗೆ ಕಟ್ಟುತ್ತದೆ. ಮೊಗ್ಲಿಂಗ್ ಈ ಸಾಧನವನ್ನು ಸ್ವಮತಪ್ರಸಾರಕ್ಕೆಂದು ವಿಶೇಷವಾಗಿ ಬಳಸದೆ, ಎಲ್ಲ ವರ್ಗದವರನ್ನು ಉದ್ದೇಶಿಸಿದ ಪತ್ರಿಕೆಯಾಗಿ ಉಳಿಸಿಕೊಂಡನು.

ಪತ್ರಿಕೆಯ ಕಲ್ಲಚ್ಚಿನಲ್ಲಿ ಸುಂದರವಾಗಿ ಮುದ್ರಣವಾಗುತ್ತಿತ್ತು. ಬಿಡಿ ಮೊಳೆಗಳಿಂದ ಮುದ್ರಿಸಿ ಹೆಚ್ಚು ಮಾಹಿತಿಯನ್ನು ಒದಗಿಸಬೇಕು; ನಾಡಿನಲ್ಲಿ ಕೂಡ ಪ್ರಸಾರವಾಗಬೇಕೆಂದು ಯೋಚಿಸಿ; ಮೊಗ್ಲಿಂಗ್ ಅದನ್ನು ಬಳ್ಳಾರಿಯಲ್ಲಿ ಪ್ರಕಟಿಸಿದನು. ಪತ್ರಿಕೆಗೆ ಅಖಿಲ ಕರ್ನಾಟಕದ ವ್ಯಾಪ್ತಿಬರಲೆಂದು ಪತ್ರಿಕೆಯ ಹೆಸರನ್ನು 'ಕಂನಡ ಸಮಾಚಾರ'ವೆಂಬುದಾಗಿ ಬದಲಿಸಿದನು. ಆದರೆ ಮಂಗಳೂರಲ್ಲಿ

ಕುಳಿತು ವ್ಯವಸ್ಥಿತವಾಗಿ ಲೇಖನ-ಸಂಪಾದನ ಕಾರ್ಯ ಮಾಡುವುದು ಮೊಗ್ಲಿಂಗ್‌ನಿಗೆ ಸಾಧ್ಯವಾಗಲಿಲ್ಲ. ಪತ್ರಿಕೆ ಕೆಲವು ತಿಂಗಳಲ್ಲಿ ನಿಂತುಹೋಯಿತು.

'ಕಂನಡ ವಾರ್ತಿಕ' ಪತ್ರಿಕೆಯನ್ನು ೧೮೫೭ರಲ್ಲಿ ಹೊರಡಿಸತೊಡಗಿದನು. ಇದೂ ಕೂಡ ಅಲ್ಪಾಯುಷಿಯಾಗಿ ಬಾಳಿತು, ಮೊಗ್ಲಿಂಗ್‌ನ ಇತರ ಕಾರ್ಯಭಾರದಿಂದಾಗಿ.

ಹೀಗೆ ಮೊಗ್ಲಿಂಗ್ ಹೊಸಗನ್ನಡ ಗದ್ಯಮಾರ್ಗದ ಪ್ರವರ್ತಕನಾದನು. ಹೊಸಗನ್ನಡ ಕೃತಿಗಳನ್ನು ಸಂಪಾದಿಸಿದನಲ್ಲದೆ, ಕೆಲವನ್ನು ಜರ್ಮನ್ ಭಾಷೆಗೆ ಅನುವಾದಿಸಿದನು. ಕನ್ನಡ ಲಿಪಿ ಸುಧಾರಣೆಗೆ ಮನಸ್ಸುಗೊಟ್ಟನು. ಆದ್ಯ ಪತ್ರಕಾರನಾಗಿ ಮೆರೆದನು. ಆಕಸ್ಮಿಕವಾಗಿ ನಮ್ಮ ನಾಡಿಗೆ ಬಂದು ಇಂದಿನ ಕನ್ನಡ ಸಾಹಿತ್ಯದ ಆಸ್ತಿವಾರವನ್ನು ಹಾಕಿದವರಲ್ಲಿ ಮುಖ್ಯನಾದನು. ಮುಖ್ಯವಾಗಿ ಬಸವಪುರಾಣ ಪ್ರಕಟಣೆಯ ಈತನ ಆಸಕ್ತಿಯ ಹಿಂದೆ ಅಂದು ಪ್ರಬಲವಾಗಿದ್ದ ವೀರಶೈವ ಧರ್ಮದ ತತ್ವಗಳನ್ನು ತಿಳಿದು ಕ್ರೈಸ್ತ ಧರ್ಮದ ಮೇಲ್ಮೆಯನ್ನು ಸಾರುವ ಉದ್ದೇಶವಡಗಿರಬಹುದು. ಇದಕ್ಕೆ ಪೂರಕವಾಗಿ ಮೊಗ್ಲಿಂಗ್‌ನು ಬಾಸೆಲ್ ಮಿಶನ್‌ಗೆ ಬರೆದ ಪತ್ರದ ಸಾರಾಂಶ ಹೀಗಿದೆ:

ಅಂದಿನ ಮಿಶನರಿಗಳು ಸ್ಥಳೀಯ ಧರ್ಮ, ಆಚರಣೆ ಮತ್ತು ನಂಬಿಕೆಗಳ್ನು ಕಲಿಯಲು ಪ್ರಾರಂಭಿಸುತ್ತಾರೆ. ಹಾಗೂ ಇದರಿಂದ ಸ್ಥಳೀಯರೊಡನೆ ಸಂಪರ್ಕ ಸಾಧ್ಯವಾಗುತ್ತದೆ ಎಂದು ನಂಬುತ್ತಾರೆ, ಸ್ಥಳೀಯವಾಗಿ ಪ್ರಬಲವಾಗಿರುವ ಮತ್ತು ಹಿಂದೂ ಧರ್ಮದ ಸುಧಾರಣಾವಾದಿ ಚಳುವಳಿಗೆ ಸೇರಿದ ಲಿಂಗಾಯತ ಜಾತಿಯ ಜನರ ಬಗ್ಗೆ ತಿಳಿದುಕೊಳ್ಳುವುದು ಅವರಿಗೆ ಅವಶ್ಯವೆನಿಸುತ್ತದೆ. ಹುಬ್ಬಳ್ಳಿಯ ಹಿರಿಯ ಮಠಾಧೀಶರೊಬ್ಬರು ೧೮೩೮ ಜೂನ್ ೧೫ರಂದು ಧಾರವಾಡದ ಕ್ರೈಸ್ತ ಮಿಶನ್ ಸ್ಟೇಶನ್‌ಗೆ ಭೇಟಿ ನೀಡುತ್ತಾರೆ. ಇವರು ಎತ್ತರ ನಿಲುವಿನ ಸುಂದರಕಾಯದ ಭಿನ್ನ ವ್ಯಕ್ತಿತ್ವದ ತಣ್ಣನೆಯ ರಕ್ತದ ಪಾಪರಹಿತ ದೇವತಾ ಸ್ವರೂಪದ ಮನುಷ್ಯರಂತೆ ಕಂಡರು ಹಾಗೂ ಇವರನ್ನು ಇವರ ಅನುಯಾಯಿಗಳು ಪೂಜಿಸುತ್ತಾರೆ. ಇವರಿಗೆ ತಲೆಬಾಗುವ ಅನ್ಯದೈವಗಳಿಲ್ಲ. ಇವರಿಗೆ ಇವರೇ ಶ್ರೇಷ್ಠರು. ನನ್ನನ್ನು ಹುಬ್ಬಳ್ಳಿಗೆ ಆಹ್ವಾನಿಸಿ ತಮ್ಮ ಶಾಸ್ತ್ರಗಳನ್ನು ಅರಿಯಲು ತಿಳಿಸಿದರು. ಆಗ ನಾನು ನನ್ನ ಮತ್ತು ಕ್ರೈಸ್ತ, ಸಂದೇಶಗಳನ್ನು ತಮಗೆ ಬೋಧಿಸಿದ್ದರೆ ನನ್ನ ಮತ್ತು ನಿಮ್ಮ ನಡುವೆ ಸ್ನೇಹ ಉಳಿಯಲಾರದು ಎಂದೆ. ನನಗೆ ನಿರ್ಧಿಷ್ಟ ಉದ್ದೇಶವಿದೆ ನಿಮಗೆ ಹಾಗೂ ಎಲ್ಲರಿಗೆ ನನ್ನ ಧರ್ಮ ಬೋಧಿಸುವುದು ಅದರಿಂದ ನಿಮ್ಮ ಹೃದಯದಲ್ಲಿ ನನ್ನ ಬಗ್ಗೆ ದ್ವೇಶ ಉಳಿಯಬಹುದು ಎಂದೆ. ಆದರೆ ಅವರು ಹಾಗೇನಿಲ್ಲ ಎಂದರು ಹೀಗಾಗಿ ನಾನು ಜೂನ್ ೨೭.೧೮೩೮ ರಂದು ಬಜಾರಿನಲ್ಲಿ ಸಾಮಾನ್ಯವಾಗಿ ಅಳುಕಿಲ್ಲದೆ ಧರ್ಮಪ್ರಚಾರ ಮಾಡಿದಂತೆ ಲಿಂಗಾಯತ ಗುರುಗಳಿಗೆ ಬೋಧಿಸಿದೆ. ಅವರು ಯಾವುದೇ ಹೆದರಿಕೆಯಿಲ್ಲದೆ ನನ್ನ ಎಲ್ಲ ಸಂದೇಶಗಳನ್ನು ವಿನಯದಿಂದಲೇ ಕೇಳಿದರು.

ಹುಬ್ಬಳ್ಳಿ ಧಾರವಾಡದ ಆಗ್ನೇಯ ದಿಕ್ಕಿಗಿರುವ ಧಾರವಾಡದ ನನ್ನ ಮಿಶನ್ ಸ್ಟೇಶನ್‌ನಿಂದ ೩.೫ ಗಂಟೆ ಕಾಲ್ನಡಿಗೆಯಲ್ಲಿ ತಲುಪಬಹುದಾದ ಒಂದು ಪಟ್ಟಣ. ಇದೊಂದು ಪ್ರಮುಖ ವ್ಯಾಪಾರಿಕೇಂದ್ರ. ಇದರ ಜನಸಂಖ್ಯೆ ಸುಮಾರು ೩೦ಸಾವಿರ. ಇವರಲ್ಲಿ ಬಹುತೇಕ ಜನರು ಲಿಂಗಾಯಿತರು. ಕೆಲವು ಸಾವಿರ ಮುಸ್ಲೀಮರು ಹಾಗೂ ಒಂದು ಸಾವಿರದಷ್ಟು ಬ್ರಾಹ್ಮಣರಿದ್ದಾರೆ. ಈ ಪಟ್ಟಣದ ವ್ಯಪಾರಿಗಳು ಶ್ರೀಮಂತರು ಹಾಗೂ ಬಹಳ ಮುಂದುವರಿದವರು. ಒಂದು ಲಕ್ಷ ರೂಪಾಯಿಯವರೆಗಿನ ಬಿಲ್ಲಿಗೆ ನಗದೀಕರಣ (ಹಣ ಬದಲಾವಣೆ) ಮಾಡುವ ಸಾಮರ್ಥ್ಯ ಇರುವವರಿದ್ದಾರೆ. ರೇಶ್ಮೆದಾರ ಇವರ ಮುಖ್ಯ ವ್ಯಾಪಾರಗಳಲ್ಲೊಂದು ಹಾಗೂ ಪೂರ್ವಕರಾವಳಿಯ ಮೂಲಕ ನಡೆಯುವ ಭಾರತದ ವ್ಯಾಪಾರ ಈ ನಗರದ ಮೂಲಕವೇ ಸಾಗುವುದು ವಿಶೇಷವಾಗಿದೆ. ಸುಮರು ೩೦ ಸಾವಿರದಷ್ಟಿರುವ ಈ ಲಿಂಗಾಯಿತರ ಬಗ್ಗೆ ನಾವು ಗಮನ ಹರಿಸಬೇಕು ಏಕೆಂದರೆ ಇವರು ಅತ್ಯಂತ ಪ್ರಭಾವಶಾಲಿ ಗುಂಪಾಗಿದ್ದಾರೆ. ಆದಷ್ಟು ಬೇಗ ಇವರ ಹೃದಯಗಳಲ್ಲಿ ನಮ್ಮ ಬೋಧನೆ ನೆಲೆಗೊಳ್ಳುವಂತೆ ದೇವರು ದಯಪಾಲಿಸಲಿ ಎಂದು ಹೇಳಿದರು.

ಮೊಗ್ಲಿಂಗ್ ಯುಗದ ಇನ್ನಿತರರೆಂದರೆ ಡಬ್ಲ್ಯೂ; ಹಾಕ್, ಜಿ. ಕೀಸ್, ಜೆ. ಹೂಬರ್ ಇವರನ್ನು ನೆನೆಯಬೇಕು. ಹಾಕ್ ಜರ್ಮನ್ ಗೀತಗಳನ್ನು ಕನ್ನಡಕ್ಕೆ ಅನುವಾದಿಸಿದವ ; ಕೀಸ್ ಭೂಗೋಳ, ವ್ಯಾಕರಣ ಮೊದಲಾದ ಪಠ್ಯಗಳನ್ನು ಬರೆದವ ; ಹೂಬರ್ ಬೈಬಲ್ ವ್ಯಾಖ್ಯಾನದ ಕೆಲಭಾಗದ ಅನುವಾದಕ ಇತ್ತ ತುಳುಭಾಷೆಯಲ್ಲಿ ಸಾಹಿತ್ಯ ರಚನೆ ಮಾಡಿದವರೆಂದು ಅಮ್ಮಾನ್, ಜೆ. ಕೆಮರರ್, ಬೂರ್ರರ್ ಹಾಗೂ ಮೆನನ್ ಎಂಬವರನ್ನು ಉಲ್ಲೇಖಿಸಬೇಕು. ತುಳು ಪುಸ್ತಕ ಪ್ರಕಟಣೆಯು 'ಮತ್ತಾಯನ ಸುವಾರ್ತೆ'ಯಿಂದ ಮೊದಲಾಯಿತು. ಕ್ರಿ. ಶ ೧೮೪೭ ರಲ್ಲಿ ತುಳು ಭಾಷೆಯಲ್ಲಿ ಸಮಗ್ರ ಬೈಬಲ್ ಹೊರಬಂದುದು ಹಿರಿಯ ಸಾಹಸವಾಗಿದೆ. ಮೆನರ್ ತುಳು ಭಾಷೆಯ ಶಬ್ದಕೋಶವನ್ನು ಪ್ರಥಮತಃ ಸಿದ್ಧಪಡಿಸಿದ್ದಾನೆ. ಜೊತೆಗೆ ಭೂತಾರಾಧನೆಯ ಕುರಿತ ಒಂದು ಕೃತಿಯನ್ನೂ ರಚಿಸಿದ್ದಾನೆ. ಶ್ರೀವಾದಿರಾಜರ, ಇತರ ಕೆಲವರ ಪಾಡ್ದನೆಗಳನ್ನು ಬಿಟ್ಟರೆ, ಆ ಮುಂಚೆ ತುಳುಭಾಷೆಯಲ್ಲಿ ಸಾಹಿತ್ಯ ರಚನೆಯಾಗಿರಲಿಲ್ಲ. ಈ ಭಾಷೆಗೆ ಗ್ರಂಥಸ್ಥ ರೂಪವನ್ನಿತ್ತು, ಸಾಹಿತ್ಯಿಕ ಮುನ್ನಣೆಯೊದಗಿಸಿದ್ದುದು ಬಾಸೆಲ್ ಮಿಷನ್ನಿನವರ ಒಂದು ಅಪೂರ್ವ ಕೊಡುಗೆಯಾಗಿದೆ.

೨. ಅ. ಸಂಸ್ಕೃತಿ : ಅರ್ಥವಿವರಣೆ :

'ಸಂಸ್ಕೃತಿ' ಎಂಬ ಪದ ಕಿವಿಗೆ ಬೀಳುತ್ತಲೇ ಏನೋ ಮಹತ್ವದ ಪ್ರಸಕ್ತಿ ಭಾಸವಾಗುತ್ತದೆ. ಮನಸ್ಸಿಗೆ ಒಂದು ರೀತಿಯ ಮಧುರಾನುಭೂತಿ ಉಂಟಾಗುತ್ತದೆ. ಹಾಗಾದರೆ ಇಷ್ಟು ಮಹತ್ವವುಳ್ಳ ಈ ಪದದ ಅರ್ಥವೇನು? ಎಂದಾಗ ಈ ಕುರಿತು ಇದುವರೆಗೂ ಸಾಹಿತ್ಯಾಸಕ್ತರಾಗಲಿ, ಸಮಾಜಶಾಸ್ತ್ರಜ್ಞರಾಗಲಿ, ಮಾನವಶಾಸ್ತ್ರಜ್ಞರಾಗಲಿ, ಇತಿಹಾಸಕಾರರಾಗಲಿ ಖಚಿತವಾದ ಅರ್ಥವಿವರಣೆ ಕೊಡಲು ಸಾಧ್ಯವಾಗಿಲ್ಲ. ಇಂದಿಗೂ ಸಹ ಈ ಶಬ್ದಶಕ್ತಿಯ ಕುರಿತು ಚರ್ಚೆ, ವಾದ-ವಿವಾದ

ನಡೆಯುತ್ತಲೇ ಇವೆ. ಆದ್ದರಿಂದ ನಾವೂ ಸಹ ಸಂಸ್ಕೃತಿಯ ಬಗೆಗಿರುವ ಚರ್ಚೆಗಳನ್ನು ಕ್ರೋಢೀಕರಿಸುವ ಹಾಗೂ ವ್ಯಾಖ್ಯಾನಿಸುವ ಪ್ರಯತ್ನ ಮಾಡಬಹುದಷ್ಟೇ. ಇದು ಸಾಂಸ್ಕೃತಿಕ ಅಧ್ಯಯನವಾದುದರಿಂದ 'ಸಂಸ್ಕೃತಿ' ಎಂಬ ವಿಶೇಷಣ ಕುರಿತಂತೆ ಯಾವ ಹಿನ್ನೆಲೆಯಲ್ಲಿ ಇದನ್ನು ಸ್ವೀಕರಿಸಿದ್ದೇವೆ ಎಂಬುದನ್ನು ಸ್ಪಷ್ಟಪಡಿಸಿ ಅನಂತರ ಸಾಂಸ್ಕೃತಿಕ ಅಧ್ಯಯನದ ಕಡೆ ತಿರುಗಿಕೊಳ್ಳಬಹುದು.

'ಸಂಸ್ಕೃತಿ' ಎಂಬ ಪದಕ್ಕೆ ಸಂವಾದಿಯಾಗಿ ಇಂಗ್ಲೀಷ್‌ನಲ್ಲಿ 'Culture' ಎಂಬ ಪದ ಬಳಕೆಯಲ್ಲಿದೆ. 'ಕಲ್ಚರ್' ಶಬ್ದದ ಮೂಲಪದ ಲ್ಯಾಟಿನ್ ಭಾಷೆಯ 'ಕಲ್ಟ್' (Cult) ಅಥವಾ 'ಕಲ್ಟಸ್' (Cultus) ಎಂಬುದು. ಈ ಪದದ ಮೂಲಾರ್ಥ 'ಗೌರವಿಸು', 'ಸೇವಿಸು', 'ನಿಷ್ಠೆಮಾಡು', 'ಲಕ್ಷ್ಯದಲ್ಲಿರಿಸಿಕೊ', 'ಆರಾಧಿಸು' ಎಂಬ ರೀತಿಯಾಗಿದೆ. "ಈ ಶಬ್ದದ ಉಪಯೋಗ ಹೆಚ್ಚಾಗಿ ಪ್ರಯೋಗವಾಗುತ್ತಿರುವುದು ಸುಮಾರು ನೂರು ವರ್ಷದಿಂದೀಚೆಗೆ, ಅದರಲ್ಲಿಯೂ ಕಳೆದ ಐವತ್ತು ವರ್ಷಗಳಲ್ಲಿ ಅದರ ಉಪಯೋಗವು ಕ್ರಮೇಣ ಬೆಳೆದಿದೆ". (ಗುಂಡಪ್ಪ ಡಿ.ವಿ. ೧೯೫೯: ಪು.೭)

'ಸಂಸ್ಕೃತಿ' ಶಬ್ದವು ಅರ್ಥವಿಲ್ಲದ್ದೆಂದು ಯಾರೂ ಹೇಳರು. ಅದು ಅರ್ಥವುಳ್ಳದ್ದು ಮಾತ್ರವಲ್ಲ; ಅದರ ಅರ್ಥವು ವಿಶಾಲವಾದದ್ದು, ಬಹುಮುಖವಾದದ್ದು ಮತ್ತು ನಮ್ಮ ಜೀವನಕ್ಕೆ ಮುಖ್ಯವಾದದ್ದು. ಯಾವ ಅಧಿಕಾರಪತ್ರವಾಗಲಿ, ಪ್ರಮಾಣಭೂತವಾದ ನಿಘಂಟಾಗಲಿ ಅದಕ್ಕೆ ಅರ್ಥವಿವರಣೆ ಕೊಡದಿದ್ದರೂ ವಿದ್ವಜ್ಜನ ಪ್ರಯೋಗದಿಂದ ಆ ಮಾತಿನ ಅರ್ಥವನ್ನು ನಮ್ಮ ಮನಸ್ಸುಗಳಿಗೆ ವಿಶದಪಡಿಸಿಕ್ಕೊಬಹುದಾಗಿದೆ.

ಮನುಷ್ಯನು ಪ್ರಾಣಿಗಳಲ್ಲಿ ಒಬ್ಬನಾದರೂ ತಾನು ಪ್ರಾಣಿಗಳಿಗಿಂತ ಭಿನ್ನ ಎಂದು ಹೇಳಿಕೊಳ್ಳುತ್ತಾನೆ. ಅವನು ಪ್ರಾಣಿಗಳಿಗಿಂತ ಭಿನ್ನ ಎಂದು ತೋರಿಸುವ ಅಂಶ ಯಾವುದು? "ಪ್ರಾಣಿಗಳಿಗೆ ಬುದ್ಧಿಯಿಲ್ಲ. ಅವುಗಳಲ್ಲಿ ಸಾಮಾಜಿಕ ಒಕ್ಕೂಟವಿಲ್ಲ , ವಾಕ್‌ಶಕ್ತಿಯಿಲ್ಲ. ಇಷ್ಟು ಮನುಷ್ಯನಿಗೆ ಇದೆ ಎಂದು ಹೇಳಬಹುದಾದರೂ ಮನುಷ್ಯನನ್ನು ಪ್ರಾಣಿಗಳಿಂದ ಬೇರ್ಪಡಿಸಬಲ್ಲ ಅಂಶವನ್ನು ಒಂದು ಮಾತಿನಲ್ಲಿ ಹೇಳಬಹುದು ಅದೇ ಸಂಸ್ಕೃತಿ". (ಚಿ.ಮೂ.೨೦೦೮, ಪು.೫)

"'ಸಂಸ್ಕೃತಿ' ಇದ್ದಕ್ಕಿದ್ದಂತೆ ಹುಟ್ಟಿಕೊಂಡದ್ದಲ್ಲ. ಅದರ ಬೇರುಗಳು ಪ್ರಪ್ರಾಚೀನತೆಯ ಅಜ್ಞಾತಗರ್ಭದಲ್ಲಿ ಹುದುಗಿವೆ. ಅದು ಆದ್ಯಂತಗಳಿಲ್ಲದ ಜೀವಸತ್ವ ಅದು ಮಾನವನ ಉಗಮದೊಂದಿಗೆ ಪ್ರಾರಂಭವಾಗಿ ಅವನಿರುವತನಕ ಉಳಿಯುವಂತದ್ದು." (ದೇ.ಜ.ಗೌ. ಗದುಗಿನ ಭಾರತ: ಒಂದು ಸಾಂಸ್ಕೃತಿಕ ಅಧ್ಯಯನ: ಪು.೧೩) ಸಂಸ್ಕೃತಿ ಎಂಬುದೊಂದು ಅಮೂರ್ತ ಕಲ್ಪನೆ. ಅಂದರೆ ಪ್ರಕೃತಿಯಲ್ಲದ್ದು ಅದರಿಂದ ಭಿನ್ನವಾದದ್ದು ಅಥವಾ ಪರಿಷ್ಕಾರದಿಂದ ಅದೇ ರೂಪಾಂತರಗೊಂಡದ್ದು ಸಂಸ್ಕೃತಿಯಾಗುತ್ತದೆ. ಮೊದಲೇ ಇದ್ದದ್ದು ಅಥವಾ ದೇವರಿಂದ ಸೃಷ್ಟಿಗೊಂಡದ್ದು ಪ್ರಕೃತಿ; ಮನುಷ್ಯ ಸೃಷ್ಟಿಸಿದ್ದು ಅಥವಾ ಪರಿಷ್ಕರಿಸಿದ್ದು ಸಂಸ್ಕೃತಿ. ಅಂದರೆ ಬೀದಿಯಲ್ಲಿ ನಾವು ಆಡುವ, ಕೇಳುವ

ಮಾತು ಪ್ರಕೃತಿ; ಅದೇ ಮಾತುಗಳನ್ನು ಒಂದು ಹದವರಿತು ಜೋಡಿಸಿದ ಕಾವ್ಯವು ಸಂಸ್ಕೃತಿ. ಭತ್ತ ಪ್ರಕೃತಿ; ಬೇಯಿಸಿ ಸೇವಿಸುವ ಅನ್ನ ಸಂಸ್ಕೃತಿ. ಆಸೆ ಮೋಹಗಳು ಪ್ರಕೃತಿ; ನ್ಯಾಯ ವಿವೇಕಗಳು ಸಂಸ್ಕೃತಿ. ರೋಷಾಸೂಯೆಗಳು ಪ್ರಕೃತಿ; ಕ್ಷಮೆ ಸಹನೆಗಳು ಸಂಸ್ಕೃತಿ.

ಸಂಸ್ಕೃತಿಯೆಂಬುವುದು ಒಂದಾನೊಂದು ಹಳೆಯ ಪದಾರ್ಥದ ಹೊಸ ಹೆಸರು. ಬಾಳ್ವೆಯನ್ನು ಹದಪಡಿಸುವುದು ಎಂದು ಅರ್ಥ. "ನಾವು ಎಂಥ ನಯ-ವಿನಯಗಳಿಂದ, ಎಂಥ ನವುರುನಾಜೂಕುಗಳಿಂದ ಬಾಳ್ವೆಯನ್ನು ನಡೆಸಿದರೆ ಅದರಲ್ಲಿ ಹುಳಿಕಹಿಗಳು ಕಡಿಮೆಯಾಗಿ ಸ್ವಾರಸ್ಯ ಹೆಚ್ಚೀತೋ ಆ ತೆರದ ಮನೋಭಾವವನ್ನು ನಡತೆನುಡಿತೆಗಳನ್ನು ಸಂಪಾದಿಸಿಕೊಳ್ಳುವುದು ಸಂಸ್ಕೃತಿ. ಅದು ಒಂದು ಬಗೆಯ ಆತ್ಮ ಶಿಕ್ಷಣ." (ಗುಂಡಪ್ಪ ಡಿ.ವಿ. ೧೯೫೫: ಪು. ೭)

ಸಮ್ಯಕ್+ಕೃತಿ = ಸಂಸ್ಕೃತಿ. ಎನ್ನುವಲ್ಲಿ 'ಸಮ್ಯಕ್' ಎಂದರೆ 'ಸಾತ್ವಿಕ' 'ಒಳ್ಳೆಯ' ಎಂಬರ್ಥ. ಒಂದು ವಸ್ತು ಅಥವಾ ವರ್ತನೆ ಹೇಗಿದ್ದರೆ ನಮ್ಮ ಜೀವಿತದ ಪರಮೋದ್ದೇಶ ಸಿದ್ಧಿಯು ನಮಗೆ ಹತ್ತಿರ ಹತ್ತಿರವಾದೀತೋ ಅದು ಒಳ್ಳೆಯದು ಅದೇ ಹಿತ, ಅದೇ ಔಚಿತ್ಯ. ಲೋಕದೊಡನೆ ನಮಗಿರುವ ನಾನಾ ಸಂಪರ್ಕಗಳಲ್ಲಿ ನಮಗೆ ಉಂಟಾಗಿರುವ ಔಚಿತ್ಯವೇ ಸಂಸ್ಕೃತಿ.

ಮನುಷ್ಯನನ್ನು ಪ್ರಾಣಿಲೋಕದಿಂದ ಬೇರ್ಪಡಿಸಿ ಮೇಲೆತ್ತಿ ಮುನ್ನಡೆಯುವಂತೆ ಮಾಡಿತು ಮಾತು. ಒಂದಲ್ಲ ಒಂದು ರೀತಿಯ ಭಾಷೆ ಎಲ್ಲ ಪ್ರಾಣಿಗಳಿಗೂ ಇದೆ. "ಆದರೆ ವಾಕ್ ಮತ್ತು ಅರ್ಥಗಳನ್ನು ಶಿವಶಕ್ತಿಯರಂತೆ ಸಮನ್ವಯಗೊಳಿಸಿ ಲಿಪಿಯ ಮೂಲಕ ಅದನ್ನು ಹಿಡಿದಿಡುವ ಕಲೆಯನ್ನು ಮನುಷ್ಯ ರೂಢಿಸಿಕೊಂಡದ್ದು ಅವನ ನಾಗರೀಕತೆ ಮತ್ತು ಸಂಸ್ಕೃತಿ ವಿಕಾಸದಲ್ಲಿ ದೊಡ್ಡ ಹೆಜ್ಜೆ." (ತಿಪ್ಪೇರುದ್ರಸ್ವಾಮಿ ಹೆಚ್. ೨೦೦೩, ಪು.೩೧೧)

ನಮ್ಮ ಪರಂಪರೆಯಲ್ಲಿ ಸಂಸ್ಕಾರ ಪದವು ಹೆಚ್ಚು ಕೇಳಿಬರುವಂತಹುದು. 'ಸಂಸ್ಕಾರ' ಪದಕ್ಕೆ 'ಪವಿತ್ರ', 'ಶುದ್ಧಿ', 'ಯೋಗ್ಯತೆ' ಎಂಬರ್ಥಗಳಿವೆ. ಮನಸ್ಸಿನಲ್ಲಿ ಮಾಡಿದ ಒಳ್ಳೆಯ ವಿಚಾರಗಳನ್ನು ಆಚರಣೆಯಲ್ಲಿ ಕ್ರಿಯೆಗೆ ಇಳಿಸುವುದು, ಕೃತಿಗೆ ತೊಡಗಿಸುವುದು ಸಂಸ್ಕಾರ. ಒಳ್ಳೆಯ ಆಚಾರ ವಿಚಾರಗಳು ಸುಸಂಸ್ಕಾರ; ಕೆಟ್ಟ ಆಚಾರ ವಿಚಾರಗಳು ಕುಸಂಸ್ಕಾರ, ಸಂಸ್ಕಾರಯುತ ಚಟುವಟಿಕೆಗಳು ಸಂಸ್ಕೃತಿ.

ಸಂಸ್ಕೃತಿ ಕುರಿತು ಅನೇಕ ಬಗೆಯ ಚರ್ಚೆಗಳು ವ್ಯಾಖ್ಯಾನಗಳು ಇವೆ. ಪ್ರಾಯಶಃ ಬಹುಚರ್ಚಿತವಾದ ಆದರೆ ಯಾವುದೇ ನಿಖರ ನಿಲುವಿಗೆ ತಲುಪದ ಚರ್ಚೆಯೆಂದರೆ 'ಸಂಸ್ಕೃತಿ' ಪದಕ್ಕೆ ಸಂಬಂಧಿಸಿದ ಚರ್ಚೆ ಎನ್ನಬಹುದು. ಏಕೆಂದರೆ ಈ ಪದ 'ದೇಶವಾಚಕ', 'ಭಾಷಾವಾಚಕ', 'ಪ್ರಾಂತ್ಯವಾಚಕ', 'ವರ್ಗವಾಚಕ', 'ಆಶಯವಾಚಕ' ಹೀಗೆ ಬೇರೆ ಬೇರೆ ಸ್ತರಗಳಲ್ಲಿ ತನ್ನ ಅರ್ಥವ್ಯಾಪ್ತಿಯನ್ನು ವಿಸ್ತೃತಗೊಳಿಸಿಕೊಂಡಿರುವುದೇ ಇದಕ್ಕೆ ಕಾರಣವಾಗಿದೆ.

ಮನುಷ್ಯ ಬದುಕು ಅಂತರಂಗ ಮತ್ತು ಬಹಿರಂಗದ ನೆಲೆಯಲ್ಲಿ ವಿಕಾಸವಾಗಿದೆ. ಅಂತರಂಗದ ನೆಲೆಯಲ್ಲಿ ವ್ಯಕ್ತಿಗತ ಜೀವನವಿದ್ದರೆ, ಬಹಿರಂಗದ ನೆಲೆಯಲ್ಲಿ ಸಾಮೂಹಿಕ ಜೀವನವಿರುತ್ತದೆ. ವ್ಯಕ್ತಿಯ ವೈಯಕ್ತಿಕ ಹಾಗೂ ಸಾಮೂಹಿಕ ಚಟುವಟಿಕೆಗಳು, ನಡವಳಿಕೆಗಳು, ನಿತ್ಯದ ಬದುಕನ್ನು ರಚಿಸಿರುತ್ತವೆ. ಸಂಸ್ಕೃತಿಯೆನ್ನುವುದು ಈ ಉಭಯ ಘಟಕಗಳನ್ನು ಒಳಗೊಂಡಿದೆ.

ಟಿ.ಎಸ್.ಎಲಿಯಟ್ ಅವರ ಪ್ರಕಾರ ಸಂಸ್ಕೃತಿ ಎಂಬುದು ಒಬ್ಬ ವ್ಯಕ್ತಿಯಲ್ಲಿ ಕಂಡುಬರುವುದಕ್ಕಿಂತ ಹೆಚ್ಚಾಗಿ ಒಂದು ಸಮಾಜದ ಅಥವಾ ಗುಂಪಿನ ಜೀವನವಿಧಾನದಲ್ಲಿ ಕಂಡುಬರುತ್ತದೆ. 'ಸಂಸ್ಕೃತಿ' ಎಂಬುದು ಒಂದು ಜನಾಂಗದ ಸಮಸ್ತ ಕ್ರಿಯೆಗಳನ್ನು, ಅಭಿರುಚಿಗಳನ್ನು ಒಳಗೊಳ್ಳುತ್ತದೆ. ವ್ಯಕ್ತಿಗಳು ಏನಿದ್ದರೂ ಈ ಸಂಸ್ಕೃತಿಯ ಪ್ರಗತಿಗೆ ಕಾರಣರಾಗುತ್ತಾರೆ. ಆದರೆ ಮ್ಯಾಥ್ಯೂಅರ್ನಾಲ್ಡರು ಮನುಷ್ಯನ ವೈಯಕ್ತಿಕ ನೆಲೆಯಲ್ಲಿ ಇದರ ಅರ್ಥವನ್ನು ವಿವರಿಸುತ್ತಾರೆ. ಇವರಿಬ್ಬರ ವ್ಯಾಖ್ಯೆಗಳನ್ನು ಕ್ರೋಢೀಕರಿಸಿದಾಗ ಸಂಸ್ಕೃತಿಯ ಮೂಲಾರ್ಥವನ್ನು ಕಂಡುಕೊಳ್ಳಬಹುದೇನೊ. ನಮ್ಮ ನಿತ್ಯಜೀವನದ ಸಂಭಾಷಣೆಯಲ್ಲಿ 'ಅವನಿಗೆ ಸಂಸ್ಕೃತಿಯಿಲ್ಲ' ಎಂಬ ಒಂದರ್ಥದಲ್ಲಿಯೂ ಶಾಸ್ತ್ರೀಯವಾದ ಬರವಣಿಗೆಗಳಲ್ಲಿ ಉದಾ: ಗ್ರೀಕ್ ಸಂಸ್ಕೃತಿ, ರೋಮನ್ ಸಂಸ್ಕೃತಿ ಹೀಗೆ ಇನ್ನೊಂದು ಅರ್ಥದಲ್ಲಿಯೂ ಬಳಸುತ್ತೇವೆ.

ಒಟ್ಟಿನಲ್ಲಿ ಸಂಸ್ಕೃತಿ ಎಂಬ ಪದವನ್ನು ಜೀವನ ಕ್ಷೇತ್ರದ ಸರ್ವಸಿದ್ಧಿಗಳಿಗೂ ಖಂಡಿತವಾಗಿ ಬಳಸಬಹುದೆಂಬುದು ಸ್ಪಷ್ಟವಾಗುತ್ತದೆ. ಜ್ಞಾನ, ನಂಬಿಕೆಗಳು, ಕಲೆಗಳು, ನೀತಿಗಳು, ಕಾನೂನುಗಳು, ಒಂದು ಸಮಾಜದ ಸದಸ್ಯನಾಗಿ ಮನುಷ್ಯ ಪಡೆಯಬಹುದಾದ ರೂಢಿ ಹಾಗೂ ಸಾಮರ್ಥ್ಯಗಳು ಇವೆಲ್ಲ ಸಂಸ್ಕೃತಿಯ ವಲಯದಲ್ಲಿ ಬರುತ್ತವೆಂದು ಒಂದು ಅಭಿಪ್ರಾಯವುಂಟು. "ಪೂರ್ವಜರಿಂದ ಪಡೆದ ಕಲಾವಸ್ತುಗಳು, ಲೇಸುಗಳು, ಆಸ್ತಿಗಳು, ಯಂತ್ರ ತಂತ್ರವಿಧಾನಗಳು, ಭಾವನೆಗಳು, ಸಂಪ್ರದಾಯಗಳು ಮತ್ತು ಮೌಲ್ಯಗಳು ಸಾಂಸ್ಕೃತಿಕ ಸಂಗತಿಗಳೆಂದು ಗಣನೆಗೊಳ್ಳುತ್ತವೆ" (ದೇ.ಜ.ಗೌ. ಗದುಗಿನ ಭಾರತ: ಒಂದು ಸಾಂಸ್ಕೃತಿಕ ಅಧ್ಯಯನ: ಪು.೧೮) ಎಂಬುದು ಮತ್ತೊಂದು ಮತ. ಮತ, ಧರ್ಮ, ಕಲೆ, ಭಾಷೆ, ಆರ್ಥಿಕ ವ್ಯವಸ್ಥೆ, ರಾಜಕೀಯ ಸಂಘಟನೆ, ಸಾಮಾಜಿಕ ಸಂಸ್ಥೆಗಳು, ಯಂತ್ರ ತಂತ್ರಗಳು, ವಿಜ್ಞಾನ, ಮಾನವನ ಅಂತರಂಗ ವಿಚಾರಗಳು ಇವು ಸಂಸ್ಕೃತಿಯ ಮೂಲಸ್ಥಾನಗಳೆಂದು ಅನೇಕ ವಿದ್ವಾಂಸರು ಒಪ್ಪಿಕೊಂಡಿದ್ದಾರೆ. ವಿದ್ವಾಂಸರ ಪ್ರಕಾರ ಸಂಸ್ಕೃತಿಯ ವಲಯದಲ್ಲಿ ಸೇರಬಹುದಾದ ಸಂಗತಿಗಳನ್ನು ಗಮನಿಸಿದಾಗ ಅದು ಅನೇಕ ವಸ್ತುಗಳು ಕೂಡಿ ಸಿದ್ಧಿಗೊಂಡ ರಸಪಾಕ ಅಥವಾ ರಸಾಯನವೆಂದು ಹೇಳಬಹುದು.

ಸಂಸ್ಕೃತಿಯೆಂಬುದು ಸಮ್ಮಿಶ್ರಣರೂಪದ್ದಿರುತ್ತದೆ. ನಿತ್ಯಪರಿವರ್ತನಾಶೀಲವಾಗಿರುತ್ತದೆ. ಅಲ್ಲದೇ ಒಂದು ಜನಾಂಗ ಇನ್ನೊಂದು ಜನಾಂಗದಿಂದ ಎರವಲು ಪಡೆದುದಾಗಿರುತ್ತದೆ. ಭಾರತೀಯ ಸಂಸ್ಕೃತಿಯ ಉತ್ತಮಾಂಶಗಳಾದ ಮದುವೆ ಪದ್ಧತಿ, ಯೋಗಸಾಧನೆ ಮುಂತಾದುವುಗಳನ್ನು

ಪಾಶ್ಚಿಮಾತ್ಯರು ಅನುಕರಿಸುವುದೇ ಇದಕ್ಕೆ ಉದಾಹರಣೆ. ಸಂಸ್ಕೃತಿಯೆಂದರೆ ಹಿಂದಿನಿಂದ ಬಂದ ಇಂದಿರುವ ಹಾಗೂ ಮುಂದೆ ಸೇರಿಸಿಕೊಳ್ಳಲಿರುವ ಈ ಎಲ್ಲಾ ಭಾವನೆಗಳ ಆಚರಣೆಗಳ ಮಿಶ್ರಣವಾಗಿದೆ.

ಆದರೆ ಭಾರತವಾಗಲಿ, ಕರ್ನಾಟಕವಾಗಲಿ ಇಲ್ಲಿರುವ ಇಡೀ ಸಮುದಾಯ ತಮ್ಮಷ್ಟಕ್ಕೆ ಒಂದು 'ಸಂಸ್ಕೃತಿ'ಯನ್ನು ಹೊಂದಿಲ್ಲ. ವಿವಿಧ ಜಾತಿ, ಧರ್ಮ, ವರ್ಗ, ಜನಾಂಗಗಳ ಜನರು ವಾಸಮಾಡುವ ಇಲ್ಲಿ 'ಒಂದು' ಸಂಸ್ಕೃತಿ ಇರಲು ಸಾಧ್ಯವೂ ಇಲ್ಲ, ಅದು ಸಾಧುವು ಅಲ್ಲ. ಹೀಗೆ ಒಂದು ಸಮುದಾಯವು ಬದುಕುವ ಆಲೋಚಿಸುವ, ಸೃಷ್ಟಿಸುವ, ನಂಬುವ, ಆಚರಿಸುವ ಸಮಷ್ಟಿಗುಣವನ್ನು ಒಳಗೊಂಡ ಪರಿಭಾಷೆಯಾಗಿ 'ಸಂಸ್ಕೃತಿ'ಯನ್ನು ನಾವು ಪರಿಭಾವಿಸಬಹುದಾಗಿದೆ. ಹಾಗೂ ಅದು ಸಹಜವಾಗಿ ಇರುವ ಬದಲಾಗುತ್ತಿರುವ ಒಂದು ಗುಣಲಕ್ಷಣವಾಗಿದೆ.

ಅನೇಕ ವಿದ್ವಾಂಸರು ಸಂಸ್ಕೃತಿ ಮತ್ತು ನಾಗರಿಕತೆಗಳನ್ನು ಏಕಾರ್ಥದಲ್ಲಿಯೂ ಬಳಸುವುದುಂಟು. ಆದರೆ ಇವೆರಡಕ್ಕೂ ಸೂಕ್ಷ್ಮ ವ್ಯತ್ಯಾಸಗಳಿರುವುದನ್ನು ಸಹ ಕಂಡುಕೊಂಡಿದ್ದಾರೆ. "Culture is what we are; civilization is what we use" ಎಂಬ ಪ್ರಸಿದ್ಧವಾದ ಮಾತಿನಲ್ಲಿ ಅವೆರಡರ ವ್ಯತ್ಯಾಸಗಳನ್ನು ಕೆಲವರು ತೋರ್ಪಡಿಸುತ್ತಾರೆ.

ಸೂಟುಬೂಟು ಹಾಕಿಕೊಂಡು ಪರಸ್ತ್ರೀಯರೊಂದಿಗೆ ಅಸಭ್ಯವಾಗಿ ನಡೆದುಕೊಳ್ಳುವವನನ್ನು ನಾಗರಿಕನೆನ್ನಬಹುದೇ ಹೊರತು 'ಸಂಸ್ಕೃತಿ' ಹೊಂದಿದವನೆಂದು ಭಾವಿಸಲಿಕ್ಕಾಗದು. "ಧರ್ಮದ ಕ್ರಿಯಾತ್ಮಕ ರೂಪವೇ ಕರ್ಮ'ವಾಗುವಂತೆ 'ಸಂಸ್ಕೃತಿ' ಕ್ರಿಯೆಯ ರೂಪವನ್ನು ಪಡೆದಾಗ ನಾಗರಿಕತೆಯಾಗುತ್ತದೆ". (ಅದೇ ಪು.೧೯) ದೀನದಲಿತರಿಗಾಗಿ ಮನ ಕರಗದ ಕಣ್ಣೀರು ಹರಿಸದ ಮಾನವ ಅಸಂಸ್ಕೃತನೆಂದು ವಿವೇಕಾನಂದರು ಹೇಳುತ್ತಾರೆ. ಮಾನವ ಕಲ್ಯಾಣಕ್ಕಾಗಿ ದೀನದಲಿತೋದ್ಧಾರಕ್ಕಾಗಿ ಪ್ರಾಣತ್ಯಾಗಕ್ಕೆ ಸಿದ್ಧರಾದ ಯೇಸು, ಬುದ್ಧ, ಬಸವೇಶ್ವರ, ಗಾಂಧೀಜಿ, ಲಿಂಕನ್, ಲೆನಿನ್, ಮಂಡೇಲಾ ಮೊದಲಾದ ದೇವಮಾನವರು ಉಚ್ಚ ಸಂಸ್ಕೃತಿಯ ಅವತಾರ ಸ್ವರೂಪರಾಗಿದ್ದಾರೆ. ಸಂಸ್ಕೃತಿ ಹೆಚ್ಚು ಆನಂದ, ಹೆಚ್ಚು ಬೆಳಕು, ಹೆಚ್ಚು ಬಾಳು, ಹೆಚ್ಚು ಅನುಕಂಪ ಇವುಗಳಿಗೆ ಪ್ರಧಾನ ಲಕ್ಷಣವಾಗಿ ಉಳ್ಳ ಅಂತರಂಗಿಕವಾದ, ಆತ್ಮಸಂಬಂಧಿಯಾದ ಕ್ರಿಯೆ. ಅದನ್ನು ಹೃದಯದ ಒಲವು. ಬುದ್ಧಿಯ ಬೆಳಕು (Sweetness and light) ಎಂಬ ಎರಡು ಮಾತುಗಳಿಂದ ನಿರ್ದೇಶಿಸಬಹುದು (ಚಿ.ಮೂ. ೨೦೦೮. ಪು.೮) ಎಂದು ಎಂ.ಚಿದಾನಂದಮೂರ್ತಿಯವರು ಹೇಳುತ್ತಾರೆ.

ಒಟ್ಟಿನಲ್ಲಿ ಮನುಷ್ಯನ ವಿವೇಕಯುತ ವರ್ತನೆಯ ಮೊತ್ತವನ್ನು ಸಂಸ್ಕೃತಿ ಎಂದು ಕರೆಯಬಹುದು. ಸಾಂಸ್ಕೃತಿಕ ಅಂಶಗಳು ಅಲಿಖಿತ ಶಾಸನಗಳಾಗಿದ್ದು ಸಮಷ್ಟೀ ಪ್ರಜ್ಞೆಯಿಂದ ಸಾಕ್ಷೀಕರಿಸಿದ ಶಾಸನಗಳ ಅಧೀನದಲ್ಲೇ ಮನುಷ್ಯ ತನ್ನತನವನ್ನುಳಿಸಿಕೊಂಡು ಬದುಕಬೇಕಾಗುತ್ತದೆ.

ಕಲಿತರ್ ಕುರುಬಿಂಸೆಡೆದರ್।
ತಲೆಗೆಟ್ಟರ್ ಗರುವದಿಂದಲೈಸಿರಿವಂತರ್
ತಿಳಿವಿಲ್ಲದರಿನ್ನುಳಿದರ್।
ನೆಲೆಗಾಣದೆ ಪುಟ್ಟಿದೆಡೆಯೆ ಸಂಸ್ಕೃತಿಯಳಿಗುಂ॥

ಸಂಸ್ಕೃತಿಯೆಂಬುದು ಬರಿಯ ವಿದ್ಯೆಯಲ್ಲ; ಅದು ವಿದ್ಯಾಕುಸುಮಪರಾಗ. ಅದು ಸಾಹಿತ್ಯ ಪರಾಮರ್ಶೆಯ ಮತ್ತು ಲೋಕಾನುಭವವಿವೇಕದ ದಾಂಪತ್ಯದಿಂದ ಜನಿಸುವ ಒಂದಾನೊಂದು ಸಕಲ ಸಮಾಧಾನಕರವಾದ ಶೀಲಸೌಭಾಗ್ಯ. "ಅದು ಜೀವನದ ನಾನಾ ವಿಷಯಗಳ, ನಾನಾ ಧ್ಯೇಯಗಳ, ನಾನಾ ತತ್ವಗಳ, ನಾನಾ ಧರ್ಮಗಳ– ಮೌಲ್ಯ ತಾರತಮ್ಯ ಜ್ಞಾನದಿಂದಾದ ಸಮನ್ವಯ ಸ್ವಾರಸ್ಯ ಅದೇ ನಯ–ವಿನಯ, ಮರ್ಯಾದೆ." (ಗುಂಡಪ್ಪ ಡಿ.ವಿ. ೧೯೫೫. ಪು.೧೧

ಮೂಲಭೂತವಾಗಿ 'ಸಂಸ್ಕೃತಿ' ಪದದಂತೆಯೇ 'ಸಾಂಸ್ಕೃತಿಕ ' ಎಂಬ ಪದ ಕೂಡ ನಿಖರವಾದ ಸ್ಪಷ್ಟವಾದ ಅರ್ಥವನ್ನು ಪಡೆದು ಚಲಾವಣೆ ಆಗುತ್ತಿಲ್ಲ. ಇದರ ಅರ್ಥ ಹಾಗೂ ಬಳಕೆಯಲ್ಲಿ ವಿಪರೀತವಾದ ಗೊಂದಲಗಳೂ ಅರ್ಥ ಸ್ಖಾಲಿತ್ಯಗಳೂ ಇವೆ. 'ಸಾಂಸ್ಕೃತಿಕ' ಎಂದರೆ ಸಾಹಿತ್ಯ, ಸಂಗೀತ, ಚಿತ್ರ ಇತ್ಯಾದಿ ಕಲೆಗಳಿಗೆ ಸಂಬಂಧಿಸಿದುದು: ಅದು ಸಮುದಾಯಗಳ ಜೀವನ ವಿಶಿಷ್ಟ ವಿವರಗಳಿಗೆ ಸಂಬಂಧಿಸಿದ ಲೋಕ. ಇಲ್ಲಿ ಸಮುದಾಯ ವಿಶಿಷ್ಟವಾದ ಸಾಹಿತ್ಯ, ಸಂಗೀತ ಕಲೆಗಳ ಜೊತೆಗೆ ಅವರ ಉಡುಗೆ–ತೊಡುಗೆ, ಆಚರಣೆಗಳೂ ಇವೆ. "ಸಂಸ್ಕೃತಿಯು ಮಾನಸಿಕವಾಗಿ ನಮ್ಮ ಆಲೋಚನಾ ಕ್ರಮವನ್ನು ಜನಪರವಾದ ದಿಕ್ಕಿನಲ್ಲಿ ಬದಲಾಯಿಸುವ ತಾತ್ವಿಕತೆ; ಅದು ಧಾರ್ಮಿಕ ಆದರ್ಶ ಹಾಗೂ ಮೌಲ್ಯಗಳಿಗೆ ಸಂಬಂಧಿಸಿದುದು." (ತರೀಕೆರೆ ರಹಮತ್, ಸಾಂಸ್ಕೃತಿಕ ಅಧ್ಯಯನ: ಪು.೪೮) ಹೀಗೆ ಮೇಲಿನಂತೆ ಎಲ್ಲೆಡೆಗೆ ಆಕಾರಗೊಳ್ಳುವ, ನೀರಿನಂತೆ ಎಲ್ಲಾ ಅಳತೆಯ ಪಾತ್ರೆಗಳಿಗೆ ಒಗ್ಗುವ ಈ 'ಸಾಂಸ್ಕೃತಿಕ'ವೆಂಬ 'ವಿಶೇಷಣ'ವನ್ನು ಬಳಸುವಾಗ ಆಯಾ ಅಧ್ಯಯನಕಾರರೇ ಅದಕ್ಕೊಂದು ತಾತ್ವಿಕ ಚೌಕಟ್ಟನ್ನು ನಿರ್ಮಿಸಿಕೊಳ್ಳಬೇಕಾಗುತ್ತದೆ. "ಸಾಂಸ್ಕೃತಿಕ ಅಧ್ಯಯನವೆಂಬುದು ವಸ್ತುವಿನ ಆಯ್ಕೆ ಮತ್ತು ಅದನ್ನು ನೋಡುವ ದೃಷ್ಟಿಕೋನ ಈ ಎರಡನ್ನು ಒಳಗೊಂಡ ಒಂದು ಅಧ್ಯಯನ ವಿಧಾನವಾಗಿದೆ". (ಅದೇ ಪು. ೪೮) ಇಲ್ಲಿ ವಸ್ತುವಿನ ಆಯ್ಕೆಗಿಂತಲೂ ಪ್ರಮುಖವಾಗಿ ಅದನ್ನು ನೋಡುವ ದೃಷ್ಟಿಕೋನವೆಂಬ ಅಂಶ ಪ್ರಧಾನವಾಗುತ್ತದೆ. ಅಧ್ಯಯನದ ಹಲವು ಮಾದರಿಗಳಿರುವಂತೆ ಸಾಂಸ್ಕೃತಿಕ ಅಧ್ಯಯನವೆಂಬುದು ಕೂಡ ಈಚೆಗೆ ಪ್ರಚಲಿತಕ್ಕೆ ಬಂದ, ಹೆಚ್ಚು ಜನಪ್ರಿಯವಾದ ಅಧ್ಯಯನ ವಿಜ್ಞಾನವಾಗಿದೆಯೆಂಬುದನ್ನು ಗಮನಿಸಿದರೆ ಇದರ ವ್ಯಾಪಕತೆ ಅರ್ಥವಾಗುತ್ತದೆ.

ದೃಷ್ಟಿಕೋನವೆಂಬುದು ಒಂದು ವಿಶಿಷ್ಟ ಬಗೆಯ ನೋಟ ಕ್ರಮವೇ ಆಗಿದೆ. ಅಧ್ಯಯನಕ್ಕೆ ಆರಿಸಿಕೊಂಡ ವಸ್ತುವನ್ನು ಬೇರೆ ಬೇರೆ ಕೋನಗಳಿಂದ, ಬೇರೆ ಬೇರೆ ಅನುಭವಗಳ ಮುಖೇನ

ಪ್ರವೇಶಿಸಿ ಅಲ್ಲಿನ ಜೀವಸತ್ವವನ್ನು ಹೊರಗೆಳೆಯುವುದೇ ಸಾಂಸ್ಕೃತಿಕ ಅಧ್ಯಯನದ ರೀತಿಯೆನ್ನಬಹುದು. 'ಸಾಂಸ್ಕೃತಿಕ ಅಧ್ಯಯನ' ಎಂಬುದು ಒಂದು ಅಧ್ಯಯನ ಶಿಸ್ತಾಗಿರುವುದರಿಂದ ಇದನ್ನು ನಿಖರವಾಗಿ ವ್ಯಾಖ್ಯಾನಿಸಬೇಕಾದ ಅಗತ್ಯವಿದೆ. ಸಾಹಿತ್ಯದ ಅಧ್ಯಯನ ಇಂದು ಕೇವಲ ಶುದ್ಧ ಸಾಹಿತ್ಯದ ಅಧ್ಯಯನವಾಗುಳಿದಿಲ್ಲ ಮತ್ತು ಹಾಗೆ ಉಳಿಯಬೇಕಾದ್ದರ ಅಗತ್ಯವೂ ಇಲ್ಲ. ಆದ್ದರಿಂದ ಸಾಹಿತ್ಯ ಕೃತಿಯೊಂದರೊಡನೆ ನಡೆಸುವ ಬೇರೆ ಬೇರೆ ದೃಷ್ಟಿಕೋನಗಳ ಅನುಸಂಧಾನವೇ 'ಸಾಂಸ್ಕೃತಿಕ ಅಧ್ಯಯನ'ವೆಂದು ಪರಿಗಣಿಸಬಹುದು. ಇದು ಬೇರೆ ಬೇರೆ ಶಿಸ್ತುಗಳ ಮೂಲಕ ಕೃತಿಯೊಂದನ್ನು ಪ್ರವೇಶಿಸುವಂತೆಯೇ ಬೇರೆ ಬೇರೆ ಪ್ರಜ್ಞಾವಲಯದ ಅಧ್ಯಯನಕಾರರೂ ಕೃತಿಗಳ ಅನುಸಂಧಾನ ಮಾಡುವ ಅಧ್ಯಯನದ ಅನುಕೂಲವನ್ನು ಒದಗಿಸುತ್ತದೆ. ಹೀಗಾದಾಗ ಸಾಹಿತ್ಯ ಕೃತಿಯೊಂದರ ಮೂಲಕ ಜೀವನವಿಧಾನವೊಂದರ ಸಮಗ್ರ ಅಧ್ಯಯನ ನಡೆಸುವುದು ಸಾಧ್ಯವಾಗುತ್ತದೆ.

ಬದುಕಿನ ಅತ್ಯಂತ ಸಣ್ಣ ವಿವರವೂ ಸಾಮುದಾಯಿಕ ನೆಲೆಯಲ್ಲಿ ಅತ್ಯಂತ ಮಹತ್ವದ ಅಂಶವಾಗಬಹುದು. ಇಂಥ ಬದುಕಿನ ಗರ್ಭದಲ್ಲಿಯೇ ಸಾಹಿತ್ಯ ಕೃತಿಯೊಂದು ಜೀವ ತಳೆಯುತ್ತದೆ. ಆದ್ದರಿಂದಲೇ ಅದರ ಒಳವಿವರಗಳು ಬದುಕಿನ ಊರ್ಧ್ವಮುಖದೆಡೆಗೆ ಮುಖ ಮಾಡಿರಬೇಕಾಗುತ್ತದೆ. ಜೀವನದ ಸಂಕಷ್ಟಗಳಿಂದ, ನೋವುಗಳಿಂದ, ಉಸಿರುಗಟ್ಟಿಸುವ ವಾತಾವರಣದಿಂದ ಪಾರಾಗುವ ಕಿರುದಾರಿಗಳನ್ನು ಅದು ತನ್ನ ಆಪ್ತತೆಯ ದೂರದೃಷ್ಟಿಗಳ ಮೂಲಕ ಹಿಡಿದುಕೊಡಬೇಕಾಗುತ್ತದೆ. ಇದು ಪಲಾಯನದ ದಾರಿಯಾಗದೆ ಬದುಕನ್ನು ಎದುರಿಸುವ ಮಾರ್ಗವಾಗಿದೆ. ಹಾಗೆಂದೇ ಒಂದು ಉತ್ತಮ ಸಾಹಿತ್ಯಕೃತಿಯು ಕೇವಲ ಸಾಹಿತ್ಯಕ ಮೌಲ್ಯದಲ್ಲಿ ವಿರಮಿಸದೆ ಅನೇಕ ಆಕರ ಸಂಗತಿಗಳ ಮೂಲಕ ತೆರೆದುಕೊಳ್ಳುತ್ತಾ ತಾನೇ ವ್ಯಕ್ತಿಯೆದುರು ತೆರೆದ ಬದುಕಾಗುತ್ತದೆ; ಸಮಷ್ಟಿಯಾಗುತ್ತದೆ; ಸಾರ್ವತ್ರೀಕರಣಗೊಳ್ಳುತ್ತದೆ. ಆ ಮೂಲಕ ಮನುಷ್ಯನ ಸಮೂಹದ ಬೇಕು-ಬೇಡಗಳನ್ನು, ಸರಿ-ತಪ್ಪುಗಳನ್ನು, ಒಲವು-ನಿಲುವುಗಳನ್ನು ವಿಮರ್ಶಿಸಿ, ಜೀವನದ ದೃಷ್ಟಿಯನ್ನು ನೀಡುತ್ತದೆ.

ಅನ್ಯಭಾಷೆಯ ಸಾಹಿತ್ಯವನ್ನು ತನ್ನ ಭಾಷೆಗೆ 'ತರ್ಜುಮೆ' ಮಾಡುವ ಮೂಲಕ ಸಾಹಿತ್ಯದಲ್ಲಿ ವೈಶಾಲ್ಯತೆ ಹಾಗೂ ವೈವಿಧ್ಯತೆಗಳು ದೊರೆಯುವುದಕ್ಕೆ ಕಾರಣವಾಗುತ್ತವೆ. ಒಮ್ಮೊಮ್ಮೆ ಇವೆಲ್ಲ ಒಳಗೊಂಡ ಸಂಮಿಶ್ರರೂಪದ ಸಾಹಿತ್ಯ ಮತ್ತು ಸಾಂಸ್ಕೃತಿಕ ಸಾಮಗ್ರಿಗಳು ವಾಂಙ್ಮಯ ಪರಂಪರೆಯಲ್ಲಿ ಗೋಚರಿಸುತ್ತವೆ. ಅಂದರೆ ಕಾಲ್ಪನಿಕ; ಪೌರಾಣಿಕ; ಅನುಭವದ ವಾಸ್ತವಿಕ ಮತ್ತು ಚಾರಿತ್ರಿಕ; ಎರವಲು ಮತ್ತು ಭಾಷಾಂತರದ ಮೂಲಕ ಸಾಹಿತ್ಯದ ಹರಹು ಹಾಗೂ ಸಾಹಿತ್ಯದಲ್ಲಿ ಮಾನವ ಸಮಾಜದ ವಿವಿಧ ಮುಖಗಳು ದೊರೆಯುವ ಸಾಧ್ಯತೆಗಳನ್ನು ಗುರುತಿಸಿಕೊಳ್ಳಬಹುದಾಗಿದೆ. ಇದರಿಂದ

ಸಾಹಿತ್ಯವು ಕೇವಲ ಕಥೆ, ಪಾತ್ರ ಮಾತ್ರವಾಗದೆ ಭಾಷೆ, ಚರಿತ್ರೆ, ಪುರಾಣ, ಜೀವನ, ಧರ್ಮ ಮುಂತಾದುವುಗಳಿಂದ ಶೋಭೆಗೊಳ್ಳುವ ಸಂಸ್ಕೃತಿಯ ಪ್ರತಿಬಿಂಬವಾಗುತ್ತದೆ.

ಈ ದೃಷ್ಟಿಯಿಂದ 'ಭೀಮಕವಿಯ ಬಸವಪುರಾಣ: ಸಾಂಸ್ಕೃತಿಕ ಅಧ್ಯಯನ'ಕ್ಕೆ ಒಳ್ಳೆಯ ಸಾಮಗ್ರಿಯೆನಿಸುತ್ತದೆ. ಈ ಮೇಲಿನ ಎರಡು ವಿವರಣೆಗಳಲ್ಲಿ ಎರಡನೆಯ ವಿವರಣೆಯನ್ನು ಅಂಗೀಕರಿಸಿ ಬಸವಪುರಾಣದಲ್ಲಿ ಎರಕಗೊಂಡಿರುವ ಸಾಮಾಜಿಕ ಜೀವನ, ಧಾರ್ಮಿಕ ಜೀವನ, ರಾಜಕೀಯ ಜೀವನ, ಕಲೆ-ಸಂಗೀತ, ಕುಶಲಕಲೆ ಇತ್ಯಾದಿ ಸಾಂಸ್ಕೃತಿಕ ಅಂಶಗಳನ್ನು ಹೆಕ್ಕಿ ತೆಗೆಯುವ ಪ್ರಯತ್ನ ಮಾಡಲಾಗುವುದು.

ಅಧ್ಯಾಯ–ಮೂರು

ಕವಿ–ಪೂರ್ವಾಪರಗಳು: ಕೃತಿನಾಯಕ–ಪೂರ್ವಾಪರಗಳು

ಅಧ್ಯಾಯ–ಮೂರು
ಕವಿ–ಪೂರ್ವಾಪರಗಳು: ಕೃತಿನಾಯಕ–ಪೂರ್ವಾಪರಗಳು

ಅ. ಕವಿ–ಪೂರ್ವಾಪರಗಳು :

ಪ್ರಾಚೀನ ಕನ್ನಡ ಕವಿಗಳು ತಮ್ಮ ಸ್ವಕೀಯ ವಿಚಾರವಾಗಿ ಹೇಳಿಕೊಂಡಿರದ ಕಾರಣ ಅವರ ವ್ಯಕ್ತಿಗತ ಇತಿಹಾಸ ಗೋಜಲಾಗಿ ಬಿಡುತ್ತದೆ. ಆದರೂ ಅವರ ಕೃತಿಯಲ್ಲಿಯ ವಿಚಾರಗಳನ್ನು ಆಧರಿಸಿ ವೈಯಕ್ತಿಕ ವಿಷಯಗಳನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡಬೇಕಾಗುತ್ತದೆ. ಅಲ್ಲದೇ ಕವಿಯ ಸಮಕಾಲೀನ ಹಾಗೂ ಉತ್ತರಕಾಲೀನ ಕವಿಗಳ ಕೃತಿಗಳಲ್ಲಿಯೂ ಕೆಲವು ಮಾಹಿತಿಗಳು ಸಿಗುತ್ತವೆ.

ಐತಿಹಾಸಿಕ ವ್ಯಕ್ತಿಯಾದ ಬಸವಣ್ಣನನ್ನು ಪವಾಡ ಪುರುಷನನ್ನಾಗಿ ಚಿತ್ರಿಸಿದ ಮೊಟ್ಟ ಮೊದಲ ವ್ಯಕ್ತಿ ಹರಿಹರ. ಇವನ ಕೃತಿ ರಸನಿಷ್ಠವಾದ ಕಾವ್ಯವಾಗಿದ್ದರೂ ಅದು ಪವಾಡಗಳಿಂದ ಹೊರತಾಗಿಲ್ಲ . ನಂತರ ಮೌಖಿಕ ಪರಂಪರೆಯಿಂದ ಶ್ರೀಶೈಲದಲ್ಲಿ ಯಾತ್ರಾರ್ಥಿಗಳ ಮೂಲಕ ಬಸವಣ್ಣನ ಕಥೆ ಕೇಳಿ, ವಚನಗಳನ್ನು ಓದಿ ಬಸವಣ್ಣನ ಚರಿತ್ರೆಯನ್ನು ಇನ್ನಷ್ಟು ಪವಾಡಗಳ ಮೂಲಕ ಕಥೆ ಹೆಣೆದವನು ಪಾಲ್ಕುರಿಕೆ ಸೋಮನಾಥ. ಈ ಪಾಲ್ಕುರಿಕೆ ಸೋಮನಾಥನ ದ್ವಿಪದ ಛಂದಸ್ಸಿನಲ್ಲಿಯ ತೆಲುಗು 'ಬಸವಪುರಾಣಮು' ಕೃತಿಯನ್ನು ಕನ್ನಡಿಗರ ಮನ ಹಾಗೂ ಮನೆ ಬಾಗಿಲಿಗೆ ತಂದವನು ಭೀಮಕವಿ. ಹಾಗೆಂದ ಮಾತ್ರಕ್ಕೆ 'ಭೀಮಕವಿಯ ಬಸವಪುರಾಣ' ಸೋಮನಾಥನ ತೆಲುಗು ಕೃತಿಯ ತದ್ವತ್ ಕೃತಿಯಲ್ಲ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಭೀಮಕವಿಯು ಅನೇಕ ವಿಷಯಗಳಲ್ಲಿ ಸೋಮನಾಥನನ್ನು ಅನುಸರಿಸಿದ್ದರೂ ತನ್ನ ಅಭಿಲಾಷೆಗೆ ತಕ್ಕಂತೆ ಕೃತಿ ನಿರ್ಮಾಣದಲ್ಲಿ ಸ್ವಾತಂತ್ರ್ಯ ವಹಿಸಿದ್ದಾನೆ. ಸೋಮನಾಥ ಹೇಳದೆ ಇರುವ ಅನೇಕ ಕಥೆಗಳನ್ನು ಈತ ಹೇಳಿದ್ದಾನೆ. ಅವನ ಕಥಾವಿಸ್ತಾರವನ್ನು ಮೊಟಕುಗೊಳಿಸಿದ್ದಾನೆ. ಮೊಟಕಾದ ಕಡೆ ವಿಸ್ತರಿಸಿದ್ದಾನೆ. ಸೋಮನಾಥ ಇತರ ಪಂಡಿತರಿಂದ ತಿರಸ್ಕೃತವಾದ ದ್ವಿಪದ ಛಂದಸ್ಸನ್ನು ಅನುಸರಿಸಿದ್ದಾನೆ. ಭೀಮಕವಿಯೂ ಚಂಪೂ ಛಂದಸ್ಸನ್ನು ತಿರಸ್ಕರಿಸಿ ಸಹ ದೇಸಿ ಛಂದಸ್ಸಾದ ಷಟ್ಪದಿಯನ್ನು ಬಳಸಿದ್ದಾನೆ. ಭೀಮಕವಿಯ ಬಸವಪುರಾಣ ಮತ್ತು ಪಾಲ್ಕುರಿಕೆ ಸೋಮನಾಥನ ಕೃತಿಗಳ ತೌಲನಿಕ ಅಧ್ಯಯನವೆ

ಒಂದು ಮಾರ್ಗವಾಗುತ್ತದೆ. ಪ್ರಸ್ತುತ ಅಧ್ಯಯನಕ್ಕೆ ಇದು ಹೊರತಾದುದು. ಆದ್ದರಿಂದ ನಾವು ಕೇವಲ 'ಸಾಂಸ್ಕೃತಿಕ ' ದೃಷ್ಟಿಯಿಂದ ಅಧ್ಯಯನ ಪೂರೈಸುವ ನಿಟ್ಟಿನಲ್ಲಿ ಭೀಮಕವಿ ಹಾಗೂ ಅವನ ಬಸವಪುರಾಣವನ್ನು ಈ ಹಿನ್ನೆಲೆಯಲ್ಲಿ ವಿವೇಚಿಸುವ ಮಟ್ಟಕ್ಕೆ ಮಾತ್ರ ಸೀಮಿತಗೊಳಿಸಲಾಗಿದೆ. ಆದರೂ ಸಹ ಬಸವಪುರಾಣದ ಬಗ್ಗೆ ಹೇಳುವಾಗ ಅದು ಬಹುಪಾಲು ಸೋಮನಾಥನಿಗೂ ಸಲ್ಲುವುದೆಂಬ ಎಚ್ಚರಿಕೆಯನ್ನಿಟ್ಟುಕೊಂಡೆ ಕೃತಿಯ ಅವಲೋಕನ ಮಾಡಬೇಕಾಗುತ್ತದೆ.

೧. ಕವಿ

ಬಸವಪುರಾಣದ ಕರ್ತೃ ಭೀಮಕವಿ ಎಂಬುದು ಆತನ ಕೃತಿಯಿಂದಲೇ ತಿಳಿಯುತ್ತದೆ.

ವಿಮಳ ಸದ್ಗುರುಸೇವೆಯಲಿ ಜಂ
ಗಮಭಜನೆಯಲಿ ಲಿಂಗನಿಷ್ಠಾ
ಸಮತೆಯಲಿ ತನುಮನಧನಂಗಳನಿತ್ತಭವ ಭಕ್ತಿ
ಸಮಯವಾರ್ಧಿವಿವರ್ಧನೋಜ್ವಲ
ಹಿಮಗು ಶಿವಕವಿದೇವನಾತ್ಮಜ
ಸುಮತಿ ಭೀಮನುಭಯಕವಿತ್ವ ಸಮರ್ಥನುಸುರುವಡೆ (೧:೧೭)

ಹೆಸರಿಗೆ ತಕ್ಕ ಹಾಗೆ ಈತ ಭೀಮವ್ಯಕ್ತಿತ್ವದವನು. ಆದ್ದರಿಂದಲೇ ಷಡಕ್ಷರದೇವನು ಈತನನ್ನು ಕುರಿತು–'ತತಗರ್ವೋದ್ಧತದುರ್ವಿದಗ್ಧ ಜನತಾಹೃದ್ಭೀಮನಂ ಭೀಮನಂ.' (ಹಿರೇಮಠ ಆರ್. ಸಿ. ರಾಜಶೇಖರ ವಿಳಾಸ) (ಗರ್ವದಿಂದ ಉನ್ಮತ್ತರಾದ ಕುಪಂಡಿತರ ಹೃದಯಕ್ಕೆ ಭಯಂಕರನಾದ ಭೀಮಕವಿ) ಎಂದು ನುಡಿದಿದ್ದಾನೆ. ಈತನನ್ನು ಪದ್ಮಣಾಂಕ, ವಿರುಪಾಕ್ಷಪಂಡಿತರೂ ಸಹ ಸ್ಮರಿಸುತ್ತಾರೆ. ವಿರೂಪಾಕ್ಷ ಪಂಡಿತನು ತನ್ನ ಚೆನ್ನಬಸವಪುರಾಣದಲ್ಲಿ–

ಸರಸಕವಿ ಬಾಣಂ ಮಯೂರ ಭವಭೂತಿ ಸ
ದ್ವರ ಕಾಳಿದಾಸ ಮಲುಹಣ ಮಳಯರಾಜನತಿ
ಬಿರುದಂಕಕವಿ ರಾಘವಾಂಕ ಹಂಪೆಯ ಹರೀಶ್ವರ ಹಲಾಯುಧನುದ್ಭಟ
ಗುರುಪಂಡಿತೇಶ ಪಾಲ್ಕುರಿಕೆಯಾರಾಧ್ಯ ಭೀ
ಮರಸ ಮೊಗ್ಗೆಯ ಮಾಯಿದೇವ ಚಾಮರಸ ಶಂ
ಕರ ಕೆರೆಯ ಪದ್ಮರಸರಾದಿ ಶಿವಕವಿಗಳು ಬಲಗೊಂಡು ಕೃತಿವೇಳ್ವೆನು (ಚ.ಬ.ಪು.ಆ.೪)

ಎಂದಿದ್ದಾನೆ.

ಅಲ್ಲದೇ ಚಿಕ್ಕನಂಜೇಶನು–

ಹರಿದೇವ ಕೆರೆಯ ಪದ್ಮರಸ ರಾಘವದೇವ
ವರ ಜಕ್ಕಣಾಚಾರ್ಯ ಚಾಮರಸ ಭೀಮರಸ
ಗುರು ಮೂಗ್ಗೆಯಾಚಾರ್ಯ ಕಲ್ಲುಮಠದಾಚಾರ್ಯ ಸಿಂಗಿರಾಜಾಚಾರ್ಯರು
ಪರಮ ಪಾಲ್ಕುರಿಕೆ ಸೋಮಾಂಕ ಶುದ್ಧ ಪ್ರಸಾ
ದ್ಯರು ಮಹಾದೇವಯ್ಯರೆನಿಪ ಸದ್ಬ್ರಾಹ್ಮಣ
ದಿರವಾದ ಗಣ್ಯ ಪುಣ್ಯರ ಚರಣಕೆನ್ನೆರ್ದೆಯನೊಸೆದು ಪಾದುಕೆಗೆಯ್ವೆನು (ರಾಘವಾಂಕ ಚರಿತೆ: ಸಂ.೧)

ಎಂದು ಸ್ತುತಿಸಿದ್ದಾನೆ. ಇದರಿಂದ ಈತನೊಬ್ಬ ಮಹತ್ವದ ಕವಿ ಎಂದು ಅರಿವಾಗುತ್ತದೆ. ಭೀಮಕವಿಯ ತಂದೆ ಶಿವಕವಿದೇವ. ಹಿಮಗು ಶಿವಕವಿದೇವನಾತ್ಮಜ'(೧:೧೩) ಎಂಬುದರಿಂದ

ಇದು ಸ್ಪಷ್ಟಗೊಳ್ಳುತ್ತದೆ. ಅಲ್ಲದೆ ಭೃಂಗಿದಂಡಕದಲ್ಲಿ –

ಶಿವಕವಿ ದೇವಾರ್ಯರ ತನು
ಭವಾಗ್ರಣಿಯೆನಿಪ್ಪ ಭೀಮನಾಥಂ ಪೇಳ್ದೀ
ಪ್ರವಿಮಳ ಭೃಂಗೀಶ್ವರನೊ
ಪ್ಪುವ ದಂಡಕಂ ಸಮಾಪ್ತ ಮಂಗಳ ಮಹಾಶ್ರೀ (ಭೀಮಕವಿ ಭೃಂಗೀಶ್ವರದಂಡಕ, ೧:೨೪)

ಎಂಬ ಪದ್ಯದಲ್ಲಿಯ ಸೂಚನೆಯಂತೆ ಶಿವಕವಿದೇವನೆ ಈತನ ತಂದೆಯೆಂದು ಗೊತ್ತಾಗುತ್ತದೆ. ಅಲ್ಲದೇ ಇವನಿಗೆ 'ಅನಘದೇವಾರ್ಯ, (೧:೧೪) 'ಸುಕವಿದೇವ', 'ಶಿವಕವಿ ಶಿವದೇವ'ಎಂದು ಕರೆಯಲಾಗಿದೆ. ಇದರಲ್ಲಿ 'ದೇವ' ಎಂಬುದೇ ಇವನ ಹೆಸರಾಗಿರಬೇಕು ಎಂದು ಕವಿಚರಿತೆಕಾರರು ಅಭಿಪ್ರಾಯ ಪಡುತ್ತಾರೆ. (ಕರ್ನಾಟಕ ಕವಿಚರಿತೆ) ಆದರೆ ಆರ್.ಸಿ.ಹಿರೇಮಠ ಅವರು ಅನಘದೇವಾರ್ಯ ಎಂಬಲ್ಲಿ 'ಅನಘ' ಪದವನ್ನು ಶಿವಸೂಚಕವಾಗಿ ಬಳಸಿರುವ ಸಂಭವವಿದೆ 'ಶಿವಕವಿದೇವ', 'ಶಿವದೇವಕವಿ'ಎಂಬುದರ ಛಂದೋನಿಯಂತ್ರಿತ ರೂಪವಾಗಿದ್ದು ಭೀಮಕವಿಯ ತಂದೆಯ ಹೆಸರು 'ಶಿವದೇವ' ಎಂಬುದೇ ಸೂಕ್ತ ಎಂದು ಅಭಿಪ್ರಾಯ ಪಡುತ್ತಾರೆ. (ಬ.ಪು.ಪ್ರಸ್ತಾವನೆ: ಪು.೧೧)

ವಿಮಳ ಸದ್ಗುರುಸೇವೆಯಲಿ ಜಂ
ಗಮಭಜನೆಯಲಿ ಲಿಂಗನಿಷ್ಠಾ
ಸಮತೆಯಲಿ ತನುಮನಧನಂಗಳನಿತ್ತಭವ ಭಕ್ತಿ
ಸಮಯವಾರ್ಧಿವಿವರ್ಧನೋಜ್ವಲ
ಹಿಮಗು ಶಿವಕವಿದೇವನಾತ್ಮಜ...... (೧:೧೭)

ಎಂದು ಭೀಮಕವಿ ಹೇಳುತ್ತಾನೆ. ಆಂಧ್ರಭಾಷಾಸತ್ಕವಿಕೋವಿದ' (ರಾಘವಾಂಕಚಾರಿತ್ರಯ: ೧೫:೩) ನಾಗಿದ್ದನೆಂದು ಸಿದ್ಧನಂಜೇಶ ಹೇಳುತ್ತಾನೆ. ಆದರೆ ಇದುವರೆಗೆ ಈತನ ಕೃತಿಗಳಾವುವೂ ದೊರೆತಿಲ್ಲ.

೨. ಸ್ಥಳ :

ಶ್ರೀ ಮದಗಗಜಾವಾಮಭಾಗೋ
ದ್ಧಾಮವಪುರಭಿರಾಮನಭಿನುತ
ಸಾಮಗಾನಸ್ತೋಮ ಸರಸಪ್ರೇಮನರಿಭೀಮ
ಕಾಮತಾತಪಿತಾಮಹಪ್ರಮು
ಖಾಮರೇಂದ್ರಕ್ಷೇಮನಪ್ರತಿ
ನಾಮನೊಸೆದುದ್ಧರಿಸುಗೆಮ್ಮನು ಸಿದ್ಧವಟಧಾಮ (೧:೨)

ಹಾಗೂ

ಶ್ಯಾಮಳಾಂಗೀಸಂಗತಾಂಗಂ
ಶ್ಯಾಮಳಾಂಗದೃಗಂಕಪಾದಂ
ಶ್ಯಾಮಳಾಂಗಮದಾಪಹಾರಂ ಸಿದ್ಧವಟನಾಥ
ಶ್ಯಾಮಕಂಧರಗಮನಜನಕಂ
ಶ್ಯಾಮಕಂಧರರಾಜಕಟಕಂ
ಶ್ಯಾಮಕಂಧರನೀವನೀಕೃತಿಗತಿಚಮತ್ಕೃತಿಯ (೧:೬೨)

ಎಂಬ ಪದ್ಯಗಳ ಸೂಚನೆಯಂತೆ ಭೀಮಕವಿಯು ಆಂಧ್ರದ ಶ್ರೀಶೈಲದ ದಕ್ಷಿಣದಲ್ಲಿರುವ 'ಸಿದ್ಧವಟಪುರ' ಎಂಬ ಗ್ರಾಮದವನು ಎಂಬುದು ತಿಳಿಯುತ್ತದೆ. ಅಲ್ಲದೇ ಪೀಠಿಕಾ ಸಂಧಿಯಲ್ಲಿ ಪದ್ಯ ೨ ರಿಂದ ೫ ರವರೆಗೆ ತನ್ನ ಊರಿನ ಅಧಿದೇವರಾದ ಸಿದ್ಧವಟನಾಥನನ್ನು ಸ್ಮರಿಸುವುದರಿಂದ ಈತನ ಸ್ಥಳ ಸಿದ್ಧವಟಪುರವೆಂದು ಹೇಳಬಹುದು.

ಭೀಮಕವಿಯನ್ನು ವೇಮುಲವಾಡದ ಭೀಮಕವಿಯೆಂದು ಕರೆಯುವರೆಂದೂ ಈತನು ವಿಜಯನಗರದ ವೀರ ಬುಕ್ಕರಾಯನ ಕಾಲದಲ್ಲಿ (೧೩೫೫-೧೩೭೭) ಇದ್ದನೆಂದೂ, ದ್ರಾಕ್ಷಾರಾಮದ ಭೀಮೇಶ್ವರನ ವರಪ್ರಸಾದದಿಂದ ಆರಾಧ್ಯ ಬ್ರಾಹ್ಮಣರ ವಂಶದಲ್ಲಿ ಹುಟ್ಟಿ ಕನ್ನಡ ಮತ್ತು ತೆಲುಗು ದೇಶಗಳಲ್ಲಿ ಸಂಚರಿಸಿ ಅನಂತಪುರದ ಗಡೇಕಲ್ಲು ಗ್ರಾಮದಲ್ಲಿ ಸಮಾಧಿ ಹೊಂದಿದನೆಂದು ವ್ಯಾಕರಣತೀರ್ಥ ಚಂದ್ರಶೇಖರ ಶಾಸ್ತ್ರಿಗಳು ಅಭಿಪ್ರಾಯ ಪಡುವರು. (ವಿದ್ಯಾಶಂಕರ್ ಎಸ್. ಭೀಮಕವಿ ಬಸವಪುರಾಣ) ಜೋಳದರಾಶಿ ದೊಡ್ಡನ ಗೌಡರು ಸಹ 'ವೇಮುಲವಾಡದ ಭೀಮಕವಿ' ಹಾಗೂ 'ಸಿದ್ಧವಟಪುರದ ಭೀಮಕವಿ' ಹೀಗೆ ಇಬ್ಬರು ಭೀಮಕವಿಗಳಿರುವ ಸಂಗತಿಯನ್ನು ಪ್ರಸ್ತಾಪಿಸಿರುವರು.

ಅಲ್ಲದೇ ಸಿದ್ದನಂಜೇಶನ ರಾಘವಾಂಕ ಚಾರಿತ್ರದಲ್ಲಿಯೂ ಈತ ಸಿದ್ಧವಟಪುರದವನೆ ಎಂಬ ಮಾಹಿತಿ ಸಿಗುತ್ತದೆ. ಕವಿಚರಿತೆಕಾರರು ಈತನ ಸ್ಥಳದ ಬಗ್ಗೆ ಮೌನ ವಹಿಸಿದ್ದಾರೆ. ಸದ್ಯಕ್ಕೆ ಆಂಧ್ರಪ್ರದೇಶದ ಕಡಪಾ ಜಿಲ್ಲೆಯ ತಾಲ್ಲೂಕು ಸ್ಥಳವಾದ ಸಿದ್ಧವಟಪುರವೆ ಈತನ ಸ್ಥಳ ಎಂದು ಒಪ್ಪಿಕೊಳ್ಳಬಹುದು.

೩. ಕಾಲ :

ಕವಿಯ ಕಾಲ ೧೩೬೯. ಇದಕ್ಕೆ ಆಧಾರ ಬಸವಪುರಾಣ ಬರೆದು ಮುಗಿಸಿದ ಈ ಕೆಳಗಿನ ಕಾಲ ಸೂಚಿ ಪದ್ಯ.

ಕೋವಿದರು ಕೇಳ್ದೊಳ್ಳಿತೆನಲುಡು
ದೇವನಿಧಿನಯನೇಂದು ಸಂಖ್ಯೆಗ
ಲೋವಿ ಶಕವರುಷಂಗಳಾಗಲು ಸೌಮ್ಯವತ್ಸರದ
ಶ್ರಾವಣ ಬಹುಳ ಪಕ್ಷ ದಶಮೀ
ಜೀವವಾರದೊಳಾದಿ ವೃಷಭೇಂ
ದ್ರಾವತಾರದ ಬಸವಚರಿತೆ ಸಮಾಪ್ತವಾಯಿತ್ತು (೬೦:೬೨)

ಎಂಬ ಪದ್ಯದಲ್ಲಿ ಸ್ಪಷ್ಟವಾಗಿ ಕವಿ ತನ್ನ ಕಾಲವನ್ನು ಹೇಳಿಕೊಂಡಿದ್ದಾನೆ. ಅಂದರೆ ಬಸವಪುರಾಣವನ್ನು ಉಡುದೇವನಿಧಿನಯನೇಂದು ಸಂಖ್ಯಾತವಾದ ಸೌಮ್ಯವರ್ಷದಲ್ಲಿ (ಶಕ-೧೨೯೧) ೧೩೬೯ ರಲ್ಲಿ ಮುಗಿಸಿದಂತೆ ಹೇಳುತ್ತಾನೆ.

ಆದರೆ ಸಿದ್ಧನಂಜೇಶನ 'ರಾಘವಾಂಕ ಚಾರಿತ್ರ'ದಲ್ಲಿ ವಿವರ ಕೂತೂಹಲಕಾರಿಯಾಗಿದೆ.

ಶ್ರೀಶೈಲ ದಕ್ಷಿಣದ್ವಾರವೆನಿಸುವ ಶುಭಾ
ವಾಸವಹ ಸಿದ್ಧವಟಪುರದೊಳಿಹನಾಂಧ್ರ ಭಾ
ಷಾಸತ್ಕವಿತ್ವ ಕೋವಿದನಪ್ಪ ಶಿವಕವಿಪ್ರವರ ಶಿವದೇವನೆಂಬ (ರಾಘವಾಂಕಚಾರಿತ್ರ ೧೫:೩)

ಎಂಬ ಪದ್ಯದಲ್ಲಿಯ ಸೂಚನೆಯಂತೆ ಶ್ರೀಶೈಲ ದಕ್ಷಿಣದ್ವಾರವೆನಿಸುವ ಸಿದ್ಧವಟಪುರದಲ್ಲಿ ಆಂಧ್ರಭಾಷಾಸತ್ಕವಿತ್ವ ಕೋವಿದನಪ್ಪ ಶಿವಕವಿದೇವನೆಂಬನಿರುವನು. ಆತನು ಗುರುಲಿಂಗಜಂಗಮ ಸೇವಾರ್ಥವಾಗಿ ಪಂಪಾಪುರಕ್ಕೆ ಬಂದು ಹರೀಶ್ವರನಿಗೆ ನಮಸ್ಕರಿಸುವನು.

ಎನಗೆ ಸತ್ಪುತ್ರನಾದೊಡೆ ನಿಮ್ಮ ಪಾದ ಸೇವೆ
ಯನೆ ಮಾಡುತೋದುದೆಹ ರಾಘವಾಂಕನ ಸೇವೆ
ಯನೆ ಮಾಡಿಸುವೆನೋದಿಸುವೆನೆಂದು ಕಾರುಣ್ಯವಂ ಪಡೆದು ಮಗುಳುಮವನು. (ಅದೇ ೧೫:೪)

ತನಗೆ ಸತ್ಪುತ್ರನು ಹುಟ್ಟಿದರೆ ಹರೀಶ್ವರನ ಸೇವೆ ಮಾಡಿಸುತ ಆತನಲ್ಲಿ ಅಭ್ಯಾಸ ಮಾಡುತ್ತಿರುವ ರಾಘವಾಂಕನ ಸೇವೆ ಮಾಡಿಸುವೆನು. ಆತನಲ್ಲಿ ಓದಿಸುವೆನು ಎಂದು ಆಶೀರ್ವಾದ ಪಡೆದು ಶಿವದೇವನು ಸಿದ್ಧವಟಪುರಕ್ಕೆ ಹೋದನು.

ಶಿವದೇವನಾನಂದದಿಂದೆ ಪುತ್ರೋತ್ಸಾಹ
ಸುವಿಹಿತ ವಿಧಾನಮಂ ರಚಿಸಿ ಭೂತಳದ ಕವಿ
ನಿವಹಮಂ ಬೆಜ್ಜರಂಬಡಿಸಲು ಸಮರ್ಥನಹನೆಂದರಿದು ತಂದೆ ಸುತಗೆ (ಅದೇ ೧೫:೫)

ಕೆಲದಿನಗಳಲ್ಲಿಯೇ ಶಿವದೇವನಿಗೆ ಪುತ್ರೋತ್ಸವವಾಗುವುದು. ಮಗುವಿನ ಮುಖದ ಶಿವತೇಜವನ್ನು ಕಂಗಳ ಕಾಂತಿಯನ್ನು ಕಂಡ ಶಿವದೇವನು ಈತನು ಭೂತಳದ ಕವಿನಿವಹವನ್ನು ಅಚ್ಚರಿಗೊಳಿಸುವ ಕವಿಯಾಗುವನೆಂದು ಬಗೆದು ಆತನಿಗೆ 'ಭೀಮ' ಎಂದು ಹೆಸರಿಡುವನು. ಮಗು ಎಂಟು ವರುಷದವನಾದಾಗ ಆತನನ್ನು ಹಂಪೆಗೆ ಕರೆತಂದು ಹರಿಹರದೇವನಿಗೆ ಒಪ್ಪಿಸುವನು.

ವರ ತನಯನಂ ಸಮರ್ಪಿಸಿ ಪೋದ ಭಾವಕ್ಕೆ
ಹರಿಹರೇಶಂ ಬೆರಗುವಟ್ಟು ರಾಘವನ ಹ
ತ್ತಿರೆ ಕರೆದು ನೀನಖಿಳ ವಿದ್ಯೆಗಳನೀತಂಗೆ ಕಲಿಸೆಂದು ನಿರವಿಸಲೊಡಂ. (ಅದೇ ೧೫:೬)

ಶಿವದೇವನ ಭಕ್ತಿಭಾವವನ್ನು ಕಂಡು ಹರಿಹರದೇವನಿಗೆ ಆಶ್ಚರ್ಯವಾಗುವುದು. ತನ್ನ ಶಿಷ್ಯ ರಾಘವಾಂಕನನ್ನು ಕರೆದು, ಈತನಿಗೆ ಎಲ್ಲ ವಿದ್ಯೆಗಳನ್ನು ಕಲಿಸೆಂದು ಅಪ್ಪಣೆಕೊಡುವನು. ಗುರುವಿನ ಅಪ್ಪಣೆವಿಡಿದು ರಾಘವಾಂಕನು ಭೀಮನಿಗೆ ಸಕಲ ವಿದ್ಯೆಗಳನ್ನು ಕಲಿಸಿ ಪರಮಾನಂದದಲ್ಲಿ ಮೂಡಿ ಮುಳುಗುವನು.

ಕವಿತಾದಿ ವಿದ್ಯೆಗಳ ಕಲಿಸಿ ಹರಿಹರನ ಪಾ
ದವ ಕಾಣಿಸಿತೊಡೆ ಕಲಿತುದುನೆಲ್ಲವಂ ಕೇಳಿ
ತವೆ ಸಂತಸಂದಳೆದು ಕವಿತೆಯಂ ಪೇಳೆನಲು ಭೃಂಗಿದಂಡಕದ ರಚಿಸೆ (ಅದೇ ೧೫:೭)

ಕವಿತಾವಿದ್ಯೆಯಲ್ಲಿ ಪಾರಂಗತನಾದ ಭೀಮನನ್ನು ರಾಘವಾಂಕನು ಹರಿಹರದೇವನಲ್ಲಿಗೆ ಕರೆದೊಯ್ಯುವನು. ಆತನ ಕಾವ್ಯಶಕ್ತಿಯನ್ನು, ವಿದ್ಯಾನೈಪುಣ್ಯವನ್ನು ಕಂಡು ಹರಿಹರನು

ಸಂತೋಷಪಡುವನು. ತನ್ನ ಕಾವ್ಯರಚನಾ ಸಾಮರ್ಥ್ಯವನ್ನು ತೋರಿಸಲು ಭೀಮನು ಹರಿಹರನ ಸಮ್ಮುಖದಲ್ಲಿಯೇ ಭೃಂಗಿದಂಡಕವನ್ನು ರಚಿಸಿರುವನು. ಹರಿಹರನು ಮೆಚ್ಚಿ ಅದು ಶಿವಭಕ್ತಕರ್ಣಾಮೃತವೆಂದುಸುರಿ ಭೀಮಕವಿಯನ್ನು ಆಶೀರ್ವದಿಸಿ ಸಿದ್ಧವಟಪುರಕ್ಕೆ ಕಳುಹಿದನು.

ತಂದೆಯಂ ಕಂಡು ಸಾಷ್ಟಾಂಗನತಿಗೆಯ್ದು
ಪಲವಂದದಿಂ ತುತಿಸೆ ಬಿಗಿದಪ್ಪಿ ಮೂರ್ಧ್ನಘ್ರಾಣ
ದಿಂದ ಬಂದೆಯ ಕಂದಯೆಂದು ಮನ್ನಿಸಿ ಕಲಿತ ವಿದ್ಯಾ ಪರೀಕ್ಷೆಗೈದು. (ಅದೇ ೧೫:೮)

ಮನೆಗೆ ಬಂದ ಭೀಮಕವಿ ತಂದೆಗೆ ನಮಸ್ಕರಿಸಿದನು. ಶಿವದೇವನು ಆತನನ್ನು ಬಿಗಿದಪ್ಪಿ, ಆತನು ಕಲಿತ ವಿದ್ಯೆಯನ್ನು ಪರೀಕ್ಷಿಸಿ 'ಶಿವಕವಿಗಳ ಪ್ರೇಮದ ಕುವರನೇ, 'ಭಕ್ತವೃಂದದಾಜ್ಞೆಯನ್ನು ಶಿರಸಾವಹಿಸಿ ಜೀವಿಸು' ಎಂದು ಹರಕೆಯನ್ನಿತ್ತನು.

ಗುರುಲಿಂಗಜಂಗಮವನಾರಾಧಿಸುತ್ತೆ ಶಿವ
ಶರಣರ ಚರಿತ್ರಮಂ ಭೀಮ ಶಿವಕವಿ ಪೇಳು
ತಿರೆ ಪಾಲುಕುರಿಕೆ ಸೋಮೇಶ್ವರಂ ಶಿವದೇವನಂ ಸ್ವಪ್ನದಲ್ಲಿ ಬಂದು (ಅದೇ ೧೫:೯)

ಭೀಮಕವಿ ಗುರುಲಿಂಗಜಂಗಮವನಾರಾಧಿಸುತ್ತ ಶಿವಶರಣರ ಚರಿತ್ರೆಗಳನ್ನು ಹೇಳುತ್ತಿರಲು 'ಪಾಲ್ಕುರಿಕೆ ಸೋಮೇಶ್ವರ' ಮತ್ತು 'ಶಿವದೇವ ' ಸ್ವಪ್ನದಲ್ಲಿ ಬಂದು 'ಬಸವಪುರಾಣ'ವನ್ನು ರಚಿಸುವಂತೆ ಆಶೀರ್ವದಿಸಲು ಎಚ್ಚತ್ತು ಹರಗಣದ ನೇಮವನ್ನು ಪಡೆದು, ಭಕ್ತರು ಆದರಿಸುವಂತೆ ಅದನ್ನು ರಚಿಸಿ ಸುಖದಿಂದಿದ್ದನು ಎಂಬ ವಿಸ್ತಾರವಾದ ಕಥಾಲಹರಿಯನ್ನು ಸಿದ್ಧನಂಜೇಶನ ರಾಘವಾಂಕ ಚಾರಿತ್ರದಲ್ಲಿ ಕಾಣುತ್ತೇವೆ.

ಭೀಮಕವಿಯ 'ಉಡುದೇವನಿಧಿನಯನೇಂದು' (೬೦:೯೨) ಎಂಬ ಪದ್ಯದ ಸೂಚನೆಯಂತೆ ಇಲ್ಲಿ 'ಉಡುದೇವ' ಅಂದರೆ ಚಂದ್ರ. ಅವನ ಸಂಖ್ಯೆ ೧. 'ನಿಧಿ' ಅಂದರೆ ಸಂಪತ್ತು. ಅದರ ಸಂಖ್ಯೆ-೯. ಮತ್ತು ನಯನ ಅಂದರೆ ಕಣ್ಣು . ಅವುಗಳ ಸಂಖ್ಯೆ-೨. ಇಂದು ಅಂದರೆ ಚಂದ್ರ. ಅವನ ಸಂಖ್ಯೆ ೧, ಒಟ್ಟು ೧೯೨೧ ಆಯಿತು. ಇದನ್ನು ವಿಲೋಮವಾಗಿಟ್ಟರೆ ೧೨೯೧ ಆಗುತ್ತದೆ. ಇದು ಶಕವರ್ಷ. ಈ ಶಕವರ್ಷಕ್ಕೆ ೭೮ನ್ನು ಕೂಡಿಸಿದರೆ ಕ್ರಿಸ್ತಶಕ ಬರುತ್ತದೆ. ೧೨೯೧+೭೮=೧೩೬೯. ಇದೇ ಕವಿಯ ಕಾಲ (ಸಂ. ರಾಜೂರ ವೀರಣ್ಣ, ಭೀಮಕವಿಯ ಭೃಂಗೀಶ್ವರ ದಂಡಕ: ಪು.೭೨-೮೩)

ರಾಘವಾಂಕನ ಕಾಲದ ಬಗ್ಗೆ ಅನೇಕ ವಿದ್ವಾಂಸರು ಚರ್ಚೆ ನಡೆಸಿದ್ದಾರೆ. ಡಾ.ಕಿಟ್ಟೆಲ್ ಅವರು ೧೨೯೨ ರಿಂದ ೧೩೩೫ ಎಂದು ಗುರುತಿಸುತ್ತಾರೆ. ಡಾ. ವೆಂಕಟಸುಬ್ಬಯ್ಯನವರು ೧೨೦೦ ಎಂದು ಗುರುತಿಸುತ್ತಾರೆ. ಕವಿಚರಿತೆಕಾರರು ೧೧೬೫ ಎಂದು ಹೇಳಿದರೆ ಎಂ. ಗೋವಿಂದಪೈ ಅವರು ೧೧೪೫ (ಕೆ.ವೆಂಕಟರಾಮಪ್ಪ: ಕವಿ ರಾಘವಾಂಕ) ಎಂದು ಅಭಿಪ್ರಾಯ ಪಡುತ್ತಾರೆ. ಮುಂದುವರಿದು ಡಿ.ಎಲ್.ನರಸಿಂಹಾಚಾರ್ಯರು ೧೨೦೦(ತಿಪ್ಪೇರುದ್ರಸ್ವಾಮಿ ಹೆಚ್. ಋಷಿಕವಿ ರಾಘವಾಂಕ) ಎಂಬ ತೀರ್ಮಾನಕ್ಕೆ ಬರುತ್ತಾರೆ. 'ಇದನ್ನು ಖಂಡಿಸಿ ಡಾ.ಆರ್.ಸಿ. ಹಿರೇಮಠ

ಅವರು ೧೨೬೫ (ಹಿರೇಮಠ ಆರ್. ಸಿ. ಮಹಾಕವಿ ರಾಘವಾಂಕ) ಎಂದು ಇಟ್ಟುಕೊಳ್ಳಬಹುದು ಎಂದಿದ್ದಾರೆ. ರಾಘವಾಂಕನ ಮೇಲಿನ ಎಲ್ಲ ವಾದವಿವಾದಗಳನ್ನು ಪರಿಶೀಲಿಸಿದಾಗ ರಾಘವಾಂಕನ ಕಾಲ ಹದಿಮೂರನೇ ಶತಮಾನದ ಉತ್ತರಾರ್ಧ ಎಂದು ಹೇಳಬಹುದು. ಇದು ಭೀಮಕವಿ ಹಾಗೂ ಹರಿಹರ ಮತ್ತು ರಾಘವಾಂಕರ ಕಾಲಕ್ಕೆ ಸರಿಹೊಂದುವುದಿಲ್ಲವಾದ್ದರಿಂದ ಚಿಕ್ಕನಂಜೇಶನ ಅಭಿಪ್ರಾಯ ಕೇವಲ ಕಲ್ಪಿತ ಕಥೆಯೆಂದು ಭಾವಿಸಿ ಭೀಮಕವಿಯ ಕಾಲ ಆತನೇ ಹೇಳಿಕೊಂಡಂತೆ 'ಉಡುದೇವನಿಧಿನಯನೇಂದು' ಹಾಗೂ 'ಸೌಮ್ಯಸಂವತ್ಸರ'ಮತ್ತು 'ಜೀವವಾರ' ಇವುಗಳನ್ನು ವಿಶ್ಲೇಷಿಸಿದಾಗ ೧೩೬೯ ಈತನ ಕಾಲವಾಗಿರುತ್ತದೆ ಎಂದು ಸ್ಥಾಪಿಸಬಹುದು.

೪. ಕೃತಿಗಳು :

ಚಿಕ್ಕನಂಜೇಶನ ರಾಘವಾಂಕಚಾರಿತ್ರದ ಆಧಾರದಿಂದ ಈತ ಮೂರು ಕೃತಿಗಳನ್ನು ರಚಿಸಿದನೆಂಬ ಮಾಹಿತಿ ಸಿಗುತ್ತದೆ.

೧. ಬಸವಪುರಾಣ

೨. ಭೀಮಕವೀಶ್ವರರಗಳೆ ಅಥವಾ ಪಡಕ್ಷರರಗಳೆ

೩. ಭೃಂಗಿದಂಡಕ

ಬಸವಪುರಾಣ : ಇದು ಭೀಮಕವಿಯ ಮಹತ್ವದ ಕೃತಿಯಾಗಿದ್ದು ಕವಿ ಇದನ್ನು 'ಬಸವಚರಿತೆ ', 'ಬಸವಕಥೆ ' ಎಂದು ಕರೆದಿದ್ದಾನೆ.

ಶಿವಕವಿಗಳೆನಿಸಿದ ಪುರಾತನ
ಕವಿಗಳಂ ಶಿವಭಕ್ತಿನೂತನ
ಕವಿಗಳಂ ಶಿವಧರ್ಮಶಾಸ್ತ್ರಕಳಾವಿಶಾರದರ
ಶಿವರಹಸ್ಯಮಹತ್ವಶಿವತ
ತ್ವವಿದರಂ ಸಕಲಾಗಮಜ್ಞ
ಪ್ರವರರಂ ಭಾವಿಸಿ ರಚಿಸುವೆಂ ಬಸವಚರಿತೆಯನು.... (೧:. ೧೨)

ಅವುದಕ್ಕನುಮಾನಿಸದಿರೊಲಿ
ದಾವ ಶಬ್ದಾರ್ಥಮುಮನಾದಡೆ
ಭಾವಿಸಲು ನಿನಗಜಿಪಿ ನಿನಾತ್ಮದೊಳಗಲದಿರ್ದು
ನಾವು ರಚಿಸುವೆವೆಸೆವ ಬಸವ ಕ
ಥಾವಿಸರಮಂ ಬರೆದುಕೋಯೆಂ
ದೋವಿದವರಾಜ್ಞೆಯನೆ ಶಿರದೊಳು ಧರಿಸಿ ಮುದವೆತ್ತು... (೧: ೧೫)

ಹರಿಹರನ ಬಸವರಾಜದೇವರ ರಗಳೆ ಕೇವಲ ಕಾವ್ಯ ಆದರೆ ಬಸವಪುರಾಣ "ಕಾವ್ಯವೆಂದರೆ ಕಾವ್ಯ : ಪುರಾಣವೆಂದರೆ ಪುರಾಣ ಶ್ರೇಷ್ಠ ಹಾಗೂ ಮಾದರಿಯ ಪುರಾಣ"ವಾಗಿದೆ. (ಜವಳಿ ಬಿ.ಸಿ. ಬಸವಪುರಾಣದ ಸಾಹಿತ್ಯಿಕ ಅಧ್ಯಯನ: ಪು.೭೮)

ಬಸವಪುರಾಣ ಹುಟ್ಟಿದ ಕಾಲ ಕರ್ನಾಟಕದ ಇತಿಹಾಸದಲ್ಲಿ ಬಹು ಪ್ರಮುಖವಾದದ್ದು. ಶಿವಶರಣರು ತಮ್ಮ ನಿಡುಬಾಳಿನಲ್ಲಿ ಜನ ಬದುಕಬೇಕು, ಸುಂದರವಾಗಿ ಬದುಕಬೇಕೆಂದು ಅದಕ್ಕಾಗಿ ಅವಶ್ಯವಿರುವ ಭೂಮಿಕೆಯನ್ನು ಸಿದ್ಧಪಡಿಸಿದರು. ಕೊನೆಗೆ ಕಲ್ಯಾಣ ಕ್ರಾಂತಿಯ ವಿಪ್ಲವದ

ನಂತರ ಚದುರಿ ಹೋದರು. ಕೆಲವು ಕಾಲ ಇವರ ಆಲೋಚನೆಗಳು ಸ್ಥಗಿತಗೊಂಡವು. ಇದೇ ಸಂದರ್ಭದಲ್ಲಿ ಪರಸಂಸ್ಕೃತಿಯೊಂದರ ಆಘಾತಕ್ಕೆ ಸಿಲುಕಿ ದಕ್ಷಿಣ ಭಾರತದ ಶ್ರೇಷ್ಠ ಸನಾತನ ಸಂಸ್ಕೃತಿಯು ತತ್ತರಿಸುತ್ತಿದ್ದ ಕಾಲದಲ್ಲಿ ಆ ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಸದುದ್ದೇಶದಿಂದ ವಿಜಯನಗರ ಸಾಮ್ರಾಜ್ಯ ಉದಯವಾಗಿ ಮೂರು ದಶಕಗಳು ಕಳೆದಿದ್ದವು. ಸಂಸ್ಕೃತಿಯ ಸಂಗೋಪನೆಯನ್ನು ಉತ್ಸಾಹದಿಂದ ಕೈಗೊಳ್ಳಲು ಆರಂಭಿಸಿದ್ದ ಪರ್ವಕಾಲದಲ್ಲಿ ಕನ್ನಡಕ್ಕೆ ರೂಪಾಂತರದ ನೆವದಲ್ಲಾದರೂ ಬಂದ ಭೀಮಕವಿಯ ಈ ಕೃತಿ ಮುಂದಿನ ವಚನಸಂಕಲನ ಮತ್ತು ವ್ಯಾಖ್ಯಾನಕಾರರಿಗೆ ಬಸವಾದಿ ಪ್ರಮಥರ ಪರಿಚಯವನ್ನು ಪರಿಣಾಮಕಾರಿಯಾದ ರೀತಿಯಲ್ಲಿ ಮಾಡಿಕೊಟ್ಟಿತು. ಕನ್ನಡದಲ್ಲಿ ವೀರಶೈವ ಪುರಾಣಗಳ ಪರಂಪರೆಯನ್ನು ಸ್ಥಾಪಿಸಿತು. ಭೀಮಕವಿ ಪುರಾಣಗಳಿಗೆ ಪ್ರಥಮ ಪ್ರತಿನಿಧಿಯಾಗಿದ್ದಾನೆ.

ಜೈನ ಮತ್ತು ವೈದಿಕ ಪುರಾಣಗಳಿಗೆ ಈಗಾಗಲೆ ಪುರಾಣ ಮಾದರಿಗಳು ಸಿದ್ಧಗೊಂಡಿದ್ದವು. ಆದರೆ ಪಾಲ್ಕುರಿಕೆ ಸೋಮನಾಥ ಹಾಗೂ ಭೀಮಕವಿಗಳು ತಾವೇ ಮಾದರಿಯನ್ನು ಹುಡುಕಿಕೊಳ್ಳಬೇಕಾಯಿತು. ಆದ್ದರಿಂದಲೇ ಕನ್ನಡ ಪುರಾಣಗಳ ಅಂಕುರಾವಸ್ಥೆಯಾದ್ದರಿಂದ ಪುರಾಣದ ಲಕ್ಷಣಗಳು ಇಲ್ಲಿ ವಿವರವಾಗಿ ಚರ್ಚಿತವಾಗಿಲ್ಲ. ಮುಂದಿನ ಅನೇಕ ಕವಿಗಳಿಗೆ ಇದು ಮಾರ್ಗವನ್ನು ಹಾಕಿಕೊಟ್ಟಿತು. ಸುಮಾರು ನಾಲ್ಕುನೂರು ಪುರಾಣಗಳು ಇದರ ಮಾದರಿಯನ್ನನು ಸರಿಸಿಯೋ ಅಥವಾ ಇದರ ಛಾಯೆಯನ್ನನುಸರಿಸಿಯೋ ರೂಪುಗೊಂಡಿವೆ ಎಂದು ಹೇಳಿದರೆ ಇದರ ಮಹತ್ವ ಅರ್ಥವಾಗುತ್ತದೆ.

ಇನಿತು ಬಡಮತಿಯಿಂ ಬಸವರಾ
ಜನ ಕೃತಿಯನಾನೆಂತು ರಚಿಸುವೆ
ನೆನುತೆಣಿಸಿ ಶಿವಯೋಗನಿದ್ರಾಮುದ್ರಿತದೊಳಿರಲು
ಅನುನಯದಿ ಪಾಲ್ಕುರಿಕೆ ಸೋಮೇ
ಶನುಮನಘದೇವಾರ್ಯನುಂ ಕನ
ಸಿನೊಳೆಸೆದು ಬಂದು ಪ್ರಸಾದವನಿತ್ತು ನುಡಿಸಿದನು... (೧: ೧೪)

ಕವಿಯು ಬಸವರಾಜನ ಕಥೆಯನ್ನು ಹೇಗೆ ರಚಿಸಲಿ ಎಂದು ಚಿಂತಿಸಿ ಶಿವಯೋಗನಿದ್ರಾಮುದ್ರಿತನಾದಾಗ ಪಾಲ್ಕುರಿಕೆ ಸೋಮನಾಥ ಹಾಗೂ ತಂದೆ ಶಿವದೇವ ಕನಸಿನಲ್ಲಿ ಬಂದು ಈ ಕೃತಿ ರಚಿಸಲು ಪ್ರೇರಣೆ ನೀಡಿದರು ಎಂದು ಕವಿ ಹೇಳುತ್ತಾನೆ.

ಅವುದಕ್ಕನುಮಾನಿಸದಿರೊಲಿ
ದಾವ ಶಬ್ದಾರ್ಥಮುಮನಾದಡೆ
ಭಾವಿಸಲು ನಿನಗಜಿಪಿ ನಿನ್ನಾತ್ಮದೊಳಗಲದಿರ್ದು
ನಾವು ರಚಿಸುವೆವೆಸೆವ ಬಸವ ಕ
ಥಾವಿಸರಮಂ ಬರೆದುಕೋಯೆಂ
ದೋವಿದವರಾಜ್ಞೆಯನೆ ಶಿರದೊಳು ಧರಿಸಿ ಮುದವೆತ್ತು... (೧: ೧೪)

ಅವರು ಯಾವುದಕ್ಕೂ ಚಿಂತಿಸದೆ ಬಸವಕಥೆಯನ್ನು ಬರೆದುಕೊ ಎಂದು ಅಭಯವಿತ್ತರಂತೆ. ಆದ್ದರಿಂದ ನನಗೆ ಈ ಪುರಾಣ ರಚಿಸಲು ಆಯಾಸವೆನಿಸಲಿಲ್ಲವೆಂದು ಭೀಮಕವಿ ಹೇಳುತ್ತಾನೆ.

ಅಸಮಲಿಂಗೈಕಾನುಭವ
ಪ್ರಸರಮತಿಕವಿಸೋಮನಾಥನು
ರಸಮೊಸರೆ ಮುನ್ನುಸುರ್ದುದನೆ ಕನ್ನಡಿಸಿ ಪೇಳೆಂದು
ಎಸೆವ ಬಸವಪುರಾಣಮಂ ಪಸ
ರಿಸುವ ನಿರ್ಮಳಬೋಧೆಯಂ ಕರು
ಣಿಸಿದ ಕಾರಣವೆನಗೆ ಪಿರಿದಾಯಾಸವಿನಿತಿಲ್ಲ... (೧: ೧೪) ಎಂಬುದು ಅವನ ನಂಬುಗೆ.

ಭೀಮಕವಿಯ ಈ ಬಸವಪುರಾಣ ೮ ಕಾಂಡ, ೬೦ ಸಂಧಿ ಹಾಗೂ ೩೬೨೮ ಭಾಮಿನಿ ಷಟ್ಪದಿಯ ಪದ್ಯಗಳನ್ನೊಳಗೊಂಡ ಹೆಬ್ಬೊತ್ತಿಗೆ. ಆರ್.ಸಿ.ಹಿರೇಮಠ ಅವರು ಕರ್ನಾಟಕದ ವಿವಿಧ ಸ್ಥಳಗಳಲ್ಲಿ ಸಿಕ್ಕಿರುವ ಹತ್ತು ಹಸ್ತಪ್ರತಿಗಳ ಮಾತೃಕೆಗಳನ್ನಿಟ್ಟುಕೊಂಡು ಇದನ್ನು ಸುಂದರವಾಗಿ ಸಂಪಾದಿಸಿ ಕೊಟ್ಟಿದ್ದಾರೆ. ಆದರೆ ಬಸವಪುರಾಣದ ಹಸ್ತಪ್ರತಿಗಳಲ್ಲಿರುವ ಪದ್ಯಗಳ ಸಂಖ್ಯೆ ಏಕರೂಪವಾಗಿಲ್ಲ. ಕಾರಣ ಇಷ್ಟೆ: ಬದ್ಧವಾದದು ಕಾವ್ಯವಾದರೆ (Open), ಮುಕ್ತವಾದದು ಪುರಾಣ. ಕಾವ್ಯ ಬರೆದು ಮುಗಿಸಿದ ಕಥೆಯಾದರೆ ಪುರಾಣ ವಿಸ್ತರಿಸಲು ಅವಕಾಶವಿರುವಂತದ್ದು. 'ಕಾವ್ಯ' ಸುಶಿಕ್ಷಿತ ವರ್ಗಕ್ಕೆ ಮಾತ್ರ ತಲುಪಿದರೆ 'ಪುರಾಣ' ಈ ಗಡಿರೇಖೆಯನ್ನು ದಾಟಿ ಪಾಮರರನ್ನೂ ಸಹ ರಂಜಿಸಿದ ಸಾಹಿತ್ಯ. ಹಾಗಾಗಿ ಲೋಕದಲ್ಲಿಯ ಪ್ರಸಿದ್ಧ ಕತೆ ಪುರಾಣಗಳಲ್ಲಿ ಬಂದರೆ ಚೆನ್ನ ಎಂದು ಭಾವಿಸಿದ ಭಾವುಕ ಜನ ಅನೇಕ ಕತೆಗಳನ್ನು ಪುರಾಣಗಳಲ್ಲಿ ಸೇರಿಸಿದ್ದುಂಟು. ಹಾಗಾಗಿಯೇ ಸಂಸ್ಕೃತಭೂಯಿಷ್ಠ ಚಂಪೂ ಕಾವ್ಯಗಳಿಗಿಂತ ಪುರಾಣಗಳು ಪ್ರಕ್ಷಿಪ್ತತೆಯ ಹಾವಳಿಗೆ ತುತ್ತಾದುವು. ಆದ್ದರಿಂದಲೇ ಕಳೆದ ೬೫೦ ವರ್ಷಗಳಿಂದ ಬಸವಪುರಾಣ ವೀರಶೈವರನ್ನಷ್ಟೇ ಅಲ್ಲದೇ ಅನ್ಯ ಧರ್ಮೀಯರ ಮೇಲೂ ತನ್ನ ಪ್ರಭಾವ ಬೀರುತ್ತ ಬಂದಿದೆ. ಹೀಗೆ ಬಸವಪುರಾಣ ಜನರನ್ನು ಪ್ರವೇಶಿಸಿದಷ್ಟು ಜನರು ಇದರೊಳಗೆ ಪ್ರವೇಶಿಸಿದರೆಂಬುದಕ್ಕೆ, ಪ್ರಭಾವಿತರಾದರೆಂಬುದಕ್ಕೆ ಸಾಕ್ಷಿಯಾಗಿದೆ.

ಬಸವಪುರಾಣ ಹುಟ್ಟಿದ ಎಂಟು ದಶಕಗಳಲ್ಲಿ ಲಿಖಿತವಾದ ಹಸ್ತಪ್ರತಿ ದೊರಕಿರುವುದು ಇಂದಿಗೂ ಅದರ ಅಕ್ಷರಶಃ ನೂರಾರು ಹಸ್ತಪ್ರತಿಗಳು ಲಭ್ಯವಾಗುತ್ತಿರುವುದು, ಪೌರಾಣಿಕರ ಬಾಯಲ್ಲಿ ಈಗಲೂ ಕೃತಿ ಜೀವಂತವಾಗಿರುವುದು, ಅದು ಹುಟ್ಟಿದಂದಿನಿಂದ ಇಂದಿನವರೆಗೆ ಗಳಿಸಿಕೊಂಡು ಬಂದಿರುವ ಜನಪ್ರಿಯತೆಯ ಕುರುಹಾಗಿದೆ. ಈ ಜನಪ್ರಿಯ ಪುರಾಣಪ್ರವಚನವನ್ನೆ ವೃತ್ತಿ ಮಾಡಿಕೊಂಡಿದ್ದ ಅನೇಕ ವ್ಯಕ್ತಿಗಳ ಉಲ್ಲೇಖ ಸಿಗುತ್ತದೆ. 'ಪುರಾಣದ ರಾಚವಟ್ಟೇಶ', 'ಪುರಾಣದ ಬಸವೇಶ' ಮುಂತಾದವರು. 'ಮಲ್ಲಣಾರ್ಯ', 'ರಾಮಯ್ಯ'ರಂತೂ 'ಬಸವಪುರಾಣದ ಮಲ್ಲಣಾರ್ಯ', 'ಬಸವಪುರಾಣದ ರಾಮಯ್ಯ' ಎಂದೇ ಪ್ರಸಿದ್ಧರಾಗಿದ್ದರು. ಇದರ ಪ್ರವಚನ ವೀರಶೈವ ಮಠಗಳಲ್ಲಿ ಶ್ರಾವಣ ಮಾಸದಲ್ಲಿ ತಿಂಗಳುಗಟ್ಟಲೇ ನಡೆದು ಅದರ ಮಂಗಲೋತ್ಸವವನ್ನು ವಿಜೃಂಭಣೆಯಿಂದ ಆಚರಿಸುವ ಪದ್ಧತಿ ಹಿಂದಿನಿಂದಲೂ ಒಂದು ಸಾಂಸ್ಕೃತಿಕ ಪರಂಪರೆಯಾಗಿ ಬೆಳೆದು ಬಂದಿದೆ ಎಂಬುದಾಗಿ ಡಾ.ವಿದ್ಯಾಶಂಕರರವರು ಹೇಳುತ್ತಾರೆ.

ಆಧುನಿಕ ಕಾಲದಲ್ಲಿಯೂ ಇದರ ಪ್ರವಚನ ನಿರಾತಂಕವಾಗಿ ನಡೆದುಕೊಂಡು ಬರುತ್ತಿದೆ. ಪುರಾಣಪ್ರವಚನದ ಜೊತೆಗೆ ಪ್ರದರ್ಶನವನ್ನು ಮಾಡುವ ಉಪಕ್ರಮ ಬೆಳೆದು ಬಂದ ಬಗೆ

ಕುತೂಹಲಕಾರಿಯಾದುದು. ಬಸವಣ್ಣನ ನಾಮಕರಣ ಸಂದರ್ಭದಲ್ಲಿ ತೊಟ್ಟಿಲಕಟ್ಟಿ ಶಿಶುವನ್ನು ಮಲಗಿಸಿ ಜೋಗುಳ ಸಮಾರಂಭವನ್ನು ಆಚರಿಸುತ್ತಿದ್ದರು. ಬಸವಣ್ಣನ ಮದುವೆ ಸಂದರ್ಭ ಪ್ರವಚನ ಪ್ರಸಂಗದಲ್ಲಿ ಯುವ ಗಂಡಹೆಂಡಿರನ್ನು ಬಸವಣ್ಣ ನೀಲಲೋಚನೆಯೆಂದು ಅಲಂಕರಿಸಿ ಮದುವೆಯ ಸಮಾರಂಭವನ್ನೇ ಆಚರಿಸುತ್ತಿದ್ದರು. ಬಸವಪುರಾಣದ ಪ್ರವಚನ ಒಂದು ಹಬ್ಬದಂತೆ, ಉತ್ಸವದಂತೆ ನಡೆಸಲ್ಪಡುತ್ತಿದ್ದ ಸಂದರ್ಭಗಳು ದೊರೆಯುತ್ತವೆ. ಹಾಗಾಗಿಯೇ ಇದು ತನ್ನ ಜನಪ್ರಿಯತೆಯಿಂದಾಗಿ ಕೃತಿಯು–

೧) ಜರ್ಮನ್‌ಮಿಷನ್ ಪ್ರೆಸ್, ಮಂಗಳೂರು, ೧೮೫೦ ಪುಟ : ೬೭೨, ಕಲ್ಲಚ್ಚು

೨) Basavapuran in Folio ಪುಟ: ೪೪೨, ಬೆಲೆ–೧ ಪೌಂಡ್, ೧ ಸಿಲ್ಲಿಂಗ್

೩) ಬೆಂಗಳೂರು ಬುಕ್ ಡಿಪೋ ಮುದ್ರಾಕ್ಷರ ಮಾಲೆ – ೧೮೮೫ ಪುಟ: ೪೨೮+೩

೪) ಮದ್ರಾಸ್ ಗ್ರಂಥ ರತ್ನಾಕರ ಮುದ್ರಾಕ್ಷರ ಶಾಲೆ – ೧೮೯೨ ಪುಟ: ೪೪೨

೫) ವಾಜಪೇಯಕೃಷ್ಣಯ್ಯ ರಾಜೇಶ್ವರಿ ಮುದ್ರಾಕ್ಷರ ಶಾಲೆ, ಬೆಂಗಳೂರು : ೧೯೯೮ ಪುಟ: ೪೪೨+೩

೬) ವಾಗ್ವಿಲಾಸ ಬುಕ್ ಡಿಪೋ, ಹುಬ್ಬಳ್ಳಿ – ೧೯೨೭

೭) ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ, ದ್ವಿ ಆ, ೧೯೧೪, ಸಂಪುಟ –i, ೧೯೫೮, ಸಂಪುಟ–ii, ೧೯೬೬.

೮) ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ (ಜನಪ್ರಿಯ ಆವೃತ್ತಿ)

೯) ಬಾಲಲೀಲಾ ಮಹಾಂತ ಶಿವಯೋಗೀಶ್ವರ ಗ್ರಂಥಮಾಲೆ, ಧಾರವಾಡ – ೧೯೭೧

೧೦) ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು – ೨೦೦೮ ಹೀಗೆ ೧೦ ಬಾರಿ ಸಂಪಾದಿತವಾಗಿದೆ.

ವಿವಿಧ ಅಭಿರುಚಿಯ ಜನರನ್ನು ಏಕಕಾಲಕ್ಕೆ ತನ್ನ ತೆಕ್ಕೆಯಲ್ಲಿ ತೆಗೆದುಕೊಂಡು ಅವರನ್ನು ರಂಜಿಸುತ್ತ ಮನುಷ್ಯನ ಪ್ರಮಾದವನ್ನು ತಿದ್ದುತ್ತಾ ಅವನ ಅಲ್ಪಮತಿಗೆ ಬದುಕಿನ ಉತ್ತಮ ಸಂದೇಶವನ್ನು ಕೊಡುತ್ತ ಮನಸ್ಸಿನ ಹುಳಿಯನ್ನು ತಿಳಿಯಾಗಿಸುತ್ತ ಸಾಗುವ ಈ ಪುರಾಣಗಳು ಇಡೀ ಸಂಸ್ಕೃತಿಯ ಅವಿಭಾಜ್ಯ ಅಂಗಗಳಾಗಿವೆ. ಸಾಮಾನ್ಯ ಕೃತಿಗಳು ಕಾಲವೆಂಬ ಅಗ್ನಿಯಲ್ಲಿ ಬೆಂದು ನಾಶವಾಗಿ ಹೋಗುತ್ತವೆ. ಅಸಾಮಾನ್ಯ ಕೃತಿಗಳು ಕಾಲವೆಂಬ ಅಗ್ನಿದಿವ್ಯವನ್ನು ಗೆದ್ದು ಸೂರ್ಯಚಂದ್ರರಿರುವವರೆಗೆ ಜನತೆಯ ಮಧ್ಯ ಬಾಳುತ್ತವೆ, ಅವರ ಮನವನ್ನು ಆಳುತ್ತವೆ (ಕಲಬುರ್ಗಿ ಎಂ.ಎಂ. ಬಸವಪುರಾಣದ ಪ್ರಭಾವ ಪರಂಪರೆ: ಪು.೫೭–೬೭) ಎಂಬ ಮಾತು ಅಕ್ಷರಶಃ ಬಸವಪುರಾಣಕ್ಕೆ ಅನ್ವಯಿಸುತ್ತದೆ.

ಭೀಮಕವೀಶ್ವರ ರಗಳೆ :

ಇದರ ಪರ್ಯಾಯ ನಾಮ ಷಡಕ್ಷರರಗಳೆ. ಇದರಲ್ಲಿ ೧೦೫ ಪಾದಗಳಿವೆ. ಕೃತಿ ಪ್ರಕಟಗೊಂಡಿದೆ. ಷಡಕ್ಷರಮಂತ್ರದ ಮಹಿಮೆ ಈ ರಗಳೆಯ ಉದ್ದೇಶ ಮತ್ತು ವಸ್ತು. ಪ್ರತಿ ಪಾದದಲ್ಲಿರುವ 'ಓಂ ನಮಶ್ಶಿವಾಯ' ಎಂಬ ಮಾತಿನಿಂದ ಇದು ಗೊತ್ತಾಗುತ್ತದೆ. ವೀರಶೈವರ ಈ

ತಾರಕ ಮಂತ್ರವನ್ನು ಪದೇ ಪದೇ ಪುನರುಚ್ಚರಣೆಯಿಂದ ಸ್ವತಃ ಧನ್ಯತೆ ಪಡೆಯುವುದು ಕವಿಯ ಸಂಕಲ್ಪ. ಇದರ ಮಹಿಮೆಯನ್ನು ಈಗಾಗಲೇ ಕೊಂಡಗುಳಿ ಕೇಶಿರಾಜ, ಹರಿಹರರು ಕೊಂಡಾಡಿದ್ದರು. ಹರಿಹರನ ಹಾದಿಯಲ್ಲಿಯೇ ಭೀಮಕವಿ ಒಂದೊಂದು ಆದ್ಯಂತ ಕಂದಪದ್ಯಗಳ ನಡುವೆ ರಗಳೆಯ ಸಾಲುಗಳನ್ನು ಹೆಣೆದಿದ್ದಾನೆ. ನಿಶ್ಚಿತವಾಗಿಯೂ ಇಲ್ಲಿ ಹರಿಹರನ ಪ್ರಭಾವವನ್ನು ಕಾಣಬಹುದು. ಚಕ್ರಪಾಣಿ ರಂಗನಾಥನ 'ಷಡಕ್ಷರಿರಗಳೆ 'ಯನ್ನು ಭೀಮಕವಿ ಅನುಸರಿಸಿರುವಂತೆ ಕಂಡುಬರುತ್ತದೆ ಎಂಬ ಮಾತಿದೆ. ಆದರೆ ರಂಗನಾಥನ 'ನಮಃಶಿವಾಯರಗಡ' (ಶಿವಮಂತ್ರ ವರ್ಣನಮು) ಎಂಬ ರಗಳೆಯ ಕೆಲವು ಪಾದಗಳೊಂದಿಗೆ ಭೀಮಕವಿಯ ರಗಳೆಯ ಪಾದಗಳನ್ನು ಹೋಲಿಸಿದರೆ, ಅವುಗಳ ನಡುವೆ ಹೋಲಿಕೆ ಕಾಣುವುದಿಲ್ಲ. ಆದ್ದರಿಂದ ಭೀಮಕವಿಯದು ಸ್ವತಂತ್ರ ರಚನೆಯೇ ಇರಬೇಕು. 'ಭೀಮಕವೀಶ್ವರರಗಳೆ'ಯ ಸಾಹಿತ್ಯ ಗುಣ ಅಷ್ಟೇನೂ ವಿಶೇಷವಾಗಿಲ್ಲ. ಶಬ್ದಪಾಂಡಿತ್ಯದ ಹೆಗ್ಗಳಿಕೆ ಪ್ರಚೋದಿಸಿದ ನಿರರ್ಗಳತೆಯಿದ್ದರೂ, ಸಹಜತೆ ಆರ್ದ್ರತೆಗಳು ಇಲ್ಲಿ ಕೊರತೆಯಾಗಿ ಕಂಡುಬರುತ್ತವೆ. ಉಪಮೆ ರೂಪಕಗಳಂತಹ ಸಾಮಾನ್ಯ ಅಲಂಕಾರಗಳ ಹೊಳಹು ಕೂಡ ಹೆಚ್ಚಾಗಿಲ್ಲ. ಅನುಪ್ರಾಸ ಸಂಘಟನೆಯ ಮೂಲಕ ಶಬ್ದಶಯ್ಯೆಯನ್ನು ಶ್ರವ್ಯವಾಗಿರುವ ಪ್ರಯತ್ನ ಎದ್ದು ಕಾಣುತ್ತದೆ.

> **ಹಲವು ಜಪದ ಫಲಮನುರದೆ ಹಳಿವುದೋಂ ನಮಶ್ಶಿವಾಯ**
> **ಕಾಲಕಲಿತ ಕಾಲಬಲವನಳಿವುದೋಂ ನಮಶ್ಶಿವಾಯ**

ಎಂಬಲ್ಲಿ ಅಸಂಯುಕ್ತ ಪದರಚನೆಯನ್ನು,

> **ತ್ಯಕ್ಷನಮರಕೋಟಗಿತ್ತ ದೀಕ್ಷೆ ಓಂ ನಮಶ್ಶಿವಾಯ**
> **ಅಕ್ಷಪಾದ ಮುಖ್ಯ ಮನಿಗೆ ರಕ್ಷೆ ಓಂ ನಮಶ್ಶಿವಾಯ**

ಎಂಬಲ್ಲಿಯ ಸಂಯುಕ್ತಾಕ್ಷರ ರಚನೆಯನ್ನು ಈ ದೃಷ್ಟಿಯಿಂದ ಗಮನಿಸಬೇಕು.

> **ಅನುಪಮಮಮಿತವಗಣಿತಧಿಕವೆನಿಪುದೋಂ ನಮಶ್ಶಿವಾಯ**

ಎನ್ನುವಲ್ಲಿ ಮೊದಲ ಪಾದದ ಗಣರಚನೆಯ ಶಿಸ್ತು, ಶ್ರವ್ಯಗುಣಗಳು ಎರಡನೆಯದರಲ್ಲಿ ಇಲ್ಲ. 'ನೆತ್ತಿಗಣ್ಣು', 'ಸೂನೃತಾನುಭವದ ಕಾಮಧೇನು' ಇಂತಹ ಮಾತುಗಳ ರಚನೆ ಮನಸ್ಸಿಗೆ ಹಿಡಿಸಿದರೂ ಹಲವು ಕಡೆ ಬರಿಯ ಕ್ಲಿಷ್ಟವಾಗ್ಮಿತೆಯಿಂದ ಪಾದಗಳು ಮುಗಿಯುವುದು ಬೇಸರ ತರಿಸುತ್ತದೆ.

ಭೃಂಗಿದಂಡಕ :

ಸಿದ್ಧನಂಜೇಶನ ರಾಘವಾಂಕ ಚಾರಿತ್ರದ 'ಕವಿತೆಯಂ ಪೇಳೆನಲು ಭೃಂಗಿದಂಡಕವ ರಚಿಸೆ' ಎಂಬ ಮಾತಿನಿಂದ ಭೀಮಕವಿ ಈ ಕೃತಿ ರಚಿಸಿದ್ದ ಎಂದು ತಿಳಿಯುತ್ತದೆ. ಇದೂ ಸಹ ಉಪಲಬ್ದವಿದ್ದು ಕನ್ನಡ ಭಾಷೆಯಲ್ಲಿದೆ. ನಂದಿಯ ಮಹಾತ್ಮ್ಯವನ್ನು ದಂಡಕ ರೂಪದಲ್ಲಿ ನಿರೂಪಿಸಿದ್ದಿರಬಹುದಾದ ಈ ಕೃತಿ ಬಹುಶಃ ದಂಡಕ ಛಂದಸ್ಸಿನಲ್ಲಿ ವಿರಳ ಕೃತಿಗಳಲ್ಲಿ ಸ್ಥಾನ ಪಡೆದುಕೊಳ್ಳುತ್ತದೆ.

ಪ್ರಯೋಗಶೀಲನಾದ ಕವಿ ಈ 'ದಂಡಕ' ಮತ್ತು 'ರಗಳೆ'ಯನ್ನು ಬಳಸಿ ಕಾವ್ಯ ಬರೆದದ್ದು ಸರಿಯಾಗಿಯೇ ಇದೆ.

ಈಗ ಇದು ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿ ಭಂಡಾರದಲ್ಲಿ ಸಿಕ್ಕಿದೆ. 'ಭೃಂಗಿದಂಡಕ' ಗದ್ಯರೂಪದಲ್ಲಿದೆ. ಪ್ರಾರಂಭಕ್ಕೆ ಒಂದು, ಅಂತ್ಯಕ್ಕೆ ಎರಡು, ಒಟ್ಟು ಮೂರು ಕಂದಗಳಿವೆ. ಮೊದಲು ಕಂದದಲ್ಲಿ ಕೃತಿಯ ವಸ್ತು ಕುರಿತ ಹೇಳಿಕೆಯನ್ನು ಭೀಮಕವಿ ಕೊಡುತ್ತಾನೆ.

ಗಂಗಾವತಂಸನೀಶಂ
ಭೃಂಗಿಗೆ ಮೂಜಿಗಳಾದ ಚಂದಮನಾಸ್ಕಂ
ದಂಗಂದೊಲಿದೊರೆದ ಕಥಾ
ಸಂಗತಿಯಂ ಪೇಳ್ವೆ ನಾಂ ಶಿವೈಕ್ಯರ್ಮೆಚ್ಚಲ್

ಕೊನೆಯ ಎರಡು ಕಂದಗಳಲ್ಲಿ ಕವಿಯ ಹೆಸರು, ತಂದೆಯ ಹೆಸರು, ಅಧಿದೈವದ ಹೆಸರು ಉಕ್ತವಾಗಿದೆ.

ಭೃಂಗೀಶನ ದಂಡಕಮಂ
ಸಾಂಗದೊಳೊಲಿದೋದಿದರ್ಗೆ ಕೇಳಿದವರ್ಗಂ
ಮಂಗಳಂ ನಿತ್ಯೈಶ್ವರ್ಯಸು
ಖಂಗಳನಿರದೇವ ಕಾವ ಗುರು ಸಿದ್ದೇಶಂ

ಶಿವಕವಿದೇವಾರ್ಯರ ತನು
ಭವಾಗ್ರಣಿಯೆನಿಪ್ಪಭೀಮನಾಥಂ ಪೇಳ್ದೀ
ಪ್ರವಿಮಳ ಭೃಂಗೀಶ್ವರನೊ
ಪ್ಪುವ ದಂಡಕಂ ಸಮಾಪ್ತಮಂಗಳ ಮಹಾಶ್ರೀ

೫. ವ್ಯಕ್ತಿತ್ವ :

ಲೋಕ ಕವಿಯನ್ನು ಸೃಷ್ಟಿಸುತ್ತದೆ; ಕವಿ ತನ್ನ ಕೃತಿಯಲ್ಲಿ ಹೊಸ ಲೋಕವನ್ನೇ ಸೃಷ್ಟಿಸುತ್ತಾನೆ. ರಾಜಷಟ್ಪದಿಯೆನಿಸಿದ ಭಾಮಿನಿಷಟ್ಪದಿಯನ್ನು ಬಳಸಿಕೊಂಡು ಮೌಲಿಕ 'ಪುರಾಣ'ವನ್ನು ರಚಿಸಿದ ಭೀಮಕವಿಯ ವ್ಯಕ್ತಿತ್ವವನ್ನು ಕುರಿತಂತೆ ಆತನ ಕೃತಿಯನ್ನೇ ಆಧರಿಸಬೇಕು. ಕವಿ ತನ್ನನ್ನು 'ಬಡಮತಿ'(೧:೧೫) ಎಂದು ಕರೆದುಕೊಂಡದ್ದು ಸುಸಂಸ್ಕೃತಿಯ ದ್ಯೋತಕ.

ಎರಡೆರಡು ಮೂಜೆರಡುವೈದೆರ
ಡೆರಡು ಸಾಸಿರ ರಸನೆಗಳವ
ರ್ಗರಿದು ಪೊಗಳಲು ನಿಮ್ಮ ಚರಿತೆಯನೊಂದು ನಾಲಗೆಯ
ನರನ ಪವಣೇ ಕೀರ್ತಿಪಡೆ ಬಸ
ವರಸ ನಿಮ್ಮಂ ಭಕ್ತಿಲಲನಾ
ಪರವಶದೊಳೇನೆಂದುವಜೆಯೆನು ತುತಿಸಿ ಬದುಕವೆನು... (೧: ೯)

ಎಂಬಲ್ಲಿ ಭಕ್ತಿರಸವೆ ಮಡುಗಟ್ಟಿ ನಿಂತಿದೆ.

ಒಬ್ಬ ಭಕ್ತಕವಿ ಮಾತ್ರ ಇಂತಹ ಭಕ್ತಿ ಚರಿತ್ರೆಯನ್ನು ಬರೆಯಲು ಸಾಧ್ಯ.'ಮುನ್ನುಸುರ್ದದನೆ ಕನ್ನಡಿಸಿ ಪೇಳು' ಎಂಬಲ್ಲಿ, ಪಾಲ್ಕುರಿಕೆ ಸೋಮನಾಥನ ಕೃತಿಯನ್ನೇ ಅನುವಾದ ಮಾಡುತ್ತಿದ್ದೆನೆಂಬಲ್ಲಿ ಕವಿಯ ಪ್ರಾಮಾಣಿಕ ನಡತೆ ಅಡಗಿದೆ. ಅಷ್ಟೇ ಅಲ್ಲ ಭೀಮಕವಿಯ ಅಹಂಕಾರ ನಿರಸನ ನುಡಿಗಳು ಆತನ ವ್ಯಕ್ತಿತ್ವಕ್ಕೆ ಕಳೆಗಟ್ಟಿವೆ. ಸಾಮಾನ್ಯ ಮನುಷ್ಯರನ್ನು ಇಂದ್ರನೆಂದು ಹೊಗಳದೆ ಶಿವನನ್ನು ಮಾತ್ರ ಹೊಗಳುವ ಹರಿಹರನ ಪ್ರತಿಜ್ಞೆ ಭೀಮಕವಿಯದ್ದೂ ಆಗಿದೆ.

ಕುತ್ತದಿಂ ಮಡಿವವರನಿಂದ್ರನೆ
ನುತ್ತಧಮರಂ ಪೊಗಳಿ ದೈನ್ಯದೊ
ಳತ್ತಲ್ಲಿತ್ತಂ ಸುತ್ತಿ ಸುತ್ತಿ ದುರಾಸೆಯಂ ಪೊತ್ತು
ಉತ್ತಮದ ಕವಿತೆಯನಮಾನ್ಯರಿ
ಗಿತ್ತು ಪೆಂಪ ಗುಂಪನಜೆ ನೀ
ಗುತ್ತಭವನಂ ಪೊಗಳದಳಿವರನೇನನೆಣಿಸುವೆನು... (೧:೩೬)

ಹೀಗೆ ಹರಿಹರ ಕವಿಯ 'ಮನುಜರ ಮೇಲೆ ಸಾವವರ ಮೇಲೆ ಕನಿಷ್ಟರ ಮೇಲಕ್ಕಟಾ' ಎಂಬ ಉತ್ಕಟ ನುಡಿಗಳು ಇವನ ವ್ಯಕ್ತಿತ್ವಕ್ಕೆ ಕನ್ನಡಿ ಹಿಡಿಯುತ್ತವೆ. ಜೈನ ಹಾಗೂ ವೀರಶೈವ ಪುರಾಣಗಳಿಗೆ ತಮ್ಮದೇ ಆದ ಲಾಕ್ಷಣಿಕ ಚೌಕಟ್ಟುಗಳಿದ್ದವು. ಆದರೆ ವೀರಶೈವ ಪುರಾಣಗಳು ಒಂದು ವಿಶಿಷ್ಟ ಸಂದರ್ಭ ಹಾಗೂ ಸನ್ನಿವೇಶಗಳಿಗೆ ಪ್ರತಿಕ್ರಿಯಾತ್ಮಕವಾಗಿ ಮೂಡಿ ಬಂದವು. ಪಂಪನು 'ಮಾರ್ಗ' ಕಾವ್ಯವನ್ನು ದೇಸಿ ಛಂದಸ್ಸಿನಲ್ಲಿ ರಚಿಸಿದರೆ ಈತ 'ವಸ್ತುಕ' ಪರಂಪರೆಯನ್ನು ಧೀಕರಿಸಿ ವರ್ಣಕವನ್ನು ಎತ್ತಿ ಹಿಡಿದು ಪಂಡಿತ ಮಂಡಲಿಯಲ್ಲಿ ಅದಕ್ಕೊಂದು ಸ್ಥಾನ ಕಲ್ಪಿಸಿಕೊಡುತ್ತಾನೆ.

ಪ್ರಾಸ ಯತಿ ಗಣ ಗದ್ಯ ಪದ್ಯ ಸ
ಮಾಸಯುತ ವಸ್ತುಕದ ಮುಂದೆ ವಿ
ಳಾಸಮೇ ಸಾಮಾನ್ಯಮೀ ವರ್ಣಕ ಕವಿತೆಯೆಂದು
ಓಸರಿಸದಿರಿ ಬಜೆಯ ಕನ್ನಡ
ಭಾಷೆಯೆಂದೆನಲಾಗದಿಳೆಗಿದು
ಲೇಸೆನಿಪ ವೇದಪ್ರಮಾಣವೆನಿಪ್ಪುದೆಂತೆನಲು... (೧: ೨೧)

ಎಂದು ಪ್ರಶ್ನಿಸಿ ಕನ್ನಡ ಭಾಷೆಯ ಹಿರಿಮೆಯನ್ನು ಎತ್ತಿ ಹಿಡಿಯುವ ಧೀರೋದಾತ್ತ ವ್ಯಕ್ತಿತ್ವವನ್ನು ಕಾಣುತ್ತೇವೆ. ಆದ್ದರಿಂದಲೇ ಭೀಮಕವಿಯ ಮಹತಿಯನ್ನು ಕುರಿತು ಷಡಕ್ಷರದೇವನು ಬರೆದ ಎರಡು ಪದ್ಯಗಳು ಇಂತಿವೆ.

ಮೊದಲೋಳ್ಸೋಮಗುರೂತ್ತಮಂ ಸರಸವಾಕ್ಚಾತುರ್ಯದಿಂದಭ್ರದೇ
ಶದ ಭಾಷಾಕ್ರಮದಿಂ ವೃಷೇಂದ್ರಕೃತಿಯ ತಾಂ ಮಾಡಿದಂ ಭಕ್ತಿಯಿಂದ
ದದನಾ ಭೀಮಕವೀಶ್ವರಂ ನೆಗಳ್ದನಾದಂ ವರ್ಣಕ ಪ್ರೌಢಿಯಿಂ
ದದನುದ್ಯುದ್ರುತಿ ಸಂಸ್ಕೃತೋಕ್ತಿಯೋಳೆ ಪೇಳ್ದಂ ಶಂಕರಾರ್ಯೋತ್ತಮಂ

ಪದಪಿಂದಾದ್ಯರ್ಕಳಿಂತಿಂತತಳ ಸರಸಶಬ್ದಾರ್ಥಸಂದರ್ಭದಿಂ ಕೋ
ವಿದರೆಲ್ಲಮ್ಮೆಚ್ಚೆ ಬರ್ದಿಂನೆಗಳ್ದ ಬಸವಪೌರಾಣಮಂ ಬೇರೆ ಮೇಣ್ ಪೇ
ಳ್ವದ ಹಾಸ್ಯಕ್ಕಾಸ್ಪದಂ ಬೆಳ್ಪನಮನುಚಿತಮಂತಾದೊಡಂ ತದ್ಗುಣಸ್ತೋ
ಮದ ಜಾನಂ ಸಾರ್ವು ದೀವ್ಯಾಜದಿನೆನುಟಿದನಾಂ ಪೇಳಲುದ್ಯುಕ್ತನಾದೆಂ (ಬಸವರಾಜವಿಜಯಂ ೧:೨೮/೨೯)

ಎಂಬ ಶ್ರೇಷ್ಠ ನುಡಿಗಳು ಭೀಮಕವಿಯ ಘನತೆಯನ್ನು ಎತ್ತಿ ಹಿಡಿಯುತ್ತವೆ.

ಒಟ್ಟಿನಲ್ಲಿ ಭೀಮಕವಿ ಕವಿಪುತ್ರನಾಗಿ ಜನಿಸಿ, ಕವಿಗಳ ಪರಿಸರದಲ್ಲಿ ಬೆಳೆದು, ಸಹಜವಾಗಿಯೇ ಕವಿತ್ವವನ್ನು ಸಂಪಾದಿಸಿಕೊಂಡು ಮೂರು ಕೃತಿಗಳನ್ನು ರಚಿಸಿದ್ದಾನೆ. ಬಸವಪುರಾಣ ಅನೇಕ ವೈಶಿಷ್ಟ್ಯವನ್ನು ಅಳವಡಿಸಿಕೊಂಡ ಅವನ ಬೃಹತ್ಕಾವ್ಯವಾದರೆ ಉಳಿದೆರಡು ಚಿಕ್ಕ ಕೃತಿಗಳು. ಒಂದರಲ್ಲಿ ಷಡಕ್ಷರಮಂತ್ರದ ಮಹಿಮೆಯನ್ನು ಕೊಂಡಾಡಿದ್ದರೆ, ಇನ್ನೊಂದರಲ್ಲಿ ಭೃಂಗಿಯ ಕಥೆಯನ್ನು ಸಂಕ್ಷಿಪ್ತವಾಗಿ

ಹೇಳಲಾಗಿದೆ. ಮುಖ್ಯವಾಗಿ ಕನ್ನಡ ಪುರಾಣ ಪರಂಪರೆಯ ಆದ್ಯ ಪ್ರವರ್ತಕನಾದ ಭೀಮಕವಿ ಘನ ವ್ಯಕ್ತಿತ್ವದವನೆಂದು ಅಂಗೀಕರಿಸಬಹುದಾಗಿದೆ.

ಬ. ಕೃತಿನಾಯಕ – ಪೂರ್ವಾಪರಗಳು :

ಕನ್ನಡ ಸಾಹಿತ್ಯ ಗಂಗೆಯಲ್ಲಿ ಆವಿರ್ಭವಿಸಿದ ವಚನಕಾರರಿಂದ ಶ್ರೀಸಾಮಾನ್ಯನ ಮೈಮನಸ್ಸುಗಳು ಶುಭ್ರಗೊಂಡವು. ಅಕ್ಷರಶಃ ಜಡ್ಡುಗಟ್ಟಿದ ಸಮಾಜ ಇವರ ಇಚ್ಛಾಶಕ್ತಿಯಿಂದ ಚಲನಶೀಲಗೊಂಡಿತು. ಪಾರಂಪರಿಕ ಆಚರಣೆಗಳಿಂದ ರೋಗಗ್ರಸ್ತವಾದ ಸಮಾಜ ಇನ್ನಿಲ್ಲದಂತೆ ಎಲ್ಲ ರಂಗಗಳಲ್ಲಿಯೂ ಬದಲಾವಣೆ ಹೊಂದಿತು. ಈ ಯುಗ ಪರಿವರ್ತನೆಗೆ ಮುಖ್ಯ ಕಾರಣ ಬಸವಣ್ಣನವರು. ಬಸವಭಾನುವಿನ ಪ್ರಭಾವಲಯಕ್ಕೆ ಪಕ್ಕಾಗಿ ಅನೇಕ ಶಿವಶರಣರು ಅಭೂತಪೂರ್ವ ಆಂದೋಲನದಲ್ಲಿ ಪಾಲ್ಗೊಂಡು ತ್ರಿಕರಣಪೂರ್ವಕವಾಗಿ ಸಮಾಜದ ಉದ್ಧಾರಕ್ಕೆ ಹೆಗಲುಕೊಟ್ಟು ತಮ್ಮನ್ನು ಸಮರ್ಪಿಸಿಕೊಂಡರು. ತತ್ಪರಿಣಾಮವಾಗಿ ಸಮಾಜದಲ್ಲಿ ಮೇಲು–ಕೀಳು, ಪ್ರಭು–ಪ್ರಜೆ, ಗಂಡು–ಹೆಣ್ಣು, ಹಾರುವ–ಹೊಲೆಯ, ಶ್ರೇಷ್ಠ–ಕನಿಷ್ಠ ಎಂಬ ಭೇದ–ಭಾವವಿಲ್ಲದೆ ಸರ್ವಸಮಾನತೆಯ ತಳಹದಿಯ ಮೇಲೆ ನೂತನ ಸಮಾಜವೊಂದು ತಲೆಯೆತ್ತಿ ನಿಂತಿತು.

ತಮ್ಮ ಸತ್ಯಶುದ್ಧ ನಡೆನುಡಿಯಿಂದ, ನೇರ ಮಾತುಗಳಿಂದ ಜೀವಂತ ಉದಾಹರಣೆಯಾಗಿ ಅಸ್ತವ್ಯಸ್ತವಾಗಿದ್ದ, ಒಳತಿರುಳು ಕೊಳೆತಿದ್ದು ಹೊರತಿರುಳು ಮಾತ್ರ ಹೊಳೆಯುತ್ತಿದ್ದ ಸಮಾಜವನ್ನು ತೀಡಿ–ತಿದ್ದಿ ನೇರ್ಪುಗೊಳಿಸಿದರು. ಸಮಾಜದ ಎಲ್ಲಾ ರಂಗದಲ್ಲಿಯೂ ಪರಿವರ್ತನೆ ತಲೆದೋರಿ ಸುಖಿಸಮಾಜ, ಭಕ್ತಸಮಾಜ ರೂಪುಗೊಂಡಿತು. ಶತಮಾನಗಳ ಕಾಲ ಭೂದೇವಿ ಮಾಡುವ ತಪಸ್ಸಿನಿಂದ ಒಬ್ಬೊಬ್ಬ ಮಹಾಪುರುಷರು ಹುಟ್ಟಿ ಬರುತ್ತಾರೆ ಎಂಬ ಮಾತಿಗೆ ಇತಿಹಾಸ ಸಾಕ್ಷಿ ನುಡಿಯುತ್ತದೆ. ಕಾಲದ ಅಗತ್ಯತೆಯನ್ನು ಪೂರೈಸಲು ಇಂತಹ ಮಹಾ ಪುರುಷರಿಂದ ಮಾತ್ರ ಸಾಧ್ಯ. ಹೀಗೆ ಸಂದರ್ಭದ ಅಗತ್ಯತೆಯಿಂದ ಜನಿಸಿದವನು ಬಸವಣ್ಣ. ಮನುಷ್ಯ ಸಂದರ್ಭದ ಕೂಸಾದರೂ ಸಂದರ್ಭವನ್ನು ಸೃಷ್ಟಿಸುವವನೂ ಇವನೆ ಎಂಬ ಮಾತು ಅಕ್ಷರಶಃ ಸತ್ಯ. ಸರ್ವರಂಗಗಳಲ್ಲೂ ದಿಕ್ಕೆಟ್ಟ ಪರಿಸ್ಥಿತಿಯನ್ನು ಸರಿದಾರಿಗೆ ತರುವ ಪ್ರಯತ್ನ ಮಾಡಿ ಆ ಮೂಲಕ ಕನ್ನಡ ಮಣ್ಣಲ್ಲಿ ಕ್ರಾಂತಿಯನ್ನು ಮಾಡಿದವರು ಬಸವಣ್ಣನವರು. 'ಶರಣರೆಂಬ ಸೌರವ್ಯೂಹದ ಎಲ್ಲ ಗ್ರಹಗಳನ್ನು ಜೋಲಿ ಹಿಡಿದು ಮುನ್ನಡೆಸಬಲ್ಲ ಸೂರ್ಯವ್ಯಕ್ತಿತ್ವ' (ಕಲಬುರ್ಗಿ ಎಂ.ಎಂ. ಬಸವಪುರಾಣದ ಪ್ರಭಾವ ಪರಂಪರೆ: ಪು.೫೭) ಈತನದು. ಆದ್ದರಿಂದಲೆ ಇಂದಿಗೂ ಸಹ ಬಸವಪ್ರಭೆ ಬೆಳಗುತ್ತಲೆ ಇದೆ.

ಬಸವಪೂರ್ವದ ಕೊಂಡಗುಳಿ ಕೇಶಿರಾಜ ಹೋರಾಟದ ಕಣ ಸಿದ್ಧಪಡಿಸಿದ, ಬಸವಣ್ಣ ಹೋರಾಡಿ ಯಶಸ್ವಿಯಾದ. ಈ ಹೋರಾಟವನ್ನು ಜನಮಾನಸಕ್ಕೆ ತಲುಪಿಸಿದವನು ಭೀಮಕವಿ. ಬಸವಣ್ಣನವರು ಹನ್ನೆರಡನೆಯ ಶತಮಾನದಿಂದ ಇಂದಿನವರೆಗೆ ಎಲ್ಲ ಶತಮಾನಗಳ ಎಲ್ಲ

ಸಾಹಿತ್ಯ ಪ್ರಕಾರಗಳಿಗೆ ವಸ್ತುವಾಗುತ್ತ ಬಂದಿದ್ದಾರೆ. ಬಹುಶಃ ಬಸವಣ್ಣನವರನ್ನು ಕುರಿತು ಬಂದಷ್ಟು ಸಾಹಿತ್ಯ ಭಾರತದ ಯಾವ ಮಹಾಪುರುಷನ ಬಗೆಗೂ ಬಂದಂತಿಲ್ಲವೆಂದು ಹೇಳಬಹುದು. ಈ ಸಾಹಿತ್ಯ ಶಿಷ್ಟ ಹಾಗೂ ಜನಪದಗಳಲ್ಲಿ ಕವಲೊಡೆದಿದೆ. ಶಿಷ್ಟ ಸಾಹಿತ್ಯಕ್ಕೆ ಬಂದರೆ ಚಂಪೂ, ವಚನ, ರಗಳೆ, ಷಟ್ಪದಿ, ಸಾಂಗತ್ಯ, ತ್ರಿಪದಿ ಸಾಹಿತ್ಯ ಪ್ರಕಾರಗಳಿಗೆ ಬಸವಣ್ಣನವರು ವಸ್ತುವಾಗುತ್ತಲೇ ಬಂದಿದ್ದಾರೆ. ಕನ್ನಡದ ಆಚೆಗೆ ಸಂಸ್ಕೃತ, ಮರಾಠಿ, ತೆಲುಗು, ತಮಿಳು, ಮಲೆಯಾಳಂ, ಉರ್ದು ಇತ್ಯಾದಿ ದೇಶಿ ಭಾಷೆಗಳಲ್ಲಿ ಮತ್ತು ಇಂಗ್ಲೀಷ್, ಫ್ರೆಂಚ್, ಜರ್ಮನ್, ರಷ್ಯನ್, ಜಪಾನ್, ಇತ್ಯಾದಿ ವಿದೇಶಿ ಭಾಷೆಗಳಲ್ಲಿ ಅವರು ವಿಸ್ತರಿಸುತ್ತಲೇ ಇದ್ದಾರೆ.

ಶಿಷ್ಟ ಸಾಹಿತ್ಯದಂತೆ ಜನಪದ ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿಯೂ ಬಸವಣ್ಣನವರು ವಸ್ತುವಾಗಿ ಮೆರೆದಿದ್ದಾರೆ. ತ್ರಿಪದಿ ಮೊದಲುಮಾಡಿ, ಜನಪದ ಬಸವಪುರಾಣದವರೆಗೆ ಬಿಚ್ಚಿಕೊಂಡಿದ್ದಾರೆ. ಇವರನ್ನು ಕುರಿತು ವೃತ್ತಿ–ಆಚರಣೆ–ಉಪಜೀವನದ ಹಾಡುಗಳು, ಪುರುಷ–ಸ್ತ್ರೀ–ಮಕ್ಕಳ ಹಾಡುಗಳು ವಿಪುಲ ಪ್ರಮಾಣದಲ್ಲಿ ಹುಟ್ಟಿವೆ. ದೃಶ್ಯಸಾಹಿತ್ಯಕ್ಕೆ ಬಂದರೆ ದೊಡ್ಡಾಟ, ಸಣ್ಣಾಟ, ಯಕ್ಷಗಾನಗಳಿಗೂ ಬಸವಣ್ಣನವರು ವಸ್ತುವಾಗಿದ್ದಾರೆ. ಕಾರಭಾಸಗಿಯ ರೇವಣಸಿದ್ಧಯ್ಯಸ್ವಾಮಿಯ (೧೮೯೦–೧೯೨೭)'ಜಗಜ್ಯೋತಿ ಬಸವೇಶ್ವರ', ಕಣಿವೆ ಕರುವಿನಕೊಪ್ಪದ ಗುರುರಾಚಯ್ಯನ (೧೮೯೮–೧೯೭೫) 'ಬಸವೇಶ್ವರ', ಸಾವಳಗಿ ಮಹಮ್ಮದ್‌ನ (೧೯೬೦) 'ಜಗಜ್ಯೋತಿ ಬಸವೇಶ್ವರ', ಓಕಳಿ ಚೆನ್ನಬಸವಯ್ಯ ಸ್ವಾಮಿಯ (೧೯೧೧–೧೯೫೦) 'ಬಸವೇಶ್ವರ', ಗುರುಲಿಂಗಪ್ಪ ವಾಲಿಕಾರನ (೧೯೨೦) 'ಬಸವೇಶ್ವರ', ರಟಕಲ್ಲ ಸ್ವಾಮಿಯ (೧೯೨೦) 'ಬಸವೇಶ್ವರ' ದೊಡ್ಡಾಟಗಳು ಲಭ್ಯವಿವೆ.

ಆದರೆ ಕನ್ನಡದಲ್ಲಿ ಬಸವಣ್ಣನವರನ್ನು ಕುರಿತ ಮೊಟ್ಟ ಮೊದಲ ಕಾವ್ಯ ಭಕ್ತಕವಿ 'ಹರಿಹರನ' 'ಬಸವರಾಜದೇವರ ರಗಳೆ'. ಇದೊಂದು ರಸನಿಷ್ಠವಾದ ಕಾವ್ಯವಾದ್ದರಿಂದ ಜನಮಾನಸವನ್ನು ಮುಟ್ಟಲಿಲ್ಲ. ನಂತರ ಪಾಲ್ಕುರಿಕೆ ಸೋಮನಾಥನ 'ಬಸವಪುರಾಣಮು' ಕೃತಿಯ ಬಳಿವಿಡಿದು ಬಂದ ಭೀಮಕವಿಯ 'ಬಸವಪುರಾಣ' ಪುರಾಣಪರಂಪರೆಗೆ ಹೆದ್ದಾರಿಯನ್ನು ನಿರ್ಮಿಸಿತು. ಈ ಕೃತಿಯ ಆದರ್ಶದಲ್ಲಿ ಅನೇಕ ಪುರಾಣಗಳು ನಿರ್ಮಾಣಗೊಂಡವು. ಆದರೆ ಈ ಎಲ್ಲ ಪುರಾಣಗಳ ಆಧಾರದಿಂದ ಬಸವಣ್ಣನ ಚರಿತ್ರೆ ತಿಳಿಯ ಹೊರಟರೆ ಭ್ರಮಾಲೋಕವೊಂದು ಎದುರಾಗುತ್ತದೆ. ಮೂಲ ಬಸವಪುರಾಣದ ಪಾಲ್ಕುರಿಕೆ ಸೋಮನಾಥನಾಗಲಿ, ಅವನ ಕೃತಿಯನ್ನು ಸ್ವತಂತ್ರ ಕೃತಿಯೆಂಬಂತೆ ಅನುವಾದಿಸಿದ ಕನ್ನಡ ಬಸವಪುರಾಣದ ಪ್ರಸ್ತುತ ಭೀಮಕವಿಯಾಗಲಿ ಇವರು ಬಸವಣ್ಣನವರ ಸಮಕಾಲೀನರಲ್ಲ; ಅಥವಾ ಬಸವಣ್ಣನವರಿಗೆ ಭೌಗೋಳಿಕವಾಗಿ ಹತ್ತಿರದವರೂ ಅಲ್ಲ. ಶ್ರೀಶೈಲಕ್ಕೆ ಬರುವ ಯಾತ್ರಾರ್ಥಿಗಳ ಸಹಾಯದಿಂದ ಬಸವಣ್ಣನ ಕಥೆ ಕೇಳಿ ಪಾಲ್ಕುರಿಕೆ ಸೋಮನಾಥ 'ಬಸವಪುರಾಣಮು' ಕೃತಿ ರಚಿಸಿದ. ಅದನ್ನೇ ಸ್ವತಂತ್ರ ಕೃತಿಯಾಗಿ ಭೀಮಕವಿ ಹಲ

ಕೆಲವು ವ್ಯತ್ಯಾಸಗಳೊಂದಿಗೆ ಕನ್ನಡದಲ್ಲಿ ರಚಿಸಿದ .ಆದ್ದರಿಂದ ಈ ಪುರಾಣಗಳಲ್ಲಿ ಐತಿಹಾಸಿಕ ಅಂಶಗಳ ಕೊರತೆ ಎದ್ದು ಕಾಣುತ್ತದೆ.

ಬಸವಣ್ಣನವರ ಸಮಕಾಲೀನರು ಅವರ ಚರಿತ್ರೆ ಬರೆದಿದ್ದರೆ ಐತಿಹಾಸಿಕ ಅಂಶಗಳು, ಹಾಗೂ ವಾಸ್ತವಾಂಶಗಳು ಹೆಚ್ಚು ಲಭ್ಯವಾಗುತ್ತಿದ್ದವೇನೋ. ಆದರೆ ಬಸವಣ್ಣನವರು ಗತಿಸಿ ನೂರಿನ್ನೂರು ವರ್ಷಗಳ ನಂತರ ಕೃತಿಗಳು ಮೂಡಿ ಬಂದ ಕಾರಣ ಅವುಗಳಲ್ಲಿ ಬಹುಪಾಲು ಬಸವಣ್ಣನವರೊಬ್ಬ ಪವಾಡ ಪುರುಷನಂತೆ, ಅವತಾರಿಯಂತೆ, ಅತಿಮಾನುಷ, ಅಲೌಕಿಕ ಕಾರಣಗಳೇ ಹೆಚ್ಚಿರುವುದರಿಂದ ಅವರ ಚರಿತ್ರೆಯಲ್ಲಿ ಕೆಲವಂಶಗಳು ಸ್ಪಷ್ಟವಾಗಿ ಕಂಡುಬರುವುದಿಲ್ಲ. ಹಾಗಾದರೆ ಬಸವಣ್ಣನವರ ಸಮಕಾಲೀನರು ಅವರ ಚರಿತ್ರೆ ಬರೆಯದಿರಲು ಕಾರಣಗಳೇನಿರಬಹುದೆಂಬುದನ್ನು ರಾವ್‌ಬಹದ್ದೂರ್ ಫ.ಗು.ಹಳಕಟ್ಟಿಯವರು ಈ ರೀತಿಯಾಗಿ ಗುರುತಿಸುತ್ತಾರೆ.

ಬಸವಣ್ಣನವರ ಚರಿತ್ರೆಯು ಉಪಲಬ್ದವಾಗದಿರಲಿಕ್ಕೆ ಹಲವು ಕಾರಣಗಳಿವೆ. ಅವರ ಚಳುವಳಿಯಿಂದ ಸಮಾಜದಲ್ಲಿ ಒಂದು ಕ್ಷೋಭವು ಎದ್ದಿತು. ಅವರು ಧರ್ಮಬಾಹಿರರೆಂದು ಮೊದಲು ಎಣಿಸಲ್ಪಟ್ಟರು. ಹೀಗೆ ಎಣಿಸಲ್ಪಟ್ಟವರ ಚರಿತ್ರೆಯನ್ನು ಆಗಿನವರು ಬರೆಯುವವರಾರು? ಆರಂಭ ಕಾಲದಲ್ಲಿ ಬಸವಣ್ಣನವರಿಗೆ ಸಹಾಯವಾದವರು ಪ್ರಮುಖ ಸಮಾಜದವರಲ್ಲ. ಅವರಿಗೆ ಸಹಾಯವಾದವರು ಒಬ್ಬ ಅಗಸ, ಒಬ್ಬ ಕಿನ್ನರೀ ಬಾರಿಸುವವ, ಒಬ್ಬ ಮದ್ದಲಿಗ, ಒಬ್ಬ ಒಡ್ಡರ ನಾಯಕ, ಒಬ್ಬ ನಾಪಿತ, ಹೊಲೆಯ, ಢೋರ, ಕಟ್ಟಿಗೆಯನ್ನು ಮಾರಿ ಉಪಜೀವಿಸುವವನೊಬ್ಬ ,ದೇಶತ್ಯಾಗ ಮಾಡಿದ ಒಬ್ಬ ಸ್ತ್ರೀಯಳು ಇಂಥವರೇ ಇದ್ದಾರೆ. ಕ್ರೈಸ್ತನಿಗೆ ಮೊದಲು ಅನುಯಾಯಿಗಳಾದವರು ಇಂಥವರೇ. ಮಹಮ್ಮದ, ಬುದ್ಧ ಇವರ ಸ್ಥಿತಿಯಾದರೂ ಹೀಗೆಯೇ ಇದೆ. ಮೇಲಿನ ತರಗತಿಯ ಸಮಾಜದವರು ಇಂಥ ಮಹಾತ್ಮರನ್ನು ಆರಂಭದಲ್ಲಿ ಪೀಡಿಸುತ್ತಾರೆ. ಈ ಸ್ಥಿತಿಯಲ್ಲಿ ಇವರ ಚರಿತ್ರೆಗಳನ್ನು ಸಮಕಾಲೀನರು ಹೇಗೆ ಬರೆದಿಡಬೇಕು? ಮೇಲ್ತರಗತಿಯವರು ಬರೆಯುವ ಸಂಭವವಿಲ್ಲ. ಕೆಳಗಿನವರು ಪೀಡಿಸಲ್ಪಟ್ಟವರು; ವಿಪನ್ನಸ್ಥಿತಿಯಲ್ಲಿದ್ದವರು. ಆದ್ದರಿಂದ ಇಂಥ ಮಹಾನುಭವರ ಚರಿತ್ರೆಗಳನ್ನು ಬರೆದಿಡುವ ಕಾಲವು ಮುಂದೆ ನೂರಿನ್ನೂರು ವರ್ಷಗಳ ಮೇಲೆ ಬರುತ್ತದೆ. ಆದರೆ ಈ ಅವಧಿಯಲ್ಲಿ ಅವರ ಬಗ್ಗೆ ಅನೇಕ ದಂತಕಥೆಗಳು ಉತ್ಪನ್ನವಾಗುತ್ತವೆ. ಭಾವಿಕ ಜನರು ಅಂಥವುಗಳನ್ನು ಸಂಗ್ರಹಿಸಿ ಮಹಾನುಭಾವರ ಚರಿತ್ರೆಗಳನ್ನು ಹಿಂದುಗಡೆ ಬರೆದಿಡುತ್ತಾರೆ. ಇದೇ ಸ್ಥಿತಿಯು ಬಸವೇಶ್ವರರ ಚರಿತ್ರೆಯದಾಗಿದೆ. (ಹಳಕಟ್ಟಿ ಸಮಗ್ರ ಸಾಹಿತ್ಯ ಸಂ.೧೧. ಪು.೪)

ಆದರೂ ಸಹ ಪ್ರಯತ್ನಪಟ್ಟರೆ ಅನೇಕ ಸತ್ಯ ಸಂಗತಿಗಳು ಗೋಚರಿಸುತ್ತವೆ. ಭೂಗರ್ಭದಲ್ಲಿಯ ನಿಕ್ಷೇಪಗಳಂತೆ ಕಾಲಗರ್ಭದಲ್ಲಡಗಿದ ಬಸವೇಶ್ವರರ ಬಗ್ಗೆ ಇರುವ ಸತ್ಯ ಸಂಗತಿಗಳು ಅಲ್ಲಲ್ಲಿ ಹೊಳೆಯುತ್ತವೆ. ಅವುಗಳ ಸತ್ಯಾಸತ್ಯತೆಯನ್ನು ಪರೀಕ್ಷಿಸಿ ಸ್ವೀಕರಿಸಬೇಕಷ್ಟೇ. ಬಸವಣ್ಣನವರು ಐತಿಹಾಸಿಕ

ವ್ಯಕ್ತಿ ಅಲ್ಲವೇ ಅಲ್ಲ ಎಂಬ ವಾದ ಅರ್ಜುನವಾಡ ಶಾಸನ ಸಿಕ್ಕ ನಂತರ ಬಿದ್ದು ಹೋಗಿದೆ. "ಬಸವಣ್ಣನವರು ಕೇವಲ ಪವಾಡ ಪುರುಷರಲ್ಲ. ಅವರು ಐತಿಹಾಸಿಕ ಪುರುಷರು. ಅವರ ವಚನಗಳು ಬರಿ ನಟನೆಯಲ್ಲ, ಅವು ಅಂತರಂಗಸ್ಫುರಿತ ನೈಸರ್ಗಿಕ ಭಾವಗಳು. ಅವರ ಕಾರ್ಯಕಲಾಪಗಳು ಮಾಯಾ ಪ್ರಪಂಚಕ್ಕೆ ಸೇರಿದ ಮಿಥ್ಯಾ ವಿಷಯಗಳಲ್ಲ. ಅವು ಕಾವೇರಿ ಜಲಪಾತದಿಂದ ವಿದ್ಯುಚ್ಛಕ್ತಿಯನ್ನು ಹರಡಿದಂತೆ ಈ ಸಾಹಿತ್ಯ ಪ್ರಪಂಚಕ್ಕೆ ಸೇರಿದ ಸ್ಥೂಲರೂಪದ ಸಾಹಸಗಳು. ಅವರು ತಮ್ಮ ಜೀವನಪಥವನ್ನು ಈ ಭೂಮಿಯ ಮೇಲೆಯೇ ಸಾಂಗವಾಗಿ ನಡೆಸಿದರು. ಆ ಜೀವನ ಪಥದಲ್ಲಿ ಎಷ್ಟೋ ತೊಡಕುಗಳನ್ನು ಸಂಧಿಸಿ ಅವುಗಳನ್ನು ದಾಟಿದರು. ಅವರ ಜೀವನಚರಿತ್ರೆಯು ಮಾನವರಿಗೆಲ್ಲ ಬೋಧಪ್ರದವೂ ಮಾರ್ಗದರ್ಶಕವೂ ಆಗಿದೆ."

ಈಗಿನ ಕಾಲದ ಜನ ಬಯಸುವುದು ಬಸವಣ್ಣನವರ ಜೀವನ ಚರಿತ್ರೆಗೆ ಸಂಬಂಧಿಸಿದ ನಿಜವಾದ ಘಟನೆಗಳು ಯಾವುವು ಎಂಬುದನ್ನೇ ಹೊರತು ಪವಾಡಗಳನ್ನಲ್ಲ. ಅವರು ಬಸವಣ್ಣನವರ ಚರಿತ್ರೆಯನ್ನು ನೋಡಬಯಸುವುದು ಭಕ್ತಿಯ ದೃಷ್ಟಿಯಿಂದಲ್ಲ. ಆಧುನಿಕ ಕಾಲದ ಐತಿಹಾಸಿಕ ದೃಷ್ಟಿಯಿಂದ. ಆದ್ದರಿಂದ ಬಸವಣ್ಣನವರ ಕರ್ಮಭೂಮಿಕೆಯನ್ನು ಅರ್ಥಮಾಡಿಕೊಳ್ಳಲು ಪ್ರಮುಖ ಆಧಾರಗಳು ಅವರ ಹಾಗೂ ಸಮಕಾಲೀನ ಶರಣರ ವಚನಗಳು, ಪುರಾಣ-ಕಾವ್ಯಗಳು ಹಾಗೂ ಶಾಸನಗಳು. ಈ ಎಲ್ಲ ಆಕರಗಳನ್ನು ಸಂದರ್ಭೋಚಿತವಾಗಿ ಬಳಸಿಕೊಂಡು ಬಸವಣ್ಣನವರ ಚರಿತ್ರೆ ತಿಳಿಯುವ ಪ್ರಯತ್ನ ಮಾಡಬಹುದು. **"ಭೀಮಕವಿಯ ಬಸವಪುರಾಣ: ಸಾಂಸ್ಕೃತಿಕ ಅಧ್ಯಯನ"** ಎಂಬ ಪ್ರಬಂಧದ ಕೇಂದ್ರ ವಸ್ತು ಸಾಂಸ್ಕೃತಿಕ ಅಂಶಗಳ ಅಧ್ಯಯನವಾದರೂ ಸಹ ಸ್ಥೂಲವಾಗಿ ಕೃತಿನಾಯಕ ಬಸವಣ್ಣನವರ ಚರಿತ್ರಾಂಶಗಳನ್ನು ಚರ್ಚಿಸಿ ಪ್ರಸ್ತುತ ಅಧ್ಯಯನದ ಕೇಂದ್ರದತ್ತ ಮುನ್ನಡೆಯೋಣ.

೧. ಕೃತಿನಾಯಕ :

ಭೀಮಕವಿಯ 'ಬಸವಪುರಾಣ' ಈ ಕೃತಿಯ ನಾಯಕ ಮರ್ತ್ಯಲೋಕದ ಮಹಾದೇವ ಬಸವಣ್ಣನವರು. ಇವರ ಕಥೆ ಪುರಾಣದ ಆದಿ ಮಧ್ಯ ಮತ್ತು ಅಂತ್ಯದಲ್ಲಿ ಚೆಲ್ಲುವರಿದಿದೆ. ಭೀಮಕವಿ ಪುರಾಣದ ಪ್ರಾರಂಭದಲ್ಲಿಯೇ

ಶ್ರೀಗುರುವೆ ದೀಕ್ಷಾಗುರುವೆ ಶಿ
ಕ್ಷಾಗುರುವೆ ರಕ್ಷಾಗುರುವೆ ಸ
ರ್ವಾಗಮೋಕ್ತಕಳಾಗುರುವೆ ಶಿವಯೋಗಧರ್ಮಾರ್ಥ
ಭೋಗಗುರುವೇ ತ್ಯಾಗಗುರುವೆ ಸು
ಧೀಗುರುವೆ ವಾಚಾಗುರುವೆ ಭವ
ರೋಗಹರ ಶರಣಾಗು ಬಸವಮಹಾಗುರುವೆ ನಮಗೆ (೧: ೧)

ಎಂದು ಪ್ರಾರ್ಥಿಸಿಕೊಳ್ಳುತ್ತಾನೆ.

ನಿನ್ನ ಕೃತಿಯಂ ಸೊಗಸುಮಿಗೆ ಪೇ
ಳ್ವೆನ್ನವರ ನಿರ್ವಿಘ್ನದಿಂದು
ತ್ಪನ್ನನವರಭಾವಭರಿತೋನ್ನತಮತಿಯನಿತ್ತು

ಎನ್ನವಂ ಪದುಳದೊಳಿರಿಸಿ ಪೊರೆ
ಸನ್ನುತಾಮಳಭಕ್ತಿ ಗುಣಸಂ
ಪನ್ನ ಕಲಿಯುಗದೆರಡನೆಯಮುಕ್ಕಣ್ಣ ಬಸವಣ್ಣ (೧: .೮)

ಎಂಬಲ್ಲಿ ಕವಿಯು ಬಸವಣ್ಣನವರನ್ನು ಎರಡನೆಯ ಮುಕ್ಕಣ್ಣ ಎಂದು ಕರೆದಿದ್ದಾನೆ.

ಶಿವಕವಿಗಳೆನಿಸಿದ ಪುರಾತನ
ಕವಿಗಳಂ ಶಿವಭಕ್ತನೂತನ
ಕವಿಗಳಂ ಶಿವಧರ್ಮಶಾಸ್ತ್ರ ಕಳಾವಿಶಾರದರ
ಶಿವರಹಸ್ಯಮಹತ್ವಶಿವತ
ತ್ವವಿದರಂ ಸಕಲಾಗಮಜ್ಞ
ಪ್ರವರರಂ ಭಾವಿಸಿ ರಚಿಸುವೆಂ ಬಸವಚರಿತೆಯನು (೧: ೧೨)

ಬಸವನವರ ಚರಿತ್ರೆಯ ಜೊತೆಗೆ ಪುರಾತನರನ್ನೂ, ನೂತರನನ್ನು ಹೊಂದಿಸಿ ಬಸವಚರಿತ್ರೆ ಭಾವಿಸುತ್ತೇನೆ ಎಂದು ಸ್ಪಷ್ಟವಾಗಿ ಹೇಳುತ್ತಾನೆ.

ಆದಿಲಿಂಗರಹಸ್ಯಸಿದ್ಧಾಂ
ತಾದಿ ವೇದಪುರಾಣಸಮ್ಮತ
ವಾದ ಬಸವಪುರಾತನರ ಗೀತಾರ್ಥಮಾತೃಕದಿ
ಕೋದಮಣಿಗಣಸೂತ್ರದಂತಿರೆ
ಆದಿಗಣಚರಿತಂಗಳೊಳು ಸಂ
ವೇದಿಸಲು ಬಸವನ ಚರಿತೆಯಂ ಬಣ್ಣಿಸುವೆನೊಸೆದು (೧: .೨೩)

ಎಂಬಲ್ಲಿ 'ಲಿಂಗರಹಸ್ಯಸಿದ್ಧಾಂತ', 'ವೇದಪುರಾಣ', 'ಬಸವ ಪುರಾತನರ ಗೀತಾರ್ಥ' ಇವುಗಳನ್ನು ಕೋದ ಮಣಿಗಣಸೂತ್ರದಂತೆ ಬಸವನವರ ಚರಿತ್ರೆಯನ್ನು ಆದಿಗಣಗಳ ಚರಿತೆಗಳೊಡನೆ ಬಣ್ಣಿಸುವೆನು ಎನ್ನುತ್ತಾನೆ. ಅಂದರೆ ಕವಿಯು ಬಸವಣ್ಣನವರ ವ್ಯಕ್ತಿಗತ ಚರಿತ್ರೆಗೆ ಅಷ್ಟೊಂದು ಪ್ರಾಶಸ್ತ್ಯ ಕೊಡದೆ ಇರುವುದು ಇದರಿಂದ ವ್ಯಕ್ತವಾಗುತ್ತದೆ. ಈ ಪುರಾಣದ ಎಷ್ಟೋ ಸಂದರ್ಭಗಳಲ್ಲಿ ಬಸವಣ್ಣನವರ ಮಾತೇ ಬರುವುದಿಲ್ಲ. ಬಸವಣ್ಣನವರಿಗೂ ಆ ಕಥೆಗಳಿಗೂ ಸಂಬಂಧವೇ ಇಲ್ಲ. ಪುರಾಣಗಳ ಭಿತ್ತಿ ವಿಶಾಲ. ಕೃತಿಯ ಕಾವ್ಯಗುಣ ಇಲ್ಲಿ ಅಮುಖ್ಯವಾಗುತ್ತದೆ. ಅದರ ಪುರಾಣತ್ವ ಪ್ರಧಾನವಾಗುತ್ತದೆ. ಆದ್ದರಿಂದಲೇ ಸಾಮಾನ್ಯ ಜನತೆಗೆ ಇದು ಪ್ರಿಯವಾಗುತ್ತದೆ. ಪುರಾಣ ಕರ್ತೃವಿಗೆ ಬಸವ ಒಂದು ಕಾಲ ದೇಶಕ್ಕೆ ಬದ್ಧನಾದ ವ್ಯಕ್ತಿಯಾಗದೆ ಅವನು ತತ್ವಶಃ ಯಾವ ಕಾಲಕ್ಕಾದರೂ ಸೇರಬಹುದಾದ ಒಂದು ಮಾದರಿಯಾಗುತ್ತಾನೆ. ಎಲ್ಲಾ ಕಾಲದ ಒಂದು ಆದರ್ಶವಾಗುತ್ತಾನೆ. "ಸಾಮಾನ್ಯ ಜನತೆಗೂ ಇತಿಹಾಸದಲ್ಲಿ ಆಸಕ್ತಿ ಅಷ್ಟಕ್ಕಷ್ಟೇ. ಬಸವನ ಹಿರಿಮೆ, ಮಹಾತ್ಕಾರ್ಯ, ಪವಾಡ ಇವೆ ಅವರಿಗೆ ಇತಿಹಾಸ, ಮತ್ತು ಮುಖ್ಯ. ಅವನು ಯಾವ ಕಾಲದಲ್ಲಿದ್ದ, ಬಸವ ಯಾವ ಪರಂಪರೆಯ ಅಂಗವಾಗಿ ಬದುಕಿದ ಎಂಬುದರ ಸಾರ ಅವರಿಗೆ ದೊರಕಿದರೆ ಸಾಕು. ಇತಿಹಾಸವನ್ನು ಕಟ್ಟಿಕೊಂಡು ಅವರಿಗೇನು?" (ಚಿಮೂ. ಪುರಾಣ ಮತ್ತು ಕಾವ್ಯ ಬಸವಣ್ಣನ ಬಗ್ಗೆ ಪು. ೧೭೮)

ಬಸವಣ್ಣವರ ಬಗ್ಗೆ ಅಸೀಮ ಭಕ್ತಿಯುಳ್ಳ ಕವಿ ಅರವರನ್ನು ಮನದಣಿಯೆ ಸ್ತುತಿಸುತ್ತಾನೆ.

ಬಸವ ಶರಣೆನೆ ಪಾಪವಳಿವುಗು
ಬಸವ ಶರಣೆನೆ ತಾಪವಾಱುಗು
ಬಸವ ಶರಣೆನೆ ಪರಮಪಾವನ ಭಾತಿ ಸಂಧಿಸುಗು
ಬಸವ ಶರಣೆನೆ ಭಕ್ತಿ ದೊರಕುಗು
ಬಸವ ಶರಣೆನೆ ಸಾರ್ಗು ಸುಸ್ಥಿತಿ
ಬಸವ ಶರಣೆನೆ ವಚನರಚನಾಸಿದ್ಧಿ ವರ್ಧಿಸುಗು ... (೧: .೨೫)

ಬಸವ ಶರಣೆನೆ ಭವವುಡುಗುವುದು
ಬಸವ ಶರಣೆನೆ ಕೀರ್ತಿಯೆಸೆವುದು
ಬಸವ ಶರಣೆನೆ ದುಸ್ಥಿತಿಗಳತ್ತತ್ತಲೋಡುವುವು
ಬಸವ ಶರಣೆನೆ ಸೌಖ್ಯವೊಂದುಗು
ಬಸವ ಶರಣೆನೆ ಭಾಗ್ಯವಪ್ಪುಗು
ಬಸವ ಶರಣೆನೆ ಕಾಮಿತೋನ್ನತ ಸಿದ್ಧಿ ಸಿದ್ಧಿಸುಗು ... (೧: ೨೬)

ಬಸವ ಶರಣೆನೆ ಶೀಲವೊಪ್ಪುಗು
ಬಸವ ಶರಣೆನೆ ವಿಮಲಮತಿ ರಂ
ಜಿಸುವುದುಸುರುವುದೇಂ ಬಸವನೆಂಬಕ್ಷರತ್ರಯವ
ಒಸೆದು ಚಿತ್ತದೊಳೊಮ್ಮೆಯುಂ ಪಠಿ
ಯಿಸುವನಾವನವನ ವದನಸಾ
ರಸವೆ ನೆಲೆಯಾಗಿಪ್ಪನೀಶ್ವರನೆಂದಡಂತಾಗಿ ... (೧: .೨೭)

ಬಸವರಾಜನಾಗಳುಂ ಕೀ
ರ್ತಿಸುವವಂ ಭವಬಂಧಮಂ ಛೇ
ದಿಸುವುದರಿದೇ ಬಸವನೇಂ ಜಾವಳನೆ ಭಕ್ತರೊಳು
ಅಸಮನೇತ್ರನೆ ಬಸವನಾಮದಿ
ನೆಸೆದನಲ್ಲದೆ ಬಸವನಿಳೆಗುದ
ಯಿಸಿದ ಮಾತ್ರದೊಳಾತನಂ ನರಜಾತನೆನಲಹುದೆ ... (೧: ೨೮)

ಈ ಪದ್ಯದಲ್ಲಿಯಂತೂ ಬಸವಣ್ಣನವರು ಭೂಮಿಯಲ್ಲಿ ಹುಟ್ಟಿದ ಮಾತ್ರಕ್ಕೆ ಅವರನ್ನು ಮನುಷ್ಯನೆನ್ನಲಾದೀತೆ? ಎಂದು ಪ್ರಶ್ನಿಸಿ ಬಸವಣ್ಣನವರು ಅವತಾರಿಪುರುಷರೆಂಬಂತೆ ವರ್ಣಿಸುತ್ತಾನೆ.

ಶೀಲವಂತರ ಕೈಯ ಕನ್ನಡಿ
ಕಾಲಕಂಠನ ಕೂರಲಗು ಕರು
ಣಾಳು ಬಸವಂ ಲಿಂಗಜಂಗಮದೊಳು ಸೊಬಗನೆನಿಸಿ
ಲೀಲೆಯಿಂ ನವಕುಸುಮ ಗಂಧ ಸ
ಮೇಳನದೊಳಿಪ್ಪಸಮ ಭಕ್ತ ವಿ
ಶಾಲನಂ ಬಣ್ಣಿಸಲಳವೆ ಸುರದನುಜಮನುಜರಿಗೆ ... (೧: .೩೩)

'ಶೀಲವಂತರ ಕೈಯ ಕನ್ನಡಿ', 'ಕಾಲಕಂಠನ ಕೂರಲಗು' ಎಂಬ ಪದಗಳು ಬಸವಣ್ಣನವರ ನಿರ್ಮಲ ವ್ಯಕ್ತಿತ್ವಕ್ಕೆ ಕಳೆಗಟ್ಟುತ್ತವೆ.

ಭೀಮಕವಿ ಬಸವಪುರಾಣ ರಚಿಸಿದ ಸಂದರ್ಭ ಬಹಳ ಮುಖ್ಯವಾದದ್ದು. ವೈದಿಕ ಹಾಗೂ ಜೈನ ಪುರಾಣಗಳಿಗೆ ಪ್ರತಿಗಾಮಿಯಾಗಿ ಕವಿ ಈ ಪುರಾಣದಲ್ಲಿ ಬಸವಣ್ಣನವರನ್ನು

ಕಥಾನಾಯಕನನ್ನಾಗಿ ಮಾಡಿಕೊಂಡು ಉದಾತ್ತೀಕರಿಸಿದ್ದಾನೆ ಎಂಬ ವಿಚಾರ ರೋಮಾಂಚಕವಾದರೂ ಸತ್ಯ ಎಂಬುದು ಕಂಡುಬರುತ್ತದೆ. ಈ ನೆಲದ ಸತ್ವವನ್ನು ಹೀರಿ ಯುಗಯುಗಗಳಲ್ಲೂ ಸಹ ಪಂಡಿತಪಾಮರಾದಿಯಾಗಿ ಮೆಚ್ಚಿಕೊಳ್ಳುವ ಅತ್ಯಂತ ಶ್ರೇಷ್ಠತನ ಉಳಿಸಿಕೊಂಡಿರುವ ಕಾವ್ಯಗಳೆಂದರೆ ಒಂದು 'ರಾಮಾಯಣ', ಮತ್ತೊಂದು 'ಮಹಾಭಾರತ'.. ಪ್ರಾಯಶಃ ಇವುಗಳಿಗೆ ಸರಿದೊರೆಯಾಗಿ ನಿಲ್ಲುವ ಕಾವ್ಯಗಳೇ ನಮ್ಮ ದೇಶದಲ್ಲಿ ಉದಿಸಿಲ್ಲವೆಂದು ಹೇಳಬಹುದು.

ರಾಮಾಯಣದಲ್ಲಿ ಶ್ರೀರಾಮ ನಾಯಕನಾದರೆ ಭಾರತದಲ್ಲಿ ಹಲವರಿದ್ದರೂ ಎಲ್ಲರನ್ನೂ ತನ್ನ ತಾಳಕ್ಕೆ ತಕ್ಕ ಹಾಗೆ ಕುಣಿಸುವ ಶ್ರೀಕೃಷ್ಣನೆ ನಾಯಕ. ಎಲ್ಲ ಕಾಲದ ಯುಗಧರ್ಮ, ತತ್ವ, ನೀತಿ, ಸಂದೇಶಗಳನ್ನು ಅಂತರ್ಗತ ಮಾಡಿಕೊಂಡ ಮಹಾಭಾರತವಂತೂ ನಮ್ಮೆಲ್ಲರ ಆದರ್ಶ ಕೃತಿಗಳಲ್ಲೊಂದು. ಮನುಷ್ಯರೆಲ್ಲರ ಬದುಕಿನ ಪ್ರಾತಿನಿಧಿಕ ಕಾವ್ಯಗಳೆಂದರೂ ಸರಿಯೇ. ಅದರಲ್ಲಿ ಎಲ್ಲವೂ ಇದೆ. ಈ ಅರ್ಥದಲ್ಲಿಯೇ ಕುಮಾರವ್ಯಾಸನು

ಅರಸುಗಳಿಗಿದು ವೀರ ದ್ವಿಜರಿಗೆ
ಪರಮವೇದದ ಸಾರ ಯೋಗೀ
ಶ್ವರರ ತತ್ವವಿಚಾರ ಮಂತ್ರೀಜನಕೆ ಬುದ್ಧಿಗುಣ
ವಿರಹಿಗಳ ಶೃಂಗಾರ ವಿದ್ಯಾ
ಪರಿಣತರಲಂಕಾರ ಕಾವ್ಯಕೆ
ಗುರುವೆನಲು ರಚಿಸಿದ ಕುಮಾರವ್ಯಾಸ ಭಾರತವ (ಕುಮಾರವ್ಯಾಸ ಭಾರತ. ೧: ೧೯)

ಎಂಬಲ್ಲಿ ಸರ್ವಗ್ರಾಹ್ಯವಾದ ಈ ಕೃತಿಯ ಮಹತ್ವವನ್ನು ಎತ್ತಿ ತೋರಿಸಿದ್ದಾನೆ. ಅಂದರೆ ಮಹಾಭಾರತವು ಲೌಕಿಕರಿಗೆ ಲೌಕಿಕ, ಅಲೌಕಿಕರಿಗೆ ಅಲೌಕಿಕ, ಮೋಕ್ಷಾಪೇಕ್ಷಿಗಳಿಗೆ ಮೋಕ್ಷ ಒದಗಿಸುವ ಕಾವ್ಯ ಎಂಬುದರಲ್ಲಿ ಸಂದೇಹವಿಲ್ಲ. ವಿಶೇಷತಃ ವೀರಶೈವ ಕವಿಗಳಲ್ಲಿ ಕೆಲವರಾದರೂ ಮಹಾಭಾರತಕ್ಕೆ ಸರಿದೊರೆಯಾಗಬಲ್ಲ ಕಾವ್ಯವನ್ನಾದರೂ ರಚಿಸಿ ಮೂರನೆಯ ಸ್ಥಾನ ಪಡೆವ ಪ್ರಯತ್ನ ಮಾಡಿದ್ದಾರೆ. ಇದಕ್ಕೆ ಪ್ರಸ್ತುತ ಬಸವಪುರಾಣದಲ್ಲಿ ಬಂದಿರುವ ಉದಾಹರಣೆ ನಿದರ್ಶನವೆಂದು ಬಿ.ಸಿ.ಜವಳಿ ಅವರು ಗುರುತಿಸುತ್ತಾರೆ. ಬಸವಪುರಾಣವೊಂದು 'ಮಹಾಭಾರತ' ಅದು 'ಬಸವಭಾರತ' ವೆನ್ನುವಂತೆ ನುಡಿದಿದ್ದಾನೆ.

ಆದಿರುದ್ರಗಣಾದಿಪರ್ವಂ
ವಾದಿಗಳ ಹೃತ್‌ಶಲ್ಯಪರ್ವಂ
ಮೋದಭಕ್ತಿಗೆ ಬಸವಸಿಂಹಾಸನಸಭಾಪರ್ವಂ
ವೇದವಿದರುದ್ಯೋಗಪರ್ವಂ
ವೇದಿಸುವರಿಗೆ ಶಾಂತಿಪರ್ವಂ
ಮೇದಿನಿಯೊಳಖಿಳಾಗಮಜ್ಞರ ಕರ್ಣಪರ್ವವಿದು ... (೧: ೨)

ಎಂಬ ಪದ್ಯದಲ್ಲಿ ಇದೊಂದು ವೀರಶೈವರ ಭಾರತ ಎನ್ನುವ ಭಾವನೆ ಇದೆ. ಆದಿರುದ್ರಗಣಗಳ ಚರಿತೆ ಹೇಳುವಾಗ ಆದಿಪರ್ವಕ್ಕೆ; ವಾದಿಗಳ ಜೊತೆ ವಾದಿಸಿ ಶಿವಾಧಿಕ್ಯವನ್ನು ಪ್ರತಿಪಾದಿಸುವ ಸಂದರ್ಭದಲ್ಲಿ ಶಲ್ಯಪರ್ವಕ್ಕೆ; ಬಿಜ್ಜಳನ ಮಹಾಮಂತ್ರಿ ದಂಡನಾಯಕನ ಭಕ್ತಿವಿಶೇಷವನ್ನು ಹೇಳುವಾಗ ಉದ್ಯೋಗಪರ್ವಕ್ಕೆ; ತಿಳಿಯ ಹೇಳುವವರಿಗೆ ಶಾಂತಿಪರ್ವಕ್ಕೆ; ಧರ್ಮವನ್ನು ತಿಳಿದ ಸಮಸ್ತ

ಜ್ಞಾನಿಗಳಿಗೆ ಕರ್ಣಪರ್ವಕ್ಕೆ ಹೀಗೆ ಮಹಾಭಾರತದ ಆರುಪರ್ವಗಳ ಜೊತೆ ತನ್ನ ಕೃತಿಯನ್ನು ಸಮೀಕರಿಸುವ ಮೂಲಕ ತನ್ನ ಕೃತಿಯ ವಿಶೇಷವನ್ನು ಸ್ಪಷ್ಟಪಡಿಸುವ ಉದ್ದೇಶ ಭೀಮಕವಿಗಿರುವಂತಿದೆ. ತನ್ನ ಕೃತಿ ಲೋಕದ ಸಮಸ್ತ ಜ್ಞಾನಿಗಳ ಕಿವಿಗೆ ಹಬ್ಬವಾಗಿದೆ. ಬಸವಪುರಾಣವನ್ನು ರಚಿಸಹೊರಟ ಕವಿ ಈ ಕೃತಿಯನ್ನು ಮಹಾಭಾರತವನ್ನಾಗಿ ಮಾಡಹೊರಟುದುದರಿಂದ ಮಹಾಭಾರತದಲ್ಲಿದ್ದ ಎಲ್ಲಂದದ ಕಥೆ ಉಪಕಥೆಗಳು ಬಾರದಿದ್ದರೂ ಆ ಮಾದರಿಯಲ್ಲಿ ಇದನ್ನು ರಚಿಸಬೇಕೆಂಬ ದೃಷ್ಟಿ ಇದ್ದುದು ಸ್ಪಷ್ಟವಾಗುತ್ತದೆ.

ಸೂಸದಂಜದಿರೋಹೊಯೆನುತ ವಿ
ಕಾಸಮುಖದಿಂದೊರೆದು ಹರವಿಯ
ನಾ ಸಮಯದಿಂದೆತ್ತುವಂದದಿ ಕೈಗಳಂ ನೀಡೆ
ಲೇಸು ಬೊಟ್ಟನನಿತು ಭಸಿತಮಂ
ಪೂಸಿದಾತಂ ಬೆಟ್ಟವೆಂತುಟ
ದೈಸು ಮರುಳಹನೆಂಬದಿದು ನೆಲೆಯೆನುತ ಬಿಜ್ಜಳನು ... (೯: .೨)

ಮೇಲಿನ ಹೇಳಿಕೆಯಲ್ಲಿ ಬಸವಣ್ಣನವರು ಗೊಲ್ಲತಿಯ ಹಾಲಹರವಿಯನ್ನು ಹಿಡಿಯುವ ಸಂದರ್ಭ ಭಾರತದ ಕೃಷ್ಣನ ಕಥೆಗೆ ಹೊಯ್‌ಕೆಯ್ಯಾಗಿ ಬಂದಿದೆ. ಹಾಗೆಯೇ ದ್ರೌಪದಿಯ ವಸ್ತ್ರಾಪಹರಣದ ಸಂದರ್ಭದಲ್ಲಿ ಶ್ರೀಕೃಷ್ಣನು ಅಕ್ಷಯಾಂಬರ ದಯಪಾಲಿಸಿದುದು ಪ್ರಸಿದ್ಧವಾದ ಸನ್ನಿವೇಶ. ಇದಕ್ಕೆ ಸಮಾನಾಂತರವಾಗಿ ಭೀಮಕವಿಯು ದುಕೂಲದ ಪವಾಡವನ್ನು ತಂದಿದ್ದಾನೆ. ಒಂದು ದಿನ ಸೂಳೆಮನೆಯಲ್ಲಿದ್ದ ಅಯ್ಯನೊಬ್ಬನು ತನ್ನ ಪಡಿಯನ್ನು ತರುವುದಕ್ಕಾಗಿ ತೊತ್ತನ್ನು ಬಸವಣ್ಣನವರಲ್ಲಿಗೆ ಕಳಿಸುತ್ತಾನೆ. ಅವಳು ಬಂದು ಆತನ ಪಟ್ಟದರಸಿ ಉಟ್ಟಿದ್ದ ದುಕೂಲವನ್ನು ಕಂಡು ಬೆರಗಾಗಿ ಹಾಗೆಯೇ ತಿರುಗಿ ಬಂದು ತನ್ನ ಒಡತಿಗೆ ಅದನ್ನು ಬಣ್ಣಿಸಿ 'ನಿನಗೆ ಅದನ್ನು ಭಾವನಿಂದ ತರಿಸಿಕೋ' ಎಂದು ಹೇಳಿದಳು. ಸೂಳೆಯ ಮನೀಷೆಯಂತೆ ವಿಟನು ಬಸವಣ್ಣನವರಲ್ಲಿಗೆ ಹೋಗಿ ಗಂಗಾಂಬಿಕೆಯ ದುಕೂಲವನ್ನು ಬೇಡಿದನು. ಬಸವಣ್ಣನವರು ತಟ್ಟನೆ 'ಹಸಾದ'ವೆಂದು–

ಹುಟ್ಟಿಗೆಯನಿದ್ದಂತೆ ಕೊಡು ಕೊಡು
ಹುಟ್ಟಿಗೆಯನಯ್ಯಂಗೆ ಕೊಟ್ಟಡೆ
ಹುಟ್ಟಿವಿನ್ನಾವೆಂಬವೊಲು ಲಜ್ಜಾಭಿಮಾನವನು
ಬಿಟ್ಟು ಬಸವಂ ತನ್ನ ಹೆಟ್ಟುಗೆ
ಯುಟ್ಟುದಂ ಸುಗಿವುತ್ತಮಿರಲಾ
ಹುಟ್ಟಿಗೆಯದೊಂದುಡಿಯೊಳಗಲದೆ ಮಿಗೆ ಬೆಳೆವುತಿರಲು ... (೧೦ : .೩೩)

ಅಯ್ಯನಿಗೆ ನಿನ್ನ ಹುಟ್ಟಿಗೆಯನ್ನು ಕೊಡು ಎನ್ನುತ್ತ ಅದನ್ನು ಸೆಳೆಯತೊಡಗಿದನು. ಸೆಳೆಸೆಳೆದಂತೆ ಅದು ಅಕ್ಷಯವಾಯಿತು. ದುಕೂಲಗಳ ಬೆಟ್ಟವೇ ಎದುರಿಗೊಟ್ಟಿತು. ಹೀಗೆ ಭೀಮಕವಿಯು ಮಹಾಭಾರತದ ಕಥಾನಾಯಕನಿಗೆ ಬಸವಣ್ಣನವರನ್ನು ಸಾಮಾನ್ಯೀಕರಿಸಿದ್ದು ಎಷ್ಟರಮಟ್ಟಿಗೆ ಈಡೇರಿದೆ ಎಂಬ ಮಾತು ಬೇರೆ. ಆದರೆ ಆ ದಿಟ್ಟ ಪ್ರಯತ್ನವನ್ನಂತೂ ಮೆಚ್ಚಲೇಬೇಕು. ಹೀಗೆ ಕೃತಿನಾಯಕನಾದ ಬಸವಣ್ಣನವರನ್ನು ಮಹಾಭಾರತಗಳಂತಹ ಆರ್ಷೇಯ ಕಾವ್ಯಗಳಿಗೆ ಹೋಲಿಸಿ ವಿವರಿಸಲು

ಪ್ರಯತ್ನಿಸಲಾಗಿದೆಯೆಂಬುದನ್ನು ನಾವು ಮರೆಯುವಂತಿಲ್ಲ. ಒಟ್ಟಿನಲ್ಲಿ ಭೀಮಕವಿಯ ಬಸವಪುರಾಣದಲ್ಲಿಯ ಬಸವಣ್ಣವರು ಇಲ್ಲಿ ಇಡಿಕಿರಿದ ಕಥಾಹಂದರದಲ್ಲಿ ಕೆಲವು ಸಾರೆ ಮರೆಯಾದರೂ ನಕ್ಷತ್ರಗಳಂತೆ ಅಲ್ಲಲ್ಲಿಯೇ ಪ್ರಕಾಶಿಸುತ್ತಾರೆ. ತಾವು ಬೆಳಗಿಕೊಂಡು ಬೇರೆಯವರನ್ನು ಬೆಳಗುತ್ತಾರೆ. ಅವರ ಕಣ್ಗಾವಲಿನಲ್ಲಿಯೇ ಎಲ್ಲ ಸನ್ನಿವೇಶಗಳು ಜರುಗುತ್ತಿರುವಂತೆ ಭಾಸವಾಗುತ್ತದೆ. ಅವರೊಬ್ಬ ದೈವೀಪುರುಷರಂತೆ, ಪವಾಡಪುರುಷರಂತೆ, ಸಾಕ್ಷಾತ್ ಪರಶಿವನಂತೆ, ಅವರ ನಿರ್ಮಲ ಭಾಕ್ತಿಕ ಜೀವನ ಮನೋಜ್ಞವಾಗಿ ಚಿತ್ರಣವಾಗಿದೆ.

೨. ಕಾಲ :

ಬಸವಣ್ಣನವರ ಕಾಲವನ್ನು ಕುರಿತಂತೆ ಇದುವರೆವಿಗೂ ಖಚಿತವಾದ ನಿರ್ಣಯಕ್ಕೆ ಬರಲು ಸಾಧ್ಯವಾಗಿಲ್ಲ. ಅವರ ವಚನಗಳಲ್ಲಾಗಲಿ ಅಥವಾ ಪುರಾಣಕಾವ್ಯಗಳಲ್ಲಾಗಲಿ, ಶಾಸನಗಳಲ್ಲಾಗಲಿ ಇದಕ್ಕೆ ಬಲವಾದ ಆಧಾರಗಳು ಸಿಗುವುದಿಲ್ಲ. ಆದರೂ ಕೆಲವು ವಿದ್ವಾಂಸರ ಚರ್ಚೆಗಳನ್ನಾಧರಿಸಿ ವಿವರಿಸುವ ಪ್ರಯತ್ನ ಮಾಡಬಹುದಾಗಿದೆ.

ಪಾಲ್ಕುರಿಕೆ ಸೋಮನಾಥ ಹಾಗೂ ಭೀಮಕವಿಗಳು 'ಅರ್ಧೋದಯ ಮುಹೂರ್ತ' ದಲ್ಲಿ ಬಸವಣ್ಣನವರು ಜನಿಸಿದರೆಂದು ಹೇಳಿ ಕೈತೊಳೆದುಕೊಂಡು ಬಿಟ್ಟಿದ್ದಾರೆ.

> **ಪ್ರೀತಿಯಲಿ ಪುತ್ರನು ಕರಾಂಭೋ**
> **ಜಾತಮುಕುಳಿತನಾಗಿ ಮೆಲ್ಲನೆ**
> **ಮಾತೆಯುದರದೊಳುದಯಿಸಲು ಅರ್ಧೋದಯದೊಳಾಗ (೩: ೨೪)**

ವ್ಯಾಸಕೃತ ಬಸವಪುರಾಣದಲ್ಲಿಯೂ–

> **ತುತು ಪುಣ್ಯ ಮುಹೂರ್ತೇಷು ಸರ್ವಲಕ್ಷಣ ಸಂಯುತೆ।**
> **ಮೀನಸ್ಥಿತೇ ಭೃಗೋಃ ಪುತ್ರೇ ಮೇಷಸ್ಥೇಚ ದಿವಾಕರೇ॥**
> **ತುಲಾಸ್ಥಿತೇಚ ತತ್ಪುತ್ರೇ ಕರ್ಕಟಸ್ಥ ಬೃಹಸ್ಪತೌ।**
> **ಶಶಾಂಕೇ ರೋಹಿಣೀ ಸಂಸ್ಥೆ ಮಕರಸ್ಥೇಚ ಭೂಸುತೇ॥**
> **ಶಿಶೋರರ್ಧೋದಯೇ ಜಾತೇ ಲಗ್ನೇ ಕರ್ಕಟ ಸಂಜ್ಞಕೇ।**
> **ಸಂಗಮೇಶಸ್ತವಾತೂರ್ಣಮದೃಶ್ಯಸ್ಸಂ ಸಮಾಯಯೌ॥**

ಇದರ ಪ್ರಕಾರ ಸರ್ವಲಕ್ಷಣಸಂಯುತೆ ಪುಣ್ಯಮೂಹೂರ್ತದಲ್ಲಿ ಮೀನರಾಶಿಯಲ್ಲಿ ಶುಕ್ರನು, ಮೇಷದಲ್ಲಿ ಸೂರ್ಯನು, ತುಲಾರಾಶಿಯಲ್ಲಿ ಶನಿಯು, ಕಟಕ ರಾಶಿಯಲ್ಲಿ ಗುರುವು, ರೋಹಿಣಿಯಲ್ಲಿ ಚಂದ್ರನು, ಮಕರದಲ್ಲಿ ಅಂಗಾರಕನು ಇದ್ದಾಗ ಕಟಕಲಗ್ನ ಹುಟ್ಟುತ್ತಲಿದ್ದಾಗ ಶಿಶುವಿನ ಉದಯವಾಯಿತು. ಅಲ್ಲಿಗೆ ಆಗ ಅಗೋಚರವಾಗಿ ಸಂಗಮೇಶ್ವರನು ಬಂದನು.

ಪಾಲ್ಕುರಿಕೆ ಸೋಮನಾಥನು ಮತ್ತು ಅವನನ್ನುನುಸರಿಸಿ ಭೀಮಕವಿಯು, ಸಂಸ್ಕೃತ ಬಸವಪುರಾಣವು 'ಅರ್ಧೋದಯ'ದಲ್ಲಿ ಬಸವಣ್ಣನವರ ಜನನವನ್ನು ಹೇಳುತ್ತವೆ. ಆದರೆ ಇಲ್ಲೆಲ್ಲಿಯೂ ಶಕೆ, ವರ್ಷಗಳ ಪ್ರಸ್ತಾಪವಿಲ್ಲವಾಗಿ ಇವುಗಳ ಆಧಾರದ ಮೇಲೆ ಬಸವ ಜನನ ವರ್ಷವನ್ನು ನಿರ್ಧರಿಸುವುದು ಪಾಂಡಿತ್ಯದ ಕಸರತ್ತಿನ ಕೆಲಸವಾಗಿ ಪರಿಣಮಿಸಿದೆ. ಅಲ್ಲದೆ ಈ ಮುಹೂರ್ತದಲ್ಲಿ

ಬಸವಣ್ಣನವರು ಜನಿಸಿದರು ಎಂಬುದನ್ನು ಶ್ರೀಚೆನ್ನವೀರಶಾಸ್ತ್ರಿಗಳು ನಿರಾಕರಿಸುತ್ತಾರೆ. ಜ್ಯೋತಿಷ್ಯ ಶಾಸ್ತ್ರದ ಪ್ರಕಾರ ಅರ್ಧೋದಯಕ್ಕೆ ಈ ವಿವರಣೆ ಇದೆ.

ಮಾಘ ಮಾಸಿರವಾಧರ್ಶೋ ವ್ಯತಿಪಾತೇ ಶ್ರವಾನ್ವಿತೇ
ಅರ್ಧೋದಯಾಬಾದೋ ಯೋಗಃ ಸೂರ್ಯ ಪರ್ವತತಾಧಿಕಾಃ
ಅಯಮುಕ್ತೋ ದಿವಾಯೋಗಃ ಕಿಂಚಿನ್ಯೋನೋ ಮಹೋದಯಃ

ಅಂದರೆ ಮಾಘಮಾಸದಲ್ಲಿ ಅಮವಾಸ್ಯೆ ಬಂದಾಗ, ಅಂದು ರವಿವಾರ ಇರಬೇಕು. ಇದಕ್ಕೆ ಅರ್ಧೋದಯ ಮುಹೂರ್ತವೆಂದು ಹೆಸರು. ಶ್ರೀಶಾಸ್ತ್ರಿಗಳವರು ಬಸವಣ್ಣನವರು ಅರ್ಧೋದಯದಲ್ಲಿ ಜನಿಸಿಲ್ಲ ಎಂಬುದಕ್ಕೆ ಹೋರಾಶಾಸ್ತ್ರದ ಬಲವಾದ ಕಾರಣವೊಂದನ್ನು ಕೊಟ್ಟು ಈ ಮುಹೂರ್ತದಲ್ಲಿ ಜನಿಸಿದವರು ಮಹಾತ್ಮರೂ ಆಗುವುದಿಲ್ಲ, ಮತ್ತು ರಾಜಯೋಗ ಇರುವುದಿಲ್ಲವಾದ್ದರಿಂದ ರಾಜನಾಗಲೀ, ಮಂತ್ರಿಯಾಗಲಿ ಆಗುವುದಿಲ್ಲ ಎಂಬುದು ಅದು. ಸಾಮಾನ್ಯವಾಗಿ ಅರ್ಧೋದಯದಲ್ಲಿ ಶಿಶುವು ಹುಟ್ಟಿತು ಎಂಬ ಪಾಲ್ಕುರಿಕೆ ಸೋಮನಾಥ, ಭೀಮಕವಿಗಳಿಗೆ ಜ್ಯೋತಿಷ್ಯ ಪ್ರಾವಿಣ್ಯತೆ ಇಲ್ಲದ ಕಾರಣ ಅರ್ಧೋದಯವೆಂದು ಊಹಾತ್ಮಕವಾಗಿ ಹೇಳಿರಬಹುದು ಎಂದು ಅಭಿಪ್ರಾಯ ಪಡುತ್ತಾರೆ. (ಮಾತೆ ಮಹಾದೇವಿ. ಕಲ್ಯಾಣ ಕಿರಣ: ಪು.೩೬)

ಬಸವಣ್ಣನವರ ಜೀವನಾವಧಿ ಮೂರು ಪಟ್ಟ ಮೂವತ್ತಾರು ವರ್ಷಗಳೆಂಬುದು ಪರಂಪರಾಗ್ರಹಿಕೆ. ಇದಕ್ಕೆ ಆಧಾರವಾಗಿ ಲಕ್ಕಣ್ಣ ದಂಡೇಶನು ಶಿವತತ್ವ ಚಿಂತಾಮಣಿಯಲ್ಲಿ –

..
.... ಸಿದ್ಧಾರ್ಥಿ ಸಂವತ್ಸ
ರದ ಕಾರ್ತಿಕಂ ಶುದ್ಧ ಪೌರ್ಣಮಿಯ ಸೋಮವಾರದ ಮಧ್ಯರಾತ್ರಿಯಲ್ಲಿ
ಒರವಿರ್ದ ಶಿವಯೋಗ ವೃಷಭಲ
ಗ್ನದೊಳು ಮಾದಾಂಬಿಕೆಯ ಗರ್ಭರತ್ನಾಕರದೊ
ಳುದಯವಾದಂ ವೃಷಭನೆಂದಜಿದ ...... (ಶಿವತತ್ವಚಿಂತಾಮಣಿ ೩೦:೧೧)

ಸಿದ್ಧಾರ್ಥಿ ಸಂವತ್ಸರದ ಕಾರ್ತಿಕಶುದ್ಧ ಪೌರ್ಣಮಿಯ ಸೋಮವಾರದ ಮಧ್ಯರಾತ್ರಿಯ ಕೃತ್ತಿಕ ಶಿವಯೋಗದ ವೃಷಭಲಗ್ನದಲ್ಲಿ ಬಸವಣ್ಣನವರು ಜನಿಸುವರು. ಲಕ್ಕಣ್ಣದಂಡೇಶ ಕೊಟ್ಟಿರುವ ವಿವರಗಳನ್ನು ಯಾವ ಶಕೆಯನ್ನು ಅನುಸರಿಸಿ ಅರ್ಥೈಸಬೇಕೆಂಬುದೇ ಪ್ರಶ್ನೆ. "ಇದು ೧೧೩೪ಕ್ಕೆ ಸರಿಹೋಗುವುದಾದರೂ ಉತ್ತರ ದಕ್ಷಿಣ ಕಾಲಗಣನೆಯಲ್ಲಿ ೮, ೯ ವರ್ಷಗಳ ವ್ಯತ್ಯಾಸ ತೋರುವುದರಿಂದ ಇದು ೧೧೬೭ರ ಕೊನೆಯಲ್ಲಿ ಮುಗಿವ ಮೂರು ತಿಂಗಳು ಮೊದಲೇ ಕಲ್ಯಾಣ ಬಿಟ್ಟು ಕೂಡಲಸಂಗಮಕ್ಕೆ ಹೋಗಿ ಅಲ್ಲಿ ಬಯಲಾದ ಬಸವಣ್ಣನವರು ಬದುಕಿದುದು ಮೂವತ್ತಾರು ವರ್ಷ ಮಾತ್ರ ಎಂದಾಗುತ್ತದೆ". (ಪುರಾಣಿಕ ಸಿದ್ಧಯ್ಯ, ಬಸವಣ್ಣನವರ ಜೀವನ ಹಾಗೂ ಸಂದೇಶ. ಪು. ೪)

ಅಲ್ಲದೆ ಕಾಲಜ್ಞಾನ ವಚನಗಳಲ್ಲಿ ಬರುವ "ಇತ್ತ ಬಸವರಾಜದೇವರು ರಾಕ್ಷಸನಾಮ ಸಂವತ್ಸರದ ಶ್ರಾವಣ ಶುದ್ಧ ಪಾಡ್ಯ ಮಂಗಳವಾರ ಉದಯವಾದ ಇಪ್ಪತ್ತೈದು ಗಳಿಗೆಗೆ

ಕೂಡಲಸಂಗಮೇಶ್ವರನೊಳಗೆ ಬಯಲಾದರು. ೩೬ ವರ್ಷ ಮರ್ತ್ಯದಲ್ಲಿದ್ದರು" ಎಂಬ ಉಲ್ಲೇಖ ಹಾಗೂ "ಬಸವರಾಜ ದೇವರಿಗೆ ಕೈಲಾಸದಲ್ಲಿ ದ್ವಾರಪಾಲಕರು ತಡೆದ ಕಾರಣ ಮರ್ತ್ಯಕ್ಕೆ ಕಳುಹಿಸಿಕೊಂಡು ಬಂದು ಇಂದಿಗೆ ಮೂವತ್ತಾರು ವರುಷವಾಯಿತು." (ಅದೇ) ಇದೂ ಸಹ ಕಾಲಜ್ಞಾನ ವಚನದಲ್ಲಿ ಉಕ್ತವಾದ ಹೇಳಿಕೆ. ಇದನ್ನು ಆಧರಿಸಿಯೇ ಡಾ.ಎಚ್.ತಿಪ್ಪೇರುದ್ರಸ್ವಾಮಿಯವರು ಕಾಲಜ್ಞಾನದ ವಚನದಲ್ಲಿ ಬಸವಣ್ಣನವರ ಜನನದ ಉಲ್ಲೇಖ ಬರುತ್ತದೆ. ಆ ಪ್ರಕಾರ "ಕಲಿಯುಗ ೪೯೬೫ನೇ ವಿಕ್ರಮ ಸಂವತ್ಸರ ಶ್ರಾವಣ ಶುದ್ಧ ೫ನೇ ಸೋಮವಾರ ಬಸವೇಶ್ವರರ ಜನನವಾಯಿತೆಂದು ಹೇಳುತ್ತಾರೆ". (ತಿಪ್ಪೇರುದ್ರಸ್ವಾಮಿ ಹೆಚ್. ಬಸವಪರುಷ: ಪು.೯೪) ಇದೂ ಸಹ ಕ್ರಿ.ಶ. ೧೧೩೧ನೆಯ ವರ್ಷಕ್ಕೆ ಸರಿಹೋಗುತ್ತದೆ.

ಬಂಡಾರು ತಮ್ಮಯ್ಯನವರು 'ಪಾಲ್ಕುರಿಕೆ ಸೋಮನಾಥ ಪ್ರಣೀತ ತೆಲುಗು ಬಸವಪುರಾಣದ' ಪ್ರಸ್ತಾವನೆಯಲ್ಲಿ ಸೋಮನಾಥನ ಕಾಲವನ್ನು ಕುರಿತ ಭಾಗದಲ್ಲಿ ಹೇಳಿದ್ದು ಹೀಗೆ. ಶ್ರೀಬಸವೇಶ್ವರರ ಸಂದರ್ಶನಾರ್ಥ 'ಶ್ರೀ ಮಲ್ಲಿಕಾರ್ಜುನ ಪಂಡಿತರು' ಕಲ್ಯಾಣಕ್ಕೆ ಹೊರಟರು. ಹಾದಿಯಲ್ಲಿ 'ವನಿಪುರ' ಗ್ರಾಮದಲ್ಲಿ ಬಿಡಾರ ಮಾಡಿದರು. ಅತ್ತಣಿಂದ ಬಂದ ಕೆಲವು ಭಕ್ತರಿಂದ ಅಂದಿಗೆ ಒಂದು ವಾರ ಮೊದಲೇ ಕಲ್ಯಾಣದಲ್ಲಿ ಘಟಿಸಿದ ಗಜಿಬಿಜಿಯಿಂದಾಗಿ ಶ್ರೀಬಸವೇಶ್ವರ ಅವತಾರ ಮುಗಿದು ಅವರು ಸಂಗಮೇಶ್ವರದಲ್ಲಿ ಐಕ್ಯರಾದರೆಂಬ ಸುದ್ದಿ ಅವರಿಗೆ ತಿಳಿಯಲು ಅವರು ಪ್ರಲಾಪಿಸಿ, ಬಸವೇಶ್ವರರ ತರುವಾಯ ತಾನು ಪ್ರಪಂಚದಲ್ಲಿರುವುದರಲ್ಲಿ ಪ್ರಯೋಜನವಿಲ್ಲವೆಂದು ಬಗೆದು ಕಲ್ಯಾಣಯಾತ್ರೆ ನಿಲ್ಲಿಸಿ ಶ್ರೀಶೈಲಕ್ಕೆ ಮರಳುತ್ತಾರೆ. ಶ್ರೀಗಿರಿಯ ಪ್ರದಕ್ಷಿಣೆ ಮಾಡಿ ಶಿವರಾತ್ರಿ ವ್ರತವನಾಚರಿಸಿ ಸಂಗಮೇಶ್ವರ ಕ್ಷೇತ್ರದಲ್ಲಿ ಬಸವೇಶ್ವರನಿಗಿಂಬುಕೊಟ್ಟಂತೆ ತಮ್ಮನ್ನು ಐಕ್ಯ ಮಾಡಿಕೊಳ್ಳಬೇಕೆಂದು ಮಲ್ಲಿಕಾರ್ಜುನ ಸ್ವಾಮಿಯನ್ನು ಪ್ರಾರ್ಥಿಸಿದರೆಂದು ಸೋಮನಾಥನು 'ಪಂಡಿತಾರಾಧ್ಯ ಚರಿತ್ರೆ'ಯಲ್ಲಿ ಹೇಳಿದ್ದಾನೆ. (ಅದೇ ಪು.೭) ಬಸವೇಶ್ವರರ ತರುವಾಯ ಒಂದೆರಡು ವರ್ಷಗಳಲ್ಲಿಯೇ ಮಲ್ಲಿಕಾರ್ಜುನ ಪಂಡಿತರು ಕ್ರಿ.ಶ.೧೧೭೦ರ ಸುಮಾರಿಗೆ ಮರಣಹೊಂದಿದರೆಂಬುದನ್ನು ಬಹಳಮಂದಿ ಚರಿತ್ರಜ್ಞರು ಅಂಗೀಕರಿಸಿದ್ದಾರೆ. ಇದು ಬಸವಣ್ಣನವರ ಲಿಂಗೈಕ್ಯ ೧೧೬೭ರ ಆಚೆ ಆಗಿರಲಾರದೆಂಬುದಕ್ಕೆ ಬಲವಾದ ಆಧಾರ. ಇದಕ್ಕೆ ಹಿಂದೆ ೩೬ವರ್ಷ ಹೋದರೆ ದೊರೆಯುವುದು ೧೧೩೦-೩೧ ಮಾತ್ರ.

ಮೇಲಿನ ವಿದ್ವಾಂಸರ ಹೇಳಿಕೆಗಳು ಬಸವಣ್ಣನವರ ಜನ್ಮದಿನವನ್ನು ೧೧೩೦-೩೧ ಕ್ಕೆ ಎಳೆದು ತರುತ್ತವೆ. ಆದರೆ ಇದಕ್ಕೆ ಭಿನ್ನವಾಗಿರುವ ಕೆಲವು ವಿದ್ವಾಂಸರ ಅಭಿಪ್ರಾಯಗಳು ಬಸವಣ್ಣನವರ ಜನನವನ್ನು ತೀರ ಹಿಂದೆ ಹಾಗೂ ಮುಂದಕ್ಕೆ ಕೊಂಡೊಯ್ಯುತ್ತವೆ.

ಬಸವಣ್ಣನವರ ಚರಿತ್ರೆಯ ಮೇಲೆ ಹೊಸ ಬೆಳಕನ್ನು ಚೆಲ್ಲಿದ 'ಅರ್ಜುನವಾಡ ಶಿಲಾಶಾಸನ'ವನ್ನು ಆಧರಿಸಿ ಮೂವರು ವಿದ್ವಾಂಸರು ಬಸವಣ್ಣನವರ ಕಾಲನಿರ್ಣಯವನ್ನು ಈ ರೀತಿಯಾಗಿ ಮಾಡಿದ್ದಾರೆ.

ಪಿ.ಬಿ. ದೇಸಾಯಿ :

"The Arjunawad Inscriptions in dated 1260 A.D. on the basis of this year, we can suggest a provisional date for Basaveshvara. For this we have to retrace back in time. From his discription, Hala Basavideva appears to have been of a fairly advanced age. Assuming that he was 60 years old at that time, his date of birth would be 1200 A.D. The Maximum period for a generation is reckoned to be 30 years and this longer space of calculation can reasonably be adapted in the present case, a family of religions persons. Going reverse the birth dates of Kalideva, Kavarasa and Devaraja would be 1170. 1140 and 1100 A.D respectively. lastly Devaraja's younger brother Basavaraja would have been in about 1115 A. D." (Desai P.B. Basaveshwara and his times p.437) ಅಂದರೆ ಶ್ರೀಯುತರು ಬಸವೇಶ್ವರನ ಜನನ ೧೧೧೫ರಲ್ಲಿ ಜರುಗಿತೆಂದು ಹೇಳುತ್ತಾರೆ.

ಎಂ.ಎಂ.ಕಲಬುರ್ಗಿ :

"ಹಾಲಬಸವಿದೇವನ ಕಾಲ ೧೨೬೦ ಇದ್ದು ತಲೆಮಾರಿಗೆ ೩೦ ವರ್ಷಗಳಂತೆ ಹಿಂದೆ ಹೋದರೂ ದೇವರಾಜನ ಕಾಲ ಕ್ರಿ.ಶ. ೧೨೦೦ ಆಗುವುದರಿಂದ ಈತನ ತಮ್ಮ ಬಸವಣ್ಣನವರು ಸುಮಾರು ಈ ಕಾಲದವರೆ ಎಂದು ಊಹಿಸಲಾಗಿದೆ" (ಕಲಬುರ್ಗಿ ಎಂ.ಎಂ. ೧೯೭೮. ಪು.೬೫) ಎಂದಿದ್ದಾರೆ. ಮೇಲಿನ ಇಬ್ಬರು ವಿದ್ವಾಂಸರ ಅಭಿಪ್ರಾಯಗಳು ಬಸವಣ್ಣನವರ ಜನನ ಕ್ರಿ.ಶ.೧೧೩೧–೩೨ಕ್ಕೆ ತಾಳೆಯಾಗುವುದಿಲ್ಲ.

ಆರ್.ಸಿ.ಹಿರೇಮಠ :

ಈ ಶಾಸನದ ಕಾಲ ಕ್ರಿ.ಶ.೧೨೬೦ನೇ ಏಪ್ರಿಲ್ ೧೨ನೆಯ ಸೋಮವಾರ ಹಾಲಬಸವಿದೇವನ ಕಾಲದಲ್ಲಿ ಕೆತ್ತಿದ ಈ ಶಾಸನದಲ್ಲಿ ಆತನನ್ನು ಮುನೀಶನೆಂದೂ, ಆಶನ ವಸನಗಳನ್ನು ಗೆದ್ದಾತನೆಂದೂ ವರ್ಣಿಸಿರುವುದರಿಂದ ಆಗ ಅವನಿಗೆ ಸುಮಾರು ೫೦ ವರ್ಷಗಳಿಗೆ ಮಿಕ್ಕಿ ವಯಸ್ಸಾಗಿರಬೇಕು. ಅಲ್ಲಿಂದ ಹಿಂದೆ ತಲೆಗೆ ಇಪ್ಪತ್ತೈದು ವರ್ಷಗಳಂತೆ ಗಣನೆ ಮಾಡಿದರೆ ಬಸವಣ್ಣನವರ ಕಾಲ ಹಾಲಬಸವಿದೇವನ ಹಿಂದೆ ಸುಮಾರು ೧೩೦ ವರ್ಷ ಇರಬೇಕು. ಅಂದರೆ ಕ್ರಿ.ಶ.೧೧೩೦ ಬಸವಣ್ಣನವರ ಕಾಲವೆಂದು ಇಟ್ಟುಕೊಳ್ಳಬೇಕಾಗುತ್ತದೆ (ಹಿರೇಮಠ ಆರ್.ಸಿ. ಷಟ್‌ಸ್ಥಲಚಕ್ರವರ್ತಿ ಬಸವಣ್ಣನವರು: ಪು.೧೮೭) ಎಂದಿದ್ದಾರೆ.

ಈ ಮೇಲಿನ ವಿದ್ವಾಂಸರ ಹೇಳಿಕೆಯಿಂದ ಈ ಶಾಸನವೂ ಸಹ ಬಸವಣ್ಣನವರ ಖಚಿತವಾದ ಕಾಲನಿರ್ಣಯಕ್ಕೆ ಅಷ್ಟೊಂದು ಸಹಕಾರಿಯಲ್ಲವೆಂಬ ಅಂಶ ವ್ಯಕ್ತವಾಗುತ್ತದೆ.

ಮಾತೆ ಮಹಾದೇವಿ ಅವರು 'ಕೊಡೇಕಲ್ ಕಾಲಜ್ಞಾನ ವಚನಗಳನ್ನು' ಅನುಸರಿಸಿ ಗುರು ಬಸವಣ್ಣನವರ ಕಾಲಾವಧಿಯನ್ನು ೬೨ ವರ್ಷ, ೩ ತಿಂಗಳು, ೩ ದಿವಸ ಎಂದು ಹೇಳುತ್ತಾರೆ.

(ವಿಶ್ವಗುರುಬಸವಣ್ಣನವರ ಜನ್ಮದಿನ ಮತ್ತು ಜೀವಿತಾವಧಿ ಕುರಿತು: ಪು.೩೫) "ಅಯ್ಯಾ, ಭಕ್ತಿಗೆ ಬೀಡಾದುದು ಕಲ್ಯಾಣ ಮೂವತ್ತಾರು ವರ್ಷ ಅಯ್ಯಾ ಅನುಭವಕ್ಕೆ ಶಿವಸದನವಾದುದು ಇಪ್ಪತ್ತೇಳು ವರ್ಷ ಅಯ್ಯಾ, ಹಿಂದಿನಂತೆ ಅನುಭವ ಭಕ್ತಿ ಇಲ್ಲ ಮೂರು ಮಾಸದೊಳಗಾಗಿ" ಈ ವಚನದ ಪ್ರಕಾರ ಪರಮಗುರು ಶ್ರೀ ಬಸವಣ್ಣನವರು ಕಲ್ಯಾಣದಲ್ಲಿ ವಾಸವಾಗಿದ್ದುದು ೩೬ ವರ್ಷ. ಆಗ ಅದು ಭಕ್ತಿಗೆ ಬೀಡಾಯಿತು. ಅವರು ಬಂದು ನೆಲಸಿದಾಗಿನಿಂದಲೂ ಧರ್ಮ ಪ್ರಚಾರ, ಅನುಭವಗೋಷ್ಠಿ , ಜನಜಾಗೃತಿ ಆರಂಭವಾಯಿತಾದರೂ 'ಅನುಭವಮಂಟಪ' ಎಂಬ ಸಂಸ್ಥೆಯು ಅಧಿಕೃತವಾಗಿ ಪ್ರಾರಂಭವಾದುದು ಬಸವಣ್ಣನವರು ಕಲ್ಯಾಣಕ್ಕೆ ಬಂದು ನೆಲಸಿದ ೯ ವರ್ಷಗಳ ನಂತರ. ಹೀಗಾಗಿ ಇದು ನಡೆದುದು ೨೭ವರ್ಷ. ಹೀಗೆ ಬಸವಣ್ಣನವರು ಕಲ್ಯಾಣದಲ್ಲಿ ಇದ್ದ ಅವಧಿಯೇ ೩೬ ವರ್ಷ ಎಂದಾಗ, ಜೀವಿತದ ಅವಧಿ ಜಾಸ್ತಿ ಇರಬೇಕಲ್ಲವೆ? ಎಂದು ಅಭಿಪ್ರಾಯ ಪಡುತ್ತಾರೆ. ಗುರು ಬಸವಣ್ಣನವರು ಹಾಕಿಕೊಂಡ ಯೋಜನೆ, ಸಾಧಿಸಿದ ಸಿದ್ಧಿ, ತಂದ ಸಮಾಜಪರಿವರ್ತನೆಗಳ ದೃಷ್ಟಿಯಿಂದ ನೋಡಿದರೆ ೩೬ ವರ್ಷಗಳ ಜೀವಿತಾವಧಿಯಲ್ಲಿ ಅಷ್ಟೆಲ್ಲ ಸಾಧ್ಯವೇ ಇಲ್ಲ ಎನ್ನಿಸುತ್ತದೆ. ಆದ್ದರಿಂದ ಬಸವಣ್ಣನವರ ಜೀವಿತಾವಧಿ ಸುಮಾರು ೬೩ ವರ್ಷ ಎಂದುಕೊಂಡರೆ ಆಗ ಅವರ ಹುಟ್ಟು ಆನಂದನಾಮ ಸಂವತ್ಸರದಲ್ಲಿ ಎಂದು ಆಗುತ್ತದೆ. ಇದು ಕ್ರಿ.ಶ.೧೧೦೬ಕ್ಕೆ ಬರುತ್ತದೆ ಎಂಬ ನಿಲುವಿಗೆ ಬಂದಿದ್ದಾರೆ.

ಕ್ರಿ.ಶ.೧೧೦೬ ರವರೆಗೆ ಬಸವ ಜನನವನ್ನು ಒಯ್ಯುವುದರಿಂದ ಆಗುವ ಚಾರಿತ್ರಿಕ ಅಸಂಬದ್ಧತೆಯನ್ನು ಕುರಿತು ಆಲೋಚಿಸುತ್ತ– "ಬಸವನು ಕಲ್ಯಾಣಕ್ಕೆ ಬಂದಾಗ ಬಿಜ್ಜಳನು ಚಕ್ರವರ್ತಿಯಾಗಿದ್ದುದರಿಂದ ಆತನು ಅಲ್ಲಿಗೆ ಬಂದುದು ಕ್ರಿ.ಶ.೧೧೬೨–೬೩ಕ್ಕಿಂತ ಹಿಂದೆಂಬುದು ಅಸಾಧ್ಯ. ಬಿಜ್ಜಳನು ಮಂಗಳವಾಡದಲ್ಲಿ ಆಳುತ್ತಿದ್ದಾಗ, ಕ್ರಿ.ಶ.೧೧೫೫ರಲ್ಲೇ ಬಸವಣ್ಣನವರು ಅವನ ಆಸ್ಥಾನಕ್ಕೆ ಬಂದು ಸೇರಿದನೆಂದು ಊಹಿಸಿದರೂ, ಆ ವೇಳೆಗಾಗಲೇ ಅವನಿಗೆ ೫೦ ವರ್ಷ ವಯಸ್ಸಾಗಿರಬೇಕು. ಈ ಅಪರವಯಸ್ಸಿನಲ್ಲಿ ಬಸವಣ್ಣನವರು ಸಿದ್ಧರಸ ಅಥವಾ ಬಲದೇವನ ಮಗಳನ್ನು ಮದುವೆಯಾದರೆಂಬುದು ವಿಕೃತವಾಗಿ ಕಾಣುವುದು. ಮತ್ತು ಕ್ರಿ.ಶ.೧೧೦೬ರಲ್ಲಿ ಹುಟ್ಟಿದ ಬಸವಣ್ಣನವರಿಗೆ ಕ್ರಿ.ಶ. ೧೧೧೪ರ ವೇಳೆಗೆ ನಡೆದ ಉಪನಯನಕ್ಕೆ ಬಿಜ್ಜಳನ ಮಂತ್ರಿಯಾದ ಬಲದೇವನು ಬಂದಿದ್ದನೆಂಬುದು ತೀರ ಅಸಂಭಾವ್ಯ. ಏಕೆಂದರೆ ಆ ವೇಳೆಗೆ ಬಹುಶಃ ಬಿಜ್ಜಳನೇ ಹುಟ್ಟಿರುವುದಿಲ್ಲವಾಗಬಹುದು. ಆತನು ತನ್ನ ತಂದೆಯಿಂದ ರಾಜ್ಯಭಾರ ವಹಿಸಿಕೊಂಡುದೇ ಕ್ರಿ.ಶ.೧೦೪೦ ರಷ್ಟು ಈಚೆಗೆ. ಆದುದರಿಂದ ಬಸವಣ್ಣನವರು ಹುಟ್ಟಿದ ವರ್ಷವನ್ನು ಕ್ರಿ.ಶ. ೧೦೪೦ರ ಹಿಂದು ಮುಂದಕ್ಕೆ ಒಯ್ದಂತೆಲ್ಲ ಸತ್ಯವೂ ದೂರವಾಗುತ್ತ ಹೋಗುವುದಲ್ಲದೆ ಬಸವಣ್ಣನವರ ಜೀವನದಲ್ಲಿ ನಡೆದಿರಬಹುದಾದ ವಾಸ್ತವಿಕಾಂಶಗಳೆಲ್ಲ ಮುಂದು ಹಿಂದಾಗುತ್ತವೆ." (ಉಪಾಯನ: ಪು.೧೯೫) ಎಂದು ಎಲ್.ಬಸವರಾಜು ಅಭಿಪ್ರಾಯ ಪಡುತ್ತಾರೆ.

ಒಟ್ಟಾರೆಯಾಗಿ ಬಸವಣ್ಣನವರ ಜನನವನ್ನು ೧೧೩೦-೩೧ರಿಂದ ಹಿಂದಕ್ಕೆ ಹಾಗೂ ಅವರ ಮರಣ ಕಾಲವನ್ನು ೧೧೬೭ ಕ್ಕೆ ಆಚೆ ತೆಗೆದುಕೊಂಡು ಹೋಗುವುದರಿಂದ ಪರಿಹರಿಸಲಾಗದ ಸಮಸ್ಯೆಗಳ ಗೂಡಲ್ಲಿ ಸಿಲುಕಿಕೊಳ್ಳಬೇಕಾಗುತ್ತದೆ. ಆದುದರಿಂದ ಪರಂಪರಾಗತವಾದ ಬಸವಣ್ಣನವರು ಮೂರು ಪಟ್ಟ, ಚೆನ್ನಬಸವಣ್ಣ ಎರಡು ಪಟ್ಟವೆಂಬ ಜೀವಿತಾವಧಿಗಳನ್ನು ಒಪ್ಪಿಕೊಳ್ಳುವುದೇ ವಿಹಿತವೆನಿಸುತ್ತದೆ.

ಸಿದ್ಧಯ್ಯ ಪುರಾಣಿಕರು ಬಸವಣ್ಣನವರ ಜೀವಿತಕಾಲವನ್ನು ಈ ರೀತಿಯಾಗಿ ವಿಭಾಗಿಸುತ್ತಾರೆ. (ಬಸವಣ್ಣನವರ ಜೀವನ ಹಾಗೂ ಸಂದೇಶ: ಪು.೧೩)

೧.ಜನನ	–	೧೧೩೦-೩೧ರಲ್ಲಿ ಬಾಗೇವಾಡಿಯಲ್ಲಿ .
೨.ಉಪನಯನ–	–	೧೧೩೮ರಲ್ಲಿ ಬಾಗೇವಾಡಿಯಲ್ಲಿ
೩.ವಿಪ್ರಕರ್ಮಾಚರಣೆ ವಿದ್ಯಾಭ್ಯಾಸ	–	೧೧೪೬-೪೩ರ ವರೆಗೆ ಬಾಗೇವಾಡಿ ಇಂಗುಳೇಶ್ವರದಲ್ಲಿ
೪.ಕೂಡಲಸಂಗಮಕ್ಕೆ ಪ್ರಯಾಣ	–	೧೧೪೬-೪೭ ರಲ್ಲಿ
೫.ಮಂಗಳವಾಡಕ್ಕೆ ಪ್ರಯಾಣ	–	೧೧೫೪ ರಲ್ಲಿ
೬.ಮಂಗಳವಾಡದಲ್ಲಿ ಕರಣಿಕ ವೃತ್ತಿ, ದಂಡನಾಥ ಪದವಿ, ಅನುಭವ ಮಂಟಪದ ಆರಂಭ.	–	೧೧೫೪-೫೫ರಲ್ಲಿ
೭.ಕಲ್ಯಾಣಕ್ಕೆ ಪ್ರಯಾಣ	–	೧೧೫೬
೮.ಕೂಡಲ ಸಂಗಮಕ್ಕೆ ನಿರ್ಗಮನ	–	೧೧೬೭ರ ಕೊನೆಗೆ ಮತ್ತು ಅಲ್ಲಿಯೇ ಬಯಲಾದುದು.

ಫ.ಗು.ಹಳಕಟ್ಟಿಯವರ ಪ್ರಕಾರ ಬಸವಣ್ಣನವರ ಜೀವಿತಾವಧಿಯ ವಿಭಾಗ ಕ್ರಮ ಹೀಗಿದೆ.

೧.	ಬಸವ ಜನನದಿಂದ ಯಜ್ಞೋಪವೀತವನ್ನುತ್ಯಜಿಸುವ ಕಾಲ	–	೧೧೩೨-೧೧೪೮
೨.	ಬಸವೇಶ್ವರ ಸಂಗಮೇಶ್ವರದಲ್ಲಿ	–	೧೧೪೮-೧೧೫೫ ಕಳೆದ ಕಾಲ
೩.	ಬಸವ ಮಂಗಳವಾಡದಲ್ಲಿದ್ದ ಕಾಲ–		ಕ್ರಿ.ಶ.೧೧೫೫ ರಿಂದ ೧೧೬೨
೪.	ಬಸವಣ್ಣ ಕಲ್ಯಾಣದಲ್ಲಿದ್ದ ಕಾಲ	–	ಕ್ರಿ.ಶ.೧೧೬೨-೧೧೬೭

ಈ ಕಾಲಗಳಲ್ಲಿ ಅಲ್ಪಸ್ವಲ್ಪ ವ್ಯತ್ಯಾಸಗಳಿದ್ದಾಗ್ಯೂ ಹೆಚ್ಚಿನ ವ್ಯಾಸಂಗ ಹಾಗೂ ಸಂಶೋಧನೆಗಳಿಂದ ಇದನ್ನು ಮಾಡಲು ಸಾಧ್ಯವಿದೆ. ಆದರೆ ಸಬಲ ಆಧಾರಗಳು ಸಿಗುವವರೆಗೆ ಈ ಕಾಲವನ್ನು ಒಪ್ಪಿಕೊಳ್ಳದೆ ಬೇರೆ ದಾರಿಯೇ ಇಲ್ಲವೆಂದು ಹೇಳಬಹುದು.

೩. ಜನ್ಮಕಾರಣ :

ಕೃತಿನಾಯಕ ಬಸವಣ್ಣನವರ ಜನ್ಮಕಾರಣವನ್ನು ಹರಿಹರನ ರಗಳೆಯಿಂದ ಆದ್ಯಂತವಾಗಿ ಅನೇಕ ಕವಿಗಳು ಹಲಕೆಲವು ವ್ಯತ್ಯಾಸಗಳೊಂದಿಗೆ ತಮ್ಮದೇ ಆದ ದೃಷ್ಟಿಕೋನಗಳಿಂದ ಚಿತ್ರಿಸಿದ್ದು ಕಂಡುಬರುತ್ತದೆ.

ಬಸವರಾಜದೇವರ ರಗಳೆಯನ್ವಯ ಬಸವಣ್ಣನವರು ಶಾಪವಿಮೋಚನೆಗಾಗಿ ಭೂಲೋಕದಲ್ಲಿ ಅವತರಿಸುವರು. ಕೈಲಾಸದಲ್ಲಿ ಶಿವನ ಒಡ್ಡೋಲಗ. ಆ ಒಡ್ಡೋಲಗದಲ್ಲಿ ಸರ್ವರೂ ಪಾಲ್ಗೊಂಡಿದ್ದರು. ಅವರಲ್ಲಿ ವೃಷಭಮುಖನೆಂಬ ಒಬ್ಬ ಗಣೇಶ್ವರ. ಇವನಿಗೆ ಶಿವನು ಸರ್ವಶರಣತತಿಗೆ ಪ್ರಸಾದ ವಿತರಣೆ ಮಾಡೆಂದನು. ಎಲ್ಲರಿಗೆ ಕೊಟ್ಟು ಸ್ಕಂದದೇವನನ್ನು ಮಾತ್ರ ಮರೆತನು. ಸಿಕ್ಕಿಲ್ಲವೆಂದು ಎಚ್ಚರಿಕೆ ಕೊಟ್ಟಾಗಲೂ ವೃಷಭಮುಖನು ಶಿವನೆದುರಿಗೆ ತಾನು ಪ್ರಸಾದವನ್ನು ಕೊಟ್ಟುದಾಗಿಯೇ ಸಾಧಿಸಲು ಯತ್ನಿಸುವನು. ಈ ಒಂದು ತಪ್ಪಿಗಾಗಿ ಗಣ ಸಮಕ್ಷಮದಲ್ಲಿ ಹುಸಿ ನುಡಿದುದಕ್ಕಾಗಿ

ಇದಜೆಂದಲೊಂದು ಜನನಂ ನಿನಗೆ ದೊರಕಿತ್ತು
ಮುದದಿಂದ ಹೋಗಯ್ಯ ಜನನಮಂ ನೀ ಹೊತ್ತು (ಬಸವರಾಜದೇವರ ರಗಳೆ: ಸ್ಥಲ–೧.)

ಎಂದು ಶಿವನು ಬೆಸಸಿದನು. ಈ ಅಪ್ಪಣೆಯಿಂದ ವೃಷಭಮುಖನು ಜರ್ರೆಂದು ಜರೆದನು. ಮರ್ತ್ಯಜನ್ಮವ ನೆನೆದು ನಡುಗಿದನು.

ಪ್ರಸ್ತುತ ಭೀಮಕವಿಯ ಅಭಿಪ್ರಾಯ ಸ್ವಲ್ಪ ಭಿನ್ನವಾಗಿದೆ. ನಾರದನು ಒಮ್ಮೆ ಕೈಲಾಸಕ್ಕೆ ಬಂದು, ಭೂಲೋಕದಲ್ಲಿ ಶಿವಭಕ್ತಿಯ ನಿಚ್ಚಳ ಅರಿವು ನಶಿಸಿ ಹೋಗುತ್ತಿದೆಯೆಂದೂ, ಅದಕ್ಕಾಗಿ ಶಿವನೇ ಭೂಮಿಯಲ್ಲಿ ಅವತರಿಸಿ ಅದನ್ನು ಪುನರುಜ್ಜೀವಿಸಿ ಮರ್ತ್ಯರನ್ನು ಪಾವನಗೊಳಿಸಬೇಕೆಂದು ಬೇಡಿಕೊಳ್ಳುವನು.

ಸಮ್ಮುದಿತ ಸದುಭಕ್ತಿಯುಕ್ತರು
ಹಮ್ಮಿನಿಂದಿರುತಿಹರು ಕೆಲಬರು
ತಮ್ಮ ತಮ್ಮೊಡಲುಗಳನಂತುಮಡಂಗಿಕೊಂಡಿಹರು
ನಿಮ್ಮ ಭಕ್ತಿಯ ತುದಿಮೊದಲಿದೆಂ
ದೊಮ್ಮೆಯುಂ ಸಲೆ ತೋಱದಾರಿಗೆ
ಸಮ್ಮದಿಸಲರಿದಲ್ಲಿ ದೃಷ್ಟ ಪ್ರತ್ಯಯಂಗಳಲಿ ... (೧: ೫೮)

ನೀವು ಬಿಜಯಂಗೈಯ್ದು ಕರುಣಾ
ಭಾವಗುಣದಿಂ ನೋಡಿ ಮರ್ತ್ಯವ
ನೋವಿ ಮನುಜರನೆಲ್ಲರಂ ನಿಜಭಕ್ತಿಯುಕ್ತಿಯಲಿ
ಪಾವನತ್ವವನಿತ್ತು ಪಾಲಿಸಿ
ಕಾವುದೆನ್ನಯ ಬಿನ್ನಪವನೆನೆ
ದೇವದೇವಂ .... (೧: ೬೦)

ಅದಕ್ಕೆ ಶಿವನು ನಂದಿನಾಥಗ್ರೇಸನನಿಗೂ ನನಗೂ ಭೇದವಿಲ್ಲ. ನಾವು ಈತನನ್ನೇ ಭೂಮಿಗೆ ಕುಳುಹುವೆವು. ಈ ಎರಡನೆಯ ಶಂಕರನಿಂದಲೇ ಲೋಕವೆಲ್ಲ ಪಾವನ ಹೊಂದುವುದು ಎಂದು ಹೇಳಿ ನಂದಿಯನ್ನು ಭೂಲೋಕಕ್ಕೆ ಹೋಗಲು ಅಪ್ಪಣೆ ಕೊಡುವನು.

ನಂದಿನಾಥಾಗ್ರೇಶ್ವರಂಗೆನ
ಗೊಂದಿನಿತು ಸಂದಿಲ್ಲದಿಹುದಕೆ
ಸಂದೆಗಮೆ ನಾವೀತನಂ ಮರ್ತ್ಯಕ್ಕೆ ಕಳುಹುವೆವು
ಮುಂದೆಯೀಯೆರಡನೆಯ ಶಂಕರ
ನಿಂದ ಪರಮ ಪವಿತ್ರದುನ್ನತಿ
ಯೊಂದಿ ನೆಗಳ್ದಾಲೋಕವೆಲ್ಲಂ ಬೋಧಿಸಲ್ಪಡುಗು... (೧:. ೬೧)

ಆದರೆ 'ಸಿಂಗಿರಾಜಪುರಾಣ'ದಲ್ಲಿಯ ಅಭಿಪ್ರಾಯವೇ ಬೇರೆ ತೆರನಾಗಿದೆ. ವೃಷಭನು ಒಮ್ಮೆ ಕಾರಣಾಂತರದಿಂದ ಭೂಲೋಕಕ್ಕೆ ಬಂದಾಗ ತನ್ನ ಆತ್ಮಲಿಂಗವನ್ನು ಅನಿಮಿಷನಿಗೆ ಕೊಟ್ಟು ಬಿಡುವನು. ನಂತರ ಅವನು ಕೈಲಾಸಕ್ಕೆ ಮರಳಿದಾಗ ದ್ವಾರಪಾಲಕರಾಗಿದ್ದ 'ಸಿಂಹಕೇಶ' ಹಾಗೂ 'ದ್ರವಿಡ'ರೆಂಬುವರು ಆತ್ಮಲಿಂಗವಿರಹಿತನಾದ ವೃಷಭನನ್ನು ಒಳಗೆ ಪ್ರವೇಶಿಸಲು ಬಿಡದೆ ತಡೆಯುವರು.

ಲಿಂಗಬಾಹ್ಯನ ನೋಡದವನು ಮುಖದಿರುಹಿತ
ಮ್ಮಂಗರಕ್ಷಕ ಚಾರರಕ್ಷಸಂತತಿಯೊಳಗೆ
ಸಿಂಗಕೇಶ ದ್ರವಿಡರೆನುತಿರ್ಪರಿಗೆ ನೇಮಿಸಲ್ಕವರು ಮೇಲಱಿಯದೆ
ಭಂಗಿಸಿ ನುಡಿದು ಝಡಿದು ಪಿಡಿದು ನೊಂಕುತ್ತ ಹೆಱ
ಹಿಂಗು ಹಿಂಗದೊಡೆ ಗದೆಯಿಂದೊಗೆವೆವೆನುತಲ
ತ್ಯಂಗವಿಸಿ ಧಿಕ್ಕರಿಸುತಿರೆ ನಿಲಿಸಿ ಮಹಾಕಾಳರುದ್ರ ಸೆಳೆಗೋಲುವೊಯ್ದು (ಬಸವರಾಜಚಾರಿತ್ರ ೪:೩೭)

ಈ ವ್ಯಾಜ್ಯವು ಶಿವನ ಸಮ್ಮುಖಕ್ಕೆ ಹೋಗುವುದು. ದ್ವಾರಪಾಲಕರ ಅಭಿಪ್ರಾಯವನ್ನು ಅಲ್ಲಗಳೆಯಲು ಸಾಧ್ಯವಿಲ್ಲದೆ ಶಿವನು "ನೀನು ಇಳೆಯಲ್ಲಿ ಅವತರಿಸಿ ನಿಂದೆಯನ್ನು ನೀಗಿ ಬಾ" ಎಂದು ವೃಷಭನಿಗೆ ಅಪ್ಪಣೆ ಕೊಡುವನು. ದ್ವಾರಪಾಲಕರಿಗೂ ಭೂಲೋಕದಲ್ಲಿ ಜನಿಸುವ ಅಪ್ಪಣೆಯಾಗುವುದು. ಹೀಗೆ ವೃಷಭನು ಬಸವೇಶ್ವರನಾಗಿಯೂ, ಶಿವನು ಪ್ರಭುವಾಗಿಯೂ, ಅಮರಗಣಂಗಳು ಶಿವಶರಣರಾಗಿಯೂ, ದ್ವಾರಪಾಲಕರು ಬಿಜ್ಜಳ ಕರ್ಣದೇವರಾಗಿಯೂ ಕಲ್ಯಾಣದಲ್ಲಿ ಜನಿಸಿದರು.

ಹೀಗೆ ಹರಿಹರನಿಂದ ಪ್ರಾರಂಭವಾದ ಬಸವಣ್ಣನವರ ಅವತಾರದ ಕಲ್ಪನೆ ಮುಂದುವರಿದುಕೊಂಡು ಬಂದದ್ದನ್ನು ಕಾಣಬಹುದು. ಬಹುಶಃ ಈ ಅವತಾರದ ಕಲ್ಪನೆಗೆ ಮುಖ್ಯ ಕಾರಣ ಬಸವಣ್ಣನವರ ವಚನಗಳಲ್ಲಿರುವ ಸೂಚನೆ ಇರಬಹುದೇನೂ ಎನಿಸುತ್ತದೆ. ವೈದಿಕ, ಜೈನಪುರಾಣ ಕಾವ್ಯಗಳು ಪ್ರೇರಣೆಯನ್ನು ನೀಡಿದಂತೆ, ಶರಣರ ಉಜ್ವಲವಾದ ಬದುಕು ಮತ್ತು ಸ್ವತಃ ಬಸವ ಅಲ್ಲಮಾದಿ ಶರಣರು ತಮ್ಮ ಪೂರ್ವಜನ್ಮ ಪರಂಪರೆಯನ್ನು ಕುರಿತು ಹೇಳಿದ ವಚನಗಳಲ್ಲಿಯ ಸಾಂಕೇತಿಕ, ತಾತ್ವಿಕ ಮಾತುಗಳು ಪ್ರೇರಣೆ ನೀಡಿರುವ ಸಾಧ್ಯತೆಗಳನ್ನು ತಳ್ಳಿಹಾಕುವಂತಿಲ್ಲ.

ಕೃತಯುಗದಲ್ಲಿ ನೀನು ಸ್ಕಂದನೆಂಬ ಗಣೇಶ್ವರನಾಗಿರ್ದುದನಾ ಬಲ್ಲೆ
ತ್ರೇತಾಯುಗದಲ್ಲಿ ನೀನು ನೀಲಲೋಹಿತನೆಂಬ ಗಣೇಶ್ವರನಾಗಿರ್ದುದ ನಾನು ಬಲ್ಲೆ
ದ್ವಾಪರದಲ್ಲಿ ನೀನು ವೃಷಭನೆಂಬ ಗಣೇಶ್ವರನಾಗಿರ್ದುದ ನಾನು ಬಲ್ಲೆ
ಕಲಿಯುಗದಲ್ಲಿ ನೀನು ಬಸವನೆಂಬ ಗಣೇಶ್ವರನಾಗಿ,
ಸರ್ವಾಚಾರ ಸಂಪನ್ನವಾಗಿ, ಭಕ್ತಿ ಜ್ಞಾನ ಕಂಡವೆಯ ಮಾಡಿ ಶಿವಾಚಾರದ
ಘನದ ಬೆಳವಿಗೆಯ ಮಾಡಿ, ಶಿವಭಕ್ತಿಯ ಧ್ವಜವನೆತ್ತಿಸಿ
ಮರ್ತ್ಯಲೋಕದೊಳಗೆ ಹರಹಿದ ಭೇದವ ಭೇದಿಸಿ ನೋಡಿ ಆನ ಅಱಿ
ಗುಹೇಶ್ವರ ಸಾಕ್ಷಿಯಾಗಿ ನಿಮ್ಮ ಮಹಾತ್ಮೆಗೆ ನಮೋ ನಮೋ ಎನುತಿರ್ದೆನು
ಕಾಣಾ ಸಂಗನ ಬಸವಣ್ಣ (ಬಸವಸ್ತೋತ್ರದ ವಚನಗಳು: ೧೯೭೬)

ಸ್ವತಃ ಬಸವಣ್ಣನವರ ಎರಡು ವಚನಗಳು ಇದಕ್ಕೆ ಪುಷ್ಟಿ ಕೊಡುತ್ತವೆ.

ಅಯ್ಯಾ, ನೀನು ನಿರಾಕಾರವಾಗಿರ್ದಲ್ಲಿ
ನಾನು ಜ್ಞಾನವೆಂಬ ವಾಹನವಾಗಿರ್ದೆ ಕಾಣಾ
ಅಯ್ಯಾ ನೀನು ನಾಟ್ಯಕ್ಕೆ ನಿಂದಲ್ಲಿ
ನಾನು ಚೈತನ್ಯವೆಂಬ ವಾಹನವಾಗಿರ್ದೆ ಕಾಣಾ
ಅಯ್ಯಾ ನೀನು ಆಕಾರವಾಗಿರ್ದಲ್ಲಿ
ನಾನು ವೃಷಭನೆಂಬ ವಾಹನವಾಗಿರ್ದೆ ಕಾಣಾ
ಅಯ್ಯಾ, ನೀನೆನ್ನ ಭವದ ಕೊಂದೆಹೆನೆಂದು
ಜಂಗಮ ಲಾಂಛನವಾಗಿ ಬಂದಡೆ
ನಾನು ಭಕ್ತನೆಂಬ ವಾಹನವಾಗಿರ್ದೆ ಕಾಣಾ
ಕೂಡಲಸಂಗಮದೇವಾ. (ಸ.ವ.ಸಂ.೧: ವ.೩)

ಅಯ್ಯಾ ಏಳೇಳು ಜನ್ಮದಲ್ಲಿ ಶಿವಭಕ್ತನಾಗಿ ಬಾರದಿರ್ದಡೆ
ನಿಮ್ಮಾಣೆ, ನಿಮ್ಮ ಪ್ರಮಥರಾಣೆ!
ನಿಮ್ಮ ಪ್ರಸಾದಕ್ಕಲ್ಲದೆ ಬಾಯ್ದೆರೆಯೆನಯ್ಯಾ
ಪ್ರಥಮಭವಾಂತರದಲ್ಲಿ
ಶಿಲಾದನೆಂಬ ಗಣೇಶ್ವರನ ಮಾಡಿ, ಹೆಸರಿಟ್ಟು ಕರೆದು
ನಿಮ್ಮ ಭೃತ್ಯನ ಮಾಡಿ ಎನ್ನನಿರಿಸಿಕೊಂಡಿರ್ದಿರಯ್ಯಾ.
ಎರಡನೆಯ ಭವಾಂತರದಲ್ಲಿ
ಸ್ಕಂದನೆಂಬ ಗಣೇಶ್ವರನ ಮಾಡಿ, ಹೆಸರಿಟ್ಟು ಕರೆದು
ನಿಮ್ಮ ಕಾರುಣ್ಯವ ಮಾಡಿರಿಸಿಕೊಂಡಿರ್ದಿರಯ್ಯಾ
ಮೂರನೆಯ ಭವಾಂತರದಲ್ಲಿ
ನೀಲಲೋಹಿತನೆಂಬ ಗಣೇಶ್ವರನ ಮಾಡಿ, ಹೆಸರಿಟ್ಟು ಕರೆದು
ನಿಮ್ಮ ಲೀಲಾವಿನೋದದಿಂದಿರಿಸಿಕೊಂಡಿರ್ದಿರಯ್ಯಾ.
ನಾಲ್ಕನೆಯ ಭವಾಂತರದಲ್ಲಿ
ಮನೋಹರನೆಂಬ ಗಣೇಶ್ವರನ ಮಾಡಿ, ಹೆಸರಿಟ್ಟು ಕರೆದು
ನಿಮ್ಮ ಮನಃಪ್ರೇರಕನಾಗಲೆಂದಿರಿಸಿಕೊಂಡಿರ್ದಿರಯ್ಯಾ.
ಐದನೆಯ ಭವಾಂತರದಲ್ಲಿ
ಕಾಲಲೋಚನನೆಂಬ ಗಣೇಶ್ವರನ ಮಾಡಿ, ಹೆಸರಿಟ್ಟು ಕರೆದು
ಸರ್ವಕಾಲಸಂಹಾರವ ಮಾಡಿಸುತ್ತಿರ್ದಿರಯ್ಯಾ.
ಆರನೆಯ ಭವಾಂತರದಲ್ಲಿ
ವೃಷಭನೆಂಬ ಗಣೇಶ್ವರನ ಮಾಡಿ, ಹೆಸರಿಟ್ಟು ಕರೆದು
ನಿಮಗೇರಲು ವಾಹನವಾಗಲೆಂದಿರಿಸಿಕೊಂಡಿರ್ದಿರಯ್ಯಾ.
ಏಳನೆಯ ಭವಾಂತರದಲ್ಲಿ
ಬಸವದಣ್ಣಾಯಕನೆಂಬ ಗಣೇಶ್ವರನ ಮಾಡಿ, ಹೆಸರಿಟ್ಟು ಕರೆದು
ನಿಮ್ಮ ಒಕ್ಕುದ ಮಿಕ್ಕುದಕ್ಕೆ ಯೋಗ್ಯನಾಗಲೆಂದಿರಿಸಿಕೊಂಡಿರ್ದಿರಯ್ಯಾ.
ಇದು ಕಾರಣ ಕೂಡಲ ಸಂಗಮದೇವಾ,
ನೀವು ಬರಿಸಿದ ಭವಾಂತರದಲ್ಲಿ ನಾನು ಬರುತಿರ್ದೆನಯ್ಯಾ. (ಸ.ವ.ಸಂ.೧ ವ.೪)

ಹರಿಹರನಲ್ಲಿ ತಪ್ಪಿನ ಫಲವಾಗಿ ಅವತರಿಸುವುದಕ್ಕೂ, ಭೀಮಕವಿಯಲ್ಲಿ ನಾರದನ ಬೇಡಿಕೆಯಂತೆ ಲೋಕವನ್ನು ಉದ್ಧರಿಸಲು ನಂದೀಶನೇ ಬಸವಣ್ಣನವರಾಗಿ ಬರುವುದಕ್ಕೂ ಬಹಳ ವ್ಯತ್ಯಾಸವಿದೆ. ಹರಿಹರನಕ್ಕಿಂತಲೂ ಸ್ವಲ್ಪ ಸುಧಾರಿಸಿದ ಕಲ್ಪನೆಯನ್ನಿಟ್ಟುಕೊಂಡು ಭೀಮಕವಿ ಬಸವಣ್ಣನವರ ಜನ್ಮಕಾರಣ ಹೇಳುತ್ತಾನೆ. ಈ ಕಲ್ಪನೆಯಿಂದಾಗಿ ಶಿವನ ವಾಹನ 'ಎತ್ತು' ಬಸವನಾಗಿ ಬಂದನೆಂದು ಜನ ಭಾವಿಸಿದರು. ಹಾಗಾಗಿ ಇಂದು ನಾವು ಬಸವಜಯಂತಿ ಆಚರಿಸುತ್ತಿದ್ದರೆ ಅದು ಬಸವಣ್ಣನವರ ಹುಟ್ಟುಹಬ್ಬ ಎಂದು ಭಾವಿಸದೆಯೇ ಮಣ್ಣಿನಿಂದ ಎತ್ತುಗಳನ್ನು ಮಾಡಿ ಪೂಜಿಸುವ ಪದ್ಧತಿ ಹಳ್ಳಿಗಳಲ್ಲಿದೆ.

ಹರಿಹರ ಭೀಮಕವಿಗಳ ನಿರೂಪಣೆಗಳೆ ಈ ಪದ್ಧತಿಯನ್ನು ಪೋಷಿಸಿಕೊಂಡು ಬಂದಿವೆಯೆನ್ನಬಹುದು. ಜನಸಾಮಾನ್ಯರ ಮೇಲೆ ಈ ಘಟನೆ ಎಷ್ಟರಮಟ್ಟಿಗೆ ಪ್ರಭಾವ ಬೀರಿದೆಯೆಂಬುದಕ್ಕೆ ಇದು ಉದಾಹರಣೆಯಾಗಿದೆ.

ಸಿಂಗಿರಾಜನ ಬಸವಣ್ಣನವರು ಶಿವನ ಅಪ್ಪಣೆಯಂತೆ ನಿಂದೆಯನ್ನು ನೀಗಲು ಹಾಗೂ ಸ್ವಯಂ ಉದ್ಧಾರವಾಗಲು ಬರುತ್ತಾರೆ. ಜೊತೆಗೆ ಲೋಕಕಲ್ಯಾಣವೆಂಬ ಮಾತು ಬರುತ್ತದೆ. ಇಲ್ಲಿ ವಾಸ್ತವಕ್ಕೆ ಮಾನವ ಸಹಜತೆ ಮತ್ತು ಕಾರಣಿಕಪುರಷನೆಂಬಂತೆ ದೈವೀದೃಷ್ಟಿಕೋನದಿಂದ ಚಿತ್ರಿಸಿರುವನು. ಇಷ್ಟಾಗಿಯೂ ಸಿಂಗಿರಾಜನು ಸತ್ಯವನ್ನು ಮರೆಮಾಚಿರುವನು.

ಹೀಗೆ ಒಬ್ಬೊಬ್ಬರು ಒಂದೊಂದು ರೀತಿಯ ಬಾಲಿಶ ಕಲ್ಪನೆಗಳಿಂದ ಬಸವಣ್ಣನವರ ಜನ್ಮಕಾರಣ ಕುರಿತು ಹೇಳಿರುವುದರಿಂದ ಅವುಗಳನ್ನು ನಂಬುವ ಅವಶ್ಯಕತೆಯಿಲ್ಲ. ನಮಗೆ ಬಸವಣ್ಣನವರು ಹೇಗೆ ಯಾವ ಕಾರಣಕ್ಕಾಗಿ ಯಾರಿಗೋಸ್ಕರ ಹುಟ್ಟಿದರು? ಅವರ ತಪ್ಪಿನ ಸಲುವಾಗಿಯೇ ದೇವರು ವಿಧಿಸಿದ ಶಿಕ್ಷೆಗಾಗಿಯೋ ಹುಟ್ಟಿದರೆಂದು ಬರೆಯುವುದು, ಹೇಳುವುದಕ್ಕಿಂತ ಸಹಜವಾಗಿ ವಾಸ್ತವ ದೃಷ್ಟಿಕೋನದಿಂದ ಅವರೊಬ್ಬ ಮನುಷ್ಯರಾಗಿ ನಮ್ಮ ಹಾಗೆಯೇ ಹುಟ್ಟಿದರು. ಆದರೆ ಅತ್ಯಂತ ಪ್ರತಿಭಾವಂತ ವ್ಯಕ್ತಿಯಾಗಿ, ಬುದ್ಧಿಶಾಲಿಯಾಗಿ, ಸಾಧನೆ ಮಾಡಿದರು. ಇಟ್ಟ ಹೆಜ್ಜೆ ಹಿಂದೆಗೆಯಲಿಲ್ಲ. ಹಿಡಿದ ಕೆಲಸ ಬಿಡಲಿಲ್ಲ. ಇಟ್ಟುಕೊಂಡ ಧ್ಯೇಯ ಬಿಡಲಿಲ್ಲ. ಸ್ತುತಿ-ನಿಂದೆಗಳಿಗೆ ಹೆದರಲಿಲ್ಲ. ಪ್ರಾಣವನ್ನೇ ಪಣಕ್ಕಿಟ್ಟು ತನ್ನ ಅಂತರಂಗ ಬೋಧಿಸಿದ ಸತ್ಯವನ್ನೇ ತತ್ವವನ್ನಾಗಿಸಿ ಹೇಳಿದರು. ಆ ತತ್ವಗಳನ್ನು ಆಚರಣೆಯಲ್ಲಿ ತರಲು ಉದ್ದಕ್ಕೂ ಶ್ರಮಿಸಿದರು. ಆ ಶ್ರಮದ ಫಲದಿಂದಾಗಿ ಉನ್ನತ ಸ್ಥಿತಿಗೇರಿದರು. ಕೆಲವರು ದೇವರೆಂದರು, ಆಗದಿರುವವರು 'ದ್ರೋಹಿ' ಎಂದರು. ಅದಾವುದಕ್ಕೂ ಗಮನ ಹರಿಸಲಿಲ್ಲ.

೪. ಜನನ ಮತ್ತು ಬಾಲ್ಯ :

ಶ್ರೀಗಿರಿಯ ಪಶ್ಚಿಮಭಾಗದಲ್ಲಿ ಕರ್ನಾಟಕ ದೇಶವು ಕರಮೆಸೆದಿರುವುದು. ಅಲ್ಲಿ ಹಿಂಗುಳೇಶ್ವರ ಬಾಗೇವಾಡಿಯೆಂಬ ಅಗ್ರಹಾರವುಂಟು. ಆ ಅಗ್ರಹಾರದೊಳಗೆ ಮಂಡಗೆ ಮಾದಿರಾಜ, ಮಾದಾಂಬೆ ಎಂಬ ದಂಪತಿಗಳಿದ್ದರು.

ಗುರುತರೋನ್ನತವಾಗೆಸೆವ ಸಿರಿ
ಗಿರಿಯ ಪಡುವಣ ಕಡೆಯ ಧರೆಯಲಿ
ನರನುತಾಸ್ಪದವೆನಿಸಿದಾ ಕರ್ನಾಟದೇಶದಲಿ
ಕರಮೆಸೆದುದಲ್ಲಿ ಪ್ರಸಿದ್ಧದಿ
ಪಿರಿದೆನಿಪ ಶಿವಭಕ್ತಿಬೀಜ
ಕ್ಕಿರವೆನಿಸಿದೊಂದಿಗುಳೇಶ್ವರ ಬಾಗವಾಡಿಯದು ... (೨: ೪೫)

ಇದರಿಂದ 'ಬಾಗೇವಾಡಿ' ಎಂಬ ಅಗ್ರಹಾರ ಬಸವಣ್ಣನವರ ಜನ್ಮಸ್ಥಳ, ಮಾದಿರಾಜ ಮತ್ತು ಮಾದಲಾಂಬಿಕೆ ಬಸವಣ್ಣನವರ ತಂದೆ ತಾಯಿಗಳೆಂದು ಸ್ಪಷ್ಟವಾಗುತ್ತದೆ. ಇದರಲ್ಲಿ ಯಾವುದೇ ಅನುಮಾನಗಳಿಲ್ಲ. ಈ ಹೇಳಿಕೆಯಲ್ಲಿ ಎಲ್ಲ ಗ್ರಂಥಗಳಲ್ಲಿ ಐಕ್ಯಮತವಿದೆ. ಬಿಜಾಪುರ ಜಿಲ್ಲೆಯಲ್ಲಿ

'ಬೆಲ್ಲದ ಬಾಗೇವಾಡಿ','ಹಿರೇಬಾಗೇವಾಡಿ',ಹಾಗೂ 'ಬಸವನ ಬಾಗೇವಾಡಿ' ಎಂಬ ಮೂರು ಸ್ಥಳಗಳಿದ್ದು ಭೀಮಕವಿಯು ಬಸವಣ್ಣನವರು ಹುಟ್ಟಿದ ಬಾಗೇವಾಡಿಯನ್ನು 'ಇಂಗುಳೇಶ್ವರ ಬಾಗೇವಾಡಿ' ಎಂದು ಸ್ಪಷ್ಟವಾಗಿ ಕರೆದಿದ್ದಾನೆ. ಅಲ್ಲದೇ ಅರ್ಜುನವಾಡ ಶಿಲಾಶಾಸನದಲ್ಲಿ "ಶ್ರೀ ಮತ್ತರದವಾಡಿ ಮಧ್ಯಗ್ರಾಮ ಬಾಗವಾಡಿ ಪುರವರಾಧೀಶ್ವರ ಮಾದಿರಾಜನ ತನೂಜ" ಎಂಬ ಉಲ್ಲೇಖ ಬಸವ ಬಾಗೇವಾಡಿಯಲ್ಲಿ ಜನಿಸಿದ ಎಂಬುದನ್ನು ಸ್ಪಷ್ಟವಾಗಿ ಹೇಳುತ್ತದೆ. ಅಲ್ಲದೆ 'ಹೊನ್ನವಾಡಿ ಶಾಸನ' ಬಾಗೇವಾಡಿಯನ್ನು "ಬಾಗೇವಾಡಿಯ ಮಹಾಜನ ಮಯ್ಯೂರ್‌ವರುಮೀ ಧರ್ಮಮಂ ಪ್ರತಿಪಾಲಿಸುವರ್" (BKI Vol Part-I) ಎಂದು ಹೇಳಿದೆ. ಪ್ರಸ್ತುತ ಪುರಾಣದಲ್ಲಿ ಮಂಡಿಗೆಯ ಮಾದಿರಾಜ ಎಂದಿರುವುದನ್ನೇ ಅವನು ಮೈಸೂರು ಪ್ರಾಂತ್ಯದ ಮಂಡ್ಯ ಗ್ರಾಮದವನೆಂದು ಭಾವಿಸಿದ್ದರು. ಅಲ್ಲದೇ 'ನಂದೀ ಆಗಮ' ಎಂಬ ಹೆಸರಿನ ಗ್ರಂಥದಲ್ಲಿ ಬಸವಣ್ಣನವರು 'ನೀಲಗಿರಿ' ಎಂಬಲ್ಲಿ ಹುಟ್ಟಿದರೆಂದು ಅದರ ಗ್ರಂಥಕಾರರು ಹೇಳಿದ್ದಾರೆ. ಅಲ್ಲದೇ ಬಸವಣ್ಣನವರ ತಂದೆ ಮಾದಿರಾಜ ಎಂಬಲ್ಲಿಯೂ ಏಕತೆ ಇದೆ. ಮನಗೂಳಿಯ ಶಾಸನ ಮಾತ್ರ ಚಂದಿರಾಜ ಚಂದ್ರಾಂಬಿಕೆಯರ ಹೆಸರುಗಳನ್ನು ಮುಂದೆ ಮಾಡಿದ್ದಿತು. ಇವರ ಮಗ ಕಸಪಯ್ಯನೇ ಬಸವಣ್ಣನವರೆಂದು ನಂಬಿದ್ದರು. ಆದರೆ ಈಗ ಈ ವಾದ ಬಿದ್ದು ಹೋಗಿದೆ. ಏಕೆಂದರೆ ಅರ್ಜುನವಾಡ ಶಾಸನವೇ "ಮತ್ತಂ ತರ್ದವಾಡಿ ಮಧ್ಯಗ್ರಾಮ ಬಾಗವಾಡಿ ಪುರವರಾಧೀಶ್ವರ ಮಾದಿರಾಜ ತನೂಜಂ ಬಸವರಾಜ" ಎಂದು ಸ್ಪಷ್ಟವಾಗಿ ಘೋಷಿಸಿದೆ. ಅಲ್ಲದೇ ಚೆನ್ನಂಜೇದೇವರು ಸಂಕಲಿಸಿರುವ ಮಿಶ್ರಸ್ತೋತ್ರ ವಚನದಲ್ಲಿ ಬರುವ ಘಟ್ಟಿವಾಳಯ್ಯನ ವಚನ–

ಕರವೂರ ನಿರಹಂಕಾರ ಸುಜ್ಞಾನದೇವಿಯರ ಬಸುರಲ್ಲಿ
ಬಂದನೆನ್ನಬಹುದೇ ಪ್ರಭುದೇವರ?
ಮಂಡಗೆಯ ಮಾದಿರಾಜ ಮಾದಾಂಬಿಕೆಯ ಬಸುರಲ್ಲಿ
ಬಂದನೆನ್ನಬಹುದೇ ಬಸವೇಶ್ವರನ
ಅಕ್ಕನಾಗಾಂಬಿಕೆಯ ಬಸುರಲ್ಲಿ ಬಂದನೆನ್ನಬಹುದೇ
ಚೆನ್ನಬಸವೇಶ್ವರನ
ಇವರು ಒಬ್ಬರಿಂದಾದವರಲ್ಲ; ತಮ್ಮಿಂದ ತಾವಾದರು
ಚಿಕ್ಕಯ್ಯಪ್ರಿಯ ಸಿದ್ಧಲಿಂಗ ಇಲ್ಲ ಇಲ್ಲ ನಿಲ್ಲು ಮಾಣು

ಎಂಬ ವಚನ ಬಸವಣ್ಣನವರ ತಂದೆ ತಾಯಿಗಳು ಮಾದರಸ ಮಾದಲಾಂಬಿಕೆ ಎಂಬುದನ್ನು ಖಚಿತಪಡಿಸುತ್ತದೆ.

ಹರಿಹರ ಮಹಾಕವಿಯು–

ಸಂದಣಿಪ ವಿಪ್ರಸಂತಾನದಿಂದಿಡಿದಿರ್ಪ
ಶಿವಶಾಸ್ತ್ರಘೋಷ ಸಂಗೀತದಿಂದಿಡಿದಿರ್ಪ
ಶಿವಪುರಾಣಾಗಮಕುಳಂಗಳಿಂದೆಸೆದಿರ್ಪ
ಅಗ್ರಹಾರಂ ಬಾಗೆವಾಡಿಯೊಳೆಸೆದಿರ್ಪ
ಅಗ್ರೇಶ್ವರಂ ಕಮ್ಮೆ ಕುಲದಿಂದೆ ಮೆಱೆದಿರ್ಪ
ವಿಪ್ರನಿರ್ಪಂ ಮಾದಿರಾಜನಾತನ ಸತಿಯು
ಅಪ್ರತಿಮ ಮಾದಾಂಬೆಯೆಂದೆಂಬ ಗುಣವತಿಯು (ಬ.ದೇ.ರ.ಸ್ಥಲ–೧:)

ಎಂದು ಹೇಳುತ್ತಾನೆ. ಇಲ್ಲಿಯ "ಅಗ್ರಹಾರಂ ಬಾಗೆವಾಡಿಯೊಳಗೆಸದಿರ್ಪ ಅಗ್ರೇಶ್ವರಂ" ಎಂದು ಹೇಳಿದ್ದರ ಮೇಲಿಂದ ಮಾದಿರಾಜನು ಬಾಗೇವಾಡಿ ಗ್ರಾಮದ ಮುಖ್ಯಸ್ಥನಾಗಿದ್ದನೆಂದು ಭಾವಿಸಬಹುದು. ಅಲ್ಲದೇ ಮಾದಿರಾಜ, ಮಾದರಸ ಹೆಸರಿನ ಅಂತ್ಯದಲ್ಲಿರುವ 'ರಾಜ', 'ಅರಸ' ಎಂಬ ಶಬ್ದಗಳ ಮೇಲಿಂದ ಆಡಳಿತದಲ್ಲಿ ಈತ ಕೆಲವೊಂದು ಅಧಿಕಾರ ಹೊಂದಿದ್ದು ಸ್ಪಷ್ಟವಾಗುತ್ತದೆ.

ಅಲ್ಲದೆ 'ಸಿಂಗಿರಾಜ', (೫:೯) 'ಲಕ್ಕಣ್ಣದಂಡೇಶ', (೩೦:೧) 'ಚಾಮರಸ' (೯:೧೧) ಹಾಗೂ 'ಷಡಕ್ಷರಿಗಳು'(೧:೨೫/೩೬) ಬಸವೇಶ್ವರರು ಮಾದಿರಾಜ ಮಾದಲಾಂಬಿಕೆಯರ 'ತನುಜ' ಎಂದರೆ ಹೊಟ್ಟೆಯಲ್ಲಿ ಹುಟ್ಟಿದ ಮಗನೆಂದು ಒಮ್ಮತ ವ್ಯಕ್ತಪಡಿಸುವುದರಿಂದಲೂ, ಶಾಸನದ ಆಧಾರದಿಂದಲೂ ಇದು ಸ್ಪಷ್ಟವಾಗುವುದರಿಂದಲೂ ಒಪ್ಪಿಕೊಳ್ಳಬೇಕಾಗುತ್ತದೆ.

ಆ ಮಹಾ ಬಹುಳಗ್ರಹಾರದ
ಗ್ರಾಮಣೀಮಣಿ ವಿತರಣದ ಕಣಿ
ಭೂಮಿದೇವಾಗ್ರಣಿ ಪರಮ ಶೈವಾಂಬುರುಹತರುಣಿ
ನೇಮಿಸುವ ಷಟ್‌ಕರ್ಮಮಾರ್ಗ
ಪ್ರೇಮಿ ಸಂತಪ ವರತನೂಭವ
ಕಾಮಿ ಮಂಡಗೆಮಾದಿರಾಜನೆನಲ್ಕೆ ಸನ್ನಾಮಿ ... (೨: ೪೬)

ಮಕ್ಕಳಿಲ್ಲವೆಂದು ಮಾದಲಾಂಬೆ ನಂದೀವ್ರತವನ್ನು ಕೈಗೊಳ್ಳುವಳು. ಈಶಭಕ್ತಿಯ ಕಂದನನ್ನು ದಯಪಾಲಿಸಿದರೆ ನಿಮ್ಮ ಹೆಸರಿಡುವೆನೆಂದು ನುಡಿದಳು. ಆದರೆ ಹರಿಹರ ಮಾತ್ರ ಮಾದಲಾಂಬಿಕೆ ವ್ರತಮಾಡಿ ಬಸವನನ್ನು ಪಡೆದ ಬಗೆಯನ್ನು ಹೇಳುವುದಿಲ್ಲ.

ಇಂತು ನವಮಾಸವಾಕೆಯೊಳಗೆ ಸನ್ನುತಂ
ಅಂತಸ್ಥಳದೆ ಪುಣ್ಯಶಿಶುತೊಳಗಿಬೆಳಗುತಂ
ಚಿಪ್ಪಿನೊಳ್ ಮುತ್ತು ಕಾಸಾರದೊಳ್ ಪಂಕಜಂ
ಸುಮುಹೂರ್ತವೇ ಗಂಡುರೂಪಾದ ತೇಜನಾಗಿ
ಅಮಮ ಕಾರಣಿಕ ಶಿಶು ಜನಿಯಿಸಿದನನುವಾಗಿ (ಬ.ದೇ.ರ.ಸ್ಥಲ-೧)

ಎಂದು ಹೇಳುತ್ತಾನೆ. ಆದರೆ ಪುರಾಣಗಳು ಮಾತ್ರ ಬಸವಣ್ಣನವರ ಜನನವನ್ನು ಅಲೌಕಿಕಗೊಳಿಸಲು ಈ ವ್ರತಕ್ಕೆ (ನೋಂಪಿ) ಮೊರೆ ಹೊಕ್ಕಿವೆ. ಬಸವಣ್ಣನವರು ಮಾದಲಾಂಬಿಕೆಯ ಮೊದಲ ಮಗ. ಆದರೆ ಅವರ ತಂದೆ ಮಾದರಸನಿಗೆ ಆ ಮೊದಲು ಮದುವೆಯಾಗಿ ಅವನಿಗೆ ಮೊದಲ ಪತ್ನಿಯಲ್ಲಿ 'ದೇವರಾಜ' ಎಂಬ ಹೆಸರಿನ ಮಗನಿದ್ದ ಎಂದು ಊಹಿಸಲು ಪ್ರಬಲವಾದ ಕಾರಣಗಳಿವೆ. "ಸಮಕಾಲೀನ ಅಥವಾ ಮುಂದಿನ ವೀರಶೈವ ವಾಙ್ಮಯವು ಅಪ್ಪಿತಪ್ಪಿಯೂ ದೇವರಾಜನ ಹೆಸರನ್ನು ಹೇಳದಿರುವ ಕಾರಣ ಅವನು ಮಾದಲಾಂಬಿಕೆಯ ಮಗನಲ್ಲವೆಂಬುದು ಸ್ಪಷ್ಟ." (ಚಿಮೂ ೨೦೦೮: ಪು.೧೨) ಈ ಊಹೆಯನ್ನು ಪ್ರಬಲವಾಗಿ ಸಮರ್ಥಿಸುವ ಸಾಕ್ಷ್ಯಾಧಾರ ಮಾದಲಾಂಬಿಕೆಯ ತೌರೂರಾದ ಇಂಗುಳೇಶ್ವರದಲ್ಲಿ ಜನಜನಿತವಾಗಿದೆ. ಅಲ್ಲಿಯ ಜನರ ಪ್ರಕಾರ ಮೊದಲ ಹೆಂಡತಿ 'ಚೆನ್ನಮ್ಮ' ಹೆರಿಗೆ ಸಮಯದಲ್ಲಿ ತೀರಿ ಹೋದದ್ದರಿಂದ ಮಾದಲಾಂಬಿಕೆಯನ್ನು ಮಾದರಸ ವಿವಾಹವಾದರು. (ಅದೇ) ಇಲ್ಲಿ ಬರುವ 'ಚೆನ್ನಮ್ಮ' ಹೆಸರು ನಿಜವಿರಬಹುದು ಅಥವಾ ಭಿನ್ನವಿರಬಹುದು; ಆದರೆ ಮಾದಲಾಂಬಿಕೆಯು ಮಾದರಸನ ಎರಡನೆಯ ಹೆಂಡತಿಯೆಂಬ ಜನಜನಿತ

ಮಾಹಿತಿಯು ಅರ್ಜುನವಾಡ ಶಿಲಾಶಾಸನದ ಸಂಗತಿಯನ್ನು ಪೋಷಿಸುತ್ತದೆ. "ಬಸವಣ್ಣನವರ ತಂದೆಯ ಮೊದಲ ಹೆಂಡತಿಯ ಮಗ ದೇವರಾಜ ಎಂಬ ಸಂಗತಿಯ ಐತಿಹಾಸಿಕತೆ ಸದ್ಯಕ್ಕೆ ದೃಢವೆಂದೇ ನಂಬಬಹುದು" (೨೦೦೮: ಪು.೧೪) ಎಂದು ಚಿದಾನಂದಮೂರ್ತಿಯವರು ಅಭಿಪ್ರಾಯ ಪಡುತ್ತಾರೆ. ಆದರೆ ಫ.ಗು.ಹಳಕಟ್ಟಿಯವರ ಅಭಿಪ್ರಾಯ ಬೇರೆಯಾಗಿದೆ. ಮಾದಲಾಂಬಿಕೆಯು ನಂದೀವ್ರತವನ್ನು ಆಚರಿಸಿಯೇ ಇಲ್ಲ. ಏಕೆಂದರೆ ಅರ್ಜುನವಾಡ ಶಿಲಾಶಾಸನದ ಪ್ರಕಾರ ಈಗಾಗಲೇ ಬಸವಣ್ಣನವರಿಗೆ ದೇವರಾಜ ಎಂಬ ಅಣ್ಣನಿದ್ದ ಕಾರಣ ಭಾವುಕ ಜನರಲ್ಲಿ ಭಕ್ತಿ ಸ್ಥಾಪನೆಗಾಗಿ ಕವಿಗಳು ಹೀಗೆ ಕಟ್ಟುಕಥೆ ಕಟ್ಟಿರಬೇಕೆಂದು ಅಭಿಪ್ರಾಯ ಪಡುತ್ತಾರೆ.

ನಂದಿಕೇಶ್ವರ ಹರಭರಣ ನವ
ನಂದಿನಾಥ ಅನಾಥಬಂಧುವೆ
ತಂದೆ ನಿನ್ನವೂಲೀಶಭಕ್ತಿಯ ಕಂದನೆನಿಸಿರ್ದೆ
ಕಂದನಂ ನೀವಿತ್ತಡಾನೊಲ
ವಿಂದೆ ನಿಮ್ಮಯ ಪೆಸರನಿಕ್ಕುವೆ
ನೆಂದೆನಲು ಮಾದಾಂಬಿಕೆಗೆ ಜನರಾಗ ನೋಡಲ್ಕೆ ... (೨: ೫೪)

ಅವಳ ನೋಂಪಿಗೆ ಭಕ್ತಿಗೆ ನಂದಿನಾಥನು ಪ್ರಸಾದವನ್ನು ಕರುಣಿಸಿದನು.

ಇಂತೆಯಂ ಕರುಣಿಸಲದಂ ಕೈ
ಕೊಂಡುರದೊಳಾನನದೊಳುತ್ತುತೆ
ಮಂಡೆಯಲಿ ಸೂಡಿದಳು ಮಾನಿನಿ ತತ್‌ಪ್ರಸಾದವನು
ಗಂಡಹೆಂಡಿರು ನಂದಿಯಂ ಬಲ
ಗೊಂಡು ವಂದಿಸಿ ಪಿರಿದು ಶುಭವಿದಿ
ರ್ಗೊಂಡವೋಲು ನಿಜಮಂದಿರಕೆ ನಡೆತಂದು ಮುದವಿತ್ತು ... (೨: ೫೫)

ಆ ಪ್ರಸಾದದ ಫಲವಾಗಿ ಮಾದಲಾಂಬೆಯ ಗರ್ಭದಿಂದ 'ಅರ್ಧೋದಯ ಮುಹೂರ್ತ' ದೊಳಗೆ ಸತ್ಪುತ್ರನ ಜನನವಾಗುವುದು.

ಪ್ರೀತಿಯಲಿ ಪುತ್ರನು ಕರಾಂಭೋ
ಜಾತಮುಕುಳಿತನಾಗಿ ಮೆಲ್ಲನೆ
ಮಾತೆಯುದರದೊಳುದಯಿಸಲು ಅರ್ಧೋದಯದೊಳಾಗ
ಆ ತನಯನೊಳಗಿಹ ಶಿವಂ ವಿ
ಖ್ಯಾತಗುರ್ವಾಕಾರಮಂ ತಾ
ಳ್ದಾತನಂಗದ ಮೇಲೆ ಲಿಂಗಾಸಂಗವಂ ಮಾಡಿ ... (೩: ೨೪)

ಇಲ್ಲಿ ಭೀಮಕವಿಯು ಸೋಮನಾಥನ ಅಭಿಪ್ರಾಯವನ್ನನುಸರಿಸಿ ಬಸವಣ್ಣನವರು 'ಅರ್ಧೋದಯ ಮುಹೂರ್ತ' ದಲ್ಲಿ ಜನಿಸಿದರೆಂದು ಹೇಳುತ್ತಾನೆ. ತತ್‌ಕ್ಷಣವೆ ಶಿವನು ಗುರುಸ್ವರೂಪವಾಗಿ ಅಲ್ಲಿಗೆ ಆಗಮಿಸಿ ಮಗುವಿನ ಅಂಗದ ಮೇಲೆ ಲಿಂಗಸಂಬಂಧವನ್ನುಂಟುಮಾಡುವನು.

ಹಿಂಗದನುದಿನವಿಹೆನು ಕಪ್ಪಡಿ
ಸಂಗಮೇಶ್ವರದಲ್ಲಿ ಕೂಡಲ
ಸಂಗಮೇಶನ ಪೆಸರು ನಾವೆಮಗಲ್ಲಿ ತಾನಿರವು
ತಂಗಿ ಕೇಳವನೆನ್ನ ಮಗನೊಂ
ದಂಗದಲಿ ಕೇಳ್ ವೇದಭವಮೀ
ತಂಗೆ ನಿನ್ನೊಳು ಜನಿಸಲಾಯಿತು ಲೋಕಹಿತಕಾಗಿ ... (೩: ೨೮)

ಇದುನಿಮಿತ್ತಂ ನೋಡಬಂದೆವು
ಮನದೊಳಾನುಪದೇಶಗುರುವೀ
ವಿದಿತ ಜನ್ಮದೊಳುತ್ತಮೋತ್ತಮ ನಂದನಂಗಿನ್ನು
ಇದಱ ಮೇಲೆ ಶಿವಾರ್ಪಿತವನ
ಲ್ಲದೆಯಿನಿತನರ್ಪಿತವ ಮಾಡದಿ
ರಿದುವೆಯಾಣೆ ಕಣಾ ನಿನಗೆನುತದೃಶ್ಯವಾಗಿಂತು ... (೩: ೨೯)

ತಂದೆ ತಾಯಿಯರು ನಾಮಕರಣೋತ್ಸವವನ್ನು ನೆರವೇರಿಸುವರು. ಮಗು ಬಾಲಲೀಲೆಯನ್ನಾಡುವನು; ಶೈಶವವಿನೋದದಲ್ಲಿ ಕಾಲ ಕಳೆಯುವನು; ಲಿಂಗಾರ್ಚನೆಯನ್ನಾಚರಿಸುವನು; ಮಹೇಶ್ವರರನ್ನು ಪರಶಿವನೆಂದೇ ಕಾಣುವನು.

ಬರೆಹ ವಾಚನ ಗಣಿತ ಶಬ್ದಾ
ರ್ಥ ರಸ ಭಾವೋಕ್ತಿ ಪ್ರವೀಣತೆ
ಭರತ ಛಂದೋ ವ್ಯಾಕರಣ ಸಂಗೀತ ಸಾಹಿತ್ಯ
ಹರರಹಸ್ಯಾಗಮ ಪುರಾಣೋ
ತ್ಕರ ಸಕಳ ವೇದಾದಿ ಕಲೆಗಳು
ಸ್ಮರಿಸಲೊಡನೆ ಮುಖೋದ್ಗತಂ ಬಸವಂಗದೇವೊಗಳ್ವೆ... (೩:. ೪೨)

ಬರೆಹ, ವಾಚನ, ಶಬ್ದಾರ್ಥ, ವ್ಯಾಕರಣ, ಛಂದಸ್ಸು, ಸಂಗೀತ, ಸಾಹಿತ್ಯ, ವೇದಾಗಮ, ಪುರಾಣಶಾಸ್ತ್ರಗಳು ಮಗುವಿನ ಅಧ್ಯಯನದಲ್ಲಿ ಮುಖೋದ್ಗತವಾಗುವುವು.

೫.ಉಪನಯನ :

ಬಸವಣ್ಣನವರ ಬದುಕಿನಲ್ಲಿ ಇದು ಅತ್ಯಂತ ಮಹತ್ವದ ಘಟ್ಟ. ಗರ್ಭಾಷ್ಟಕದಲ್ಲಿ ಮಗನಿಗೆ ಉಪನಯನವನ್ನು ಪೂರೈಸಲು ತಂದೆ ಸಿದ್ಧತೆಯನ್ನು ನಡೆಸಲು ಬಸವಣ್ಣನವರು ಶಿವದೀಕ್ಷೆಯಾದ ನನಗೆ ಮುಂಜಿಗಟ್ಟುವ ಯೋಜನೆ ಏಕೆ ಮಾಡುವಿರಿ? ನಾನು ಜನಿಸಿದೊಡನೆ ಸಂಗಮೇಶನು ಸದ್ಗುರುವಾಗಿ ಬಂದು ಉಪದೇಶವಿತ್ತು ಶೈವಾಚಾರ ಮಾರ್ಗದಲ್ಲಿ ನಿಲಿಸಿ ಸಲಹಿರುವನು ಎಂದು ಹೇಳುತ್ತಾರೆ.

ಜನಕ ಕೇಳ್ ಶಿವದೀಕ್ಷೆಯಿಲ್ಲದ
ವನವೊಲೆನ್ನ ಮುಂಜಿಗಟ್ಟುವ
ಮನವಿದೆಂತಾಯ್ತೀಗ ನಿನಗವಿವೇಕಿಯಂದದಲಿ
ಜನಿಸಿದಾಗಳೆ ಸಂಗಮೇಶ್ವರ
ನೆನಗೆ ಸದ್ಗುರುವಾಗಿ ಬೋಧಿಸಿ
ವಿನುತ ಶೈವಾಚಾರಮಾರ್ಗದೊಳಿರಿಸಿ ಸಲಹಿದನು... (೩:. ೪೪)

ಎಂದು ಹೇಳಿ ಉಪನಯನವನ್ನು ತಿರಸ್ಕರಿಸುತ್ತಾರೆ. ಮುಂದುವರೆದು ನೀರ ನೇಣಿನ ಬಾಧೆಯಿಲ್ಲದ ವೀರ ಶೈವಾಚಾರದೀಕ್ಷಾಧಾರಕನನ್ನು ಘೋರಕರ್ಮದಲ್ಲಿ ನಿಲಿಸುವುದೇಕೆ? ಎಂದು ಪ್ರಶ್ನಿಸುತ್ತಾರೆ.

ನೀರ ನೇಣಿನ ಬಾಧೆಯಿಲ್ಲದ
ವೀರಶೈವಾಚಾರದೀಕ್ಷಾ
ಧಾರಕನನತಿ ನಿರ್ಮಿತೋಭಯಕರ್ಮನಿರ್ಮಲನ
ಘೋರಕರ್ಮಾಶ್ರಯದ ಪಾರಾ
ವಾರದೊಳು ಮುಳುಗಿಸುವೆನೆಂಬ ವಿ
ಚಾರವಿಂತಿದು ನಿನಗೆ ಧರ್ಮವೆ ಬೊಪ್ಪನೀ ಕೇಳು ... (೩: ೪೯)

ಹೀಗೆ ಕರ್ಮಮಾರ್ಗದ ವಿರುದ್ಧ ಬಸವಣ್ಣನವರು ಸ್ಪಷ್ಟವಾಗಿ ತಮ್ಮ ಅಭಿಪ್ರಾಯ ತಿಳಿಸುತ್ತಾರೆ.

ತೋಱಿಪಟ್ಟ ಬ್ರಾಹ್ಮ್ಯವೆಂಬುದು
ಬೇರೆ ದರ್ಶನ ವೀಶಭಕ್ತಿಯ
ಬೇಱೆಯಿಂತಿದನೆರಡುವಂ ನೀ ಕೂಡಿ ನುಡಿಯದಿರು
ಬೇಱೆ ದೈವವು ಬೇಱೆ ಮಂತ್ರವು
ಬೇಱೆ ಗುರುವುಂ ಬೇಱೆವೇಷವು
ಬೇಱೆ ಬೇಱೆಧ್ಯಾನಬಾಹ್ಯಕ್ರಿಯೆಗಳಾಚಾರ .... (೩: ೬೨)

ಬ್ರಾಹ್ಮಣ ಹಾಗೂ ವೀರಶೈವ ಧರ್ಮಗಳು ಸಂಪೂರ್ಣ ಭಿನ್ನ ಎಂಬುದನ್ನು ತಾರ್ಕಿಕವಾಗಿ ತನ್ನ ತಂದೆಗೆ ಮನದಟ್ಟು ಮಾಡಿಕೊಡುತ್ತಾರೆ.

ಉಪನಯನ ದೀಕ್ಷೆಗೆ ಒಳಗಾಗಬೇಕೆಂಬ ತಂದೆಯ ಒತ್ತಾಯಕ್ಕೆ ಬಸವಣ್ಣನವರು ನಾನು ಶಿವಲಿಂಗೈಕ್ಯ ಭಕ್ತನಾದ ಕಾರಣ ಅದನ್ನು ಬಿಟ್ಟು ಬೆಲೆವೆಣ್ಣಿನಂತಹ ಬ್ರಾಹ್ಮಣ ಧರ್ಮಕ್ಕೆ ಒಳಗಾಗುವುದಿಲ್ಲ ಎನ್ನುತ್ತಾರೆ.

ಇಳೆಗೆ ಮಾವಿನ ಬೀಜಮಂ ಬಿ
ತ್ತಲದು ತಾಂ ಬೇವಹುದೆ ಬಹುಕಥೆ
ಗಳನುಸುರಲೇಂ ಸಹಜ ಶಿವಲಿಂಗೈಕಭಕ್ತಿಯುಮಂ
ಹಲವು ದೇವಾಭ್ಯರ್ಚನಾಭ್ಯಾ
ಕುಲಮಹೀಸುರಪಥವನೆಣೆಸಲು
ಕುಲಸತಿಯವೊಲು ಭಕ್ತಿ ಬೆಲೆವೆಣ್ಣಿನವೊಲಾ ಬ್ರಾಹ್ಮ್ಯ ... (೩: ೭೫)

ಬಸವಣ್ಣನವರು ಬ್ರಾಹ್ಮಣಧರ್ಮವನ್ನು 'ಬೆಲೆವೆಣ್ಣು ' ಎಂದು ಸಂಬೋಧಿಸುವುದರ ತೀವ್ರತೆಯನ್ನು ಗಮನಿಸಬೇಕು. ಬಹುಶಃ ಕವಿಯು ಬಸವಣ್ಣನವರ ವಚನಗಳನ್ನು ಸಂಪೂರ್ಣ ಅಧ್ಯಯನ ಮಾಡಿ ಅವನ ಮನೋಭೂಮಿಕೆಯನ್ನರ್ಥಮಾಡಿಕೊಂಡಿದ್ದಾನೆಂದು ಸ್ಪಷ್ಟವಾಗುತ್ತದೆ. ಬಸವಣ್ಣನವರು ಹುಟ್ಟಿನಿಂದ ಬ್ರಾಹ್ಮಣ. ಆದರೆ ತಾನು ಡೋಹರ ಕಕ್ಕಯ್ಯ, ಮಾದಾರ ಚೆನ್ನಯ್ಯನ ದಾಸದಾಸಿಯರ ಅಕ್ರಮ ಸಂಬಂಧದಿಂದ ಜನಿಸಿದವನೆಂದು ತೀರ ಸಮಾಜದ ಕೆಳಸ್ತರದ ಜೊತೆ ತಮ್ಮನ್ನು ತಾವು ಸಮೀಕರಿಸಿಕೊಂಡರು.

ಚೆನ್ನಯ್ಯನ ಮನೆಯ ದಾಸನ ಮಗನು,
ಕಕ್ಕಯ್ಯನ ಮನೆಯ ದಾಸಿಯ ಮಗಳು
ಇವರಿಬ್ಬರು ಹೊಲದಲು ಬೆರಣಿಗೆ ಹೋಗಿ ಸಂಗವ ಮಾಡಿದರು
ಇವರಿಬ್ಬರಿಗೆ ಹುಟ್ಟಿದ ಮಗ ನಾನು
ಕೂಡಲಸಂಗಮದೇವ ಸಾಕ್ಷಿಯಾಗಿ (ಸ.ವ.ಸಂ.ವ.೩೪೬)

ಅಪ್ಪನು ನಮ್ಮ ಮಾದಾರ ಚೆನ್ನಯ್ಯ,
ಬೊಪ್ಪನು ನಮ್ಮ ಡೋಹರ ಕಕ್ಕಯ್ಯ,
ಚಿಕ್ಕಯನೆಮ್ಮಯ್ಯ ಕಾಣಯ್ಯ,
ಅಣ್ಣನು ನಮ್ಮ ಕಿನ್ನರ ಬೊಮ್ಮಯ್ಯ
ಎನ್ನನೇತಕ್ಕರಿಯಿರಿ ಕೂಡಲಸಂಗಯ್ಯ? (ಅದೇ ವ. ೫೯೨)

ಹೀಗೆ ಬಸವಣ್ಣನವರು ತಮ್ಮನ್ನು ಅಬ್ರಾಹ್ಮಣೀಕರಿಸಿಕೊಳ್ಳಲು ಯತ್ನಿಸಿದರು. ಇಂತಹದೊಂದು ಉದಾಹರಣೆ ಆಧುನಿಕ ಕಾಲವೂ ಸೇರಿದಂತೆ ಭಾರತದ ಚರಿತ್ರೆಯಲ್ಲಿಯೇ ದೊರೆಯುವುದು

ತೀರ ಅಸಂಭವ. 'ಆಲಿವರ್. ಸಿ. ಕಾಕ್ಸ್' ಎಂಬ ಅಮೇರಿಕದ ಸಮಾಜಶಾಸ್ತ್ರಜ್ಞ ಗುರುತಿಸಿರುವಂತೆ, "ಅಮೇರಿಕದ ಕಪ್ಪು ಜನಾಂಗದ ನೀಗ್ರೋಗಳನ್ನು ಬಿಳಿಯರ ಶೋಷಣೆಯಿಂದ ಪಾರುಮಾಡಲು ಅಬ್ರಾಹಾಂ ಲಿಂಕನ್ನನಂತಹ ಬಿಳಿಯನೇ ಬರುವುದು ಐತಿಹಾಸಿಕ ಅನಿವಾರ್ಯ. ಅದೇ ರೀತಿ ರಾಜರ ಕ್ರೌರ್ಯದಿಂದ ಬ್ರಾಹ್ಮಣ ವರ್ಗದ ತುಳಿತದಿಂದ ಕೆಳವರ್ಗದ ಜನರನ್ನು ಮುಕ್ತರನ್ನಾಗಿ ಮಾಡುವಂತಹ ಆಂದೋಲನದ ನಾಯಕನೊಬ್ಬ ಬಸವನಂತೆ ಬ್ರಾಹ್ಮಣ ಸಮಾಜದಿಂದಲೇ ಮೂಡಿ ಬಂದಿರುವುದು ಸ್ವಾಭಾವಿಕವಾಗಿರುವಂತೆ ಬಹುಶಃ ಅನಿವಾರ್ಯವೂ ಹೌದು. ತನ್ನ ಬದುಕಿನುದ್ದಕ್ಕೂ ಬಡವರ ಜೊತೆ, ಅಬ್ರಾಹ್ಮಣರ ಜೊತೆ ತನ್ನನ್ನು ತಾನು ಸಮೀಕರಿಸಿಕೊಳ್ಳಲು ಯತ್ನಿಸಿದ ಬಸವಣ್ಣನವರು ಅಂದಿನ ಆಂದೋಲನದ ನಾಯಕನಾಗಲು ಎಷ್ಟು ಕಾರಣವೋ ಅಷ್ಟೇ ಅವನ (ಭಾಂಡಾರಿ)ಸ್ಥಾನವೂ ಅವನ (ಬ್ರಾಹ್ಮಣ) ಜಾತಿಯೂ ಕಾರಣವೆಂಬದು ಸತ್ಯಕ್ಕೆ ದೂರವಲ್ಲದ ಸಂಗತಿ" (ಚಿಮೂ ೨೦೦೮: ಪು.೩) ಎಂದಿದ್ದಾರೆ.

ಬಸವಣ್ಣನವರು ದ್ವಿಜಮಾರ್ಗ ಎಂತಹ ಶುಷ್ಕತೆಯಿಂದ ಕೂಡಿದ್ದು, ನಿಸ್ಸಾರತೆಯಿಂದ ಕೂಡಿದ್ದು ಎಂಬುದಕ್ಕೆ

ಆಗಲುಂ ದ್ವಿಜಮಾರ್ಗವನೆ ದಿಟ
ವಾಗಿ ನೀ ಹಿಡಿದಾಡಿದಡೆಯೆಮ
ಗಾಗದೀ ಕರ್ಮಮಾರ್ಗ ಕ್ರಿಯಾಚಾರಪ್ರವರ್ತನವು
ಕಾಗೆ ಸಾಗಿಪ ಕೋಗಿಲೆಯ ಮರಿ
ಕೂಗುವುದೆ ಸುಸ್ವರದೊಳಲ್ಲದೆ
ಕಾಗೆಯಂದದಿ ಕಾವು ಕಾವೆಂದಱಚುವುದೆ ಹೇಳಾ ... (೩: ೭೯)
ಗುರುಪದಾರ್ಚನೆಗೊಲಿದು ಹಾರುವ
ಪರಮ ಶೈವೋನ್ನತಿಗೆ ಹಾರುವ
ಶರಣಸ್ವಾನುಭವಕ್ಕೆ ಹಾರುವ ತತ್ಪ್ರಸಾದಕ್ಕೆ
ಹರಿದು ಹಾರುವ ವೀರಭಕ್ತಿಗೆ
ಹಿರಿದು ಹಾರುವ ನಾನದೆಂದುಂ
ಬೆರಸಿ ಹಾರುವ ಕುಲಕೆ ಹಾರುವನಲ್ಲ ನುಡಿಯದಿರು ... (೩: ೮೦)

ಮೇಲಿನ 'ಹಾರುವ' ಎಂಬ ಪುನರಾವರ್ತನೆಯ ಪದಗುಚ್ಛಕ್ಕೆ ಬಸವಣ್ಣನವರ ಕೆಳಗಿನ ವಚನಗಳು ಪ್ರೇರಣೆಯಾಗಿರಬಹುದೇನೋ!

ಸೆಟ್ಟಿಯೆಂಬೆನೆ ಸಿರಿಯಾಳನ ?
ಮಡಿವಾಳನೆಂಬೆನೆ ಮಾಚಯ್ಯನ?
ಡೋಹರನೆಂಬೆನೆ ಕಕ್ಕಯ್ಯನ?
ಮಾದಾರನೆಂಬೆನೆ ಚೆನ್ನಯ್ಯನ?
ಆನು ಹಾರುವನೆಂದರೆ ಕೂಡಲಸಂಗಯ್ಯ ನಗುವನಯ್ಯ (ಸ.ವ.ಸಂ.೧: ವ.೩೪೫)

ಹಾರುವನ ಭಕ್ತಿ ಓಡಿನೊಳಗೆ ಅಗೆಯ ಹೊಯ್ದಂತೆ
ಕೆಳಯಿಂಕೆ ಬೇರೂರದು, ಮೇಲೆ ಫಲವಾಗದು
ಪ್ರಾಣಲಿಂಗದ ಪ್ರಸಾದವ ಮುಂದಿಟ್ಟುಕೊಂಡು
'ಪ್ರಾಣಾಯ ಸ್ವಾಹಾ, ಅಪನಾಯ ಸ್ವಾಹಾ, ವ್ಯಾನಾಯ ಸ್ವಾಹಾ,
ಉದಾನಾಯ ಸ್ವಾಹಾ, ಸಮಾನಾಯ ಸ್ವಾಹಾ' ಎಂಬ
ಕರ್ಮಿಗಳನೇನೆಂಬೆ ಕೂಡಲಸಂಗಮದೇವಾ. (ಅದೇ ವ.೫೯೨)

ಮಾದರಸ ಪರಿಪರಿಯಿಂದ ತಿಳಿಹೇಳಿದರೂ ಸಹ ಬಸವೇಶ್ವರರು ಉಪನಯನಕ್ಕೆ ಒಪ್ಪುವುದಿಲ್ಲ. ಇಷ್ಟಲಿಂಗ ಪೂಜೆಗೆ ಸಮಾನವಾದುದು ಬೇರೊಂದಿಲ್ಲ ಎಂದು ಮುಂತಾಗಿ ತಂದೆಯೊಡನೆ ವಾದಿಸಿ, ವಾದ ವಿರಸಕ್ಕೇರಲು, ಬಸವಣ್ಣನವರು ಎಲ್ಲವನ್ನು ತೊರೆದು ನಿಜಸಹೋದರಿ ನಾಗಲಾಂಬೆಯೊಡನೆ ಮನೆಬಿಟ್ಟು ಮಹಮನೆಯ ಕಡೆಗೆ ನಡೆದರು.

ಸಾರ ಭಕ್ತಿ ಸ್ಥಿತಿಯೊಲುಮೆಯೊಳ
ನಾರತಂ ಸುಖವೊಂದುತಿರ್ಪೆನು
ವೀರಮಾಹೇಶ್ವರರೆ ಗತಿಯೆನಗಿದುವೆ ನಿಶ್ಚಯವು
ಸೇರಿದಿಂತಹದೆಮಗೆ ನಿಮ್ಮಾ
ಚಾರದಲಿ ನೀವಿಪ್ಪಿರೆಮ್ಮಾ
ಚಾರದಲಿ ನಾವಿಪ್ಪೆವಿನ್ನಾವಾರು ನೀವಾರು.! (೩: ೮೩)

ಎನುತಂ ಬಸವಂ ನಿಜಸಹೋದರಿ
ಯೆನಿಪ ನಾಗಾಂಬಿಕೆಯುಂ ತಾನುಂ
ತನಗೆಯಲ್ಲಿರಲಾಗದೆನುತೆಯ್ತಂದು ಮಹಮನೆಯ
ಮನೆಗೆ ಬರುತಿರೆ... (೩: ೮೪)

ಬಸವಣ್ಣನವರ ಈ ಮಾತುಗಳ ಹಿಂದೆ ಅವರ ಮನಸ್ಸಿನೆಲ್ಲೆದ್ದ ಬಿರುಗಾಳಿ ಎಂತಹದೆಂಬುದು ಅರಿವಾಗದಿರದು. ಕೊನೆಗೂ ಅವರು ಉಪನಯನ ಧಿಕ್ಕರಿಸಿ ಅಕ್ಕನಾಗಾಯಿಯೊಡನೆ ಹೊರಡುತ್ತಾರೆ.

'ಲಕ್ಕಣ್ಣ ದಂಡೇಶ'ನ ಅಭಿಪ್ರಾಯವೂ ಇದೇ ಆಗಿದೆ. ನಿನ್ನಿಂದ ನಮ್ಮ ವಂಶಾಭಿವೃದ್ಧಿಯಾಗಬೇಕಾದರೆ ನೀನು ಉಪನಯನ ಸಂಸ್ಕಾರಕ್ಕೊಳಗಾಗಬೇಕೆಂದು ಮಾದರಸನು ಬಲಾತ್ಕಾರ ಮಾಡುತ್ತಾನೆ. ಆಗ ಬಸವಣ್ಣನವರು ಅದನ್ನು ಜರೆಯುತ್ತಾನೆ. ಆತನ ಮನದಿಂಗಿತವನ್ನರಿತ ತಂದೆತಾಯಿಗಳು ಉಪನಯನದ ಗೋಜಿಗೆ ಹೋಗದೆ ಸುಮ್ಮನಿರುವರು. (೩೦: ೪೯)

'ಚಾಮರಸ'ನು ಮಾತ್ರ ಬಸವಣ್ಣನವರಿಗೆ ಉಪನಯನವಾಯಿತೆಂದು ಸ್ಪಷ್ಟವಾಗಿ ಹೇಳುತ್ತಾನೆ. (೯: ೧೮) ಸಿಂಗಿರಾಜನ ಪ್ರಕಾರ ಗರ್ಭಾಷ್ಟಕಕ್ಕೆ ಸರಿಯಾಗಿ ಉಪನಯನದ ಸಿದ್ಧತೆಯನ್ನು ಮಾದರಸ ಮಾಡಿಕೊಳ್ಳುತ್ತಾನೆ. ಇದೊಂದು ಬಾಲದೊಡಿಗೆಯನ್ನು ತೊಡಿಸುವಂತಹ ಲೀಲೆಯೆಂದು ತಿಳಿದ ಬಸವಣ್ಣನವರು ಇದು ಬೇರೆ ತೆರನಾಗಿದೆ; ಇವರಿಗೆ ನಮಸ್ಕರಿಸೆನು; 'ಈ ಮುಂಜಿಗಿಂಜಿಗಳೆನಗೆ ಗೀಳು' ಎಂದು ಅದನ್ನು ಹರಿಯತೊಡಗುವನು. (೫: ೮೩) ತಂದೆತಾಯಿಗಳು ಕರ್ಮ ಮಾರ್ಗದ ಮಹತ್ವವನ್ನು ನಾನಾ ಬಗೆಯಾಗಿ ವಿವರಿಸಿದರೂ ಅದಕ್ಕೆ ಸರಿಯಾದ ಉತ್ತರವನ್ನೀಯುವನು. ಬಸವಣ್ಣನವರು ಕೊಡುವ ಕಾರಣಗಳು ಒಪ್ಪಿಗೆಯಾಗುವವು. ಆಗ ತಂದೆ–ತಾಯಿಗಳು 'ನೀನು ಕಾರಣಪುರುಷನು, ಸ್ವತಂತ್ರನು, ನಿನಗೆ ಉಪತಂತ್ರವಿಲ್ಲ; ಆದರೆ ಈಗ ಕಟ್ಟಿದ ಯಜ್ಞೋಪವೀತವನ್ನು ನೀನಾಗಿಯೇ ಈಗಲೇ ಹರಿಯಬೇಡ; ತಾನಾಗಿಯೇ ಹಣ್ಣಾಗಿ ಕತ್ತರಿಸಿದಂದು ಹೋಗಲಿ' ಎಂದರು. ಅದಕ್ಕೆ ಬಸವಣ್ಣನವರು ಒಡಂಬಟ್ಟರು. (೫: ೯೦) ಉಪನಯನವಾಯಿತು ಎಂಬ ಸೂಚನೆಯೇ ಇಲ್ಲಿ ದೊರೆಯುತ್ತದೆ.

'ಷಡಕ್ಷರದೇವ'ನ ಪ್ರಕಾರ ಬಸವಣ್ಣನವರಿಗೆ ಗರ್ಭಾಷ್ಟಕ ಪ್ರಾಪ್ತವಾಗಿದೆ. ತಂದೆಯ ಸಕಲಸಿದ್ಧತೆಗಳನ್ನು ಪ್ರಶ್ನಿಸಿದಾಗ 'ಉಪನಯನ'ವೆಂದು ಉತ್ತರ ಬಂದಿತು. ಬಸವಣ್ಣನವರು ಉದ್ವಿಗ್ನಗೊಂಡು ಶಿವದೀಕ್ಷೆಯಾದ ತಾನು ಅನ್ಯದೀಕ್ಷೆಯನೊಲ್ಲೆನೆಂದು ಖಚಿತಪಡಿಸುವರು. ವಾದ-ವಿವಾದಗಳು ನಡೆದು ಬಸವಣ್ಣನವರು ಕರ್ಮಮಾರ್ಗವನ್ನು ಖಂಡಿಸಿ ಭಕ್ತಿಮಾರ್ಗದ ಮಹಿಮೆಯನ್ನು ಎತ್ತಿ ತೋರಿಸುವರು. (೩:೯೨) ಕೃತಾರ್ಥರಾದ ತಂದೆತಾಯಿಗಳನ್ನು ಸಂತಮಿರಿಸಿ ನಿಜಸಹೋದರಿಯಪ್ಪ ದಿವ್ಯಜ್ಞಾನಿ ನಾಗಲಾಂಬೆಯೊಡಗೊಂಡು ಬಸವಣ್ಣನವರು ಮನೆಬಿಟ್ಟು ಬಾಗೇವಾಡಿಯಿಂದ ಕಪ್ಪಡಿಗೆ ಹೊರಟರು.

ಈ ವಿಷಯದಲ್ಲಿ 'ಹರಿಹರಕವಿ'ಯ ಅಭಿಪ್ರಾಯ ತೀರಾ ಭಿನ್ನವಾಗಿದೆ. ಉಪನಯನದ ಸನ್ನಿವೇಶವರ್ಣನೆ 'ಬಸವರಾಜದೇವರ ರಗಳೆ'ಯಲ್ಲಿ ಬರುವುದೇ ಇಲ್ಲ. ೧೬ನೆಯ ವಯಸ್ಸಿನಲ್ಲಿ ಬಸವಣ್ಣನವರು 'ಕರ್ಮಲತೆಯಂತಿರ್ದ ಜನ್ನಿವಾರಮಂ ಕಳೆದು ಬಿಸುಟು ಹೋತಿನ ಗಂಟಲಂ ಬಿಗಿವಂತಿರ್ದ ಮೌಂಜಿಯಂ ಪರಿದು ಬಿಸುಟು ಬಾಗೆವಾಡಿಯಂ ಪೊರಮಟ್ಟು' (ಬ.ದೇ.ರ. ಸ್ಥಲ೧) ಹೋದರೆಂದು ಹೇಳಲಾಗಿದೆ. ಇದರಿಂದ ಬಸವಣ್ಣನವರಿಗೆ ಮೌಂಜಿಬಂಧನವಾಗಿತ್ತೆಂತಲೂ, ಮುಂದೆ ಬಸವಣ್ಣನವರಿಗೆ ಜ್ಞಾನೋದಯವಾಗಲು ಅವರು ಯಜ್ಞೋಪವೀತವನ್ನು ತೊರೆದು ಕಪ್ಪಡಿ ಸಂಗಮ ಕ್ಷೇತ್ರಕ್ಕೆ ಬಂದರೆಂತಲೂ, ಆಗ ಅವರ ವಯಸ್ಸು ಹದಿನಾರು ವರ್ಷ ಆಗಿತ್ತೆಂತಲೂ ಹರಿಹರ ಹೇಳುತ್ತಾನೆ.

ಮೇಲಿನ ಎಲ್ಲ ಕವಿಗಳ ಅಭಿಪ್ರಾಯಗಳನ್ನು ನೋಡಿದಾಗ ಮೌಂಜಿಯ ವಿಷಯದಲ್ಲಿ ಐಕ್ಯಮತ್ಯ ಕಂಡುಬರದ ಹಿನ್ನೆಲೆಯಲ್ಲಿ ಬಸವಣ್ಣನವರ ವಚನಗಳನ್ನು ಲಕ್ಷಿಸಿದಾಗ ಮೌಂಜಿಬಂಧನ ಆಗಿತ್ತೆಂದು ತಿಳಿದು ಬರುತ್ತದೆ ಸ್ವತಃ ಅವರ ವಚನಗಳಲ್ಲಿಯೇ ತಮಗೆ ಮೌಂಜಿಬಂಧನಕ್ಕೊಳಗಾಗಿರುವ ಸೂಚನೆಗಳು ದೊರೆಯುವುದನ್ನು ಫ.ಗು.ಹಳಕಟ್ಟಿಯವರು ಗುರುತಿಸಿದ್ದಾರೆ. (ಹಳಕಟ್ಟಿ ಸಮಗ್ರ ಸಾಹಿತ್ಯ ಸಂಪುಟ-೧೧, ಪು.೧೮ ರಿಂದ ೧೯)

ವಚನಗಳು ಶರಣರ ಮನಸ್ಸಿನ ಕನ್ನಡಿಯಿದ್ದಂತೆ. ಅವರ ವ್ಯಕ್ತಿತ್ವ ನಡೆನುಡಿಗಳು ಅವುಗಳಲ್ಲಿ ಸ್ಪಷ್ಟವಾಗಿ ಪ್ರತಿಬಿಂಬಿತವಾಗಿವೆ.

ಹೊನ್ನು ಹೆಣ್ಣು ಮಣ್ಣೆಂಬ ಕರ್ಮದ ಬಲೆಯಲ್ಲಿ ಸಿಲುಕಿ,
ವೃಥಾಯ ಬರುದೊರೆ ಹೋಹ ಕೆಡುಕ ಹಾರುವ ನಾನಲ್ಲ
ಹಾರುವೆನಯ್ಯ ಭಕ್ತರ ಬರವ ಗುಡಿಕಟ್ಟಿ,
ಹಾರುವೆನಯ್ಯ ಶರಣರ ಬರವ ಗುಡಿಕಟ್ಟಿ,
ಕೂಡಲಸಂಗಮದೇವನು ವಿಪ್ರಕರ್ಮವ ಬಿಡಿಸಿ,
ಅಶುದ್ಧನ ಶುದ್ಧನ ಮಾಡಿದನಾಗಿ (ಸ.ವ.ಸಂ.೧ ವ.೭೧೬)

ಹಾಗೂ

ಒಡೆಯರು ಬಂದಡೆ ಗುಡಿ ತೋರಣವ ಕಟ್ಟಿ,
ನಂಟರು ಬಂದರೆ ಸಮಯವಿಲ್ಲೆನ್ನಿ
ಅಂದೇಕೆ ಬಾರರು?

ನೀರಿಂಗೆ ನೇಣಿಂಗೆ ಹೊರಗಾದಂದು, ಸಮಯಾಚಾರಕ್ಕೆ ಒಳಗಾದಂದು.
ಪರುಷ ಮುಟ್ಟಲು ಕಬ್ಬುನ ಸುವರ್ಣವಾಯಿತ್ತು
ಬಳಿಕ ಬಂಧುಗಳುಂಟೆ, ಕೂಡಲಸಂಗಮದೇವಾ? (ಅದೇ ವ.೪೪೯)

ಮೇಲಿನ ಎರಡು ವಚನಗಳಲ್ಲಿ ಬಸವಣ್ಣನವರು ಉಪನಯನ ಬಂಧನಕ್ಕೆ ಒಳಗಾಗಿದ್ದರು ಎಂಬ ಸ್ಪಷ್ಟ ಭಾವ ಮೂಡಿ ಬರುತ್ತದೆ. ಮೊದಲ ವಚನದಲ್ಲಿ ಬರುವ 'ವಿಪ್ರಕರ್ಮದ ಬಿಡಿಸಿ' ಹಾಗೂ 'ಅಶುದ್ಧನ ಶುದ್ಧನ ಮಾಡಿದನಾಗಿ' ಎಂಬ ಪದಗಳನ್ನು ಗಮನಿಸಬೇಕು 'ವಿಪ್ರಕರ್ಮವ ಬಿಡಿಸಿ' ಎಂಬಲ್ಲಿ ಈಗಾಗಲೇ ಅವರಿಗೆ ಯಜ್ಞೋಪವೀತವಾಗಿದ್ದನ್ನು ಸೂಚಿಸುತ್ತದೆ. ಮುಂದೆ 'ಅಶುದ್ಧನ ಶುದ್ಧನ ಮಾಡಿದನಾಗಿ' ಅಂದರೆ ವಿಪ್ರಕರ್ಮಕ್ಕೆ ಒಳಗಾದ್ದರಿಂದಲೇ ನಾನು ಅಶುದ್ಧನಾಗಿದ್ದು ಲಿಂಗಧಾರಣೆ ಹೊಂದಿದ ನಂತರ ನಾನು ಶುದ್ಧನಾದೆ ಎಂಬುದನ್ನು ಅತ್ಯಂತ ಸರಳವಾಗಿ ಅರ್ಥವಾಗುವಂತೆ ಹೇಳಿದ್ದಾರೆ.

ಹಾಗೆಯೇ ಎರಡನೆಯ ವಚನದಲ್ಲಿ ಬಸವಣ್ಣನವರು ತಮ್ಮ ಬಂಧುಗಳ ಬಗ್ಗೆ ಅತ್ಯಂತ ಕೋಪ ವ್ಯಕ್ತಪಡಿಸಿದ್ದು ಕಂಡು ಬರುತ್ತದೆ. 'ನೀರಿಂಗೆ ನೇಣಿಂಗೆ ಹೊರಗಾದಂದು' ಹಾಗೂ 'ಸಮಯಾಚಾರಕ್ಕೆ ಒಳಗಾದಂದು' ಎಂದು ಎರಡು ಪದಗಳನ್ನು ಗಮನಿಸಿದರೆ ಬಸವಣ್ಣನವರು ಮೌಂಜಿಯನ್ನು ತ್ಯಜಿಸುವ ಸಂದರ್ಭದಲ್ಲಿ ಬಂಧುಗಳು ದೂರ ಮಾಡಿರಬೇಕು. ಆಗ ಅವರ ಮನಸ್ಸು ತೀವ್ರವಾಗಿ ನೊಂದಿರಲಿಕ್ಕೆ ಬೇಕು. ಹಾಗಾಗಿ ಕೆಲವು ಕಾಲದ ನಂತರ ಅವರ ಬಂಧುಗಳು ಯೋಗಕ್ಷೇಮ ವಿಚಾರಿಸಲು ಹೋಗಿರಬೇಕು. ಹಾಗಾಗಿ ಅಂದು ಬಾರದ ಬಂಧುಗಳು ಈಗೇಕೆ? ಎಂದು ಪ್ರಶ್ನಿಸುತ್ತಾನೆ. 'ಸಮಯಾಚಾರಕ್ಕೆ ಒಳಗಾದಂದು' ಈ ನುಡಿ ವೀರಶೈವ ಧರ್ಮಕ್ಕೆ ಒಳಗಾದ ಎಂಬುದಕ್ಕೆ ಸ್ಪಷ್ಟನೆ ನೀಡುತ್ತದೆ. ಇದಕ್ಕೆ ಒಳಗಾದರೆ ವಿಪ್ರಕರ್ಮದಿಂದ ಹೊರಗಾಗಿರಲೇಬೇಕು ಎಂಬ ಭಾವ ಸ್ಪಷ್ಟವಾಗಿ ಹೊರಹೊಮ್ಮುತ್ತದೆ. ಇವೆರೆಡು ವಚನಗಳ ಆಂತರ್ಯವೆ ಬಸವಣ್ಣನವರು ಹುಟ್ಟಿದಾಗ ಮೌಂಜಿಬಂಧನಕ್ಕೊಳಗಾಗಿದ್ದು ಮುಂದೆ ೧೬ನೇ ವಯಸ್ಸಿನಲ್ಲಿ ಹೆಚ್ಚಿನ ತಿಳುವಳಿಕೆ ಉಂಟಾಗಿ ಅದನ್ನು ತ್ಯಜಿಸಿ ಲಿಂಗಧಾರಣೆ ಹೊಂದಿದರೆಂದು ಸ್ಪಷ್ಟ ಪಡಿಸುತ್ತವೆ. ಹದಿನಾರನೇ ವಯಸ್ಸಿನ ಹೊತ್ತಿಗೆ ಅನೇಕ ಧರ್ಮಗ್ರಂಥಗಳನ್ನು ಓದಿ ಅವುಗಳಲ್ಲಿರುವ ವಿಚಾರಗಳನ್ನು ಗ್ರಹಿಸಿ ವಿಮರ್ಶಿಸುವ ಶಕ್ತಿ ಪಡೆದುಕೊಳ್ಳಲು ಸಾಧ್ಯವಿದೆ. ಇದು ಅವರ ವಚನಗಳನ್ನೋದಿದಾಗ ಸ್ಪಷ್ಟವೂ ಆಗುತ್ತದೆ. ಈ ಎಲ್ಲ ಕಾರಣಗಳಿಂದ ಬಸವಣ್ಣನವರಿಗೆ ಹುಟ್ಟಿದ ತಕ್ಷಣ ವಿಪ್ರಕರ್ಮಗಳು ಜರುಗಿದ್ದವೆಂದು ಹೇಳಲು ಯಾವ ಪ್ರತ್ಯಯವಾಯವೂ ಇಲ್ಲ. ಅಲ್ಲದೇ ಅವರು ವಚನಗಳಲ್ಲಿ ಉದಾಹರಿಸಿರುವ ಸಂಸ್ಕೃತ ಶ್ಲೋಕಗಳು, ವೇದಪ್ರಾಮಣ್ಯಗಳನ್ನು ನೋಡಿದಾಗ ಮೌಂಜಿಬಂಧನಕ್ಕೆ ಒಳಗಾದ್ದರಿಂದಲೇ ಅವನ್ನೆಲ್ಲ ಅಭ್ಯಾಸ ಮಾಡಿರಬೇಕು. ವಿಪ್ರಕರ್ಮಕ್ಕೆ ಒಳಗಾಗದೇ ಇವುಗಳನ್ನು ಅಭ್ಯಾಸ ಮಾಡುವ ಹಕ್ಕು ಪ್ರಾಪ್ತವಾಗುವುದು ವಿಪ್ರರಲ್ಲಿ ಕಂಡು ಬರುವುದಿಲ್ಲ.ಅನೇಕ ವೀರಶೈವ ಕವಿಗಳು ಬಸವಣ್ಣನವರು ಹುಟ್ಟಿದ ತಕ್ಷಣವೇ ಲಿಂಗಧಾರಣೆಯಾಯಿತೆಂದು ಹೇಳಿರುವುದರಲ್ಲಿ ಸತ್ಯಾಂಶ ಕಡಿಮೆಯೆಂದು ಹೇಳಬಹುದು. ಆದ್ದರಿಂದ ಹರಿಹರನ ಬಸವಣ್ಣನವರಿಗೆ ಉಪನಯನವಾಗಿತ್ತೆಂಬುದು ದೃಢಪಡುತ್ತದೆ.

ಮಾತಾಪಿತೃಗಳ, ಬಂಧುಬಳಗದವರ ಒತ್ತಾಯಕ್ಕೆ ಒಳಗಾಗಿ, ಇಲ್ಲವೇ ಅವರ ಮನಸ್ಸು ನೋಯಿಸಲಾರದೆ ಬಸವಣ್ಣನವರು ಉಪನಯನವನ್ನು ಒಪ್ಪಿದರೆಂದೂ, ಮುಂದೆ ಹದಿನಾರನೆಯ ವರ್ಷದಲ್ಲಿ ಕಾಲಿಟ್ಟಾಗ ತಿಳುವಳಿಕೆಯಿಂದಲೇ ಅದನ್ನು ಪರಿತ್ಯಜಿಸಿದರೆಂದೂ ಒಪ್ಪಬಹುದಾಗಿದೆ.

೬. ವಿವಾಹ :

ಬಸವಣ್ಣನವರ ಉಪನಯನಕ್ಕೆ ಬಂದಿದ್ದ ಮಾದಲಾಂಬೆಯ ಸಹೋದರನೂ, ಶಿವಭಕ್ತನೂ, ಅರಸು ಬಿಜ್ಜಳನ ಭಂಡಾರಿಯೂ ಆದ ಬಲದೇವನು ತನ್ನ ಮಗಳಾದ ಗಂಗಾಂಬೆಯನ್ನು ಬಸವಣ್ಣನವರಿಗೆ ಕೊಡಬೇಕೆಂದು ನಿಶ್ಚಯಿಸಿ ವಿವಾಹಸಮಾರಂಭವನ್ನೇರ್ಪಡಿಸುವನು. ಇವರಿಬ್ಬರ ವಿವಾಹ ಇಂಗುಳೇಶ್ವರ ಬಾಗೇವಾಡಿಯಲ್ಲಿ ನೆರವೇರುವುದು.

ಪೊಡವಡಿಸಿ ಶುಭಚಿಹ್ನ ಮಿಕ್ಕೊಡ
ನೊಡನಿದಿರ್ಗೊಳೆ ಪರಸಿ ಸೇಸೆಯ
ನಿಡಲಖಿಳ ಭಕ್ತಾಂಗನೆಯರೀಶ್ವರ ಬಲ ಮುಹೂರ್ತ
ಕಡುಮಿಗಿಲು ವೇದೋಕ್ತ ಶಿವಪಥ
ವಡರಿದುತ್ತಮ ಧರ್ಮವಿಧಿಯಳ
ವಡಲು ಮಗಳ ಮದುವೆಯಂ ಮಾಡಿದನು ಬಸವಂಗೆ ... (೪: ೪೩)

ಅಲ್ಲದೆ ಬಸವಗಂಗಾಂಬೆಯರ ವಿವಾಹವನ್ನು ಕವಿಯು ಸುದೀರ್ಘವಾಗಿ ವಿವರಿಸಿದ್ದಾನೆ. ಆಗ ಬಸವಣ್ಣನವರಿಗೆ ಎಂಟು ವರ್ಷ. ಗಂಗಾದೇವಿಗೆ? ಬಹುಶಃ ಈ ಮದುವೆ ಆಗಂತೂ ನಡೆದಿರಲಾರದು. ಬಸವಣ್ಣನವರಿಗೆ ಇನ್ನೊಬ್ಬ ಹೆಂಡತಿಯಿರುವುದಾಗಿ ತಿಳಿದು ಬರುತ್ತದೆ.

ಮತ್ತೆ ಒಬ್ಬಯ್ಯಂ ಬಸವಸಚಿ
ವೋತ್ತಮನ ಪೊರೆಗೆಯ್ದಿ ಆತನ
ಮತ್ತಗಜಗಮನೆಯ ಕಿವಿಯ ಪೊನ್ನೋಲೆಯಂ ಕಂಡು
ಒತ್ತಿ ಬೇಡಲು ಮಾಯಿದೇವಿಯ
ಮುತ್ತಿನೋಲೆಯನೀಸಿಕೊಂಡೊಲಿ
ದಿತ್ತು ನಮಿಸಲು ಮಿಂಡಜಂಗಮವಿತ್ತಲೆಯ್ತಂದ ... (೧೦: ೪೩)

ಇಲ್ಲಿಯ ಓಲೆಯ ಪವಾಡದಲ್ಲಿ ಉಲ್ಲೇಖಳಾದ 'ಮಾಯಿದೇವಿ' ಬಸವಣ್ಣನವರ ಹೆಂಡತಿಯೆಂದು ಗೊತ್ತಾದರೂ ಅವಳ ತಂದೆ ತಾಯಿಗಳು, ವಿವಾಹ ನಡೆದ ಸಂದರ್ಭ ಈ ಯಾವ ಅಂಶಗಳೂ ಸ್ಪಷ್ಟವಾಗಿಲ್ಲ. ಕವಿ ಈ ಬಗ್ಗೆ ಮೌನ ತಾಳಿರುವುದು ಆಶ್ಚರ್ಯವಾಗಿದೆ.

ಮಂಗಳವಾಡದಲ್ಲಿ ಕರಣಿಕ ವೃತ್ತಿಯಿಂದ ಮೇಲೇರುತ್ತಿದ್ದ ಬಸವಣ್ಣನವರು ಸಿದ್ಧರಸ ಮಂತ್ರಿಯ ಮರಣಾನಂತರ ಬಿಜ್ಜಳನ ಭಂಡಾರಿಯಾಗಿ ಕೆಲವು ದಿನಗಳು ಕಳೆದು 'ಸತ್ಕುಲ ಸಾದೃಶ್ಯ ಸುಶೀಲೆಯರಪ್ಪ ಗಂಗಾದೇವಿ ಮಾಯಿದೇವಿಯರೊಡತಣ ವಿವಾಹ ಸಂಪದದಿಂದ ಸಂತಸುಖಮಿರ್ದು' (ಬ.ದೇ.ರ. ಸ್ಥಲ–೬) ಎಂದು ಹರಿಹರ ಕವಿ ಹೇಳುತ್ತಾನೆ. ಆದರೆ ಗಂಗಾದೇವಿ, ಮಾಯಿದೇವಿಯರು ಯಾರ ಮಕ್ಕಳೆಂಬುದನ್ನು ಹೇಳುವುದಿಲ್ಲ. ಆದರೆ ಮಾಯಿದೇವಿ 'ಸಿರಿಸರಸ್ವತಿಯರಂ ಕೀಳ್ಮಾಡುವಂತಿದ್ದಳೆಂದೂ' (ಅದೇ ಸ್ಥಲ–೧೨) ಗಂಗಾದೇವಿಯರ್ಗೆ ಸುಪುತ್ರನುದ್ಭವಿಸೆ 'ಸಿದ್ಧರಸ'ನೆಂದು ನಾಮಕರಣ ಮಾಡಿದರೆಂದೂ (ಅದೇ ಸ್ಥಲ–೧೦) ರಗಳೆಯಲ್ಲಿ ಉಲ್ಲೇಖವಿದೆ.

ಷಡಕ್ಷರದೇವಕೃತ 'ಬಸವರಾಜವಿಜಯ'ದಲ್ಲಿ ಕಲ್ಯಾಣದಲ್ಲಿ ವಿವಾಹ ಜರುಗಿತೆಂದೂ, ವಿವಾಹ ಮುಗಿದೊಡನೆ ಬಸವಣ್ಣನವರು ಗಂಗಾಂಬೆಯೊಡನೆ ಕಪ್ಪಡಿ ಸಂಗಮಕ್ಕೆ ಹಿಂದಿರುಗಿ ಅಲ್ಲಿ ಬಲದೇವನ ಮರಣದವರೆಗೆ ಇದ್ದನೆಂದೂ, ಆಮೇಲೆ ಬಿಜ್ಜಳನು ಅವನನ್ನು ಬಲದೇವನ ತೆರನಾದ ಸ್ಥಾನಕ್ಕೆ ನಿಯಮಿಸಲು ಮತ್ತೆ ಕಲ್ಯಾಣಕ್ಕೆ ಹೋದನೆಂದು ಹೇಳಿದೆ. (೪:೧೨೫) ಈ ಸಮಯದಲ್ಲಿ ಕಲ್ಯಾಣ ಬಿಜ್ಜಳನ ಆಳ್ವಿಕೆಯ ಕೇಂದ್ರವಾಗಿರಲಿಲ್ಲ. ಆದುದರಿಂದ "ಕಲ್ಯಾಣದಲ್ಲಿ ಮದುವೆ ನಡೆದುದು ಸರಿಯೆನಿಸದು. ಕೂಡಲಸಂಗಮದಲ್ಲಿರುವಾಗಲೇ ಗಂಗಾದೇವಿಯೊಡನೆ ಅವರ ಮದುವೆಯಾಯಿತೆಂದೂ, ಅವರು ಗುರುಕುಲವಾಸವನ್ನು ಮುಗಿಸಿ ಕಾರ್ಯನಿರತ ಜೀವನದಲ್ಲಿ ಕಾಲಿರಿಸುವಂತೆ ಮಾಡಿದುದು ಈ ಮದುವೆಯ ಘಟನೆಯೇ ಎಂದು ಭಾವಿಸುವುದು ಉಚಿತವೆನಿಸುತ್ತದೆ" (ಕಲಬುರ್ಗಿ ಎಂ.ಎಂ. ಶ್ರೀಬಸವೇಶ್ವರರು: ಪು.೬೮) ಅಲ್ಲದೇ ಬಸವಣ್ಣನವರಿಗೆ 'ಮಾಯಿದೇವಿ' ಎಂಬ ಇನ್ನೊಬ್ಬ ಮಡದಿ ಇರುವ ವಿಷಯ ಈ ಕಾವ್ಯದಲ್ಲಿಯೂ ವ್ಯಕ್ತವಾಗಿದೆ. (೮/೩೯)

ಲಕ್ಕಣ್ಣದಂಡೇಶನಾದರೂ ಬಸವಗಂಗಾಂಬೆಯರ ವಿವಾಹ ಕಲ್ಯಾಣ ಪಟ್ಟಣದಲ್ಲಿಯೇ ಆಯಿತೆಂದೂ, ಬಸವಣ್ಣನವರು ಮಂತ್ರಿಪದವಿಗೇರಿದ ಮೇಲೆ ಬಿಜ್ಜಳನ ಅಪೇಕ್ಷೆಯಂತೆ ಆತನ ತಂಗಿ ನೀಲಾಂಬಿಕೆಯನ್ನು ವರಿಸಿದನೆಂದು ನಿರೂಪಿಸಿದ್ದಾನೆ. ಇಲ್ಲಿಯೂ ಬಸವಗಂಗಾಂಬೆಯರ ಮದುವೆಯ ವರ್ಣನೆ ವಿಸ್ತಾರವಾಗಿದೆ. ಆದರೆ ನೀಲಲೋಚನೆ ಬಸವಣ್ಣನವರ ವಿವಾಹದ ಬಗ್ಗೆ–

ಬಳಿಕಾನೃಪಂ ಮಂತ್ರಿಗಂ ತಮ್ಮೊಳಗೆ ಹೊರೆ ಹುಟ್ಟಿದಂತೆ ಮಾಳ್ಪ
ತೆಜದಿ ತನ್ನನುಜೆಕನ್ನರಿಯಿಂದ ಕಿಜಿಯಳಾ
ತರುಣಿ ನೀಲಾಂಬಿಕೆಯನೊಲಿದಿತ್ತು ಬಸವಗಂ
ಹಿರಿದು ವಿಭವದಿ ಮುದುವೆಯಂ ಮಾಡಿ..... (೩೧:೬೭)

ಎಂದು ಹೇಳುತ್ತಾನೆ. ತನ್ನ ಸಮಾಜಸುಧಾರಣೆಗೆ ಅನುಕೂಲವಾಗಬಹುದೆಂದು ಬಲದೇವ ಮಂತ್ರಿಯ ಮಗಳನ್ನು ಮದುವೆಯಾಗಲು ಒಪ್ಪಿರಬಹುದು. ಆದರೆ ಬಿಜ್ಜಳನ ತಂಗಿ ನೀಲಾಂಬಿಕೆಯನ್ನು ಮದುವೆಯಾದದ್ದು ತನ್ನಿಚ್ಛೆಯಂತೆ ಅಲ್ಲದೇ ಬಿಜ್ಜಳನು ರಾಜಕೀಯ ಕಾರಣದಿಂದ ಒಪ್ಪಿಸಿರಲು ಸಾಧ್ಯ ಎಂಬುದನ್ನು ತಳ್ಳಿ ಹಾಕುವಂತಿಲ್ಲ. ಅಂದಿನ ಕಾಲದಲ್ಲಿ ರಕ್ತಸಂಬಂಧದ ಮೂಲಕ ರಾಜರು ತಮ್ಮ ಬಲವನ್ನು ಹೆಚ್ಚಿಸಿಕೊಳ್ಳುವ ಪದ್ಧತಿಯಿದ್ದಿತು.

ಸಿಂಗಿರಾಜನ ಅಭಿಪ್ರಾಯದಂತೆ ಬಸವ ಗಂಗಾಂಬೆಯರ ಮದುವೆಯನ್ನು ಬಲದೇವ ದಂಡನಾಯಕನು ವೈಭವದಿಂದ ನೆರವೇರಿಸುತ್ತಾನೆ. ಆದರೆ ಬಸವ ನೀಲಾಂಬಿಕೆಯರ ಮದುವೆಯ ಬಗ್ಗೆ ಹೇಳುವಾಗ ಲಕ್ಕಣ್ಣ ದಂಡೇಶನನ್ನು ಅನುಸರಿಸಿದ್ದು ಕಂಡು ಬರುತ್ತದೆ. ಬಿಜ್ಜಳನು ತನ್ನ ಹಾಗೂ ಬಸವಣ್ಣನವರ ವಿಶ್ವಾಸ ದೃಢವಾಗಿರಬೇಕೆಂದು ಹೀಗೆ ಆಲೋಚಿಸಿದನು. ತನ್ನ ತಂದೆ ತೀರಿಕೊಂಡಾಗ ತಾಯಿ ಸಹಗಮನ ಹೋಗಲು ತಮ್ಮ ಕರ್ಣದೇವನು ಇನ್ನೂ ಬಾಲಕನಾಗಿದ್ದನು. ಸಿದ್ಧರಸ ಮಂತ್ರಿಯ ಪತ್ನಿ ಪದ್ಮಗಂಧಿ ತನ್ನ ಮೊಲೆಹಾಲನ್ನುಣಿಸಿ ಆತನನ್ನು ಜೋಪಾನ ಮಾಡಿದಳು. ಅನಂತರದಲ್ಲಿ ಪದ್ಮಗಂಧಿಯ ಉದರದಲ್ಲಿ ನೀಲಲೋಚನೆ ಜನಿಸಿದಳು. ಆಕೆ ತಮಗೆ ತಂಗಿಯಹಳು;

ಅಂತಹ ನೀಲಲೋಚನೆಯನ್ನು ಬಸವಣ್ಣನವರಿಗೆ ಕೊಟ್ಟು ಮದುವೆಮಾಡಿ ತಮ್ಮ ಸಂಬಂಧ ಬಂಧುರವಾಗುವಂತೆ ಮಾಡುವೆನೆಂದು ಆಲೋಚಿಸಿ ಹಾಗೆ ಮಾಡುವನು.

ಲೀಲೆಯಿಂ ಮೊಲೆಯೂಡಿ ಸಲಹಿದಳು ಮಂತ್ರಿಕುಲ
ಪಾಲ ಸಿದ್ಧರಸದಣ್ಣಾಯಕರರಸಿ ಪುಣ್ಯ
ಶೀಲದೇವತೆ ಪದ್ಮಗಂಧಿಯಾಕೆಯ ಉದರದಲಿ ಬಳಿಕ ಜನಿಸಿದಾಕೆ
ನೀಲಲೋಚನೆಯೆಮಗೆ ತಂಗಿಯಹಳಾಕೆಯನು
ನೀಲಲೋಚನೆ ಬಸವಗೀವೆನೆನುತುತ್ಸಾಹ
ದಾಳಾಪದಲಿ ಪಟ್ಟವಧುವೆಂದು ಮದುವೆಯಂ ಮಾಡಿದಂ ನೃಪ ಬಸವಗೆ (೨:೫೩)

ಎಂದು ಹೇಳುತ್ತಾನೆ. ಸಿಂಗಿರಾಜನ ಹೊರತಾದ ಹೇಳಿಕೆಗಳು ನೀಲಲೋಚನೆ ಬಿಜ್ಜಳನ ತಂಗಿಯೋ ಸಿದ್ದರಸನ ಮಗಳೋ ಎಂಬ ಸಂದೇಹ ಹುಟ್ಟುತ್ತಿದ್ದು ಈ ಎರಡೂ ಅಭಿಪ್ರಾಯಗಳಲ್ಲಿಯ ಭೇದವನ್ನು ಅಳಿಸಿ ಹಾಕುವ ರೀತಿಯಲ್ಲಿ ಸಿಂಗಿರಾಜ ನೀಲಾಂಬಿಕೆ ಸಿದ್ದರಸನ ಮಗಳು, ಬಿಜ್ಜಳನ ಸಾಕುತಂದೆಯೆಂಬ ವಿರಾಮ ಕೊಡುತ್ತಾನೆ. "ಗಂಗಾಂಬಿಕೆಯ ವಿಷಯವಾಗಿ ಕೇಳಿ ಬರದ ಈ ದ್ವಂದ್ವಗಳು ನೀಲಾಂಬಿಕೆಯ ವಿಷಯವಾಗಿ ಕೇಳಿ ಬರುವುದರಲ್ಲಿಯೇ ಇವಳ ಕುಲದ ಬಗೆಗೆ ವೀರಶೈವ ಕವಿಗಳಿಗೆ ಏನೋ ಆತಂಕ ಉಂಟಾಗಿದೆಯೆಂದು, ಅದನ್ನು ಮರೆಮಾಚಲು ಬೇರೆ ಬೇರೆ ಕಲ್ಪನೆಗಳನ್ನು ಕಟ್ಟಿರಬಹುದೆಂದು ಶಂಕೆ ಮೂಡುತ್ತಿದೆ." (ಕಲಬುರ್ಗಿ ಎಂ.ಎಂ.೧೯೮೮: ಪು.೨೪೨-೨೫೨) ಒಟ್ಟಿನಲ್ಲಿ ಇವಳು ಮೂಲತಃ ಅಬ್ರಾಹ್ಮಣಳಾಗಿದ್ದು ಹರಿಹರ ಹೇಳುವ ಸಿದ್ಧರಸನಿಗೂ ತಂದೆ ಮಗಳೆಂಬ ಸಂಬಂಧವನ್ನು ಮುಂದಿನವರು ಕಲ್ಪಿಸಿರಬೇಕು. ಇಲ್ಲವೇ ಲಕ್ಕಣ್ಣದಂಡೇಶ ಹೇಳಿದ ಬಿಜ್ಜಳನ ತಂಗಿಯೆಂಬುದಕ್ಕೆ ಸಿಂಗಿರಾಜ ಸಾಕುತಂಗಿಯೆಂಬ ತಿರುವು ಕೊಟ್ಟಿರಬೇಕು. ಬಹುಶಃ ನಿಜಸಂಗತಿಯೆಂದರೆ "ಬಿಜ್ಜಳನ ತಂಗಿಯಾಗಿದ್ದ ಇವಳು ಶೈವ ಪರಂಪರೆಯ ಕ್ಷತ್ರಿಯಳು. ಮಂತ್ರಿಮಗಳಾಗಿದ್ದರೂ ನೀಲಾಂಬಿಕೆಯ ಎದುರು ಗಂಗಾಂಬಿಕೆ ಸೌಮ್ಯವಾಗಿ ಕಾಣುವುದಕ್ಕೆ ನೀಲಾಂಬಿಕೆ ಚಕ್ರವರ್ತಿಯ ಸೋದರಿಯಾಗಿದ್ದ ವ್ಯವಹಾರಿಕತೆಯೇ ಕಾರಣವಾಗಿರಬೇಕು. ಇದಲ್ಲದೆ ಹುಟ್ಟಿನಿಂದ ಬ್ರಾಹ್ಮಣ ಪರಿಸರದಿಂದಾಗಿ ಗಂಗಾಂಬಿಕೆಯ ವ್ಯಕ್ತಿತ್ವ ಅಷ್ಟಾಗಿ ಬೆಳೆಯಲಿಲ್ಲ. ನೀಲಾಂಬಿಕೆಯ ವ್ಯಕ್ತಿತ್ವ ಮೈಕೊಡವಿಕೊಂಡು ಬೆಳೆಯಲು ಅವಳು ಹುಟ್ಟಿಬಂದ ಕ್ಷತ್ರಿಯ ಪರಿಸರವೇ ಕಾರಣ ಎಂದು" ಎಂ.ಎಂ.ಕಲಬುರ್ಗಿ ಅವರು ಅಭಿಪ್ರಾಯ ಪಡುತ್ತಾರೆ. (ಅದೇ)
ಆದರೆ

ದೇವನೊಬ್ಬ, ನಾಮ ಹಲವು
ಪರಮ ಪತಿವ್ರತೆಗೆ ಗಂಡನೊಬ್ಬ, (ಸ.ವ.ಸಂ-೧.ವ.೬೧೫)

ನಂಬಿದ ಹೆಂಡತಿಗೆ ಗಂಡನೊಬ್ಬನೆ ಕಾಣಿರೋ
ನಂಬಬಲ್ಲ ಭಕ್ತಂಗೆ ದೇವನೊಬ್ಬನೆ ಕಾಣಿರೋ (ಸ.ವ.ಸಂ-೧. ವ.೬೧೩)

ಹೀಗೆ ಉದ್ಘೋಷಿಸಿದ ಬಸವಣ್ಣನವರು ಎರಡನೆಯ ಹೆಂಡತಿಯನ್ನು ಮಾಡಿಕೊಂಡಿರಬಹುದೆ? ಎಂಬ ಅನುಮಾನ ಬಾಧಿಸುತ್ತದೆ. ಜೇಡರ ದಾಸಿಮಯ್ಯ. ಕೊಂಡಗುಳಿ ಕೇಶಿರಾಜ, ಮೋಳಿಗೆಯ ಮಾರಯ್ಯ, ಹಡಪದ ಅಪ್ಪಣ್ಣ, ಆಯ್ದಕ್ಕಿಯ ಮಾರಯ್ಯ ಮುಂತಾದ

ಶರಣರು ಏಕಪತ್ನೀವ್ರತಸ್ಥರಾಗಿದ್ದರು. ನುಡಿದಂತೆ ನಡೆಯುವ ಬಸವಣ್ಣನವರ ಒಡಬಾಳು ಅಂತೆಯೇ ಇರಬೇಕಲ್ಲವೇ ಎನಿಸುತ್ತದೆ. ಶ್ರೀಯುತ ದೇವೀರಪ್ಪನವರು ಚರ್ಚಿಸುತ್ತ, 'ನೀಲಮ್ಮನ ತ್ರಿವಿಧಿ', 'ನೀಲಮ್ಮನ ಸ್ತೋತ್ರ', 'ನೀಲಾಂಬಿಕಾ ಲಲಿತಸ್ತೋತ್ರ', 'ನೀಲಾಂಬಿಕೆಯ ತತ್ವಮಾಲಾಸ್ತೋತ್ರ', 'ನೀಲಮ್ಮನ ಉರುಟಗೆಯ ಹಾಡು', 'ನೀಲಲೋಚನೆಯ ನಾಮಗಳು', ಮುಂತಾದ ಕೃತಿಗಳಲ್ಲಿ ನೀಲಲೋಚನೆಯ ಕುರಿತು ಕೆಲವಂಶಗಳು ದೊರೆಯುವ ಆಧಾರದಿಂದ ಬಸವಣ್ಣನವರಿಗೆ 'ಮಾಯಿದೇವಿ' ಎಂಬ ಮಡದಿ ಇರಲೇ ಇಲ್ಲವೆಂದು ನಿರ್ಧರಿಸುತ್ತಾರೆ. ಮುಂದುವರಿದು ನೀಲಮ್ಮನಿಗೆ 'ನೀಲಗಂಗಮ್ಮ' ಎಂದು ಕರೆಯುತ್ತಿದ್ದಿರಬೇಕೆಂದು ಊಹಿಸುತ್ತಾರೆ. ಜನರು ಒಂದೇ ಹೆಸರಿನ ಪೂರ್ವಾರ್ಧವನ್ನೋ, ಉತ್ತರಾರ್ಧವನ್ನೋ ಬಳಸುವ ಪದ್ಧತಿಯಂತೆ (ಉದಾ: ಮರುಳ ಸಿದ್ಧ; ಸಿದ್ಧ, ಚೆನ್ನಬಸವ; ಚೆನ್ನ) ಕೆಲವರು ಗಂಗಮ್ಮ (ಗಂಗಾಬಿಕೆ) ಮತ್ತೆ ಕೆಲವರು ನೀಲಮ್ಮ (ನೀಲಾಂಬಿಕೆ) ಎಂದು ಕರೆಯುತ್ತಿದ್ದಿರಬೇಕು. ಆದ್ದರಿಂದ ಬಸವಣ್ಣನವರಿಗಿದ್ದದ್ದು ಒಬ್ಬಳೇ ಹೆಂಡತಿಯೆಂದೂ, ಆ ತಾಯಿಯ ಹೆಸರು 'ನೀಲಗಂಗವ್ವ' ಎಂದೂ ದೃಢವಾಗಿ ಹೇಳುತ್ತಾರೆ. (ಬಸವಪಥ ಸಂ.೩ ಪು.೧೨)

ಆದರೆ ಪೂರ್ವದ ಕವಿಗಳೆಲ್ಲ ಬಸವಣ್ಣನವರಿಗೆ ಇಬ್ಬರು ಪತ್ನಿಯರಿದ್ದದ್ದನ್ನು ಹೇಳಿರುವುದರಿಂದ ಪರಂಪರೆಯಿಂದ ಈ ವಿಷಯ ಒಪ್ಪಿತವಾಗಿರುವುದರಿಂದ ಇಬ್ಬರು ಪತ್ನಿಯರ ವಿಷಯವನ್ನು ಒಪ್ಪಿಕೊಳ್ಳಬೇಕಾಗುತ್ತದೆ. "ಬಸವಣ್ಣನವರ ಕ್ರಾಂತಿಕಾರಕ ಬದುಕನ್ನು ನೋಡಿದಾಗ ಬ್ರಾಹ್ಮಣಳಲ್ಲದ ಬಹುಶಃ ಕ್ಷತ್ರಿಯಳಾಗಿರಬಹುದಾದ ನೀಲಾಂಬಿಕೆಯನ್ನು ಮದುವೆಯಾಗಿ ತನ್ನ ಜಾತಿಭೇದನಿವಾರಣೆ ಧೋರಣೆಗೆ ತಾನೇ ಉದಾಹರಣೆಯಾದಂತಿದೆ." (ಕಲಬುರ್ಗಿ ಎಂ.ಎಂ ೧೯೮೮, ಪು.೩೪೨-೩೫೨) ಹಾಗಾಗಿ ಬಸವಣ್ಣನವರಿಗೆ ಇಬ್ಬರು ಪತ್ನಿಯರಿದ್ದರೆಂಬುದು ಸತ್ಯಕ್ಕೆ ದೂರವಲ್ಲವೆಂದು ಒಪ್ಪಿಕೊಳ್ಳಬೇಕಾಗುತ್ತದೆ.

೭. ಕಲ್ಯಾಣದಲ್ಲಿ ಮಂತ್ರಿಪದವಿ :

ಸಚಿವನಾದ ಬಲದೇವನು ಬಸವಣ್ಣನವರಿಗೆ ತನ್ನ ಮಗಳನ್ನು ಮದುವೆಮಾಡಿಕೊಟ್ಟ ಮೇಲೆ ಮರಣ ಹೊಂದುವನು.

> **ಇತ್ತಲೀ ಬಸವಂಗೆ ತನಯನ**
> **ನಿತ್ತಡೊಲಿದು ಪ್ರಮಥರತಿಮುದ**
> **ವೆತ್ತು ಕರೆಸಲು ಪೋಪವೊಲು ಶಿವಲೋಕಕೆಯ್ದಿದನು ... (೫: ೩)**

ಆ ಸಂದರ್ಭದಲ್ಲಿ ಬಿಜ್ಜಳನು ಬಲದೇವಮಂತ್ರಿಯ ಬಂಧು ಬಳಗವನ್ನು ಕರೆಯಿಸಿ 'ಬಲದೇವನ ಹೊಣೆ ಹೊರಲು ಸಮರ್ಥರಾದವರು ಅವರಲ್ಲಿ ಉಂಟೇ' ಎಂದು ವಿಚಾರಿಸುವನು.

> **ಬಳಿಕವಾ ಬಲದೇವಮಂತ್ರಿಯ**
> **ಬಳಗವಂ ಬಂಧುಗಳನಾಪ್ತರು**
> **ಗಳನಿಳಾಧೀಶನು ಕರೆಸಿ ತಾನವರಿಗಿಂತೆಂದ**
> **ಒಲಿವ ಹಿತವರು ಸೋದರರು ಮ**
> **ಕ್ಕಳುಗಳಾಯ್ತಾದಡೀತನ**
> **ಬಲನಿಯೋಗವನೆಲ್ಲವಂ ಪ್ರತಿಪಾಲಿಸುವರೊಳರೆ ... (೫: ೪)**

ಬಲದೇವನ ಮಗಳ ಪತಿಯಾದ ಬಸವಣ್ಣನವರು ನಿನ್ನ ಮಂತ್ರಿಪದಕ್ಕೆ ಯೋಗ್ಯನೆಂದು ಅವರೆಲ್ಲ ಭಿನ್ನವಿಸುವರು.

ಎನೆ ಮಹಾರಾಜೇಂದ್ರ ವುಂಟಾ
ತನ ತನಯಳ ಪ್ರಾಣನಾಥನು
ವಿನಯವಾಕ್ಯಂ ನಿಮ್ಮ ರಾಜ್ಯವನುದ್ಧರಿಸಲಾಪ
ಅನಘನತಿಬಳನಖಿಳಪಾವನ
ವನಧಿಯಾತನದೆಂತೆನಲು ಭೂ
ವಿನುತ ಸಂಗಮದೇವನಿಂ ಪಡೆದನು ಪ್ರಸನ್ನತೆಯ ... (ಶ: ೫)

ಆತನನ್ನು ಬರಮಾಡಿಕೊಳ್ಳಬೇಕೆಂದು ಅಮಾತ್ಯನನ್ನು ಆತನಲ್ಲಿಗೆ ಅರಸನು ಕಳುಹಿಸುವನು.

ಘನದ ಭದ್ರೇಭವನಮಾತ್ಯರ
ನನಿಬರಂ ಬೆಸನಿತ್ತು ಬಸವನ
ನನುನಯದೊಳೊಡಗೊಂಡು ಬರಲೆಂದಟ್ಟಲೊಡನವರು ... (ಶ: ೬)

ಸಂಗಮಕ್ಕೆ ಅವರು ಹೋಗಿ ಬಿಜ್ಜಳನ ಪ್ರಧಾನ ಪಟ್ಟಕ್ಕೆ ಅಧಿಪತಿಯಾಗಲು ಬರಬೇಕೆಂಬ ಅರಸನ ಬಿನ್ನಪವನ್ನು ನಿವೇದಿಸುವರು. ಭಕ್ತಹಿತಾರ್ಥವಾಗಿ ಬಸವಣ್ಣನವರು ಇದಕ್ಕೆ ಒಪ್ಪುವರು.

ಧಾರುಣಿಗೆ ಸಚಿವಾಗ್ರಪಟ್ಟಕ
ಪಾರಭಂಡಾರಕ್ಕೆ ಬಹುಪರಿ
ವಾರಕಾಪ್ತಜನಕ್ಕೆ ವಿಶ್ವಾಸಕ್ಕೆ ಬಿಜ್ಜಳನ
ಭೂರಿಸಾಮ್ರಾಜ್ಯಕ್ಕೆ ಸಕಳದ
ಭಾರಮಂ ತಾಳಲ್ಕೆ ಮತ್ತೆ ವಿ
ಚಾರಿಸಲು ನೀವಲ್ಲದಾಂತಂಗಾವನಿರ್ದಹನು ... (ಶ: ೯)

ಅರಸನೊಕ್ಕೈಯೋಗರಕೆ ತಾ
ನರುಹನುಳಿದಂತೀ ಧರಿತ್ರಿಗೆ
ನಿರುತವಧಿಪತಿ ನೀವೆಯಲ್ಲಾ ಬಸವಮಂತ್ರೀಶಾ
ಪುರಕೆ ಬಿಜಯಂಗೈದು ಸಲೆಯು
ದ್ಧರಿಸಿಯೆಂಬರ ಬಿನ್ನಪವನವ
ಧರಿಸಿ ಭಕ್ತಿಹಿತಾರ್ಥಮಂ ನೆನೆದಲ್ಲಿಗೊಡಬಟ್ಟು ... (ಶ: ೧೦)

ನಂತರ ಬಿಜ್ಜಳನು ಬಸವಣ್ಣನವರನ್ನು ಹನ್ನೆರಡು ಜನ ಭಂಡಾರಿಗಳೊಳಗೆ ಹಿರಿಯ ಭಂಡಾರಿಯನ್ನಾಗಿ ನಿಯಮಿಸುವನು.

.... ಲಕ್ಕದ
ಮೇಲೆ ತೊಂಬತ್ತೆಂಟು ಸಾವಿರ
ಮೇಲೆನಿಪ ಭಂಡಾರಿಗಳು ಪನ್ನಿಬ್ಬರವರೊಳಗೆ ... (ಶ: ೧೮)

ಹಿರಿಯ ಭಂಡಾರಾಧಿಪತ್ಯದೊ
ಳಿರಲನುಮತಿಸಿ ಸಕಲ ರಾಜ್ಯೋ
ದ್ಧರಣಕರಣಮನಿತ್ತು ಬಿಜ್ಜಳಧರಣಿವಲ್ಲಭನು ... (ಶ: ೧೯)

ಸಕಲರಾಜವೈಭವದೊಡನೆ ಮೆರವಣಿಗೆ ಕಲ್ಯಾಣದ ಬೀದಿಯಲ್ಲಿ ಹಾಯ್ದು ಬಂದು ಓಲಗಂಗೊಟ್ಟಿರಲು ಹರಲಿಖಿತವೋಲೆಯೊಂದು ಆಕಸ್ಮಿಕವಾಗಿ ಆಕಾಶದಿಂದ ಬಿಜ್ಜಳ ಭೂಪಾಲನ

ಸಮ್ಮುಖದಲ್ಲಿ ಬೀಳುವುದು. ಆ ಲಿಪಿಯನ್ನೋದುವುದು ಯಾರಿಗೂ ಸಾಧ್ಯವಾಗದಿರಲು ಬಸವಣ್ಣನವರು ಅದನ್ನೋದಿ ಸಿಂಹಾಸನದ ಕೆಳಗಿದ್ದ ಅಪಾರ ಧನವನ್ನು ತೋರಿಸಿ ಕೊಡುವರು. ಅದರಿಂದ ಸಂಪ್ರೀತನಾದ ಬಿಜ್ಜಳನು ತನ್ನ ಹನ್ನೆರಡು ಜನ ಮಹಾಮಾತ್ಯರಲ್ಲಿ ಅಗ್ರೇಸರನನ್ನಾಗಿ ಮಾಡುವನು.

ಆದರೆ ಹರಿಹರನ ನಿರೂಪಣೆ ಬೇರೊಂದು ತೆರನಾಗಿದೆ. ಬಸವಣ್ಣನವರು ಕಪ್ಪಡಿಸಂಗಮದಲ್ಲಿ ಸಂಗಮೇಶ್ವರನನ್ನು ಅನನ್ಯ ಭಕ್ತಿಯಿಂದ ಪೂಜಿಸುತ್ತ ಸುಖವಾಗಿದ್ದರು. ಇದ್ದಕ್ಕಿದ್ದ ಹಾಗೆ ಸಾಕ್ಷಾತ್ ಸಂಗಮೇಶನೆ ಬಸವಣ್ಣನವರು ಕನಸಿನಲ್ಲಿ ಬಂದು "ಎಲೆ ಮಗನೆ ಬಸವ ಬಸವಣ್ಣ ಬಸವೀದೇವ, ನಿನ್ನಂ ಮಹೀತಳದೊಳು ಮೆಚಿದಪೆವು ನೀಂ ಬಿಜ್ಜಳರಾಯನಿಪ್ಪ ಮಂಗಳವಾಡಕ್ಕೆ ಪೋಗು" ಎನ್ನುತ್ತಾನೆ. ಹರಿಹರ ಕಲ್ಯಾಣದ ಪ್ರಸ್ತಾಪವನ್ನೇ ಮಾಡುವುದಿಲ್ಲ. ಸಂಗಮನಾಥನ ಅಭಯವನ್ನು ಪಡೆದು ಬಸವಣ್ಣನವರು ಕಪ್ಪಡಿಯನ್ನು ಬಿಟ್ಟು ಮಂಗಳವಾಡಕ್ಕೈತರುವರು. ಮಂಗಳವಾಡದ ಕೇರಿಯೊಳಗೆ ನಡೆಯುತ್ತ ಅಲ್ಲಿಯ ಸಂಪದವನ್ನು ಕಂಡು ಸಂತಸಪಡುವರು. ಬಿಜ್ಜಳರಾಯನ ಅರಮನೆಗೆ ಬಂದು ಅಲ್ಲಿ ಗಜತುರಗ ವೀರಭಟರನ್ನೂ ಕವೀಂದ್ರರನ್ನು ಕಾಣುವರು. ಕರಣಸಾಲೆಗೆ ಬಂದು ಗಣಕರನ್ನು ನಿರೀಕ್ಷಿಸುವರು. ಅಲ್ಲಿ ನಡೆದ ಲೆಕ್ಕದ ಸಂಭ್ರಮವನ್ನು ತೀಕ್ಷ್ಣದೃಷ್ಟಿಯಿಂದ ನೋಡುತ್ತಿರುವರು. ಅಷ್ಟರಲ್ಲಿ ಭಂಡಾರಿ ಕಮ್ಮೆಕುಲಪತಿಯೆನಿಪ ಸಿದ್ಧದಂಡಾಧಿಪನು ಲೆಕ್ಕವನ್ನು ನೋಡುವುದಕ್ಕಾಗಿ ಅಲ್ಲಿಗೈತರುವರು. ಆಯವ್ಯಯವನ್ನು ಅಲ್ಲಿಯ ಗಣಕರು ಪರಿಶೀಲಿಸಿ ಹೇಳುವಲ್ಲಿ ತಪ್ಪಲು ಅದನ್ನು ಬಸವರಾಜ ದೇವರು ಅರಿತರು. ಭಂಡಾರಿ ಸಿದ್ಧರಸನಿಗೆ ಅದನ್ನು ತಿಳಿಸಿ ಆತನಿಗೆ ಮನವರಿಕೆ ಮಾಡಿಕೊಡುವರು.

ಅಯ್ದು ಕೋಟಿಯ ಮೇಲೆ ಲಕ್ಕವೈವತ್ತೆಂದು
ಅಯ್ದೆ ಗಣಕರ್ ತಪ್ಪಿಪೇಳೆ ಭರದಿಂದದು
ತಪ್ಪಿದುದನರಿದನಾ ಬಸವರಾಜಂ ನೋಡ (೫:೭೬-೭೮)

ಸಿದ್ಧರಸನು ಬಸವಣ್ಣನವರನ್ನು ಬಿಜ್ಜಳನಲ್ಲಿಗೆ ಕರೆದೊಯ್ದು ಇಂಥ ತೀಕ್ಷ್ಣಮತಿಯನ್ನು ತಾನು ಇದುವರೆಗೂ ಕಂಡಿಲ್ಲವೆಂದು ಐವತ್ತುಲಕ್ಷ ಹೊನ್ನನ್ನು ಭಂಡಾರಕ್ಕೆ ಉಳಿಸಿ ಕೊಟ್ಟನೆಂದು ತಿಳಿಸಿ ಆತನನ್ನು ತಮ್ಮ ಭಂಡಾರಕ್ಕೆ ಸೇರಿಸಿಕೊಳ್ಳುವುದಾಗಿ ಭಿನ್ನವಿಸುವನು. ಊಟಕೊಡಿಸಿ ಜೀವಿತದ ಮಾಡಿ ಒಂದು ವರ್ಷಕ್ಕೆ ನೂರೊಂದು ಹೊನ್ನು ಕೊಡುವುದಾಗಿ ನಿಶ್ಚಯಿಸಿ ತನ್ನ ಭಂಡಾರದ ಕರಣಿಕನಾಗಿ ಸೇರಿಸಿಕೊಂಡು ಸಿದ್ಧರಸನು ಬಸವಣ್ಣನವರನ್ನು ತನ್ನರಮನೆಗೆ ಕರೆದೊಯ್ಯುವನು.

ಎಂದು ಉಡಕೊಡಿಸಿ ಜೀವಿತವನಾಗಳೆ ಮಾಡಿ
ಒಂದು ವರುಷಕ್ಕೆ ನೂಱೊಂದು ಹೊನ್ನಂ ಬೇಡಿ
ಕೊಡಿಸಿ ಭಂಡಾರಿ ತನ್ನರಮನೆಗೆ ಕೊಂಡೊಯ್ದು (೫: ೧೪೭-೧೪೯)

ಬಸವಣ್ಣನವರು ಕಮ್ಮೆಕುಲದವನೆಂದೂ ತನಗೆ ಸಂಬಂಧಿಕನೆಂದೂ ತಿಳಿದು ಸಿದ್ಧರಸನು ಆನಂದಪಡುವನು.

ಕುಲವೊಂದೆ ಕುಲವಾಗೆ ಗೋತ್ರವಂತನುವಾಗೆ
ನೆಲೆ ವಿಚಾರಿಸೆ ತನ್ನ ಸಂಬಂಧ ಒಂದಾಗೆ
ಸಿದ್ಧದಂಡಾಧಿಪಂ ಹೆಚ್ಚುತಂ ಹಿಗ್ಗುತಂ (೫: ೧೪೭-೧೪೯)

ಕೆಲವು ದಿನಗಳ ನಂತರ ಸಿದ್ಧರಸನು ತೀರಿಹೋಗುವನು. ಅಪುತ್ರಕನಾಗಿ ಮಡಿದ ಸಿದ್ಧರಸನ ಸರ್ವಭಂಡಾರವೆಲ್ಲ ಬಸವಣ್ಣನದೆಂದು ಬಿಜ್ಜಳನು ಸಾರಿ ತನ್ನ ರಾಜ್ಯದ ರಕ್ಷೆ ಶಿಕ್ಷೆಗಳನ್ನೆಲ್ಲ ಅವನಿಗೊಪ್ಪಿಸಿ ಪಟ್ಟಗಟ್ಟುವನು. ಹೀಗೆ ಬಸವಣ್ಣನವರು ಭಂಡಾರಿಯಾಗುವರು; ದಂಡನಾಥನಾಗುವರು. ಭೀಮಕವಿಯ ನಿರೂಪಣೆಯಿಂದ ಬಸವಣ್ಣನವರಿಗೆ ಅತ್ಯಂತ ಸುಲಭವಾಗಿ ಮಂತ್ರಿಪಟ್ಟ ದೊರೆಯಿತೆನ್ನುವುದು ಗೊತ್ತಾದರೆ ಹರಿಹರನ ನಿರೂಪಣೆಯಿಂದ ಬಸವಣ್ಣನವರಿಗೆ ಆತನ ತೀಕ್ಷ್ಣಬುದ್ಧಿಮತ್ತೆಯಿಂದ ಆ ಹುದ್ದೆ ದೊರೆಯಿತೆನ್ನುವುದು ಗೊತ್ತಾಗುತ್ತದೆ. "ಬಸವಣ್ಣನವರು ಬಿಜ್ಜಳನ ಮಂತ್ರಿಯಾಗಿದ್ದರಲ್ಲಿ ಎಳ್ಳಷ್ಟು ಸಂದೇಹವಿಲ್ಲ. ಆದರೆ ಅದಕ್ಕಿಂತ ಮೊದಲು ಆತ ಹರಿಹರ ಹೇಳುವಂತೆ ಕರಣಿಕನಾಗಿದ್ದರು. ಅತ್ಯಂತ ಶ್ರದ್ಧೆಯಿಂದ ಕೆಲಸ ಮಾಡಿ ಮುಂದೆ ಆತ ಭಂಡಾರಿಯಾದರು" ಎಂಬುದನ್ನು ಫ.ಗು.ಹಳಕಟ್ಟಿಯವರು ವಿವರಿಸುತ್ತಾರೆ. (ಹಳಕಟ್ಟಿ ಸಮಗ್ರ ಸಾಹಿತ್ಯ ಸಂ.೧೧: ಪು.೯೮)

ಸೂಳೆಗೆ ಹುಟ್ಟಿದ ಕೂಸಿನಂತೆ
ಆರನಾದಡೆಯೂ 'ಅಯ್ಯಾ, ಅಯ್ಯಾ'ಎನಲಾರೆ
ಚೆನ್ನಯ್ಯನೆಮ್ಮಯ್ಯನು, ಚೆನ್ನಯ್ಯನ ಮಗ ನಾನು
ಕೂಡಲಸಂಗನ ಮಹಾಮನೆಯಲ್ಲಿ
ಧರ್ಮಸಂತಾನಿ ಭಂಡಾರಿ ಬಸವಣ್ಣನು (ಸ.ವ.ಸಂ.೧ ವ.೩೪೭)

ಈ ವಚನದ ಆಧಾರದಿಂದ ಬಸವಣ್ಣನವರು ಭಂಡಾರಿಯಾದ ಸಂಗತಿ ತಿಳಿಯುತ್ತದೆ. ಅಲ್ಲದೆ ಈ ಹುದ್ದೆಯ ನಂತರ ಬಸವಣ್ಣನವರು ದಂಡನಾಯಕನಾದರು. ಪುರಾಣಗಳಲ್ಲಿ ಬರುವ 'ಬಸವದಂಡಾಧಿಪ', 'ಬಸವದಂಡೇಶ' ಎಂಬ ಪದಗಳು ಇದಕ್ಕೆ ಸಾಕ್ಷಿ ಒದಗಿಸುತ್ತದೆ. ಬಸವಣ್ಣನವರು ಯುದ್ಧಕಲೆ ತಿಳಿದ ಬಗ್ಗೆಯೂ ಅನೇಕ ವಚನಗಳ ಆಧಾರದಿಂದ ತಿಳಿದು ಬರುತ್ತದೆ. ಅಂತಿಮವಾಗಿ ಮಂತ್ರಿಯಾದರು. ಇದಕ್ಕೆ ಪ್ರಮುಖವಾಗಿ ಅವರ ಒಂದು ವಚನ ಹೀಗಿದೆ–

ಹೊತ್ತಾರೆ ಎದ್ದು ಕಣ್ಣ ಹೊಸೆಯುತ್ತ
ಎನ್ನ ಒಡಲಿಂಗೆ, ಎನ್ನ ಒಡವೆಗೆಂದು, ಎನ್ನ ಮಡದಿ ಮಕ್ಕಳಿಗೆಂದು
ಕುದಿದೆನಾದಡೆ ಎನ್ನ ಮನಕ್ಕೆ ಮನವೆ ಸಾಕ್ಷಿ
ಆಸನೇ ಶಯನೇ ಯಾನೇ ಸಂಪರ್ಕೇ ಸಹಭೋಜನೇ।
ಸಂಚರಂತಿ ಮಹಾಘೋರೇ ನರಕೇ ಕಾಲಮಕ್ಷಯಂ॥
ಎಂಬ ಶೃತಿಯ ಬಸವಣ್ಣನೋದುವನು
ಬವಿ ಬಿಜ್ಜಳನ ಗದ್ದುಗೆಯ ಕೆಳಗೆ ಕುಳ್ಳಿರ್ದು
ಓಲೈಸಿಹನೆಂದು ನುಡಿವರಯ್ಯ ಪ್ರಥಮರು
ಕೊಡುವೆನೆ ಉತ್ತರವನವರಿಗೆ? ಕೊಡಲಮ್ಮೆ.
ಹೊಲೆಹೊಲೆಯರ ಮನೆಯ ಹೊಕ್ಕಾದಡೆಯೂ
ಸಲೆ ಕೈಕೂಲಿಯ ಮಾಡಿಯಾದಡೆಯೂ,
ನಿಮ್ಮ ನಿಲುವಿಂಗೆ ಕುದಿವೆನಲ್ಲದೆ, ಎನ್ನ ಒಡಲವಸರಕ್ಕೆ ಕುದಿದೆನಾದಡೆ
ತಲೆದಂಡ ಕೂಡಲಸಂಗಮ ದೇವಾ।

ಈ ವಚನದಲ್ಲಿ ಬರುವ 'ಭವಿ ಬಿಜ್ಜಳನ ಗದ್ದುಗೆಯ ಕೆಳಗೆ ಕುಳ್ಳಿರ್ದು' ಎಂಬ ಹೇಳಿಕೆಯಿಂದ ಅವರು ಬಿಜ್ಜಳನ ಮಂತ್ರಿಯಾದದ್ದು ಸ್ಪಷ್ಟವಾಗುತ್ತದೆ. ಆದ್ದರಿಂದ ಸಿದ್ಧಣ್ಣಮಂತ್ರಿ ಅಥವಾ ಬಲದೇವಮಂತ್ರಿ

ಇವರು ತೀರಿದ ಬಳಿಕ ಬಲು ಸುಲಭವಾಗಿ ಬಸವೇಶ್ವರರಿಗೆ ಮಂತ್ರಿಪಟ್ಟ ದೊರೆಯಿತೆಂದು ಹೇಳುತ್ತಾರೆ. ವಾಸ್ತವ ಬೇರೆಯಾಗಿದೆ. ಯೋಗ್ಯತೆಯ ಪುರುಷನಾದ್ದರಿಂದಲೇ ಅವನಿಗೆ ಈ ಶ್ರೇಷ್ಠ ಸ್ಥಾನವು ಪ್ರಾಪ್ತವಾಗಿದೆ. ಒಟ್ಟಿನಲ್ಲಿ ಬಸವೇಶ್ವರರು ಬಿಜ್ಜಳನ ಆಡಳಿತದಲ್ಲಿ ಅನೇಕ ಅಧಿಕಾರಗಳನ್ನು ಸಂಪಾದಿಸಿ ಯೋಗ್ಯತೆಯಿಂದಲೇ, ತಾನು ಮಾಡಿದ ಕಾರ್ಯಗಳಿಂದಲೇ ಮುಂದೆ ಬಂದಿದ್ದಾರೆಂದು ಭಾವಿಸಬಹುದು.

೮. ವಿರಸ :

ಪ್ರಸ್ತುತ ಬಸವಪುರಾಣದಲ್ಲಿ ಅನೇಕ ಘಟನೆಗಳು ಬಿಜ್ಜಳ ಹಾಗೂ ಬಸವಣ್ಣನವರ ಮನಸ್ತಾಪಕ್ಕೆ ಕಾರಣವಾಗುತ್ತದೆ. ಬಸವಣ್ಣನವರು ಪೆಟ್ಟಿಗೆಯ ಹೊನ್ನೆಲ್ಲವನ್ನೂ ಜಂಗಮರಿಗೆ ಕೊಟ್ಟರೆಂದು ಕಾಳಿಮರಸ, ಕರಿಯಕೇಶವ, ಚೋಳಿಯಣ್ಣ, ಕಸವಮಂತ್ರಿ ಮೊದಲಾದವರು ಬಿಜ್ಜಳನಿಗೆ ದೂರುವರು. (೧೦:೪/೫) ಬಿಜ್ಜಳ ಪರೀಕ್ಷಿಸಿದಾಗ ಧನವಿದ್ದಂತಿರುವುದು.(೧೦:೮) ಮಡಿವಾಳ ಮಾಚಿದೇವ ಶರಣರ ಮಡಿ ಬಟ್ಟೆಗಳನ್ನು ಮುಟ್ಟಿದವರನ್ನು ಇರಿವೆನೆಂಬ ವ್ರತ ತೊಡುತ್ತಾನೆ. ವ್ರತಕ್ಕೆ ತಕ್ಕಂತೆ ನಡೆಯುವ ಮಾಚಿದೇವನ ಮಡಿ ಬಟ್ಟೆಗಳನ್ನು ಯಾರೊ ಒಬ್ಬ ಮುಟ್ಟಿ ವ್ರತ ಕೆಡಿಸುತ್ತಾನೆ. ಅವನನ್ನು ಇರಿದನೆಂಬ ಅಪವಾದ ಕೇಳಿ ಬಿಜ್ಜಳನು ಕಿಡಿಕಿಡಿಯಾಗುವನು. ಮಾಚಿದೇವನ ಮೇಲೆ ಮದ್ದಾನೆಯನ್ನು ಬಿಡುವನು. ಕೊನೆಗೆ ಶರಣರ ಮಹಿಮೆಯನ್ನು ತಿಳಿದು ಪಶ್ಚಾತ್ತಾಪಗೊಳ್ಳುವನು.

> **ಕಜ್ಜವಿದು ತಾನೆಂದು ಬಸವಂ**
> **ಬುಜ್ಜವಿಸಿ ಪೇಳಲ್ಕೆ ರಾಯಂ**
> **ಲಜ್ಜೆಯಂ ನಾಚಿಕೆಯನುಳಿದಾಗಲಿ ಎನುತ ಬಂದು**
> **ತಜ್ಜನರು ಶಿಷ್ಟರುಗಳಂ ವಿ**
> **ದ್ವಜ್ಜನರು ಮಂತ್ರಿಗಳು ಸಹಿತಂ**
> **ಬಿಜ್ಜಳಂ ಸಾಷ್ಟಾಂಗವೆಱಗಿರಲೈಸು ದೂರದಲಿ ... (೨೧: ೩೮)**

ಕಿನ್ನರಿ ಬೊಮ್ಮಯ್ಯನ ಪ್ರಸಂಗದಲ್ಲಿ ವಿರಸ ಧಗಧಗಿಸಿ ಉರಿಯತೊಡಗುತ್ತದೆ. ವಿಟನೊಬ್ಬನು ತನ್ನ ಸೂಳೆ ಬಯಸಿದ ಕುರಿಯನ್ನು ಬೆನ್ನಟ್ಟಿ ಬರುವನು. ಆ ಕುರಿ ಓಡಿ ಬಂದು ಪ್ರಾಣರಕ್ಷಣೆಗಾಗಿ ತ್ರಿಪುರಾಂತಕೇಶ್ವರ ದೇವಾಲಯವನ್ನು ಪ್ರವೇಶಿಸುವುದು. ಅಲ್ಲಿದ್ದ ಕಿನ್ನರಯ್ಯ ಕರುಣೆಯಿಂದ ಆ ಕುರಿಯನ್ನು ಕೊಲ್ಲದಂತೆ ಪ್ರಾರ್ಥಿಸಿ ಆತನು ಕೇಳಿದ ಹಣವನ್ನು ಕೊಟ್ಟು ಕಳಿಸುವನು. ಆದರೂ ಅದೇ ಕುರಿ ಬೇಕೆಂಬ ಸೂಳೆಯ ಮನೀಷೆಯಂತೆ ಕುರಿಯನ್ನು ಹಿಡಿಯಲು ಬಂದು ಪ್ರಾಣ ಕಳೆದುಕೊಳ್ಳುವನು. ಈ ಪ್ರಸಂಗ ಬಿಜ್ಜಳನಲ್ಲಿಗೆ ಹೋದ ಸಂದರ್ಭದಲ್ಲಿಯೂ ಪಾಶ್ಚಾತ್ತಾಪ ಅನುಭವಿಸಬೇಕಾಯಿತು. (ಸಂ.೨೭)

ಕನ್ನದ ಬೊಮ್ಮಯ್ಯನ ಪ್ರಸಂಗದಲ್ಲಿಯೂ ಬಿಜ್ಜಳ ಮುಖಭಂಗ ಅನುಭವಿಸಬೇಕಾಗುವುದು. (ಸಂ.೩೦) ಶಿವನಾಗಮಯ್ಯಗಳ ಪ್ರಸಂಗದಲ್ಲಿಯೂ ಬಿಜ್ಜಳನ ಮನಸ್ತಾಪ ಹೆಚ್ಚಾಗುತ್ತದೆ. (ಸಂ.೫೪,೫೬)

ಬಸವಣ್ಣನವರು ಕುಲಗೋತ್ರವೆನ್ನದೆ ಭಕ್ತರೆನ್ನುವವರಲ್ಲಿ ಪ್ರಸಾದವನ್ನು ಸೇವಿಸುತ್ತಿರುವರೆಂದು ಶೈವದೀಕ್ಷಾಮುಖ್ಯರು ದೂರಿಡುವರು. ಬಿಜ್ಜಳನು ಅದಕ್ಕೆ ಮತ್ತೆ ಕಿವಿಗೊಡುವನು.(ಸಂ.೨೦,೨೫). ವಿಷದ ಪವಾಡ ವಿರಸವನ್ನು ಇನ್ನೂ ಮುಂದಕ್ಕೆ ಕೊಂಡೊಯ್ಯುತ್ತದೆ. (೬೦: ೫೦/೬೦) ಬಸವಣ್ಣನವರ ಪ್ರಗತಿಪರ ವಿಚಾರಗಳಿಗೆ ಬಿಜ್ಜಳನು ಕುರುಡಾಗಿದ್ದನು. ಲಿಂಗದೀಕ್ಷೆಯಾದ ಹರಿಜನ ಹರಳಯ್ಯನ ಮಗ ಹಾಗೂ ಬ್ರಾಹ್ಮಣ ಮಧುವರಸನ ಮಗಳಿಗೆ ವಿವಾಹಸಂಬಂಧವೇರ್ಪಟ್ಟ ನಂತರ ವಿಪ್ರರು ತೀವ್ರತರವಾದ ಪ್ರತಿರೋಧ ವ್ಯಕ್ತಪಡಿಸುತ್ತಾರೆ. ಬಿಜ್ಜಳ ಈ ಘಟನೆಯಿಂದ ಕನಲಿ ಒತ್ತಡಕ್ಕೆ ಮಣಿದು ಬಸವಣ್ಣನವರ ಮಹಿಮೆಯನ್ನು, ಅರಿತೂ ಅರಿಯದವರಂತೆ ಹಳ್ಳಯ್ಯ ಮಧುವಯ್ಯಗಳ ಕಣ್ಣು ಕೀಳಿಸುವನು.

ಸೊಗಸದವದಿರ ಮಾತಿಗ್ಹಳ್ಳ
ಯ್ಯಗಳ ಮಧುವಯ್ಯಗಳನಾಗಳೆ
ಜಗತಿಪಂ ತಪ್ಪೇನುವಿಲ್ಲದೆ ನೀತಿಯಲ್ಲೆಂದು
ಬಗೆಯದವರಂ ಕರೆಸಿ ಕಣ್ಣಂ
ತೆಗೆಸಿದನು ಮಾಹೇಶ್ವರರ ಮಹಿ
ಮೆಗಳನುದ್ದಂಡತೆಗಳಂ ತಾನಱಿಯನೇ ಮುನ್ನಾ ... (೬೦: ೪)

ಈ ಘಟನೆಯ ನಂತರ ಬಸವ ಬಿಜ್ಜಳರ ವಿರಸ ತಾರಕಕ್ಕೇರಿ ಇವರಿಬ್ಬರ ಸಂಬಂಧ ಕತ್ತರಿಸಿ ಹೋಯಿತು.

೯. ಕೃತಿನಾಯಕನ ಐಕ್ಯ:

ಬಸವ ಬಿಜ್ಜಳರ ನಡುವೆ ವಿರಸಪ್ರಸಂಗಗಳು ಅಧಿಕವಾಗುತ್ತ ನಡೆಯಲು ಮುಂದೆ ದುರ್ಘಟನೆಗಳು ನಡೆಯುವ ಸೂಚನೆಗಳು ಬಸವಣ್ಣನವರಿಗೆ ಗೋಚರವಾಗುತ್ತವೆ. ಅಂಥ ಸಂದರ್ಭದಲ್ಲಿ ಶಿವದ್ರೋಹಕ್ಕೆ ಪ್ರತೀಕಾರ ಮಾಡುವ ಭಾಷೆಯನ್ನು ಅವರು ಜಗದೇವನಿಂದ ತೆಗೆದುಕೊಳ್ಳುವರು.

.......ಹೆದರದಿರಿನ್ನು ಕೆಲ ಕೆಲ
ದಿನಕತಿ ಶಿವದ್ರೋಹವುದಯಿಸಲಾದುದಂತಾಗಿ...
ಮಡಿಹಿಸಾ ದ್ರೋಹಿಯ ನಮಗೊಡಂ
ಬಡಿಕೆಯಾಯಿತು ನಿನ್ನ ಕೆಲಸಕೆ
ಮೃಡನೊಲಿದು ತಾ ಮೆಚ್ಚುವನು ನಿಜ ನಿರ್ಣಯಕ್ಕಿಂತು ... (೫೯: ೫೯,೬೦)

ಪ್ರತಿಲೋಮ ವಿವಾಹದ ಕಾರಣದಿಂದ ಬಿಜ್ಜಳನು ನಿರಪರಾಧಿಗಳಾದ ಅಳ್ಳಯ್ಯ (ಹರಳಯ್ಯ) ಮಧುವಯ್ಯಗಳ ಕಣ್ಣು ಕೀಳಿಸುವನು. ಈ ಘಟನೆಯಿಂದ ತೀವ್ರವಾಗಿ ಮನನೊಂದ ಬಸವಣ್ಣನವರು ಕಲ್ಯಾಣದಲ್ಲಿರಲಾಗದೆಂದು ಜಗದೇವನನ್ನು ಕರೆಸಿ ಕೊಟ್ಟ ಭಾಷೆಯನ್ನು ನೆನಪು ಮಾಡಿಕೊಡುತ್ತಾರೆ.

ನಿನ್ನ ಮುನ್ನಿನ ಭಾಷೆಯಂ ಸಲಿ
ಸಿನ್ನು ತದ್ರೋಹಿಯನಪಹರಿಸಿ
ನನ್ನಿಯಂ ಮೆಱೆ ಎನುತ ಜಗದೇವಂಗೆ ಬೆಸನಿತ್ತು ... (೬೦: ೭)

ಹೀಗೆ ಆದೇಶಿಸಿದ ಬಸವಣ್ಣನವರು ಸಂಗಮಕ್ಕೆ ಹೋದರು. ಜಗದೇವನು ಸಹಾಯಕರಾದ ಮಲ್ಲಿ ಹಾಗೂ ಬೊಮ್ಮಿಗಳೊಡನೆ ಬಿಜ್ಜಳನ ವಧೆಗೈದನು.

ಆ ಇರುಳಿನೋಲಗಕೆ ಗಮನಿಸಿ
ರಾಯನಂ ಕಾಣುತ್ತವೈಸಜೊ
ಳಾಯುಧಂಗಳಿನುರ್ಚಿ ಸಭೆ ಝಲ್ಲೆನಲು ಬಿಜ್ಜಳನ
ಕಾಯದಲಿ ಒಂದೆರಡು ಮೂರ್ಪು
ರಾಯ ಘಾಯದೊಳಿರಿದು ಕೆಡಹಿಯ
ಜೇಯರಸಮರು ಮೂವರುಗ್ರೋದಗ್ರವೃತ್ತಿಯಲಿ ... (೬೦: ೩೧)

ಬಸವಣ್ಣನವರು ಇನ್ನೂ ಕಪ್ಪಡಿಯ ಮಾರ್ಗದಲ್ಲಿರುವಾಗಲೇ ಈ ವಾರ್ತೆ ಅವರಿಗೆ ಮುಟ್ಟುವುದು. ಬಸವಣ್ಣನವರು ಕೂಡಲಸಂಗಮದಲ್ಲಿ ಐಕ್ಯರಾಗುವರು.

ನೆರೆದು ಪರ್ಬಲು ತನುವಿನೊಳು ತ
ತ್ವರ ಹೃದಯನಾಗಿರ್ದ ಮಗನಂ
ಕರಮೊಸೆದು ಕರದಿಂ ನೆಗಹಿ ತನ್ನ ಪ್ರಸಾದವನು ... (೬೦: ೬೧)

ಕೊಡುತ ಮೆಯ್ದಡವುತ್ತ ಕರಗುತ
ಒಡನೊಡನೆ ಬಿಗಿದಪ್ಪಿಕೊಳುತಂ
ಬಿಡದೆ ತನ್ನೊಳಗೊಳಗುಮಾಡಿಕೊಳ್ಳುತ್ತ ಗುರುಮೂರ್ತಿ
ಗುಡಿಯೊಳಾಗಳೆ ಪೊಕ್ಕನಿಬ್ಬರ
ಬೆಡಗದೆಂತುಟೊ ಕಾಣಬಾರದು
ಕಡು ವಿಚಿತ್ರಮಿದೆಂದು ಸರ್ವರು ನೋಡಿ ಬೆಱಗಾಗೆ ... (೬೦: ೬೨)

ಮನೆಮಗ ಮನೆಯ ಸಾರುವಂತೆ ಬಸವಣ್ಣನವರನ್ನು ಸಂಗಮೇಶನು ಒಳಗು ಮಾಡಿಕೊಂಡನು.

ಹರಿಹರನ ಬಸವರಾಜದೇವರ ರಗಳೆಯ ಇಪ್ಪತ್ತೈದು ಸ್ಥಲಗಳಲ್ಲಿ ಕೇವಲ ಹದಿಮೂರು ಸ್ಥಲಗಳು ಮಾತ್ರ ದೊರೆತಿದ್ದು ಹದಿಮೂರನೆಯ ಸ್ಥಲ ಮುಕ್ತಾಯವಾಗುವುದರ ಮುನ್ನವೇ ಕಾವ್ಯ ತ್ರುಟಿತವಾಗಿದೆ. ಸೋಜಿಗವೆಂದರೆ ಕಥೆ ಮುಗಿಯುವ ಮೊದಲೇ ಬಿಜ್ಜಳನ ಕೊನೆಯನ್ನು ಸೂಚಿಸುವ ಕೆಲವು ಚರಣಗಳು ಬರುತ್ತವೆ. ಈ ಸ್ಥಿತಿಯಲ್ಲಿ ಬಂದ ಚರಣಗಳನ್ನು ಮೂಲಕಾವ್ಯದ ಭಾಗವೆಂದು ನಂಬುವುದು ಕಷ್ಟವಾಗುತ್ತದೆ. ಆ ಚರಣಗಳಿಂದ– "ಶಿವದ್ರೋಹಂಗೈದ ಬಿಜ್ಜಳನ ಕೊಲಿಸುತಂ" ಬಸವಣ್ಣನವರು ಕಪ್ಪಡಿ ಸಂಗಮೇಶ್ವರನಲ್ಲಿಗೆ ಬಂದು ಐಕ್ಯರಾದರೆಂದು ತಿಳಿದು ಬರುತ್ತದೆ. ಬಹುಶಃ ಪಾಲ್ಕುರಿಕೆ ಸೋಮನಾಥನ 'ಬಸವ ಪುರಾಣಮು' ಕೃತಿ ರಚಿತವಾದ ಮೇಲೆ ಅದನ್ನೋದಿದ ಒಬ್ಬ ಬುದ್ಧಿವಂತ ಲಿಪಿಕಾರ ರಗಳೆಯ ೧೩ನೇ ಸ್ಥಲದ ಉತ್ತರಾರ್ಧವನ್ನು ಸೃಷ್ಟಿಸಿ ಸೇರಿಸಿರಬಹುದು ಎಂದು ವಿದ್ಯಾಶಂಕರರವರು ಅಭಿಪ್ರಾಯ ಪಡುತ್ತಾರೆ. (ಭೀಮಕವಿ ಬಸವಪುರಾಣ, ಪು.೯) ಹರಿಹರನ ಬಸವರಾಜದೇವರ ರಗಳೆಯ ಈ ಭಾಗ ಹರಿಹರನಲ್ಲದೆಂದು ಅದೊಂದು ಪ್ರಕ್ಷಿಪ್ತ ಭಾಗವೆಂದು ಅದನ್ನು ಸಂಪಾದಿಸಿದ ಟಿ.ಎಸ್.ವೆಂಕಣ್ಣಯ್ಯನವರೇ ಹೇಳಿದ್ದಾರೆ. ಹಾಗಾಗಿ ಅದನ್ನು ಗಣನೆಗೆ ತೆಗೆದುಕೊಳ್ಳದಿರುವುದು ಸೂಕ್ತವೆನಿಸುತ್ತದೆ.

ಇನ್ನು ಸಿಂಗಿರಾಜನ ಪ್ರಕಾರ ಅವನ ಕಥೆ ಮುಕ್ತಾಯವಾಗುವುದು ಸುಖಾಂತ್ಯದಲ್ಲಿ . ಇಲ್ಲಿ ಬಿಜ್ಜಳನ ಕೊಲೆಯ ಪ್ರಸಂಗವೇ ಬರುವುದಿಲ್ಲ. ಬಸವಣ್ಣನವರು ಶೂನ್ಯಸಂಪಾದನೆಯನ್ನು ನಿರ್ಮಿಸಿರುವುದನ್ನು ಕಂಡು ಬಿಜ್ಜಳನಿಗೆ ಜಾತಿಸ್ಮರಣವುಂಟಾಗುವುದೆಂದು ಹೇಳುತ್ತಾನೆ.

ಅಪರಿಮಿತ ದೃಷ್ಟಗಳ ಘಟ್ಟಿಗೊಳಿಸಿದನು ನಿಷ್ಠೆಯ ನಿಜನಲಿತದೇವನು
ಸುಪಥವಾಗಿಹ ನಿಶ್ಚಯಾತ್ಮನೇನಾನೊಂದು
ಉಪಕರಣ ಕರಣವಿಡಿದಂಗವೈಸಲೆ ಎಂದು
ನೃಪಗೆ ಜಾತಿಸ್ಮರತೆಯಾದೊಲಾಯ್ತಾ ಕ್ಷೇತ್ರಮಹಿಮಾವಿಲಾಸದಿಂದ (೪೧: ೪೦)

ಇಂತಹ ಕಾರಣಿಕ ಪುರುಷನು ಮಂತ್ರಿಯಾಗಿರುವುದು ಅನುಚಿತವೆಂದು ಬಗೆದು ತಾನು ಮಾಡಿದ ಪಾಪಕೃತ್ಯಗಳಿಗಾಗಿ ಪಶ್ಚಾತ್ತಾಪಪಟ್ಟು ಬಸವಣ್ಣನವರಿಗೆ ಸಾಷ್ಟಾಂಗವೆರಗುವನು. ಚೆನ್ನಬಸವಣ್ಣನವರಿಗೆ ದಂಡನಾಥ ಪದವಿ ಕೊಡಿಸಿ ಬಸವಣ್ಣನವರು ಗುರುಲಿಂಗ ಜಂಗಮಸೇವೆಯಲ್ಲಿ ಕಾಲ ಕಳೆಯುವಂತೆ ಮಾಡಿಕೊಡುವನು.

ಮುನ್ನ ಕಪಟಾಗದಿಂ ಬಂದು ಬಸವೇಶ ಪ್ರ
ಸನ್ನಗೃಹಮೊಕ್ಕರೆಲ್ಲರು ಭಕ್ತಿ ಜ್ಞಾನ ಸಂ
ಪನ್ನರಾದಂತೆ ನೃಪನಜ್ಞಾನಸಹ್ಯಪರ್ವತ ಶಾಪವೈರಂಗಳ
ಬಿನ್ನಣಂ ಬೀತದ್ದು ಕೈಮುಗಿವುತೂಳಿಗವ
ಚೆನ್ನಬಸವಣ್ಣಂಗೆ ಕರುಣಿಸಿಲ್ಲಿದ್ದು ನೀ
ವೆನ್ನಪಾಲಿಪುದಲ್ಲದೋಲಗಕೆ ಬರಬೇಡ ಚೀಹ ಪ್ರಸ್ತಗಳುಳ್ಳಡೆ (೪೦: ೪೦)

ಚಂದ್ರಸಾಗರವರ್ಣಿಯ 'ಬಿಜ್ಜಳರಾಯಪುರಾಣ'ದಲ್ಲಿ ಬಸವಣ್ಣನು ಯಮಧರಮುನಿಯಿಂದ ಸನ್ಯಾಸವನ್ನು ಕೈಗೊಂಡು ಸಲ್ಲೇಖನವ್ರತದಿಂದ ಮಡಿದನೆಂದು ಹೇಳಿದೆ. (೭: ೬೪)

ಷಡಕ್ಷರದೇವ,ವಿರೂಪಾಕ್ಷಪಂಡಿತ, ಚೆನ್ನಪ್ಪಕವಿ, ಇಂದಿನ ಇತಿಹಾಸಕಾರರೆಲ್ಲರೂ ಬಿಜ್ಜಳನ ಕೊಲೆಯಾಯಿತೆಂದೇ ಹೇಳಿದ್ದಾರೆ. ಕೊಲೆಯಾಯಿತೆಂದೇ ಹೇಳಬೇಕು. ಹಾಗಾದರೆ ಈ ಕೊಲೆಗೆ ಯಾರು ಕಾರಣರು? ಬಸವನಂತೂ ಆಗಿರಲಾರ. ಏಕೆಂದರೆ ಮಾನವಪ್ರೇಮ, ಅನುಕಂಪ, ದಯೆ, ಧರ್ಮ, ಸಕಲರಿಗೆ ಲೇಸನ್ನೇ ಬಯಸುವ ಬಸವಣ್ಣನವರು ಕನಸು ಮನಸಿನಲ್ಲಿಯೂ ಈ ಬಗ್ಗೆ ಯೋಜನೆ ಮಾಡಿರಲಾರರು. ಆದರೆ ಪಾಲ್ಕುರಿಕೆ ಸೋಮನಾಥ ಹಾಗೂ ಭೀಮಕವಿಗಳ ಹೇಳಿಕೆ ನೋಡಿದರೆ ಬಸವಣ್ಣನವರ ಸಾಕ್ಷಿ ಹಾಗೂ ಬೆಂಬಲ ಅವನ ಕೊಲೆಗೆ ಇದೆ ಎಂಬಂತೆ ಕಾಣುತ್ತಿದೆ. ಮೌಖಿಕ ಸಂಪ್ರದಾಯ ಆಧರಿಸಿ ಕಥೆ ಬರೆದ ಇವರಿಗೆ ಸ್ಪಷ್ಟ ಸಂಗತಿ ತಿಳಿದಿರಲಾರದು ಎಂದೆನಿಸುತ್ತಿದೆ. ಕಲ್ಯಾಣ ಕ್ರಾಂತಿಯ ಕೊನೆಯ ದಿನಗಳ ಒಂದು ಕಾಲ್ಪನಿಕ ಚಿತ್ರವನ್ನು ಕೊಡುವ ಮೂಲಕ ಅದನ್ನು ಅಧಿಕೃತವೆನ್ನುವಂತೆ ಬಣ್ಣಕಟ್ಟಿ ತೀರ್ಪು ನೀಡಿರುವರು. ಈ ಬಗ್ಗೆ ಚರ್ಚಿಸುತ್ತ ವಿದ್ಯಾಶಂಕರರವರು– "ಬಸವಣ್ಣನವರಿಗೆ ಕಾಲದ ದೃಷ್ಟಿಯಿಂದ ಹತ್ತಿರದವನಾದರೂ ಸೋಮನಾಥ ಆಧರಿಸಿದ್ದು ಮೌಖಿಕ ಪರಂಪರೆಯಾದ್ದರಿಂದ ಅವನ ನಿರೂಪಣೆಯಲ್ಲಿ ಹಲವು ಅಸಂಗತಗಳಿವೆ. ಅಂತಹ ಅಸಂಗತಗಳಲ್ಲಿ ಹರಳಯ್ಯ ಮಧುವಯ್ಯಗಳ ಕಣ್ಣು ಕೀಳಿಸಿದ ಪ್ರಸಂಗ, ಬಿಜ್ಜಳನ ವಧಾಪ್ರಸಂಗಗಳೂ ಸೇರಿವೆ. ಭೀಮಕವಿಯು ಇದನ್ನು ಕಣ್ಣು ಮುಚ್ಚಿ ಸ್ವೀಕರಿಸಿದ್ದರಿಂದ ಈ ಅಸಂಗತಗಳನ್ನು ನಂಬುವಂತೆ ಬಸವಪುರಾಣ ನಿರೂಪಿಸುವುದರಿಂದ ಅನ್ಯಾಯವೂ ಆಗಿದೆ.ಮೌಖಿಕ ವರದಿಯನ್ನಾಧರಿಸಿ ಇತಿಹಾಸವನ್ನು ಸೃಷ್ಟಿಸಿದರೆ ಆಗುವ ಅನಾಹುತವಿದು" (ವಿದ್ಯಾಶಂಕರ್

ಎಸ್. ೨೦೦೮: ಪ್ರಸ್ತಾವನೆ) ಎಂದು ಅಭಿಪ್ರಾಯ ಪಟ್ಟಿದ್ದಾರೆ. ಬಸವಣ್ಣನವರು ತೊಡುವ ಭಾಷೆ ಹಾಗೂ ಅವರ ವಚನದಲ್ಲಿ ಹೇಳಿರುವ-

> **ನೀನಲ್ಲದನ್ಯವುಂಟೆಂಬವನ ಬಾಯ,**
> **ಕೆನ್ನೆವಾರೆ ಸೀಳಿದಲ್ಲದೆ ಎನ್ನ ಮುನಿಸು ಹೋಗದಯ್ಯ**
> **ಎನ್ನ ಕೋಪವಡಗದಯ್ಯ**
> **ಎನ್ನ ಬಿನ್ನಪವನವಧರಿಸು ಕೂಡಲಸಂಗಮದೇವಾ. (ಸಂ.ವ.ಸಂ.೧. ವ.೭೫೨)**

ಎಂಬ ಶಿವಾಧಿಕ್ಯ ಸ್ಥಾಪನೆಯ ಹಂಬಲವನ್ನೊಳಗೊಂಡ ಹಲವು ವಚನಗಳನ್ನಾಧರಿಸಿ, ಬಸವಣ್ಣನವರ ಈ ಮನೋಭಾವನೆಗಳು ಕವಿಯಿಂದ ಪೂರ್ಣಗೊಂಡಿರಲಿಕ್ಕೆ ಸಾಕು. ಹೀಗೆಂದು ಬಿಜ್ಜಳನ ವಧೆಗೆ ಬಸವಣ್ಣನವರೆ ಕಾರಣವೆಂದು ಭಾವಿಸುವುದು ಪರಮ ಪ್ರಮಾದವಾಗುತ್ತದೆ.

ರಾಘವಾಂಕನ "ಭೂಪಬಿಜ್ಜಳನಳಿದ ವೀರಜಗದೇವನಿಂ ಸಿದ್ಧಸಂಕೇತದಿಂದ" (೮: ೯೫) ಎಂಬ ಹೇಳಿಕೆಯನ್ನಾಧರಿಸಿ ಸಿದ್ಧರು ಬಿಜ್ಜಳನ ಕೊಲೆಗೆ ಕಾರಣರೆಂಬ ಅಂಶ ಕಂಡುಬರುತ್ತದೆ. "ವ್ಯಾಳಿ ಸಿದ್ಧನನ್ನು ಬಿಜ್ಜಳನು ಕಾದ ಎಣ್ಣೆ ಕೊಪ್ಪರಿಗೆಯಲ್ಲಿ ಹಾಕಿ ಕೊಂದುದಕ್ಕೆ ಪ್ರತಿಯಾಗಿ ಸಿದ್ಧರು ಬಿಜ್ಜಳನ ಕೊಲೆಗೆ ಕಾರಣರಾಗಿರಬಹುದೆಂಬ ನಿಲುವಿಗೆ 'ಗೌರಾಂಕನ ನವನಾಥ ಚರಿತೆ'ಯಲ್ಲಿ ಆಧಾರ ದೊರೆಯುವುದು". (ಮಲ್ಲಪ್ಪ ಟಿ.ಎನ್. ೨೦೦೭, ಪು.೧೫) ಕಾಕತೀಯರ ಕಾಲದಲ್ಲಿಯೇ ರಚಿತವಾದ ಈ ಕೃತಿಯಲ್ಲಿ ಸಿದ್ಧರೆ ಬಿಜ್ಜಳನ ಕೊಲೆಗೆ ಕಾರಣ ಎಂದು ಸ್ಪಷ್ಟವಾಗಿ ಹೇಳಿದೆ. ಬಹುಶಃ ಬಿಜ್ಜಳನ ಕೊನೆಯ ದಿನಗಳು ಅನುಕೂಲವಾಗಿರಲಿಲ್ಲ. ಬಿಜ್ಜಳನ ಮಕ್ಕಳೇ ತಂದೆಯಿಂದ ಅಧಿಕಾರ ಕಸಿದುಕೊಳ್ಳಲು ಪ್ರಯತ್ನಿಸಿದ್ದಕ್ಕೆ ಮುತ್ತಗಿಯ ಶಾಸನವೇ ಸಾಕ್ಷಿ. ಇದರ ಪ್ರಕಾರ ಬಿಜ್ಜಳನ ಪ್ರಿಯಪುತ್ರ ಸೋವಿದೇವ ಹಿಂದೆ ಬಿಜ್ಜಳನಾಳಿದ್ದ ತರ್ದವಾಡಿ ನಾಡನ್ನೇ ತನ್ನ ಭುಜಬಲದಿಂದಲೇ ಗೆದ್ದು ಕ್ರಿ.ಶ.೧೧೬೫ ರಲ್ಲಿಯೇ ಸಕಲ ರಾಜೋಚಿತ ಬಿರುದಾವಳಿಗಳೊಂದಿಗೆ ಆಳುತ್ತಿರುತ್ತಾನೆ. ಅಲ್ಲಿಂದ ಮುಂದೆ ಬಿಜ್ಜಳನ ಆಳ್ವಿಕೆ ಎರಡೇ ವರ್ಷ. ಬಿಜ್ಜಳನ ಕೊನೆಯ ದಿನಗಳಲ್ಲಿ ಅವನ ಅರಮನೆ ಅಂತಃಕಲಹಗಳಿಂದ, ಅವನ ಸಾಮ್ರಾಜ್ಯ ಒಳಸಂಚುಗಳಿಂದ, ಅವನ ಆಡಳಿತ ಶೈಥಿಲ್ಯಗಳಿಂದ ಅಸ್ತವ್ಯಸ್ತವಾಗಿದ್ದಿತು. ಈ ಸಂದರ್ಭದಲ್ಲಿಯೇ ಪ್ರತಿಲೋಮವಿವಾಹ ಜರುಗಿತು. ಹರಳಯ್ಯನ ಮಗನಿಗೆ ಮಧುವಯ್ಯನ ಮಗಳನ್ನು ಕೊಟ್ಟು ವಿವಾಹ ಮಾಡಿದುದು ಬಸವಮತಕ್ಕೆ ಸಮ್ಮತವಾದ ವಿಷಯ. ಆದರೆ ಸನಾತನಿಗಳ ಮತಕ್ಕೆ? ಶರಣ ಆಂದೋಲನದ ವಿರೋಧಿಗಳಿಗೆ ಇದಕ್ಕಿಂತ ಒಳ್ಳೆಯ ಸಂದರ್ಭ ಮತ್ತೊಂದು ಸಿಕ್ಕಿರಲಾರದು. ಇದನ್ನು ಬಗ್ಗು ಬಡಿಯಲು ಇವರೆಲ್ಲ ಉರಿದೆದ್ದರು. ಆ ವಿರೋಧಿಗಳಲ್ಲಿ ವರ್ಣವ್ಯವಸ್ಥೆಯ ಬೆಂಬಲಿಗರಂತೂ ಸರಿಯೆ, ವ್ಯಾಪಕ ಪ್ರಮಾಣದಲ್ಲಿ ಕಾಯಕಗಳು ತಲೆದೋರಿ, ತತ್ಪರಿಣಾಮವಾಗಿ ಅದುವರೆಗೆ ಆರ್ಥಿಕ ದಾಸ್ಯದಲ್ಲಿದ್ದ ದಲಿತ-ದರಿದ್ರರ ಸ್ವಾವಲಂಬನೆ ಸಾಧಿತವಾಗಿ, ಅದರಿಂದ ಹಾನಿ ಅನಾನೂಕೂಲಗಳಿಗೊಳಗಾಗಿದ್ದ ಶೋಷಕವರ್ಗಗಳೂ ಸೇರಿರಬಹುದು. ಅಥವಾ ಬಸವಣ್ಣನವರ ಉಲ್ಕಾವೇಗದ

ಅಧಿಕಾರೋತ್ಕರ್ಷದಿಂದ ಅತೃಪ್ತರಾಗಿದ್ದ ಅಧಿಕಾರವರ್ಗದವರು ಸೇರಿರಬಹುದು. ಚಾಲುಕ್ಯವಂಶದ ರಾಜಕುಮಾರರನ್ನು ಕೊನೆಗೆ ಚಾಲುಕ್ಯ ಚಕ್ರೇಶ್ವರನನ್ನು ಕೊಲ್ಲಿಸಿದ್ದರಿಂದ ಕೆರಳಿ ಸೇಡಿಗಾಗಿ ಒಳಗೊಳಗೆ ಕುದಿಯುತ್ತ, ಅನುಕೂಲಕ್ಕಾಗಿ ಕಾದಿದ್ದ ಚಾಲುಕ್ಯವಂಶನಿಷ್ಠರೂ ಸೇರಿರಬಹುದು; ಅಲ್ಲದೇ ಸಾಮಾನ್ಯವಾಗಿ ಸರ್ವಸ್ಥಿತ್ಯಂತರಗಳನ್ನು ವಿರೋಧಿಸುವ, ಬದಲಾವಣೆಯೆಂದರೆ ಭಯಪಡುವ ಈಗಿದ್ದುದೇ ಶ್ರೇಯಸ್ಕರವೆಂದು ಭಾವಿಸುವ ಭಾವುಕರೂ, ಸಂಪ್ರದಾಯ ಶರಣರೂ ಸೇರಿರಬಹುದು. ಸಿದ್ಧರೂ ಈ ಪರಿಸ್ಥಿತಿಯ ಲಾಭ ಪಡೆದಿರಬಹುದು. ಎಲ್ಲರೂ ಸೇರಿ ದೊರೆಯ ಹತ್ತಿರ ದೂರು ಒಯ್ದರು ಇಷ್ಟೊಂದು ಸುಸಂಘಟಿತವಾದ, ಪ್ರಾತಿನಿಧಿಕವಾದ, ಪ್ರಬಲವಾದ ದೂರನ್ನು ರಾಜ ಇದುವರೆಗೆ ಎದುರಿಸಿರಲಿಲ್ಲ. ಈ ಮೇಲಿನ ಯಾವುದೋ ಒಂದು ಶಕ್ತಿಯಂತೂ ಬಿಜ್ಜಳನನ್ನು ಬಲಿ ತೆಗೆದುಕೊಂಡಿರಬೇಕು. ಆದರೆ ಈ ದುಷ್ಕೃತ್ಯ ಅಮಾಯಕ ಶಿವಶರಣರ ತಲೆಗೆ ಸುತ್ತಲ್ಪಟ್ಟಿತು. ಅಂದರೆ ಯಾವುದೋ ರಾಜಕೀಯ ಕಾರಣವೇ ಬಿಜ್ಜಳನನ್ನು ಬಲಿತೆಗೆದುಕೊಂಡಿರಬೇಕು ಎಂಬುದಂತೂ ಸತ್ಯ.

ವರ್ಣಾಶ್ರಮ ಪದ್ಧತಿಯನ್ನು ಬೇರುಸಹಿತ ಕಿತ್ತೊಗೆಯಬೇಕೆಂಬ ಬಸವಣ್ಣನವರ ಪ್ರಯತ್ನಕ್ಕೆ ಯಶಸ್ಸು ಸಿಕ್ಕಿತೆಂದೇ ಹೇಳಬೇಕು. ಸಾಮಾಜಿಕ ನೀತಿ ನಿಯಮಗಳ ಕಟ್ಟಳೆಗಳು ಮನುಷ್ಯನನ್ನು ಇಂದಿಗೂ ಸಹ ತುಳಿಯುತ್ತಲೇ ಇದೆ. ಇವುಗಳ ವಿರುದ್ಧವಾಗಿ ಬಸವಣ್ಣನವರು ನಿರಂತರವಾಗಿ ಹೋರಾಡಿದರೂ ಸಮಾಜಬಲ ಅದಕ್ಕೆ ಪೂರ್ಣ ಬೆಂಬಲ ಕೊಡಲಿಲ್ಲವೆಂದೇ ಹೇಳಬೇಕು.

ನಾನೊಂದು ನುಡಿದರೆ ತಾವೊಂದ ನುಡಿದರು; ತಾವೊಂದ
ನುಡಿದರೆ ನಾನೊಂದು ನುಡಿವೆನು,
ಇದು ಕಾರಣ, ಅವರಿಗೆ ನಮಗೆ ಮೇಳವಿಲ್ಲ
ಮೇಳವಿಲ್ಲದ ಬಳಿಕ ಅನುಭವ ಗೋಷ್ಠಿಯಿಲ್ಲ ;
ಅನುಭವಗೋಷ್ಠಿಯಿಲ್ಲದ ಬಳಿಕ ಗುಹೇಶ್ವರನು ಇಲ್ಲಿಲ್ಲ
ಕೇಳು ಚೆನ್ನಬಸವ (ವ.ಶಾ.ಸಾ. ಪು.೨೩೩)

ಒಂದು ಕಡೆ ಅರಸು ಮುನಿದಿದ್ದಾನೆ, ಮತ್ತೊಂದು ಕಡೆ ಜಂಗಮರು ಮುನಿದಿದ್ದಾರೆ. ಇದನ್ನೇ ಬಸವಣ್ಣನವರು

ಅರಸು ಮುನಿದೊಡೆ ನಾಡೊಳಗಿರಬಾರದಯ್ಯ,
ಗಂಡ ಮುನಿದಡೆ ಮನೆಯೊಳಗೆ ಇರಬಾರದಯ್ಯಾ,
ಕೂಡಲಸಂಗಮದೇವಾ
ಜಂಗಮ ಮುನಿದಡೆ ನಾನೆಂತು ಬುದುಕುವೆ? (ಸ.ವ.ಸಂ.೧: ವ.೮೩೪)

ಎಂದು ಪ್ರಲಾಪಿಸುತ್ತಾರೆ. ಆಗ ಚೆನ್ನಬಸವಣ್ಣನವರನ್ನು ಕರೆದು ಹೇಳಿದರು. ಕಲ್ಯಾಣವೆಂಬುದು ಪ್ರಣತಿಯಾಯಿತು. ನಾನು ತೈಲವಾದೆನು; ನೀವು ಬತ್ತಿಯಾದಿರಿ, ಪ್ರಭುದೇವರು ಜ್ಯೋತಿಯಾದರು. ಪ್ರಣತಿ ಒಡೆಯಿತ್ತು, ತೈಲವರತಿತ್ತು, ಜ್ಯೋತಿ ಬಯಲಾಗಿತ್ತು! ಭಾರವಾದ ಹೃದಯದೊಡನೆ

ಹೆಜ್ಜೆಗಳನ್ನಿಡುತ್ತಾ ಬಸವಣ್ಣನವರು ಕಲ್ಯಾಣ ಬಿಟ್ಟು ಹೊರಟರು. ಸಂಗಮನಾಥನ ಮುಂದೆ ನಿಂತು ಹಲುಬಿದರು "ನೀವು ಹೇಳಿದ ಮಣಿಹವ ಮಾಡಿದೆ. ಇನ್ನು ನಿಮ್ಮೊಳಗೆ ಕೂಡಿಕೊಳ್ಳಾ ಕೂಡಲಸಂಗಮದೇವಾ!"

ಭಕ್ತಿ ಯೆಂಬ ಪೃಥ್ವಿಯ ಮೇಲೆ ಗುರುವೆಂಬ ಬೀಜವಂಕುರಿಸಿ
ಲಿಂಗವೆಂಬ ಎಲೆಯಾಯಿತ್ತು;
ಲಿಂಗವೆಂಬ ಎಲೆಯ ಮೇಲೆ
ವಿಚಾರವೆಂಬ ಹೂವಾಯಿತ್ತು
ಆಚಾರವೆಂಬ ಕಾಯಾಯಿತ್ತು.
ನಿಷ್ಪತ್ತಿಯೆಂಬ ಹಣ್ಣು ತೊಟ್ಟುಬಿಟ್ಟು ಕಳಚಿ ಬೀಳುವಲ್ಲಿ
ಕೂಡಲಸಂಗಮದೇವ ತನಗೆ ಬೇಕೆಂದು ಎತ್ತಿಕೊಂಡ. (ಸ.ವ.ಸಂ.೧: ವ.೫೩೬)

ಬಸವ ತನ್ನ ಮಣಿಹವನ್ನು ಮುಗಿಸಿ ಕೂಡಲ ಸಂಗನಲ್ಲಿ ನಿರ್ವಯಲಾದನು. ಬಿಜ್ಜಳನ ಕೊನೆ ಕ್ರಿ.ಶ.೧೧೬೮ರ ಮಾರ್ಚ್ ಕೊನೆಯಲ್ಲಿ ಇಲ್ಲವೆ ಏಪ್ರಿಲ್ ತಿಂಗಳ ಆರಂಭದಲ್ಲಿ ಎಂದು ಇತಿಹಾಸಕಾರರು ನಿರ್ಣಯಿಸಿದ್ದಾರೆ. ಬಸವಣ್ಣನವರು ಬಿಜ್ಜಳನ ವಧೆಗೆ ಮೂರೂವರೆ ತಿಂಗಳು ಮೊದಲೇ ಲಿಂಗೈಕ್ಯರಾಗಿರುವವರಾಗಿ ಅವರು ೧೧೬೭ರ ಕೊನೆಯಲ್ಲಿ ಕಾಲವಾಗಿರಬೇಕು. ಈ ಯಾವತ್ತು ತಿಥಿಗಳಲ್ಲಿ ಎಲ್ಲ ಪುರಾತನರ ಕಾಲಜ್ಞಾನದಲ್ಲಿ ನಮೂದಿಸಿದ ಬಸವಣ್ಣನವರ ಲಿಂಗೈಕ್ಯದ ತಿಥಿಯೇ ಹೆಚ್ಚು ವಿಶ್ವಾಸನೀಯವಾಗಿ ತೋರುತ್ತದೆ. "ಬಸವಣ್ಣನವರು ಶಾಲಿವಾಹನಶಕ ೧೦೮೯ ಸರ್ವಜಿತು ಸಂವತ್ಸರದ ಶ್ರಾವಣಶುದ್ಧ ಪಾಡ್ಯದಂದು ಅಂದರೆ ಕ್ರಿ.ಶ.೧೧೬೭ ಜುಲೈ ೧೯ ಬುಧವಾರ ದಿನದಂದು ಕೂಡಲಸಂಗಮಕ್ಷೇತ್ರದಲ್ಲಿ ಲಿಂಗೈಕ್ಯರಾದರೆಂದು ಊಹಿಸಲು ಯಾವ ಅಡ್ಡಿ ತೋರುವುದಿಲ್ಲ". (ಪಾಟೀಲ ಮಲ್ಲನಗೌಡ ಶ್ರೀ ಬಸವೇಶ್ವರರ ಚರಿತ್ರೆಯ ಮೇಲೆ ಹೊಸಬೆಳಕು: ಪು. ೧೩೯.

೧೦. ವ್ಯಕ್ತಿತ್ವ :

ಬಸವಣ್ಣನವರ ವ್ಯಕ್ತಿತ್ವ ಬಹುಮುಖವಾದುದು. ಹಾಗಾಗಿಯೇ ಹರಿಹರನಿಂದ ಆಧುನಿಕರವರೆಗೂ ಅವರನ್ನು ಕುರಿತಂತೆ ಅನೇಕ ಕೃತಿಗಳು ರಚನೆಯಾಗಿವೆ. ಇಂದಿಗೂ ಸಹ ರಚನೆಯಾಗುತ್ತಲೇ ಇವೆ. ಅವರ ನಿರ್ಮಲ ಬದುಕನ್ನು ನೋಡಿದ ವಚನಕಾರರೇ ಅವರನ್ನು ಮನದುಂಬಿ ಸ್ತುತಿಸಿದ್ದಾರೆ. ಅವರ ಮೇರು ವ್ಯಕ್ತಿತ್ವದ ವಿವಿಧ ಆಯಾಮಗಳ ಅಧ್ಯಯನ ನಿರಂತರ ನಡೆಯುತ್ತಲೇ ಇದೆ. ಶಾಸನಗಳಲ್ಲಿ ಅನೇಕ ಪುರಾಣ ಕಾವ್ಯಗಳಲ್ಲಿ, ವಚನಗಳಲ್ಲಿ, ಆಧುನಿಕ ಕೃತಿಗಳಲ್ಲಿ ಅವರ ವ್ಯಕ್ತಿತ್ವವನ್ನು ಕಂಡರಿಸುವ ಕೆಲಸ ನಡೆದಿದೆ . ಈ ಹಿನ್ನೆಲೆಯಲ್ಲಿ ಪ್ರಸ್ತುತ ಬಸವಪುರಾಣವನ್ನೊಳಗೊಂಡು ವಿವಿಧ ಕೃತಿಗಳಲ್ಲಿ ಪಡಮೂಡಿದ ಅವರ ವ್ಯಕ್ತಿತ್ವದ ವಿವಿಧ ಮಜಲುಗಳನ್ನು ತಿಳಿಯುವ ಪ್ರಯತ್ನ ಮಾಡಬಹುದು.

ಬಸವಪುರಾಣದಲ್ಲಿ ಅವರೊಬ್ಬ ಸಾಮಾನ್ಯ ವ್ಯಕ್ತಿಯಾಗಿರದೆ ಅಸಾಮಾನ್ಯ ಶಕ್ತಿಯಾಗಿ ಹನ್ನೆರಡನೆಯ ಶತಮಾನದ ಕನ್ನಡನಾಡಿನ ಧಾರ್ಮಿಕ, ಸಾಮಾಜಿಕ, ಸಾಹಿತ್ಯಿಕ ಕ್ಷೇತ್ರದ ಅದ್ಭುತ

ಕ್ರಾಂತಿಗೆ ಕಾರಣರಾಗಿರುವರು; ಮಾನವಜೀವನದ ಹೊಸ ಮೌಲ್ಯಗಳನ್ನು ಕಂಡುಹಿಡಿದಿರುವರು; ಮರ್ತ್ಯಕ್ಕೆ ಮಹವನ್ನು ತಂದಿರುವರು. ಧಾರ್ಮಿಕ, ಸಾಮಾಜಿಕ ಕ್ಷೇತ್ರಗಳಲ್ಲಿ ವಿಷಮತೆಯ ಬಿರುಗಾಳಿ ಬೀಸುತ್ತಿದ್ದ ಕಾಲದಲ್ಲಿ ಬಸವಣ್ಣನವರ ಸತ್ಯ, ಭಕ್ತಿ ಕಾಯಕಗಳ ಸಂದೇಶ ಮಾನವ ಕುಲಕೋಟಿಗೆ ಅಮೃತಸಂಜೀವಿನಿಯಾಗಿ ಪರಿಣಮಿಸಿತು. ಬಸವಣ್ಣನವರ ಭಕ್ತಿಯ ಸೌರಭ ನಾಡಿನ ಸುತ್ತೆಲ್ಲ ಪಸರಿಸಿತು. ಅಸಂಖ್ಯಾತ ಶಿವಶರಣರು ಕಲ್ಯಾಣಕ್ಕೆ ಆಗಮಿಸಿದರು. ಕಲ್ಯಾಣ ಮನುಕುಲದ ಕಲ್ಯಾಣವಾಯಿತು. ಬಸವಣ್ಣನವರ ಮಹಾಮನ ಮಹಾಮನೆಗಳು ವಿಶ್ವದಷ್ಟು ವಿಶಾಲವಾದವು. ಅನುಭವಮಂಟಪ ಲೋಕದ ಕಲ್ಯಾಣಮಂಟಪವಾಯಿತು. ಬಸವಣ್ಣನವರ ಭಕ್ತಿಯ ಬಳ್ಳಿ ಸುತ್ತೆಲ್ಲ ಪಸರಿಸಿ ಹೂತುಕಾತುಲಿಂಗದ ಗೊಂಚಲುಗಳಿಗೆ ಎಡೆಯಾಯಿತು. ಬಸವ ಪುರಾಣದ ಬೃಹತ್ ಕಾವ್ಯದಲ್ಲಿ ಬಸವಣ್ಣನವರ ಅದ್ಭುತವಾದ, ವಿಶಾಲವಾದ ವ್ಯಕ್ತಿತ್ವದ ಮಂದಿರವನ್ನು ಕಂಡರಿಸಲಾಗಿದೆ. ಭೀಮಕವಿಯು ಬಸವನ ಕುರಿತು ಹೇಳುವಾಗ ಮೈಮರೆಯುತ್ತಾನೆ. ಆತನ ಕಾವ್ಯಶಕ್ತಿ ಓತಪ್ರೋತವಾಗಿ ಬಸವಪ್ರವಾಹದಲ್ಲಿ ಹರಿಯುತ್ತದೆ.

ಎರಡೆರಡು ಮೂಜೆರಡುವೈದೆರ
ಡೆರಡು ಸಾಸಿರ ರಸನೆಗಳವ
ರ್ಗರಿದು ಪೊಗಳಲು ನಿಮ್ಮ ಚರಿತೆಯನೊಂದು ನಾಲಗೆಯ
ನರನ ಪವಣೇ ಕೀರ್ತಿಪಡೆ ಬಸ
ವರಸ ನಿಮ್ಮಂ ಭಕ್ತಿಲಲನಾ
ಪರವಶದೊಳೇನೆಂದುವಜೆಯೆನು ತುತಿಸಿ ಬದುಕುವೆನು ... (೧: ೯)

ಸಾವಿರಾರು ನಾಲಿಗೆಯವರಿಗೆ ಬಸವಚರಿತ್ರೆ ಹೇಳಲಸಾಧ್ಯ. ಒಂದು ನಾಲಗೆಯವನು ಹೇಗೆ ಹೇಳಿಯೇನು? ಯಾವ ಯೋಚನೆಯೂ ಇಲ್ಲದೆ ಭಕ್ತಿಪರವಶದಿಂದ ತುತಿಸಿ ಬದುಕುವೆನು ಎನ್ನುತ್ತಾನೆ. ಬಸವಗೆ ಶರಣೆಂದರೆ ಭವವಡಗುತ್ತದೆ, ಕೀರ್ತಿಯು ಹೆಚ್ಚುತ್ತದೆ, ದುಸ್ಥಿತಿಗಳೋಡುತ್ತವೆ, ಸೌಖ್ಯಸ್ಥಿತಿಯುಂಟಾಗುತ್ತದೆ, ಭಾಗ್ಯವೊದಗುತ್ತದೆ, ಹೆಚ್ಚೇನು ಸಾಕ್ಷಾತ್ ಈಶ್ವರನೇ ನಮ್ಮಲ್ಲಿ ನೆಲೆಸುತ್ತಾನೆ ಎಂದು ಕವಿ ಹೇಳುತ್ತಾನೆ. 'ಶೀಲವಂತರ ಕೈಯ ಕನ್ನಡಿ', 'ಕಾಲಕಂಠನ ಕೂರಲಗು' ಎಂಬ ಕವಿನುಡಿಗಳು ಬಸವಣ್ಣನವರ ವ್ಯಕ್ತಿತ್ವಕ್ಕೆ ಕಳಶ ಇಟ್ಟಂತಿವೆ.

ಬಸವಪುರಾಣದಲ್ಲಿ ಬಸವಣ್ಣನವರು ಪವಾಡಪುರುಷನಂತೆ ಪ್ರತಿಬಿಂಬಿತನಾಗಿದ್ದಾರೆ. ಅವರ ಪವಾಡಗಳು ಬಿಜ್ಜಳನಲ್ಲಿ ಪಶ್ಚಾತ್ತಾಪ ಉಂಟು ಮಾಡಿ ಮತ್ತೆ ತಮ್ಮನ್ನು ತಿದ್ದಿಕೊಳ್ಳಲು ಸಹಾಯವಾಗುತ್ತವೆ. ಗುಪ್ತನಿಧಿಯ ಪವಾಡದಲ್ಲಿಯಂತೂ ಸ್ವತಃ ಬಿಜ್ಜಳನು

ಈ ಪುರುಷನಲ್ಲಾ ಯುಗಾದಿಮ
ಹಾಪುರುಷರಿಗೆ ಮೊದಲ ಪುರುಷನು
ಈ ಪುರುಷನಲ್ಲಾ ತ್ರಿಪುರುಷಗುಣತ್ರಯದ ಪುರುಷ
ಈ ಪುರುಷನಲ್ಲಾ ತ್ರಿಭುವನ
ಸ್ಥಾಪನಾಚಾರ್ಯಕ್ಕೆ ಪುರುಷನು
ಈ ಪುರುಷನೈತಂದನಿಂದೆಮ್ಮ ಸಲಹಲೆಂದು.. (೫: ೬೨)

ಎಂದು ಮನದಣಿಯೆ ಕೊಂಡಾಡುತ್ತಾನೆ.

ಭಕ್ತರನ್ನು ಅಚ್ಚ ಶಿವನೆಂದೇ ಭಾವಿಸುವುದು, ಶಿವೈಕ್ಯರ ಕುಂದುಗಳನ್ನು ಎಣಿಸದಿರುವುದು, ಶಿವನನ್ನು ಕೂಡ ಒಮ್ಮೆಯೂ ಬೇಡದಿರುವುದು, ನುಡಿದಂತೆ ನಡೆಯುವುದು, ದಾಸೋಹ ಮಾಡುವುದು, ಪರಸಮಯಿಗಳ ದರ್ಪವನ್ನು ಕೆಡಿಸುವುದು, ಅನರ್ಪಿತವ ಮುಟ್ಟದಿರುವುದು, ಜಂಗಮಪ್ರಾಣವಾಗಿರುವುದು ಇತ್ಯಾದಿಗಳು ಬಸವಣ್ಣನವರ ಗಟ್ಟಿ ಭಾಷೆಗಳಾಗಿದ್ದವು. ಇವುಗಳಿಗನುಗುಣವಾಗಿ ಆತ ಈ ಕೃತಿಯುದ್ಧಕ್ಕೂ ಅನುಷ್ಠಾನಗೈದುದು ಕಂಡುಬರುತ್ತದೆ. ಮಡಿವಾಳ ಮಾಚಯ್ಯ ಹಾಗೂ ಅಲ್ಲಮ ಪ್ರಭುಗಳಂತಹ ಮಾಹೇಶ್ವರರಿಂದ ತನ್ನ ತಪ್ಪನ್ನು ತಿದ್ದಿಕೊಂಡು ಅಪರಂಜಿಯಾಗುತ್ತಾರೆ ಆದ್ದರಿಂದಲೇ ಕವಿಯು

ಬಸವನೆಂಬ ನಿಧಾನವಿರುತಿರೆ
ಬಸವನೆಂಬ ಸಮೇರುವಿರುತಿರೆ
ಬಸವನೆಂಬ ವಿನೂತ್ನ ಚಿಂತಾರತ್ನವಿರುತಿರಲು
ಬಸವನೆಂಬುರು ಕಾಮದುಘವಿರೆ
ಬಸವನೆಂಬೀ ಕಲ್ಪತರುವಿರೆ
ಬಸವಕೃತಿಯಿಂ ಪಡೆಯಬಾರದ ವಸ್ತುವೊಂದುಂಟೆ ... (೬೦: ೮೪) ಎಂದಿದ್ದಾನೆ.

ಬಸವಣ್ಣನವರನ್ನು ನಿಧಾನ, ಸಮೇರು, ಕಲ್ಪತರುಗಳಿಗೆ ಹೋಲಿಸಿ ಕವಿಯು ಮಹೋಜ್ವಲಗೊಳಿಸಿದ್ದಾನೆ. 'ಅವನೊಬ್ಬ ದಯಾಪರ; ಅದೇ ಕಾಲಕ್ಕೆ ಅಷ್ಟೇ ಕಠಿಣವಾಗಿಯೂ ಇರಬಲ್ಲ. ಅವನಲ್ಲಿನ ಈ ಸ್ವಭಾವ ವೈರುಧ್ಯವೇ, ಅವನ ವ್ಯಕ್ತಿತ್ವದ ಸಂಕೀರ್ಣತೆಯೇ ಅವನನ್ನು ನಮಗೆ ಹತ್ತಿರ ತರುವ, ನಮಗೆ ಆತ್ಮೀಯನನ್ನಾಗಿ ಮಾಡುವ ಗುಣ. ಅಂದಿನ ಕಾಲದಲ್ಲಿ ಬಹುವಾದ ಪ್ರೀತಿಗೆ, ಅಷ್ಟೇ ಅಸಹನೆಗೂ ಗುರಿಯಾಗಿದ್ದ ವ್ಯಕ್ತಿ ಅವನು. ಆ ಕಾಲದ ಸಂಪ್ರದಾಯವಾದಿಗಳ ಪ್ರಕಾರ ಅವನೊಬ್ಬ ಸನಾತನ ಧರ್ಮ ಧ್ವಂಸಕ.ಆದರೆ ಈ ಧರ್ಮವನ್ನು ಅದರ ಸರಿಯಾದ ವೇದಿಕೆಯ ಮೇಲೆ ನಿಲ್ಲಿಸಿ ಗೌರವಿಸಿದ ವ್ಯಕ್ತಿ ಆತ ಎಂದು ವಿವೇಕಿಗಳು ಗುರುತಿಸಿದ್ದರು'. (ಚಿಮೂ.೨೦೦೮: ಪು.೨) ಬಸವಣ್ಣನವರ ಬಗ್ಗೆ ಮಾತನಾಡುವುದೆಂದರೆ ಒಂದು ಯುಗವನ್ನು, ಒಂದು ದೊಡ್ಡ ಆಂದೋಲನವನ್ನು ಕುರಿತು ಮಾತನಾಡಿದಂತೆ.

ಯುಗದ ಉತ್ಸಾಹವ ನೋಡಿರೆ, ಪಂಚ ಶಕ್ತಿಗಳಿಗೆ
ಪಂಚ ಪ್ರಧಾನರು, ಶರಣನೇ ಬಲ್ಲ. ಆ ಶರಣನು
ತಾನು ತಾನಾಗಿ ಆರು ದರುಶನಕ್ಕೆ ಯಾಚಕನಲ್ಲ,
ಮೂರು ದರುಶನಕ್ಕೆ ಮುಯ್ಯಾನುವನಲ್ಲ, ವೇದ
ಶಾಸ್ತ್ರಾಗಮ ಪುರಾಣ ಛಂದಸ್ಸು ನಿಘಂಟುಗಳೆಂಬವಕ್ಕೆ
ಭೇದಕನಲ್ಲ . ಅದೇಕೆಂದಡೆ ಅವರಂಗದ ಮೇಲೆ
ಗುರುವಿಲ್ಲ, ಜಂಗಮವಿಲ್ಲ, ಪ್ರಸಾದವಿಲ್ಲ.
ಪಾದೋದಕವಿಲ್ಲದ ಭಾಷೆ. ಆ ಗುರುಲಿಂಗ ಜಂಗಮ
ಪ್ರಸಾದ ಪಾದೋದಕವೇಕಾರ್ಥವಾದ ಕಾರಣ,
ಪ್ರಾಣಿಗಳೆಲ್ಲವೂ ಪ್ರಣಮಂಗೈಯ್ಯುತ್ತಿದ್ದವು.
ಜೀವಿಗಳೆಲ್ಲವೂ ಜೀಯ ಜೀಯ ಎನ್ನುತ್ತಿದ್ದವು.
ಆತ್ಮಂಗಳೆಲ್ಲವೂ ಅನುವ ಬೇಡುತ್ತಿದ್ದವು. ಗೊಗೇಶ್ವರ
ಸಂಗನ ಬಸವಣ್ಣನ ಪಾದಕ್ಕೆ ಈರೇಳು ಭುವನವೆಲ್ಲವೂ
ಜಯ ಜಯ ಎನ್ನುತ್ತಿದ್ದವು. (ಸಂ. ಬಸವರಾಜು ಎಲ್. ಪು.೨೧೯.

ಬಸವಣ್ಣನವರು ಆ 'ಯುಗದ ಉತ್ಸಾಹ'ವೆಂಬ ಅಲ್ಲಮನ ಮಾತು ಬಸವಣ್ಣನವರ ಬಗ್ಗೆ ಎಲ್ಲವನ್ನು ಹೇಳಿದಂತೆ. ಬಸವಣ್ಣನವರ ಸಮಕಾಲೀನರಲ್ಲಿ ಹಲವರು ಸಾಕಷ್ಟು ಕೊಂಡಾಡಿದ್ದರೂ ಯಾರಿಂದಲೂ ಅವರ ವ್ಯಕ್ತಿತ್ವವನ್ನು ಅವರು ಮಾಡಿದ ಕೆಲಸವನ್ನು ಮೇಲಿನ ಮಾತಿಗಿಂತ ಹೆಚ್ಚು ಪರಿಣಾಮಕಾರಿಯಾಗಿ ಸಂಕ್ಷಿಪ್ತವಾಗಿ ಹೇಳಲು ಸಾಧ್ಯವಾಗಿಲ್ಲ. ಅಕ್ಕಮಹಾದೇವಿ ತನ್ನೊಂದು ವಚನದಲ್ಲಿ –

ದೇವಲೋಕದವರಿಗೂ ಬಸವಣ್ಣನೇ ದೇವರು
ಮರ್ತ್ಯಲೋಕದವರಿಗೂ ಬಸವಣ್ಣನೇ ದೇವರು
ನಾಗಲೋಕದವರಿಗೂ ಬಸವಣ್ಣನೇ ದೇವರು
ಮೇರುಗಿರಿ ಮಂದರಗಿರಿ ಮೊದಲಾದವೆಲ್ಲವಕ್ಕೂ ಬಸವಣ್ಣನೇ ದೇವರು
ಚೆನ್ನಮಲ್ಲಿಕಾರ್ಜುನಯ್ಯ ನಿಮಗೂ, ಎನಗೂ ನಿಮ್ಮ ಶರಣರಿಗೂ ಬಸವಣ್ಣನೇ ದೇವರು
(ಕಲಬುರ್ಗಿ ಎಂ.ಎಂ. ೧೯೭೬)

ಮಡಿವಾಳ ಮಾಚಿದೇವರು–

ಅಯ್ಯಾ ನಿಮ್ಮ ಧ್ಯಾನದಲ್ಲಿ ಇರಿಸಲೊಲ್ಲದೆ
ಬಸವಣ್ಣನ ಧ್ಯಾನದಲ್ಲಿ ಇರಿಸಯ್ಯಾ, ಎನ್ನನು
ಲಿಂಗವೇದ್ಯನು ಬಸವಣ್ಣನು
ಜಂಗಮವೇದ್ಯನು ಬಸವಣ್ಣನು
ಪ್ರಸಾದವೇದ್ಯನು ಬಸವಣ್ಣನು
ನಿಜಪದವೇದ್ಯನು ಬಸವಣ್ಣನು
ಮಹಾವೇದ್ಯನು ಬಸವಣ್ಣನು
ಇಂತು ಬಸವಣ್ಣನ ಸಂಗದಲ್ಲಿರಿಸು ಕಲಿದೇವರದೇವಾ (ಅದೇ)

ಹೀಗೆ ಬಸವೇಶ್ವರರ ಸಮಕಾಲೀನ ವಚನಕಾರರು ಅವರನ್ನು ಸಾಕ್ಷಾತ್ ಪರಶಿವನೆಂದೇ ಭಾವಿಸಿದ್ದರು. ಬಸವೇಶ್ವರರ ಸಮಕಾಲೀನ ಹಾಗೂ ಉತ್ತರಕಾಲೀನ ಶರಣರೆಲ್ಲರಿಗೂ ಆರಾಧ್ಯ ದೈವವಾಗಿದ್ದರು. ಇಲ್ಲಿ ಪ್ರಾತಿನಿಧಿಕವಾದ ಮೂವರು ಶರಣರ ವಚನಗಳಿಂದಲೇ ಅವರ ವ್ಯಕ್ತಿತ್ವದ ದಿಗ್‌ದರ್ಶನವಾಗುತ್ತದೆ.

ಶಾಸನ ಬರವಣಿಗೆಗಳಿಗೆ ವಚನಕಾರರು ಆದ್ಯತೆ ಕೊಟ್ಟವರಲ್ಲ. ಆದರೂ ಈ ಪರಿಧಿಯನ್ನು ಮೀರಿ ಬಸವಣ್ಣನವರ ವ್ಯಕ್ತಿತ್ವವನ್ನು ಅನೇಕ ಶಾಸನಗಳು ಸಾರುತ್ತ ನಿಂತಿರುವುದು ಕಂಡುಬರುತ್ತದೆ. ಬಸವಣ್ಣನವರ ವ್ಯಕ್ತಿತ್ವ ಹಾಗೂ ಇತಿಹಾಸವನ್ನು ಕುರಿತು ಹೇಳುವ ಅನೇಕ ಶಾಸನಗಳನ್ನು ವಿದ್ವಾಂಸರು ಗುರುತಿಸಿದ್ದಾರೆ. (ಕಲಬುರ್ಗಿ ಎಂ.ಎಂ.೧೯೭೮. ಪು.೫೮) ಇವುಗಳಲ್ಲಿ ಅರ್ಜುನವಾಡ ಶಾಸನವಂತೂ ಬಸವಣ್ಣನವರ ಭಕ್ತಿಯ ಮಹಿಮೆಯನ್ನು ಕುರಿತು–

ಮಂಗಳಕೀರ್ತಿ ಪುರಾತನ ।
ಜಂಗಮಲಿಂಗೈಕ ಭಕ್ತಿನಿರ್ಭರಲೀಲಾ।
ಸಂಗಂ ಸಂಗನಬಸವಂ।
ಸಂಗತಿಯಂ ಮಾಳ್ಕೆ ಭಕ್ತಿಯೊಳಗನವರತಂ। (EI.XXI p.q ೧೨೬೦)

ಎಂದು ಭಕ್ತಿಪ್ರಸಾದವನ್ನುಯಾಚಿಸುತ್ತ ಅವರ ವ್ಯಕ್ತಿತ್ವದ ಚಿತ್ರವನ್ನು ಬಿಡಿಸಿದೆ. 'ಹಿರಿಯೂರ ಶಾಸನ',(EC V-II ಅರಸಿಕೆರೆ, ೧೮೯, ೧೨೫೫) 'ಗುಡಿಹಾಳ ಕುಂಟೋಜಿ ಶಾಸನ', (SII, XV, ೬೫೮ ೧೪ನೇ ಶತಮಾನ) 'ಕಲ್ಲೇದೇವರಪುರ ಶಾಸನ', (EC,XI, ಜಗಳೂರು, ೧೨೭೯) 'ಮರಡಿಪುರ ಶಾಸನ', (EC,III-1, ಮಂಡ್ಯ-೮೩, ೧೨೮೦) 'ನಾಗಲೋಟಿ ಶಾಸನ', (SII, XVI, ೩೧೮, ೧೨೮೦) 'ಜೋಡಿದಾಸೇನಹಳ್ಳಿ ಶಾಸನ') EC,XII, ಮದ್ದಗಿರಿ-೮, ೧೬೮೬) 'ಕಾನಕಾನಹಳ್ಳಿ ಶಾಸನ' (EC, IX ಕಾನಕಾನಹಳ್ಳಿ-೮೯, ೧೭೦೦) , ಈ ಎಲ್ಲ ಶಾಸನಗಳು ಬಸವಣ್ಣನವರಿಗೆ ಸಂಬಂಧಿಸಿದ ಅವತಾರ, ಲಿಂಗಜಂಗಮ ಸೇವೆ, ಅವರು ಆತ್ಮೀಕರಿಸಿಕೊಂಡ ಲಿಂಗಪೂಜೆ, ಜಂಗಮದಾಸೋಹ, ಪ್ರಸಾದಸಿದ್ಧಿ, ಪುರಾತನ ಭಕ್ತಿ, ಸಮಯಭಕ್ತಿಗಳೆಂಬ ವ್ಯಕ್ತಿ ಸಿದ್ಧಿಗಳ ಒಟ್ಟು ಚಿತ್ರಣವನ್ನು ಕಣ್ಣಿಗೆ ಕಟ್ಟುವಂತೆ ವರ್ಣಿಸುತ್ತವೆ.

ಇನ್ನು ಬಸವಣ್ಣನವರ ಬಗ್ಗೆ ಜನ್ಮತಾಳಿದ ಮೊಟ್ಟಮೊದಲ ಕನ್ನಡ ಕಾವ್ಯವೆಂದರೆ ಹರಿಹರನ ಬಸವರಾಜದೇವರ ರಗಳೆ. ಹರಿಹರ ಮಹಾಕವಿಯು ಒಬ್ಬ ಭಕ್ತಕವಿ. ಇಂತಹ ಕವಿ ಮಾತ್ರ ಬಸವಭಕ್ತಿಯನ್ನು ವರ್ಣಿಸಲು ಸಾಧ್ಯ. ಕಾವ್ಯದ ಯಾವ ಭಾಗವನ್ನೋದಿದರೂ ಬಸವಣ್ಣನವರ ವ್ಯಕ್ತಿತ್ವ ಕಣ್ಣಿಗೆ ರಾಚುತ್ತದೆ. ರಸನಿಷ್ಠವಾದ ಈ ಕಾವ್ಯ ಸದಾ ಬಸವಣ್ಣನವರನ್ನು ಧೇನಿಸುತ್ತದೆ. ಹರಿಹರನ ಈ ವರ್ಣನೆ ಓದುಗರನ್ನು ಭಕ್ತಿಸಾಮ್ರಾಜ್ಯದಲ್ಲಿ ಮಿಂದು ಪಾವನಗೊಳಿಸಿದ ಅನುಭವ ನೀಡುತ್ತದೆ.

ಬಸವನ ಮಾತು ಮಾತು ಬಸವಣ್ಣನ ಭಕ್ತಿಯ ಓಜೆಯೋಜೆ ಕೇಳ್
ಬಸವನ ರೀತಿ ರೀತಿ ಬಸವಣ್ಣನ ಕಿಂಕರ ವೃತ್ತಿ ವೃತ್ತಿ ಮಾಣ್
ಬಸವನ ಬಟ್ಟೆ ಬಟ್ಟೆ ಬಸವಣ್ಣನ ಬಿಂಕದ ಭಾಷೆ ಭಾಷೆ ಹೋ
ಬಸವನ ನಿಷ್ಠೆ ನಿಷ್ಠೆ ಬಸವಣ್ಣನ ನೇವುವುರ್ವಿಯೋಳ್॥ (ಸ್ಥಲ-೮)

ಬಸವಣ್ಣನವರ ಭಕ್ತಿಯ ಬೆಡಗು, ಮಾತಿನ ಮೋಡಿ, ಭಾಷೆಯ ಬಿಂಕ ಮುಂತಾದುವನ್ನು ಹರಿಹರ ಶರಣರ ಮೂಲಕ ಆಡಿಸಿದ ಈ ನುಡಿಗಳು ಬಸವಣ್ಣನವರ ವ್ಯಕ್ತಿತ್ವಕ್ಕೆ ಹಿರಿಮೆ ತಂದು ಕೊಟ್ಟಿವೆ. ಮುಂದುವರೆದು ಶರಣರೇ ಬಸವಣ್ಣನವರನ್ನು ಮನದುಂಬಿ ಹೊಗಳುವ ಈ ಭಾಗವಂತೂ ಆತನ ಸಮಷ್ಠಿ ವ್ಯಕ್ತಿತ್ವವನ್ನು ಮನಂಬುಗುವಂತೆ ತುಂಬಿಕೊಡುತ್ತದೆ. "ಎಲೆ ಬಸವ ಬಸವಣ್ಣ ಬಸವಯ್ಯ ಬಸವರಸ ಬಸವರಾಜ ಬಸವಿದೇವ ಕೇಳಯ್ಯ, ನಿನ್ನ ನೇಮವಿದಾರ್ಗುಂಟು? ಗುರುಲಿಂಗದೊಳೆರಡಿಲ್ಲದಿರ್ಪೆ, ಶರಣರಂ ಸಂಗನೆಂದೆ ಕಾಣ್ಬೆ, ಬಂದ ಭಕ್ತರನತ್ಯಾದರಿಪೆ, ಬರ್ಪ ಭಕ್ತರಂ ಹರುಷದಿಂದಿದಿರ್ಗೊಂಬೆ. ಬೇಡಿದುದಂ ಶರಣರ್ಗಿಲ್ಲೆನ್ನದೀವೆ, ಬೇಡಲೊಲ್ಲದವರ್ಗೆ ಮಿಗಿಲಾಗಿ ಆರಾಧಿಪೆ. ಜಾಗ್ರತ್‌ಸ್ವಪ್ನ ಸುಷುಪ್ತಿಯವಸ್ಥಾತ್ರಯಂಗಳೊಳು ಶರಣರಂ ಸಂಗನೆಂದಲ್ಲದೆ ಕಾಣೆ, ನಿಚ್ಚಶಿವರಾತ್ರಿಯುಮನಚ್ಚರಿಯಿಂ ಮಾಳ್ಪೆ, ಜಂಗಮಂ ಪ್ರಾಣಮಯಾಗಿಪ್ಪೆ, ಶಿವಲಿಂಗಾರ್ಪಿತವಲ್ಲದುದುನಾಘ್ರಾಣಿಸೆ, ನೋಡೆ, ನುಡಿಯೆ, ಮುಟ್ಟೆ, ಕೇಳೆ, ಶಿವಸಮಯವನುದ್ಧರಿಸುವೆ, ಪರಸಮಯಮಂ ಸಂಹರಿಸುವೆ. ಲಿಂಗದಲ್ಲಿ ಕಠಿಣಮಂ ಕೇಳೆ ಜಂಗಮದಲ್ಲಿ ಜಾತಿಯನಜಿಸೆ

ಪ್ರಸಾದದಲ್ಲಿಯಪವಿತ್ರತೆಯನಱಿಯೆ, ಪರಾಂಗನೆಯರಂ ಹೆತ್ತತಾಯ್ಗಳೆಂಬೆ, ಪರದ್ರವ್ಯವಂ ಕಿಲ್ಬಿಷಮೆಂದು ಮುಟ್ಟೆ, ನಡೆದು ತಪ್ಪೆ, ನುಡಿದು ಹುಸಿಯೆ. ಹಿಡಿದು ಬಿಡೆ ಬಿಟ್ಟು ಹಿಡಿಯೆ. ಕೊಟ್ಟು ನೆನೆಯೆ, ನಟ್ಟು ಕೀಳೆ, ಮುಟ್ಟಿ ಪೆಱಪಿಂಗೆ, ಕೂಡಿತಪ್ಪಿ, ನೋಡಿ ನಿರಾಕರಿಸಿ, ನೆನೆದು ಮಱೆಯೆ. ಮನದೊಳೋವರಿಯಿಲ್ಲ, ಬುದ್ಧಿಯೊಳ್ ಸಂಚಲವಿಲ್ಲ, ಅಹಂಕಾರದೊಳ್ ಗರ್ವವಿಲ್ಲ, ಚಿತ್ತದೊಳ್ ಹೊರೆಯಿಲ್ಲ ಕಾಮವಿಲ್ಲ. ಕೋಪದ ಮಾತೇಕೆ? ಲೋಭದ ಗಾಳಿ ತೀಡದು, ಮೋಹಕ್ಕೆ ತೆಱಹಿಲ್ಲ. ಮದದ ಸೊಗಡು ಹೊದ್ದದು. ಮತ್ಸರಕಿಂಬಿಲ್ಲ. ಬಸವರಾಜ, ನಿನ್ನ ಗುಣಂಗಳಂ ಬಣ್ಣಿಸಲೆಮ್ಮಳವಲ್ಲ. ಈಶನ ಮೀಸಲಪ್ಪ ಭಕ್ತ, ನಿನಗೆಣೆಯಿಲ್ಲ ಪಡಿಯಿಲ್ಲ ಪಾಸಟಿಯಾವವಂ? ಪಾಷಂಡಿಭೂಮಿಯೊಳ್ ಶಿವಭಕ್ತಿಯನಾರಂಭಿಸಿ ಸಾಮರ್ಥ್ಯಮಂ ಬಿತ್ತಿ ಪ್ರತ್ಯಕ್ಷಂಗಳಂ ಬೆಳೆದು ಗಣಪರ್ವಂಗಳಂ ಸುಫಲ ಮಾಡಲೆಂದು ಬಂದ ಕಾರಣಿಕ ಬಸವ, ನಿನ್ನ ದೆಸೆಯಿಂದೆಮ್ಮ ಭಕ್ತಿ ಬಣ್ಣ ವೇಱಿತು" (ಅದೇ)

ಬಸವಣ್ಣನವರ ಮನೋದಾರ್ಢ್ಯ, ಎದೆಗಾರಿಕೆ, ಕರ್ಮಮಾರ್ಗದ ಬಗ್ಗೆ ಇರುವ ಅಸಹನೆಗೆ ಅವರದೆ ಎರಡು ವಚನಗಳನ್ನು ನೋಡಬಹುದು.

ವೇದಕ್ಕೆ ಒರೆಯ ಕಟ್ಟುವೆ ಶಾಸ್ತ್ರಕ್ಕೆ ನಿಗಳನಿಕ್ಕುವೆ
ತರ್ಕದ ಬೆನ್ನ ಬಾರನೆತ್ತುವೆ, ಆಗಮದ ಮೂಗಕೊಯಿವೆ, ನೋಡಯ್ಯ
ಮಹಾದಾನಿ ಕೂಡಲ ಸಂಗಮದೇವಾ,
ಮಾದಾರ ಚೆನ್ನಯ್ಯನ ಮನೆಯ ಮಗ ನಾನಯ್ಯ (ಸ.ವ.ಸಂ.೧: ವ.೨೧೨)

ಆನೆ ಅಂಕುಶಕ್ಕೆ ಅಂಜುವುದೆ ಅಯ್ಯ?
ಮಾಣದೆ ಸಿಂಹದ ನಖವೆಂದು ಅಂಜುವುದಲ್ಲದೆ
ಆನೀ ಬಿಜ್ಜಳಂಗಜುವೆನೆ ಅಯ್ಯ?
ಕೂಡಲಸಂಗಮದೇವಾ,
ನೀನು ಸರ್ವಜೀವದಯಾಪಾರಿಯಾದ ಕಾರಣ
ನಿನಗಂಜುವೆನಲ್ಲದೆ (ಸ.ವ.ಸಂ.೧: ವ. ೨೫೩

ಈ ಎರಡು ವಚನಗಳ ಸಾರ ಹರಿಹರನಲ್ಲಿ ಹೀಗೆ ಮೂಡಿ ಬಂದಿದೆ. ಬಸವಣ್ಣನವರು ಸಂಬೋಳಿಯ ನಾಗಿದೇವನೆಂಬ ಹಿರಿಯ ಮಾಹೇಶ್ವರರ ಮನೆಯಲುಂಡ ವಿಷಯವನ್ನು ವಿಪ್ರರು ಬಿಜ್ಜಳನಿಗೆ ತಿಳಿಸುತ್ತಾರೆ. ವಿಚಾರವಿಮರ್ಶೆ ಮಾಡಲು ಬಿಜ್ಜಳ ಬಸವಣ್ಣನವರನ್ನು ಪ್ರಶ್ನಿಸಿದಾಗ–

"ಎಲೆ ಬುದ್ಧಿಯಿಲ್ಲದ ಭೂಪ, ಎರಗಿಯ ಮರುಳೆ, ನಾರಾಯಣಕ್ರಮಿತರ ಕೇರಿಯಂ ಪೊಕ್ಕನೆ? ಮುಕುಂದಭಟ್ಟರ ಮನೆಯೊಳುಂಡೆನೆ, ಶೌರಿಪೆದ್ದಿಗಳ ಸಾರಿ ನಿಂದೆನೆ? ದಾಮೋದರ ಭಟ್ಟನಂ ಪ್ರೇಮದಿಂದ ಸೋಂಕಿದೆನೆ? ಕೇಶವಘೈಸರ ವಾಸನೆಯುಂಟೆ? ಹರನನಱಿಯದ ಹೊಲೆಯರ ಮನೆಯ ಪೊಕ್ಕುಂಡುದಿಲ್ಲ" (ಸ್ಥಲ–೯) ಎಂದು ಬಸವಕೊಡುವ ಉತ್ತರ ವರ್ಣಾಶ್ರಮ ಧರ್ಮದ ಬಗ್ಗೆ ಇರುವ ಅತೀವವಾದ ಅಸಹನೆಯನ್ನು ವ್ಯಕ್ತಪಡಿಸುತ್ತದೆ.

ಆಧುನಿಕ ಕನ್ನಡ ಸಾಹಿತ್ಯದ ಬಹುತೇಕ ಎಲ್ಲರೂ ವಚನ ಚಳುವಳಿಯಿಂದ ಪ್ರೇರೇಪಿತರೂ, ಪ್ರಭಾವಿತರೂ ಆಗಿದ್ದಾರೆ. ಕರ್ನಾಟಕದ ದಲಿತ ಚಳುವಳಿಯು 'ಬುದ್ದ–ಬಸವ–ಅಂಬೇಡ್ಕರ್'

ಅವರನ್ನು ತನ್ನ ಸ್ಫೂರ್ತಿಯೆಂದು ಭಾವಿಸಿದೆ. ಅಂದಿನ ಚಳುವಳಿಯಿಂದ ಪ್ರೇರಣೆಗೊಂಡ ಹಲವು ಆಧುನಿಕ ಮಠಾಧೀಶರು ದಲಿತರನ್ನು ತಮ್ಮ ಮನಸ್ಸಿನ ಒಳಕ್ಕೆ ಹಾಗೆ ತಮ್ಮ ಮಠದೊಳಕ್ಕೂ ಸಂತೋಷದಿಂದ, ಪ್ರೀತಿಯಿಂದ ಬರಮಾಡಿಕೊಂಡಿರುವಂತೆ ಕೆಲವರು ಅವರಿಗೆ ಲಿಂಗದೀಕ್ಷೆ ಕೊಟ್ಟು ಮಠಾಧೀಶರನ್ನಾಗಿಯೂ ಮಾಡಿದ್ದಾರೆ. ಬಸವಣ್ಣನವರು ಮತ್ತು ಅವರ ನೇತೃತ್ವದ ಆಂದೋಲನ ಎಂದೋ ನಡೆದ ಬರೀ ಚಾರಿತ್ರಿಕ ದಾಖಲೆ ರೂಪದ ಮ್ಯೂಜಿಯಂ ಪ್ರದರ್ಶಕ ವಸ್ತುವಾಗಿರದೆ ಇಂದಿಗೂ ಜೀವಂತವಾಗಿರುವ ಜೀವಂತವಾಗಿರಬೇಕಾದ ಒಂದು ಸಾಮಾಜಿಕ ಅಥವಾ ಜನಾಂಗದ ಕ್ರಿಯೆಯೂ ಆಗಿದೆ.

ಒಬ್ಬಾತನು ಒಂದು ಮನೆಯನ್ನು ಕಟ್ಟಿದನೆಂದರೆ ಅದರಲ್ಲಿದ್ದ ಕಲ್ಲು, ಕಟ್ಟಿಗೆ, ಕಬ್ಬಿಣ ಮೊದಲಾದುವುಗಳನ್ನೆಲ್ಲಾ ಹುಟ್ಟಿಸಿದನೆಂದು ತಿಳಿಯಬೇಕೆ? ಮೊದಲಿದ್ದವುಗಳನ್ನೇ ತನ್ನಿಷ್ಟದಂತೆ ವ್ಯವಸ್ಥಿತಗೊಳಿಸಿ ಒಂದು ರೂಪಕ್ಕೆ ತರುವುದರಿಂದ ಆತನು ಮನೆಯನ್ನು ಕಟ್ಟಿದನೆಂದು ಹೇಳುವುದಿಲ್ಲವೆ? ಅದೇ ಪ್ರಕಾರ ಬಸವಣ್ಣನವರು ತಮ್ಮ ಪೂರ್ವದಲ್ಲಿ ಲಿಂಗಧಾರಣ ಪದ್ಧತಿ, ಭಕ್ತಿಮಾರ್ಗ, ವರ್ಣಾಶ್ರಮ ಧರ್ಮರಹಿತ ಸಮಾಜರಚನೆ ಮೊದಲಾದುವುಗಳನ್ನೆಲ್ಲ ಏಕೀಕರಿಸಿ ಜನಾಂಗದ ಶ್ರೇಯಸ್ಸಿಗೆ ಅನುಕೂಲವಾಗುವ ರೀತಿಯಲ್ಲಿ ಮಾರ್ಪಡಿಸಿ, ಈ ವೀರಶೈವ ಮತವೆಂಬ ಸುಂದರವಾದ ಮನೆಯನ್ನು ಕಟ್ಟಿದರು. ಅಂತೆಯೇ ಅವರಿಗೆ ವೀರಶೈವ ಮತಸ್ಥಾಪಕರೆಂದು ಹೇಳುವುದು. ವೈಜ್ಞಾನಿಕ ದೃಷ್ಟಿಕೋನದ ಅಡಿಯಲ್ಲಿ ಧರ್ಮವನ್ನು ವಿವೇಚಿಸಿ ಅದಕ್ಕೊಂದು ನೂತನ ಕಾಯಕಲ್ಪ ದೊರಕಿಸಿಕೊಟ್ಟವರು ಬಸವಣ್ಣನವರು. ಆದ್ದರಿಂದ ಬಸವಣ್ಣನವರನ್ನು ಹೊರತುಪಡಿಸಿ ವೀರಶೈವಧರ್ಮ ಕಲ್ಪನೆ ಮಾಡಲೂ ಸಾಧ್ಯವಿಲ್ಲ.

ಬಸವಣ್ಣನವರ ಬಗೆಗೆ ಇತ್ತೀಚೆಗೆ ಕೆಲವರು ಲಘುವಾಗಿ ಮಾತನಾಡುತ್ತಿದ್ದುದನ್ನು ಗಮನಹರಿಸಿದ ಶ್ರೀತರಳಬಾಳು ಜಗದ್ಗುರು 'ಡಾ.ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳು' ವೀರಶೈವ ಮಹಾಧಿವೇಶನದ ಕಾಲಕ್ಕೆ ಬೆಳಗಾವಿಯಲ್ಲಿ ಹೀಗೆ ಹೇಳಿದ್ದಾರೆ. "ಬಸವಣ್ಣ ವೀರಶೈವ ಧರ್ಮದ ಸ್ಥಾಪಕನಲ್ಲ, ಅವನು ಗುರುವಲ್ಲ, ಕೇವಲ ಭಕ್ತ; ಗುರುತ್ವವು ಕೇವಲ ಕೆಲವರ ಹಕ್ಕು ಎಂದು ವಾದಿಸುವ ತೌಡುಕುಟ್ಟುವ ಕೆಲಸ ಈ ಅಧಿವೇಶನದಲ್ಲಿ ನಡೆಯಿತು. ಸೊನ್ನೆಗಳಿಗೆ ಬೆಲೆ ಇಲ್ಲ. ಎಷ್ಟೇ ಸೊನ್ನೆಗಳನ್ನು ಬರೆಯುತ್ತಾ ಹೋದರೂ ಅವೆಲ್ಲವುಗಳ ಬೆಲೆ ಕೇವಲ ಸೊನ್ನೆಯೇ. ಆದರೆ ಮೊದಲನೆಯ ಸೊನ್ನೆಯ ಹಿಂದೆ ಒಂದು ಅಂಕಿಯನ್ನು ಬರೆದರೆ, ಆಗ ಆ ಎಲ್ಲಾ ಸೊನ್ನೆಗಳಿಗೂ ಬಹುದೊಡ್ಡ ಬೆಲೆ ಇರುತ್ತದೆ. ವೀರಶೈವ ಧರ್ಮದಲ್ಲಿ ಬಸವಣ್ಣನಿಗೆ ಅಂತಹ ಮೊದಲ ಅಂಕಿಯ ಸ್ಥಾನವಿದೆ. ಬರೀ ಸೊನ್ನೆಗಳಿಗೆ ಬೆಲೆ ತಂದವನು ಬಸವಣ್ಣ. ವೀರಶೈವ ಧರ್ಮದಿಂದ ಬಸವಣ್ಣನನ್ನು ಕಳೆದರೆ ಉಳಿಯುವುದು ಬರೀ ಸೊನ್ನೆ" (ತರಳಬಾಳು ವಾರ್ತಾಪತ್ರ (ಸಂ.೧೨, ಪು.೧೦) ಎಂಬ ಮಾತುಗಳು ಗಮನಾರ್ಹವಾಗಿವೆ.

'ರಾಜಾ ಪ್ರತ್ಯಕ್ಷ ದೇವತಾಃ' ಎಂಬ ಕಾಲವೊಂದರಲ್ಲಿ ತುಳಿತಕ್ಕೊಳಗಾದವರ ಬೆನ್ನೆಲುಬಾಗಿ ಬಿಜ್ಜಳ ಅರಸನಿಗೆ ಮುಖಾಮುಖಿಯಾಗಿ ನಿಷ್ಠುರವಾಗಿ ನಡೆದುಕೊಳ್ಳುವ ವಿಶಿಷ್ಟಗುಣ ಬೆರಗು ಹುಟ್ಟಿಸುತ್ತವೆ.

ಊರ ಮುಂದೆ ಹಾಲಹಳ್ಳ ಹರಿವುತ್ತಿರಲು,
ಒರೆಯಾವಿನ ಬೆನ್ನ ಹರಿಯಲದೇಕಯ್ಯಾ?
ಲಜ್ಜೆಗೆಡಲೇಕೆ? ನಾಣುಗೆಡಲೇಕೆ?
ಕೂಡಲಸಂಗಮದೇವನುಳ್ಳನ್ನಕ್ಕ
ಬಿಜ್ಜಳನ ಭಂಡಾರವೆನಗೇಕಯ್ಯ (ಸ.ವ.ಸಂ.೧ ವ.೭೫೫).

ಹೀಗೆ ತಿರೆಸಿರಿಗಳನ್ನು ಕ್ಷಣಿಕವಾಗಿ ಕಂಡವರು ಬಸವಣ್ಣನವರು. ನಿಷ್ಠುರವಾಗಿ, ನಿರ್ಭಯವಾಗಿ, ಯಾರ ಹಂಗೂ ಇಲ್ಲದೆ ಅಂತಹ ಪ್ರಭುಶಕ್ತಿಯ ವಿರುದ್ಧ ಇಡೀ ಶೋಷಕಸಮಾಜದ ಪ್ರತಿನಿಧಿಯಾಗಿ, ಧ್ವನಿಯಾಗಿ ನಿಂತವರು ಬಸವಣ್ಣನವರು. ಅವರ ವಚನಗಳನ್ನು ತಲಸ್ಪರ್ಶಿಯಾಗಿ ಅಧ್ಯಯನ ಮಾಡಿದರೆ ಇದು ದೃಢಪಡುತ್ತದೆ.

ಅಧ್ಯಾಯ–ನಾಲ್ಕು

ಸಮಾಜ

ಅಧ್ಯಾಯ-ನಾಲ್ಕು
ಸಮಾಜ

೧. ಜಾತಿ ವ್ಯವಸ್ಥೆ :

ವಚನಕಾರರ ತರುವಾಯ ಸುಮಾರು ಇನ್ನೂರು ವರ್ಷಗಳ ನಂತರ ರಚಿತವಾದ 'ಬಸವಪುರಾಣ' ವಚನ ಕಾಲದ ನೆಲೆಬೆಲೆಗಳನ್ನುಳಿಸಿಕೊಂಡೆ ರಚಿತವಾಗಿದೆ. ಯಾವೊಂದು ಶತಮಾನ ತನ್ನಷ್ಟಕ್ಕೆ ತಾನೇ ರೂಪುಗೊಳ್ಳುವುದಿಲ್ಲ. ಅದು ಭೂತ ಮತ್ತು ಭವಿಷ್ಯತ್ತುಗಳ ಮಧ್ಯದಲ್ಲಿ ಬಿಚ್ಚಿಕೊಳ್ಳುತ್ತದೆ. ಈ ದೃಷ್ಟಿಯಿಂದ ೧೪ನೆಯ ಶತಮಾನದ ಸಾಮಾಜಿಕ ಪರಿಸರ ಅರ್ಥವಾಗಬೇಕಾದರೆ ೧೨ನೆಯ ಶತಮಾನದ ಶರಣರು ನಂಬಿ ನಡೆದ ಮೌಲ್ಯಗಳು ಯಾವುವು? ಅವುಗಳಿಗಿದ್ದ ಒತ್ತಡ ಯಾವುದು? ಎಂಬಿತ್ಯಾದಿ ಹಲವು ಹತ್ತು ಪ್ರಶ್ನೆಗಳಿಗೆ ಆ ಕಾಲದ ಅಭ್ಯಾಸ ಅತ್ಯಂತ ಅಗತ್ಯವಾಗುತ್ತದೆ.

ಋಗ್ವೇದದ ಕಾಲದಲ್ಲಿ ಭರತಖಂಡ ಆಧ್ಯಾತ್ಮಿಕ ಪ್ರಗತಿಯಷ್ಟೇ ಭೌತಿಕ ಪ್ರಗತಿಗೂ ಮಹತ್ವ ಕೊಟ್ಟ ಸಂಗತಿ ಹೊಸದೇನಲ್ಲ. ಆದರೆ ಕಾಲಕ್ರಮೇಣ ಈ ಆರೋಗ್ಯಪೂರ್ಣ ಮನಸ್ಥಿತಿ ಲೋಪಹೊಂದಿ ಧರ್ಮದರ್ಶನಗಳ ಹೆಸರಿನಲ್ಲಿ ವಂಚನೆ, ಆಲಸ್ಯ, ಪರಾವಲಂಬಿ ಮೊದಲಾದ ಅನಿಷ್ಟ ಪರಂಪರೆ ಬೆಳೆದು ಬಂದುದನ್ನು ಪುರಾಣೇತಿಹಾಸಗಳ ಪುಟಪುಟಗಳಲ್ಲಿ ಕಾಣಬಹುದು. "ಬುದ್ಧಿ ಪೌರುಷ ಹೀನಾನಾಂ ಜೀವಿಕಾ ಧರ್ಮಃ" ಎಂದು ಚಾರ್ವಾಕರು ಧರ್ಮೋಪಜೀವಿಗಳಾದ ಪರಾವಲಂಬಿಗಳನ್ನು ಕಟುವಾಗಿ ಟೀಕಿಸಿದ್ದಾರೆ. "ಚಾತುರ್ವರ್ಣ್ಯಂ ಮಯಾಸೃಷ್ಟಂ ಗುಣಕರ್ಮ ವಿಭಾಗಶಃ" (೪: ೧೩) ಎಂಬ ಹಿತೋಕ್ತಿಯಂತೆ ವೃತ್ತಿ, ಚಿತ್ತವೃತ್ತಿಗಳನ್ನವಲಂಬಿಸಿ ಪ್ರಾರಂಭವಾದ ವರ್ಣವ್ಯವಸ್ಥೆ ಕಾಲಗತಿಸಿದಂತೆ ಜಾತಿಭೂತವಾಗಿ ಪರಿಣಮಿಸಿದುದು ಭಾರತದೇಶದ ದೊಡ್ಡ ದುರಂತಗಳಲ್ಲೊಂದು. ಹರಿವ ನೀರಿನಂತೆ ನಿರ್ಮಲವಾದ ಸಮಾಜವನ್ನು ನಿಂತ ನೀರಿನಂತೆ ಕೊಚ್ಚೆಯಾಗಿಸಿ ಈ ಜಾತಿವ್ಯವಸ್ಥೆ ತನ್ನ ಹಿಡಿತದಲ್ಲಿ ಒಪ್ಪಿಕೊಂಡುದನ್ನು ತಿಳಿಯಬಹುದು. ಭರತಖಂಡದ ಜನಜೀವನದ ಸ್ವರೂಪಕ್ಕೆ ಧರ್ಮವೇ ನಿರ್ಣಾಯಕ ಶಕ್ತಿಯಾಯಿತು. ಜೀವನದ ಎಲ್ಲ ರಂಗಗಳಲ್ಲಿಯೂ ಧರ್ಮವೇ ಹಾಸುಹೊಕ್ಕಾಗಿ ಪರಿಣಮಿಸುವಂತಾಯಿತು. ಇದರಿಂದ ಒಂದು ಕಡೆಯಲ್ಲಿ ಒಳಿತಾದರೂ ಇನ್ನೊಂದು ಕಡೆಯಲ್ಲಿ ಧರ್ಮದ ಸ್ವರೂಪ ಕಲುಷಿತವಾಯಿತು. ಅದನ್ನು ಪ್ರತಿಭಟಿಸಿ ಧರ್ಮದ ನಿಜಸ್ವರೂಪದ ಬೆಳಕಿನಲ್ಲೆ ಸಾಮಾಜಿಕ ಜೀವನವನ್ನು ಹಸನುಗೊಳಿಸಿದ ಪ್ರಯತ್ನಗಳು ಆಗಾಗ ನಡೆಯುತ್ತಾ ಬಂದವು. ಇಂತಹ ಪ್ರಯತ್ನಗಳಲ್ಲಿ ಶ್ರೀ ಬಸವೇಶ್ವರರ ಪಾತ್ರ ಪ್ರಮುಖವಾದುದು.

ಬಸವೇಶ್ವರರ ದೃಷ್ಟಿಗೆ ಗೋಚರವಾದ ಸಮಾಜ ಅನೇಕ ಏಣಿ –ಶ್ರೇಣಿಗಳಿಂದ ಕೂಡಿತ್ತು. ಸಾಮಾಜಿಕ ವಿಷಮತೆ ತುಂಬಿ ತುಳುಕಾಡುತ್ತಿತ್ತು. ಇಂತಹ ಪರಿಸ್ಥಿತಿಯನ್ನು ಗಮನಿಸಿದ ಅವರು ತುಂಬ ವ್ಯಥೆಪಟ್ಟರು. "ಧರ್ಮಾಧಿಕಾರ ತನ್ಮೂಲಕ ರಾಜಕೀಯ ಅಧಿಕಾರ, ವಿದ್ಯಾರ್ಜನೆಯ ಅಧಿಕಾರ, ಎಲ್ಲ ಅಧಿಕಾರಿಗಳ ಗುತ್ತಿಗೆ ಪಡೆದಿದ್ದ ವಿಪ್ರರು ಕರ್ಮ, ಪ್ರಾಣಿವಧೆ, ಕಂದಾಚಾರಗಳಿಗೆ ಕಟ್ಟುಬಿದ್ದವರಾಗಿರುವುದಲ್ಲದೆ ನುಡಿಯುವುದೊಂದು ನಡೆಯುವುದೊಂದು ಮಾಡುತ್ತಿರುವುದು ಒಂದನೆಯ ವ್ಯಥೆ. ಆದ್ದರಿಂದಲೇ "ಏನಯ್ಯಾ ವಿಪ್ರರು ನುಡಿದಂತೆ ನಡೆಯರು! ಇದೆಂತಹದಯ್ಯಾ, ತಮಗೊಂದು ಬಟ್ಟೆ, ಶಾಸ್ತ್ರಕ್ಕೊಂದು ಬಟ್ಟೆ" (ಸ.ವ.ಸಂ.೧: ವ. ೫೭೫) ಎಂದು ಪ್ರಶ್ನಿಸುತ್ತಾರೆ. ಸಮಾಜಮಂದಿರದ ಗೋಪುರದಲ್ಲಿ ಕುಳಿತು ಸುಲಿಗೆಯಿಂದ ಸುಖ ಪಡುತ್ತಿದ್ದ ಮೇಲ್ವರ್ಗಗಳ ಸ್ಥಿತಿ ಇಂತಿದ್ದರೆ ಅದರ ಬುನಾದಿಯ ಕಲ್ಲುಗಳಾಗಿ ಮೇಲಿನ ಭಾರವನ್ನೆಲ್ಲ ಹೊತ್ತು ದಾಸ್ಯ, ದಾರಿದ್ರ್ಯ, ಅಜ್ಞಾನ, ಅಪಮಾನ, ಅಂಧ ವಿಶ್ವಾಸಗಳಲ್ಲಿ ನರಳುತ್ತಿದ್ದ ಅಸ್ಪೃಶ್ಯರೂ, ಅಂತ್ಯಜರೂ, ಪಂಚಮರೂ, ಗುಲಾಮರೂ, ಸೇವಾಜೀವಿಗಳೂ, ಶೂದ್ರರೂ ಇದ್ದ ಕರುಣಾಜನಕ ಸ್ಥಿತಿ ಇನ್ನೊಂದು ಕಡೆಗೆ.(ಪುರಾಣಿಕ ಸಿದ್ಧಯ್ಯ, ೧೯೭೭: ಪು.೨೫) ಮಡಕೆ ದೈವ, ಮೊರ ದೈವ, ಬೀದಿಯ ಕಲ್ಲು ದೈವ, ಹಣಿಗೆ ದೈವ, ಬಿಲ್ಲ ದೈವ ಕಾಣಿರೋ! ದೈವ ದೈವವೆಂದು ಕಾಲಿಡಲಿಂಬಿಲ್ಲದಂತಹ ಸ್ಥಿತಿ (ಸ.ವ.ಸಂ.೧: ವ.೫೬೨) ನಿರ್ಮಾಣವಾಗಿತ್ತು. ಹಾಳು ಮೊರಡಿಗಳಲ್ಲಿ ,ಊರ ದಾರಿಗಳಲ್ಲಿ, ಕೆರೆಬಾವಿ ಹೂಗಿಡ ಮರಗಳಲ್ಲಿ, ಗ್ರಾಮ ಮಧ್ಯಗಳಲ್ಲಿ ಚೌಪಥ ಪಟ್ಟಣ ಪ್ರದೇಶದಲ್ಲಿ, ಹಿರಿಯಾಲದ ಮರದಲ್ಲಿ ಮನೆಯ ಮಾಡಿ ಕರಿವೆಮ್ಮಯ, ಹಸುಗೂಸು ಬಸುರಿ ಬಾಣಂತಿ, ಕುಮಾರಿ ಕೊಡಗೂಸೆಂಬರ ಹಿಡಿದು ತಿಂಬ, ತಿರಿದುಂಬ ಮಾರಯ್ಯ, ಬೀರಯ್ಯ, ಕೇಚರಗಾವಿಲ, ಅಂತರಬೆಂತರ, ಧೂಳಯ್ಯ, ಕೇತಯ್ಯ (ಸ.ವ.ಸಂ.೧: ವ.೧೫೮) ಎಂಬ ಅಸಂಖ್ಯ ದೇವತೆಗಳಿಗೆ ಅಜ್ಞಾನದ ಪೂಜೆ ಸಲ್ಲುತ್ತಿತ್ತು. "ಮಾರಿಕವ್ವೆಯನೋಂತು ಕೊರಳಲ್ಲಿ ಕಟ್ಟಿಕೊಂಬರು; ಮೊರನ ಗೋಟಿಗೆ ಬರ್ಪ ಕಿರುಕುಳ ದೈವಕ್ಕೆ ಕುರಿಯನಿಕ್ಕೆಹೆವೆಂದು ನಲಿನಲಿದಾಡುವರು".(ಸ.ವ.ಸಂ.೧: ವ.೫೫೮) "ಅರಗು ತಿಂದು ಕರಗುವ ದೈವವ, ಉರಿಯ ಕಂಡರೆ ಮುರುಟುವ ದೈವವ, ಅವಸರ ಬಂದರೆ ಮಾರುವ ದೈವವ, ಅಂಜಿಕೆಯಾದರೆ ಹೂಳುವ ದೈವಗಳೇ (ಸ.ವ.ಸಂ.೧: ವ.೫೫೭) ತುಂಬಿಕೊಂಡಿರುವುದನ್ನು ನೋಡಿ ಬಸವಣ್ಣನವರು ಕನಲುತ್ತಾರೆ. ಇಂತಹ ತರತಮಭಾವದಿಂದ ಕೂಡಿದ ಸಮಾಜವನ್ನು ಕಂಡ ಬಸವಣ್ಣನವರು ಅದನ್ನು ಸರಿದಾರಿಗೆ ತರುವಲ್ಲಿ ಅಹರ್ನಿಷಿ ದುಡಿದರು. ಅವರ ಎಲ್ಲ ವಚನಗಳಲ್ಲಿ ಈ ಪ್ರಯತ್ನಗಳನ್ನು ಕಂಡುಕೊಳ್ಳಬಹುದು. ಬಸವಣ್ಣನವರ ಮನೋಧರ್ಮ, ಸಂಘರ್ಷ, ಹೋರಾಟಗಳು ಭಾಗಶಃ ಬಸವಪುರಾಣದಲ್ಲಿ ಎಡೆಪಡೆದಿವೆ. ಬಸವಣ್ಣನವರ ಜೀವನಮೌಲ್ಯಗಳು ಅವರ ವಚನಗಳಲ್ಲಿ ಕಾಣಬರುವಂತೆ ಅವರನ್ನು ಕುರಿತ ಪುರಾಣಗಳಲ್ಲಿ ಕಂಡುಬರುವುದಿಲ್ಲ. ಎಂಬ ವಿದ್ಯಾಶಂಕರರವರ ಮಾತು ನಿಜ ಎಂದು ಹೇಳಬಹುದು. ಏಕೆಂದರೆ ಬಸವಣ್ಣನವರನ್ನು ನೋಡುವ, ಅರ್ಥೈಸುವ ರೀತಿ ಕಾಲದ ಉರುಳುವಿಕೆಯಲ್ಲಿ ವಿಶೇಷವಾಗಿ ಬದಲಾಗಿದೆ.

ಮಹಾತ್ಮರೆಲ್ಲರೂ ವಾಸ್ತವ ಬದುಕಿನಲ್ಲಿ ಉಸಿರಾಡಿದ ಮಾನುಷ ಜೀವಿಗಳೇ! ಆತ್ಮ ಸಂಸ್ಕಾರಗೊಂಡು ಬದುಕಿನಲ್ಲಿ ಸತ್‌ಶ್ರದ್ಧೆ, ಸತ್‌ಸಂಕಲ್ಪ, ಭಿನ್ನವಿಲ್ಲದ ನಡೆನುಡಿ, ಆದರ್ಶಪೂರ್ಣವಾದ ಯತ್ನ ಹಾಗೂ ಮಾನವ ಜನಾಂಗದ ಸರ್ವಾಂಗೀಣ ಏಳಿಗೆಯ ಚಿಂತನೆ ಇವೇ ಮೊದಲಾದುವುಗಳನ್ನು ಅಳವಡಿಸಿಕೊಂಡು ಬಾಳಿದಾಗ ಲೋಕದ ಕಣ್ಣಿಗೆ ಅಂತಹ ವ್ಯಕ್ತಿ ಭಿನ್ನವಾಗಿ ಕಾಣಬರುತ್ತಾನೆ. ದುಃಖಮಯವಾಗಿರುವ ಬದುಕಿಗೆ ಪರಿಹಾರವನ್ನು ಯಾವಾತ ಕಾಣಿಸುತ್ತಾನೋ ಅವನು ಪ್ರಾಪಂಚಿಕ ನೆಲೆಯಲ್ಲಿ ಪೂಜ್ಯನಾಗುತ್ತಾನೆ; ಅತಿಮಾನುಷನಾಗುತ್ತಾನೆ; ದೈವಮಾನವನಾಗುತ್ತಾನೆ. ಕಾಲದಿಂದ ಕಾಲಕ್ಕೆ ಜನರಲ್ಲಿ ಬೆಳೆದು ಬಂದ ಈ ನಂಬುಗೆ, ಭಕ್ತಿ ಇವುಗಳೇ ಕಥಾರೂಪದಲ್ಲಿ ಸುತ್ತಮುತ್ತ ಹರಡಿಕೊಳ್ಳುತ್ತವೆ. ಘಟನಾಪ್ರಧಾನವಾದ ಈ ಕಥೆಗಳು ಭಕ್ತರ ಚಿತ್ತಭೂಮಿಯಲ್ಲಿ ಮೊಳೆತು ಪಲ್ಲವಿಸುತ್ತವೆ. "ಓರ್ವ ಮಹಿಮಾಪುರುಷ ತನ್ನ ಬದುಕು ಮಣಿಹಗಳಿಂದ ಸಮಕಾಲೀನ ಸಾಮಾಜಿಕ ಜೀವನದ ಮೇಲೆ ಹೀಗೆ ಮಹತ್ತರವಾದ ಪರಿಣಾಮವನ್ನು ಬೀರಿದಾಗ, ಸಹಜವಾಗಿ ಅವನ ಸ್ಥಾನ ಮಾನಗಳು ದೈವತ್ವಕ್ಕೇರುತ್ತವೆ. ತೀವ್ರ ಸಂವೇದನಾಶೀಲವಾದ ಕವಿಮನಸ್ಸು ದೇವಲೋಕಕ್ಕೂ ಮರ್ತ್ಯಲೋಕಕ್ಕೂ ಸಂಬಂಧ ಕಲ್ಪಿಸುತ್ತದೆ. ಹಾಗೆಯೇ, ವ್ಯಕ್ತಿಯ ಬದುಕನ್ನು ವಿಜೃಂಭಿಸಲು ಪೌರಾಣಿಕ ಕಥಾಚೌಕಟ್ಟಿಗೆ ಹೊಂದಿಸುವ ಹಾಗೂ ಅಲೌಕಿಕವಾಗಿ ಚಿತ್ರಿಸುವ ಪ್ರಯತ್ನ ನಡೆಸುತ್ತದೆ. ಇದರಿಂದ ವಸ್ತುನಿಷ್ಠವಾಗುವ ಬದಲು ಭಾವನಿಷ್ಠವಾಗುವ ಕವಿಪ್ರಜ್ಞೆ ವ್ಯಕ್ತಿಯ ಬದುಕನ್ನು ಕಾರಣಿಕವಾಗಿಸುವ, ಉದಾತ್ತೀಕರಿಸುವ, ಆದರ್ಶೀಕರಿಸುವ, ವೈಭವೀಕರಿಸುವ, ಭಾವನತ್ಮಕ ಸಂಬಂಧವನ್ನು ಬೆಸೆಯುವ ಕಡೆಗೆ ಹೊರಳುತ್ತದೆ. ಹಾಗೆಯೇ ತನ್ನ ಕಾಲದ ಆಶಯಗಳಿಗೆ ದನಿ ಕೊಡುತ್ತಾನೆ". ಆದ್ದರಿಂದಲೆ ಈ ದಿಸೆಯಲ್ಲಿ ಬಸವಣ್ಣನವರ ಕಾಲದ ಭವ್ಯ ಸಾಮಾಜಿಕ ಜೀವನದ ಹೊಳಹುಗಳು ಪುರಾಣಗಳಲ್ಲಿ ಅಲ್ಲಲ್ಲಿ ಗೋಚರವಾಗುತ್ತವೆ. ಅತ್ಯಂತ ಸಂಕೀರ್ಣವಾದ ಮುಖ್ಯವಾದ ಸಾಮಾಜಿಕ ಅಂಶಗಳನ್ನು ಅಧ್ಯಯನ ಮಾಡುವ ಪ್ರಯತ್ನವನ್ನಿಲ್ಲಿ ಮಾಡಲಾಗಿದೆ.

(ಅ) ವರ್ಣ–ವೃತ್ತಿ ,ಭಕ್ತ–ಭವಿ :

ಬಸವಣ್ಣನವರು "ಕಾಸಿ ಕಮ್ಮಾರನಾದ, ಬೀಸಿ ಮಡಿವಾಳನಾದ,ಹಾಸನಿಕ್ಕಿ ಸಾಲಿಗನಾದ" ಎಂಬಲ್ಲಿ ವೃತ್ತಿಗಳೇ ಜಾತಿಗಳಿಗೆ ಪ್ರಮುಖ ಆಧಾರಗಳು ಎಂಬ ಸೂಚನೆ ಸಿಗುತ್ತದೆ. ಋಗ್ವೇದದ ಕಾಲದಲ್ಲಿ ಈ ವರ್ಣಭೇದದ ಕುರುಹುಗಳೇ ಇಲ್ಲ. (ನಾರಾಯಣ ಪಿ.ವಿ. ೧೯೮೩: ಪು.೫೯) ಮುಂದೆ ಬರುಬರುತ್ತ ಸಮಾಜವು ಅನೇಕ ರೀತಿಯ ಸ್ಥಿತ್ಯಂತರಗಳಿಗೊಳಪಟ್ಟು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ಪ್ರಧಾನ ವರ್ಣಗಳು ವಿಸ್ತಾರಗೊಂಡು ಜಾತಿಗಳಾಗಿ ಬೆಳದು ಬಂದವು. ಋಗ್ವೇದದಲ್ಲಿ ದೊರೆಯುವ ಆಧಾರಗಳಿಂದ ಹೇಳುವುದಾದರೆ ಆಗಿನ ಸಮಾಜವು ಮೂರು ಹಂತಗಳಲ್ಲಿ ವ್ಯವಸ್ಥೆಗೊಳಿಸಲ್ಪಟ್ಟಿತ್ತು. ಈ ವರ್ಗೀಕರಣವು ವೃತ್ತಿಗೆ ಅನುಗುಣವಾಗಿ ನಡೆದಿತ್ತು. ಧರ್ಮ ಪರವಾದ ವೃತ್ತಿಗಳು, ರಾಜಕೀಯ ಮತ್ತು ಸೈನಿಕ ವೃತ್ತಿಗಳು (ಅದೇ)

ವೃತ್ತಿಗಳಲ್ಲಿ ಉಪವೃತ್ತಿಗಳು ಹುಟ್ಟಿಕೊಂಡಂತೆ ಉಪಜಾತಿಗಳು ಹುಟ್ಟಿಕೊಂಡವು. ನಮ್ಮ ದೇಶದಲ್ಲಿ ಜಾತಿಜಾಲ ಬೆಳದು ನಿಂತಿತು. ಅಷ್ಟೇ ಅಲ್ಲ ಅವುಗಳಲ್ಲಿ ತಾರತಮ್ಯ ಏರ್ಪಟ್ಟಿತು. ಈ ತಾರತಮ್ಯದ ನಿವಾರಣೆಯೇ ವಚನಕಾರರ ಆದ್ಯ ಧೋರಣೆಯಾಗಿತ್ತು. ಭೀಮಕವಿಯ ಬಸವಪುರಾಣದಲ್ಲಿ ಈ ಕಿಡಿಗಳು ಅಲ್ಲಲ್ಲಿ ಗೋಚರವಾಗುತ್ತವೆ.

ಬಸವಪುರಾಣದಲ್ಲಿ ನಾಲ್ಕು ವರ್ಣ ಹಾಗೂ ಜಾತಿಗಳ ಉಲ್ಲೇಖವಿದೆ. ಶಿವಶರಣರು ವರ್ಣವಿರೋಧಿಗಳು. ಅವರು ಜಾತಿಗಳನ್ನು ವೃತ್ತಿ ಆಧಾರದಲ್ಲಿ ಒಪ್ಪುತ್ತಾರೆ. ಸೊಡ್ಡಳ ಚಾಚರಸನು ಒಂದು ವಚನದಲ್ಲಿ–

> **"ಶಿಖಿ ಬ್ರಾಹ್ಮಣ, ನಯನ ಕ್ಷತ್ರಿಯ, ನಾಸಿಕ ಬಣಜಿಗ,ಅಧರ**
> **ಒಕ್ಕಲಿಗ, ಕರ್ಣ ಗೊಲ್ಲ ,ಕೊರಳು ಕುಂಬಾರ, ಬಾಹು ಪಾಂಚಾಳ,**
> **ಅಂಗೈ ಉಪ್ಪಾರ, ನಖ ನಾಯಿದ, ಒಡಲು ಡೊಂಬ, ಬೆನ್ನು ಅಗಸ**
> **ಚರ್ಮ ಜಾಡ, ಪೃಷ್ಠಸ್ಥಾನ ಕಬ್ಬಲಿಗ, ಒಳದೊಡೆ ಹೊಲೆಯ,**
> **ಮೊಣಕಾಲು ಈಡಿಗ, ಕಣಕಾಲು ಸಮಗಾರ, ಮೇಗಾಲು ಮಚ್ಚಿಗ,**
> **ಚಲಪಾದವೆಂಬ ಅಂಗಾಲು ಶುದ್ಧಮಾದಿಗ ಕಾಣಿರೋ".** (ವ. ೮೬)

ಈ ವಚನದಲ್ಲಿ ಎದ್ದು ಕಾಣುವ ಹದಿನೆಂಟು ಜಾತಿಗಳು ವೃತ್ತಿಯ ಹಿನ್ನೆಲೆಯಲ್ಲಿ ಸೂಚಿತವಾದದ್ದನ್ನು ಕಾಣಬಹುದು. ಈ ಹದಿನೆಂಟು ವೃತ್ತಿಗಳ ಜನಸಮುದಾಯವನ್ನು ವಚನಕಾರರು ಭಕ್ತ–ಭವಿ ಎಂದು ಎರಡು ಗುಂಪುಗಳಾಗಿ ವರ್ಗೀಕರಿಸುತ್ತಾರೆ. "ವೈಯುಕ್ತಿಕವಾಗಿ ಲಿಂಗಸ್ವರೂಪಿಯೂ ಸಾಮಾಜಿಕವಾಗಿ ವರ್ಣ, ವರ್ಗ ತರತಮಗಳನ್ನು ನಿರಾಕರಿಸುವವನೂ ಭಕ್ತ; ಇದಕ್ಕೆ ವಿರೋಧಿಯಾದವನು ಭವಿ" ಎಂಬ ನಿಲುವನ್ನು ವಚನಗಳಲ್ಲಿ ಕಾಣಬುಹುದು. (ಪಾಟೀಲ ಸದಾನಂದ, ೧೯೯೯: ಪು.೩೨)

ವಚನಕಾರರ ಈ ನಿಲುವುಗಳನ್ನಾಧರಿಸಿಯೇ ಭೀಮಕವಿ ತನ್ನ ಪುರಾಣದಲ್ಲಿ ವರ್ಣ, ಜಾತಿ ಮುಂತಾದ ಅಂಶಗಳನ್ನು ಪ್ರಸ್ತುತಪಡಿಸುತ್ತಾನೆ. ವರ್ಣವ್ಯವಸ್ಥೆ ಭೀಮಕವಿಯ ಕಾಲದಲ್ಲೂ ಗಟ್ಟಿಗೊಂಡಿತ್ತು. ವೈಷ್ಣವರು, ವಿಪ್ರರು, ದ್ವಿಜರು ಎಂಬ ಹೆಸರಿನಿಂದ ಬ್ರಾಹ್ಮಣ ವ್ಯವಸ್ಥೆ ಪ್ರಬಲವಾಗಿತ್ತು. ವೇದ, ಶಾಸ್ತ್ರ , ಪುರಾಣ, ಆಗಮ ಯಜ್ಞವಿಧಿಯಿಂದ ನಡೆಯುವವರು ಬ್ರಾಹ್ಮಣರೆಂದೂ, ಇದಕ್ಕೆ ವಿರುದ್ಧವಾದ ಜನವರ್ಗವನ್ನು ವರ್ಣವ್ಯವಸ್ಥೆಯನ್ನು ಪಲ್ಲಟಿಸುವವರೆಂದೂ ಅರಸುಸಹಿತ ಬ್ರಾಹ್ಮಣವರ್ಗ ಬಲವಾಗಿ ನಂಬಿತ್ತು; ಮತ್ತೂ ಅದರ ಮುಂದುವರಿಕೆಗಾಗಿ ಹೆಣಗುತ್ತಿತ್ತು. ಶಿವಭಕ್ತರು ಹಾಗೂ ಬ್ರಾಹ್ಮಣವರ್ಗದ ಮಧ್ಯ ಸಮಾಜದಲ್ಲಿ ಸಂಘರ್ಷದ ವಾತಾವರಣ,ದ್ವೇಷಮಯ ಪರಿಸ್ಥಿತಿ ಜೀವಂತವಿದ್ದ ಉದಾಹರಣೆಗಳು ಪುರಾಣದಲ್ಲಿ ದೊರೆಯುತ್ತವೆ. ಅರಸನನ್ನೊಳಗೊಂಡು ಇಡೀ ಬ್ರಾಹ್ಮಣವರ್ಗ ಶಿವಭಕ್ತರ ವಿರುದ್ಧವಾಗಿತ್ತು. ಬ್ರಾಹ್ಮಣ ಶೂದ್ರ ಸಂಘರ್ಷದಲ್ಲಿ ಕ್ಷತ್ರಿಯರಾಜ ಸಂಧಾನ, ನ್ಯಾಯದಾನ ನಡೆಸುತ್ತಿದ್ದರೂ ಅವರು ಕೊನೆಗೆ ಬ್ರಾಹ್ಮಣಪರ ಏಕಮುಖಿ ನಿರ್ಣಯ ಪ್ರಕಟಿಸುತ್ತಿದ್ದರು. ಅಂತಿಮವಾಗಿ ಗೆಲುವು ಮಾತ್ರ ವರ್ಣವ್ಯವಸ್ಥೆಯ ಪೋಷಕರದೇ ಆಗಿರುತ್ತಿತ್ತು.

ಇದಕ್ಕೆ ಸಾಕ್ಷಿಯೆಂಬಂತೆ ಅನೇಕ ಸಂದರ್ಭಗಳಲ್ಲಿ ಬಿಜ್ಜಳ ವರ್ತಿಸಿದ್ದುದು ಬಸವಪುರಾಣದಲ್ಲಿ ಕಂಡುಬರುತ್ತದೆ.

ಭೀಮಕವಿಯು ಅಷ್ಟಾದಶ ಜಾತಿಗಳನ್ನು ವಿವರಿಸದಿದ್ದರೂ ಇವುಗಳ ಸಂಖ್ಯೆಯನ್ನು ಉಲ್ಲೇಖಿಸಿದ್ದಾನೆ. ಶಿವನಾಗಮಯ್ಯಗಳ ಕಥೆಯಲ್ಲಿ "ಆ ಕುಲಂಗಳ ಮಾತವೇತಕೆ ಲೋಕನಾಥ ಪ್ರೋಕ್ತವಾದ ಪ್ರಾಕಟದ ಜಾತಿಗಳಲಾ ಅಷ್ಟಾದಶಂಗಳವ" (೫೪: ೨೦) ಎಂಬ ಮಾತುಗಳು ಕವಿಯು ಹದಿನೆಂಟು ಜಾತಿಗಳನ್ನು ಒಪ್ಪಿಕೊಂಡಂತೆ ಕಾಣುತ್ತದೆ. "ಹದಿನೆಂಟು ವರ್ಣಾನೀಕರೆಲ್ಲ ಭಕ್ತಲೋಕವೆ ಕುಲವಲಾ ದಿಟಕೆ" (ಅದೇ) ಎಂಬ ಕವಿಯ ನುಡಿಗಳು ಜಾತಿವರ್ಣಗಳನ್ನು ಸಮಾನವಾಗಿ ಭಾವಿಸಿದಂತೆ ತೋರುತ್ತದೆ.

ವರ್ಣವ್ಯವಸ್ಥೆಯ ಪೋಷಣೆ ಅಂದಿನ ಕ್ಷತ್ರಿಯರಾಜರ ಆದ್ಯಕರ್ತವ್ಯವಾಗಿದ್ದಂತೆ ಕಂಡುಬರುತ್ತದೆ. ಏಕೆಂದರೆ ರಾಜ್ಯಭಾರ ಮಾಡುವ ರಾಜರು ಯಾವ ಧರ್ಮೀಯರೂ ಆಗಿರುತ್ತಿದ್ದರು. ಆದರೆ ಇವರಿಗೆ ಸಲಹೆ ಕೊಡಲು ಮಂತ್ರಿಮಹೋದಯರಾಗಿ ಬ್ರಾಹ್ಮಣವರ್ಗವೆ ಅಧಿಕವಾಗಿತ್ತು. ಕಾಳಿಮರಸ, ಕರಿಯಕೇಶವ, ಚೋಳಿಯಣ್ಣ, ಕಸವಮಂತ್ರಿ, ಮೇಳಿಗರಸ, ಕುಂದತಮಿಭೂಪಾಳ ಇವರೆಲ್ಲ ವಿಪ್ರಕುಲಜರಾಗಿ ಬಿಜ್ಜಳನ ಆಸುಪಾಸಿನಲ್ಲಿದ್ದುಕೊಂಡು ವರ್ಣವ್ಯವಸ್ಥೆಯನ್ನು ಕಾಪಾಡುತ್ತಿದ್ದ ಅಂಶ ಬಸವಪುರಾಣದಲ್ಲಿ ವ್ಯಕ್ತವಾಗಿದೆ. (೧೦:೪) ಪ್ರತಾಪನಾರಾಯಣಪುರದಲ್ಲಿ ಬಿಜ್ಜಳ ಹಾಗೂ ಪರವಾದಿಗಳು ಸೇರಿ ಕಟ್ಟಿಸಿದ ದೇವಾಲಯದಲ್ಲಿ ಪ್ರತಿಷ್ಠಾಪಿಸಿದ ಗೋವಿಂದಪ್ರತಿಮೆಯನ್ನು ನೋಡಲು ಬರಲಿಲ್ಲವೆಂದು ಆಧ್ಯತೆಯಿಂದ ವಿಪ್ರರ ಪರವಾಗಿ ವಾದಿಸಿದ ಉಲ್ಲೇಖ ಬಸವಪುರಾಣದಲ್ಲಿ ಬರುತ್ತದೆ. (೫೨: ೩೨)

ಶಿವನಾಗಮಯ್ಯಗಳ ಮನೆಯಲ್ಲಿ ಬಸವಣ್ಣನವರು ಉಂಡರೆಂದು ವೈಷ್ಣವರ ಬೇಹಿನವನು ಬ್ರಾಹ್ಮಣರಿಗೆ ಅರುಹುತ್ತಾನೆ. ಇಡೀ ವಿಪ್ರಕುಲವೆ ಬಿಜ್ಜಳನಲ್ಲಿಗೆ ಬಂದು "ಪಟ್ಟಬದ್ಧನೆ ಚಿತ್ತಯಿಸು ಕುಲಗೆಟ್ಟು ವಿಪ್ರಾಚಾರಮಂ ನೆಜೆಬಿಟ್ಟು ನಾಚಿಕೆಯುಳಿದುಳಿದು" (೫೪:೩) ಎಂದು ತಿಳಿಸುತ್ತಾರೆ. ಮುಂದುವರೆದು ಬಸವಣ್ಣನವರು ಹೊಲಗೇರಿಗೆ ಹೋಗಿದ್ದಲ್ಲದೆ ಅವರ ಮನೆಯಲ್ಲುಂಡದ್ದು ಮಹಾಪರಾಧವೆನ್ನುವಂತೆ ಅರಸನಿಗೆ ಹೇಳುತ್ತಾರೆ. "ಹಿರಿಯ ಭಕ್ತರು ಹಿರಿಯ ಭಕ್ತರು ಹಿರಿಯ ಭಕ್ತರೆನುತ್ತವವರಂ ಹಿರಿದು ಮುನ್ನಿಪವನವಂ ಕಾಲ್ಗಳ ಮೇಲೆ ಬೀಳುವನು ಮರಳಿ ತಾನವರುಂಡು ಮಿಕ್ಕುದನಿರದೆ ಕೊಂಬನು ಕೈಯನಾಂತೋ ಸರಿಸದನುದಿನವವರನೇ ಕೊಂಡಾಡುವಂ ಬಳಿಕ" (೫೪: ೪) ಎಂದು ದೂರು ಹೇಳುತ್ತಾರೆ. ಅರಸು ಬಿಜ್ಜಳ ವಿಪ್ರರ ಅಭಿಪ್ರಾಯಕ್ಕೆ ಮಣಿದು ರಾಜಾಂಗಣವು ಅಪವಿತ್ರವಾಗುವುದೆಂದು ಬಯಲು ಓಲಗ ನಡೆಸಿ ಬಸವಣ್ಣನವರನ್ನು ವಿಚಾರಣೆಗೆ ಕರೆಸುತ್ತಾನೆ. ಶೂದ್ರವರ್ಗವನ್ನು ಶೂದ್ರೇತರರು ಕಾಣುವ ನಿಕೃಷ್ಟತೆಯೊಂದಿಗೆ ಬಸವಣ್ಣನವರಂತಹ ಉನ್ನತ ಕುಲಜನನ್ನು ಧರ್ಮದ್ರೋಹಿ ಅಸ್ಪೃಶ್ಯನೆಂಬಂತೆ ಬ್ರಾಹ್ಮಣಕ್ಷತ್ರಿಯ ವರ್ಗವು ಕಾಣುವುದನ್ನು ಇಲ್ಲಿ ಗಮನಿಸಬೇಕು. ಬ್ರಾಹ್ಮಣಸಮುದಾಯವು ನಿಂದೆಯ ಸಂದರ್ಭದಲ್ಲಿ

'ಹೊಲೆಯ', 'ಹೊಲಗೇರಿ,' 'ಹೊಲಗೆಲಸು'(೫ಳ: ೫) ಎಂಬ ಪದಗಳನ್ನು ಅತ್ಯಂತ ಸಹಜವಾಗಿ ಬಳಸುವುದನ್ನು ಬಸವಪುರಾಣದಲ್ಲಿ ಕಾಣಬಹುದು. ಆದರೆ ಶಿವಶರಣರು ಮಾತ್ರ 'ಹಿರಿಯಕೇರಿ', 'ಹಿರಿಯ ಮಾಹೇಶ್ವರರು' ಎಂದು ಅಸ್ಪೃಶ್ಯ ಸಮುದಾಯವನ್ನು ಗೌರವಪೂರ್ವಕವಾಗಿ ಕರೆಯುತ್ತಿದ್ದರು. ಈ ಪ್ರಕರಣದಲ್ಲಿ ಬಿಜ್ಜಳನು ಬಸವಣ್ಣನಿಗೆ "ಸಲುವಷ್ಟಾದಶವಿವರ ವರ್ಣಂಗಳಾದಿಯಲಿ ಇಳೆಯೊಳಿದು ತಾನೀಗಲಾದವೆ ಹೊಲಗೆಲಸಿ ಕುಲಸಂಕರವನಗ್ಗಳಿಸಿ ಈ ಕಲ್ಯಾಣ ಕಟಕವನಿಂತು ಕೆಡಿಸುವರೆ" (೫ಳ: ೧೨) ಎಂದು ಪ್ರಶ್ನಿಸುತ್ತಾನೆ. ಅಂದರೆ ಹಿಂದಿನಿಂದ ಬೆಳೆದುಕೊಂಡು ಬಂದ ವೃತ್ತಿಗಳನ್ನು, ವೃತ್ತಿಯ ಹಿನ್ನೆಲೆಯಲ್ಲಿರುವ ಸಾಮಾಜಿಕ ತರತಮ ಸ್ಥಾನಮಾನಗಳನ್ನು ಒಂದಿಷ್ಟೂ ಬದಲಿಸದೆ ಕಾಪಾಡಿಕೊಂಡು ಬರುವ ಇಚ್ಛೆ ಬಿಜ್ಜಳನ ಈ ಮಾತಿನಲ್ಲಡಗಿದ ಧ್ವನಿಯಾಗಿದೆ. ಇದುವೆ ವರ್ಣವ್ಯವಸ್ಥೆಯ ಮೂಲ ಮಂತ್ರವೆಂಬುದನ್ನು ಭೀಮಕವಿ ಸ್ಪಷ್ಟಪಡಿಸುತ್ತಾನೆ.

ಒಟ್ಟಾರೆ ಈ ಸಂದರ್ಭದಲ್ಲಿ ಹಿಂದುಳಿದ ಜಾತಿಯವನಾಗಿ ಹುಟ್ಟಿ ಶಿವಭಕ್ತೋತ್ತಮನಾದ ಶಿವನಾಗಮಯ್ಯ ನನ್ನು ಬಸವಣ್ಣ ಪ್ರಶಂಸಿಸಿ, ಅವರೊಡನೆ ಕೂಡಿರ್ದು, ಕೂಡುಂಡುದರ ವಿವರಗಳನ್ನು ಕೊಡಲಾಗಿದೆ. ಅಸ್ಪೃಶ್ಯೋದ್ಧಾರದ ಬಗೆಗೆ ಬಸವಣ್ಣನವರ ನಿಲುವನ್ನು ಇಲ್ಲಿ ವಿವರಿಸಲಾಗಿದೆ. ವೈಷ್ಣವರು ಬಿಜ್ಜಳನಿಗೆ ಬಸವಣ್ಣನವರ ಹಾಗೂ ಶಿವನಾಗಮಯ್ಯನ ಸಂಬಂಧದಿಂದಾಗಿ ವರ್ಣವ್ಯವಸ್ಥೆ, ಧರ್ಮ, ನೀತಿ ಹಾಳಾದುವು ಎಂದು ಚಾಡಿ ಹೇಳಿ ಅದರಿಂದ ಪಾಪ ಹೆಚ್ಚಾಯಿತೆಂದೂ, ಅವರ ಕುಲ ಕೆಟ್ಟಿತೆಂದೂ ವಾದಿಸಿದಾಗ ಆ ವಾದವನ್ನು ಸಾಧಾರವಾಗಿ ಖಂಡಿಸಿ, ಹಾವಿನಹಾಳ ಕಲ್ಲಯ್ಯನು ನಾಯಿ ಯಿಂದ ವೇದವನ್ನು ನುಡಿಸಿದನೆಂದು ಹೇಳಿದ್ದಾರೆ. (ಸಂ.೫ಳ)

ಗೊಬ್ಬೂರಲ್ಲಿಯ ಬಿಬ್ಬಿಬಾಚಯ್ಯಗಳ ಕಥೆಯಲ್ಲಿ ಉಕ್ತವಾಗಿರುವ "ಗುಡ್ಡ ಹರಿಗಳು, ದೊಡ್ಡ ರಾಮರು, ಹೆಡ್ಡ ದಾಮೋದರರು, ದೊಡ್ಡ ಹೊಟ್ಟೆಯ ಮಾಧವನು, ಗಡ್ಡದಾದಿತ್ಯರು, ಹೊಟ್ಟೆಯ ಅಚ್ಯುತರು, ಭಾಸ್ಕರನು, ಪಟ್ಟವರ್ಧನ ನಾರಸಿಂಹನು, ಭಟ್ಟರಪ್ಪಣ್ಣಗಳು, ಯಜ್ಞಶರ್ಮರು, ಆಗಮೀಕರು, ಸೋಮಯಾಜಿಗಳು, ವಿಷ್ಣುಸ್ವಾಮಿಗಳು, ಸಾಮವೇದಿಗಳು, (೫೫: ೩೩/೩೬) ಉಪಾಧ್ಯರು, ದೀಕ್ಷಿತರು, ಉರವಾದಿತ್ಯಭಟ್ಟರು" (೫ಳ: ೧೬/೧೭) "ಈ ಎಲ್ಲಾ ಹೆಸರುಗಳು ದಟ್ಟವಾದ ಬ್ರಾಹ್ಮಣ ಪರಿಸರ ಕುರಿತು ವಿವರಿಸುತ್ತವೆ.

ಬಸವಣ್ಣನವರ ವೈದಿಕವಿರೋಧಿ ನೀತಿಯನ್ನು ಕವಿಯು ಅತ್ಯಂತ ಪರಿಣಾಮಕಾರಿಯಾಗಿ ಈ ಭಾಗದಲ್ಲಿ ಚಿತ್ರಿಸಿ ಪ್ರಸಾದಮಹಿಮೆ ಸಂದರ್ಭದಲ್ಲಿ ಅವರು ಭಂಗಪಟ್ಟುದನ್ನು ವಿವರಿಸಿದ್ದಾನೆ. ಹೀಗೆ ವರ್ಣವ್ಯವಸ್ಥೆಯ ಪೋಷಕರಾಗಿ ಅದರ ಮುಂದುವರಿಕೆಗಾಗಿ ಹೆಣಗುತ್ತಿರುವ ಬ್ರಾಹ್ಮಣ,ಕ್ಷತ್ರಿಯ ವರ್ಗವನ್ನು ಭವಿಗಳೆಂದೂ, ಅವುಗಳಿಗೆ ವಿರೋಧ ಒಡ್ಡುವವರನ್ನು ಭಕ್ತರೆಂದೂ ಪರಿಗಣಿಸುವ ಮಾಹಿತಿ ಭೀಮಕವಿಯ ಬಸವಪುರಾಣದಲ್ಲಿ ದೊರೆಯುತ್ತದೆ.

ಆ. ಅಂತ್ಯಜರು :

ಯಾವುದೇ ಸಮಾಜ ಏಣಿಶ್ರೇಣಿಗಳಿಂದ ಕೂಡಿದ್ದು ಅಲ್ಲಿನ ಜನಗಳಲ್ಲಿ ಸ್ಥಾನಮಾನಗಳ ವಿಷಯಗಳಲ್ಲಿ ವ್ಯತ್ಯಾಸಗಳಿದ್ದೇ ಇರುತ್ತವೆ. ಶಕ್ತಿಸಾಮರ್ಥ್ಯಗಳಲ್ಲಿ, ಕೌಶಲ ಕ್ರಿಯಾತ್ಮಕತೆಗಳಲ್ಲಿ ವ್ಯತ್ಯಾಸಗಳಿರುವವರೆಗೂ ಈ ಸಾಮಾಜಿಕ ಏರುಪೇರುಗಳಿದ್ದೇ ಇರುತ್ತವೆ. ಆದರೆ ಹೀಗಿರುವ ಒಂದುಗುಂಪಿನ ಜನರನ್ನು ಮುಟ್ಟಲೂಬಾರದು ಅವರನ್ನು ಸಹಿಸಿಕೊಳ್ಳಬಾರದೆಂಬ ಭಾವನೆ ಬೆಳೆದದ್ದು ವಿಪರ್ಯಾಸ. ಹಿಂದೂಧರ್ಮ ಬೆಳೆಸಿಕೊಂಡು ಬಂದ ಲಜ್ಜಾಸ್ಪದ ಕಳಂಕ ಈ ಜಾತೀಯತೆ ಮತ್ತು ಅಸ್ಪೃಶ್ಯತೆ. ನಾಯಿ ಬೆಕ್ಕುಗಳನ್ನು ಮನೆಯ ಒಳಗೆ ಬಿಟ್ಟುಕೊಳ್ಳುವ ಜನರು ಅಸ್ಪೃಶ್ಯರೆಂಬ ಕಾರಣಕ್ಕೆ ಮನುಷ್ಯರನ್ನು ಮನಸ್ಸಿನ ಒಳಗೆ ಬಿಟ್ಟುಕೊಳ್ಳದಿರುವುದು ಘೋರ ದುರಂತವೆಂದೇ ಹೇಳಬೇಕು. "ಈ ರೀತಿಯ ಭಾವನೆಗಳು ಎಂದಿನಿಂದ ಬೆಳೆದು ಬಂದಿಂತೆಂದು ಹೇಳುವುದು ಕಷ್ಟ. ಆದರೆ ಈ ರೀತಿ ಒಂದು ವರ್ಗದ ಜನರನ್ನು ಅಸ್ಪೃಶ್ಯರೆಂದು ದೂರವಿರಿಸಿದುದು ಐತಿಹಾಸಿಕವಾಗಿ ಈಚೆಗೆ ಎನ್ನಬಹುದಾದ ಕಾಲದಿಂದ" (ನಾರಾಯಣ ಪಿ.ವಿ. ೧೯೮೩: ಪು.೭೨) ಎಂದು ಪಿ.ವಿ. ನಾರಾಯಣ ಹೇಳುತ್ತಾರೆ. ಇಂತಹವರು ಊರಿನ ಹೊರಗೆ ವಾಸಮಾಡುತ್ತಿದ್ದು ಇವರ ಕೇರಿಯನ್ನು ಹೊಲಗೇರಿ ಎಂದು ಕರೆಯಲಾಗುತ್ತಿತ್ತು. 'ಹೊಲೆಯ', (೫೪:೫೮) 'ಹೊಲಗೆಲಸಿ' (೫೪:೧೨) ಇವುಗಳು ಬೈಗುಳ ರೂಪವಾಗಿ, ಜಾತಿಸೂಚಕವಾಗಿ ಪ್ರಚಲಿತವಿದ್ದ ಅಂಶಗಳು ಭೀಮಕವಿಯ ಬಸವಪುರಾಣದಲ್ಲಿ ಕಾಣಸಿಗುತ್ತವೆ. ಬಸವಾದಿಗಳು ಇವರನ್ನು ಹಿರಿಯಭಕ್ತರು,(೫೪:೪) 'ಮಾಹೇಶ್ವರರು'(೫೪:೮೪) ಎಂದು ಕರೆದ ಉದಾಹರಣೆಗಳು ಬಸವಪುರಾಣದಲ್ಲಿ ದೊರೆಯುತ್ತವೆ. ಇವರು ಲಿಂಗಧಾರಿಗಳಾಗುವ ಮೂಲಕ ಸಾಮಾಜಿಕ ಸ್ಥಾನವನ್ನು ಪಡೆಯುತ್ತಿದ್ದರು. ಇಂತಹ ಸಂದರ್ಭದಲ್ಲಿ ಪೂರ್ವಕುಲವನ್ನು ಅರಸಿ ಅವರನ್ನು ಹೀಯಾಳಿಸುವ ಪ್ರವೃತ್ತಿ ಬ್ರಾಹ್ಮಣರನೇಕರಲ್ಲಿ ಕಂಡುಬರುತ್ತದೆ. ಕೈಯ್ಯಲ್ಲಿ ಕೋಲೊಂದನ್ನು ಹಿಡಿದು ದಾರಿಯಲ್ಲಿ ಕುಟ್ಟುತ್ತ ಬರುವ ಮೂಲಕ ತಮ್ಮ ಅಸ್ಪೃಶ್ಯತೆಯನ್ನು ತಾವೇ ಸೂಚಿಸುವ ಪದ್ಧತಿ ಇತ್ತು. ಅದಕ್ಕೆ ಸಂಬಳಿಗೋಲು, (ನಾರಾಯಣ ಪಿ.ವಿ.೧೯೮೩: ಪು.೪೬) ಹಿಡಿಗೋಲು, ಕಂಕರಿಗೋಲು ಎನ್ನುತ್ತಿದ್ದರು. (ಅದೇ) "ಹದುಳಿರಿಸಿಕೊಂಡಿದ್ದ ಭಕ್ತನು ಮದಿಸಿ ಪುರವೀದಿಯಲಿ ಬರುತಂ ಬೆದಱ ಸಂಬೋಳಿಯನ್ನನೆಮ್ಮನಿನಿತು ಬಗೆಗೊಳ್ಳ" (೫೪:೫) ಎಂಬಲ್ಲಿ ಶಿವನಾಗಮಯ್ಯನು ಅಸ್ಪೃಶ್ಯನಾದ ತಾನು ಬರುತ್ತಿದ್ದೇನೆಂಬುದರ ಸಂಕೇತವಾಗಿ ಸಂಬಳಿಗೋಲನ್ನು ಹಿಡಿದಿದ್ದನೆಂಬ ವಿವರಣೆಯನ್ನು ಕೊಡುತ್ತಾನೆ. ಹೊಲೆಯರ ವೇಷವು ಸಮಾಜದಲ್ಲಿ ಸ್ಪಷ್ಟವಾಗಿ ಗುರುತಿಸಲ್ಪಡಬೇಕೆಂಬುದು ಇಲ್ಲಿರುವ ಉದ್ದೇಶವಾಗಿದೆ.

ಬ್ರಾಹ್ಮಣರ ಕರ್ಮಗಳೇ ಶ್ರೇಷ್ಠವೆಂಬ ನಂಬಿಕೆ ಬೆಳೆಸಿಕೊಂಡಿದ್ದರಿಂದ ಇಂತವರ ಮನೆಗೆ ಹೋಗುವುದಾಗಲೀ ಅಥವಾ ಇವರು ಉತ್ತಮರೆನಿಸಿಕೊಂಡವರ ಮನೆಗೆ ಬರುವುದಾಗಲಿ 'ನಿಷಿದ್ಧ' ವೆಂಬ ನಂಬಿಕೆಯಿತ್ತು. ಈ ಪರಂಪರಾಗತ ನಂಬಿಕೆಯನ್ನು ಬುಡಮೇಲು

ಮಾಡುವಂತೆ ಬಸವಣ್ಣನವರು ಶಿವನಾಗಮಮಯ್ಯಗಳ ಮನೆಗೆ ಹೋದದ್ದಲ್ಲದೇ ಅವನ ಮನೆಯಲ್ಲಿ ಭೋಜನವನ್ನು ಸ್ವೀಕರಿಸಿ ಅವರನ್ನು ಉತ್ತಮಸ್ಥಿತಿಗೆ ತರುವ ಹಂಬಲ ಬಸವಪುರಾಣದಲ್ಲಿ ಕಂಡುಬರುತ್ತದೆ. ಈ ವಿಷಯ ಅರಸನಿಗೆ ಚಾಡಿಕೋರರಿಂದ ಗೊತ್ತಾಗಿ ಇದನ್ನು ವಿಚಾರಿಸುವ ಮಟ್ಟಕ್ಕೆ ಪ್ರೇರೇಪಿಸುತ್ತಾರೆ. ಶಿವನಾಗಮಯ್ಯನನ್ನೇ ಬಸವಣ್ಣನವರು ದಂಡಿಗೆಯಲ್ಲಿ ಕರೆದುಕೊಂಡು ಬಂದ ಸಂದರ್ಭವಂತೂ ಇಡೀ ವರ್ಣವ್ಯವಸ್ಥೆಯೇ ನಡುಗುವಂತೆ ಮಾಡುತ್ತದೆ. ಬಿಜ್ಜಳ ಕೋಪಾವಿಷ್ಟನಾಗಿ ಅರಮನೆಯ ರಾಜಾಂಗಣದಲ್ಲಿಯೇ ಈ ಕುರಿತು ನ್ಯಾಯವಿಮರ್ಶೆ ಮಾಡುತ್ತಾನೆ. ಆ ಸಂದರ್ಭದಲ್ಲಿ ಬಿಜ್ಜಳನಿಗೂ ಬಸವಣ್ಣನವರ ಮಧ್ಯ ಚರ್ಚೆಯಾಗಿ ಬಸವಣ್ಣನವರ ಮಾತುಗಳು ಜಾತಿ ಯಾವುದಾದರೇನು ಭಕ್ತಕುಲವೇ ಶ್ರೇಷ್ಠವೆಂದು ಹೇಳುತ್ತಾನೆ.

ಆ ಕುಲಂಗಳ ಮಾತವೇತಕೆ
ಲೋಕನಾಥಾ ಪ್ರೋಕ್ತವಾದ
ಪ್ರಾಕಟದ ಜಾತಿಗಳಲಾ ಅಷ್ಟಾದಶಂಗಳವಂ
ಏಕೆ ಹೇಳಲು ಮತ್ತೆ ಮಿಕ್ಕಿನ
ಲೋಕದೊಳು ಪದಿನೆಂಟು ವರ್ಣಾ
ನೀಕರೆಲ್ಲಂ ಭಕ್ತಲೋಕವೆ ಕುಲವಲಾ ದಿಟಕೆ... (ಶಳ: ೨೦)

ಶಿವನಾಗಮಯ್ಯನ ಉಂಗುಟದಿಂದ ಹಾಲು ಸುರಿದ ಸಂಗತಿಗಳು ಲಿಂಗಧಾರಿ ಶಿವಭಕ್ತರು ಮಾತ್ರ ಹೊಲೆಯರಿಗೆ, ಕೆಳವರ್ಗದವರಿಗೆ ಗೌರವ ಕೊಡುತ್ತಿದ್ದರೆಂಬುದು ತಿಳಿದು ಬರುತ್ತದೆ.

ಇ. ಅಸ್ಪೃಶ್ಯ ಬ್ರಾಹ್ಮಣರು :

ಶಿವಶರಣರ ಪ್ರಯತ್ನದಿಂದ ದೇವಾಲಯ ನಿರಾಕರಣೆ ಪದ್ಧತಿಯು ಜಾರಿಗೆ ಬಂದು ತಮ್ಮ ದೇಹವನ್ನು ದೇವಾಲಯವಾಗಿ ಮಾಡಿಕೊಳ್ಳುವ ಪ್ರವೃತ್ತಿಯಿಂದ ಸಮಾಜದಲ್ಲಿ ವ್ಯಕ್ತಿಗೌರವಕ್ಕೆ ಮಹತ್ವ ಬಂದಿತ್ತು. ಸಮಾಜದಲ್ಲಿ ತಾವೇ ಶ್ರೇಷ್ಠರೆಂದು ಬೀಗುವ ಬ್ರಾಹ್ಮಣ ವರ್ಗವನ್ನು ತಿರಸ್ಕರಿಸುವ ಮೂಲಕ ಅವರನ್ನೇ ಅಸ್ಪೃಶ್ಯರೆಂದು ಕಾಣುವ ಮೂಲಕ ಶಿವಭಕ್ತರೆ ಶ್ರೇಷ್ಠರೆಂದು ಸಾಧಿಸುವ ಪ್ರಯತ್ನಗಳು ಬಸವಪುರಾಣದಲ್ಲಿ ಕಂಡುಬರುತ್ತವೆ. 'ಮಾನವ ಜಾತಿ ತಾನೊಂದೆ ವಲಂ' ಎಂದು ಹೇಳಿದ ಆದಿಕವಿ ಪಂಪನಲ್ಲೂ ಸಹ ಈ ಅಸ್ಪೃಶ್ಯವಿರೋಧಿ ಭಾವಗಳು ಕಂಡು ಬಂದಿದ್ದವು. ಇವುಗಳನ್ನು ಸಾರಾಸಗಟಾಗಿ ವಚನಕಾರರು ತಿರಸ್ಕರಿಸಿದ್ದರೂ ಸಹ ಸಾಮಾಜಿಕವಾಗಿ ವರ್ಣಭೇದನೀತಿ ಜಾರಿಯಲ್ಲಿತ್ತು. ಈ ವರ್ಣೀಯರ ಶ್ರೇಷ್ಠತೆಯನ್ನು ಅಲ್ಲಗಳೆಯುವ ಒಂದೆರಡು ನಿದರ್ಶನಗಳು ಪುರಾಣದಲ್ಲಿ ಬಂದಿರುವುದುಂಟು.

ಹಾವಿನಹಾಳ ಕಲ್ಲಯ್ಯನು ಹರರೂಪೇ ಹೊರತು ನರರೂಪನಲ್ಲ. ಅವನ ತೊತ್ತು ಒಮ್ಮೆ ಅಘ್ಘವಣಿಗೆ ಹೋದಾಗ ಸದ್ಬ್ರಾಹ್ಮಣನ ಕೈ ಸೋಂಕಿದುದಕ್ಕೆ ಕೊಡವನ್ನು ಬಿಸಾಡಿ ಒಡೆದು ಹೊಸ ಕೊಡದಲ್ಲಿ ನೀರೊಯ್ದಳು. "ಅನ್ಯರು ಮುಟ್ಟಿದರೆ ಬ್ರಾಹ್ಮಣರಿಗೆ ಮೈಲಿಗೆಯಲ್ಲದೆ ಬ್ರಾಹ್ಮಣರು ಮುಟ್ಟಿದರೆ ಅನ್ಯರಿಗೆ ಮೈಲಿಗೆಯೆ? ಎಂಥ ಧಿಮಾಕು ತೊತ್ತಿಗೆ"

ಎಂದು ಬ್ರಾಹ್ಮಣರು ಕುಪಿತರಾಗಿ ಕಲ್ಲಯ್ಯನಲ್ಲಿ ದೂರುತ್ತಾರೆ. ಆಗ ಕಲ್ಲಯ್ಯನೂ "ಶಿವಭಕ್ತರ ಮನೆಯ ನಾಯಿಯೂ ನಿಮ್ಮನ್ನು ಮುಟ್ಟಕೂಡದು; ದಾಸಿ ಹೇಗೆ ಮುಟ್ಟಿಯಾಳು? ನೀವೆಂಥ ಬ್ರಾಹ್ಮಣರು". (೫೪:೨೭-೪೪) ಎಂದು ಮುಂತಾಗಿ ಖಂಡತುಂಡವಾಗಿ ಹೇಳಿದನು. ಇಲ್ಲಿ ಇಡೀ ಬ್ರಾಹ್ಮಣ್ಯವನ್ನು ನಾಯಿಗಿಂತ ಕಡೆಯಾಗಿ ಕಲ್ಲಯ್ಯ ಕಂಡುದು ಗಮನಾರ್ಹ. ಆ ಮೂಲಕ ಅಂತ್ಯಜರು ಅದರಲ್ಲೂ ತೊತ್ತಿಗಿಂತಲೂ ಅವರು ಕಡೆ ಎಂದು ಭಾವಿಸುವ ಕಲ್ಲಯ್ಯನ ಮನೋಭಾವ ಕ್ರಾಂತಿಕಾರಕವಾದುದು. ಆ ಮೂಲಕ 'ಬ್ರಾಹ್ಮಣರೆ ಅಸ್ಪೃಶ್ಯರು, ಶಿವಭಕ್ತರೆ ಕುಲಜರು' ಎಂಬ ಭಾವ ಘಟ್ಟಿಗೊಂಡಿದ್ದನ್ನು ಗಮನಿಸಬಹುದು.

ಹರಿಗಳ ಅಪ್ಪಣ್ಣನಂತೆ ಬ್ರಾಹ್ಮಣನು ಕುಷ್ಠರೋಗಿಯಾಗಿದ್ದು ಮಾದರ ಧೂಳಯ್ಯನ ಬಚ್ಚಲು ಮೋರಿಯಲ್ಲಿ ಕಾಲಿಟ್ಟು ಕುಷ್ಠರೋಗವನ್ನು ಕಳೆದುಕೊಂಡ ಉದಾಹರಣೆಯೂ ಸಹ ಇದಕ್ಕೆ ಪೂರಕವಾಗುವಂತಿದೆ. ಆ ಮೂಲಕ ಬ್ರಾಹ್ಮಣರನ್ನು ಅಸ್ಪೃಶ್ಯರೆಂದು ಭಾವಿಸಿದಂತಿದೆ. ಸಾಮವೇದಿಯೆಂಬ ಬ್ರಾಹ್ಮಣಶ್ರೇಷ್ಠನು ಆಕಾಶಮಾರ್ಗವಾಗಿ ಹೋಗುತ್ತಿದ್ದ ಸಂದರ್ಭದಲ್ಲಿ ಶ್ವಪಚಯ್ಯನೆಂಬ ಅಂತ್ಯಜನು ಅವನ ದೃಷ್ಟಿ ಬಿದ್ದಿತೆಂದು ಕೆರವಿನಿಂದ ಪಾತ್ರೆಯನ್ನು ಮುಚ್ಚಿದ ಸಂದರ್ಭ ವಿವರಿಸುವ ಕವಿ ಬ್ರಾಹ್ಮಣರನ್ನು ಅಂತ್ಯಜರಂತೆ ವಿವರಿಸಿದ್ದಾನೆ.(೫೬:೧-೪) ಈ ಎಲ್ಲ ಘಟನೆಗಳು ಒಟ್ಟಾರೆ ಗಟ್ಟಿಗೊಂಡ ಸಾಮಾಜಿಕ ನಡುವಳಿಕೆಗಳನ್ನು ಒಪ್ಪಿ ಅವಮಾನಿತರಾಗಿ ಬಾಳುವ ಹೊಲೆಯಾದಿ ಕೆಳವರ್ಗಗಳ ಶೋಷಣೆ ತಪ್ಪಿಸಲು ಸಮಾಜೋ-ಧಾರ್ಮಿಕ ಬದಲಾವಣೆ ಮಾಡಿದ ವಚನಕಾರರ ಉದಾಹರಣೆಯನ್ನು ನೀಡುವ ಮೂಲಕ ಭೀಮಕವಿಯು ಆತನ ಕಾಲದಲ್ಲಿ ಇಂತಹ ಚಟುವಟಿಕೆಗಳು ನಡೆದಿರಬೇಕೆಂಬ ನಂಬಿಕೆಯನ್ನು ಉಂಟು ಮಾಡುತ್ತವೆ. ವರ್ಣಭೇದಕ್ಕೆ ಸಂಬಂಧಿಸಿದ ಹುಟ್ಟು , ವೃತ್ತಿಯಂತಹ ಮುಖ್ಯ ನೆಲೆಗಳನ್ನು ಛಿದ್ರಗೊಳಿಸಿ, ಸಹಭೋಜನ, ವೃತ್ತಿಗೌರವ ಹೊಸದಾಗಿ ಇಟ್ಟ ಹೆಸರು, ಲಿಂಗಧಾರಣೆಯಂತಹ ಕ್ರಮಗಳಿಂದ ಶಿವಭಕ್ತರು ಅಸ್ಪೃಶ್ಯತೆಯನ್ನು ನಿರ್ಮೂಲಗೊಳಿಸಲು ಇಲ್ಲಿ ಪ್ರಯತ್ನಿಸಿದ್ದಾರೆ. "ಘಟನೆಗೆ ಪ್ರತಿಘಟನೆ, ಮೌಲ್ಯಕ್ಕೆ ಪ್ರತಿಮೌಲ್ಯ ನಿರ್ಮಾಣಮಾಡಿ ಕೆಲವು ಸಲ ನೇರವಾಗಿ ಹಾಗೂ ಪರೋಕ್ಷವಾಗಿ ಶಿವಭಕ್ತರು ಮತ್ತು ಕೆಳವರ್ಗದ ಜನರ ವರ್ಣಸಮಸ್ಯೆಯನ್ನು ನಿರ್ಮೂಲ ಮಾಡಲು ಯತ್ನಿಸಿದ್ದಾರೆ" (ಪಾಟೀಲ ಸದಾನಂದ, ೧೯೯೯: ಪು.೩೭) ಎಂಬ ಮಾತು ಸುಳ್ಳಲ್ಲ. ಭೀಮಕವಿಯು ಕುಲ, ಜಾತಿ, ಅಸ್ಪೃಶ್ಯತೆ ಈ ವಿಚಾರಗಳಲ್ಲಿ ಅತ್ಯಂತ ಸೂಕ್ಷ್ಮವಾಗಿ ವಿವೇಚಿಸಿದ್ದನ್ನು ಕಾಣಬಹುದಾಗಿದೆ.

ಈ. ದಾಸ-ದಾಸಿ-ತೊತ್ತು :

.ಸಮಾಜದಲ್ಲಿ ಅತ್ಯಂತ ನಿಕೃಷ್ಟ ಬದುಕನ್ನು ನಡೆಸುವ ಜನವರ್ಗ ಈ ದಾಸ-ದಾಸಿ-ತೊತ್ತುಗಳು ಅಥವಾ ಗುಲಾಮರದು. ಈ ಪದಗಳೆಲ್ಲ ಸಮಾನಾರ್ಥಕ ಪಡೆದುಕೊಂಡಿದ್ದು, ಆರ್ಥಿಕವಾಗಿ ಅತ್ಯಂತ ಕನಿಷ್ಟ ಸ್ಥಾನವನ್ನು ಇವರು ಹೊಂದಿದ್ದರು. "ದೇವರಿಗೆ

ಶರಣಾಗತನಾಗುವುದು; ರಾಜನಿಗೆ ಶರಣಾಗತನಾಗುವುದು; ಒಡೆಯನಿಗೆ ಶರಣಾಗತನಾಗುವುದು; ಗುರುವಿಗೆ ಶರಣಾಗತನಾಗುವುದು; ಪತಿಗೆ ಶರಣಾಗತಳಾಗುವುದು ಇವೇ ಕಾಲಕ್ರಮದಲ್ಲಿ ಒಡೆಯ ಸೇವಕ ವರ್ಗಕ್ಕೂ, ದಾಸ-ದಾಸಿ, ತೊತ್ತುಗಳ ನಿರ್ಮಾಣಕ್ಕೂ ಕಾರಣವಾಗಿರಬೇಕು". (ಅದೇ) ಈ ಪದ್ಧತಿಯು ಆಳವಾಗಿ ಬೇರೂರಲು ಆರ್ಥಿಕ ಪರಿಸ್ಥಿತಿಯೇ ಪ್ರಬಲವಾದ ಕಾರಣ. "ವ್ಯವಸಾಯವು ಉತ್ತಮಗೊಂಡು ಆಹಾರಧಾನ್ಯಗಳನ್ನು ಸಂಗ್ರಹಿಸಿಡಲು ಸಾಧ್ಯವಾದ ಮೇಲೆ ಉಂಟಾದ ಆರ್ಥಿಕ ಅಸಮಾನತೆಯು ಗುಲಾಮಗಿರಿಗೆ ಮೂಲವಾಯಿತು. ಇದರಿಂದ ಇರದವರು ಸಾಲವನ್ನು ಪಡೆದು, ಅದನ್ನು ತೀರಿಸಲು ಸಾಧ್ಯವಾಗದೆ ಗುಲಾಮರಾಗಬೇಕಾದ ಪರಿಸ್ಥಿತಿಯುಂಟಾಗಿರಬೇಕು" (೧೯೮೩: ಪು.೧೧೨) ಎಂದು ಪಿ.ವಿ. ನಾರಾಯಣ ಅವರು ಅಭಿಪ್ರಾಯ ಪಡುತ್ತಾರೆ. ವಚನಕಾರರ ಕಾಲಕ್ಕೆ ಈ ಪದ್ಧತಿ ಪ್ರಚಲಿತವಿದ್ದ ಉಲ್ಲೇಖಗಳು ಹೇರಳವಾಗಿ ವಚನಗಳಲ್ಲಿ ಸಿಗುತ್ತವೆ. ವಚನಗಳಲ್ಲಿ ಕೆಲವೆಡೆ ದಾಸಿಯರನ್ನು 'ತೊತ್ತು' ಎಂದು ದಾಸರನ್ನು 'ತೊಂಡ' ಎಂದು ಕರೆದ ಉದಾಹರಣೆಗಳು ಸಿಗುತ್ತವೆ.

ನಾರದಸ್ಮೃತಿಯು "ಯಜಮಾನನ ಮನೆಯಲ್ಲಿ ಹುಟ್ಟಿದವನು, ಕ್ರಯಕ್ಕೆ ಪಡೆದ, ಕಾಣಿಕೆಯಾಗಿ ಬಂದ, ವಂಶಪಾರಂಪರ್ಯವಾದ, ಕ್ಷಾಮಕಾಲದಲ್ಲಿ ಸಾವಿನಿಂದ ಪಾರುಮಾಡಿದವನಿಗೆ ಆದ ಯಜಮಾನನಿಂದ ನ್ಯಾಸವಾಗಿಡಲ್ಪಟ್ಟ, ದೊಡ್ಡ ಸಾಲಕ್ಕೆ ಬದಲಾಗಿ ಆದ, ಯುದ್ಧದಲ್ಲಿ ಸೆರೆ ಸಿಕ್ಕಿದ, ಪಣದಲ್ಲಿ ಗೆದ್ದ, ತನಗೆ ತಾನೇ ಗುಲಾಮನಾದ, ನಿರ್ಧಿಷ್ಟ ಅವಧಿಗೆ ಮಾತ್ರ ಜೀವನೋಪಾಯಕ್ಕಾಗಿ ಆದ, ಸ್ತ್ರೀಗುಲಾಮಳ ಮೋಹಕ್ಕಾಗಿ ಆದ, ತನ್ನನ್ನು ಮಾರಿಕೊಂಡ, ಸನ್ಯಾಸವನ್ನು ತ್ಯಜಿಸಿದ" (ಅದೇ) ಎಂದು ಹದಿನೈದು ಬಗೆಯ ಗುಲಾಮರನ್ನು ಹೆಸರಿಸುವುದಾಗಿ ಪಿ.ವಿ ನಾರಾಯಣ ಅವರು ಹೇಳುತ್ತಾರೆ. ಈ ಬಗೆಯಾದ ಗುಲಾಮ ಪದ್ಧತಿಗಳು ಭೀಮಕವಿಯ ಬಸವಪುರಾಣದಲ್ಲಿ ಉಲ್ಲೇಖಗೊಳ್ಳದಿದ್ದರೂ 'ದಾಸ-ದಾಸಿ', 'ತೊತ್ತು' ಈ ಪದಗಳು ಉಲ್ಲೇಖವಾಗಿದ್ದನ್ನು ಗಮನಿಸಬಹುದು.

ಆಶ್ಚರ್ಯವೆಂದರೆ ವೇಶ್ಯೆಯೊಬ್ಬಳು ದಾಸಿಯನ್ನು ಹೊಂದಿದ್ದ ಸಂದರ್ಭವೊಂದು ಬಸವಪುರಾಣದಲ್ಲಿ ಉಲ್ಲೇಖಗೊಂಡಿದೆ.(೧೦:೨೦) ವೇಶ್ಯಾಮಂದಿರಕ್ಕೆ ಹೋದ ವಿಟನೊಬ್ಬ ಅವಳ ದಾಸಿಗೆ ತನ್ನ ಪಡಿಯನ್ನು ತರಲು ಹೇಳಿ ಕಳಿಸುವ ಸಂದರ್ಭ ನೋಡಿದರೆ ದಾಸಿಯರಿಗೆ ಯಾರು ಬೇಕಾದರೂ ಕೆಲಸ ಹೇಳುವ ಹಾಗೆ ಕಂಡು ಬರುತ್ತದೆ. ಆ ದಾಸಿಯು ವೇಶ್ಯೆಯನ್ನು ಕುರಿತು 'ಅಕ್ಕ' ಎಂದೂ, ವಿಟನನ್ನು 'ಭಾವ' ಎಂದು ಸಂಬೋಧಿಸುವ ಪ್ರಸಂಗ ನೋಡಿದರೆ ದಾಸಿಯರು ಒಡೆಯರ ಜೊತೆ ಅತ್ಯಂತ ಸಂತೋಷದಿಂದಿದ್ದ ಪ್ರಸಂಗ ಕಾಣಬಹುದು.

'ಕಲಿಯೆಂಬ' ಭಕ್ತನ ದಾಸಿಯ ಮಗನು ಜಂಗಮನಾಗಿ ಪರಿವರ್ತಿತವಾದ ಸಂದರ್ಭವನ್ನು ಭೀಮಕವಿ ಹೇಳುತ್ತಾನೆ. ಇದರಿಂದ ದಾಸಿಯ ಮಕ್ಕಳು ಸಹ ಶ್ರೇಷ್ಠ ಸ್ಥಾನವನ್ನು ಅಲಂಕರಿಸಬಹುದಿತ್ತೆಂದು ತಿಳಿಯುತ್ತದೆ. ಅಲ್ಲದೇ ಇವರಿಗೆ ಸಾಮಾಜಿಕ ಮನ್ನಣೆ, ಆದರಗಳು ದೊರೆಯುವ ಬಗ್ಗೆ ಪುರಾಣ ಬೆಳಕು ಚೆಲ್ಲುತ್ತದೆ. "ಮನೆಗೆಲಸವಂ ಮಾಡಲಾರದೆ ತನು ಬಳಲಿ ದಾಸಿಯ ಮಗಂ" (೨೬:೩೯) ಎಂಬ ಕವಿಯ ಮಾತುಗಳು ಅಂದಿನ ಸಮಾಜದಲ್ಲಿ ದಾಸ-ದಾಸಿಯರಿಗೆ ಕಠಿಣವಾದ ಕೆಲಸಗಳನ್ನು ಕೊಡುವ ಬಗ್ಗೆ ಸಾಕ್ಷಿ ನುಡಿಯುತ್ತವೆ. ಜಂಗಮನಾದರೂ ಕಲಿಯೆಂಬನ ಹೆಂಡತಿ "ಭಕ್ತರಕೂಡೆ ಬಂದವನೀಗ ಕಾಲು ನೀಡಿ ತೊಳೆಯಿಸಿಕೊಂಡಿಹನು" (೨೬:೪೦) ಎಂಬ ನುಡಿಗಳು ದಾಸ-ದಾಸಿಯರ ಬಗೆಗಿದ್ದ ಹೀನ ಅಭಿಪ್ರಾಯವನ್ನು ಧ್ವನಿಸುತ್ತದೆ.

ಕಲ್ಲಿದೇವನ ತೊತ್ತು ಅಗ್ಘವಣಿ ತೆಗೆದುಕೊಂಡು ಹೋಗುವ ಸಂದರ್ಭದಲ್ಲಿ ದ್ವಿಜನ ಕೈ ಸೋಂಕಿದಾಗ ಅವಳು ಆ ಮಡಕೆಯನ್ನು ಒಡೆಯುವ ಸಂದರ್ಭ ಉಕ್ತವಾಗಿದೆ. ಶಿವಶರಣರು ಸಹ ದಾಸಿಯರನ್ನು ಹೊಂದಿದ್ದರು ಎಂಬುದು ಇದರಿಂದ ವೇದ್ಯವಾಗುತ್ತದೆ. ದ್ವಿಜನನ್ನು ಸೋಂಕಿಸಿಕೊಂಡು ಅಪವಿತ್ರನಾದೆನೆಂದು ಭಾವಿಸುವ ಹಾವಿನಹಾಳ ಕಲ್ಲಯ್ಯನ ತೊತ್ತು ಇಡೀ ವೈದಿಕ ಸಂಪ್ರದಾಯದ ವಿರುದ್ಧ ಸಟೆದು ನಿಂತ ಪ್ರತಿನಿಧಿಯಂತಿದ್ದಾಳೆ. ಅಷ್ಟರಮಟ್ಟಿಗೆ ಶರಣಕುಲ ಅವರಿಗೆ ಆತ್ಮಪ್ರತ್ಯಯ ಬೆಳೆಸಿರಬೇಕೆಂದು ಭಾವಿಸಬೇಕಾಗುತ್ತದೆ. ಒಬ್ಬ ತೊತ್ತಿನ ಬಾಯಿಯಲ್ಲಿ ಬರುವ ಈ ನುಡಿಗಳು ಶಿವಶರಣರು ಅವರಿಗೆ ಅಪಾರವಾದ ನೈತಿಕ, ಸಾಮಾಜಿಕ ಸ್ಥೈರ್ಯ ತುಂಬಿದ್ದರೆಂದು ಕಾಣುತ್ತದೆ. ಒಬ್ಬ ತೊತ್ತಿನಿಂದಾದ ಈ ಅವಮಾನ ಸಹಿಸದೆ ಭಂಗಪಟ್ಟ ದ್ವಿಜನು ಈ ಪ್ರಸಂಗವನ್ನು ಅರಸನಲ್ಲಿಗೆ ಕೊಂಡೊಯ್ದುದು ಅದರ ತೀವ್ರತೆಯನ್ನು ಇನ್ನಷ್ಟು ಹೆಚ್ಚಿಸುತ್ತದೆ.

ಮಡಿವಾಳ ಮಾಚಯ್ಯನು ಭಾವಿಸುವ "ಒಸಗೆಯಾಯಿತ್ತೆನ್ನ ದಾಸಿಗೆಲಸಕೆ ಬದುಕಿದೆ" (೨೦:೬) ಹಾಗೂ "ತೊತ್ತು ಗೆಲಸಂಗೆಯ್ಯಲನುವಾಯಿತ್ತೆನ್ನುತ ಜಂಗಮನೋಲೈಸುತ್ತ" (೨೦:೭) ಎಂಬ ಮಾತುಗಳು ಶರಣರು ಲಿಂಗಜಂಗಮಕ್ಕೆ ತೊತ್ತುಗಳಾದ ಸಂದರ್ಭವನ್ನು ವಿವರಿಸುತ್ತವೆ. ಬಸವಪುರಾಣದಲ್ಲಿ ತೊತ್ತುಗಳ ಕರುಣಾಜನಕ ಸ್ಥಿತಿ ಕಂಡುಬರುವುದಿಲ್ಲ. ಇಷ್ಟನ್ನು ಹೊರತು ಪಡಿಸಿದರೆ ಪುರಾಣಗಳಲ್ಲಿ ಪ್ರಾಸಂಗಿಕವಾಗಿ 'ಅಂಕಕಾಜಿ,(೫೧:೩೭) 'ಅಂಕಕಾರ್ತಿ',(೧೧:೬) 'ಲೆಂಕ', (೪೬:೩೫) 'ಲೆಂಗಿ',(೫೩:೨೭) 'ಬಂಟ', 'ಸೇವಕ', 'ಭಕ್ತ', 'ಶರಣ', 'ಸೇವಾಸಕ್ತ', ಎಂಬ ಶಬ್ದಗಳನ್ನು ಶಿವನ ತೊತ್ತು ಪದಕ್ಕೆ ಸಮಾನಾಂತರವಾಗಿ ಕವಿ ಬಳಸಿದ್ದಾನೆ. ಒಟ್ಟಿನಲ್ಲಿ ಭೀಮಕವಿಯ ಕಾಲದಲ್ಲಿ ಈ ಅನಿಷ್ಟ ಪದ್ಧತಿ ಜೀವಂತವಾಗಿದ್ದ ಉದಾಹರಣೆಗಳು ವಿರಳವಾಗಿ ಕಂಡುಬರುತ್ತವೆ.

೨. ಸಂಸ್ಕಾರಗಳು :

ಹಿಂದೂ ಪರಂಪರೆಯಲ್ಲಿ 'ಸಂಸ್ಕಾರ' ಗಳಿಗೆ ಬಹುಮುಖ್ಯ ಸ್ಥಾನವಿದೆ. ಇವು ವ್ಯಕ್ತಿಯ ಜನನದಿಂದ ಹಿಡಿದು ಮರಣದ ನಂತರವೂ ಆಚರಿಸಲ್ಪಡುತ್ತವೆ. "ಇವು ದೇಹ, ಮನಸ್ಸು, ಬುದ್ಧಿಗಳನ್ನು ಶುದ್ಧಿಗೊಳಿಸುವ ಧಾರ್ಮಿಕ ಕ್ರಿಯೆಗಳು; ಇವುಗಳಿಗೊಳಗಾದ ನಂತರವೇ ಒಬ್ಬ ವ್ಯಕ್ತಿಯು ನಿಜವಾದ ಅರ್ಥದಲ್ಲಿ ಸಮಾಜದ ಸದಸ್ಯನಾಗಲು ಯೋಗ್ಯ; ಇವುಗಳಿಂದ ವ್ಯಕ್ತಿಯು ಶುದ್ಧನಾಗುವುದರ ಜೊತೆಗೆ ಅವನ ವ್ಯಕ್ತಿತ್ವವು ಪರಿಪೂರ್ಣವಾಗಲು ಸಹಾಯಕವಾಗುತ್ತದೆ ಎಂಬ ಭಾವನೆಯಿತ್ತು" (ನಾರಾಯಣ ಪಿ.ವಿ. ೧೯೮೩: ಪು.೧೦೨) ಬಸವಪುರಾಣದಲ್ಲಿ ಈ ಕುರಿತು ಉಲ್ಲೇಖ ಸಿಗುತ್ತದೆ. ಭೀಮಕವಿಯು–

ವೇದಮತದಿಂಗರ್ಭಸಂಸ್ಕಾರಂ
ಮೊದಲೆನಿಪ್ಪಆದಿಕರ್ಮಂಗಳಿವು
ಹದಿನಾಱಾದವವಱೊಳಗೊಂದುವುಂ. (೩:೫೨)

ಎಂದು ಬ್ರಾಹ್ಮಣೋತ್ತಮನು ಹೊಂದಬೇಕಾದ ಹದಿನಾರು ಸಂಸ್ಕಾರಗಳ ಸಂಖ್ಯೆಯನ್ನು ಹೇಳುತ್ತಾನೆ. ಆದರೆ ಅವು ಯಾವುವು ಎಂಬ ವಿವರಗಳಿಲ್ಲ . ವಚನಕಾರರು ಈ ವೈದಿಕ ಸಂಸ್ಕಾರಗಳನ್ನು ತಿರಸ್ಕರಿಸಿದ್ದು ಆ ಮೂಲಕ ಬದುಕಿನ ವಾಸ್ತವತೆಯನ್ನು ಅಪ್ಪಿಕೊಂಡಿದ್ದಾರೆ. ಹೀಗಿದ್ದೂ ಕೆಲವು ಸಂಸ್ಕಾರಗಳು ಉಳಿದುಕೊಂಡು ಬಂದಿದ್ದನ್ನು ಕಾಣುತ್ತೇವೆ. ಸಾಮಾನ್ಯವಾಗಿ ಗರ್ಭದಾನ, ಪುಂಸವನ, ಸೀಮಂತೋನ್ನಯನ, ಜಾತಕರ್ಮ, ನಾಮಕರಣ, ನಿಷ್ಕ್ರಮಣ, ಅನ್ನಪ್ರಾಶನ, ಚೂಡಾಕರಣ, ಕರ್ಣಭೇದ (ಕರಣಭೇದ) ವಿದ್ಯಾರಂಭ, ಉಪನಯನ, ವೇದಾರಂಭ, ಕೇಶಾಂತ, ಸಮಾವರ್ತನ, ವಿವಾಹ ಮತ್ತು ಅಂತ್ಯೇಷ್ಟಿಗಳೆಂಬ ಷೋಡಶ ಸಂಸ್ಕಾರಗಳು ಉಂಟು. (ನಾರಾಯಣ ಪಿ.ವಿ. ೧೯೮೭, ಪು.೧೦೨)

ಬಸವಪುರಾಣದಲ್ಲಿ ಕಂಡುಬರುವ ಜಾತಕರ್ಮ, ಉಪನಯನ ವಿವಾಹ, ಅಂತ್ಯೇಷ್ಟೀಕರ್ಮಗಳನ್ನು ಕುರಿತಂತೆ ಮಾತ್ರ ಇಲ್ಲಿ ಚರ್ಚಿಸಲಾಗಿದೆ. ಜನನ, ಮದುವೆ, ಮರಣಕ್ಕೆ ಸಂಬಂಧಿಸಿದಂತೆ ಕೆಲವೊಮ್ಮೆ ವೈದಿಕ ಸಂಸ್ಕಾರಗಳನ್ನು ಕೈಬಿಟ್ಟು ಶಿವಸಂಸ್ಕಾರಗಳ ಹೊಸ ವ್ಯವಸ್ಥೆ ರೂಪುಗೊಳ್ಳುವುದನ್ನು ಕಾಣಬಹುದಾಗಿದೆ. ಸನಾತನ ನೆಲೆಗೆ ಪ್ರತಿಭಟನೆಯಂತೆ ಶಿವಶರಣರ ಆಚರಣೆಗಳು ಕಂಡು ಬರುವುದನ್ನು ಗಮನಿಸಬಹುದು.

ಅ. ಜಾತಕರ್ಮ–ನಾಮಕರಣ :

ಕೈಲಾಸದಿಂದ ಬಂದ ಜೀವ ಭೂಮಿಯಲ್ಲಿ ಜನಿಸಿ ಮರ್ತ್ಯವನ್ನುದ್ಧರಿಸಿ ಮತ್ತೆ ಕೈಲಾಸಕ್ಕೆ ಹೋಗುವ ವಿವರ ಬಸವಪುರಾಣದಲ್ಲಿ ಕಂಡುಬರುತ್ತದೆ. ಶಿವನಾಜ್ಞೆಯಂತೆ ನಂದೀಶನು ಮಾದಲಾಂಬೆಯ ಗರ್ಭ ಪ್ರವೇಶಿಸುತ್ತಾನೆ. (೨: ೫೬–೫೭) ಕವಿಯು ಸಂಧಿ ೩ ರ ಸೂಚನಾ ಪದ್ಯದಲ್ಲಿ ಆದಿವೃಷಭನು ಬಾಗೇವಾಡಿಯಲ್ಲಿ ಉದಯವಾದನೆಂದು ಹೇಳುತ್ತಾನೆ.

.ಜಾತಕರ್ಮವನ್ನು ಅತ್ಯಂತ ಸಂಕ್ಷಿಪ್ತವಾಗಿ ಹೇಳುವ ಕವಿ ಬಸುರಿ ಮಾದಲಾಂಬೆಯ ವರ್ಣನೆಯನ್ನು ಹೆಚ್ಚು ವಿಸ್ತರಿಸಿದ್ದಾನೆ. (೩: ೧೧) ಹುಟ್ಟುವ ಮೊದಲು ತಾಯಿಯ ಗರ್ಭದಲ್ಲಿ ಬಸವಣ್ಣ ಮೂರು ವರ್ಷ ನೆಲೆಸಿದ್ದನೆಂಬ ವಿವರವನ್ನು ಕವಿ ಕೊಡುತ್ತಾನೆ. (೩:೧೨) ಬಹುಶಃ ವೈದ್ಯಕೀಯ ಆಧಾರಗಳಲ್ಲಿ ಇದಕ್ಕೆ ಸಾಕ್ಷಿಗಳಿಲ್ಲ. ಮಹಿಮಾನ್ವಿತನಾದ ಬಸವಣ್ಣನವರ ಜನನವನ್ನು ವೈಶಿಷ್ಟ್ಯವಾಗಿ ಹೇಳಬೇಕೆಂಬುದು ಕವಿಯ ಹಂಬಲವಾಗಿರಬೇಕು.

ಬಸವಜನನ ಪೂರ್ವದಲ್ಲಿಯೇ ವೃಷಭಾಧಿಪತಿಯು ಮಾದಲಾಂಬಿಕೆಯ ಕನಸಿನಲ್ಲಿ (೩:೨೧) ಬಂದು ಮುಂದೆ ನಿನ್ನ ಉದರದಲ್ಲಿ ಅಸಾಮಾನ್ಯ ಮಗುವೊಂದು ಜನಿಸಲಿದ್ದು ಅದಕ್ಕೆ ಬಸವನೆಂದು ನಾಮಕರಣ ಮಾಡೆಂದು ಹೇಳುತ್ತಾನೆ. ಅಂತೆಯೇ 'ಅರ್ಥೋದಯಮುಹೂರ್ತ' (೩:೨೪) ದಲ್ಲಿ ಬಸವಣ್ಣನವರ ಜನನವಾಗುತ್ತದೆ. ಜನನವಾದ ತಕ್ಷಣವೇ ಆ ಕೂಸಿನಲ್ಲಿಯ ಶಿವನೆ ಗುರುವಾಗಿ ಬಂದು ಲಿಂಗಧಾರಣೆ ಮಾಡಿದ ವಿವರವನ್ನು ಕವಿ ಕೊಡುತ್ತಾನೆ. ಮುಂದುವರೆದು ನಾವು ಕಪ್ಪಡಿಸಂಗಮದಲ್ಲಿರುತ್ತೇವೆ; ಸಂಗಮೇಶನೆಂದು ಹೆಸರು; ಈತನು ಒಂದು ಬಗೆಯಲ್ಲಿ ನನ್ನ ಮಗನು; ಲೋಕಹಿತಕ್ಕಾಗಿ ನಿನ್ನಲ್ಲಿ ಜನಿಸಿದ್ದಾನೆಂದು ನೋಡಲಿಕ್ಕೆ ಬಂದೆವು; ಶಿವಾರ್ಪಿತವಲ್ಲದ್ದನ್ನು ಈತನಿಗೆ ಸ್ವಲ್ಪವೂ ಕೊಡಲಾಗದು (೩:೨೮–೨೯) ಎಂದು ಹೇಳಿ ಅದೃಶ್ಯನಾದನು. ಅತ್ಯಂತ ಸಂತೋಷಗೊಂಡ ದಂಪತಿಗಳು ಆ ಮಗುವಿಗೆ ಭಕ್ತಗಣವನ್ನು ಕರೆದು ಪೂಜಿಸಿ ಶರಣಚರಣೋದಕದಿಂದ ಬಾಲಕನನ್ನು ತೊಳೆದು ವಿಭೂತಿ ಧಾರಣ ಮಾಡಿ ನಂತರ ಬಸವನೆಂದು ನಾಮಕರಣ ಮಾಡುತ್ತಾರೆ. (೩:೩೩) ಅಂತೂ ನಾಮಕರಣದ ಸಂದರ್ಭದ ಆಚರಣೆಗೆ ಶಿವಭಕ್ತ ಸಮೂಹವನ್ನು ಬರಮಾಡಿಕೊಂಡು ತಾಯ್ತಂದೆಯರು ಆರಾಧಿಸುತ್ತಿದ್ದರು, ಬೇಡಿದವರಿಗೆ ದಾನ ನೀಡುತ್ತಿದ್ದರು. (೩:೩೩) ಮಗು ಜನಿಸಿದ ತಕ್ಷಣ ಮೊರದಲ್ಲಿ ಹಾಕುವುದು ಹಾಗೂ ಬಾಯ್ಬೆಣ್ಣೆಯನ್ನು ಕೂಸಿಗಿಕ್ಕಿದ ವಿವರಗಳು ಇಲ್ಲಿಲ್ಲ.ಜಾತಕರ್ಮ ಹಾಗೂ ನಾಮಕರಣಗಳು ಒಟ್ಟಿಗೆ ನಡೆದ ಸಂದರ್ಭವನ್ನು ಭೀಮಕವಿ ಹೇಳುತ್ತಾನೆ. ಜಂಗಮ ಪಾದೋದಕದಿಂದ ಮಜ್ಜನ ಮಾಡಿದ ಸಂದರ್ಭ ವೈದಿಕ ಕ್ರಿಯಾಚಾರಕ್ಕೆ ಸಂಪೂರ್ಣ ಭಿನ್ನವೆಂಬುದು ಗಮನಾರ್ಹ.

ಆ. ಮುಂಜಿವೆ–ಉಪನಯನ :

ಇದೊಂದು ಮಹತ್ವ ಪೂರ್ಣವಾದ ವಿವಾಹಪೂರ್ವ ಸಂಸ್ಕಾರವಾಗಿದ್ದು ಈ ಕರ್ಮದ ನಂತರವೇ ವೇದಗಳನ್ನು ಅಭ್ಯಾಸ ಮಾಡುವ ಹಕ್ಕು ಬ್ರಾಹ್ಮಣರಲ್ಲಿ ಪ್ರಾಪ್ತವಾಗುತ್ತದೆ. ಬ್ರಾಹ್ಮಣರು ತಮ್ಮನ್ನು ದ್ವಿಜರೆಂದು ಕರೆದುಕೊಂಡು ಸಹಜ ಹುಟ್ಟುವಿಕೆಯೊಡನೆ ಈ ಮುಂಜಿವೆಯಂಥ ಧಾರ್ಮಿಕ ಆಚರಣೆಯನ್ನು ಬೆಸೆದರು. "ಮುಂಜಿವೆ, ಉಪನಯನ, ದೀಕ್ಷೆ, ಮತ್ತು ಲಿಂಗದೀಕ್ಷೆ ಇತ್ಯಾದಿ ಪಾರಿಭಾಷಿಕ ಪದಗಳೊಂದಿಗೆ ಇದನ್ನು ಕರೆಯುತ್ತಾರೆ.

ಬಸವಪುರಾಣದಲ್ಲಿ ಬಸವಣ್ಣನವರಿಗೆ ಈ ಕ್ರಿಯೆ ನಡೆಯಿತೆನ್ನಲಾದ ಸಂದರ್ಭ ಬರುತ್ತದೆ." (೩:೪೩) 'ಗರ್ಭಾಷ್ಟಕ'ದಲ್ಲಿ ಈ ಕ್ರಿಯೆ ನಡೆಯಲುದ್ಯುಕ್ತವಾದಾಗ ಬಸವಣ್ಣನವರು ಅದನ್ನು ವಿರೋಧಿಸುವ ಸಂದರ್ಭವನ್ನು ಕವಿಯು ಸುಧೀರ್ಘವಾಗಿ ವಿಸ್ತರಿಸಿದ್ದಾನೆ. (೩: ೪೩-೮೩) ಸುಮಾರು ೪೦ ಪದ್ಯಗಳಲ್ಲಿ ನಡೆಯುವ ತಂದೆ ಮಗನ ವಾಗ್ಯುದ್ಧ ಇಡೀ ವೈದಿಕ ಹಾಗೂ ಶೈವಧರ್ಮದ ಮಧ್ಯ ನಡೆದ ಪ್ರತಿಭಟನೆಯೆಂಬಂತೆ ಕವಿ ಚಿತ್ರಿಸಿದ್ದಾನೆ. ಅಂತಿಮವಾಗಿ

ಸಾರ ಭಕ್ತಿಸ್ಥಿತಿಯೊಲುಮೆಯೊಳ
ನಾರತಂ ಸುಖವೊಂದುತಿರ್ಪೆನು
ವೀರಮಾಹೇಶ್ವರರೆ ಗತಿಯೆನಗಿದುವೆ ನಿಶ್ಚಯವು
ಸೇರದಿಂತಹದೆಮಗೆ ನಿಮ್ಮಾ
ಚಾರದಲಿ ನೀವಿಪ್ಪಿರೆಮ್ಮಾ
ಚಾರದಲಿ ನಾವಿಪ್ಪೆವಿನ್ನಾವಾರು ನೀವಾರು..... (೩: ೮೩)

ಎಂದು ತನ್ನ ನಿಜಸಹೋದರಿಯನ್ನು ಕರೆದುಕೊಂಡು ಮಹಮನೆಯ ಕಡೆ ಹೋದನೆಂದು ಭೀಮಕವಿ ಬರೆಯುತ್ತಾನೆ. ಅಂದರೆ ಕವಿಯ ಅಭಿಪ್ರಾಯದಂತೆ ಬಸವಣ್ಣನವರಿಗೆ ಈ ಸಂಸ್ಕಾರ ನೆರವೇರಲಿಲ್ಲೆಂಬುದು ಸ್ಪಷ್ಟವಾಗುತ್ತದೆ. ಸ್ವತಃ ಬಸವಣ್ಣನವರ ವಚನಗಳಲ್ಲಿ ಈ ಕುರಿತು ವಿವರಗಳು ದೊರಕುವುದಿಲ್ಲ. ಹರಿಹರ ಮಹಾಕವಿಯ ಹೇಳಿಕೆ ಮಾತ್ರ ಈ ಕ್ರಿಯೆ ನಡೆದ ಬಗ್ಗೆ ಹೇಳುತ್ತದೆ. ಕರ್ಮಲತೆಯಂತಿದ್ದ ಜನಿವಾರವನ್ನು ಬಿಸಾಡಿದ, ಹೋತಿನ ಗಂಟಲನ್ನು ಬಿಗಿವಂತಿದ್ದ ಮೌಂಜಿಯನ್ನು ಹರಿದುಹಾಕಿದ, ಲಾಂಛನ ಸ್ವರೂಪದ ವಸ್ತ್ರವನ್ನು ಬದಿಗೆ ಸರಿಸಿ ದಿವ್ಯವಸ್ತ್ರವನ್ನು ಹೊದೆದು ಲೌಕಿಕಕ್ಕೆ ಹೆಚ್ಚು ಪ್ರಾಶಸ್ತ್ಯ ನೀಡಿದ ಘಟನೆಯೊಂದು ಬಸವರಾಜ ದೇವರ ರಗಳೆಯಲ್ಲಿ ಬಂದಿದೆ. (ಬ.ದೇ.ರ. ಪು.೩೦) ಈ ಕುರಿತಂತೆ ಬಸವೇಶ್ವರರ ಎರಡು ವಚನಗಳ ಆಧಾರದಿಂದ ಬಸವಣ್ಣನವರು ಈ ಸಂಸ್ಕಾರಕ್ಕೆ ಒಳಗಾಗಿದ್ದನೆಂದು ಫ.ಗು. ಹಳಕಟ್ಟಿಯವರು ವಿವರಿಸಿದ್ದಾರೆ. (ಬಸವೇಶ್ವರ ಚರಿತ್ರೆ, ಪು.೧೯-೨೦) ದೇವಾಲಯ ನಿರಾಕರಣೆಯ ಮೂಲಕ ಪುರೋಹಿತಶಾಹಿಗೆ ಹೇಗೆ ಆಘಾತ ಉಂಟಾಗಿತ್ತೋ ಹಾಗೆಯೇ ಈ ಧರ್ಮಾಚರಣೆಯ ಸಂಸ್ಕಾರಗಳನ್ನು ತಿರಸ್ಕರಿಸುವ ಮೂಲಕ ಪುರೋಹಿತವರ್ಗಕ್ಕೆ ಆಘಾತವನ್ನುಂಟು ಮಾಡಿರಬೇಕೆಂಬ ಅಭಿಪ್ರಾಯ ಭೀಮಕವಿಯದಿರಬೇಕು. ಬಸವಣ್ಣನವರು ಮಹಮನೆಯ ಕಡೆಗೆ ಬಂದನೆಂದ ಮೇಲೆ ಆತನಿಗೆ ಲಿಂಗದೀಕ್ಷೆಯಾದರೂ ಆಗಿರಬೇಕೆಂಬ ಊಹೆ ಉಂಟಾಗುತ್ತದೆ. 'ಶರಣಸತಿ-ಲಿಂಗಪತಿ' ಎಂಬ ತತ್ವಕ್ಕನುಗುಣವಾಗಿ ಮುಂದೆ ಯಾವುದೋ ಒಬ್ಬ ಗುರುವಿನಿಂದ ಬಸವಣ್ಣ ಲಿಂಗದೀಕ್ಷೆ ಹೊಂದಿರಬೇಕೆಂದು ಫ.ಗು. ಹಳಕಟ್ಟಿಯವರು ಅಭಿಪ್ರಾಯ ಪಡುತ್ತಾರೆ. (ಅದೇ ಪು.೪೮-೫೨)

೩. ವಿವಾಹ :

ಬ್ರಹ್ಮಚರ್ಯ, ಗೃಹಸ್ಥ, ವಾನಪ್ರಸ್ಥ, ಸನ್ಯಾಸಾಶ್ರಮಗಳಲ್ಲಿ ಗೃಹಸ್ಥಾಶ್ರಮವು ತುಂಬ ಪ್ರಮುಖವಾದುದು. ಸಮಾಜದ ಅತ್ಯಂತ ಚಿಕ್ಕ ಘಟಕ ಕುಟುಂಬ. ವಿವಾಹದಿಂದಲೇ ಈ ಕುಟುಂಬವು ರೂಪುಗೊಳ್ಳುವುದು. ಹಿಂದೂ ಸಂಸ್ಕಾರಗಳಲ್ಲಿ ವಿವಾಹವು ಕೇಂದ್ರದಂತಿದೆ. ಒಬ್ಬನು ಪರಿಪೂರ್ಣ ವ್ಯಕ್ತಿಯಾಗುವುದು ವಿವಾಹದಿಂದಲೇ. ಪುರುಷನಿಗಿಂತ ಸ್ತ್ರೀಗೆ ವಿವಾಹವು ಹೆಚ್ಚು ಅನಿವಾರ್ಯವಾದುದು. "ಉಚ್ಚವರ್ಗದ ಪುರುಷನು 'ಉಪನಯನ'ದಿಂದ 'ದ್ವಿಜನಾದರೆ'ಸ್ತ್ರೀಗೆ ದ್ವಿಜತ್ವವುಂಟಾಗುವುದು ವಿವಾಹದಿಂದ" ಎಂದು ರಾಮಾಯಣವು ಹೇಳುತ್ತದೆ. (ನಾರಾಯಣ ಪಿ.ವಿ.೧೯೮೭, ಪು.೧೦೪) ಪ್ರಾಚೀನ ಕಾಲದಲ್ಲಿ ವಿವಾಹ ಬಂಧನದಿಂದ ದೂರವುಳಿದು ಪಾರಮಾರ್ಥಿಕವಾದ ಸಾಧನೆಯಲ್ಲಿ ತೊಡಗುವುದೇ ಜೀವನದ ಪರಮಗುರಿಯಾಗಿರಬೇಕೆಂಬ ಭಾವನೆಯು ಬೆಳೆದುಬಂದಂತೆ ಕಾಣುತ್ತದೆ. ಆದರೆ ಶರಣರು ಈ ಭಾವನೆಯನ್ನು ದೂರೀಕರಿಸಿ ಸಂಸಾರದಲಿದ್ದುಕೊಂಡೆ ಸದ್ಗತಿ ಕಾಣಬೇಕೆಂಬ ಮನೋಭಾವವನ್ನು ಹೊಂದಿದ್ದಾರೆ. "ಸತಿಪತಿಗಳೊಂದಾದ ಭಕ್ತಿ ಹಿತವಪ್ಪುದು ಶಿವಂಗೆ ಸತಿಪತಿಗಳೊಂದಾಗದವನ ಭಕ್ತಿ ಅಮೃತದೊಳು ವಿಷ ಬೆರೆತಂತೆ" (ಸಂ.ವ.ಸಂ.-೨ ಪು.೮೬೧) ಎಂದು ಜೇಡರ ದಾಸಿಮಯ್ಯ ಹೇಳುತ್ತಾನೆ. ಧರ್ಮಸೂತ್ರಗಳನ್ವಯ ವಿವಾಹವು ೧.ವಾಗ್ದಾನ ೨. ವರುವರುಣ ೩. ಕನ್ಯಾದಾನ ೪. ವಿವಾಹ ೫. ಹೋಮ ೬.ಪಾಣಿಗ್ರಹಣ ೭.ಹೃದಯಸ್ಪರ್ಶ ೮.ಸಪ್ತಪದಿ ೯.ಅಶ್ವಾರೋಪಣ ೧೦.ಸೂರ್ಯಾವಲೋಕನ ೧೧.ಧ್ರುವದರ್ಶನ ೧೨.ತ್ರಿರಾತ್ರವ್ರತ ೧೩.ಚತುರ್ಥಿಕರ್ಮ ಎಂಬ ಪದ್ಧತಿಗಳನ್ನೊಳಗೊಂಡಿದೆ. (ನಾರಾಯಣ ಪಿ.ವಿ. ೧೯೮೭, ಪು.೧೦೫)

ಬಸವಣ್ಣನವರ ಉಪನಯನಕ್ಕೆ ಬಂದಿದ್ದ ಬಲದೇವ ದಂಡಾಧೀಶನು ತನ್ನ ಮಗಳು ಗಂಗಾದೇವಿಯನ್ನು ಬಸವಣ್ಣನವರಿಗೆ ಕೊಡಲು ನಿರ್ಧರಿಸುತ್ತಾನೆ. (೩:೮೬) ನಂತರ ಕೆಲವೆ ದಿನಗಳಲ್ಲಿ ಈ ಸಮಾರಂಭ ಆಯೋಜನೆಗೊಂಡಿದ್ದರಿಂದ ಬಸವಣ್ಣನವರ ಬಾಲ್ಯವಿವಾಹವಾದ ಬಗ್ಗೆ ಸಾಕ್ಷ್ಯ ದೊರೆಯುತ್ತದೆ. ಆದರೆ ಹರಿಹರನ ಬಸವಣ್ಣನವರು ಹದಿನಾರು ವರ್ಷಕ್ಕೆ ಮದುವೆಯಾದ ಸಂದರ್ಭ ಉಲ್ಲೇಖಗೊಂಡಿದೆ. 'ಪದಿನಾರಬ್ದಂ' ಎಂಬ ಹರಿಹರೋಕ್ತಿಯನ್ನು ಗಮನಿಸಬೇಕು. ಅಲ್ಲದೇ ಮದುವೆಗಳು ಸಗೋತ್ರದಲ್ಲಿ ನಡೆಯುತ್ತಿದ್ದವೆಂಬ ಮಾಹಿತಿ ಬಸವಪುರಾಣದಲ್ಲಿದೆ. ಬಸವಣ್ಣನವರು ತನ್ನ ಸೋದರ ಮಾವನಾದ ಬಲದೇವನ ಮಗಳನ್ನು ಮದುವೆಯಾದದ್ದು ಇದಕ್ಕೆ ಸಾಕ್ಷಿಯಾಗಿದೆ. ಆದರೆ ಬಸವಣ್ಣನವರಿಗೆ ಇನ್ನೊಬ್ಬ ಹೆಂಡತಿಯಿದ್ದ ಅಂಶ ಉಲ್ಲೇಖಗೊಂಡಿದೆ.

ಮತ್ತೆ ಒಬ್ಬಯ್ಯಂ ಬಸವಚಿ
ಮೋತ್ತಮನ ಪುರಗೆಯ್ದಿ ಆತನ
ಮತ್ತಗಜಗಮನೆಯ ಕಿವಿಯ ಪೊನ್ನೋಲೆಯಂ ಕಂಡು

ಒತ್ತಿ ಬೇಡಲು ಮಾಯಿದೇವಿಯ
ಮುತ್ತಿನೋಲೆಯನೀಸಿಕೊಂಡೊಲಿ
ದಿತ್ತು ನಮಿಸಲು ಮಿಂಡಜಂಗಮವಿತ್ತಲೆಯ್ತಂದ..... (೧೦: ೪೩)

'ಮಾಯಿದೇವಿ' ಹೆಸರಿನ ಇನ್ನೊಬ್ಬ ಹೆಂಡತಿಯಿರುವುದಾಗಿ ಮೇಲಿನ ಪದ್ಯದಿಂದ ತಿಳಿದು ಬರುತ್ತದೆ. ಇವಳ ಹೆಸರು ನೀಲಲೋಚನೆಯೆಂದಾದದ್ದು ಮದುವೆ ಸಮಯದಲ್ಲಿ ಎಂದು ಊಹಿಸಬಹುದು. ಈ ಸಂದರ್ಭದಿಂದ ಬಹುಪತ್ನಿತ್ವ ರೂಢಿಯಲ್ಲಿದ್ದು ಸಮಾಜ ಅದನ್ನು ಒಪ್ಪಿಕೊಂಡ ಅಂಶ ತಿಳಿಯುತ್ತದೆ. ಅಲ್ಲದೇ ಉನ್ನತ ಸ್ಥಾನದಲ್ಲಿದ್ದ ಬಸವಣ್ಣನವರು ಅನ್ಯಮತೀಯ ಶಿವಭಕ್ತಳನ್ನು ಮದುವೆಯಾಗುವುದರ ಮೂಲಕ ಅಂತರ್‌ಜಾತಿಯ ವಿವಾಹಗಳಿಗೆ ಮೊದಲ ಆದರ್ಶನಾಗಿರಬೇಕು. ವರದಕ್ಷಿಣೆ ಕುರಿತಂತೆ, 'ಉಂಗುರುಡಿಕೆ ' 'ಚತುರ್ಥಿ' ಹಾಗೂ 'ತೆರೆ' ಈ ಮುಂತಾದ ವಿವಾಹ ಪದ್ಧತಿಗಳು ಪುರಾಣದಲ್ಲಿ ವರ್ಣಿತವಾಗಿಲ್ಲ.

ಈ. ವಿವಾಹ ಸಮಾರಂಭ :

ಬಸವಪುರಾಣದಲ್ಲಿ ಬಸವಗಂಗಾಂಬೆಯರ ವಿವಾಹ ಅತ್ಯಂತ ವೈಭವದಿಂದ ವರ್ಣಿತವಾಗಿದೆ. ಆದರೆ ಬಸವ ಮಾಯಿದೇವಿಯರ ವಿವಾಹ ವರ್ಣಿಸಲು ಭೀಮಕವಿ ಪ್ರಯತ್ನಿಸಿಲ್ಲ. ಬಸವಗಂಗಾಂಬೆಯರ ವಿವಾಹಕ್ಕೆ ಇಡೀ ನಗರವೇ ಶೋಭಾಯಮಾನವಾಗಿ ಶೃಂಗಾರಗೊಂಡಿತ್ತೆಂಬ ಉಲ್ಲೇಖ ದೊರೆಯುತ್ತದೆ. (೪: ೨-೩) ಮಹಂತರು, ಶರಣರು ಜಂಗಮರನ್ನು ಕರೆಸಿ ಅವರಿಗೆ ವಿಭೂತಿವೀಳೆಯವನ್ನು ಕೊಟ್ಟು ಮದುವೆಗೆ ಆಹ್ವಾನಿಸಿದ ವಿವರ ದೊರೆಯುತ್ತದೆ. (೪:೫) ನಾಟ್ಯ, ಗಾಯನ, ಸಂಗೀತಕಾರ್ಯಕ್ರಮಗಳು ಮದುವೆಗೆ ಕಳೆಗಟ್ಟಿದ್ದವೆಂಬ ವಿವರ ಪುರಾಣದಲ್ಲಿ ದೊರೆಯುತ್ತದೆ. (೪:೭-೮) ಬಲದೇವನ ಮುಂದೆ ಗಂಗಾದೇವಿಯ ವರ್ಣನೆಯನ್ನು 'ಪುಣ್ಯಕಾಂತೆ'ಯರು (೪:೧೪) ಮಾಡಿದರು ಎಂಬ ವಿವರ ವೈಶಿಷ್ಟ್ಯವಾಗಿದೆ. ಮದುವೆಯಾಗುವ ಹೆಣ್ಣನ್ನು ಹೀಗೆ ಸ್ತುತಿಸುವ ಪದ್ಧತಿ ಆ ಕಾಲದಲ್ಲಿ ಇದ್ದಿರಬಹುದೇನೋ. ಭೀಮಕವಿಯ ಶೃಂಗಾರರಸಾಭಿವ್ಯಕ್ತಿಯ ಭಾವನೆ ಈ ಸಂದರ್ಭವನ್ನು ಬಳಸಿಕೊಂಡಿರುವಂತಿದೆ. ಮುತ್ತೈದೆಯರು ಗಂಗಾಂಬೆಗೆ ಆಭರಣ ತೊಡಿಸಿದರು, (೪:೩) ಪುಣ್ಯವನಿತೆಯರು ಹೂ ಮುಡಿಸಿದರು (೪:೩೪) ಎಂದು ಕವಿ ಹೇಳುವುದನ್ನು ನೋಡಿದರೆ ಅಂದೂ ಸಹ ಶುಭಸಂದರ್ಭಗಳಲ್ಲಿ ವಿಧವೆಯರನ್ನು ದೂರವಿಡುತ್ತಿದ್ದರು ಎಂಬುದನ್ನು ಪರೋಕ್ಷವಾಗಿ ಈ ಸಂದರ್ಭ ಧ್ವನಿಸುತ್ತದೆ. 'ಪೊಂಬಾಸಿಗವನಿಕ್ಕಿದರು' (೪:೪೦) ಎಂಬ ಕವಿಯ ಹೇಳಿಕೆ ಈಗಿನಂತೆ ಅಂದೂ ಸಹ ಬಾಸಿಂಗದ ಬಳಕೆ ರೂಢಿಯಲ್ಲಿತ್ತೆಂದು ತಿಳಿಯುತ್ತದೆ. 'ಬಲಮುಹೂರ್ತ'(೪:೪೩) ದಲ್ಲಿ ಬಸವಗಂಗಾಂಬೆಯರ ವಿವಾಹವಾಯಿತೆಂದು ಕವಿ ಹೇಳುವುದನ್ನು ನೋಡಿದರೆ ಅಂದಿನ ದಿನಮಾನಗಳಲ್ಲಿ ಮುಹೂರ್ತ ನೋಡಿ ವಿವಾಹ ಮಾಡುವ ಪದ್ಧತಿ ಪ್ರಚಲಿತವಿತ್ತೆಂದು ಹೇಳಬಹುದು. 'ರಾಶಿಕೂಟಗಣಸಂಬಂಧ' 'ಚಂದ್ರಬಲತಾರಾಬಲ'ಗಳನ್ನು ತಿರಸ್ಕರಿಸಿದ ವಚನಕಾರರ

ನಂತರ ಮತ್ತೆ ಅಂತಹ ಆಚರಣೆಗಳು ಭೀಮಕವಿಯ ಕಾಲಕ್ಕೆ ಸ್ಥಿರಗೊಂಡಿದ್ದನ್ನು ಗಮನಿಸಬಹುದು.

ಉ. ಪ್ರತಿಲೋಮ ವಿವಾಹ :

"ಗಂಡ ಶಿವಲಿಂಗದೇವರ ಭಕ್ತ ,ಹೆಂಡತಿ ಮಾರಿ ಮಸಣಿಯ ಭಕ್ತೆ, 'ಗಂಡ ಕೊಂಬುದು ಪಾದೋದಕ ಪ್ರಸಾದ, ಹೆಂಡತಿ ಕೊಂಬುದು ಸುರೆ ಮಾಂಸ" (ಸ.ವ.ಸಂ.೧: ವ.೧೦೪) ಎಂದು ವೀರಶೈವ, ಶೈವೇತರ ದಾಂಪತ್ಯವನ್ನು ಬಸವಣ್ಣನವರೂ ಟೀಕಿಸುತ್ತಾರೆ. ವಿವಾಹವು ಕುಟುಂಬವಿಕಾಸಕ್ಕೆ ಕಾರಣವಾಗುತ್ತದೆ. ಕೆಲವೊಮ್ಮೆ ಕುಟುಂಬ ಅಸ್ತವ್ಯಸ್ತವಾಗುವುದೂ ಉಂಟು. ಶಿವಭಕ್ತರು ಯಾವುದೇ ಜಾತಿಯಾಗಿದ್ದರೂ ಅವರ ಮಧ್ಯ ವಿವಾಹಸಂಬಂಧ ನೆರವೇರಬಹುದೆಂಬುದು ಬಸವಣ್ಣನವರ ಅಭಿಪ್ರಾಯವಾಗಿತ್ತು. ಅವರೆ ಇದಕ್ಕೆ ಉದಾಹರಣೆಯಾಗಿ ನಿಂತಿದ್ದನ್ನು ಹಿಂದಿನ ಅಧ್ಯಾಯದಲ್ಲಿ ಗಮನಿಸಿದ್ದೇವೆ. ಇಂತಹ ಕ್ರಾಂತಿಕಾರಕ ಸಂದರ್ಭಗಳಲ್ಲಿ ಜೈನವರ್ಗ ಹಾಗೂ ವಿಪ್ರವರ್ಗ ಸಿಡಿದುನಿಂತು ಘೋರ ದುರಂತಗಳನ್ನೆದುರಿಸಿದ ಸಂದರ್ಭಗಳ ಉಲ್ಲೇಖ ಬಸವಪುರಾಣದಲ್ಲಿ ದೊರೆಯುತ್ತದೆ.

'ಪರಿವಳಿಗೆಯ ವೈಜಿಕವ್ವೆ' ಮತ್ತು 'ತಿಲಕವ್ವೆ' ಯರ ಕಥೆಗಳನ್ನು ಇದಕ್ಕೆ ದೃಷ್ಟಾಂತವಾಗಿ ಕವಿ ವಿವರಿಸುತ್ತಾನೆ. (೫೧: ೧–೨೫, ೨೬–೨೭) ಶಿವಭಕ್ತೆಯಾದ ವೈಜಿಕವ್ವೆಯನ್ನು ಗಂಡನಾದ ಜೈನಶೆಟ್ಟಿಯು ಚಮ್ಮಟಿಗೆಯಿಂದ ಹೊಡೆಯುವ ಉಲ್ಲೇಖ ದೊರೆಯುತ್ತದೆ. (೫೧: ೮) ಇದಕ್ಕೆ ಕಾರಣ ಈ ಇಬ್ಬರೂ ಶರಣೆಯರು ಜೈನ ಪತಿಗಳನ್ನು ತೊರೆದು, ಶಿವನನ್ನು ಮೊರೆಹೊಕ್ಕು ಪತಿಭಕ್ತಿ–ಶಿವಭಕ್ತಿ ಇವುಗಳಲ್ಲಿ ಶಿವಭಕ್ತಿಯನ್ನು ಆಯ್ದುಕೊಂಡು ಮುಕ್ತಿ ಪಡೆದರೆಂಬುದನ್ನೂ ವಿವರಿಸಲಾಗಿದೆ. ಕಥಾನಾಯಕನ ವಿವಾಹವನ್ನು ಹೊರತುಪಡಿಸಿದಂತೆ ಮಿಕ್ಕ ವಿವಾಹವರ್ಣನೆಗಳು ಬಂದಿಲ್ಲ. ಬಿಜ್ಜಳ ಹರಳಯ್ಯ ಹಾಗೂ ಮಧುವಯ್ಯಗಳ ಕಣ್ಣು ಕೀಳಿಸಿದ್ದೇ (೬೦:೪) ಈ ವಿಷಮ ವಿವಾಹದ ಕಾರಣಕ್ಕಾಗಿ ಎಂಬುದು ಹೊಳೆಯದಿರದು. ಈ ಕಾರಣದಿಂದ ಘೋರ ದುರಂತಗಳಿಗೆಡೆಕೊಟ್ಟದ್ದು ಬೇರೆಯ ಸಂಗತಿ. ಒಟ್ಟಿನಲ್ಲಿ ಈಗಿನಂತೆ ಮದುವೆ ಸಂಸ್ಥೆ ಸ್ಥಿರವಾಗಿತ್ತು. ವಿವಾಹದ ವಿಷಯದಲ್ಲಿ ಸ್ತ್ರೀಗೆ ಸ್ವಾತಂತ್ರ್ಯವಿರಲಿಲ್ಲ. ವಿವಾಹದ ವಿಧಿ–ವಿಧಾನಗಳು ಪ್ರಾಚೀನ ಪರಂಪರೆಯನ್ನು ಅನುಸರಿಸಿರುವುದು ಕಂಡುಬರುತ್ತದೆ. ಜನಸಾಮಾನ್ಯರ ವಿವಾಹಪದ್ಧತಿಗಳ ವರ್ಣನೆ ಇಲ್ಲಿ ದೊರೆಯುವುದಿಲ್ಲ.

ಊ. ಅಂತ್ಯೇಷ್ಟಿಕರ್ಮ :

ಶಿಲಾಯುಗದ ಮಾನವ ಸತ್ತ ಮನುಷ್ಯನ ದೇಹವನ್ನು ಶವಸಂಸ್ಕಾರ ಮಾಡದೆ ಹಾಗೆಯೇ ಬಿಟ್ಟು ಹೋಗುತ್ತಿದ್ದ ಬಗೆಯನ್ನು ಇತಿಹಾಸಕಾರರು ಹೇಳುತ್ತಾರೆ. ನಾಗರಿಕತೆ ಬೆಳೆದಂತೆ ಅಂತ್ಯಸಂಸ್ಕಾರ ಕ್ರಿಯೆಗಳು ಎಲ್ಲ ದೇಶಗಳಲ್ಲಿ ಪ್ರಚಲಿತದಲ್ಲಿವೆ. ಭರತಖಂಡದಲ್ಲಿ ಮಾತ್ರ ಶವಗಳನ್ನು ಹೂಳುವುದು ಮತ್ತು ಸುಡುವ ಪ್ರಭೇದಗಳು ಕಂಡುಬರುತ್ತವೆ. "ಬುದ್ಧನು ಸತ್ತವರ ಹೆಣಗಳನ್ನು ಹರಿಯುವ ನೀರಿಗೆಸೆಯಬೇಕೆಂದು ಅಪ್ಪಣೆ ಮಾಡಿದನೆಂದು ಜನರು ಹೇಳುತ್ತಾರೆ. ಅದರಂತೆ ಅವನ ಅನುಯಾಯಿಗಳಾದ ಶಮನೀಯರು (ಶ್ರವಣರು) ಶವಗಳನ್ನು ನೀರಿಗೆಸೆಯುತ್ತಾರೆ" (ನಾಗೇಗೌಡ ಎಚ್.ಎಲ್. ಪ್ರವಾಸಿ ಕಂಡ ಇಂಡಿಯಾ, ಪು.೩೪೯) ಎಂದು ಅಲ್ಬೆರೂನಿಯು ಹೇಳುತ್ತಾನೆ.

ಬಸವಪುರಾಣದಲ್ಲಿ ಶವಗಳನ್ನು ಹೂಳುವ ಉಲ್ಲೇಖಗಳು ದೊರೆಯುತ್ತವೆ. ಸತ್ತವರನ್ನು ಸುಡಬಾರದೆಂದು ವಚನಕಾರರು ಹೇಳುತ್ತಾರೆ. ಮಂತ್ರದಿಂದ ಆಗಲೇ ಸುಡಲ್ಪಟ್ಟವರನ್ನು ಪುನಃ ಸುಡಬಾರದೆಂದು ಅವರ ನಂಬಿಕೆ. (ಚ.ಬ.ವ. ವ.೧೭೦) ಇಂದಿಗೂ ಸಹ ವೀರಶೈವರಲ್ಲಿ ಈ ಪದ್ಧತಿ ಉಳಿದುಕೊಂಡು ಬಂದದ್ದನ್ನು ಗಮನಿಸಬಹುದು. ಭೀಮಕವಿಯು ಶವಗಳನ್ನು ಸಾಗಿಸಲು ಬಳಸುತ್ತಿದ್ದ ಚಟ್ಟವನ್ನು 'ವಿಮಾನ' ಎಂದು ಕರೆಯುತ್ತಾನೆ. (೩೧:೧೨) 'ಸಿದಿಗೆ',(೩೧:೪೩) 'ಮಾಡ' (೩೧:೫೬) ಎಂಬ ಉಲ್ಲೇಖಗಳೂ ಸಹ ದೊರೆಯುತ್ತವೆ.

ಶವಸಂಸ್ಕಾರಗಳನ್ನು ಮನೆಯಲ್ಲಿ , ದೇವರ ಜಗುಲಿಯ ಕೆಳಗೆ ನೆರವೇರಿಸುವ ಪದ್ಧತಿ ದೊರೆಯುವುದು ಅತ್ಯಂತ ಗಮನಾರ್ಹ. ಚಿಕ್ಕಮಾದಣನೆಂಬ ಭಕ್ತನು ತೀರಿಕೊಂಡಾಗ ಅವನ ಹೆಂಡತಿ ಪಾದೋದಕದಿಂದ ಶವವನ್ನು ತೊಳೆದು ದೇವರ ಕೋಣೆಯಲ್ಲಿ ಕುಳಿ ತೋಡತೊಡಗಿದ ಸಂದರ್ಭ ಬರುತ್ತದೆ. (ಸಂ.೪೯) ಸ್ತ್ರೀಯನ್ನು ಕೀಳಾಗಿ ಕಾಣುತ್ತಲಿದ್ದ ಕಾಲಕ್ಕೆ ಒಡ್ಡಿದ ಪ್ರತಿಭಟನೆಯಂತೆ ಈ ಸಂದರ್ಭ ಭಾಸವಾಗುತ್ತದೆ. ಸ್ತ್ರೀಯರಿಗೆ ಸಾಮಾಜಿಕವಾಗಿ ದೊರೆತ ಅತ್ಯಂತ ಕ್ರಾಂತಿಕಾರಕ ಸಂದರ್ಭವಿದೆಂದು ಹೇಳಬಹುದು.

'ಸೋಮನಾಥ –ಅಣ್ಣಲದೇವಿ' ಎಂಬ ಭಕ್ತ ದಂಪತಿಗಳು ಹಾವು ಕಚ್ಚಿ ಸತ್ತ ತಮ್ಮ ಮಗನನ್ನು ಮನೆಯೊಳಗೆ ವೇದಿಕೆಯನ್ನಗಿದು ಸಮಾಧಿಗೊಳಿಸಿದ ಉಲ್ಲೇಖ ದೊರೆಯುತ್ತದೆ. (ಸಂ.೪೭) ಶಿವಭಕ್ತರು ಮಾತ್ರ ಹೀಗೆ ಮನೆಯಲ್ಲಿ ಶವಸಂಸ್ಕಾರ ಮಾಡುತ್ತಿದ್ದರೋ ಅಥವಾ ಇನ್ನುಳಿದ ವರ್ಗದ ಜನ ಇದೇ ರೀತಿಯಾಗಿ ಮಾಡುತ್ತಿದ್ದರೋ ಎಂಬ ಬಗ್ಗೆ ವಿವರ ದೊರೆಯುವುದಿಲ್ಲ. ಮನೆಯಲ್ಲಿಯೇ ಶವಸಂಸ್ಕಾರ ಮಾಡುವ ಪದ್ಧತಿ ಮಾತ್ರ ವಿಶಿಷ್ಟವಾದುದಾಗಿದೆ.

೩. ಸಾಂಪ್ರದಾಯಿಕ ಅಂಶಗಳು :

ಪಾರಂಪರಿಕವಾಗಿ ಸಮಾಜದಲ್ಲಿ ಬೆಳೆದು ಬಂದ ಅಂಧಶ್ರದ್ಧೆಗಳು ಮತ್ತು ಸಾಂಪ್ರದಾಯಿಕ ಅಂಶಗಳು ಸಮಾಜವನ್ನು ನಿಯಂತ್ರಿಸುತ್ತವೆ. ಇವುಗಳಿಲ್ಲದ ಸಮಾಜವೇ ಇಲ್ಲವೆಂದು ಹೇಳಬಹುದು. ಈ ಭಾವನೆಗಳಿಗೆ ಸಮಾಜದಲ್ಲಿ ಅಪಾರ ಮಹತ್ವವಿದೆ. ಆದ್ದರಿಂದಲೇ ಇವುಗಳು ಇಂದಿನ ನಾಗರಿಕ ಸಮಾಜದಲ್ಲಿ ಸ್ಥಾಯಿಯಾಗಿ ಉಳಿದುಕೊಂಡಿವೆ. ಎಷ್ಟೋ ಸಾರಿ ಕೆಲವು ಸಂಪ್ರದಾಯಗಳೂ ವೈಜ್ಞಾನಿಕ ಅಂಶಗಳನ್ನು ಹೊಂದಿರಬಹುದು. ಕಾಲದಿಂದ ಕಾಲಕ್ಕೆ ಹಲವು ಸಂಪ್ರದಾಯಗಳನ್ನು ತಿರಸ್ಕರಿಸುವ, ಹೊಸ ಸಂಪ್ರದಾಯಗಳನ್ನು ಅಳವಡಿಸಿಕೊಳ್ಳುವ ಬಗೆ ಸಮಾಜದ ಚಲನಶೀಲತೆಯನ್ನು ತೋರಿಸುತ್ತದೆ. ವಚನಕಾರರು ಸಂಪ್ರದಾಯಗಳನ್ನು ಸಾರಾಸಗಟಾಗಿ ತಿರಸ್ಕರಿಸಿದರೂ ಸಹ ಕವಿ ಪ್ರಜ್ಞೆಯಲ್ಲಿ ಇವುಗಳು ಉಳಿದುಕೊಂಡು ಬಂದದ್ದನ್ನು ಗಮನಿಸಬಹುದು. ಅಂತಹ ಪ್ರಮುಖ ಸಾಂಪ್ರದಾಯಿಕ ಅಂಶಗಳನ್ನು ಬಸವಪುರಾಣದಲ್ಲಿ ಗುರುತಿಸುವ ಪ್ರಯತ್ನ ಮಾಡಲಾಗಿದೆ.

ಜನನ, ಮರಣ, ವಿವಾಹ, ಪೂಜೆ, ಪರ್ವದಂತಹ ಪ್ರಸಂಗಗಳಲ್ಲಿ ಮೂಹೂರ್ತಗಳ ಪಾತ್ರ ದೊಡ್ಡದು. ಇಂತಹ ಪದ್ಧತಿಗಳನ್ನು ವಚನಕಾರರು ಖಂಡಿಸುತ್ತಾರೆ. ಹೀಗಿದ್ದೂ ಭೀಮಕವಿಯ ಕಾಲದಲ್ಲಿ ಅವು ಉಳಿದುಕೊಂಡು ಬಂದಿದ್ದವು. ಬಸವಣ್ಣನವರ ಮದುವೆಯ ಸಂದರ್ಭದಲ್ಲಿ 'ಶುಭಚಿಹ್ನ' ಮತ್ತು 'ಬಲಮುಹೂರ್ತ' ಎಂಬ ಪದಗಳ ಉಲ್ಲೇಖವಿದ್ದು (೪:೪೩) ಇಂತಹ ಮುಹೂರ್ತದಲ್ಲಿ ಬಲದೇವನು ಬಸವ ಗಂಗಾಂಬೆಯರ ವಿವಾಹ ಮಾಡಿದನೆಂದು ಕವಿ ಬರೆಯುತ್ತಾನೆ. ಇಂದಿನ ಜ್ಯೋತಿಷಿಗಳು, ಜೋಯಿಸರು ಇದ್ದ ಹಾಗೆ ಅಂದು 'ಮುಹೂರ್ತಿಕರು' ಇದ್ದರೆಂದು ಊಹಿಸಬಹುದು. ಅವರ ಕೆಲಸ ಮುಹೂರ್ತ ನೋಡುವುದಾಗಿತ್ತು.

ಅ. ಹೂ ಬೀಳುವುದು :

ಇಂದಿಗೂ ಸಹ ಈ ನಂಬಿಕೆ ಜನರ ಮನಸ್ಸಿನಲ್ಲಿ ಬಲವತ್ತರವಾಗಿ ಬೆಳೆದು ಬಂದಿದ್ದನ್ನು ಕಾಣುತ್ತೇವೆ. ತಮ್ಮ ಆಸೆ-ಅಪೇಕ್ಷೆಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಅದನ್ನು ತಮ್ಮ ಆರಾಧ್ಯದೈವದ ಮುಂದೆ ನಿವೇದಿಸಿಕೊಂಡು ದೇವರ ಪ್ರತಿಮೆಗಳಿಗೆ ಏರಿಸಿದ ಹೂ ಬಿದ್ದರೆ ಅಪೇಕ್ಷೆಗಳು ಈಡೇರುತ್ತವೆಂಬ ನಂಬಿಕೆಯೇ ಇದಕ್ಕೆ ಕಾರಣ. ಈ ಕುರಿತಂತೆ ಭೀಮಕವಿಯ ಬಸವಪುರಾಣದಲ್ಲಿ ಆಧಾರ ಸಿಗುತ್ತದೆ. ಮಾದಲಾಂಬೆಯು ಈಶ ಭಕ್ತಿಯ ಕಂದನು ನನಗೆ ಜನಿಸಿದರೆ ನಿನ್ನ ಹೆಸರನ್ನಿಡುತ್ತೇನೆಂದು ನಂದಿಕೇಶ್ವರನನ್ನು ಭಕ್ತಿಯಿಂದ ಬೇಡುತ್ತಾಳೆ. ಅವಳ ಭಕ್ತಿಯನ್ನು ಈಡೇರಿಸಲೋ ಎಂಬಂತೆ–

> ಇಂಡೆಯಂ ಕರುಣಿಸಲದಂ ಕೈ
> ಕೊಂಡುರದೊಳಾನನದೊಳೊತ್ತುತೆ
> ಮಂಡೆಯಲಿ ಸೂಡಿಗಳು ಮಾನಿನಿ ತತ್‌ಪ್ರಸಾದವನು. (೨:೫೫)

ಎಂದು ಕವಿ ಬರೆಯುತ್ತಾನೆ. ಆದರೆ ಇಲ್ಲಿ 'ಇಂಡೆ' ದೇವರ ಬಲಗಡೆಯದ್ದೊ ಎಡಗಡೆಯೆದ್ದೊ ಎಂಬ ಬಗ್ಗೆ ಮಾಹಿತಿ ಇಲ್ಲ. ಏಕೆಂದರೆ ಬಲಗಡೆ ಹೂವೇ ಸಂಕಲ್ಪ ಈಡೇರಿಕೆಗೆ ಶ್ರೇಷ್ಠ ಎಂಬ ಭಾವನೆ ಸಮಾಜದಲ್ಲಿದೆ. ಅಂದೂ ಸಹ ಈ ಪದ್ಧತಿ ಪ್ರಚಲಿತದಲ್ಲಿದ್ದಿತೆಂದು ತಿಳಿಯುತ್ತದೆ.

೩. ಮಾರಿಮಸಣಿ– ದೆವ್ವಭೂತ :

ಪ್ರಾಚೀನ ಕಾಲದಿಂದಲೂ ಅಸ್ವಸ್ಥ ಮನಸ್ಸುಗಳನ್ನಾಳಿಕೊಂಡು ಬರುತ್ತಿರುವವರಲ್ಲಿ ಮಾರಿಮಸಣಿಯರು, ದೆವ್ವಭೂತಗಳು ಪ್ರಮುಖವಾದವುಗಳು. ಇವುಗಳನ್ನು ಗ್ರಹ, ಗಾಳಿ, ಪಿಶಾಚಿ, ರಾಕ್ಷಸ, ಅಂತರ, ಬೆಂತರ, ಬ್ರಹ್ಮರಾಕ್ಷಸ, ಬೇತಾಳ ಮುಂತಾದ ಉಪನಾಮಗಳಿಂದ ಕರೆಯುತ್ತಾರೆ. 'ಗ್ರಹ' ಪದದ ತದ್ಭವ 'ಗರ' ಎಂದಾಗಿದ್ದು ಈ ಕುರಿತು ಬಸವಣ್ಣನವರ ಒಂದು ವಚನದಲ್ಲಿ ಉದಾಹರಣೆ ದೊರೆಯುತ್ತದೆ. ಗರ ಹೊಡೆದವರನ್ನು ಸುಲಭವಾಗಿ ಮಾತಾಡಿಸಬಹುದು. ಆದರೆ ಶ್ರೀಮಂತಿಕೆಯೆಂಬ ಗರ ಅದಕ್ಕಿಂತ ಅಪಾಯವಾದದ್ದೆಂಬುದನ್ನು ಬಸವಣ್ಣನವರು ಹೇಳುತ್ತಾರೆ. (ಸ.ವ.ಸಂ.೧: ವ.೧೩೨) ವಚನಕಾರರಲ್ಲಿ ಸಮೃದ್ಧವಾಗಿ ಇವುಗಳ ಮಾಹಿತಿ ಸಿಗುತ್ತದೆ. ಅಂದರೆ ಅಂದಿನ ಸಮಾಜದಲ್ಲಿ ಇವುಗಳ ಪ್ರಭಾವ ಸಾಕಷ್ಟಿತ್ತೆಂಬುದನ್ನು ಊಹಿಸಬಹುದು. ಈ ದುಷ್ಟ ಶಕ್ತಿಗಳು "ಹಾಳು ಪ್ರದೇಶಗಳಲ್ಲಿ, ಊರಿನ ದಾರಿಯಲ್ಲಿ, ಕೆರೆ ಬಾವಿಗಳಲ್ಲಿ, ಆಲದ ಮರಗಳಲ್ಲಿ ವಾಸಿಸುತ್ತ , ಕರೆಯುವ ಎಮ್ಮೆ, ಎಳೆಯ ಮಕ್ಕಳು, ಬಸುರಿ ಬಾಣಂತಿಯರು, ಎಳೆಯ ಹುಡುಗಿಯರು, ಕನ್ಯೆಯರನ್ನು ಹಿಡಿಯುತ್ತವೆಂಬ ನಂಬಿಕೆಯಿತ್ತು" (ನಾರಾಯಣ ಪಿ.ವಿ. ೧೯೮೭, ಪು.೧೧೯) ದುಷ್ಟ ಶಕ್ತಿಗಳನ್ನು ಉಗ್ರದೇವತೆಗಳನ್ನು ದುಡಿಸಿಕೊಳ್ಳುವ ಜನರಿದ್ದರು. ಅವು ಹೆಚ್ಚಾಗಿ ಕೋಟೆ ಕೊತ್ತಲ ಪ್ರದೇಶಗಳಲ್ಲಿ ಬೀಡು ಬಿಟ್ಟಿದ್ದು ಅವುಗಳನ್ನು ಕಾಯುವ ಉಗ್ರ ದೇವತೆಗಳೆನಿಸಿದ್ದವು. ಈ ಉಗ್ರ ದೇವತೆಗಳಿಂದ ಮಾಡಿಸಿಕೊಂಡ ಅಮಾನುಷ ಕಾರ್ಯಗಳು ಪವಾಡಗಳಂತೆ ರೂಪ ಪಡೆಯುತ್ತಿದ್ದವು. (ಪಾಟೀಲ ಸದಾನಂದ, ೧೯೯೯, ಪು.೫೬)

ಬಸವಪುರಾಣದಲ್ಲಿ 'ಮಸಣಿ', (೨೨:೧೮) 'ಮಾರಿ', (೨೨:೧೯) 'ಚಂಡಿಕೆ', (ಅದೇ) 'ಭೈರವ', (ಅದೇ) 'ಬೆಂತಜ', (೨೨:೨೦) 'ಜಕ್ಕಿ' , 'ಭೂತ' (೫೬:೧೦) ಮುಂತಾದ ದುಷ್ಟಶಕ್ತಿಗಳ ಉಲ್ಲೇಖ ದೊರೆಯುತ್ತದೆ. 'ಮಸಣಿ' ಯರು ಶಂಕರದಾಸಿಮಯ್ಯಗಳ ಮನೆಯ ಮುಂದಿನ ಕಸ ಹೊಡೆಯುವುದು ರಾತ್ರಿಯೆಲ್ಲ ಮಠ ಸ್ವಚ್ಛ ಮಾಡುವುದು ಹೀಗೆ 'ಬಿಟ್ಟಿ' ಕೆಲಸ ಮಾಡಿಸಿಕೊಂಡ ವಿವರವನ್ನು ಭೀಮಕವಿ ಕೊಡುತ್ತಾನೆ.(೨೨:೧೮) ಶಂಕರದಾಸಿಮಯ್ಯನು ಗಣಪರ್ವ ಮಾಡಲೆಳೆಸಿದಾಗ ಧಾನ್ಯ ಕುಟ್ಟಲು ಮಾರಿಕವ್ವೆಗೆ ಆದೇಶಿಸುತ್ತಾನೆ. ಅವನ ಅಣತಿಯಂತೆ ಮಾರಿ ರಾತ್ರಿಯೆಲ್ಲ ಶಿವನನ್ನು ಹಾಡಿ ಹೊಗಳುತ್ತ ಕೊಟ್ಟಣ ಕುಟ್ಟಿದವೆಂದು ಕವಿ ಬರೆಯುತ್ತಾನೆ. (೨೨:೧೯) ಚಂಡಿಕೆಯು ಪಶುಗಳನ್ನು ಕಾಯ್ದದ್ದು , ಭೈರವನಿಂದ

ಕಟ್ಟಿಗೆಯನ್ನು ತರಿಸಿಕೊಂಡ ವಿವರವನ್ನು ಭೀಮಕವಿ ಕೊಡುತ್ತಾನೆ. (ಅದೇ) ಶಂಕರದಾಸಿಮಯ್ಯಗಳು ಹೇಳುವ ಒಂದೊಂದು ಕೆಲಸವನ್ನು ಶೀಘ್ರವಾಗಿ ಬೆಂತಱಗಳು ಮಾಡಿ ಮುಗಿಸಿದವು. 'ಜಕ್ಕಿ'ಯರು ದಾಸಿಯರಾಗಿ ಸೇವೆ ಮಾಡಿದರೆಂದು ಕವಿ ಹೇಳುತ್ತಾನೆ. (೨೨:೨೦)

ಉದುಭಟನೆಂಬ ಶಿವಶರಣನ ಚಿತೆಯ ಹೊಗೆ ಸೋಂಕಿಸಿಕೊಂಡು ಮುಕ್ತಿ ಕಾಣಲು ಏಳನೂರು ಭೂತಗಳು ಹನ್ನೆರಡು ವರ್ಷಗಳಿಂದ ಕಾದು ಕುಳಿತಿದ್ದವೆಂಬ ಅಂಶ ಪುರಾಣದಲ್ಲಿ ದೊರೆಯುತ್ತದೆ. (೫೬:೧೦-೧೭) ಶಿವಶರಣನ ಹೊಗೆ ಸೋಕಿದೊಡನೆ ಅವುಗಳು ಮುಕ್ತಿಯನ್ನು ಕಂಡುಕೊಂಡವು ಎಂಬ ಚಿತ್ರಣವನ್ನು ಕವಿ ಕೊಡುತ್ತಾನೆ. ಅಲ್ಲದೇ ಈ ಭೂತಗಳು ಆಲದ ಮರದಲ್ಲಿ ವಾಸ ಮಾಡುತ್ತಿದ್ದವೆಂದು ಹೇಳುತ್ತಾನೆ. (೫೬: ೧೨) ಈ ಮೇಲಿನ ಎರಡು ಸನ್ನಿವೇಶಗಳಿಂದ ಅಂದಿನ ಶಿವಶರಣರು ದುಷ್ಟಶಕ್ತಿಗಳನ್ನು ವಶದಲ್ಲಿಟ್ಟುಕೊಂಡು ಅತಿಮಾನುಷರಾಗಿ ಸಮಾಜದಲ್ಲಿ ಪೂಜ್ಯ ಭಾವನೆಯನ್ನು ಹೊಂದಿದ್ದರೆಂದೂ, ಶಿವಶರಣರಿಗೆ ಸಮಾಜದಲ್ಲಿ ಅತ್ಯಂತ ಗೌರವಾದರ ಭಾವನೆಗಳು ಮೂಡಿದ್ದವೆಂದು ಹೇಳುವುದು ಕವಿಯ ಉದ್ದೇಶವಾಗಿರಬಹುದು. ಶಿವಶರಣರ ಮಹತ್ವ ಇಂತಹ ಘಟನೆಯ ಹಿನ್ನೆಲೆಯಲ್ಲಿ ಹೆಚ್ಚುತ್ತಿರುವುದನ್ನು ಮನಗಾಣಬಹುದಾಗಿದೆ.

ಈ. ಕನಸುಗಳು :

ಮುಂದಾಗುವ ಭವಿಷ್ಯ ಸೂಚನೆಗಳು ಕನಸಿನಲ್ಲಿ ಘಟಿಸುತ್ತವೆಂಬ ನಂಬಿಕೆಯನ್ನು ಜನ ಒಪ್ಪುತ್ತಾರೆ. ವೈಜ್ಞಾನಿಕವಾಗಿ ಕನಸುಗಳಿಗೆ ಬೇರೆಯೇ ಅರ್ಥಗಳಿವೆ. ಆದರೆ ಸಾಂಪ್ರದಾಯಿಕ ನಂಬಿಕೆಗಳು ಅದಕ್ಕೊಂದು ಕಲ್ಪಿತ ಭಾವನೆಯನ್ನು ಆರೋಪಿಸಿ ದೈನಂದಿನ ಬದುಕಿನ ಕಷ್ಟಸುಖಗಳನ್ನು ಮರೆಯಲು ಪ್ರಯತ್ನಿಸುತ್ತಿರುವುದನ್ನು ಇಂದಿಗೂ ಸಹ ಮನಗಾಣಬಹುದು.

ಶಿವಶರಣರು ಅನುಭಾವಿಗಳು; ಭಕ್ತಿಪರವಶರು. ಭೀಮಕವಿಯು ಸಹ 'ಶಿವಯೋಗಿ' ಎಂದು ಕಾಣುತ್ತದೆ. ಬಸವಣ್ಣನವರ ಕಾವ್ಯವನೆಂತು ರಚಿಸುವುದು ಎಂಬ ಶಂಕೆಯಿಂದ 'ಶಿವಯೋಗನಿದ್ರಾಮುದ್ರೆ'ಯೊಳಿದ್ದಾಗ ಕವಿಯ ಕನಸಿನಲ್ಲಿ ಪಾಲ್ಕುರಿಕೆ ಸೋಮನಾಥನೂ, ಅನಘದೇವಾರ್ಯನೂ, ತನ್ನ ತಂದೆ ಶಿವದೇವಾರ್ಯನೂ ಬಂದು-

> **...... ನಿನ್ನಾತ್ಮ ದೊಳಗಲದಿರ್ದು**
> **ನಾವು ರಚಿಸವೆವೆಸೆವ ಬಸವಕ**
> **ಥಾವಿಸರಮಂ ಬರೆದುಕೋ** (೧:೧೫)

ಎಂದು ಆಜ್ಞೆ ಮಾಡಿದರೆಂದು ಕವಿ ಹೇಳುತ್ತಾನೆ. ಸ್ವತಃ ಕವಿಯೇ ತನ್ನ ಕನಸಿನ ಬಗ್ಗೆ ಹೇಳುವುದು ಆಶ್ಚರ್ಯವಾಗಿದ್ದು ಇದೊಂದು 'ಧ್ಯಾನಾತ್ಮಕ ಪ್ರತಿಭೆ' ಎಂದು ಕರೆಯಬಹುದು. ಅಥವಾ ಪೂರ್ವಕವಿಗಳ ಹಾಗೂ ತನ್ನ ತಂದೆಯ ಬಗೆಗಿರುವ ಅಭಿಮಾನದ್ಯೋತಕವಾಗಿ

ಕವಿ ಈ ಅಭಿಪ್ರಾಯ ವ್ಯಕ್ತಪಡಿಸಿರಬಹುದು.

ಮಾದಲಾಂಬಿಕೆಯು ಗರ್ಭಿಣಿಯಾಗಿ ನವಮಾಸ ಕಳೆದರೂ ಹೆರಿಗೆಯಾಗಲಿಲ್ಲ. ಮೂರುವರ್ಷ ಕಳೆದರೂ ಹೆರಿಗೆಯಾಗದೆ 'ಕುಕ್ಕಟಗರ್ಭ'ದ ಅಸಾಧ್ಯ ನೋವನ್ನು ಸಹಿಸಲಾರದೆ ಪ್ರಯಾಸ ಪಡುವ ಸಂದರ್ಭದಲ್ಲಿ ಸ್ವತಃ ವೃಷಭಾಧಿಪತಿಯೆ ಅವಳ ಕನಸಿನಲ್ಲಿ ಬಂದು ಸಾಂತ್ವನ ನೀಡುವ ಸಂದರ್ಭವನ್ನು ಕವಿ ವಿವರಿಸುತ್ತಾನೆ. (೩:೧೮)

ಆದಿಗಾದಿಯನಾದಿ ನಂದಿ ಶಿ
ಲಾದನಣುಗನು ಶಿವನ ಬೆಸನದಿ
ವೇದಿತಾಮಳ ಭಕ್ತಿವರ್ಧನ ಕಾರಣದಿ ಬಂದು
ಮೇದಿನಿಯೊಳೊಗೆದಂ ನಿನಗೆ ಸ
ಮೋದದಿಂ ಪೇಳ್ದಪೆವು ಸೂನೃತ
ವಾದ ನುಡಿಯಂ ನಂಬಿ ಪದುಳಿರು ಚಿಂತಿಸದಿರಿನ್ನು..(೩: ೨೦)

ಈ ರೀತಿಯಾದ ಕನಸಿನಲ್ಲಿಯ ಮಾತುಗಳು ಮಾದಲಾಂಬಿಕೆಗೆ ಅತ್ಯಂತ ಸಂತೋಷವನ್ನು, ಆತ್ಮವಿಶ್ವಾಸವನ್ನು ತಂದು ಕೊಡುತ್ತವೆ.

ಕಳಹಸ್ತಿಯ ಗಿರಿಪ್ರದೇಶದಲ್ಲಿ ಕಣ್ಣಪ್ಪನು ಬೇಟೆಯಾಡಿ ಬಳಲಿ ನಿದ್ರಿಸುತ್ತಿರುವಾಗ ಶಿವನು ಅವನ ಕನಸಿನಲ್ಲಿ ಕಾಣಿಸಿಕೊಡು ಸೂಚನೆಯನ್ನು ಕೊಟ್ಟ ಸಂದರ್ಭದ ಉಲ್ಲೇಖವನ್ನು ಕವಿ ಕೊಡುತ್ತಾನೆ. (೧೭:೩)

ಭಾಗದಲಿ ಶಿವಲಿಂಗವದೆ ನೀಂ
ಹೋಗು ನಿನ್ನಯ ಪ್ರಾಣಲಿಂಗಂ ತಾನದುವೆಯೆಂದು
ರಾಗದಿಂದುಪದೇಶಿಸಿದ....... (೧೭: ४)

ಈ ಸೂಚನೆಯಂತೆ ಕನಸಿನಿಂದೆದ್ದ ಕಣ್ಣಪ್ಪನು ಮುಂದೆ ಹೋಗಿ ನೋಡಲು 'ದಿವ್ಯಲಿಂಗ' ವೊಂದನ್ನು ನೋಡಿ ಆಶ್ಚರ್ಯಚಕಿತನಾಗುತ್ತಾನೆಂದು ಕವಿ ಹೇಳುತ್ತಾನೆ. ಈ ಉದಾಹರಣೆಗಳ ಮೂಲಕ ಶಿವನು ಕನಸಿನಲ್ಲಿ ಕಾಣಿಸಿಕೊಂಡು ಸಮಸ್ಯೆಗಳನ್ನು ಪರಿಹರಿಸಿದ ಹಾಗೂ ಭಕ್ತಿಮಹಿಮೆಯನ್ನುಂಟುಮಾಡಿದ ಸಂದರ್ಭಗಳು ಗೋಚರವಾಗುತ್ತವೆ. ಆ ಮೂಲಕ ಕನಸುಗಳು ಸಾಮಾಜಿಕ ಜೀವನದ ಮುಖ್ಯ ಭಾಗವಾಗಿದ್ದ ಅಂಶ ತಿಳಿಯುತ್ತದೆ.

ಉ. ತಾಂತ್ರಿಕ ವಿದ್ಯೆ :

ಸಾಮಾಜಿಕ ಬದುಕಿನಲ್ಲಿ 'ಕುಟಿಲ' ವಿದ್ಯೆಗಳು ಜಾರಿಯಲ್ಲಿದ್ದವು. ಮಹಾತ್ಮರು ಇವುಗಳನ್ನು ರಚನಾತ್ಮಕ ಕೆಲಸಗಳಿಗೆ ಬಳಸಿಕೊಂಡರೆ ಇನ್ನುಳಿದವರು ಇವುಗಳನ್ನು ವಿಧ್ವಂಸಕ ಕೃತ್ಯಗಳಿಗೆ ಬಳಸಿಕೊಳ್ಳುವ ಉಲ್ಲೇಖಗಳು ದೊರೆಯುತ್ತವೆ. 'ಕೌಟಿಲ್ಯ', 'ಗತಿಸ್ತಂಭನ', 'ಮಂತ್ರ', 'ಮಾಯೆ', 'ಪವಾಡ' ಮುಂತಾದುವುಗಳು ಪ್ರಚಲಿತವಿದ್ದ ಬಗೆಯನ್ನು ಕಾಣಬಹುದು. (ಪಾಟೀಲ ಸದಾನಂದ, ೧೯೯೯, ಪು.೫೮) ಬಸವಪುರಾಣದಲ್ಲಿ 'ಮಂತ್ರ', 'ತಂತ್ರ', 'ಯಂತ್ರವಿದ್ಯೆ' ಹಾಗೂ

'ಮಹೇಂದ್ರಜಾಲ' ವಿದ್ಯೆಗಳ ಉಲ್ಲೇಖ ಕಂಡುಬರುತ್ತದೆ. (೫೦:೧೧) ಇಂತಹ ವಿದ್ಯೆಗಳು ಶಿವಭಕ್ತರು ಹಾಗೂ ಜೈನಧರ್ಮದ ಸಂಘರ್ಷದ ಸಂದರ್ಭದಲ್ಲಿ ಪ್ರಕಟವಾಗಿರುವುದು ವಿಶೇಷ. ಕೋವೂರ ಬೊಮ್ಮಯ್ಯನೆಂಬ ಭಕ್ತನು ವಾದದಲ್ಲಿ ಜೈನರನ್ನು ಸೋಲಿಸುತ್ತಾನೆ. ಆಗವರು ಒಂದು ಆಲದ ಮರವನ್ನು ತೋರಿಸಿ 'ಇದನ್ನು ನೀನು ಸುಡು, ಇಲ್ಲವೆ ನಾವು ಸುಡುವೆವು, ನೀನು ಬದುಕಿಸು' ಎಂಬುದಾಗಿ ಸವಾಲನ್ನು ಹಾಕುತ್ತಾರೆ. ಆಗ ಬೊಮ್ಮಯ್ಯನು 'ಜನಾಶ್ರಯವಾದ ಮರವನ್ನು ಸುಡಬಹುದೆ? ಬದುಕಿಸುವೆನು' ಎನ್ನುತ್ತಾನೆ. ಮಂತ್ರತಂತ್ರಗಳಿಂದ ಜೈನರು ಆ ಮರ ಸುಡುತ್ತಾರೆ. ಬೊಮ್ಮಯ್ಯನು ಆ ಬೂದಿಯ ಮೇಲೆ ಭಸಿತವನ್ನು ತಳಿದೊಡನೆ ಆ ಮರವು ಮುನ್ನಿನಂತೆ ಎದ್ದು ತಳತಳಿಸಿತು. (೪೯:೭೭-೭೯) ಎಂದು ಕವಿ ಹೇಳುತ್ತಾನೆ.

ಹೊಟಲಕೆರೆಯಲ್ಲಿ ದೇವರದಾಸಿಮಯ್ಯನು ರಾಜನಾದ ದೇಸಿಂಗರಾಯನ ಪ್ರಭಾವದಿಂದ ಮೆರೆಯುತ್ತಿದ್ದ ಜೈನರನ್ನು ಸೋಲಿಸಿದನೆಂಬ ಉಲ್ಲೇಖ ಕವಿ ಕೊಡುತ್ತಾನೆ.

ಅರುಹಮುನಿಗಳು ಮಂತ್ರತಂತ್ರಕುಯಂತ್ರ ವಿದ್ಯೆಗಳ
ವಿರಚಿನುತ್ತ ಮಹೇಂದ್ರಜಾಲಾ
ಪರಿಮಿತಾದ್ವಯ ಶೂನ್ಯಮಾಯಾ
ಕರಣವಿದ್ವಿಷ ಜೈನವೃ ತ್ತಿಯೊಳಿಂತು ತರ್ಕಿಸಲು......(೫೦: ೧೧)

ಎಂದು ಕವಿಯು ಹೇಳುತ್ತಾನೆ. ಇಂತಹ ತಾಂತ್ರಿಕ ವಿದ್ಯೆಗಳನ್ನು ಕುರಿತು ಜೈನರು ಪ್ರಶ್ನಿಸುತ್ತಾರೆ. ಆಗ ದಾಸಿಮಯ್ಯನು ಜೈನರೆಲ್ಲರನ್ನು ಸೋಲಿಸಿದನೆಂದು ಹೇಳುತ್ತಾನೆ. (೫೦: ೧೨) ಈ ಮೂಲಕ ಇಂತಹ ದುಷ್ಟ ವಿದ್ಯೆಗಳ ಪ್ರಯೋಗ ಸಮಾಜದಲ್ಲಿ ಪ್ರಚಲಿತವಿತ್ತು ಎಂದು ಭಾವಿಸಲು ಸಾಧ್ಯವಿದೆ.

೨೨. ಉತ್ಪಾತಗಳು :

ಅತಿಮಾನುಷ ಶಕ್ತಿಗೆ ಅನ್ಯಾಯವಾದಾಗ ಪ್ರಕೃತಿ ಪ್ರತಿಕ್ರಿಯಿಸುವ ಕ್ರಿಯೆಗಳನ್ನು ಉತ್ಪಾತಗಳೆಂದು ಕರೆಯಬಹುದು. ಪ್ರಾಚೀನ ಕಾಲದಲ್ಲಿ ಈ ನಂಬಿಕೆ ದಟ್ಟವಾಗಿತ್ತು ಎಂಬುದಕ್ಕೆ ಬಸವಪುರಾಣದಲ್ಲಿ ಹಲವಾರು ಉದಾಹರಣೆಗಳು ಸಿಗುತ್ತವೆ. ಜಗತ್ತಿಗೆ ಕತ್ತಲು ಆವರಿಸುವುದು, ಪ್ರಾಣಿಪಕ್ಷಿಗಳು ಅರಚುವುದು, ಗಿಡಮರಗಳು ಬಾಡುವುದು, ದೇವಾನುದೇವತೆಗಳು ಭಯಕ್ಕೊಳಗಾವುದು, ಬೆಂಕಿ ಕಾಣಿಸಿಕೊಳ್ಳುವುದು ಮುಂತಾದ ಹಲವಾರು ರೀತಿಯ ಉತ್ಪಾತಗಳ ಬಗೆಗಳನ್ನು ಭೀಮಕವಿ ಹೇಳುತ್ತಾನೆ.

ಆಧುನಿಕ ಯುಗದಲ್ಲೂ ಸಹ ನೆರೆ, ಚಂಡಮಾರುತ , ಭೂಕಂಪ, ಜ್ವಾಲಾಮುಖಿ, ಸುನಾಮಿ, ಮುಂತಾದ ಪ್ರಕೃತಿವಿಕೋಪಗಳಂತಹ ನೈಸರ್ಗಿಕ ಕ್ರಿಯೆಗಳಿಗೆ 'ಉತ್ಪಾತ'ಗಳು ಎಂದು ಭಾವಿಸಿ ದೈವದ ಹಿನ್ನೆಲೆಯನ್ನು ಆರೋಪಿಸುವುದುಂಟು.

'ದಯೆಯೇ ಧರ್ಮದ ಮೂಲ'ವೆಂಬ ಬಸವವಾಣಿಯು ಬಸವಪುರಾಣದ ಕಿನ್ನರಯ್ಯಗಳ ಕಥೆಯಲ್ಲಿ ವ್ಯಕ್ತವಾಗಿದೆ. ಪೂಡೂರಿನಲ್ಲಿಯ ಕಿನ್ನರಯ್ಯನು ತ್ರಿಪುರಾಂತಕನ ಭಕ್ತಿಸೇವೆ ಕೈಕೊಂಡ ಸಂದರ್ಭದಲ್ಲಿ ವಿಟನೊಬ್ಬನ ಕುರಿಯು ಕಿನ್ನರಯ್ಯಗಳ ಆಶ್ರಯ ಪಡೆಯುತ್ತದೆ. ವೇಶ್ಯೆಯ ಮನೀಷೆಯಂತೆ ಮಾರಿದ ಕುರಿಯನ್ನು ವಿಟನು ಕಿನ್ನರಯ್ಯರಿಂದ ಒತ್ತಾಯಪೂರ್ವಕವಾಗಿ ಕೇಳಲು ಬಂದು ಮಡಿಯುತ್ತಾನೆ. ಈ ಸಂದರ್ಭ ಬಿಜ್ಜಳನ ಹತ್ತಿರ ಹೋಗಿ ಸಂದರ್ಭಸ್ಪಷ್ಟತೆಗಾಗಿ ಕಿನ್ನರಯ್ಯಗಳು 'ತ್ರಿಪುರಾಂತಕಾ' ಎಂದು ಕೂಗುತ್ತಾರೆ. ಆಗ ಉಂಟಾದ ಉತ್ಪಾತಗಳ ವರ್ಣನೆಯನ್ನು ಭೀಮಕವಿ ಕೊಡುತ್ತಾನೆ. ಆತ ಹೇಳುವ 'ಉದಧಿಗಳು ಕದಡಿದವು', 'ಅನಲನು ಆರಿದನು', 'ಅಮರರು ಹೆದರಿದರು', 'ನಗಂಗಳು ತಗ್ಗಿದವು', 'ಲೋಕಂಗಳೆಲ್ಲ ತಮಂಧಮಯವಾದವು' (೨೭: ೫೬-೫೭) ಎಂಬ ಕವಿಯ ಮಾತುಗಳು ಪ್ರಕೃತಿಯ ಭೀಕರತೆಯನ್ನು ಕಲ್ಪಿಸಿಕೊಡುತ್ತವೆ. ಕಿನ್ನರಯ್ಯಗಳಿಂದಲೇ ಮತ್ತೆ ಪ್ರಕೃತಿ ಶಾಂತಸ್ಥಿತಿಗೆ ಮರಳಿತೆಂದು ಹೇಳುತ್ತಾನೆ.

ಪ್ರಸಾದದ ಮಹಿಮೆಯನ್ನು ವಿವರಿಸುವ ಸಂದರ್ಭದಲ್ಲಿ ಉತ್ಪಾತಗಳುಂಟಾಗಿ ಮತ್ತೆ ಶಾಂತವಾದ ಇನ್ನೊಂದು ಸಂದರ್ಭವನ್ನು ಕವಿ ಉಲ್ಲೇಖಿಸುತ್ತಾನೆ. ಸಿದ್ಧಪ್ರಸಾದದ ನೇಮವನ್ನು ಕೈಕೊಂಡ ಬಿಬ್ಬಿಬಾಚಯ್ಯನು ಬಂಡಿಯಲ್ಲಿ ಪ್ರಸಾದವನ್ನು ಹೇರಿಕೊಂಡು ಬರುವಾಗ ಬ್ರಾಹ್ಮಣರು ಇತ್ತ ಬರಬೇಡವೆಂದು ತಡೆಯುತ್ತಾರೆ. ಬಿಬ್ಬಿಬಾಚಯ್ಯಗಳ ಮಾತನ್ನು ಉಲ್ಲಂಘಿಸಿ ಪ್ರಸಾದಬಂಡಿಯ ಮೇಲೆ ಬ್ರಾಹ್ಮಣರು ದಾಳಿಯಿಡುತ್ತಾರೆ. ಅಗ ಬಾಚಯ್ಯನು ಪ್ರಸಾದಬಂಡಿಯ ಮೇಲುಹೊದಿಕೆಯನ್ನು ತೆರೆದೊಡನೆ ಉಂಟಾದ ಉತ್ಪಾತವನ್ನು ಕವಿ ವರ್ಣಿಸಿದ್ದಾನೆ.

ಛಿಟಿ ಛಿಟೀ ಛಿಟಿ ಭುಗಿಲು ಭಗಿ
ಛಿಟಿಲು ಭುಗಿಲನೆ ನೆಗೆದು ವಿಸ್ಫುಟ
ನಿಟಲತಟನಯನನ ನಿಟಲತಟನಯನಶಿಖಿಯಿಂದ
ವಟುಪುರಂಗಳು ಭೇದಮೋಲು
ತ್ಕಟವೆನಿಸಿ ಗೊಬ್ಬೂರೊಳಗಣಿತ
ಕುಟಿಲವಿಪ್ರರ ಗೃಹಚಯಮನಾಹುತಿಗೊಳುತ್ತಿರಲು...(೫೫: ೩೨)

ಎಂದು ಕವಿಯು ಪ್ರಸಾದವು ಪ್ರಳಯಾಗ್ನಿಯಾಗಿ ಧಾವಿಸಿ ಭೀಕರ ಪರಿಣಾಮವನ್ನುಂಟುಮಾಡಿದುದನ್ನು ಹೇಳುತ್ತಾನೆ. 'ಗುಡ್ಡಹರಿಗಳ ಮಾಳಿಗುರಿಯಿತು', 'ರಾಯರ ಮನೆ ಬೆಳಗಿದುದು', 'ಹೆಡ್ಡ ದಾಮೋದರ ಗೇಹವು ದಹನವಾಯಿತ್ತು' (೫೫: ೩೩) ಮುಂತಾಗಿ ಉತ್ಪಾತಗಳ ಹಿನ್ನೆಲೆಯಲ್ಲಿ ಪ್ರಸಾದಮಹಿಮೆಯನ್ನು ಮತ್ತು ವೈದಿಕ ವಿರೋಧಿ ಭಾವನೆಯನ್ನು ವ್ಯಕ್ತಪಡಿಸಲು ಕವಿಯು ಈ ಸಂದರ್ಭವನ್ನು ಬಹು ಪರಿಣಾಮಕಾರಿಯಾಗಿ ಬಳಸಿಕೊಂಡಿರುವಂತಿದೆ.

ಕೆಂಭಾವಿಯೆಂಬ ಮಹಾಗ್ರಹಾರದಲ್ಲಿ ಭೋಗಯ್ಯನೆಂಬೊಬ್ಬ ಶಿವಭಕ್ತ ಲಿಂಗಜಂಗಮಾರ್ಚಕನಾಗಿರುತ್ತಾನೆ. ಸತ್ತ ಕರುವನ್ನು ಜಂಗಮನಿಗೆ ಅಡಿಗೆಮಾಡಿ ಬಡಿಸಿದನೆಂದು ಕುಪಿತರಾದ ಬ್ರಾಹ್ಮಣರು 'ಅಂತ್ಯಜರನ್ನು ಒಳಹಾಕಿಕೊಂಡು ಅಗ್ರಹಾರವನ್ನು ಹೊಲಗೆಲಸುತ್ತಿರುವೆಯಲ್ಲಾ' ಎಂದು ಗದರಿದರು. ನೊಂದ ಭೋಗಯ್ಯನು ಅಗ್ರಹಾರ ತ್ಯಜಿಸುವಾಗ ಉಂಟಾದ ಉತ್ಪಾತಗಳನ್ನು ಕವಿ ವರ್ಣಿಸಿದ್ದಾನೆ. 'ಸಸ್ಯಗಳು ಬಾಗಿದವು', 'ಕವಿಯಿತ್ತಂಧಕಾರವು', 'ಕೂಪ ತಟಾಕ ಸರಸಿಗಳಹಗೆ ಬತ್ತಿದವು', 'ಪುಷ್ಪವಾಟಿಕೆಗಳು ಮುರುಟಿದವು', 'ಪಶುಗಳಬಿಚಿದವು', 'ನರಿ ಊಳಿದವು' (೫೬: ೪೭–೪೮) ಎಂಬಲ್ಲಿ ಉತ್ಪಾತಗಳ ಬಗೆಗಳನ್ನು ಕಂಡುಕೊಳ್ಳಬಹುದು. ಈ ಸಂದರ್ಭದಲ್ಲಿ ಭೋಗಯ್ಯನ ಬಳಿವಿಡಿದು ಕೆಂಭಾವಿಯ ಎಲ್ಲ ಶೈವ ಮನೆಗಳ ಹಾಗೂ ಗುಡಿಗಳಲ್ಲಿಯ ಲಿಂಗಗಳು ಹೋದವೆಂದು ಕವಿ ವಿವರಿಸುತ್ತಾನೆ. (೫೬:೪೬) ಲಿಂಗಭಕ್ತಿಯ ಆಧಿಕ್ಯವನ್ನು ವಿವರಿಸಲೊ ಎಂಬಂತೆ ಕವಿ ಈ ಸಂದರ್ಭವನ್ನು ಬಳಸಿಕೊಂಡಂತೆ ಕಾಣುತ್ತದೆ.

ವಿಷಮ ವಿವಾಹದ ನೆಪದಿಂದ ಬಿಜ್ಜಳನು ಹರಳಯ್ಯ ಹಾಗೂ ಮಧುವಯ್ಯಗಳ ಕಣ್ಣು ಕೀಳಿಸುತ್ತಾನೆ. ಆಗ ಮನನೊಂದ ಬಸವಣ್ಣನವರು ಜಂಗಮರನ್ನೊಳಗೊಂಡು ಸಂಗಮೇಶ್ವರಕ್ಕೆ ಹೊರಟ ಸಂದರ್ಭದಲ್ಲಿ ಉಂಟಾದ ಉತ್ಪಾತಗಳ ವಿವರವನ್ನು ಕೊಡುತ್ತಾನೆ. (೬೦: ೧೦)

ಧರಣಿ ಕಂಪಿತವಾಯ್ತು ಕಾಗೆಗ
ಳಿರುಳುಡುಗದಬಿಚಿದವು ಹಗಲುಂ
ನರಿಗಳೂಳಿದವುಳ್ಕು ಬಿದ್ದವು ಕಲ್ಲುಮಳೆ ಮೇಲೆ
ಸುರಿಯಿತಾದಿತ್ಯೇಂದುಗಳನಾ
ವರಿಸಿತಾ ಪರಿವೇಷವತಿ ನಿ
ರ್ಭರದೊಳನಿಲಂ ಬೀಸಿದನು ಕೆಂಧೂಳಿ ನೆಗೆಯಿತ್ತು..(೬೦: ೧೧)

ಹಗಲು ಮುಸುಗಿತು ಮಂಜುಗತ್ತಲೆ
ಗಗನದೊಳು ಭೀಕರ ಕೃತಾಂತನು
ವಿಗಡರೂಪಂ ತೋಜಿದನು ಪಟ್ಟಣ ಸಮೀಪದಲಿ
ಜಗತಿಯೊಡೆಯನು ಶಿರಸುವಿಲ್ಲದ
ಬಿಗಿದ ಹೆಣನುಂ ಕಂಡನುದಯಾ
ದ್ರಿಗೆ ತರಣಿ ಬಹ ಸಮಯದಲಿ ಪ್ರತಿಯಿನನುದಯಿಸಿದನು..(೬೦: ೧೨)

ಈ ಮೇಲಿನ ಎಲ್ಲ ಸಂದರ್ಭಗಳಲ್ಲಿ ಉತ್ಪಾತಗಳು ಪ್ರಾಕೃತಿಕ ಪ್ರತಿಕ್ರಿಯೆಗಳಾಗಿ ಪ್ರಕಟಗೊಂಡಿದ್ದನ್ನು ಕಾಣಬಹುದು. ಭೀಕರವಾದ ವಾತಾವರಣ ಎಂಥವರನ್ನು ಭೀತಿಗೊಳಿಸುತ್ತಿತ್ತು ಎಂಬ ಅಂಶ ಕಂಡುಬರುತ್ತದೆ. ಈ ಎಲ್ಲ ಉತ್ಪಾತಗಳ ಸಂದರ್ಭಗಳು ಕೇವಲ ಸಾಂಕೇತಿಕವೆಂದು ಕಂಡು ಬಂದರೂ ಇಂಥ ಮಹಾತ್ಮರಿಗಾದ ಅನ್ಯಾಯ ಸಮಾಜಕ್ಕೆ ತುಂಬಲಾರದ ನಷ್ಟ ಉಂಟುಮಾಡುತ್ತಿದ್ದವು ಎಂಬುದಂತೂ ಸತ್ಯ. ಈ

ಹಿನ್ನೆಲೆಯಲ್ಲಿ ಇವುಗಳು ಸಾಂಸ್ಕೃತಿಕ ಪರಿಸರದ ಉತ್ತಮ ಉದಾಹರಣೆಯಾಗಿ ನಿಲ್ಲಬಲ್ಲವು. ಜನಶಕ್ತಿ ಪ್ರತಿಭಟನಾಶಕ್ತಿ ಕಳೆದುಕೊಂಡಾಗ ಪಾಕೃತಿಕ ಶಕ್ತಿಯೇ ಉತ್ಪಾತಗಳ ಮೂಲಕ ತೋರುತ್ತಿದ್ದ ಪ್ರತಿಭಟನೆ ಇಲ್ಲೆಲ್ಲ ವ್ಯಕ್ತವಾಗಿದೆ ಎಂಬುದು ಗಮನಾರ್ಹ.

೪. ವಚನಕಾರರ ಕಾಣ್ಕೆಯ ಆದರ್ಶ ಸಮಾಜ :

ವಚನಕಾರರ ಪ್ರಕಾರ ಮಾತು ಕೇವಲ ಒಂದು ಶಬ್ದವಲ್ಲ. ಅದೊಂದು ಮಂತ್ರ ಮಂತ್ರಕ್ಕಿರುವ ಶಕ್ತಿಯೇ ಅವರ ಮಾತುಗಳಿಗಿದೆ. ಅವರ ನಡೆಯೊಂದು ಪರಿ ನುಡಿಯೊಂದು ಪರಿ ಆಗಿರಲಿಲ್ಲ. ನಡೆನುಡಿಗಳ ಸಾಮರಸ್ಯವೇ ಅವರ ಬದುಕಾಗಿತ್ತು. ತಮ್ಮ ಕಣ್ಣೆದುರಿಗಿರುವ ಸಮಾಜ ಜಾತಿಕೂಪದಲ್ಲಿ ಬಿದ್ದು ಒದ್ದಾಡುತ್ತಿದ್ದಾಗ ಅದನ್ನು ಮೇಲೆತ್ತುವ ದಿಟ್ಟ ಕೈಂಕರ್ಯ ಕೈಗೊಂಡರು. ಸ್ವತಃ ಉಚ್ಚವರ್ಣದಲ್ಲಿ ಜನಿಸಿದ ಅವರು ಸಮಾಜದ ಉದ್ಧಾರಕ್ಕಾಗಿ ಅದನ್ನು ತೊರೆದರು.

ಉತ್ತಮ ಕುಲದಲ್ಲಿ ಹುಟ್ಟಿದೆನೆಂಬ
ಕಷ್ಟತನದ ಹೊರೆಯ ಹೊರಿಸದಿರಯ್ಯಾ,
ಕಕ್ಕಯ್ಯನೊಕ್ಕುದನಿಕ್ಕ ನೋಡಯ್ಯಾ,
ದಾಸಯ್ಯಾ ಶಿವದಾನವನೆರೆಯ ನೋಡಯ್ಯಾ,

ಮನ್ನಣೆಯ ಚೆನ್ನಯ್ಯನೆನ್ನುವ ಮನ್ನಿಸ.
ಉನ್ನತ ಮಹಿಮ,
ಕೂಡಲ ಸಂಗಮದೇವಾ, ಶಿವಧೋ ಶಿವಧೋ! (ಸ.ವ.ಸಂ–೧: ವ.೩೪೪)

ಎಂದು ಉತ್ತಮ ಕುಲದ ಹಂಗನ್ನು ಹರಿದುಕೊಳ್ಳುತ್ತಾರೆ. ಬಸವಣ್ಣನವರ ಯೋಚನೆಗಳು, ಯೋಜನೆಗಳ ಬಗ್ಗೆ ಹಿಂದಿನ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಅವರ ವಚನಗಳ ಆಧಾರದಿಂದ ಕವಿಯು ಬಸವಣ್ಣನವರ ಅಭೀಪ್ಸೆ ಏನೆಂಬುದನ್ನು ಅರ್ಥಮಾಡಿಕೊಂಡು ತನ್ನ ಪುರಾಣದಲ್ಲಿ ಅಲ್ಲಲ್ಲಿ ಸುಂದರವಾಗಿ ಚಿತ್ರಿಸಿದ್ದಾನೆ. ಉಪನಯನದ ಸಂದರ್ಭದಲ್ಲಿ ವ್ಯಕ್ತವಾಗುವ ಬಸವಣ್ಣನವರ ಅಭಿಪ್ರಾಯಗಳು ಅವನ ಸಾಮಾಜಿಕ ಪ್ರಜ್ಞೆಯನ್ನು ತೋರಿಸುತ್ತವೆ.

ಗುರುಪದಾರ್ಚನೆಗೊಲಿದು ಹಾರುವ
ಪರಮ ಶೈವೋನ್ನತಿಗೆ ಹಾರುವ
ಶರಣಸ್ವಾನುಭವಕ್ಕೆ ಹಾರುವ ತತ್‌ಪ್ರಸಾದಕ್ಕೆ
ಹರಿದು ಹಾರುವ ವೀರಭಕ್ತಿಗೆ
ಪಿರಿದು ಹಾರುವ ನಾನಂದೆಂದುಂ
ಬೆರಸಿ ಹಾರುವ ಕುಲಕೆ ಹಾರುವನಲ್ಲ ನುಡಿಯದಿರು...(೩: ೮೦)

ಹಾರುವ ಕುಲವನ್ನು ಧಿಕ್ಕರಿಸಿ ಸಮಾಜದಲ್ಲಿ ಅತ್ಯಂತ ನಿಕೃಷ್ಟರನ್ನು ಹಾರುವ ವರ್ಗಕ್ಕೆ ಸಮಾನಾಂತರಿಸುವ ಬಸವಣ್ಣನವರ ಯೋಚನಾಲಹರಿ ಗಮನಾರ್ಹ. ಅಸಂಗ್ರಹ

ಭಾವನೆಯನ್ನು ಹೊಂದಿದ್ದು ಬಸವಣ್ಣನವರು ತಮ್ಮ ಜೀವನಪರ್ಯಂತ ಈ ತತ್ವವನ್ನು ಅನುಸರಿಸಿದರು.

> ಒಡನಿರ್ದ ಸತಿಯೆಂದು ನಚ್ಚಿರ್ದೆನಯ್ಯ,
> ಕೈವಿಡಿದ ಸಜ್ಜನೆಯೆಂದು ನಂಬಿರ್ದೆನಯ್ಯಾ
> ಅಯ್ಯಾ, ನಮ್ಮಯ್ಯನ ಕೈ ನೊಂದಿತು,
> ತೆಗೆದುಕೊಡಾ ಎಲೆ ಚಂಡಾಲಗಿತ್ತಿ,
> ಕಳ್ಳನ ಮನೆಗೊಬ್ಬ ಬಲುಗಳ್ಳ ಬಂದಡೆ
> ಕೂಡಲ ಸಂಗಮದೇವನಲ್ಲದೆ ಆರೂ ಇಲ್ಲ(ಸ.ವ.ಸಂ.೧: ವ.೧೧೦೮)

ಎಂದಿದ್ದಾರೆ.

ಮೇಲಿನ ವಚನಭಾವವನ್ನು ಪುಷ್ಟೀಕರಿಸುವ ಹಾಗೆ ಬಸವಪುರಾಣದಲ್ಲಿ ಒಂದೆರಡು ನಿದರ್ಶನಗಳನ್ನು ಕಂಡುಕೊಳ್ಳಬಹುದು. ಒಬ್ಬ ಅಯ್ಯನು ಬಸವಣ್ಣನವರ ಮಡದಿ ಮಾಯಿದೇವಿಯ ಮುತ್ತಿನೋಲೆಯನ್ನು ಕೇಳಿದಾಗ ಅದನ್ನು ತೆಗೆದುಕೊಡುವಂತೆ ಹೇಳಿದ ಉಲ್ಲೇಖ ಪುರಾಣದಲ್ಲಿ ಬರುತ್ತದೆ. (೧೦:೪೩) ಒಂದು ದಿನ ಸೂಳೆಮನೆಯಲ್ಲಿದ್ದ ವಿಟನು ತನ್ನ ಪಡಿಯನ್ನು ತರಲು ತೊತ್ತನ್ನು ಕಳಿಸಿದಾಗ ಅವಳು ಗಂಗಾಂಬೆಯುಟ್ಟಿದ್ದ ದುಕೂಲವನ್ನು ವರ್ಣಿಸಿ ಭಾವನಿಂದ ಅದನ್ನು ತರಿಸಿಕೊಳ್ಳುವಂತೆ ಹೇಳುತ್ತಾಳೆ. ಸೂಳೆಯ ಮನೀಷೆಯಂತೆ ವಿಟನು ಬಸವಣ್ಣನವರಲ್ಲಿಗೆ ಹೋಗಿ ಅದನ್ನು ಕೇಳುತ್ತಾನೆ. ತಕ್ಷಣವೇ ಬಸವಣ್ಣನವರು ಹಸಾದವೆಂದು "ಹುಟ್ಟಿಗೆಯನಿದ್ದಂತೆ ಕೊಡು ಕೊಡು ಹುಟ್ಟಿಗೆಯನಯ್ಯಂಗೆ ಕೊಟ್ಟಡೆ ಹುಟ್ಟೆನಿನ್ನಾವೆಂಬವೊಲು ಲಜ್ಜಾಭಿಮಾನವನು" (೧೦: ೩೩) ಎಂದು ಹೇಳುತ್ತಾರೆ. ಈ ಸಂದರ್ಭಗಳಲ್ಲೆಲ್ಲ ಬಸವಣ್ಣನವರ ಉದಾರತೆ, ಅಸಂಗ್ರಹ ಬುದ್ಧಿ ಮೈವೆತ್ತು ನಿಂತಿದ್ದನ್ನು ಭೀಮಕವಿ ಸೊಗಸಾಗಿ ವಿವರಿಸಿದ್ದಾನೆ.

ಅ. ವ್ರತ-ನೇಮಗಳು :

ಸಾಮಾಜಿಕವಾಗಿ ಶಿಸ್ತುಬದ್ಧ ಬದುಕಿಗೆ ಕಠಿಣ ನಿಯಮಗಳನ್ನು ಹಾಕಿಕೊಳ್ಳವುದೇ ವ್ರತವೆನಿಸುತ್ತದೆ. 'ಪಂಚೇಂದ್ರಿಯಗಳ ನಿಗ್ರಹ , ಹಿಡಿದ ಗುರಿ-ಸಾಧನೆ, ವ್ರತದ ಮುಖ್ಯ ಲಕ್ಷಣ'. ಪ್ರಾಚೀನ ಜನರು ಈ ಕುರಿತು ತುಂಬ ಆಸ್ಥೆಯನ್ನಿಟ್ಟುಕೊಂಡು ನೈತಿಕ ಜೀವನ ನಡೆಸಿದ ಉದಾಹರಣೆಗಳು ಬಸವಪುರಾಣದಲ್ಲಿ ದೊರೆಯುತ್ತವೆ. ಸಾಮಾಜಿಕ ಮತ್ತು ಧಾರ್ಮಿಕ ಜೀವನದ ಪರಿಧಿಯಲ್ಲಿ ವ್ರತಗಳು ಅತ್ಯಂತ ಮುಖ್ಯ ಪಾತ್ರ ವಹಿಸುತ್ತವೆ. ವ್ಯಕ್ತಿಯ ಬದುಕಿನ ಮೌಲ್ಯವನ್ನು ಹೆಚ್ಚಿಸುವಲ್ಲಿ ಇವುಗಳ ಪಾತ್ರ ಮಹತ್ವದ್ದು. ಆದ್ದರಿಂದ ಬಸವಪುರಾಣದಲ್ಲಿ ಶಿವಭಕ್ತರು ವೈವಿಧ್ಯಮಯ ವ್ರತಗಳನ್ನಾಚರಿಸಿದ ಉಲ್ಲೇಖ ದೊರೆಯುತ್ತವೆ.

ಮಾದಲಾಂಬೆಯು ಶಿವಮಂದಿರಕೆ ಬಂದು ವ್ರತಹಿಡಿದು ಒಂಬತ್ತು ಸೋಮವಾರ ನಂದಿನಾಥನನ್ನು ಅರ್ಚಿಸುವ ಸಂದರ್ಭದ ವಿವರಣೆಯನ್ನು ಭೀಮಕವಿ ಕೊಡುತ್ತಾನೆ. (೨:೪೯-೫೨) ಬಹುಶಃ ಇದೊಂದನ್ನು ಹೊರತುಪಡಿಸಿದರೆ ಶಿವಭಕ್ತರ ವ್ರತಗಳೇ

ಪುರಾಣದಲ್ಲಿ ಪ್ರಾಧಾನ್ಯವನ್ನು ಪಡೆದಿವೆ. ಆದ್ದರಿಂದ ಇವುಗಳನ್ನು ಶಿವವ್ರತಗಳು ಎಂದು ಕರೆಯಬಹುದು.

ಮಲ್ಲಶೆಟ್ಟಿಯೆಂಬ ಭಕ್ತ ಹಾಗೂ ಪುಲಿಗೆರೆಯ ಸೋಮಣ್ಣನೆಂಬುವರು ಲಿಂಗಸ್ಪರ್ಶನದ ನೇಮವನ್ನು ಕೈಗೊಂಡ ಉದಾಹರಣೆಗಳು ಪುರಾಣಗಳಲ್ಲಿ ಬಂದಿವೆ. (೮:೬, ೫೦:೭೬) ಇದು ಶಿವಭಕ್ತರ 'ದೃಷ್ಟಿವಾರಿ' ಎಂಬ ಕಠೋರ ವ್ರತವನ್ನು ನೆನಪಿಗೆ ತರುತ್ತದೆ. 'ಶಿವಲಿಂಗದರ್ಶನನಿಯತಿ ತಪ್ಪಿದಡೆ ಜೀವವಂ ತಾಂ ತ್ಯಜಿಸುವಂ ಗಡ' ಎಂಬ ಮಲ್ಲಶೆಟ್ಟಿಯ ಮಾತುಗಳು ವ್ರತದ ತೀಕ್ಷ್ಣತೆಯನ್ನು ಹೇಳುತ್ತವೆ.

ಮಡಿವಾಳ ಮಾಚಯ್ಯ, ಇರಿವತ್ತ ಹಾಗೂ ವೀರಶಂಕರದಾಸರ ವ್ರತಗಳು ಪರಸಮಯಿಗಳಿಗೆ ಎಚ್ಚರಿಕೆಯ ಗಂಟೆಯಾಗಿದ್ದು ಶಿವಭಕ್ತಿಯ ಆಧಿಕ್ಯ ಸ್ಥಾಪಿಸುವ ನಿಟ್ಟಿನಲ್ಲಿ ಸ್ಥಾನ ಪಡೆದಿವೆ. ಮಡಿವಾಳ ಮಾಚಯ್ಯನು ಮಡಿಬಟ್ಟೆ ತರುವಾಗ ಅನ್ಯರು ಅವುಗಳನ್ನು ಮುಟ್ಟಿದರೆ ಕುಟ್ಟಿಕೆಡಹುವೆನೆಂಬುದು ಅವನ ವ್ರತ.(೨೦:೯) ಹೀಗೆ ಒಂದು ದಿನ ಭವಿಯು ಮಡಿಬಟ್ಟೆಗಳನ್ನು ಮುಟ್ಟಿದಾಗ ಅವನ ತಲೆ ಕಡಿಯುವ ಮಟ್ಟಕ್ಕೆ ವ್ರತದ ಆಚರಣೆ ಮುಂದುವರಿದದ್ದನ್ನು ಕಾಣಬಹುದು. ಶಿವಭಕ್ತರಿಗೆ ಅಪಕಾರ ಮಾಡುವವನನ್ನು ಇರಿವತ್ತನೆಂಬುವವನು ಇರಿದು ಕೊಲ್ಲುತ್ತಿದ್ದನೆಂಬ ಉಲ್ಲೇಖವನ್ನು ಭೀಮಕವಿ ಕೊಡುತ್ತಾನೆ. (೨೧: ೫) ವೀರಶಂಕರದಾಸನೆಂಬೊಬ್ಬ ಭಕ್ತ ಪರಸಮಯ ಪರದೈವಗಳನ್ನು ಮುಟ್ಟೆನೆಂಬ ವ್ರತಾಚರಣೆಯಲ್ಲಿದ್ದವನು. ಒಮ್ಮೆ ಕನಸಿನಲ್ಲಿ ಬೌದ್ಧನೊಬ್ಬನು ಸೋಂಕಿದಾಗ ಶ್ರೀಶೈಲದ 'ಹಾಟಕೇಶ್ವರನ ಸನ್ನಿಧಿ'ಯಲ್ಲಿ ಕಾವಲಿಯಲ್ಲಿ ತನ್ನನ್ನು ಸುಟ್ಟುಕೊಳ್ಳಲುದ್ಯುಕ್ತನಾಗುವ ಸಂದರ್ಭವನ್ನು ಕಾಣಬಹುದು. (೫೨:೫೦) ಹೀಗೆ ತಮ್ಮ ಪ್ರಾಣವನ್ನೇ ಪಣವಾಗಿಟ್ಟು ವ್ರತಾಚರಣೆ ಮಾಡಿದ ಸಂದರ್ಭಗಳು ಕಂಡುಬರುತ್ತವೆ.

'ಅಣುಮೂರ್ತಿ' ಎಂಬೊಬ್ಬ ಭಕ್ತ ಪ್ರತಿದಿನ ಮೂರು ಹೊತ್ತು ಶಿವನನ್ನು ಚಂದನದಿಂದ ಅರ್ಚಿಸುವ ನೇಮ ಕೈಗೊಂಡಿದ್ದು ಅದಕ್ಕಾಗಿ ಧನವೆಲ್ಲ ಸವೆದಾಗ ತನ್ನ ತನುವನ್ನೆ ತೇದು ಅರ್ಚಿಸುವ ಸಂದರ್ಭವನ್ನು ಕವಿ ಕೊಡುತ್ತಾನೆ. 'ಕಡವಳ ನಂಬಿ' ಎಂಬೊಬ್ಬ ಶಿವಭಕ್ತ ಶಿವನಿಗೆ ಸಾವಿರ ದೀಪಗಳನ್ನು ಬೆಳಗುವ ನೇಮ ಕೈಗೊಂಡಿದ್ದು ಕೊನೆಗೆ ತನ್ನ ಜಡೆಯನ್ನೇ ಉರಿಸಿದ ಸಂದರ್ಭ ದೊರೆಯುತ್ತದೆ. 'ಗುಗ್ಗುಳು ಕಲಿಯನಾರು' ಎಂಬ ಶಿವಭಕ್ತ ಶಿವನಿಗೆ ಮಹಿಷಾಕ್ಷಿಧೂಪವನ್ನು ಅರ್ಪಿಸುವ ವ್ರತ ಕೈಕೊಂಡಿದ್ದು ಕೊನೆಗೆ ತನ್ನ ಹೆಂಡತಿಯ ಮಂಗಲಸೂತ್ರ ಮಾರಿ ವ್ರತ ಪೂರೈಸಿದ ವಿವರ ದೊರೆಯುತ್ತದೆ. ಅರಿವಳತಾಂಡಾರಿ ಎಂಬ ಶಿವಭಕ್ತ ರಾಜಾನ್ನದಕ್ಕಿಯ ನೇಮ ಕೈಕೊಂಡಿದ್ದು ಅದಕ್ಕೆ ತೊಂದರೆ ಒದಗಿದಾಗ ತನ್ನ ಕೊರಳನ್ನು ಕೊಯ್ದುಕೊಳ್ಳಲು ಮುಂದಾಗುವ ಸಂದರ್ಭವನ್ನು

ಕವಿ ಕೊಡುತ್ತಾನೆ. (೨೬:೧,೭,೯,೧೫) ಇಲ್ಲೆಲ್ಲ ಭಕ್ತರು ಎಷ್ಟೇ ವಿಘ್ನಗಳೊದಗಿದರೂ ತಮ್ಮ ವ್ರತ ಪೂರೈಸುವ ಎದೆಗಾರಿಕೆ ವ್ಯಕ್ತವಾಗಿರುವುದನ್ನು ಗಮನಿಸಬಹುದು.

ಕೋಳೂರಿನಲ್ಲಿ 'ಶಿವದೇವ'ನೆಂಬ ಶಿವಾರ್ಚಕ ಒಬ್ಬಳ್ಳ ಕಪಿಲೆಯ ಹಾಲನ್ನು ಶಿವನಿಗರ್ಪಿಸುವ ವ್ರತ ಹಿಡಿದ ಉಲ್ಲೇಖ ದೊರೆಯುತ್ತದೆ. (೧೩:೧) ಮೆರೆಮಿಂಡದೇವನೆಂಬ ಭಕ್ತನು ಹನ್ನೆರಡು ವರ್ಷದಿಂದ ನಿರಂತರವಾಗಿ ಪ್ರತಿ ತಿಂಗಳು ಶಿವರಾತ್ರಿ ನೇಮ ಆಚರಿಸಿಕೊಂಡು ಬರುವ ವಿವರವನ್ನು ಭೀಮಕವಿ ಕೊಡುತ್ತಾನೆ (೨೫:೩) 'ಬಾಣ'ನೆಂಬ ಶಿವಭಕ್ತನು ಶಿವನಿಗೆ ದಿನಕ್ಕೆ ಸಾವಿರ ಬಾರಿ ಪೂಜೆ ಸಲ್ಲಿಸುವ ವ್ರತ ಕೈಗೊಂಡಿದ್ದನೆಂಬುದನ್ನು ಕವಿ ಹೇಳುತ್ತಾನೆ. (೨೫:೫೦) 'ಓಹಿಲಯ್ಯ'ನೆಂಬ ಭಕ್ತ ಪ್ರತಿದಿನ ತನ್ನ ತೂಕದ ಮಹಿಷಾಕ್ಷಿ ಗುಗ್ಗುಳವನ್ನು ಶಿವನಿಗೆ ಅರ್ಪಿಸುವ ವ್ರತ ಕೈಗೊಂಡಿದ್ದನು. (೪೨:೨೧) 'ನಮಿನಂದಿ'ಯೆಂಬ ಭಕ್ತ ತುಪ್ಪವನ್ನು ಬೇಡಿ ತಂದು ಸಾವಿರ ದೀಪ ಹಚ್ಚುವ ವ್ರತ ಕೈಗೊಂಡು ಅದನ್ನು ಈಡೇರಿಸಿದ ಉಲ್ಲೇಖವನ್ನು ಕವಿ ಕೊಡುತ್ತಾನೆ. (೪೯: ೫೩-೫೪) ಈ ಎಲ್ಲ ವೈವಿಧ್ಯಮಯವಾದ ವ್ರತಗಳು ಶಿವನನ್ನು ಭಕ್ತಿಯಿಂದ ಅರ್ಚಿಸುವ ಸಂದರ್ಭವನ್ನು ಕಟ್ಟಿಕೊಡುತ್ತವೆ. ಆ ಮೂಲಕ ಭಕ್ತರು ಜನ್ಮ ಸಾರ್ಥಕ ಮಾಡಿಕೊಳ್ಳುತ್ತಿದ್ದರೆಂಬ ಅಂಶ ಗೊತ್ತಾಗುತ್ತದೆ.

ಒಬ್ಬ ಜಂಗಮ ಬಸವಣ್ಣನವರಲ್ಲಿಗೆ ಬಂದು ಒಕ್ಕುಳ ಮುತ್ತಿನ ಚೂರ್ಣದ ರಂಗವಾಲೆಯನ್ನಿಕ್ಕುವ ನೇಮ ಪೂರ್ಣಗೊಳಿಸಲು ಹತ್ತು ಖಂಡುಗ ಮುತ್ತುಗಳನ್ನು ಕೇಳಿದ ಸಂದರ್ಭ ಬರುತ್ತದೆ. (೮: ೨೦) ಇದೊಂದು ವೈಶಿಷ್ಟ್ಯಪೂರ್ಣವಾದ ವ್ರತ ಎಂಬುದನ್ನು ಮನಗಾಣಬಹುದು. ಕಂಚಿಯಲ್ಲಿ ಸಿರಿಯಾಳನೆಂಬ ಭಕ್ತ ಪ್ರತಿದಿನ ಸಾವಿರ ಜಂಗಮರಿಗೆ ಸೇವೆ ಮಾಡುವ ವ್ರತ ಕೈಕೊಂಡಿದ್ದನೆಂದು ಕವಿ ಹೇಳುತ್ತಾನೆ. ಜಂಗಮ ಮಹತ್ವ ಹೆಚ್ಚಿಸಲು ಕವಿ ಈ ವ್ರತದ ಉಲ್ಲೇಖ ಮಾಡಿರಬಹುದು. ಒಟ್ಟಿನಲ್ಲಿ ಬಸವಪುರಾಣದಲ್ಲಿ ಕಂಡುಬರುವ ವಿಶಿಷ್ಟವಾದ ವಿವಿಧ ರೀತಿಯ ವ್ರತಗಳು ಭಕ್ತರ ಭಕ್ತಿಯ ಮಹಿಮೆಯನ್ನು ಹಾಗೂ ಅವರ ನಿಷ್ಠೆಯನ್ನು ಸಾರಿ ಹೇಳುತ್ತವೆ. ವ್ರತ ಪೂರೈಸುವ ಮೂಲಕ ಭಕ್ತರು ಪಡೆಯುವ ಧನ್ಯತೆಯನ್ನು ಅತ್ಯಂತ ಸೊಗಸಾಗಿ ಹೇಳುತ್ತವೆ. ತಮ್ಮ ಶರೀರವನ್ನೇ ಶಿವನಿಗರ್ಪಿಸುವ ಉಗ್ರ ವ್ರತಿಗಳು ಸಮಾಜದಲ್ಲಿ ಅತ್ಯಂತ ಗೌರವ ಸ್ಥಾನ ಪಡೆದಿದ್ದರೆಂದು ಹೇಳಬಹುದು. ಹೀಗೆ ಭೀಮಕವಿ ಕಾಲದ ಸಮಾಜದಲ್ಲಿ ಅನೇಕ ಶಿವಭಕ್ತರು ವ್ರತ-ನೇಮಗಳನ್ನು ಆಚರಿಸಿ ಸಾಯುಜ್ಯ ಪದವಿ ಪಡೆದ ಕಥೆಗಳು ಜನಮಾನಸದಲ್ಲಿ ಪ್ರಚಲಿತವಾಗಿದ್ದವು ಎಂಬುದು ತಿಳಿಯುತ್ತದೆ.

ಆ. ದಿವ್ಯ :

ಪ್ರಾಚೀನ ಕಾಲದಲ್ಲಿ ಅಪರಾಧ ಮಾಡಿದ ವ್ಯಕ್ತಿಯನ್ನು ಪರೀಕ್ಷೆ ಮಾಡಲು ಬಳಸುವ ವಿಧಾನವೇ ದಿವ್ಯ. "ಅಪರಾಧ ನಿರ್ಣಯಕ್ಕೆ ಮಾನುಷವಾದ ಸಾಕ್ಷಿ ಯಾವುದೂ ಇಲ್ಲದಿರುವಾಗ

ದೈವವನ್ನು ಆಶ್ರಯಿಸುತ್ತಿದ್ದರು. ಆದ್ದರಿಂದಲೇ ಅದನ್ನು 'ದಿವ್ಯ' ವೆಂದು ಕರೆದಿರುವುದು". (ಚಿಮೂ. ೨೦೦೮, ಪು.೨೧೭) ಶಾಸನಗಳಲ್ಲಿ 'ಕೋಶ', 'ರವಿ', 'ತಂಡುಲ', 'ಅಗ್ನಿ', 'ತಪ್ತಮಾಷ', 'ಜಲ', 'ವಿಷ' ಎಂಬ ಏಳು ದಿವ್ಯಗಳಿರುವ ವಿಷಯವನ್ನು ಚಿದಾನಂದಮೂರ್ತಿಯವರು ಉದಾಹರಿಸುತ್ತಾರೆ. (ಅದೇ) ಬಸವಪುರಾಣದಲ್ಲಿ ಅನೇಕ ಪವಾಡಗಳು ದಿವ್ಯದ ರೀತಿಯಲ್ಲಿಯೇ ನಡೆದದ್ದನ್ನು ಕಾಣಬಹುದು. (ಪವಾಡಗಳಿಗೆ ಮುಂದಿನ ಅಧ್ಯಾಯ ನೋಡುವುದು) ದಿವ್ಯದ ಉಲ್ಲೇಖಗಳು ಇಲ್ಲಿ ಕಡಿಮೆ.

ಧಾರ್ಮಿಕ ಸಂಘರ್ಷದ ಸಂದರ್ಭದಲ್ಲಿ ದಿವ್ಯವೊಂದು ಪುರಾಣದಲ್ಲಿ ಸ್ಥಾನ ಪಡೆದಿದೆ. ದಾಸಿಮಯ್ಯ ಹಾಗೂ ಜೈನರ ಮಧ್ಯೆ ವಾಗ್ವಾದವುಂಟಾಗಿ ದಾಸಿಮಯ್ಯನು ಶ್ರುತ್ಯಾಗಮ ಪ್ರಮಾಣಗಳಿಂದ ರಾಮನಾಥನೇ ಲೋಕದೇವನೆಂದು ವಾದಿಸಿದನು. ನಿರುತ್ತರರಾದ ಜೈನರು ಕೊನೆಗೊಂದು ಕುತಂತ್ರವನ್ನು ಹೂಡಿದರು. ಕಾಳಸರ್ಪವೊಂದನ್ನು ಹರವಿಯೊಳಿಟ್ಟು ಮುಚ್ಚಿ 'ಇದರಲ್ಲಿ ಶಿವನುಂಟೆ? ಎಂದು ಕೇಳುತ್ತಾರೆ. (೫೦:೫೮) ಉಂಟುಂಟು ಇಲ್ಲದುಂಟೆ? ದಾಸಿಮಯ್ಯನು ಹರವಿಯಲ್ಲಿ ಕೈತೂರಿ ಹಾವನ್ನು ಹೊರಕ್ಕೆ ತೆಗೆದನು. ಅದು ಅವನ ಕರಸ್ಥಲದಲ್ಲಿ ಅಡಗಿತೆಂದು ಭೀಮಕವಿ ಹೇಳುತ್ತಾನೆ. ತಪ್ಪುಮಾಡಿದ ವ್ಯಕ್ತಿಯನ್ನು ಹುತ್ತದೊಳಗಡೆ 'ಕೈ' ಇಡುವಂತೆ ಹೇಳಿ ಪರೀಕ್ಷೆಗೊಡ್ಡುವ ಅನೇಕ ಸಂದರ್ಭಗಳು ಭೀಮಕವಿಯ ಕಾಲದಲ್ಲಿ ಪ್ರಚಾರದಲ್ಲಿದ್ದವು ಎಂದು ಭಾವಿಸಬಹುದು. ಇದೊಂದು ಘಟನೆ ಏಳು ದಿವ್ಯಗಳಲ್ಲಿ 'ವಿಷ' ಎಂಬ ದಿವ್ಯದ ಪ್ರಕಾರವೊಂದು ಬಸವಪುರಾಣದಲ್ಲಿ ಉಕ್ತವಾದ ಬಗೆಯನ್ನು ಗುರುತಿಸಬಹುದು. "ಅಪರಾಧಿಯ ಅಪರಾಧವನ್ನು ದಿಟಗೊಳಿಸುವುದಕ್ಕಾಗಿ, ಸತ್ವಪರೀಕ್ಷೆಗಳನ್ನು ಗೆಲ್ಲುವುದಕ್ಕಾಗಿ, ಆಕಸ್ಮಿಕಗಳನ್ನು ನಡೆಸುವುದಕ್ಕಾಗಿ ಈ ದಿವ್ಯಗಳು ಪ್ರತಿಜ್ಞಾಸ್ವರೂಪವನ್ನು ತಾಳಿದ್ದವೆನ್ನಬೇಕಾಗುತ್ತದೆ." (ಪಾಟೀಲ ಸದಾನಂದ, ೧೯೯೯, ಪು.೧೨೭) ಆ ಮೂಲಕ ಶಿವಭಕ್ತಿಯನ್ನು ಪ್ರಚುರಪಡಿಸುವುದು ಇವರ ಉದ್ದೇಶವಾಗಿತ್ತೆಂದು ಕಾಣುತ್ತದೆ.

ಇ. ಮುಡಿ–ಮುಂದಲೆ :

ಪ್ರಾಚೀನ ಸಮಾಜದಲ್ಲಿ ತಾವು ನಂಬಿದ ದೈವಕ್ಕೋಸ್ಕರ ಅಂಗಛೇದಗಳ ಮೂಲಕ ಹರಕೆ ತೀರಿಸುವ ಪದ್ಧತಿಯನ್ನು ಬಸವಪುರಾಣದಲ್ಲಿ ಕಾಣುತ್ತೇವೆ. ಇಂದಿಗೂ ಸಹ ಇಂತಹ ಆಚರಣೆಗಳ ಬೇರೊಂದು ರೂಪವಾಗಿ ಮುಡಿ ಕೊಡುವ ಪದ್ಧತಿಗಳನ್ನು ಕಾಣಬಹುದು. ದೇವಸ್ಥಾನಗಳಲ್ಲಿ ಹಾಗೂ ಉತ್ತರಕ್ರಿಯಾದಿಗಳ ಸಂದರ್ಭದಲ್ಲಿ ಮುಡಿ ಕೊಡುವ ಪದ್ಧತಿ ಉಳಿದುಕೊಂಡು ಬಂದಿದೆ. ಆದರೆ ಬಸವಪುರಾಣದಲ್ಲಿ ಮುಂದಲೆ ಕೊಡುವ ಹಾಗೂ ಬೆರಳುಗಳನ್ನು ಕತ್ತರಿಸಿ ಕೊಡುವ, ಅಷ್ಟೇ ಏಕೆ ತಮ್ಮನ್ನು ತಾವು ಅರ್ಪಿಸಿಕೊಂಡು ವೀರಭಕ್ತಿಯನ್ನು ಮೆರೆದ ಪ್ರಸಂಗಗಳು ಕಂಡುಬರುತ್ತವೆ.

ಒಂದುಲಕ್ಷ ತೊಂಬತ್ತೊಂದುಸಾವಿರ ಜಂಗಮಕ್ಕೆ ಮಾಡಿದ ಪ್ರಸಾದವನ್ನು ಅಲ್ಲಮನು ಒಂದು ಫಳಿಗೆಯಲ್ಲಿ ಸವೆದಾಗ ಬಸವಣ್ಣನವರು 'ನಿಮಗಿನ್ನೋಗರವು ನಾನೆ' (೭:೧೬) ಎನ್ನುವ ಮಾತನ್ನು ಗಮನಿಸಬೇಕು. ಇಲ್ಲಿ ತನ್ನೊಡಲನ್ನೇ ಅರ್ಪಿಸಿ ವೀರಭಕ್ತಿಯನ್ನು ಪ್ರದರ್ಶಿಸುವ ಸಂದರ್ಭವನ್ನು ಪುರಾಣದ ಆದಿಯಲ್ಲಿಯೇ ಕವಿ ಹೇಳುತ್ತಾನೆ. ಭಕ್ತ ಸಿರಿಯಾಳನ ಕಥೆಯಲ್ಲಿ ಸಹ ತಪಸ್ವಿಯ ಕೋರಿಕೆಯಂತೆ ಸಿರಿಯಾಳ ಚಂಗಳೆಯರು ತಮ್ಮ ಮಗನನ್ನೇ ಕೊಂದು ಅರ್ಪಿಸಿ ಜಂಗಮಭಕ್ತಿಯ ಪರಾಕಾಷ್ಠೆಯನ್ನು ಮೆರೆದ ಸಂದರ್ಭವನ್ನು ಕವಿ ವಿವರಿಸುತ್ತಾನೆ.(ಸಂ. ೨೩)

ಮುಗ್ಧಭಕ್ತಿಯ ಕಣ್ಣಪ್ಪನು ತನ್ನ ಕಣ್ಣುಗಳನ್ನೇ ಶಿವನಿಗೆ ಅರ್ಪಿಸುವ ಸಂದರ್ಭ ರೋಮಾಂಚಕಾರಿಯಾಗಿದೆ. "ಶಿವ ನಿನ್ನ ಕಣ್ಣಿಂಗೆನ್ನ ಕಣ್ಣೇ ಮದ್ದೆನುತ ಚಿತ್ತಂ ನಲಿದು ತನ್ನೇತ್ರವಂ ತನ್ನಂಬಿನಲಿ ತೆಗೆದು" (೧೭:೭೧) ಎಂಬ ಕಣ್ಣಪ್ಪನ ಮಾತುಗಳು ಎಂತವರಿಗೂ ನಡುಕವನ್ನು ಹುಟ್ಟಿಸುವ ನುಡಿಗಳಾಗಿ ಅಸಾಧ್ಯವನ್ನು ಸಾಧ್ಯವಾಗಿಸಿದ ವೀರಭಕ್ತಿಯನ್ನು ಮನದಟ್ಟು ಮಾಡುತ್ತದೆ. ಇಂತಹ ಭಕ್ತಿಗೆ ಅತ್ಯಂತ ನಿಷ್ಠೆ, ಇಚ್ಛಾಶಕ್ತಿ ಬೇಕೆಂಬುದನ್ನು ಬೇರೆ ಹೇಳಬೇಕಾಗಿಲ್ಲ.

ಧಾರ್ಮಿಕ ಸಂಘರ್ಷದ ಆವರಣದಲ್ಲಿ ತನ್ನ ತಲೆಯನ್ನು ತರಿದು ಅಂದು ಅರ್ಪಿಸುವ ಉಗ್ರಭಕ್ತಿಯು ಏಕಾಂತರಾಮಯ್ಯನೆಂಬ ಭಕ್ತನು ಕೈಗೊಂಡ ಸಂದರ್ಭವನ್ನು ಕವಿ ವ್ಯಕ್ತಪಡಿಸುತ್ತಾನೆ. ಜೈನ ಹಾಗೂ ಶಿವಭಕ್ತರ ಮಧ್ಯ ನಡೆದ ವಾಗ್ವಾದದಲ್ಲಿ ಏಕಾಂತರಾಮಯ್ಯನು ತನ್ನ ಮುಂದಲೆಯನ್ನರ್ಪಿಸಿ ಮಾಡುವ ಪವಾಡದೊಂದಿಗೆ ಪರ್ಯವಸಾನಗೊಳ್ಳುತ್ತದೆ. ಏಕಾಂತರಾಮಯ್ಯನು ಕತ್ತಿಯಿಂದ ಶಿರಸ್ಸನ್ನು ಕೊಯ್ದುಕೊಂಡು ಹಾಗೆಯೇ ಏಳು ದಿನಗಳವರೆಗೆ ಕಲ್ಯಾಣದಲ್ಲಿ ಮೆರೆದನೆಂದು ಕವಿ ಹೇಳುತ್ತಾನೆ. (೫೧:೪೩) ಈ ಸಂದರ್ಭದ ಉದಾಹರಣೆಯಿಂದ ಅಂದಿನ ಸಮಾಜದಲ್ಲಿ ತಾವು ನಂಬಿದ ದೈವಗಳಿಗೆ ಮುಂದಲೆ ಕೊಡುವ ಪದ್ಧತಿ ಜಾರಿಯಲ್ಲಿದ್ದಿರಬಹುದೆಂದು ಊಹಿಸಬಹುದು. ಅಣುಮೂರ್ತಿ, ಕಡವಳ ನಂಬಿ, ಗುಗ್ಗುಳು ಕಲಿಯನಾರು, ಅರಿವಳತಾಂಡಾರಿ, ಸುರಂಗಗಣನಾಥ, ವೀರಶಂಕರದಾಸ ಮುಂತಾದ ಭಕ್ತರ ಕಥೆಗಳಲ್ಲಿ ಈ ಭಾವಗಳು ಇನ್ನಷ್ಟು ಪುಷ್ಟಿಗೊಂಡ ಬಗೆಯನ್ನು ಕಂಡುಕೊಳ್ಳಬಹುದು.

ಕಾಶಿಯ ಶಿವಲೆಂಕಮಂಚಣ್ಣನೆಂಬೊಬ್ಬ ಭಕ್ತ ವಿಶ್ವೇಶ್ವರನಿಗೆ ತನ್ನ ಹತ್ತು ಬೆರಳುಗಳನ್ನು ಕಡಿದರ್ಪಿಸಿ ಮೆಚ್ಚಿಸಿದ ವಿವರವನ್ನು ಕವಿ ಹೇಳುತ್ತಾನೆ. (೫೨:೫೬) ಆ ಮೂಲಕ ಆತ 'ಪರದರುಶನದ ಮೂಗಿನ ಕತ್ತಿ' ಎಂಬ ಬಿರುದನ್ನು ಪಡೆದಿದ್ದನೆಂದು ಹೇಳುತ್ತಾನೆ. ಹೀಗೆ ಅಂದಿನ ಭಕ್ತರು ಅಂಗಛೇದಗಳ ಮೂಲಕವೂ ಭಕ್ತಿಯನ್ನು ಕೈಗೊಂಡ ಬಗೆಯನ್ನು ಕಂಡುಕೊಳ್ಳಬಹುದು. "ಭಕ್ತಿಯೆಂಬುದ ಮಾಡಬಾರದು, ಕರಗಸದಂತೆ ಹೋಗುತ್ತ ಕೊರೆದು, ಬರುತ್ತ ಕೊಯ್ವುದು" (ಸ.ವ.ಸಂ.೧: ವ.೨೧೨) ಎಂದು ಬಸವಣ್ಣನವರು ಭಕ್ತಿಯ ಕಷ್ಟತನವನ್ನು

ವಿವರಿಸಿದ್ದಾರೆ. ಭಕ್ತನಾದವನು ತನು-ಮನ-ಧನಗಳನ್ನು ದೈವಕ್ಕೆ ಅರ್ಪಿಸಬೇಕೆಂಬುದರ ಹಿನ್ನೆಲೆಯನ್ನು ಈ ಕಥೆಗಳು ಹೇಳುತ್ತವೆ.

ಭೀಮಕವಿಯ ಕಾಲದ ಪರಿಸರದಲ್ಲಿ ಭಕ್ತರು ಈ ರೀತಿಯಾಗಿ ಮುಂದಲೆಯನ್ನು ದೇಹದ ವಿವಿಧ ಅಂಗಗಳನ್ನು ದೈವಕ್ಕೆ ಅರ್ಪಿಸಿ ಭಕ್ತಿಯನ್ನು ಪ್ರದರ್ಶಿಸುವ ಪದ್ಧತಿ ಜಾಗೃತವಾಗಿತ್ತೆಂಬ ಅಂಶವಂತೂ ಸ್ಪಷ್ಟವಾಗುತ್ತದೆ. ಆ ಮೂಲಕ ಸಮಾಜದಲ್ಲಿ ವಿಶೇಷ ಗೌರವಕ್ಕೂ, ಆದರಕ್ಕೂ ಇಂತಹ ವ್ಯಕ್ತಿಗಳು ಪಾತ್ರರಾಗಿದ್ದರೆಂಬ ಚಿತ್ರಣ ಬಸವಪುರಾಣದಲ್ಲಿ ದೊರೆಯುತ್ತದೆ.

ಈ. ವೃತ್ತಿಗಳು :

ಈಗಾಗಲೇ ವರ್ಣವನ್ನಾಧರಿಸಿಯೇ ವೃತ್ತಿಗಳು ಮುನ್ನಡೆಯುವಂಥದ್ದನ್ನು ನೋಡಿದ್ದೇವೆ. ವಚನಕಾರರು ಕಾಯಕವೇ ಕೈಲಾಸವೆಂದು ಭಾವಿಸಿ ತ್ರಿಕರಣಪೂರ್ವಕವಾಗಿ ಕೆಲಸ ನಿರ್ವಹಿಸಿದವರು. ತಾವು ಮಾಡುವ ಯಾವುದೇ ಕೆಲಸವನ್ನು ಮನಃಪೂರ್ವಕವಾಗಿ ಸತ್ಯ-ಶುದ್ಧ- ಕಾಯಕವೆಂದು ತಿಳಿದು ಅದಕ್ಕೊಂದು ಶ್ರೇಷ್ಠಸ್ಥಾನ ಕೊಟ್ಟವರು. ಯಾವ ಕೆಲಸವೂ ಮೇಲಲ್ಲ; ಯಾವ ಕೆಲಸವೂ ಕೀಳಲ್ಲ ಎಂದು ತಿಳಿದು ಕಾಯಕದ ಮಹಿಮೆಯನ್ನು ಸಾರಿದವರು. ಸ್ವತಃ ಬಸವಣ್ಣನವರೆ ಬಿಜ್ಜಳನಲ್ಲಿ ಕರಣಿಕನಿಂದ ಹಿಡಿದು ಮಂತ್ರಿಯಾಗುವವರೆಗೂ ಪ್ರಾಮಾಣಿಕವಾಗಿ ತನ್ನ ಕೆಲಸ ನಿರ್ವಹಿಸಿದ ಉಲ್ಲೇಖ ದೊರೆಯುತ್ತದೆ.

ಮಡಿವಾಳ ಮಾಚಯ್ಯನೆಂಬ ಭಕ್ತನು ಕಲ್ಯಾಣಕ್ಕೆ ಬಂದು ಜಂಗಮರ ಬಟ್ಟೆಗಳನ್ನು ಒಗೆಯುವ ಕಾಯಕದಲ್ಲಿದ್ದನು. "ಒಂದು ಹೊಳೆಯಂ ಮಾಡಿ ಯೊಗೆದೊಗೆದೊಂದನೊಂದಂ ಹರಡಿ ಗಳಿಗೆಯನೊಂದಿಸುತ್ತಾ ಮಡಿಗಳಂ ತೆಗೆದೊಟ್ಟಿ ಮಿಗೆ ಬಿಗಿದು" (೨೦:೮) ಎಂಬ ಕವಿಯ ಮಾತುಗಳು ಮಾಚಯ್ಯನ ವೃತ್ತಿವಿವರವನ್ನು ಕೊಡುತ್ತವೆ. ನಿಂಬಿಯಕ್ಕನೆಂಬ ಶಿವಶರಣೆ ಶಿವಭಕ್ತರ ಮನೆಗಳಿಗೆ ಅಗ್ಘವಣಿಯನ್ನು ಪೂರೈಸುವ ಕಾಯಕ ಕೈಗೊಂಡ ಉಲ್ಲೇಖ ದೊರೆಯುತ್ತದೆ. ಶಿವಭಕ್ತರು ಕೃಷಿಯನ್ನು ವೃತ್ತಿಯನ್ನಾಗಿ ಸ್ವೀಕರಿಸಿದ ಉಲ್ಲೇಖಗಳು ದೊರೆಯುತ್ತವೆ. (೨೩: ೫೪) ದಂಗುಳಿ ಮಾರಯ್ಯ (ಇಳೆಯಾಂಡ ಗುಡಿಮಾರ) ನೆಂಬೊಬ್ಬ ಜಂಗಮನ ಹಸಿವನ್ನು ಹಿಂಗಿಸಲು ಹಿಂದಿನ ದಿನ ಬಿತ್ತಿದ್ದ ಬೀಜಗಳನ್ನೇ ಆಯ್ದು ತಂದು ಬೋನವನ್ನು ಮಾಡಿ ನೀಡಿ ಶಿವನನ್ನೊಲಿಸಿದ ಸಂದರ್ಭವನ್ನು ಕವಿ ನೀಡುತ್ತಾನೆ. "ಎದ್ದು ಮುನ್ನಿನ ದಿವಸದಲಿ ಬಿತ್ತಿದ್ದ ಬೀಜವನಾಯ್ದುದರಕದಿಂದಿ ತೊಳೆತಂದಾಗ ಹುರಿಯಿಸಿ ಮಿದಿಸಿ ಬೋನವನು" (೨೬:೪೯) ಎಂಬ ಮಾತುಗಳಿಂದ ಶಿವಭಕ್ತರೂ ಸಹ ವ್ಯವಸಾಯವನ್ನು ವೃತ್ತಿಯನ್ನಾಗಿ ಸ್ವೀಕರಿಸಿದ ಉದಾಹರಣೆಗಳು ಗೊತ್ತಾಗುತ್ತವೆ. ಹಾಸ್ಯಗಾರ ವೇಷವನ್ನೇ ವೃತ್ತಿಯನ್ನಾಗಿ ಸ್ವೀಕರಿಸಿ ಮನೆಮನೆಗೆ ಹೋಗಿ ಭಕ್ತರನ್ನು ನಗಿಸಿ ತಣಿಸುವ ಕಾಯಕವನ್ನು ಕೈಗೊಂಡ ಕಲಕೇತ ಬೊಮ್ಮಯ್ಯನೆಂಬ ಶರಣನ ಉಲ್ಲೇಖವನ್ನು ಭೀಮಕವಿ ಕೊಡುತ್ತಾನೆ. (೨೮: ೩-೫) ಇದರಿಂದ ಇಂದಿನ

'ವೇಷಗಾರರು' ಎಂಬ ವೃತ್ತಿಯು ಪರಂಪರೆಯಿಂದ ಬೆಳೆದು ಬಂದದ್ದನ್ನು ಕಂಡುಕೊಳ್ಳಬಹುದು. ಅವನ ವೇಷಭೂಷಣವನ್ನು ಕವಿ ಮನೋಜ್ಞವಾಗಿ ಕಟ್ಟಿ ಕೊಡುತ್ತಾನೆ. ಕನ್ನದ ಬೊಮ್ಮಯ್ಯನ ವೃತ್ತಿ ಬಹಳಷ್ಟು ವೈಶಿಷ್ಟ್ಯವಾದುದು. ಇವನು ಭವಿಗಳ ಮನೆಯಲ್ಲಿ ಕನ್ನವಿಕ್ಕಿ ಜಂಗಮಾರಾಧನೆ ಮಾಡುತ್ತಿದ್ದನೆಂದು ಕವಿ ಹೇಳುತ್ತಾನೆ. (೨೦:೧೯) ಇದಕ್ಕೆ ಬಸವಣ್ಣನವರ ಪ್ರೋತ್ಸಾಹವೂ ಇತ್ತೆಂದು ಪುರಾಣದಿಂದ ತಿಳಿದುಬರುತ್ತದೆ. ಬಸವಣ್ಣನವರು ಕಳ್ಳತನ ಪ್ರೋತ್ಸಾಹಿಸುತ್ತಿದ್ದನೆಂಬುದಕ್ಕಿಂತ ಜಂಗಮರಿಗೆ ಮಾಡುವ ಭಕ್ತಿಯೇ ಶ್ರೇಷ್ಠವೆಂಬುದನ್ನು ಈ ಪ್ರಸಂಗ ತಿಳಿಸುತ್ತದೆ. ಬಸವಾದಿ ಪ್ರಮಥರೆಲ್ಲ ಸಂಗ್ರಹ ಬುದ್ಧಿಯನ್ನು ವಿರೋಧಿಸಿ ಪ್ರಾಮಾಣಿಕವಾಗಿ ದುಡಿದ, ಕಾರೆಯ ಸೊಪ್ಪನ್ನಾದರೂ ತಂದು ಶಿವನಿಗೆ ಅರ್ಪಿಸಿದರೆ ಸಾಕೆಂದು ಹೇಳಿರುವಾಗ ಕನ್ನದ ಬೊಮ್ಮಯ್ಯನ ಕಥೆ ಈ ತತ್ವಕ್ಕೆ ವಿರುದ್ಧವಾಗಿ ಪ್ರಕಟಗೊಂಡಿದೆ ಎಂಬಂಶ ಹೊಳೆಯುತ್ತದೆ. ಅಲ್ಲದೇ ಸಂದರ್ಭೋಚಿತವಾಗಿ ಅನೇಕ ಭಕ್ತರು ಮಾಡುವ ವೃತ್ತಿಯ ಉಲ್ಲೇಖಗಳು ಪುರಾಣದಲ್ಲಿ ಹೇಳಲ್ಪಟ್ಟಿವೆ. ಹೀಗೆ ಭೀಮಕವಿಯ ಕಾಲದಲ್ಲಿ ವೈವಿಧ್ಯಮಯವಾದ ವೃತ್ತಿಗಳು ಜಾರಿಯಲ್ಲಿದ್ದ ಬಗೆಯನ್ನು ಕಾಣುತ್ತೇವೆ.

ಉ. ಬೈಗುಳಗಳು :

ವಿಶಿಷ್ಟ ಸಂದರ್ಭದಲ್ಲಿ ವ್ಯಕ್ತಿಗಳು ಬಳಸುವ ಗಡಸು ಮಾತುಗಳೇ ಬೈಗುಳಗಳು. ವ್ಯಕ್ತಿ, ಜಾತಿ, ಧರ್ಮ, ಕುಟುಂಬಗಳನ್ನು ಗುರಿಯಿಟ್ಟು ಆಡುವ ಈ ನಿಂದೆಗಳು ಬಸವಪುರಾಣದಲ್ಲಿ ಅಲ್ಲಲ್ಲಿ ಬಳಕೆಯಾಗುತ್ತ ಬಂದದ್ದನ್ನು ಕಾಣಬಹುದು. ಬಸವಪುರಾಣದಲ್ಲಿ ಬಿಜ್ಜಳ ಹಾಗೂ ಶಿವಭಕ್ತರಿಗೂ ವ್ಯಾಜ್ಯಗಳು ಅಲ್ಲಲ್ಲಿ ಕಂಡುಬರುತ್ತವೆ. ಮಡಿವಾಳ ಮಾಚಯ್ಯನು ಮಡಿಬಟ್ಟೆ ಮುಟ್ಟಿದ ಭವಿಯನ್ನು ಕೊಂದಾಗ ವಿಪ್ರವರ್ಗ ಅರಸನಿಗೆ ಚಾಡಿ ಹೇಳುತ್ತಾರೆ. ಆ ಸಂದರ್ಭದಲ್ಲಿ ಬಸವಣ್ಣನವರನ್ನು ಕರೆಸಿದ ಬಿಜ್ಜಳನು; "ಮಾಸಿದಜಿವೆಗಳಂ ಬಡಿವುದಕೆ ಹೇಸದಸಗಂ ಕೊಬ್ಬಿ ಮನುಜರನಾ ಸುರದ ಹಣಾಹಣಿಗಳಂ ಮಾಡುತಿರ್ದಪ್ಪನು" (೨೦:೧೯) ಎಂದು ಶಿವಶರಣ ಕುಲಕ್ಕೆ ಮರ್ಮಾಘಾತವಾಗುವಂತೆ ಮಡಿವಾಳ ಮಾಚಯ್ಯನ ವೃತ್ತಿಯನ್ನು ಹೀಯಾಳಿಸಿ ನುಡಿಯುತ್ತಾನೆ. ರಾಜನ ಬಾಯಿಯಿಂದ ಬರುವ ಸಾಮಾನ್ಯ ಮಟ್ಟದ ಈ ಮಾತುಗಳ ಹಿಂದಿರುವ ಅವ್ಯಕ್ತ ಕೋಪವನ್ನು ಗಮನಿಸಬೇಕು. ಅಷ್ಟೇ ತೀವ್ರವಾಗಿ ಬಸವಣ್ಣನವರು ವಿಪ್ರಕುಲವನ್ನು ಕುರಿತು "ಕಾಳುಮೂಳರ ಖಳರ ಕಾಕರ ಖೂಳರಧಮರ ಕೀಳು ಮಾತಿಂಗೇಕೆ ಮರುಳಾದ್ಯೆ" (೨೦:೨೩) ಎಂದು ಮಡಿವಾಳ ಮಾಚಯ್ಯನನ್ನು ಸಮರ್ಥಿಸಿಕೊಳ್ಳುತ್ತಾರೆ. ಇಂತಹ ಸಂದರ್ಭಗಳು ಬಸವ ಬಿಜ್ಜಳರ ಮನಸ್ತಾಪಕ್ಕೆ ಕಾರಣವಾಗುತ್ತಿದ್ದವು. ಮಡಿಬಟ್ಟೆಯನ್ನು ಹೊತ್ತುಕೊಂಡು ಬರುವ ಮಾಚಯ್ಯನು ಇಡೀ ಭವಿಕುಲವನ್ನು ಕುರಿತು 'ಜಡರುಗಳಿರಾ ತೊಲಗಿಬೋ' (೨೦:೧೦) ಎಂದು ಕೂಗುತ್ತಾನೆ. ಆ ಮೂಲಕ ಸಮಾಜದ ಭವಿಗಳಿಗೆ ಎಚ್ಚರಿಕೆ ಕೊಡುತ್ತಾನೆ.

ಕಿನ್ನರಯ್ಯಗಳ ಕಥಾಸಂದರ್ಭದಲ್ಲಿ ಬಸವಣ್ಣನವರನ್ನು ಕುರಿತು ಬಿಜ್ಜಳನ ಬೈಗುಳಗಳು ಕೋಪದ ಪರಾಕಾಷ್ಠೆಯನ್ನು ತೋರಿಸುತ್ತವೆ. "ಕಾಲಲೊದೆವುದು,ಮಾಂಸವಂ ಸವಿದಾಳಿಗೊಳುವುದು, ಕಲ್ಲಿಲಿಡುವುದು, ಬಾಲನಂ ಕೊಲುವುದು, ಸತಿಯನೀವುದು, ಕುಲಂಗೆಟ್ಟು ಕೀಳುಜಾತಿಯ ಮನೆಯಲುಂಬುದು, ತಂದೆಯ ತಲೆಯನರಿವುದು" (೨೭:೩೨) ಎಂದು ಭರ್ತ್ಸನೆ ಮಾಡಿ ತೃಪ್ತಿ ಪಡೆಯುತ್ತಾನೆ.

ಶಿವನಾಗಮಯ್ಯಗಳನ್ನು ಕುರಿತಂತೆ "ಹೊಲೆಗೆಲಸಿ ಕುಲಸಂಕರವನು ಸುರಿದಹವೇ ಮಳೆ, ಬೆಳೆದವೇ ಧರೆ" (೫೪:೧೨-೧೩) ಎಂದು ಕುಲದ ಮಾತನ್ನೆತ್ತಿ ಕಟಕಿಯಾಡಿದ ಬಿಜ್ಜಳನನ್ನು ಕುರಿತು- "ಎಂಜಲಹಾಲುಮಂ ಹೇವಂಗಳಿಲ್ಲದೆ ಕುಡಿದರು, ಹೊನ್ನಧೇನುವನು ಕಡಿದು, ಹಣೆ ಸೋಮಯಾಜಿಗೆ, ಬಲದ ಬದಿ ವೇದಾಂತಿಗಳ ಭಾಗ, ಎಡದ ಬದಿ ಪಂಡಿತರ ಭಾಗ, ನಡು ಉಪಾಧ್ಯರ ಭಾಗ, ಮುಸುಡು ದೀಕ್ಷಿತರ ಭಾಗ" (೫೪:೧೬) ಎಂದು ವಿಪ್ರರ ಆಸೆಬುರುಕುತನವನ್ನು ಅಸ್ಪೃಶ್ಯರಿಗಿಂತ ಕೀಳಾಗಿ ನಡೆದುಕೊಂಡ ಬಗೆಯನ್ನು ಬಸವಣ್ಣನವರು ಬಿಜ್ಜಳನಿಗೆ ನಿರೂಪಿಸುತ್ತಾನೆ.

ಸೋಮಯಾಜಿಗಳೂ ಹಾವಿನಹಾಳ ಕಲ್ಲಯ್ಯನ ತೊತ್ತನ್ನು ಸೋಂಕಿದರೆಂದು ಅವಳು ಅಗ್ಘವಣಿ ತುಂಬಿದ ಕೊಡವನ್ನೇ ಮೈಲಿಗೆಯೆಂದು ಒಡೆದು ಹಾಕುತ್ತಾಳೆ. ಆ ಸಂದರ್ಭದಲ್ಲಿ ಅವಳನ್ನೇ ಕುರಿತು "ನೋಡಾ ಕೊಬ್ಬಿದಳು ಮೂಸಂಡಿ ತೊತ್ತಿವಳು" (೫೪:೨೯) ಎಂಬ ಬೈಗುಳ ಅವಳನ್ನು ಇರಿಯುತ್ತದೆ. ಮುಂದುವರೆದು ಕಲ್ಲಯ್ಯನು "ಮಲಹರನ ಭಕ್ತರ ಜಾಯಿಲಕೆ ನಿಮ್ಮಂ ಮುಟ್ಟಲಾಗದು ಬಳಿಕ ಶರಣರ ದಾಸಿ ನಿಮ್ಮಂ ಮುಟ್ಟಲೆಂತಹದು, ನಿಮಗೆ ತಾಂ ಬ್ರಾಹ್ಮಣ್ಯವೆಲ್ಲಿಯದು". (೫೪:೩೮,೩೯) ಎಂದು ಅತ್ಯಂತ ಕೀಳಾಗಿ ನುಡಿಯುವ ಮಾತುಗಳು ಶಿವಭಕ್ತರು ಹಾಗೂ ವಿಪ್ರರ ಮಧ್ಯ ಬೈಗುಳಗಳು ಕಂಡುಬರುತ್ತಿದ್ದ ಬಗೆಯನ್ನು ವಿವರಿಸುತ್ತವೆ.

ಮತಧರ್ಮಕ್ಕೆ ಸಂಬಂಧಿಸಿದಂತೆ ಘರ್ಷಣೆಗಳು ಸಂಭವಿಸಿದ ಹಿನ್ನಲೆಯಲ್ಲಿ ಬೈಗುಳಗಳು ಕಂಡುಬರುವುದನ್ನು ಗಮನಿಸಬೇಕು. ಶಿವಮತ ಮತ್ತು ಜೈನಮತ ಸಂಘರ್ಷಗಳ ಸಂದರ್ಭದಲ್ಲಿ ಈ ರೀತಿಯ ಬೈಗುಳಗಳ ಬಳಕೆಯನ್ನು ಕಾಣಬಹುದು. ಕೆರಹುಗಾಲಲಿ ಶಿವಾಲಯವನ್ನು ಹೊಕ್ಕ ಸಂದರ್ಭದಲ್ಲಿ ಬಳಕೆಯಾಗುವ "ಎಲೊ ಸ್ರವಣ ನಿನ್ನ ಬೀಳುಹೊಡೆವೆನು" (೪೮:೯) ಎಂಬ ಏಕಾಂತರಾಮಯ್ಯನ ಬಿರುನುಡಿಗಳು ಜೈನರ ಬಗೆಗಿರುವ ಅಸಹನೆಯನ್ನು ವ್ಯಕ್ತಪಡಿಸುತ್ತವೆ. ಜೈನಧರ್ಮೀಯರು ಮತಪರಿವರ್ತನೆಗೊಳ್ಳುವುದು ವ್ಯಾಪಕವಾಗಿ ನಡೆದಿತ್ತು . ಆ ಸಂದರ್ಭದಲ್ಲಿ ಪರಸ್ಪರರ ನಡುವಳಿಕೆಗಳು, ಕ್ರಿಯೆಪ್ರತಿಕ್ರಿಯೆಗಳು ಬೈಗುಳಗಳ ಮೂಲಕ ವ್ಯಕ್ತವಾಗುವ ಅನೇಕ ಉದಾಹರಣೆಗಳು ಸಿಗುತ್ತವೆ. ಜೈನರನ್ನು ಕುರಿತಂತೆ- "ಭಂಡರು, ತಟ್ಟೆರೋಮದವರು, ಹಡಿಕೆಗಳೊ, ಕಸಿಕಿಲಕಾಕರು, ಬಸದಿಗಳೊಳೂಳಿಡುವ ನರಿಗಳು, ಬತ್ತಲೆಯ ಭಂಡರು, ಮರುಳುಗಳು, ತಟ್ಟೆಗಳ ಹಗರಣಿಗರು" (೫೦:೫೩) ಹೀಗೆ ಧರ್ಮ, ರೂಪ ಆಕಾರವನ್ನು

ಗುರಿಯಾಗಿಟ್ಟುಕೊಂಡು ನಿಂದಿಸುವ ಮಾತುಗಳು ಬಸವಪುರಾಣದಲ್ಲಿ ಬರುತ್ತವೆ.

"ಹೆಡ್ಡ ದಾಮೋದರ, ದೊಡ್ಡ ಹೊಟ್ಟೆಯ ಮಾಧವ, ಕುಟಿಲಪಿಪ್ರರು, ಗಡ್ಡದ ಆದಿತ್ಯ"(೫೫:೩೩-೩೪) ಎಂಬ ಮಾತುಗಳು ಅಂದು ಶೈವವಿರೋಧಿ ಭಾವನೆಯನ್ನು ಕಟ್ಟಿಕೊಡುತ್ತವೆ. ಹೀಗೆ ಸುಸಂಸ್ಕೃತರಿಂದ ಸಭ್ಯ ರೀತಿಯ ಟೀಕೆ ನಡೆದರೆ ಕೆಲವು ಸಂದರ್ಭಗಳಲ್ಲಿ ಟೀಕೆ ಸಾಮಾನ್ಯ ಮಟ್ಟಕ್ಕಿಳಿದು ಎದುರಾಳಿಗಳನ್ನು ಅತ್ಯಂತ ತೀವ್ರವಾಗಿ ಘಾಸಿಗೆ ಒಳಗುಮಾಡಿದ ಉದಾಹರಣೆಗಳು ಸಿಗುತ್ತವೆ. ಮತಧರ್ಮದ ಹಿನ್ನಲೆಯಲ್ಲಿಯೇ ಬೈಗುಳಗಳು ಅತ್ಯಂತ ಹೆಚ್ಚು ಪ್ರಕಟಗೊಂಡಿದ್ದನ್ನು ನೋಡಿದರೆ ಭೀಮಕವಿಯ ಕಾಲದಲ್ಲಿ ಧಾರ್ಮಿಕವಾಗಿ ಸಂಘರ್ಷದ ವಾತಾವರಣ ಹೆಚ್ಚು ಕಂಡುಬರುವುದು ಗೊತ್ತಾಗುತ್ತದೆ. ಶಿವಮತವನ್ನು ಪ್ರಚುರಗೊಳಿಸಲು ಶಿವಶರಣರು ಅತ್ಯಂತ ಸಹಜವಾಗಿ ಇಂತಹ ಬಿರುನುಡಿಗಳನ್ನು ಬಳಕೆ ಮಾಡಿರುವುದನ್ನು ಕಾಣಬಹುದು. ಈ ರೀತಿಯಾಗಿ ಶರಣರು ವ್ಯಕ್ತಿಗತವಾಗಿ ತಾವು ಪರಿಶುದ್ಧರಾಗುವುದರ ಮೂಲಕ ಆ ಕೆಲಸವನ್ನು ಸಮಾಜಕ್ಕೂ ವಿಸ್ತರಿಸಿ ತಮ್ಮ ಕನಸಿನ ಆದರ್ಶ ಸಮಾಜ ರೂಪುಗೊಳಿಸಲು ಇನ್ನಿಲ್ಲದ ಪ್ರಯತ್ನ ಮಾಡಿದರು.

೫. ಸ್ತ್ರೀಯರ ಸ್ಥಾನಮಾನ :

ಪ್ರಾಚೀನ ಕಾಲದ ಸಮಾಜದಲ್ಲಿ ಸ್ತ್ರೀಗೆ ಸ್ವಾತಂತ್ರ್ಯ ಹಾಗೂ ಗೌರವದ ಸ್ಥಾನಮಾನಗಳು ಪ್ರಾಪ್ತವಾಗಿದ್ದವು. ಪೂರ್ವವೇದಗಳ ಕಾಲದಲ್ಲಿ ಮಾತೃಪ್ರಧಾನ ಕುಟುಂಬಗಳು ಜಾರಿಯಲ್ಲಿದ್ದ ಬಗ್ಗೆ ಆಧಾರಗಳು ದೊರೆಯುತ್ತವೆ. ಲಿಂಗಸಮಾನತೆಯ ಅಂಶಗಳು ಎದ್ದು ತೋರುತ್ತವೆ. ಋಗ್ವೇದದಿಂದ ಈಚಿನ ಕಾಲದ ಸ್ತ್ರೀಯರ ಇತಿಹಾಸವೆಂದರೆ ಅವರಿಗೆ ಇದ್ದ ಗೌರವ ಮತ್ತು ಸ್ವಾತಂತ್ರ್ಯಗಳು ಕ್ಷಯಿಸಿಹೋದ ಇತಿಹಾಸವೇ ಆಗಿದೆ. "ಕ್ರಿಸ್ತಶಕದ ಆರಂಭದ ಹೊತ್ತಿಗೆ ಸ್ತ್ರೀ ಎನ್ನುವವಳು ವೇದಾಧ್ಯಯನಕ್ಕೆ ಮತ್ತು ಉಪನಯನಕ್ಕೆ ಅನರ್ಹಳಾಗಿ ಸಂಸಾರ ಜೀವನದಲ್ಲಿ ಒಂದು ಅಲಂಕಾರವಾಗಿ ಬಹುಮಟ್ಟಿಗೆ ಸ್ವಾಂತಂತ್ರ್ಯವನ್ನೂ, ವ್ಯಕ್ತಿತ್ವವನ್ನೂ ಕಳೆದುಕೊಂಡ ವ್ಯಕ್ತಿಯಾಗಿ ಪರಿಣಮಿಸಿದ್ದಳು". (ಚಿಮೂ ೨೦೦೮, ಪು.೪೫೫)

ಕಾಲಕಾಲಕ್ಕೆ ಸಮಾಜವು ಸ್ತ್ರೀಯರ ಬಗ್ಗೆ ತೋರ್ಪಡಿಸುವ ಮನೋಭಾವವು ಒಂದೇ ಆಗಿರಲಿಲ್ಲ. ಪ್ರಸ್ತುತ ಶತಮಾನದ ಹಿಂದಿನ ಭಾರತದಲ್ಲಿ ಸಮಾಜವು ಸ್ತ್ರೀಯ ಮೇಲೆ ಹೆಚ್ಚಿನ ನಿರ್ಬಂಧಗಳನ್ನು ಹೇರುತ್ತ ಬಂದುದನ್ನು ಕಂಡುಕೊಳ್ಳಬಹುದು. ಮನುಸ್ಮೃತಿಯಂತೂ ಗೃಹಸ್ಥಧರ್ಮವನ್ನು ಹೇಳಿ ಸ್ತ್ರೀಯು ಪುರುಷಾವಲಂಬಿಯಾಗುವಂತೆ ಮಾಡಿತು. "ಪಿತಾ ರಕ್ಷತಿ ಕೌಮಾರೇ ಭರ್ತಾರಕ್ಷತಿ ಯೌವನೇ ರಕ್ಷಂತಿ ಸ್ಥಾವಿರೇ ಪುತ್ರಾ ನಸ್ತ್ರೀಸ್ವಾತಂತ್ರ್ಯಮರ್ಹತಿ" (ಮನುಸ್ಮೃತಿ. ೯.೩) ಎಂಬ ಮನುವಿನ ಪ್ರಸಿದ್ಧ ಶ್ಲೋಕವಂತೂ ಸ್ತ್ರೀಯರಿಗೆ ಸಮಾಜದಲ್ಲಿ ಸಮಾನ ಸ್ಥಾನಮಾನಗಳಿಲ್ಲದ್ದನ್ನು ಧ್ವನಿಸುತ್ತದೆ. ಪ್ರಾಚೀನ ಭಾರತದಲ್ಲಿ ಹೆಣ್ಣು ಮಗಳು ಬಯಸಿ ಪಡೆಯುವ ವಸ್ತುವಾಗಿರಲಿಲ್ಲ. ಇದಕ್ಕೆ ಕಾರಣಗಳು ಇಲ್ಲದಿಲ್ಲ. "ಹೆಣ್ಣು ಹೇಗಿದ್ದರೂ

ಪೆರನೊಡವೆ" ಯಲ್ಲವೆ? ಅವಳು ಎಂದಿದ್ದರೂ ಮನೆ ಬಿಟ್ಟು ಹೋಗುವವಳು. ಮನೆಯಲ್ಲಿದ್ದ ತಮ್ಮ ದುಡಿಮೆಯಿಂದ ತಂದೆ ತಾಯಿಗಳನ್ನು ಪೋಷಿಸುವವರು ಗಂಡು ಮಕ್ಕಳು. ಅಲ್ಲದೇ "ಅಂದಿನ ಸಮಾಜ ಪೋಷಿಸಿಕೊಂಡು ಬಂದ 'ವಿಧವಾ ಪದ್ಧತಿ', 'ಸಹಗಮನ' ಈ ಎಲ್ಲ ಪದ್ಧತಿಗಳು ಸಹ ಸಮಾಜದಲ್ಲಿ ಸ್ತ್ರೀಗೆ ಸ್ಥಾನಮಾನ ಕಲ್ಪಿಸಿಕೊಡುವ ನಿಟ್ಟಿನಲ್ಲಿ ವಿಫಲವಾಗಿ ತತ್ಪರಿಣಾಮ ಸ್ತ್ರೀಯರ ಬದುಕು ನಿಕೃಷ್ಟವಾಯಿತು" ಎಂದು ಚಿದಾನಂದಮೂರ್ತಿಯವರು ಊಹಿಸುತ್ತಾರೆ. (ಚಿಮೂ. ೨೦೦೮, ಪು.೪೫೫)

ಈ ಎಲ್ಲಾ ಅನಿಷ್ಟಗಳನ್ನು ಗಾಳಿಗೆ ತೂರಿ ವಚನಕಾರರು ತಮ್ಮ ಕಾಲದಲ್ಲಿ ಸ್ತ್ರೀಯರಿಗೆ ಅತ್ಯಂತ ಹೆಚ್ಚಿನ ಗೌರವಾದರಗಳನ್ನು ಕಲ್ಪಿಸಿಕೊಟ್ಟರು. ಅವರ ಕಾಲದಲ್ಲಿ ಸ್ತ್ರೀಯು ಅತ್ಯಂತ ಜಾಗ್ರತಳಾಗಿದ್ದಳು. "ಮೊಲೆ ಮುಡಿ ಬಂದರೆ ಹೆಣ್ಣೆಂಬರು ಗಡ್ಡ ಮೀಸೆ ಬಂದರೆ ಗಂಡೆಂಬರು ನಡುವೆ ಸುಳಿವಾತ್ಮನು ಗಂಡೂ ಅಲ್ಲ, ಹೆಣ್ಣೂ ಅಲ್ಲ ಕಾಣಾ ರಾಮನಾಥ" (ಸಂ.ವ. ಸಂ. ಪು.೨೫೯) ಎಂಬ ಜೇಡರ ದಾಸಿಮಯ್ಯಗಳ ವಚನ ಲಿಂಗಸಮಾನತೆಯನ್ನು ಎತ್ತಿ ತೋರಿಸಿ ಅವಳನ್ನು ಪುರುಷನ ಸಮಾನ ಪರಿಗಣಿಸಿ ಆತ್ಮವಿಕಾಸಕ್ಕೆ ದಾರಿಮಾಡಿಕೊಡುವುದರ ಸೂಚನೆ ಕೊಡುತ್ತದೆ. 'ಹೆಣ್ಣು ಹೆಣ್ಣಲ್ಲ ಸಾಕ್ಷಾತ್ ಕಪಿಲಸಿದ್ಧ ಮಲ್ಲಿಕಾರ್ಜುನ' ಎಂದು ಹೇಳುವುದರ ಮೂಲಕ ಶರಣರು ಸ್ತ್ರೀಯರನ್ನು ದೈವತ್ವಕ್ಕೇರಿಸಿದರು. ವಚನಕಾರರು ಕೊಟ್ಟ ಈ ಸ್ವಾತಂತ್ರ್ಯವನ್ನು ಸ್ತ್ರೀಯರು ಸದುಪಯೋಗಮಾಡಿಕೊಂಡರೆಂದೇ ಹೇಳಬಹುದು. ಹೆಣ್ಣು ತನ್ನ ಪೊರೆ ಕಳಚಿಕೊಂಡು ಹೊಸ ರೂಪ ಧರಿಸಿದಳು. ವಚನಕಾರರ ಈ ಪ್ರೇರಣೆಯಿಂದ ಈ ಕ್ರಾಂತಿಯಲ್ಲಿ ಸುಮಾರು ೩೦೦ ಜನ ಮಹಿಳೆಯರು ಭಾಗವಹಿಸಿದ್ದರೆಂದು ಕಂಡುಬರುತ್ತದೆ. ಜಗತ್ತಿನ ಯಾವ ಇತಿಹಾಸದಲ್ಲೂ ಇಷ್ಟು ಸಂಖ್ಯೆಯಲ್ಲಿ ಸ್ತ್ರೀಯರು ಚಳವಳಿಯಲ್ಲಿ ಭಾಗವಹಿಸಿದ್ದು, ಏಕಕಾಲಕ್ಕೆ ಗಣನೀಯವಾಗಿ ಸಾಹಿತ್ಯ ರಚನೆ ಮಾಡಿದ್ದು ಕಂಡುಬರುವುದಿಲ್ಲ. ಇವರಲ್ಲಿ ಸುಮಾರು ೩೪ ಸ್ತ್ರೀಯರು ವಚನಗಳನ್ನು ರಚಿಸಿದವರಿದ್ದಾರೆ. 'ಅಕ್ಕಮಹಾದೇವಿ', 'ಸತ್ಯಕ್ಕ', 'ಆಯ್ದಕ್ಕಿ ಲಕ್ಕಮ್ಮ', 'ನಿಂಗಮ್ಮ', 'ಅಕ್ಕನಾಗಮ್ಮ', 'ಅಮುಗೆ ರಾಯಮ್ಮ', 'ಬೊಂತಾದೇವಿ', 'ಕದಿರೆಯ ರೆಮ್ಮವ್ವೆ' , 'ಕೊಟ್ಟಣದ ಸೋಮವ್ವೆ', 'ಸೂಳೆ ಸಂಕವ್ವೆ', 'ನಿಂಗಮ್ಮ', 'ಕೇತಲದೇವಿ', 'ಕಾಳವ್ವೆ ', 'ಕಾಲಕಣ್ಣಿಯ ಕಾಮವ್ವೆ', 'ಗುಡ್ಡವ್ವೆ' ಮೊದಲಾದ ಸ್ತ್ರೀಯರು ತಮ್ಮ ವಿಚಾರಧಾರೆಯನ್ನು ಪ್ರತಿಪಾದಿಸಲು ಶರಣರು ಪ್ರೇರಕಶಕ್ತಿಯಾದರು. ಇವರಲ್ಲಿ ಅಕ್ಕಮಹಾದೇವಿಯು ರಚಿಸಿದ ವಚನಗಳು ಶ್ರೇಷ್ಠ ಸ್ಥಾನದಲ್ಲಿ ನಿಲ್ಲುತ್ತವೆ. "ಕೌಶಿಕನೆಂಬ ಪ್ರಬಲನಾದ ರಾಜನನ್ನು ಮದುವೆಯಾಗಿ, ಕೆಲಕಾಲಾನಂತರ ಅವನೊಡನೆ ದಾಂಪತ್ಯ ಜೀವನವನ್ನು ನಿರಾಕರಿಸಿ ಆಧ್ಯಾತ್ಮಿಕ ಸಾಧನೆಯಲ್ಲಿ ತೊಡಗಿದುದು ವಚನಕಾರರ ಚಳುವಳಿಯ ಪ್ರಭಾವವನ್ನು ಮತ್ತಷ್ಟು ಸ್ಪುಟಗೊಳಿಸುತ್ತದೆ" (ನಾರಾಯಣ ಪಿ.ವಿ. ೧೯೮೩: ಪು.೯೦) ಹೆಣ್ಣನ್ನು ಅತ್ಯಂತ

ಕೀಳುದೃಷ್ಟಿಯಿಂದ ಕಾಣುತ್ತಿದ್ದ ಆ ಕಾಲದ ಹಿನ್ನೆಲೆಯಲ್ಲಿ ಇಷ್ಟೊಂದು ವ್ಯಾಪಕವಾದ ಮಹಿಳಾ ಜಾಗೃತಿಯುಂಟಾದುದು ಸೋಜಿಗವೆ. ಇದಕ್ಕೆ ಕಾರಣ ಹನ್ನೆರಡನೆಯ ಶತಮಾನದ ಶಿವಶರಣರು. ಇವರ ಪ್ರಭಾವದಿಂದ ಸ್ತ್ರೀಯರು ಪುರುಷರಷ್ಟೇ ಲಿಂಗಧಾರಣೆ, ಕಾಯಕತತ್ವ, ಧಾರ್ಮಿಕಾಚರಣೆ, ಆತ್ಮೋನ್ನತಿ, ಶಿಕ್ಷಣ, ಅಂತರ್‌ಮತೀಯ ಮದುವೆ, ಏಕದೇವೋಪಾಸನೆಗಾಗಿ ಕೈಕೊಂಡ ಎಲ್ಲ ಚಟುವಟಿಕೆಗಳಲ್ಲೂ ಪಾಲುದಾರರಾಗಿದ್ದರು. ವಚನಕಾರರ ಕಾಲದಲ್ಲಿ ಸ್ತ್ರೀಯರು ಉನ್ನತವಾದ ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ, ಕೌಟುಂಬಿಕ ಸ್ಥಾನಮಾನಗಳನ್ನು ಹೊಂದಿರುವುದು ಕಂಡುಬರುತ್ತದೆ.

ವಚನಕಾರರ ನಂತರ ಈ ಪರಿಸ್ಥಿತಿ ಇದೇ ರೀತಿಯಾಗಿ ಮುಂದುವರಿದುಕೊಂಡು ಬಂದುದು ಕಂಡುಬರುವುದಿಲ್ಲ. ಬಸವಪುರಾಣದಲ್ಲಿ ವಚನಕಾರರು ಸ್ತ್ರೀಯರಿಗೆ ಕೊಟ್ಟ ಸ್ಥಾನಮಾನಗಳು ತೀವ್ರ ರೀತಿಯಲ್ಲಿ ಪ್ರತಿಪಾದಿತವಾಗಿಲ್ಲ. ಆದರೂ ಸಹ ಅಲ್ಲಲ್ಲಿ ಕಂಡುಬರುವ ಕೆಲವಂಶಗಳು ಸ್ತ್ರೀಯರ ಸ್ಥಿತಿಗತಿ ಕುರಿತು ಬೆಳಕನ್ನು ಚೆಲ್ಲುತ್ತವೆ.

ಅ. ಸ್ತ್ರೀಯರ ಮನೋಭಾವ :

ಬಸವಪುರಾಣ ಇದೊಂದು ಪುರಾಣವಾಗಬೇಕೆಂಬ ಉದ್ದೇಶ ಕವಿಗಿರುವುದರಿಂದ ವಚನಕಾರರ ಕ್ರಾಂತಿಕಾರಕ ವಿಚಾರಗಳು ಪುರಾಣದಲ್ಲಿ ಸ್ಥಾನ ಪಡೆಯುವಲ್ಲಿ ವಿಫಲವಾಗಿವೆ. ಧಾರ್ಮಿಕ ಅಂಶಗಳಷ್ಟು ಪ್ರಭಾವಯುತವಾಗಿ ಸಾಮಾಜಿಕ ಅಂಶಗಳು ಇಲ್ಲಿ ಚರ್ಚಿತವಾಗಿಲ್ಲ ಎಂದೇ ಹೇಳಬಹುದು. ಸಮಾಜದಲ್ಲಿ ಸ್ತ್ರೀಯರ ಸ್ಥಾನಮಾನಗಳೇನು? ಅವರು ಮಾಡುತ್ತಿದ್ದ ವೃತ್ತಿಗಳ ವಿವರಗಳು, ಆಚರಿಸಿದ ಧರ್ಮಗಳು, ವಿದ್ಯಾಭ್ಯಾಸ, ಮುಂತಾದ ವಿಚಾರಗಳು ವಿವರವಾಗಿ ದೊರೆಯುವುದಿಲ್ಲ. ಆದರೆ ಸ್ತ್ರೀಯರು ತಮಗಿಷ್ಟವಾದ ಧರ್ಮವನ್ನು ಆಚರಿಸಲು ಸ್ವಾತಂತ್ರ್ಯವಿತ್ತು ಎಂಬ ಒಂದೆರಡು ಉದಾಹರಣೆಗಳು ಇಲ್ಲಿ ದೊರೆಯುತ್ತವೆ.

ಅರಸು ದೇಸಿಂಗರಾಯನ ಮಡದಿ ಸುಗ್ಗಲದೇವಿ ಶಿವಭಕ್ತೆ. ದೇವರದಾಸಿಮಯ್ಯನ ಶಿಷ್ಯೆ. ದಾಸಿಮಯ್ಯನು ಭಕ್ತರೊಡನೆ ಬಂದಾಗ ಅರಸಿಯು ಗುರುವನ್ನು ಆದರದಿಂದ ಬರಮಾಡಿಕೊಂಡಳು. ಆಗ ಜೈನ ಅರಸು ದೇಸಿಂಗರಾಯನು "ಇದೇನು ತಿಳಿಗೇಡಿಯಂತೆ ಮಾಡುವೆ? ಗಂಡನಿಗೂ ಹೆಂಡತಿಗೂ ಬೇರೆ ಬೇರೆ ಧರ್ಮಗಳಿವೆಯೆ? ಸತಿಗೆ ಪತಿಯೇ ಗುರು. ಇವರನ್ನು ಕಳುಹಿಸು" ಎನ್ನುತ್ತಾನೆ. ಕ್ರೋಧಗೊಂಡ ಸುಗ್ಗಲದೇವಿ- "ಮಾಡಿಕೋ ಮತ್ತೊಬ್ಬ ಸತಿಯಂ ಕೂಡದೆನ್ನಂ ಬಿಟ್ಟುಕಳೆ ಶಶಿಚೂಡನಲ್ಲದತಃಪರವನಾನರಿಯೆನಲ್ಲದಡೆ ನಾಡ ಮಾತುಗಳೇಕೆ ಜಗದೊಳು ಪಾಡೆ ಎನ್ನೊಡೆಯರಿಗೆ ಜೈನರ ನಾಡಿಪಾಗಮತರ್ಕಶಾಸ್ತ್ರ ಪುರಾಣವಾದದಲಿ" (೫೦:೯) ಎಂದು ಹೇಳುವ ಮೂಲಕ ಗಂಡನನ್ನೇ ತ್ಯಜಿಸುವ ದಿಟ್ಟ ನಿರ್ಧಾರ ಕೈಗೊಳ್ಳುವ ಪರಿಯನ್ನು ಗಮನಿಸಬೇಕು. ಈ ಮೂಲಕ ಬಹುಪತ್ನೀಕತ್ವ ಜಾರಿಯಲ್ಲಿತ್ತೆಂಬ ಬಗೆಯನ್ನು

ಸುಗ್ಗಲದೇವಿಯ ಮಾತುಗಳು ತಿಳಿಸಿ ಕೊಡುತ್ತವೆ. ಬಹುಪತ್ನಿತ್ವಕ್ಕೆ ಬಸವಣ್ಣನೇ ಇಲ್ಲಿ ಉದಾಹರಣೆಯಾಗಿ ನಿಂತಿದ್ದಾನೆ. 'ವೈಜಿಕವ್ವೆ' ಮತ್ತು 'ತಿಲಕವ್ವೆ' ಎಂಬಿಬ್ಬರು ಸಹ ಪತಿಭಕ್ತಿ ಮತ್ತು ಶಿವಭಕ್ತಿಗಳಲ್ಲಿ ಶಿವಭಕ್ತಿಯನ್ನೇ ಆಯ್ದುಕೊಂಡ ಉದಾಹರಣೆಗಳು ಕಂಡುಬರುತ್ತವೆ. (೫೧:೧೨೨೬) ಆ ಮೂಲಕ ಸಮಾಜದಲ್ಲಿ ಸ್ತ್ರೀಯರು ತಮಗಿಷ್ಟವಾದ ಧರ್ಮವನ್ನು ಆಚರಿಸುವ ಸ್ವಾತಂತ್ರ್ಯ ಪಡೆದುಕೊಂಡಿದ್ದರೆಂಬುದು ಸ್ಪಷ್ಟವಾಗುತ್ತದೆ. ಹೆಂಡತಿಯಾದವಳು ಗಂಡನ ಅಭೀಪ್ಸೆಯಂತೆ ನಡೆಯುತ್ತಿದ್ದಳು ಎಂಬ ಅಂಶ ಬಸವಪುರಾಣದಲ್ಲಿ ಕಂಡುಬರುತ್ತದೆ. ವಿಟಪುರುಷನ ಅಪೇಕ್ಷೆಯಂತೆ ಬಸವಣ್ಣನವರು ತನ್ನ ಹೆಂಡತಿ ಗಂಗಾಂಬಿಕೆಯ 'ದುಕೂಲ' ವನ್ನು ಸೆಳೆದು ಕೊಡುವಲ್ಲಿ ಹಾಗೂ ಮಾಯಿದೇವಿಯ ಮುತ್ತಿನೋಲೆಯನ್ನು ಅಯ್ಯನಿಗೆ ಕೊಡುವ ಸಂದರ್ಭದಲ್ಲಿ ಅವರಿಬ್ಬರು ಬಸವಣ್ಣನವರ ಅಪೇಕ್ಷೆಯಂತೆ ನಡೆದುಕೊಂಡದ್ದೂ ಕಂಡುಬರುತ್ತದೆ. ಆದರೆ ಹರಿಹರನ ಬಸವರಾಜದೇವರ ರಗಳೆಯಲ್ಲಂತೂ ಜಂಗಮಪ್ರೇಮಿ ಬಸವಣ್ಣನವರು ತಮ್ಮ ಹೆಂಡತಿ ಮಾಯಿದೇವಿಯನ್ನು ಒಬ್ಬ ಜಂಗಮನಿಗೆ ಅರ್ಪಿಸುವ ಸಂದರ್ಭವನ್ನು ವಿವರಿಸುತ್ತಾನೆ. (ಬ.ದೇ.ರ.ಪು.೧೭೪) ಬಹುಶಃ ಈ ಪ್ರಸಂಗವನ್ನೇ ಭೀಮಕವಿಯು 'ಹುಟ್ಟಿಗೆ' ಯ ಸಂದರ್ಭವನ್ನಾಗಿ ಬದಲಾಯಿಸಿಕೊಂಡಂತೆ ಕಾಣುತ್ತದೆ. ಆದರೆ ಗಂಗಾಂಬಿಕೆ ಹಾಗೂ ನೀಲಾಂಬಿಕೆಯರಿಗೆ ಅದಲುಬದಲಾಗಿ ಈ ಸಂದರ್ಭಗಳು ಆರೋಪಿಸಲ್ಪಟ್ಟಿವೆ. ಹರಿಹರನ ಈ ಸಂದರ್ಭ ಕುರಿತಂತೆ "ಬಸವಣ್ಣನವರನ್ನು ಓರ್ವ ಮತಿಗೇಡಿ ಭಾವುಕನಂತೆ ಚಿತ್ರಿಸಿದ ಹರಿಹರ ಮಾಯಿದೇವಿಯನ್ನು ಅಷ್ಟೇ ಮೂಢ ಹಿಂಬಾಲಕಳಂತೆ ಚಿತ್ರಿಸಿದ್ದಾನೆ" ಎಂದು ಮಾತೆ ಮಹಾದೇವಿಯವರು ಅಭಿಪ್ರಾಯ ಪಡುತ್ತಾರೆ. (ಕಲ್ಯಾಣ ಕಿರಣ ಪು.೩೧) ವಿಚಾರಪತ್ನಿಯೆಂದು ಕರೆದುಕೊಂಡ ಮಾಯಿದೇವಿ (ನೀಲಾಂಬಿಕೆ) ಈ ಪ್ರಸಂಗದಲ್ಲಿ ಬಲಿಯಾದದ್ದು ಬಹುಶಃ ಜಂಗಮಭಕ್ತಿಯ ಮಹತ್ವವನ್ನು ಹೇಳಲು ಹರಿಹರ ಮತ್ತು ಭೀಮಕವಿಗಳು ಈ ರೀತಿಯ ಪ್ರಸಂಗಗಳನ್ನು ಹೆಣೆದಿರಲು ಸಾಧ್ಯವಿದೆ.

ಸಿರಿಯಾಳನ ಜೊತೆ ಅವನ ಭಕ್ತಮಡದಿ ಚೆಂಗಳೆಯೂ ಸೇರಿ ತಮ್ಮ ಮಗನನ್ನೇ ಕೊಂದು ಜಂಗಮನಿಗೆ ಅರ್ಪಿಸಿದ ಘೋರ ಭಕ್ತಿಯ ಉಲ್ಲೇಖ ಪುರಾಣದಲ್ಲಿದೆ. (ಸಂ.೨೩) ಆ ಮೂಲಕ ಅವಳ ದಿಟ ಪುಟ ಭಕ್ತಿಯನ್ನು ಕವಿ ನಿರೂಪಿಸಿದ್ದಾನೆ. ನಿಂಬಿಯಕ್ಕಳೆಂಬ ಮತ್ತೊಬ್ಬ ಶಿವಭಕ್ತೆ ಹೆತ್ತ ಮಗನೆ ಮಾಹೇಶ್ವರರ ಓಗರದ ಮೀಸಲು ಮುರಿದನೆಂದು ಅವನನ್ನು ಕೊಂದು ಬೋನವನ್ನು ಜಂಗಮನಿಗರ್ಪಿಸಿದ ಸಂದರ್ಭದಲ್ಲಿಯೂ ಸಹ ದಿಟ್ಟ ಭಕ್ತಿಯನ್ನು ಕೈಕೊಂಡಿದ್ದರೆಂದು ಗೊತ್ತಾಗುತ್ತದೆ. (ಸಂ.೪೬) ಇನ್ನೂ ವಿಚಿತ್ರ ಸಂಗತಿಯೆಂದರೆ ಚಿಕ್ಕಮಾದಣ್ಣನೆಂಬ ಮಾಹೇಶ್ವರಭಕ್ತ ತೀರಿಕೊಂಡಾಗ ಅವನ ಹೆಂಡತಿಯೇ ಗಂಡನ ಶವಸಂಸ್ಕಾರ ಮಾಡುವ ಉಲ್ಲೇಖ ನೋಡಿದರೆ ಸಾಮಾಜಿಕವಾಗಿ ಸ್ತ್ರೀಯರು ಕೆಲವು ಸ್ವಾತಂತ್ರ್ಯಗಳನ್ನು ಹೊಂದಿದ್ದರೆಂಬ ಅಂಶ

ಗೊತ್ತಾಗುತ್ತದೆ. ಅಣ್ಣಲದೇವಿಯೆಂಬ ಶಿವಭಕ್ತೆಯೂ ಸಹ ಮಗ ಉರಗಕಚ್ಚಿ ಪ್ರಾಣಬಿಟ್ಟರೂ ಸಹ ಲೆಕ್ಕಿಸದೆ ಸಂತೋಷದಿಂದ ಮಗನ ಶವಸಂಸ್ಕಾರ ಮಾಡಿದ್ದನ್ನು ನೋಡಿದರೆ ಸ್ತ್ರೀಯರ ಮನೋದಾರ್ಢ್ಯ.

ಆ. ಪ್ರಮುಖ ಸ್ತ್ರೀಯರು :

ಸಂದರ್ಭೋಚಿತವಾಗಿ ಕವಿಯು ಬಸವಪುರಾಣದಲ್ಲಿ ಕೆಲವು ಸ್ತ್ರೀಯರನ್ನು ಹೆಸರಿಸಿದ್ದರೂ ಸಹ ಇವರ ಕೆಲಸ ಹಾಗೂ ಸ್ಥಾನಮಾನಗಳೇನೆಂಬುದು ಗೊತ್ತಾಗುವುದಿಲ್ಲ. ಬಸವನ ಮದುವೆಯ ಸಂದರ್ಭದಲ್ಲಿ ಗಂಗಾಂಬಿಕೆಯನ್ನು ವರ್ಣಿಸುವ ಪುಣ್ಯಕಾಂತೆಯರು (೪: ೧೪) ಈ ಶುಭಸಂದರ್ಭದಲ್ಲಿ ಆಗಮಿಸುವ ಮುತ್ತೈದೆಯರ (೪:೩೩) ಉಲ್ಲೇಖ ದೊರೆಯುತ್ತದೆ. ಪುಣ್ಯಕಾಂತೆಯರು ಬಹುಶಃ ಹೊಗಳುವ ವೃತ್ತಿಯವರೊ ಹೇಗೊ ಗೊತ್ತಾಗುವುದಿಲ್ಲ. ಬಸವಣ್ಣನವರು ಕಲ್ಯಾಣಕ್ಕೆ ಬಂದ ಸಂದರ್ಭದಲ್ಲಿ ಅವರನ್ನು ನೋಡುವ ಕುತೂಹಲಭರಿತರಾಗಿ ಆಗಮಿಸುವ ಅಬಲೆಯರು, ಲಲನೆಯರು, ಕಂಬಕುಂಧರೆಯರು, ಯುವತಿಯರು, ಪುಣ್ಯಾಂಗನೆಯರು (ಸಂ.೫) ಮುಂತಾದ ಸ್ತ್ರೀಸಮೂಹ ನೆರೆದಿದ್ದನ್ನು ಕವಿ ಪ್ರಸ್ತಾಪಿಸುತ್ತಾನೆ. ಇವರಲ್ಲಿ ಪುಣ್ಯಾಂಗನೆಯರು ವೇಶ್ಯೆಯರೆಂಬುದು ಸ್ಪಷ್ಟ..

ಬಸವಪುರಾಣಾಂತ್ಯದಲ್ಲಿ ಕವಿಯು ಸುಮಾರು ನಲವತ್ತೊಂದು ಜನ ಸ್ತ್ರೀಯರನ್ನು ಉಲ್ಲೇಖಿಸಿದ್ದಾನೆ. ಉಮೆದೇವಿ, 'ಐಚಲದೇವಿ', 'ಗಂಗಾದೇವಿ', 'ಕಲಿದೇವಿ', 'ಕಾಮಲದೇವಿ', 'ಗಣದಾಸವ್ವೆ', 'ಚಾಕಲದೇವಿ', 'ಚೆಲ್ಲವ್ವೆ', 'ಒಕ್ಕಲಿಗೆ ಮಾದಾಯಿ', 'ಚಿಕ್ಕಾದೇವಿ', 'ಚೋಳಾದೇವಿ', 'ತುಪ್ಪದ ನಾಗಲಾಯಿ', 'ದಂಡಿಗೆಯ ಗುಡ್ಡಾದೇವಿ', 'ದೇವಲಾಂಬಿಕೆ', 'ನಿರಂಜನದ ಧವಳಾಯಿ', 'ನೇಮದ ವೀರಸಂಗವ್ವೆ', 'ಪರ್ಬದ ಪರ್ಬಿತಾಯಿ', 'ಪುರಾತ ರೆಬ್ಬವ್ವೆ', 'ಪೋಚಲದೇವಿ', 'ಚಾಡಲದೇವಿ', 'ಬೊಂತಾದೇವಿ', 'ಮಂಗಾಯಿ', 'ಮಹದೇವಿ', 'ಮಾಚಲದೇವಿ', 'ಮಾಯಿದೇವಿ', 'ರಾಮಾದೇವಿ', 'ಲಿಂಗಾದೇವಿ', 'ವಿಮಳಾದೇವಿ', 'ವೀರಲದೇವಿ', 'ಷೋಡಶ ಬಸವಮ್ಮ', 'ಶಿವಾದೇವಿ', 'ಸಾಯಿದೇವಿ, ಸಿದ್ಧಾದೇವಿ', 'ಸೇವಕದ ಗೌರವ್ವೆ', 'ಸೋವರಸಿ', 'ಹುಗ್ಗಿಯ ದುಗ್ಗಳವ್ವೆ', 'ಹೂವಿನಲ್ಲಮದೇವಿ' (೫೮:೬–೮) ಮುಂತಾದ ಶರಣೆಯರನ್ನು ಕವಿ ಉಲ್ಲೇಖಿಸಿದ್ದಾನೆ. ಶಿವಭಕ್ತಿಯ ದ್ಯೋತಕವೆಂಬತೆ ಕಂಡುಬರುವ ಮೇಲಿನ ಸ್ತ್ರೀಯರು ಬಹಿರಂಗದ ಬದುಕಿನಲ್ಲಿ ಪಡೆದ ಧಾರ್ಮಿಕಾಚರಣೆ ಹಾಗೂ ವೈಯುಕ್ತಿಕ ವಿಷಯಗಳು ಗೊತ್ತಾಗುವುದಿಲ್ಲ. ಆಶ್ಚರ್ಯವೆಂದರೆ ಇಡೀ ಪುರಾಣದಲ್ಲಿ ಎಲ್ಲಿಯೂ ಸಹ ಅಕ್ಕಮಹಾದೇವಿಯ ವಿವರ ಕಂಡುಬರುವುದಿಲ್ಲ. ಬಹುಶಃ ಅವಳ ಕಥಾವಿವರ ಗೊತ್ತಾಗದ್ದರಿಂದಲೋ ಅಥವಾ ಸಂದರ್ಭೋಚಿತದ ಕೊರತೆಯಿಂದಲೋ ಕವಿಯು ಅವಳ ಕಥಾಹಂದರವನ್ನು ವಿವರಿಸದೆ ಬಿಟ್ಟಿರಲು ಸಾಧ್ಯವಿರಬಹುದು.

ಇ. ವಿವಾಹ ವಿಚ್ಛೇದನ :

ಸುಗ್ಗಲದೇವಿ ತನ್ನ ಪತಿ ದೇಸಿಂಗರಾಯನಿಗೆ ಹೇಳುವ "ಮಾಡಿಕೋ ಮತ್ತೊಬ್ಬ ಸತಿಯಂ ಕೂಡದೆನ್ನಂ ಬಿಟ್ಟುಕಳೆ ಶಶಿ ಚೂಡನಲ್ಲದತಃ ಪರವನಾನಜಿಯೆನಲ್ಲದೊಡೆ" (೫೫:೯) ಎಂಬ ನುಡಿಗಳು ಬರುತ್ತವೆ. ವೈಜಿಕವ್ವೆಯು ಶಿವಭಕ್ತಿ ಆಚರಿಸಿದಳೆಂದು ಕೋಪಗೊಂಡ ಅವಳ ಪತಿ "ವನಿತೆ ನಿನ್ನಂ ಬಾಳಲೀಯೆವು ಮನೆಯೊಳಿರಬೇಡೀಗ ಹೊಜವಡು ನಿನಗೆ ನಾವಂಜುವವೆನುತ ನೂಕಿದಡೆ" (೫೧:೨೧) ಎಂದು ಮನೆಯಿಂದ ಹೊರ ಹಾಕುತ್ತಾನೆ. ಧಾರ್ಮಿಕಾಚರಣೆಯ ಹಿನ್ನೆಲೆಯಲ್ಲಿ ಈ ರೀತಿಯ ಸಾಂಸಾರಿಕ ಕಲಹಗಳು ಹೆಚ್ಚು ಉಂಟಾಗುವ ಸಂಭವವು ಕಂಡು ಬರುತ್ತದೆ. ತಿಲಕವ್ವೆ ಎಂಬ ಶಿವಭಕ್ತೆ "ಪಾರ್ವತೀಶನ ಚರಣಭಕ್ತಿವಿರಹಿತನಾಗಿಹ ಗಂಡನಂ ತ್ಯಜಿಸೆ" (೫೧:೨೬) ಸ್ವತಂತ್ರ ಜೀವನ ನಡೆಸುತ್ತಿದ್ದ ಉಲ್ಲೇಖವನ್ನು ಕವಿ ಕೊಡುತ್ತಾನೆ. ಭವಿಯಾದವನನ್ನು ಶಿವಭಕ್ತೆಯರು ತ್ಯಜಿಸುತ್ತಿದ್ದರು ಎಂಬ ಸೂಚನೆ ಈ ಮಾತುಗಳಲ್ಲಿ ದೊರೆಯುತ್ತದೆ. ಮೇಲಿನ ಘಟನೆಗಳು ಪುರುಷನಿಗೆ ಸ್ತ್ರೀ ತೋರಿದ ಪ್ರತಿಕ್ರಿಯೆಯಾಗಿ ಭೋಗಸುಖಕ್ಕಿಂತ ಹೆಚ್ಚಾಗಿ ಆತ್ಮಸುಖಕ್ಕೆ ಅವರು ಕೊಟ್ಟ ಪ್ರಾಧಾನ್ಯ ಕಂಡುಬರುತ್ತದೆ. ಗಂಡನನ್ನು ತೊರೆದು ಸ್ತ್ರೀಯರು ಸನ್ಯಾಸಿನಿಯರಾಗಿ ಬಾಳುತ್ತಿದ್ದರು ಎಂಬುದಕ್ಕೆ ಈ ನಿದರ್ಶನಗಳು ಸಾಕ್ಷಿಯಾಗಿವೆ. 'ಗೊಲ್ಲತಿ', 'ಅಮ್ಮವ್ವೆ' (ಬಿಜ್ಜಮಹಾದೇವಿ), 'ಗುಡ್ಡವ್ವೆ', ಇವರ ಕಥೆಗಳು ಪತಿಭಕ್ತಿಗಿಂತ ಹೆಚ್ಚಾಗಿ ಶಿವಭಕ್ತಿಯನ್ನೇ ಆಯ್ಕೆ ಮಾಡಿಕೊಂಡು ಬದುಕಿದ ವಿವರಗಳು ಪುರಾಣದಲ್ಲಿ ದೊರೆಯುತ್ತವೆ. ಪುರುಷಪ್ರಭುತ್ವವು ಯಾವುದರಿಂದ ಹೇರಲ್ಪಟ್ಟಿತ್ತೋ ಅದನ್ನು ತಿರಸ್ಕರಿಸುವ ಮೂಲಕ ಈ ಮೇಲಿನ ಸಂದರ್ಭಗಳಲ್ಲಿ ತಾನು ಸಬಲೆಯೆಂಬುದನ್ನು ಸ್ತ್ರೀಯು ತೋರಿಸಿಕೊಂಡಿದ್ದಾಳೆ.

ಈ. ವೇಶ್ಯೆಯರು :

ಪ್ರಾಚೀನ ಕಾಲದಿಂದ ಇಂದಿನವರೆಗೂ ಸಮಾಜದ ಒಂದು ಮುಖ್ಯ ಭಾಗವೆಂಬಂತೆ ವೇಶ್ಯೆಯರು ಬದುಕಿದ ಉದಾಹರಣೆಗಳು ದೊರೆಯುತ್ತವೆ. ಬಸವಪುರಾಣದಾದ್ಯಂತ ವೇಶ್ಯೆಯರ ಉಲ್ಲೇಖ ಅಲ್ಲಲ್ಲಿ ಕಂಡು ಬರುತ್ತದೆ. ವಚನಕಾರರು ವೇಶ್ಯಾಜೀವನಕ್ಕೆ ಆದ್ಯತೆ ಕೊಟ್ಟವರಲ್ಲ. ಆದರೆ ಅವರ ಕಾಲದಲ್ಲಿ ವೇಶ್ಯೆಯರು ಆಳವಾಗಿ ಬೇರೂರಿದ್ದು ಸಾಮಾಜಿಕ ವರ್ಗವೊಂದೆಂದು ಪರಿಗಣಿತರಾಗಿದ್ದರೆಂದು ಕಂಡುಬರುತ್ತದೆ. ಋಗ್ವೇದದಲ್ಲಿಯೇ ವೇಶ್ಯಾಪದ್ಧತಿಯು ಉಲ್ಲೇಖಗೊಂಡಿದೆ. "ಮತ್ಸ್ಯಪುರಾಣದ ಆಧಾರಗಳಿಂದ ಹೇಳುವುದಾದರೆ ಆಕೆಗೆ ಸಮಾಜದಲ್ಲಿ ಸಾಕಷ್ಟು ಗೌರವದ ಸ್ಥಾನವಿತ್ತು. ಅವಳು ಇತರ ಸ್ತ್ರೀಯರಂತೆ ವ್ರತ ಮುಂತಾದ ಧಾರ್ಮಿಕ ಕ್ರಿಯೆಗಳನ್ನು ನಡೆಸುತ್ತಿದ್ದಳು" (ನಾರಾಯಣ ಪಿ.ವಿ. ೧೯೮೩, ಪು.೯೮) ಎಂಬ ವಿಷಯವನ್ನು ಪಿ.ವಿ. ನಾರಾಯಣರು ಹೇಳುತ್ತಾರೆ. ಪುರಾಣದಲ್ಲಿ ಕವಿ ಇವರನ್ನು 'ವೇಶಿಯರು', (೬:೩೩) 'ಪುಣ್ಯಾಂಗನೆಯರು',(೫:೩೧) 'ಗಣಿಕೆಯರು' (೧೧:೮) ಎಂಬ ಹೆಸರಿನಿಂದ ಕರೆದಿದ್ದಾನೆ. ಬಸವಪುರಾಣದಲ್ಲಿ ಉಕ್ತವಾಗಿರುವ

ವೇಶ್ಯೆಯರು ಸಾಮಾನ್ಯವಾಗಿ ಶಿವಭಕ್ತಿಪರಿಸರದಲ್ಲಿದ್ದುಕೊಂಡು ಭವಿಗಳನ್ನು ಭಕ್ತರನ್ನಾಗಿ ಮಾಡುವ ಕೈಂಕರ್ಯದಲ್ಲಿ ತೊಡಗಿಕೊಂಡವರಾಗಿದ್ದಾರೆ.

ಬಸವಪುರಾಣದಲ್ಲಿ 'ಸೂಳೆಗೇರಿ'ಯ (೩೯: ೩) ಉಲ್ಲೇಖ ದೊರೆಯುತ್ತದೆ. ಸೂಳೆಯರ ಮನೆಗೆ ಹೋಗುವ ವ್ಯಕ್ತಿಗಳನ್ನು 'ವಿಟಪುರುಷ', 'ಭೊಜಂಗ' (೨೭:೧೮) ರೆಂದು ಕರೆಯುತ್ತಿದ್ದರು. ಇವರ ಆಗಮನ ತಿಳಿಸಲು ಸೂಳೆಯರ ಮನೆ ಮುಂಭಾಗದಲ್ಲಿ ಗಿಳಿ, ನವಿಲು, ಕೋಗಿಲೆಗಳನ್ನು ಪಂಜರಗಳಲ್ಲಿಟ್ಟ (೧೧:೮) ಉದಾಹರಣೆಗಳು ದೊರೆಯುತ್ತವೆ. ವಿಟಪುರುಷರು ಕೊಡುವ ಹಣಕ್ಕೆ 'ಒತ್ತೆ' (೩೯:೧೧) ಎಂದು ಕರೆಯುತ್ತಿದ್ದರು. 'ಗುರುಭಕ್ತಾಂಡಾರಿ'ಯು ತನ್ನ ಸಖಿನಿಂದ ಸೂಳೆಗೆ ಒತ್ತೆ ಕಳಿಸಿದ ಸಂದರ್ಭವನ್ನು ಕವಿಯು ವಿವರಿಸುತ್ತಾನೆ. ಈ ವಿಟಪುರುಷರು ಅತ್ಯಂತ ಶ್ರೀಮಂತರಾಗಿದ್ದರು. ಸಾಮಾಜಿಕವಾಗಿ ಪ್ರಬಲವಾದ ಶ್ರೀಮಂತವರ್ಗದವರು ಸೂಳೆಯರನ್ನು ಹೊಂದುವುದು ಪ್ರತಿಷ್ಠೆಯ ಸಂಕೇತವೆಂದು ಭಾವಿಸಲಾಗಿತ್ತು. ಏಕಾಂತರಾಮಯ್ಯಗಳ ಆಶ್ರಯ ಪಡೆದ ಕುರಿಯನ್ನು ಸಾವಿರ ಹೊನ್ನುಕೊಟ್ಟು ಕೊಂಡುಕೊಳ್ಳುತ್ತಾರೆ. ಆದರೆ ಅದೇ ಕುರಿ ಬೇಕೆಂದು ವೇಶ್ಯೆಯು ಹಟ ಹಿಡಿದಾಗ ಆ ವಿಟಪುರುಷನು ಹೇಳುವ "ಸಾವಿರ ಹೊಂಗಳಿಗೆ ಬಿಲಿತಂದು ಕುಜೆಗಳ ಹಿಂಡು ಹಿಂಡಿತನ ಛಂದದಲಿ ನೆರಹಿ ಮತ್ತೆ ಬೇಕಾದನಿತು ವಿತ್ತವನಿತ್ತು ಬೀಯಕೆ ವಾರಸತಿಯರ ಮೊತ್ತದಲಿ ಪೆಸರೆನಿಸಿ ನಿನ್ನವನೀ ಕಟಕದೊಳಗೆ" (೨೭:೨೨-೨೩) ಎಂಬ ಮಾತುಗಳು ಆರ್ಥಿಕವಾಗಿ ವಿಟಪುರುಷರು ಪ್ರಬಲರಾಗಿದ್ದ ಬಗೆಯನ್ನು ವಿವರಿಸುತ್ತವೆ.

ಪ್ರೌಢವತಿಯೆಂಬ ವೇಶ್ಯೆಗೆ ಗುರುಭಕ್ತಾಂಡಾರಿಯು "ಪುರದಲ್ಲಿ ತನ್ನಂ ಹೋಲುವಂತಹ ಮಿಂಡರುಗಳೊಳರೆ" ಹಾಗೂ "ಬತ್ತಿಯದಲ್ಲಿ ನಿನ್ನುದ್ದಕೆ ಹೊನ್ನಂ ಸುರಿಯನೇ ತರಿಸಿ" (೩೯:೧೩) ಎಂದು ಹೇಳುವ ಮಾತುಗಳು ಸಮಾಜದಲ್ಲಿ, ಒಬ್ಬರಿಗಿಂತ ಒಬ್ಬ ಶ್ರೀಮಂತ ವಿಟಪುರುಷರಿದ್ದರು ಎಂಬ ಸೂಚನೆ ದೊರೆಯುತ್ತದೆ. ಏಕಾಂತರಾಮಯ್ಯಗಳ ಆಶ್ರಯ ಪಡೆದ ಕುರಿಯನ್ನು ವಿಟನು ಮರಳಿ ಪಡೆಯಲು ಹೋಗಿ ಹತನಾಗುತ್ತಾನೆ. ಆಗ ಈ ವಿಷಯವನ್ನು ವಿಟನ ಸಂಬಂಧಿಗಳು ಅರಸನಲ್ಲಿಗೆ ತೆಗೆದುಕೊಂಡು ಹೋಗುವುದನ್ನು ಗಮನಿಸಿದರೆ ವೇಶ್ಯಾಸಹವಾಸವು ಸಾಮಾಜಿಕವಾಗಿ ಮುಕ್ತತೆ ಪಡೆದಿತ್ತೆಂಬ ಅಂಶ ಹೊಳೆಯದಿರದು.

ವೇಶ್ಯೆಯರೂ ಸಹ ಶ್ರೀಮಂತಿಕೆಯಲ್ಲಿ, ಭೋಗಭಾಗ್ಯಗಳನ್ನು ಹೊಂದಿ ಸಂತೃಪ್ತವಾಗಿದ್ದರು ಎಂಬ ಅಂಶ ಬಸವಪುರಾಣದಲ್ಲಿ ದೊರೆಯುತ್ತದೆ. ವೇಶ್ಯೆಯ ಮನೆಗಳು ಅರಮನೆಗಿಂತ ಕಡಿಮೆಯಿರಲಿಲ್ಲ ಎಂಬ ಅಂಶವನ್ನು ಕವಿಯು ಸುಧೀರ್ಘವಾಗಿ ವಿವರಿಸುತ್ತಾನೆ. (೧೧:೮) ತಿರುನೀಲಕಂಠನ ಮೇಲೆ ವೇಶ್ಯೆಯೊಬ್ಬಳು 'ಹರ್ಮ್ಯಸ್ಥಳ' (ಮಹಡಿ ಮನೆ) ದಿಂದ ಎಂಜಲು ಚೆಲ್ಲಿದ ಪ್ರಸಂಗ ಹಾಗೂ 'ತುಂಗಹರ್ಮ್ಯಸ್ಥಳ' (೨೬:೫೭, ೧೧:೧೩)ಎಂಬ ಉಲ್ಲೇಖಗಳನ್ನು ನೋಡಿದರೆ ಮಹಡಿಮನೆಯಲ್ಲಿ ವಾಸಿಸುವ ವೇಶ್ಯೆಯರು ಶ್ರೀಮಂತರೆ ಆಗಿರಬೇಕೆಂದು ತೋರುತ್ತದೆ.

ಅಲ್ಲದೇ ವೇಶ್ಯೆಯರು ದಾಸಿಯರನಿಟ್ಟುಕೊಂಡ ಉಲ್ಲೇಖ ಆರ್ಥಿಕವಾಗಿ ವೇಶ್ಯೆಯರು ಪ್ರಬಲರಾಗಿದ್ದರು ಎಂದು ಭಾವಿಸಬಹುದು. (೧೦:೨೦)

ವೇಶ್ಯಾವಾಟಿಕೆ ವಂಶಪಾರಂಪರಿಕವಾಗಿ ನಡೆಯುತ್ತಿತ್ತೆಂಬ ಸೂಚನೆಗಳು ದೊರೆಯುತ್ತವೆ. ಮಲುಹಣನೆಂಬ ವಿಟನನ್ನು ಹೊಱವಡಿಸಿ ಮಂಡಳೇಶನನ್ನು ನೆರೆಯುವಂತೆ ತನ್ನ ಮಗಳಿಗೆ ಒತ್ತಾಯಿಸುವ ಸಂದರ್ಭ ವಂಶಪಾರಂಪರ್ಯವಾಗಿ ಈ ವೃತ್ತಿ ಬೆಳೆದು ಬಂದಿತ್ತೆಂದು ಹೇಳಬಹುದು. ಶಾಸನಗಳಲ್ಲಿಯೂ ಸಹ ವೇಶ್ಯೆಯರ ಧರ್ಮಸಂತತಿ ಉಲ್ಲೇಖಗೊಂಡದ್ದನ್ನು ಎಂ. ಚಿದಾನಂದಮೂರ್ತಿಯವರು ಉದಾಹರಿಸುತ್ತಾರೆ. (ಚಿಮೂ ೨೦೦೮, ಪು.೪೭೭)

ಬಸವಣ್ಣನಿಂದ ಪಡಿ ಪಡೆದ ಮಿಂಡಜಂಗಮರು ಸೂಳೆಗೈಯ್ಯಲು ಹೋದರೆಂದು ತಿಳಿದು ತಾನು ಸೂಳೆಗೆಯ್ಯಲು ಹೋದ ಮುಗ್ಧಸಂಗಯ್ಯನೆಂಬ ಭಕ್ತನ ಉಲ್ಲೇಖವನ್ನು ನೋಡಿದರೆ ಜಂಗಮರಿಗೆ ನಿಷ್ಠರಾದ ವೇಶ್ಯಾ ವರ್ಗವೊಂದಿತ್ತು ಎಂದು ಊಹಿಸಲು ಸಾಧ್ಯವಿದೆ. (೧೧:೮–೧೫) ವೇಶ್ಯೆಯರು ವಿಟಪುರುಷರನ್ನು ಸನ್ಮಾರ್ಗಿಗಳನ್ನಾಗಿ ಮಾಡುತ್ತಿದ್ದರೆಂಬುದಕ್ಕೆ ಬಸವಪುರಾಣದಲ್ಲಿ ಅನೇಕ ನಿದರ್ಶನಗಳು ಕಂಡುಬರುತ್ತವೆ. ಗುರುಭಕ್ತಾಂಡಾರಿಯು ಪ್ರೌಢವತಿ ಎಂಬೊಬ್ಬ 'ವಾರಾಂಗನಾಮಣಿ'ಯನ್ನು ನೋಡಿ ಆಕೆಯ ಶರೀರಸೌಷ್ಠವ, ಸೌಂದರ್ಯಕ್ಕೆ ಮಾರು ಹೋಗುತ್ತಾನೆ. ಇಂದ್ರಿಯಸುಖಂಗಳನು ಶಿವಾರ್ಪಿತವ ಮಾಡಿ ಭೋಗಿಸಲು ಅವಕಾಶವಿದೆ; ಅವಳೂ ಶಿವಭಕ್ತೆಯಾಗಿರಬೇಕೆಂದು ತೀರ್ಮಾನಿಸಿ, ಅವಳೊಡನೆ ಚದುರಮಾತುಗಳನ್ನಾಡಿದರೆ ಅವಳು ಅವನ ಒತ್ತೆಯನ್ನು ಸ್ವೀಕರಿಸುವುದಿಲ್ಲ. ಆಗ ಆಕೆ ಅವನೊಡನೆ ಹೀಗೆ ನುಡಿಯುತ್ತಾಳೆ. "ಆನು ಉದರಾರ್ಥಿಯಲ್ಲ ಎಮ್ಮ ಲಿಂಗಮ ಕೊಟ್ಟಕಾಯಕವ ನಡೆಸುತಿಹೆವು; ಭವಿಯೊಡನೆ ಮಾತಾಡೆವು; ಕನಸಿನೊಳು ಮೃಡನ ಭಕ್ತರನಲ್ಲದಾರುವನರೆಯೆವು; ಪಡೆದ ಧನವಂ ಮಡಗಲೀಯೆವು"(೩೯:೩೭–೩೮) ಎಂದು ಮೊದಲಾಗಿ ಅವನಿಗೆ ತಿಳಿ ಹೇಳುತ್ತಾಳೆ. ಆದರೂ ಅವನು ತನ್ನ ವಿಟಧರ್ಮವನ್ನು ಬಿಡಲಿಲ್ಲ. ಆಗ ಅವಳು ವೇಶ್ಯಾರತಿವಿಷಯದಲ್ಲಿ ಹೇಸಿಕೆ ಹುಟ್ಟುವಂತೆ ಮಾತನಾಡುತ್ತಾಳೆ. ವೇಶ್ಯೆಯರು 'ವಿಶ್ವಾಸಘಾತಕಿಯರು', 'ವಿಕಾರಿಯರು', 'ಅನುಚಿತೆಯರು', 'ವಂಚಕಿಯರು', 'ಕಪಟೆಯರು', 'ಧೂರ್ತಿಯರು', 'ಚಪಳೆಯರು', 'ದುರ್ವ್ಯಸನಿಯರು', 'ಕುಟಿಲೆಯರು', 'ಹಾದರಗಿತ್ತಿಯರು', 'ಗೋಣುಗೊಯ್ಕೆಯರು', 'ಖುಲ್ಲೆಯರು', 'ಚಿಳ್ಳೆಯರು', 'ಭಿತ್ತರಿಯರು', 'ಹೊನ್ನಬಾಕಿಯರು', 'ಜಾರೆಯರು', 'ವಾರಪುಂಢ್ರಿಯರು' (೩೯:೫೩–೫೬) ಅಂತಹವರ ಸಹವಾಸ ಬೇಡವೆಂದು ಹೇಳುತ್ತಾಳೆ. ವೇಶ್ಯೆಯರ ದುರ್ನಡತೆಯ ಬಗ್ಗೆ ತುಚ್ಛವಾಗಿ ಆಡುತ್ತಾಳೆ. ವೇಶ್ಯೆಯರ ಕೂಟ "ಎಣ್ಣೆ ಅಂಬಿಲ ಕೂಡಿದಂತೆ, ಅವರ ಹಿಡಿತ ಜಿಗುಳೆ ಹಿಡಿದಂತೆ" (೩೯:೭೩) ಲಿಂಗವಂತರಿಗೆ, ಶರಣರಿಗೆ ಅವರ ಮಾತು ಅರೋಚಕ ಎಂದು ಶರಣರ ನಡತೆಯನ್ನು ಹೊಗಳಿದರೂ ಅವನು ಆ ಮಾತುಗಳನ್ನು ಕಿವಿಗೇ ಹಾಕಿಕೊಳ್ಳಲಿಲ್ಲ. ಆಗ

ಅವಳು ಪುರಾತನರ, ಶರಣರ ಕಥೆಗಳನ್ನು ಹೇಳುತ್ತಾಳೆ. ಶ್ವೇತ ಹಾಗೂ ಮಲುಹಣನ ಕಥೆಗಳನ್ನು ಹೇಳುತ್ತಾಳೆ. ಶ್ವೇತ ಹಾಗೂ ಮಲುಹಣನ ಕಥೆಗಳು ವೇಶ್ಯೆಯರು ವೇಶ್ಯಾವೃತ್ತಿಯಿಂದ ಮುಕ್ತರಾಗಿ, ಭಕ್ತರಾಗಿ, ಕಾಯಕಜೀವಿಗಳಾಗಿ ವಿಟರನ್ನು ಭಕ್ತರನ್ನಾಗಿಸಿದ ಈ ಕಥೆಗಳು ಶಿವಶರಣರು ವೇಶ್ಯಾವೃತ್ತಿಯಿಂದ ದೂರವಿದ್ದುದಕ್ಕೆ ಉದಾಹರಣೆಗಳಾಗಿವೆ. ಇಂತಹ ಪುರಾತನ ಶಿವಭಕ್ತರ ಈ ಪ್ರಗತಿಪರ ವಿಚಾರಗಳು ಬಸವಾದಿ ಶಿವಶರಣರ ಬೋಧನೆಗೆ ಅನುಕೂಲವಾಗಿವೆಯೆಂದು ಈ ಕಥೆಗಳಿಗೆ ಇಲ್ಲಿ ಸ್ಥಾನ ದೊರಕಿದೆಯೆಂದು ಹೇಳಬಹುದು.

ಅಧ್ಯಾಯ–ಐದು

ಆಡಳಿತ

ಅಧ್ಯಾಯ–ಐದು
ಆಡಳಿತ

ಆಡಳಿತದ ಅತ್ಯಂತ ಚಿಕ್ಕ ಘಟಕ ಕುಟಂಬ. ಇಲ್ಲಿಂದಲೇ ಆಡಳಿತ ವ್ಯವಸ್ಥೆ ಪ್ರಾರಂಭವಾಗುತ್ತದೆ. ಮನುಷ್ಯ ಸಾಂಘಿಕ ಜೀವನವನ್ನಾರಂಭಿಸಿದ ಪ್ರಾರಂಭದಿಂದಲೇ ಒಂದಲ್ಲ ಒಂದು ರೀತಿಯಲ್ಲಿ ಆಡಳಿತ ವ್ಯವಸ್ಥೆ ಪ್ರಾರಂಭವಾಯಿತೆನ್ನಬಹುದು. ಮನೆಯ ಯಜಮಾನ ಹಾಗೂ ಗೃಹಿಣಿಯ ಕೃತ್ಯಗಳು ಬೇರೆಬೇರೆಯಾದುವು. ಈ ಬಗೆಯಾದ ಆಧಿಕಾರ ಹಂಚಿಕೆ ಕುಟುಂಬದ ಸುಸೂತ್ರ ಕಾರ್ಯನಿರ್ವಹಣೆಗೆ ಅತ್ಯಂತ ಅವಶ್ಯಕ. ಇದೇ ಊರು, ರಾಜ್ಯ ಇವುಗಳ ಆಡಳಿತದ ಮೂಲವೂ ಹೌದು. "ಈಗಿನ ಅತ್ಯಂತ ಜಟಿಲವಾದ ರಾಜ್ಯಾಡಳಿತವು ತುಂಬ ಸರಳವಾದ ಕೌಟುಂಬಿಕ ಕಾರ್ಯನಿರ್ವಹಣೆಯ ವಿಕಸಿತ ರೂಪ" (ನಾರಾಯಣ ಪಿ.ವಿ. ೧೯೮೩, ಪು.೧೯೭) ಎನ್ನಬಹುದು.

ಸರ್ವಕಾಲಗಳಲ್ಲಿಯೂ ಲೋಕವನ್ನಾಳುವ ವ್ಯವಹಾರಶಕ್ತಿ ಎಂದರೆ ರಾಜಕೀಯ. ಅದು ಮಾನವನ ಉಳಿದೆಲ್ಲ ವ್ಯವಹಾರಗಳನ್ನು ನಿಯಂತ್ರಿಸುತ್ತದೆ. ಲೋಕಕಲ್ಯಾಣ ಧರ್ಮಾಭ್ಯುದಯಗಳೆರಡೂ ಅದರ ಮೂಲಕವೇ ಸಾಧನೆ ಯಾಗಬೇಕಿದೆ. "ಶಾಸನಗಳನ್ನು ರಚಿಸಿ, ದಂಡವನ್ನನುಗೊಳಿಸಿ, ದುಷ್ಟರನ್ನು ದಟ್ಟಿಸಿ, ಶಿಷ್ಟರನ್ನು ಪತಿಕರಿಸಿ, ಆರ್ಥಿಕ ಶಕ್ತಿಯನ್ನು ಬೆಳೆಸಿ, ಸಾಮಾಜಿಕ ವ್ಯವಸ್ಥೆಯನ್ನು ಸರಿಯಾಗಿ ರೂಪಿಸಿ ನಾಡಿನ ಹಿತಕ್ಕೆ ಧಕ್ಕೆಯಾಗದಂತೆ ಪ್ರತಿಯೊಬ್ಬರೂ ಸ್ವಧರ್ಮಾನುಗುಣವಾಗಿ, ನ್ಯಾಯವಾಗಿ, ಸ್ವತಂತ್ರವಾಗಿ ಬಾಳು ನಡೆಸಲು ತಕ್ಕುದಾದ ವಾತಾವರಣವನ್ನು ನಿರ್ಮಿಸ ಬೇಕಾದದ್ದು ರಾಜಕೀಯ ಶಕ್ತಿಯ ಅಣಿಗುರಿಯಾಗಿರಬೇಕು". (ದೇ.ಜ.ಗೌ. ಪು.೩೯) ಆದರೆ ಕೆಲವು ಸಂದರ್ಭದಲ್ಲಿ ರಾಜಕೀಯ ಶಕ್ತಿ ದುರ್ಜನರನ್ನು ವರಿಸುವುದುಂಟು. ಶಿಷ್ಟರನ್ನು ಉಪೇಕ್ಷಿಸುವುದುಂಟು. ಹಾಗಾಗಿಯೇ "Politics is the lost resort of a scoundral" (ರಾಜಕೀಯವು ಒಬ್ಬ ಘಟಿಂಗನ ಕೊನೆಯ ಆಯ್ಕೆ) ಎಂಬ ನಿಂದನಾನುಡಿ ಜನ್ಮತಾಳಿರಬೇಕು. ಆದರೆ ಲೋಕಕಲ್ಯಾಣವನ್ನು, ಪ್ರಜಾಕ್ಷೇಮವನ್ನು ರಕ್ಷಿಸಬೇಕಾದ ರಾಜಕೀಯ ಕೆಟ್ಟದ್ದಲ್ಲ. ನಮ್ಮೆಲ್ಲ ಬದುಕಿನ ಒಟ್ಟು ಪ್ರವರಗಳು ಈ ರಾಜಕೀಯ ವ್ಯವಸ್ಥೆಯಲ್ಲಿ ಮಿಳಿತವಾಗಿವೆ. ಇದರಿಂದ ತಪ್ಪಿಸಿಕೊಂಡು ಹೋಗುವಂತಿಲ್ಲ. ಚರ್ಮಾಗಾರದಲ್ಲಿ ಕೆಲಸ ಮಾಡುವವನು ಅಲ್ಲಿಯ ವಾಸನೆ ಸಹಿಸಲೇಬೇಕು; ಅಣುಶಕ್ತಿ ಪ್ರಯೋಗಾಲಯದಲ್ಲಿ

ಕೆಲಸ ಮಾಡುವವರು ಎಂತಹ ಅಪಾಯವೇ ಬರಲಿ ಎದುರಿಸಲು ಸಿದ್ಧವಾಗಿರಬೇಕು. ಲೋಕ ಸಂಸಾರದಲ್ಲಿ ರಾಜಕೀಯ ಅನಿವಾರ್ಯ. ಧರ್ಮದ ಆದರ್ಶವನ್ನು ಕಣ್ಮುಂದಿರಿಸಿಕೊಂಡು, ಅಧಿಕಾರ ಎಷ್ಟು ಬೇಕೋ ಅಷ್ಟನ್ನು ಮಾತ್ರ ಎಚ್ಚರಿಕೆಯಿಂದ ಬಳಸಿಕೊಂಡು ನಾಡಿನ ಹಿತವನ್ನು ಸಾಧಿಸಬೇಕಾದ್ದು ರಾಜಕೀಯದ ಧರ್ಮ. ಈ ತತ್ವವು ಬಸವಪುರಾಣದಲ್ಲಿ ಬಸವಣ್ಣನವರ ಮೂಲಕ ಅನುಷ್ಠಾನಗೈದ ವಿವರ ದೊರೆಯುತ್ತದೆ. ಕನ್ನಡ ಸಂಸ್ಕೃತಿಯಲ್ಲಿ ಹತ್ತನೆಯ ಶತಮಾನವು ಹೋರಾಟಕ್ಕೆ ಹೆಚ್ಚು ಪ್ರಾಶಸ್ತ್ಯವನ್ನು ಕೊಟ್ಟ ಕಾಲವೆಂದು ಅಸಂಖ್ಯಾತವಾಗಿ ಸಿಗುವ ಹೋರಾಟ ಮಾಡುವ ಬಣಗಳ ದಾಖಲೆಗಳಿಗೆ ಸಂವಾದಿಯಾಗಿ ಯುದ್ಧವೇ ಪ್ರಧಾನವಾಗಿರುವ ಕೃತಿಗಳನ್ನು ಘಟನೆಗಳಿಗೆ ಹೊಂದಿಕೆಯಾಗಿ ನಿರ್ವಚಿಸುವ ಅಂಶಗಳನ್ನು ಸಂಸ್ಕೃತಿಯ ಅಧ್ಯಯನಗಳಲ್ಲಿ ಕಾಣಬರುತ್ತದೆ. ಆದರೆ ಪಂಪನ ಕಾವ್ಯಗಳ ದರ್ಶನವೇನು? ಧ್ವನಿಯೇನು? ಎನ್ನುವುದನ್ನು ಗ್ರಹಿಸಲಾಗದೇ ಹೋದದ್ದೂ ಐತಿಹಾಸಿಕ ಒಳನೋಟಗಳನ್ನು ಗುರುತಿಸಲಾಗದ್ದನ್ನು ರಾಜರು ಬದುಕುತ್ತಿರುವ ನೆಲೆಗಳು ಹಾಗೂ ಪ್ರಜೆಗಳಿಗಾಗಿ ಅವರು ಆಚರಿಸಬೇಕಾಗಿದ್ದ ಧಾರ್ಮಿಕ ನೆಲೆಗಳನ್ನು ತೀವ್ರವಾಗಿ ವಿಮರ್ಶಿಸಲಾಗುತ್ತದೆ. ಮಾನವನ ಅಸ್ತಿತ್ವದ ಶೋಧನೆಯನ್ನು ರಾಜರ ಹೀನನಡಾವಳಿಗಳು, ವೈಭವ, ವಿಲಾಸ, ಅಟ್ಟಹಾಸಗಳು ವಿನಾಶದ ಅಂಚಿಗೆ ತಳ್ಳುತ್ತವೆ ಎಂಬುದನ್ನು ಗುರುತಿಸುತ್ತ ಹೋಗುತ್ತವೆ. ಆಳುವ ವರ್ಗವು ದೇಹದ ತೀವ್ರಭೋಗಕ್ಕೆ ಗಮನಕೊಟ್ಟು ತನ್ನ ಕರ್ತವ್ಯವನ್ನು ಮರೆತರೆ, ರಾಜಶಾಹಿಯ ಭೋಗಾಪೇಕ್ಷೆಗೆ ಸಾಮಾನ್ಯ ಮನುಷ್ಯ ತನ್ನ ದೇಹದ ಬೆಲೆಯನ್ನು ಕಡೆಗಣಿಸಿ ಹೋರಾಡಬೇಕೆಂದು ವ್ಯವಸ್ಥೆಯ ಮುಖವಾಣಿಯಾದ ಶಾಸನಗಳು ಒತ್ತಾಯಿಸುತ್ತವೆ. ಮನುಷ್ಯನ ಅಸ್ತಿತ್ವವನ್ನು ಕುರಿತಂತೆ ರಾಜಸತ್ತೆ ತಳೆದ ನಿಲುವುಗಳನ್ನು ಸ್ಪಷ್ಟವಾಗಿ ನಿರೂಪಿಸುತ್ತವೆ.

ಕನ್ನಡ ಸಂಸ್ಕೃತಿಯಲ್ಲಿ ರಾಜಸತ್ತೆ ದುಡಿಯುವ ಜನತೆಯನ್ನು ಮೋಸ ಮಾಡಿತ್ತು. ಪ್ರಭುವರ್ಗ ಹಾಗೂ ಪುರೋಹಿತವರ್ಗವು ಒಗ್ಗೂಡಿ ದೇಹಬಲಿಯ ಹಲವು ಪ್ರಕಾರಗಳನ್ನು ಹುಟ್ಟುಹಾಕುತ್ತಾ ಆ ಬಲೆಯೊಳಗೆ ಸಾಮಾನ್ಯ ಮನುಷ್ಯನನ್ನು ಸಿಲುಕಿಸುವ ಪ್ರಯತ್ನಮಾಡಿತ್ತು. ಹನ್ನೆರಡನೇ ಶತಮಾನದಲ್ಲಿಯಂತೂ ಇಂತಹ ದೇಹ ಬಲಿಯ ಹೊಸಹೊಸ ಆವಿಷ್ಕಾರಗಳು ಹೆಚ್ಚು ಪ್ರಚಲಿತಗೊಂಡವು. ಸಣ್ಣ ಸಣ್ಣ ರಾಜರುಗಳು ಪ್ರಾದೇಶಿಕವಾಗಿಯೂ ತಮ್ಮ ಗಡಿಯನ್ನು ವಿಸ್ತರಿಸಿಕೊಳ್ಳುವ, ತಾವೇ ಸ್ವತಂತ್ರರಾಗುವ ಹಂಬಲದಿಂದ ಸಂಸ್ಕೃತಿಯಲ್ಲಿ ದೇಹಬಲಿಯನ್ನು ಅನಿವಾರ್ಯ ಅವಶ್ಯಕವೇ ಎಂಬಂತೆ ಹುಟ್ಟು ಹಾಕುವಲ್ಲಿ ಯಶಸ್ವಿಯೂ ಆಯಿತೆಂದೇ ಹೇಳಬೇಕು. ಶಾಸನಗಳು ಇವುಗಳನ್ನು ದಾಖಲಿಸುತ್ತಾ ಹೋಗುತ್ತವೆ. ಆದರೆ ಈ ಘಟನೆಗಳಿಗೆ ಜನಪದ ಪ್ರಜ್ಞೆ ಅಭಿವ್ಯಕ್ತಿಗಳಾದ ಸಾಹಿತ್ಯವು ವಿರೋಧಿಸುತ್ತವೆ. ವಚನಕಾರರು ಮನುಷ್ಯನ ಬದುಕು ಬರೀ ದೇಹದ ಮೇಲಲ್ಲ ಅರಿವಿನ ಮೇಲೆ ಎನ್ನುವ ಆಶಯವು ಒತ್ತಾಯಪೂರ್ವಕವಾಗಿಯೇ ರೂಪುಗೊಂಡಿದೆ. ದೇಹ ಹಾಗೂ ಅದು ಬೆಳೆಸಿಕೊಳ್ಳಬೇಕಾದ ಚೈತನ್ಯದ ಕಡೆಗೆ ಹೆಚ್ಚು ಒತ್ತುಕೊಡುತ್ತದೆ. ಪ್ರಾಚೀನ ಕಾವ್ಯಗಳ ದರ್ಶನವೇನೆಂದು, ಪಂಪನ ಕಾವ್ಯಗಳ ಧ್ವನಿ ಏನೆಂದು ನೋಡಹೊರಟರೆ ಹೋರಾಟ, ದೇಹತ್ಯಾಗವಂತೂ ಅಲ್ಲ

ಎನ್ನುವುದು ಸ್ಪಷ್ಟ. ವ್ಯಕ್ತಿತ್ವ ಇದನ್ನು ಮೀರಬೇಕಾದ ದೇಹದಿಂದ ಜೀವ ಚೈತನ್ಯದೆಡೆಗೆ ಅರಿವಿನ ಕ್ಷಣಗಳಿಗೆ ತನ್ನ ದಾರಿಯನ್ನು ಕಾಣಬೇಕೆಂಬ ಅಂಶಗಳು ಈ ಕಾವ್ಯಗಳ ಮುಖ್ಯ ಧ್ವನಿಯಾಗಿದೆ. ಈ ಅಧ್ಯಯನದಲ್ಲಿ ಎರಡು ಭಾಗಗಳಿವೆ. ಮೊದಲನೇ ಭಾಗದಲ್ಲಿ ರಾಜರ ಭೋಗಾಪೇಕ್ಷೆಗೆ ಸಾಮಾನ್ಯ ಮನುಷ್ಯ ತೆರಬೇಕಾದ ಬೆಲೆಯನ್ನು, ಇದರ ವಿರುದ್ಧ ಪ್ರತಿಭಟನೆಯನ್ನು ಗಮನಿಸಲಾಗುವುದು.

ಮಧ್ಯಕಾಲೀನ ಕರ್ನಾಟಕದ ಚರಿತ್ರೆಗೆ ಸಂಬಂಧಪಟ್ಟ ವಿಷಯವು ಸಾಂಸ್ಕೃತಿಕವಾಗಿ ಬಹು ಮಹತ್ವದ ಘಟ್ಟವೆಂದೇ ಹೇಳಬಹುದು. ಸಾಂಸ್ಕೃತಿಕವಾಗಿ ಈ ಕಾಲ ಬದಲಾವಣೆಯನ್ನು ಪಡೆದದ್ದು ಅಲ್ಲದೇ ನಮಗೆ ಬಹುಮುಖ್ಯವಾಗಿ, ಬಿಜ್ಜಳನ ವಿಷಯವಾಗಿ ಅರಿಯುವ ಕೂತೂಹಲವು ಈ ಅಧ್ಯಯನಕ್ಕೆ ಪೂರಕವೇ ಆಗಿದೆ. ರಾಜ್ಯಾಪಹರಣವನ್ನು ಮಾಡಿ ಅಪರಾಧಿ ಪ್ರಜ್ಞೆ ಬಿಜ್ಜಳನನ್ನು ಕಾಡುತ್ತಿದ್ದುದು ಹಾಗೂ ಬಸವಣ್ಣನವರ ನೇತೃತ್ವದ ಪ್ರಜಾಸಮುದಾಯ ಪ್ರಶ್ನೆ ಮಾಡುವುದರ ಜೊತೆಗೆ ಪ್ರತಿಭಟಿಸುತ್ತಿದ್ದುದು ಈ ಘಟನೆಯನ್ನು ತೀವ್ರಗೊಳಿಸಿದ್ದವು.

ಕರ್ನಾಟಕದ ಇತಿಹಾಸದಲ್ಲಿ ಕಲಚುರಿ ಬಿಜ್ಜಳನಿಗೆ ವಿಶಿಷ್ಟ ಸ್ಥಾನವಿದೆ. ಕಲ್ಯಾಣಿ ಚಾಲುಕ್ಯರ ಅಳಿವಿಗೆ ಕಾರಣನಾದ ಮತ್ತು ಅಷ್ಟೇ ಕ್ಷಿಪ್ರಗತಿಯಲ್ಲಿ ತನ್ನ ಅವಸಾನವನ್ನು ಹೊಂದಿದ. ಬಿಜ್ಜಳನ ಈ ರಾಜಕ್ರಾಂತಿಗೆ ಕಾರಣವೇನೆಂದರೆ ಈತನ 'ಚಕ್ರವರ್ತಿಯಾಗಬೇಕೆಂಬ ಮಹಾತ್ವಾಕಾಂಕ್ಷೆ. ಶಾಸನಗಳಲ್ಲಿ ಬಿಜ್ಜಳನ ಇತಿವೃತ್ತ ಆತ್ಮಕಥೆಯೋ ಎಂಬಂತೆ ಬಿಂಬತವಾಗಿದೆ.

ಪುಸಿಯಲ್ತು ವೀರಭೋಜ್ಯ ವಸುಂಧರ ಎಂಬ ವಾಕ್ಯವೆನೆ ಧರೆಯಂ ಸಾ।
ಧಿಸಿದಂ ತೆಂಕಬ್ಧಿಯ ಬಡಗಸೀಮೆ ಚಾಳುಕ್ಯಕಟಕಮನೆ ಬಿಜ್ಜನೃಪಂ॥ (ಎ.ಕ.XI, ಹರಿಹರ ೩೫:೧೧೬೦)

'ವೀರಭೋಜ್ಯ ವಸುಂಧರಾ' ಎಂಬುದು ಪ್ರಾಚೀನ ಕಾಲದ ರಾಜನೀತಿ. ಶೂರರು ಭೋಗಿಸಲು ಅರ್ಹವಾದುದು ಈ ಭೂಮಿ. ವೀರನಿಗೆ ಸಿರಿ (ಭೂಮಿ) ಎಂಬುದು ಸರಿಯಾದರೆ, ತಾನು ಆ ಸಿರಿಗಾಗಿ ಯತ್ನಿಸುವುದು ತಪ್ಪಲ್ಲ. ತನ್ನಲ್ಲಿ ಶೌರ್ಯ ಸಾಮರ್ಥ್ಯಗಳಿದ್ದಾಗ, ವೀರನಿಗೆ ಭೂಮಿಯನ್ನು ಆಳುವುದೇ ಸರಿಯಾದುದಾದರೆ, ಅದನ್ನು ಪಡೆಯುವುದರಲ್ಲಿ ತಪ್ಪೇನಿಲ್ಲ. ಕೊಡದಿನುದಯಿಸಿದಗಸ್ತ್ಯಂ। ಕಡಲಂಪೀರ್ದಂತೆ ಮಂಡಳೇಶ್ವರರಾಜ್ಯ। ಕ್ಕೊಡೆಯನೆನೆ ಪುಟ್ಟಿ ಬೀರದಿ। ನಡೆಗೊಂಡಂ ಸಕಲ ಧಾತ್ರಿಯಂ ಬಿಜ್ಜನೃಪಂ॥ (ಎ.ಕ.XI, ಹರಿಹರ ೪೨:೧೧೬೨) ಈ ಧೋರಣೆ ಹೊಂದಿದ್ದ ಬಿಜ್ಜಳ ರಾಜ್ಯಕ್ರಾಂತಿಯುಂಟು ಮಾಡಿದ. ಬಿಜ್ಜಳನ ಶಾರ್ಯ ಸಾಹಸದ ಕಥೆಯನ್ನು ಹೇಳುತ್ತದೆ ಕೆಳಗಿನ ಶಾಸನ ಪದ್ಯ ನೋಡಿ ;

ನೊಸಲೊಳ್ ಸಾಮ್ರಾಜ್ಯಪಟ್ಟಂ ನೆಲಸಲೊಡನೆ ದೋರ್ಗ್ಗರ್ವದಿಂ ಮನ್ನೆಯರ್ಗ್ಗು ।
ಬ್ಬಸವಂ ಮುಂ ಮಾಡಿದಂ ಮತ್ತಿರೆಯಿರೆ ಚಲದಿಂ ಮಂಡಳೇಶರ್ಗ್ಗೆ ಬೇರೊಳ್ ॥
ಬಿಸಿನೀರಂ ಪೊಯ್ದನಂತಂತಿರೆಯಿರೆ ಬಟುಯಂ ರಾಯರಂ ಕೂಡೆ ನಿರ್ಮಾ
ಳಿಸಿದಂ ಚಕ್ರಾಧಿನಾಥೋಜ್ಜ್ವಳ ಮುಖತಿಳಕಂ ಬಿಜ್ಜಳಕ್ಷೋಣಿಪಾಳಂ ॥ (ಎ.ಕ.XI, ಹರಿಹರ ೪೨: ೧೧೬೨)

ಬಿಜ್ಜಳನ ಹಣೆಯಲ್ಲಿ ಸಾಮ್ರಾಜ್ಯಪಟ್ಟ ಬರೆದಿತ್ತಂತೆ ಎಂದು ಶಾಸನ ಕವಿ ಆತನ ಉನ್ನತಿಯನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸುತ್ತಾನೆ. ಹಾಗೆಯೇ ಈ ಪದವಿಗಾಗಿ ಬಿಜ್ಜಳ ಪಟ್ಟ

ಸಾಹಸವನ್ನು ವರ್ಣಿಸುತ್ತಾನೆ. ಹಣೆಯಲ್ಲಿ ಸಾಮ್ರಾಜ್ಯಪಟ್ಟ ಸ್ಥಿರವಾಗಿ ನೆಲಸಲಾಗಿ ಸಾಮಂತರಿಗೆ ಉಬ್ಬಸವನ್ನುಂಟುಮಾಡಿದನು. ಅಷ್ಟೇ ಅಲ್ಲದೆ ಹಟತೊಟ್ಟು ಮಂಡಲೇಶ್ವರರ ಬೇರನ್ನು ಬಿಸಿನೀರಿನಿಂದ ಹೊಯ್ದನು. ಮಂಡಲೇಶ್ವರರ ಮೂಲವನ್ನೇ ಇಲ್ಲದಂತೆ ಮಾಡಿದನು. ಹಾಗೆಯೇ ಇತರ ಶತ್ರುರಾಜರನ್ನು ಬಿಜ್ಜಳನು ನಿರ್ಮೂಲ ಮಾಡಿದನು. ತಮ್ಮಲ್ಲಿ ಉಂಟಾದ ಗರ್ವವನ್ನು ಬೀಗಿದ ರಾಜರ ಬೆನ್ನಿನ ತೊಗಲಲ್ಲಿ ಬೇರ್ಪಡಿಸಿ, ಸಂತೋಷದಿಂದ ಎಳೆದು ತಂದು, ಆನೆ, ಕುದುರೆಗಳಿಲ್ಲಯೆನ್ನಲಾಗಿ ಬಿಜ್ಜಳನ ಶೌರ್ಯ, ಪರಾಕ್ರಮಗಳಲ್ಲದೆ ಸಾಹಸ ಮಾಡುವ ಪ್ರವೃತ್ತಿ ಹಾಗೂ ಯಥೇಚ್ಛವಾದ ಐಶ್ವರ್ಯವು ತುಂಬಿತ್ತು ಎಂದು ಪರೋಕ್ಷವಾಗಿಯೇ ಇಲ್ಲಿ ಸೂಚಿಸಲಾಗುತ್ತದೆ. ಬಿಜ್ಜಳ ತನ್ನಲ್ಲಿರುವ ಶಕ್ತಿ ಸಾಮರ್ಥ್ಯದಿಂದ ಚಕ್ರವರ್ತಿ ಪದವಿಗೆ ತಾನು ಅರ್ಹನೇ ಅಲ್ಲವೇ ? ಎಂದು ಕೇಳುವ ಈ ಪದ್ಯ

> ಕಳಚುರಿವಂಶವಾದಿ ನೃಪರೆಲ್ಲರು ಮುತ್ತವ ಚಕ್ರವರ್ತಿ
> ಗಳ್ಬಳಿಕಂ ಕೆಲರ್ಸ್ವೆಬಾಹುಬಲವಿದೆ ಮಂಡಳಿಕರ್ಕ್ಕಳಾದರಾಂ
> ಬಳಯುತನಾದ ನಿಂನೆನಗೆ ಮಂಡಳಿಕತ್ವಮಯುಕ್ತವೆಂದು ದೋ
> ರ್ಬ್ಬಳದೊಳೀ ಚಕ್ರವರ್ತ್ತಿ ಸಕಳೋರ್ಬ್ಬಿಗವಾದನಚೇಯಂ ಬಿಜ್ಜಲಂ (ಸೌಇಇ, XV, ಬಾಗೇವಾಡಿ: ಮುತ್ತಗಿ, ೧೧೫೫, ೧೧೬೦)

ಬಿಜಾಪುರ ಜಿಲ್ಲೆಯ ಈ ಶಾಸನ ಬಿಜ್ಜಳನ ವಂಶಸ್ಥರ ಮೇಲೂ ಬೆಳಕು ಚೆಲ್ಲುತ್ತದೆ. ಹಿಂದೆ ಈತನ ವಂಶಸ್ಥರೂ ಉತ್ತಮ ಚಕ್ರವರ್ತಿಗಳಾಗಿದ್ದರು ; ಹಿಂದಿನ ರಾಜರೆಲ್ಲ ಈ ಪದವಿಯನ್ನು ಅಲಂಕರಿಸಿದ್ದರು. ನಂತರದಲ್ಲಿ ಕೆಲವರು ಸ್ವಂತ ಶಕ್ತಿ ಸಾಮರ್ಥ್ಯವಿಲ್ಲದೆ ಮಾಂಡಳಿಕರಾದರು; ನಂತರ ಅವರ ಬಲ ಕುಗ್ಗಿ ಮಂಡಲೇಶ್ವರರಾದರು. ಆದರೆ ಶಕ್ತಿ ಸಾಮರ್ಥ್ಯವನ್ನು ಹೊಂದಿರುವ ತಾನು ಅದೇ ಸ್ಥಿತಿಯಲ್ಲಿ ಮುಂದುವರಿಯಬೇಕೆ? ಅದರ ಬದಲು ಚಕ್ರವರ್ತಿಯಾದೆ ಎನ್ನುವ ಅರ್ಥವು ಇಲ್ಲಿ ಸ್ಫುಟಗೊಂಡಿದೆ. ಬಿಜ್ಜಳನ ಬುದ್ಧಿ ಚತುರತೆ ಯುದ್ಧತಂತ್ರಗಳು ಅವನಿಗೆ ಸಾಮ್ರಾಜ್ಯದ ಒಡೆತನವು ದೊರಕುವಂತೆ ಮಾಡಿದ್ದರಲ್ಲಿ ಸಂಶಯವೇನಿಲ್ಲ. ಈ ಬಗ್ಗೆ ವಿದ್ವಾಂಸರ ಅಭಿಪ್ರಾಯ ಇದೇ ಆಗಿದೆ ಎಂಬುದನ್ನು ತಿಳಿಯಬಹುದು. ಬಿಜ್ಜಳನು ಸಾಧಿಸಿದ ಕ್ರಾಂತಿಗೆ ಮೂಲ ಕಾರಣಗಳೇನೆಂಬುದು ನಿರ್ಧಿಷ್ಟವಾಗಿ ತಿಳಿದಿಲ್ಲ ಆದರೆ ಆ ಕಾಲಕ್ಕೆ ಮುಮ್ಮಡಿ ತೈಲಪನು ಅಬಲನಾಗಿ, ಯುದ್ಧಚತುರನಾಗಿದ್ದುದೂ ನಿಜ. ಹೆಚ್ಚಿನ ವಿವರಗಳು ತಿಳಿದುಬರುವವರೆಗೂ ಬಿಜ್ಜಳನ ಕ್ರಾಂತಿಗೆ ಇವೇ ಮುಖ್ಯ ಕಾರಣಗಳೆಂದು ಊಹಿಸಬೇಕಾಗಿದೆ. ಪದಚ್ಯುತನಾದ ತನಗೆ ಪರಿಸ್ಥಿತಿ ಪ್ರತಿಕೂಲವಾಗಿದ್ದುದರಿಂದ, ಬನವಾಸಿಯಲ್ಲಿ ಸುಮ್ಮನಿರುವುದೇ ಕ್ಷೇಮವೆಂದು ಮುಮ್ಮಡಿ ಜಗದೇಕಮಲ್ಲನೂ ಭಾವಿಸಿರಬೇಕು. ಬಿಜ್ಜಳನ ಕ್ರಾಂತಿಯು ಕೊಂಚ ಮಟ್ಟಗೆ, ಸೈನ್ಯಬಲದಿಂದ ಸಾಧಿಸಿದ ಸೈನಿಕ ಕ್ರಾಂತಿ ; ಇನ್ನು ಕೊಂಚ ಮಟ್ಟಗೆ, ಮಾಂಡಲಿಕ ಮಿತ್ರರ ಸಹಾಯದಿಂದ ಸಾಧಿಸಿದ ರಾಜಕೀಯ ಕ್ರಾಂತಿ. (ಎಂ.ವಿ ಕೃಷ್ಣರಾವ್ ಮತ್ತು ಎಂ.ಕೇಶವಭಟ್ಟ ೧೯೭೦. ೨೫೨) ಒಟ್ಟಿನಲ್ಲಿ ಮಾಂಡಳಿಕನಾಗಿದ್ದ ಬಿಜ್ಜಳ ಚಕ್ರವರ್ತಿಯಾದದ್ದು ದೊಡ್ಡ ಸಾಧನೆ. ಕರ್ನಾಟಕದ

ರಾಜಕೀಯದಲ್ಲಿ ಅವನು ಕೊಟ್ಟ ತಿರುವು ಅಷ್ಟೇ ಮುಖ್ಯವಾದದ್ದು. ಬಿಜ್ಜಳನ ಈ ಘಟನೆಯನ್ನು ವಚನಕಾರರು ಯಾವ ಕಕ್ಷೆಯಲ್ಲಿ (ದೃಷ್ಟಿಕೋನದಿಂದ್ರ) ನೋಡಿದರು ಎಂಬುದನ್ನು ಗ್ರಹಿಸುವುದು ಸಮಂಜಸವಾಗುತ್ತದೆ. ಬಸವಣ್ಣನ ಈ ವಚನವನ್ನು ಗಮನಿಸಿ.

ಅರಸು ವಿಚಾರ ಸಿರಿಯು ಶೃಂಗಾರ ಸ್ಥಿರವಲ್ಲ, ಮಾನವಾ ;
ಕೆಟ್ಟಿತ್ತು ಕಲ್ಯಾಣ, ಹಾಳಾಯಿತ್ತು ನೋಡಾ !
ಒಬ್ಬ ಜಂಗಮದಭಿಮಾನದಿಂದ
ಚಾಳುಕ್ಯರಾಯನ ಆಳ್ವಿಕೆ ತೆಗೆಯಿತ್ತು,
ಸಂದಿತ್ತು ಕೂಡಲಸಂಗಮದೇವಾ, ನಿಮ್ಮ ಕವಳಿಗೆಗೆ! (ಬ.ಷ.ವ.೬೨೪)

ಈ ವಚನ ಸಂಪೂರ್ಣವಾಗಿ ಅರಸನ ತಿಳುವಳಿಕೆಯನ್ನೇ ನಿರಾಕರಿಸುತ್ತದೆ. ಮುಂದುವರಿದು, ಈ ದಾರಿ ಸರಿಯಿಲ್ಲ ಎನ್ನುವ ಸೂಚನೆಯನ್ನು ಕೊಡುತ್ತದೆ. ಅರಸನ ವ್ಯಕ್ತಿತ್ವದಲ್ಲಿ ಗುಣಾತ್ಮಕ ನೆಲೆಯನ್ನು ಹೊಂದಬೇಕಾಗಿರುವುದನ್ನು ಒತ್ತಿ ಹೇಳುತ್ತದೆ. "ರಾಜತ್ವ ಸ್ಪಷ್ಟವಾಗಿ ಇತಿಹಾಸದ ಎಲ್ಲ ಕಾಲಗಳಲ್ಲಿಯೂ ತನ್ನ ದೃಷ್ಟಿಯನ್ನು ಕೇಂದ್ರಿಕರಿಸುವುದು ಧನ ಹಾಗೂ ನೆಲದ ಪ್ರಪಂಚಗಳ ಮೇಲೆ. ಈ ಪ್ರಪಂಚದ ಯಶಸ್ಸು ಹಾಗೂ ಸೋಲು ಸಂಪೂರ್ಣವಾಗಿ ನಿಂತಿರುವುದು – ಇವುಗಳ ದೊರಕುವಿಕೆ ಮತ್ತು ಬಳಸುವಿಕೆಯಲ್ಲಿಯೇ. ಹೀಗಾಗಿ, ಅತ್ಯಂತ ಕ್ರೂರ ಹಾಗೂ ಪರಕೀಯ ನೆಲೆಯಲ್ಲಿಯೇ ವ್ಯವಹರಿಸುವ ಈ ಜಗತ್ತಿನಿಂದ ದೂರವಾದಾಗ ಮಾತ್ರ ಅಸ್ತಿತ್ವದ ನೆಲೆಗಳು ರೂಪುಗೊಳ್ಳಲು ಸಾಧ್ಯ. ಈ ಸಾಧ್ಯತೆಯ ಮುಖ್ಯ ಪ್ರಾರಂಭವೊಂದು ಅಲ್ಲಿಯ ಪ್ರಾಪಂಚಿಕಗಳು ನೆಲೆಯಲ್ಲಿರುವ ಕ್ರೂರತ್ವವನ್ನು ತೊಡೆಯುವುದರಿಂದಲೇ ಸಾಧ್ಯವಾಗುತ್ತದೆ" (ಬಸವರಾಜ ಕಲ್ಗುಡಿ ೧೯೮೮:೧೨೯)

ಬಸವಣ್ಣನವರು ತಾವೇ ಸ್ವತಃ ಬಿಜ್ಜಳನ ಆಸ್ಥಾನದಲ್ಲಿ ಭಂಡಾರಿಯಾಗಿದ್ದರು. ರಾಜತ್ವ ಮತ್ತು ಹಣಗಳ ಪ್ರಪಂಚವು ಮಾನವನನ್ನು ಕೂರೂಪಗೊಳಿಸುತ್ತದೆ ಎಂಬುದನ್ನು ನೋಡಿರುವ ಸಾಧ್ಯತೆಯಿದೆ. ಈ ವಚನವನ್ನು ನೋಡಬಹುದು.

ಆನೆಯನೇರಿಕೊಂಡು ಹೋದಿರಿ ನೀವು,
ಕುದುರೆಯನ್ನೇರಿಕೊಂಡು ಹೋದಿರಿ ನೀವು,
ಕುಂಕುಮ, ಕಸ್ತೂರಿಯ ಪೂಸಿಕೊಂಡು ಹೋದಿರಿ ಅಣ್ಣಾ ;
ಸತ್ಯದ ನಿಲುವನರಿಯದೆ ಹೋದಿರಲ್ಲಾ ! (ಬ.ವ.೩೪೮)

ಅಹಂಕಾರ ಮೂಲವಾದ ನಿರರ್ಥಕ ಬದುಕು, ವ್ಯರ್ಥವಾಗಿ ಹೋಗುವ ಪದವಿ, ಅಧಿಕಾರದ ವ್ಯಾಮೋಹದ ಬಗ್ಗೆ ಕನಿಕರವನ್ನು ವ್ಯಕ್ತಪಡಿಸುತ್ತಿದ್ದಾರೆ. ಆನೆ ಕುದುರೆಯ ಮೇಲೆ ಸಂಚರಿಸುತ್ತಾ ಮೇಲುಸ್ತರದ ಆಕರ್ಷಣೆಗಳಿಗೆ ಬಲಿಯಾಗಿ, ನೆಲದ ಮೇಲೆ ಓಡಾಡುವ ಮನುಷ್ಯನ ಬವಣೆಯ ಬದುಕು ಅರ್ಥವಾಗದೆ ಹೋದುದು, ಕುಂಕುಮ ಕಸ್ತೂರಿಯಂತಹ ಭೋಗಾಪೇಕ್ಷೆಯ, ಸುವಾಸನೆಯ ದ್ರವ್ಯಗಳ ವರ್ತುಲದಲ್ಲಿ ಸುತ್ತುವವರಿಗೆ (ಅದೇ ಸಾಮ್ರಾಜ್ಯವೆಂದುಕೊಂಡವರಿಗೆ) ಬಡವನ ಬೆವರಿನ ದುಡಿಮೆಯಿಂದ ಬಂದಂತಹ ಐಶ್ವರ್ಯವನ್ನು ಭೋಗಿಸುತ್ತಾ, ವ್ಯರ್ಥವಾಗಿ ವ್ಯಯಿಸುತ್ತಾ, ಸಾಮಾನ್ಯನ ಬದುಕಿಗೆ ಪ್ರತಿಸ್ಪಂದಿಸದೆ ಜೀವನಸತ್ಯವನ್ನು ಕಂಡುಕೊಳ್ಳದೆ ಹೋದದ್ದನ್ನು ಕಳವಳದಿಂದ

ಇದರಿಂದ ಈ ಎಲ್ಲ ರಾಜ್ಯಗಳು ಸ್ವತಂತ್ರವಾಗಿದ್ದು ಪ್ರತ್ಯೇಕವಾದ ಅಡಳಿತ ವ್ಯವಸ್ಥೆ ಹೊಂದಿದ್ದವೆಂದು ಹೇಳಬಹುದು. ಪ್ರಾಚೀನ ಕಾಲದಲ್ಲಿ ಪ್ರಚಲಿತವಿದ್ದ ಛಪ್ಪನ್ನೈವತ್ತಾರು ದೇಶಗಳಲ್ಲಿ ಈ ಮೇಲಿನ ಕೆಲವು ಸ್ಥಾನ ಪಡೆದದ್ದು ವಿಶೇಷ.

ಬಸವಪುರಾಣದ ಕೊನೆಯಲ್ಲಿ ಬಿಜ್ಜಳ ಮಹಾರಾಜನು ಮಾಳವ, ಗೌಳ,ಕುರು, ನೇಪಾಳ, ಖರ್ಪರ,ಬರ್ಬರ, ಪಾಂಚಾಳ, ಗುರ್ಜರ, ಸಿಂಹಳ (೬೦:೩೦) ದೇಶದ ರಾಜರೊಂದಿಗೆ ಓಲಗ ನಡೆಸಿದ ವಿವರವನ್ನು ಕವಿ ಕೊಡುತ್ತಾನೆ. ಇದರಿಂದ ಬಿಜ್ಜಳ ಈ ದೇಶಗಳ ರಾಜರ ಮಧ್ಯ ವ್ಯಾಪಾರ-ವಾಣಿಜ್ಯ ವ್ಯವಹಾರ ಸಂಪರ್ಕಗಳನ್ನು ಹೊಂದಿದ್ದನೆಂಬ ಅಂಶ ಗೊತ್ತಾಗುತ್ತದೆ. ಕವಿಯು ಎಲ್ಲೂ ಕಲ್ಯಾಣವನ್ನು ದೇಶ ಎಂದು ಸಂಬೋಧಿಸಿಲ್ಲ. ಅದನ್ನು 'ಪುರ' (೫:೧೩) ಅಥವಾ 'ಪಟ್ಟಣ'ವೆಂದು ಸಂಬೋಧಿಸಿದ್ದಾನೆ. ಅಂದರೆ ಅದೊಂದು ಮುಖ್ಯವಾದ ಪಟ್ಟಣವಾಗಿತ್ತು. ಸಾಮಾನ್ಯವಾಗಿ ದೇಶವೆಂಬುದು 'ಪ್ರದೇಶ'ವೆಂಬ ಅರ್ಥದಲ್ಲಿಯೇ ಹೆಚ್ಚು ಬಳಕೆಯಾಗಿದೆಯೆಂದು ಹೇಳಬಹುದು.

೨. ನಗರಗಳು :

ಸಮಗ್ರ ಭೂಖಂಡಕ್ಕೆ 'ಧಾರುಣಿ', (೫:೯) 'ಧರಣಿ', (ಸಂ.೨೫,೩,೫,೫೪,೪೮) 'ಧರೆ',(೫೪:೨೬) 'ಭೂವಳಯ' (೫೬:೩೧) ಎಂದು ಹೆಸರಿಸುವ ಕವಿಯು ನಗರಗಳಿಗೆ 'ಪುರ', 'ಊರು', 'ಪಟ್ಟಣ' ಮುಂತಾದ ಪದಗಳನ್ನು ಏಕಾರ್ಥದಲ್ಲಿಯೇ ಪ್ರಯೋಗಿಸಿರುವುದು ಕಂಡುಬರುತ್ತದೆ. ಬಿಜ್ಜಳನ ರಾಜಧಾನಿಯಾಗಿದ್ದ ಕಲ್ಯಾಣ ಪಟ್ಟಣದ ವಿಸ್ತಾರವನ್ನು ಮಾತ್ರ ಕವಿ ಹೇಳಿದ್ದು ಕಂಡುಬರುತ್ತದೆ. ವೀರಶೈವಧರ್ಮದ ಚಟುವಟಿಕೆ ಹಾಗೂ ಇಡೀ ಶರಣಗಣದ ಕ್ರಿಯಾಭೂಮಿ ಕಲ್ಯಾಣವಾಗಿತ್ತು ಎಂಬುದು ಬಸವಪುರಾಣದ ಅನೇಕ ಘಟನೆಗಳಿಂದ ತಿಳಿಯುತ್ತದೆ. ಇನ್ನುಳಿದಂತೆ ಸಂದರ್ಭೋಚಿತವಾಗಿ ಕವಿಯು ಬೇರೆ ಬೇರೆ ಊರುಗಳ ಹೆಸರನ್ನು ಹೇಳಿರುವುದು ಕಂಡುಬರುತ್ತದೆ.

ಕಲ್ಯಾಣವು 'ಹನ್ನೆರಡು ಗಾವುದ' ಅಳತೆಯಿಂದ ಕೂಡಿತ್ತೆಂದು ಕವಿ ಬರೆಯುತ್ತಾನೆ. (೫:೧೩) ಬಹುಶಃ ಇದು ಅತ್ಯಂತ ದೊಡ್ಡ ಪಟ್ಟಣವಾಗಿತ್ತೆಂದು ಊಹಿಸಬಹುದು. ಇದಕ್ಕೆ ಆಧಾರವೆಂಬಂತೆ ಚನ್ನಬಸವಣ್ಣನವರ ಒಂದು ವಚನದಲ್ಲಿ ಕಲ್ಯಾಣನಗರದ ವಿಸ್ತಾರ ವೈಭವಗಳು ವರ್ಣಿತವಾಗಿವೆ. "ಶ್ರೀಮತ್ ಕಲ್ಯಾಣಪುರವು ಹನ್ನೆರಡು ಯೋಜನ ವಿಸ್ತಾರವುಳ್ಳದ್ದು, ಅದಕ್ಕೆ ಮುನ್ನೂರರವತ್ತು ಬಾಗಿಲುವಾಡಗಳು, ಅವುಗಳಿಗೆ ನೂರ ಐವತ್ತೈದು ವಜ್ರದ ಕದಗಳು, ಇನ್ನೂರ ಇಪ್ಪತ್ತೈದು ಚೋರಕಂಡಿಗಳು, ನೂರಹದಿನೈದು ಮೊಳೆಯ ಕದಗಳು, ಎಪ್ಪತ್ತು ಬಾಗಿಲುಗಳ ಆಳ್ವೇರಿಯೊಳಗಿರುವುದರಿಂದ ಅವುಗಳಿಗೆ ಕದಗಳಿಲ್ಲ; ಈ ಪಟ್ಟಣವನ್ನು ಏರಿಸಿರುವ ಕೋಟೆಯ ಉದ್ದ ನಲವತ್ತೆಂಟು ಯೋಜನ; ಬಾಹತ್ತರ ನಿಯೋಗಿಗಳ, ಸಾಮಂತರ ಮಾಂಡಳಿಕರ

ಮನೆಗಳು ಲಕ್ಷದಂತೆ; ದ್ವಾದಶಯೋಜನದ ಸೂರ್ಯವೀಥಿಗಳು ನೂರಿಪ್ಪತ್ತು, ಅಂತಹವೇ ನೂರಿಪ್ಪತ್ತು ಸೋಮವೀಥಿಗಳು, ಅನೇಕ ಸರೋವರಗಳು, ದಾಸೋಹದ ಮಠಗಳೂ" (ಚ.ಬ.ವ.ವ.೩೫೭) ಇದ್ದವು ಎಂದು ಹೇಳುತ್ತಾನೆ. ಈ ವಚನದಲ್ಲಿ ಬರುವ ಅಭಿಪ್ರಾಯಗಳು ಅತಿಶಯೋಕ್ತಿಗಳಿಂದ ಕೂಡಿದ್ದರೂ ಸಹ ಕಲ್ಯಾಣದ ಸಾಂಕೇತಿಕ ಅಂಶಗಳಿಂದ ಕೂಡಿದ್ದು ಅದೊಂದು ದೊಡ್ಡ ಪಟ್ಟಣವಾಗಿತ್ತೆಂಬುದರಲ್ಲಿ ಸಂಶಯವಿಲ್ಲ. ಈ ಪುರದ ಬೀದಿಗಳು ವಿಶಾಲವಾಗಿದ್ದವು.(೫:೧೯) ಬೀದಿಯ ಪಕ್ಕದಲ್ಲಿ ಉಪ್ಪರಿಗೆ ಮನೆಗಳಿದ್ದವೆಂದು ಕವಿ ಹೇಳುತ್ತಾನೆ.(೫:೩೮) ಇಂತಹ ಸುಂದರವಾದ ಕೇರಿಗಳನ್ನು, ಪುರಬೀದಿಗಳನ್ನು ನೋಡುತ್ತ ಕಲ್ಯಾಣದ ಬಿಜ್ಜಳನ ಅರಮನೆಯನ್ನು ಬಸವಣ್ಣನವರು ಭೋರನೆ ಪ್ರವೇಶಿಸಿದನು (೫:೫೧) ಎಂದು ಹೇಳುತ್ತಾನೆ. ಪುರದ ಹೊರಗೆ ಹಿರಿಯ ಮಾಹೇಶ್ವರರ ಕೇರಿ (ಹೊಲಗೇರಿ)ಗಳಿದ್ದವು(೫:೯) ಎಂಬಂಶ ತಿಳಿಯುತ್ತದೆ. ಶ್ರೇಣೀಕೃತ ಜಾತಿವ್ಯವಸ್ಥೆಯನ್ವಯ ನಗರಗಳು ನಿರ್ಮಾಣವಾಗಿದ್ದವೆನ್ನುವುದು ಇದರಿಂದ ಗೊತ್ತಾಗುತ್ತದೆ. ಶಿವದೇವಾಲಯಗಳು, ಬಸದಿಗಳನ್ನು ಗುರುತಿಸಲು ಮತಲಾಂಛನ ಪತಾಕೆಗಳಿದ್ದ ಅಂಶ ಪುರಾಣದಲ್ಲಿ ತಿಳಿದು ಬರುತ್ತದೆ. ನಗರಗಳಲ್ಲಿ ಉತ್ಸವ, ಗಣಪರ್ವ, ನೋಂಪಿ, ಪವಾಡಗಳಂತಹ ಘಟನೆಗಳು ನಡೆಯುತ್ತಿದ್ದ ವಿವರ ಕಂಡುಬರುತ್ತದೆ.

ಉತ್ಸವಾದಿಗಳ ಸಂದರ್ಭದಲ್ಲಿ ಕಲ್ಯಾಣದ ಬೀದಿಗಳಲ್ಲಿ ಕಂಡುಬರುವ "ಮಂಗಳಪಾಠಕರು, ಕೈವಾರಿಗಳು, ವಾದ್ಯರವಗಳು, ನಂದಿಧ್ವಜ ಹಿಡಿದು ಚಾಂಗುಬಲಾಯೆನುವವರು, ನರ್ತನದವರು, ವೀಣಾದಿವಾದ್ಯಧ್ವನಿಗೆ ಕುಣಿಯುವವರು, ಕಂಸಾಳಗಿತ್ತಿಯರು" (೫:೩೮-೪೩,) ಇವರೆಲ್ಲರ ಉಲ್ಲೇಖವನ್ನು ಕವಿ ಕೊಡುತ್ತಾನೆ. ಬಸವಪುರಾಣದಲ್ಲಿಯಂತೆ ಕೇಂದ್ರಸ್ಥಳ ಕಲ್ಯಾಣವಿದ್ದು ಈ ನಗರವನ್ನನುಸರಿಸಿಯೇ ಮುಖ್ಯ ಘಟನೆಗಳು ನಡೆಯುವುದು ಕಂಡುಬರುತ್ತದೆ. ಆದರೆ ಹರಿಹರನ ಬಸವಣ್ಣನವರಿಗೆ ಮುಖ್ಯ ತಿರುವು ಕೊಟ್ಟ 'ಮಂಗಳವಾಡ' ನಗರದ ಉಲ್ಲೇಖ ಎಲ್ಲಿಯೂ ಕಂಡುಬರದಿರುವುದು ಆಶ್ಚರ್ಯವಾಗಿದೆ. ಬಹುಶಃ ಕವಿಗೆ ಈ ಸ್ಥಳದ ಪರಿಚಯ ತಿಳಿದಿರಲಿಕ್ಕೆ ಸಾಧ್ಯವಿಲ್ಲದ್ದರಿಂದಲೋ ಅಥವಾ ಕಲ್ಯಾಣ ಮತ್ತು ಮಂಗಳವಾಡವನ್ನು ಏಕಾರ್ಥದಿಂದ ಭಾವಿಸಿರುವುದರಿಂದಲೊ ಏನೊ ಈ ನಗರದ ಉಲ್ಲೇಖ ದೊರೆಯುವುದಿಲ್ಲ.

ಇನ್ನುಳಿದಂತೆ ಕವಿಯು 'ಬಾಗೇವಾಡಿ', 'ಸೊನ್ನಲಿಗೆ', 'ಎಲವೂರು', 'ಶಾಂತ ಮಂಡಲ', 'ಕೋಳೂರು', 'ಕಾಂಚೀಪುರ', 'ಕಳಹಸ್ತಿ ಅಭಿರಾಮಪುರ', 'ಚೆಂಗೊಡೆ', 'ಮುದುಗೊಡೆ', 'ಶ್ರೀಕುಡಿ', 'ಕರವೂರ', 'ಪೆನುಬಟ್ಟಪುಲಿಯೂರು', 'ಪುಡೂರು ಶ್ರೀಶೈಲ', 'ಬೆಜವಾಡಪುರ', ಅಬ್ಬಲೂರು', 'ಜಂಬೂರು, ತಿರುನಾವಲೂರು', 'ಶ್ರೀಕಾಳಿ', 'ಚೆಲ್ಲತ್ತಿರುವದೂರು', 'ಹೊಟಲಕೆರೆ', 'ಮಾರುಡಿಗೆ', 'ಪುಲಿಗೆರೆ', 'ಪರಿವಳಿಗೆ', 'ಪ್ರತಾಪನಾರಾಯಣಪುರ', 'ಕಾಶಿ', 'ಹಾವಿನಹಾಳ', 'ಗೊಬ್ಬೂರು', 'ಕೆಂಭಾವಿ', 'ನಾವದಿಗೆ', 'ಏಲೇಶ್ವರ' ಮುಂತಾದ ವೈಷ್ಣವ, ಜೈನ, ಬೌದ್ಧ ಹಾಗೂ ಶಿವಮತಗಳ

ಜನರು ವಾಸವಾಗಿದ್ದ ಪುರ, ನಗರ ಊರುಗಳ ಉಲ್ಲೇಖ ಬಸವಪುರಾಣದಾದ್ಯಂತ ಕವಿ ಹೇಳುತ್ತಾನೆ. ಈ ಎಲ್ಲ ಊರುಗಳಲ್ಲಿ ವೈವಿಧ್ಯಮಯ ವೃತ್ತಿಗಳನ್ನು ಕೈಗೊಂಡು ಜೀವನ ನಡೆಸಿದ ಅನೇಕ ಶಿವಭಕ್ತರ ಉಲ್ಲೇಖ ದೊರೆಯುತ್ತದೆ.

೩. ಕೋಟೆಕೊತ್ತಲಗಳು :

ಊರುಗಳಿಗೆ ಅದರಲ್ಲೂ ರಾಜಧಾನಿಗಳಿಗೆ ಕೋಟೆಯು ಅತ್ಯಂತ ಅವಶ್ಯಕವಾದುದು. ಹರಿಹರನ ಗಿರಿಜಾಕಲ್ಯಾಣದಲ್ಲಿ ಕೋಂಟೆಯ ವರ್ಣನೆಯು ಈ ರೀತಿಯಿದೆ.

ಪಳಿಕಿನ ಕೋಂಟೆ ಬಟ್ಟದೆನೆ ಬೇವಿನದಂಡೆ ನಭಕ್ಕ ಮೀಱುವ
ಟ್ಟಳೆ ನಿಮಿರ್ದೇಜೆ ಪಾಱುವ ಪತಾಕೆ ವಿರಾಜಿತ ಗೋಂಟು ಗೊಂಟನೊಳ್
ಬಳಸಿದ ಕೊತ್ತಳಂ ಸೊಗಯಿಪಾಳ್ವೆರಿ ಡೆಂಕಣೆ ಸಾರಮಾರಿಯ
ಗ್ಗಳಸುವ ಗೋಪುರಂ ಪುಲಿಮೊಗಂ ಮೆಱೆಗುಂ ಪುರದೊಳ್ ನಿರಂತರಂ (ಗಿರಿಜಾಕಲ್ಯಾಣ ೨.೭೯)

ಈ ಮೇಲಿನ ಕೊಂಟೆಯೇ ಹೊಸಗನ್ನಡದ ಕೋಟೆ. ಈ ಪದ್ಯ ಕೋಟೆಯ ಸ್ಥೂಲ ಪರಿಚಯ ಮಾಡಿಕೊಡುತ್ತದೆ. ದೀಪದ ಕಲಿಯರನೆಂಬ ಭಕ್ತನು ಶಿವದೇವಾಲಯಕ್ಕೆ ಕೋಟೆ ಕಟ್ಟಿಸಿ ಕಂದಕವನ್ನು ನಿರ್ಮಿಸಿದ ಉಲ್ಲೇಖ ಬರುತ್ತದೆ.(೧೫:೯) 'ಕೊತ್ತಳ', 'ಅಟ್ಟಣೆ', 'ಡೆಂಕಣಿ',(೧೫:೧೦) 'ತೆನೆ', (೧೫:೧೧) ಆಳ್ವರಿ, (೧೫:೧೪) ಇವುಗಳ ಉಲ್ಲೇಖವನ್ನು ಕವಿ ಕೊಡುತ್ತಾನೆ. ಕೋಟೆಗೋಡೆಯ ಮೇಲುದ್ದಕ್ಕೂ ಗುಂಡಗಿನ ಸಣ್ಣಸಣ್ಣ ಅಲಂಕಾರದ ರಚನೆಗಳಿದ್ದು ಇವುಗಳನ್ನು 'ತೆನೆ' ಎಂದು ಕರೆಯುತ್ತಾರೆಂದು ಪಿ.ವಿ ನಾರಾಯಣರು ಅಭಿಪ್ರಾಯ ಪಡುತ್ತಾರೆ. (೧೯೮೩, ಪು.೨೦೧) ಅಟ್ಟಳೆಯೆಂಬುದು ಕೋಟೆಗೋಡೆಯ ಮೇಲೆ ಕಟ್ಟಿರುವ ಗೋಪುರದಂತಹ ರಚನೆ. ಇದು ಎತ್ತರವಾಗಿರುತ್ತಿದ್ದುವಲ್ಲದೆ ಸೈನಿಕರು ಹೊರಗಡೆಯಿಂದ ನೋಡಿದರೆ ಕಾಣಿಸದಂತಿರಲು ಸಹಾಯಕವೂ ಅಗಿರುತ್ತಿದ್ದುವು. (ಅದೇ) ಅಟ್ಟಣೆಗಳು ಗೋಡೆಯ ಮೇಲೆ ಎತ್ತರಕ್ಕೆ ಕಟ್ಟಿದ ವೇದಿಕೆಗಳು.ಇವು ದೂರದ ದೃಶ್ಯವನ್ನು ವೀಕ್ಷಿಸಲು ಸಹಾಯವಾಗುತ್ತಿದ್ದವು. ಇವುಗಳ ಮೇಲೆ ಪತಾಕೆಗಳು ಹಾರುತ್ತಿದ್ದ ಉಲ್ಲೇಖವನ್ನು ಕವಿ ಕೊಡುತ್ತಾನೆ. (೧೫:೧೧) ಅಟ್ಟಣೆಗಳಿಗಿಂತ ಸ್ವಲ್ಪ ಎತ್ತರವಾಗಿ ಕಟ್ಟಿದ ವೀಕ್ಷಣ ಕೇಂದ್ರಗಳೇ ಕೊತ್ತಳಗಳು. ಕೋಟೆಯ ಕೆಲವು ದಿಕ್ಕುಗಳಿಗೆ ಈ ಕೊತ್ತಳಗಳಿರುತ್ತಿದ್ದವು. 'ಆಳ್ವರಿ' ಎಂಬುದು ಕೋಟೆಯ ಗೋಡೆಯನ್ನು ಸೂಚಿಸುತ್ತದೆ. 'ಡೆಂಕಣಿ' ಎಂಬುದು ಆಯುಧವಿಶೇಷವೆಂದು ಶ್ರೀಬೆಟಗೇರಿ ಕೃಷ್ಣಶರ್ಮರು ಹೇಳುತ್ತಾರೆ. (ಕನ್ನಡಿಗರ ಕೋಟೆಗಾಳೆಗ, ಪು.೫೨–೫೩)

ಶಿವನು ನಂಬಿಯನ್ನು ಕೈಹಿಡಿದುಕೊಂಡು ಭಯದಿಂದ ಓಡಿ ಬಂದ ಸಂದರ್ಭದಲ್ಲಿ "ಸುತ್ತುಗೋಂಟೆಯ ಕಲ್ಲನೋದಂ ಪಾದದಂಗುಟದಲ್ಲಿಳೆಗೆ ಕೆಡೆನೋಂಕಿಯಾ ಕಂಡಿಯಲಿ ಹೊಱವಂಟು" (೨೫:೩೧) ಎಂದು ಚೆಂಗೊಡೆ ಎಂಬ ಊರಿನ 'ಸುತ್ತುಗೋಂಟೆ'ಯ ವಿವರವನ್ನು

ಕವಿ ಕೊಡುತ್ತಾನೆ. ಈ ಕೋಟೆಗೆ ಅಲ್ಲಲ್ಲಿ ತಪ್ಪಿಸಿಕೊಳ್ಳಲು 'ಕಂಡಿ' (ಕಿಂಡಿ) ಅಥವಾ ಪ್ರವೇಶದ್ವಾರಗಳನ್ನು ಕೊರೆದಿದ್ದರೆಂಬ ಅಂಶ ಗೊತ್ತಾಗುತ್ತದೆ. ಇವುಗಳಿಗೆ 'ಅಂಬುಗಂಡಿ', 'ದಿಡ್ಡಿ', 'ನೀರಕಂಡಿ', 'ಚೋರಗಂಡಿ', 'ತೋರಗಂಡಿ', 'ಕುದುರೆಗಂಡಿ' ಮುಂತಾದ ಅಭಿದಾನಗಳಿದ್ದ ಉದಾಹರಣೆಗಳನ್ನು ವಚನಗಳನ್ನನುಸರಿಸಿ ಪಿ.ವಿ.ನಾರಾಯಣರು ಕೊಡುತ್ತಾರೆ. (೧೯೮೩, ಪು.೨೦೨)

೪. ರಾಜ್ಯಾಡಳಿತ :

ಪ್ರಾಚೀನ ಕರ್ನಾಟಕದ ಆಡಳಿತವನ್ನು ಸ್ಥೂಲವಾಗಿ ಎರಡು ಭಾಗಳನ್ನಾಗಿ ವಿಂಗಡಿಸಬಹುದು. ೧.ರಾಜ್ಯಾಡಳಿತ ೨.ಊರುಗಳ ಆಡಳಿತ. ರಾಜ್ಯಗಳ ಆಡಳಿತ ರಾಜನಿಗೆ ಸೇರಿದುದು. ಒಂದೊಂದು ಗ್ರಾಮದ ಆಡಳಿತವೂ ಸಹ ಆಡಳಿತದ ಪ್ರತ್ಯೇಕ ಘಟಕವೆಂಬಂತೆ ನಡೆದುಕೊಂಡ ಉದಾಹರಣೆಗಳು ಶಾಸನಗಳಲ್ಲಿ ವ್ಯಕ್ತವಾಗಿವೆ. ಯುದ್ಧದಲ್ಲಿ ಉಂಟಾದ ಸೋಲಿಗೆ ನಾಯಕನೊಬ್ಬನನ್ನು ಹೊಂದುವುದಕ್ಕಾಗಿ ರಾಜತ್ವವು ಪ್ರಾರಂಭವಾಯಿತೆಂದು ಋಗ್ವೇದದಲ್ಲಿ ಹೇಳಿದೆ.(ಋಗ್ವೇದ ಸೂಕ್ತಗಳು, ಪು.೩೪) ಬಸವಪುರಾಣದಲ್ಲಿ ದೊರೆಯುವ ಆಧಾರಗಳಿಂದ ಅಂದಿನ ಆಡಳಿತವು ಎರಡು ನೆಲೆಯಲ್ಲಿ ನಡೆಯುತ್ತಿತ್ತೆಂದು ಹೇಳಬಹುದು.೧.ಆಳುವ ವರ್ಗ೨.ಆಡಳಿತ ವರ್ಗ. ಕ್ರಮವಾಗಿ ಇವೆರಡನ್ನು ೧. ಪ್ರಭುವೃತ್ತಿ ೨.ಸೇವಕಾವೃತ್ತಿಯೆಂದು ಹರಿಹರ ಕರೆದ ಬಗೆಯನ್ನು ಸದಾನಂದ ಪಾಟೀಲರು ಉದಾಹರಿಸುತ್ತಾರೆ. (೧೯೯೯, ಪು.೯೧)

೧. ಆಳುವ ವರ್ಗ :

ಆಳುವ ವರ್ಗವೆಂದರೆ ಪ್ರಭುವೃತ್ತಿಯವರು. ಪ್ರಭುವಾಗಿ ಪ್ರಜೆಗಳ ಪಾಲನೆ ಮಾಡುವಂತಹವರು. 'ಚಕ್ರವರ್ತಿ', 'ಮಹಾಮಂಡಳೇಶ್ವರರು', ಮತ್ತು 'ಸಾಮಂತರು'. ಜೆ.ಎಂ. ನಾಗಯ್ಯ ಇವರನ್ನು ಮೂವರ್ರಾಯರೆಂದು ಕರೆಯುತ್ತಾರೆ. (ಆರನೆಯ ವಿಕ್ರಮಾದಿತ್ಯನ ಶಾಸನಗಳು, ಪು.೭೮) ಬಸವಪುರಾಣದಲ್ಲಿಯ ಮಾಹಿತಿಯಂತೆ ಎಲ್ಲರಿಗಿಂತ ಮೇಲಧಿಕಾರದಲ್ಲಿದ್ದವನು ಚಕ್ರವರ್ತಿ ಬಿಜ್ಜಳ. ಇವನಿಗೆ ಅಧೀನರಾಗಿ ಮಂಡಳೇಶ್ವರರು ಮತ್ತು ಸಾಮಂತರು ಬರುತ್ತಾರೆ. ಮಾಂಡಳಿಕ ಸಾಮಂತ ಹಯವೇದಂಡ ರಥ ಪರಿಕರ ಸಹಿತವಾತ್ಮಾನುರಾಗದಲಿ (೫:೧೪) ಎಂಬ ಉಲ್ಲೇಖ ನೋಡಿದರೆ ಬಿಜ್ಜಳನ ಅಧೀನದಲ್ಲಿ ಅನೇಕ ಮಾಂಡಳಿಕರು, ಸಾಮಂತರು ಇದ್ದರೆಂದು ಗೊತ್ತಾಗುತ್ತದೆ.

೨. ಆಡಳಿತ ವರ್ಗ :

ಆಡಳಿತ ವರ್ಗವನ್ನು ಅಧಿಕಾರಿವರ್ಗ ಮತ್ತು ಸೇವಕವರ್ಗವೆಂದು ವಿಂಗಡಿಸಬಹುದು. ಅರಸನ ಕೈಕೆಳಗಿನ ಮಂತ್ರಿವರ್ಗವನ್ನು ಅಧಿಕಾರಿವರ್ಗವೆಂದೂ ಇವರ ಕೈಕೆಳಗೆ ಸಹಾಯಕರಾಗಿ ಕೆಲಸ ನಿರ್ವಹಿಸುವವರನ್ನು ಸೇವಕರೆಂದು ಕರೆಯುವುದು ಉಚಿತವಾಗಿದೆ ಎಂದು ಸದಾನಂದ

ಪಾಟೀಲರು ಅಭಿಪ್ರಾಯ ಪಡುತ್ತಾರೆ. (೧೯೯, ಪು.೯೨) ಈ ವಿಭಾಗ ಕ್ರಮ ಸರಿಯಾದುದೇ ಆಗಿದೆ. ಬಸವಪುರಾಣದಲ್ಲಿ ನಿರೂಪಗೊಂಡ ಆಧಿಕಾರಿವರ್ಗದಲ್ಲಿ ಪ್ರಧಾನಿ, ದಂಡನಾಥ, ಭಂಡಾರಿ ಇವರಿಗೆ ಸಹಾಯಕರಾಗಿರುವವರಲ್ಲಿ ಮುಖ್ಯವಾಗಿ ಭಂಡಾರಿಗರು, ಕರಣಿಕರು, ಪಡಿಹಾರರು, ಚಾರರು, ಬೇಹಿನವರು ಹಾಗೂ ಒಟ್ಟು ನೌಕರ ವರ್ಗದವರು.

೫. ಆಳುವ ವರ್ಗ–ರಾಜ, ರಾಜನ ಗುಣಗಳು, ಸಮಗ್ರ ಪ್ರಭುವೃತ್ತಿ , ಆಸ್ಥಾನ :

ಪ್ರಾಚೀನ ಕಾಲದಿಂದಲೂ ಯಾರು ಸಮರ್ಥರಾಗುತ್ತಿದ್ದರೋ ಅವರೇ ಆಳುವ ವರ್ಗವೆನಿಸಿಕೊಂಡಿತ್ತು. ಕೆಲವು ಸಾರಿ ವಂಶಪಾರಂಪರ್ಯವಾಗಿ ಇದು ಮುಂದುವರಿದುಕೊಂಡು ಬಂದರೂ ದುರ್ಬಲರನ್ನು ಸೋಲಿಸಿ ಪ್ರಬಲರಾದವರು ರಾಜ್ಯವನ್ನು ಆಳಿದ ಉದಾಹರಣೆಗಳು ಸಾಕಷ್ಟಿವೆ. ಬಿಜ್ಜಳ ಚಕ್ರವರ್ತಿಯಾಗಿದ್ದು ವರ್ಣವ್ಯವಸ್ಥೆಯ ಚೌಕಟ್ಟನ್ನು ಮೀರದೆ ಬ್ರಾಹ್ಮಣೇತರ ವರ್ಣೀಯರನ್ನು ತಮ್ಮ ಹತೋಟಿಯಲ್ಲಿಟ್ಟುಕೊಳ್ಳುವ ವಿವರವನ್ನು ಗಮನಿಸಬಹುದು.

ಅ. ರಾಜ :

ರಾಜನಿಲ್ಲದ ಸಾಮ್ರಾಜ್ಯವನ್ನು ಕಲ್ಪಿಸಿಕೊಳ್ಳಲೂ ಸಾಧ್ಯವಿಲ್ಲ ಎಂಬ ಮಟ್ಟಿಗೆ ಆತ ಅನಿವಾರ್ಯ ಶಕ್ತಿಯೆನಿಸಿದ್ದನು. "ಮಳೆಬಾರದಿದ್ದರೂ ನಡೆದೀತು ಆದರೆ ರಾಜನಿಲ್ಲದ ಬದುಕು ಆಸಾಧ್ಯವೆಂದು" ಕಾವ್ಯಾವಲೋಕನದ ಕರ್ತೃ ಹೇಳುತ್ತಾನೆ. (ಚಿಮೂ ೨೦೦೮, ೩೨೨) 'ರಾಜಾ ಪ್ರತ್ಯಕ್ಷ ದೇವತಾಃ' ಎಂಬ ಭಾವನೆ ಸಮಾಜದಲ್ಲಿ ಬೆಳೆದು ಬಂದಿತು. ಒಂದು ರಾಜ್ಯದ ಉನ್ನತಿ ಅವನತಿಗಳು ರಾಜನನ್ನು ಅವಲಂಬಿಸಿದ್ದವು. ರಾಜನೊಬ್ಬ ಪ್ರಶ್ನಾತೀತ ನಾಯಕನಾಗಿದ್ದನು. ಅಂತಿಮವಾಗಿ ಈತನ ನಿರ್ಧಾರಗಳೇ ಸಮಾಜದಲ್ಲಿ ಶಾಸನಗಳಾಗಿ ಜಾರಿಯಾಗುತ್ತಿದ್ದವು. ಆದ್ದರಿಂದಲೇ ಪ್ರಸ್ತುತ ಬಸವಪುರಾಣದಾದ್ಯಂತದಲ್ಲಿ ಸಮಾಜದ ಸರ್ವರೂ ಸಹ ರಾಜನನ್ನು ಓಲೈಸುವ ಸಂದರ್ಭಗಳನ್ನು ಕಾಣಬಹುದು. ಜೈನರು, ವೈಷ್ಣವರು, ಶಿವಭಕ್ತರು ಉಳಿದ ಪ್ರಜಾಸಮೂಹವು ಅರಸುತನವನ್ನು ಒಪ್ಪುತ್ತಿದ್ದರು. ಶಿವಭಕ್ತರು ಅರಸುತನವನ್ನೊಪ್ಪಿದ್ದರೂ ಸಹ ಪ್ರಜೆಗಿಂತ ಪ್ರಭು ಮೇಲಲ್ಲ; ಶಿವಭಕ್ತರಿಗಿಂತ ದೊರೆ ಮೇಲಲ್ಲವೆಂದು ಭಾವಿಸಿದ್ದರು. ಅರಸನ ಒಮ್ಮುಖ ಧೋರಣೆಗಳನ್ನು ತಿರಸ್ಕರಿಸುವ ಸಂದರ್ಭಗಳನ್ನು ಇಲ್ಲಿ ಕಾಣಬಹುದು.

ರಾಜಪ್ರಭುತ್ವವಿರೋಧಿ ಬಗ್ಗೆ ಬಸವಣ್ಣನವರ ವಚನಗಳ ಪ್ರಭಾವ ಕವಿಯ ಮೇಲಾಗಿದೆ. "ವ್ಯಾಧನೊಂದು ಮೊಲನ ತಂದರೆ ಸಲುವ ಹಾಗಕ್ಕೆ ಬಿಲಿವರಯ್ಯಾ, ನೆಲನಾಳ್ದನ ಹೆಣನೆಂದರೆ ಒಂದಡಕೆಗೆ ಕೊಂಬುವರಿಲ್ಲ ಕಾಣಾ ಕೂಡಲಸಂಗಮದೇವಾ" (ಸ.ವ.ಸಂ.೧: ವ.೧೫೮) ಎಂಬಲ್ಲಿ ಅರಸನನ್ನು ಸಹ ಸಾಮಾನ್ಯ ಜನರೊಂದಿಗೆ ಸಮೀಕರಿಸುವ, ರಾಜಸತ್ತೆಯನ್ನು ವಿರೋಧಿಸುವ ಗುಣ ಕಂಡುಬರುತ್ತದೆ. "ಆನೆ ಅಂಕುಶಕ್ಕಂಜುವುದೇ ಅಯ್ಯ, ಮಾಣದೆ ಸಿಂಹದ ನಖವೆಂದು

ಅಂಜುವುದಲ್ಲದೇ? ಆನೀ ಬಿಜ್ಜಳಂಗಜುವನೇ ಅಯ್ಯಾ", (ಸ.ವ.ಸಂ.೧: ವ.೭೩೭) "ಅರಸರ ಮನೆಯಲ್ಲಿ ಅರಸಿಯಾಗಿಪ್ಪುದರಿಂದ ಭಕ್ತರ ಮನೆಯಲ್ಲಿ ತೊತ್ತಾಗಿಪ್ಪುದು ಕರಲೇಸಯ್ಯ" (ಸ.ವ.ಸಂ.೧: ವ.೩೫೬) ಎಂಬ ಬಸವಣ್ಣನವರ ಅಭಿಪ್ರಾಯಗಳು ಪ್ರಭುತ್ವವಿರೋಧಿ ಗುಣಗಳನ್ನು ತೋರಿಸುತ್ತವೆ. ಬಸವಪುರಾಣದಲ್ಲಿ ಬಸವಣ್ಣನವರ ಈ ಗುಣಗಳನ್ನು ಕವಿಯು ಪ್ರಕಟಪಡಿಸಿದ್ದಾನೆ. ಬಿಜ್ಜಳನನ್ನು ವಿಪ್ರರು ಹಾಗೂ ಜೈನರು ಹಾದಿ ತಪ್ಪಿಸಲು ಪ್ರಯತ್ನಿಸುತ್ತಿದ್ದರೆಂಬ ಅಂಶವನ್ನು ಕವಿ ಹೇಳುತ್ತಾನೆ.

ಪೆಟ್ಟಿಗೆಯ ಹೊನ್ನನ್ನೆಲ್ಲ ಮಿಂಡಜಂಗಮರಿಗೆ ಕೊಟ್ಟನೆಂದು ವಿಪ್ರರು ಚಾಡಿ ಹೇಳಿದಾಗ ಬಿಜ್ಜಳನು ಬಸವಣ್ಣನವರನ್ನು ಕರೆಸಿ ವಿಚಾರಿಸುತ್ತಾನೆ. ಆಗ ಬಸವಣ್ಣ "ಅತಿಶಯದ ಶಿವಭಕ್ತಿಯೆಂಬ ಪ್ರತಿಚಿಂತಾಮಣಿಯುಮಮರ ಕ್ಷಿತಿಜಮುಂ ಸುರಧೇನುವುಂ ಕನಕಾಚಲಮುಮಿರಲು ಮತಿಯೊಳೆಂದುಂ ಭಕ್ತನಾದವನಿತರಧನವಂ ಬಯಸಿದಪನೇ ಅತಿವಿವೇಕವನುಡುಗಿ ನುಡಿವುದು ನೀತಿಯೇ ಭೂಪ"(೧೦:೯) ಎಂದು ನುಡಿಯುತ್ತಾನೆ. ಮುಂದುವರೆದು "ಮುರಾರಿಭಕ್ತರು ಪರಧನಕ್ಕೆ ಕೈನೀಡುವರೆ ಭೂಪ, ಮೃಡನ ಭಕ್ತರು ಪರಧನಕ್ಕೆ ಕೈದುಡುಕುವರೆ ಭೂಪ, ಲಿಂಗಸದರ್ಥವರೊಲಿದೆಮಗೀವ ಧನವುಂಟರಸ ನಿನ್ನಯ ಧನದ ಹಂಗುಂಟೆ" (೧೫:೧೧-೧೩) ಎಂಬ ಮಾತುಗಳಲ್ಲಿ ಸ್ಪಷ್ಟವಾಗಿ ಪ್ರಭುವಿರೋಧಿ ಗುಣಗಳು ವ್ಯಕ್ತವಾಗುತ್ತವೆ. ಅರಸನಾದವನು ಮಂತ್ರಕ್ಕೆ, ತಂತ್ರಕ್ಕೆ, ಆಲೋಚನೆಗೆ, ಊಳಿಗಕ್ಕೆ ಮಾತಿಗೆ, ನೀತಿಗೆ ಹೀಗೆ ತಮ್ಮ ಅಂತರಂಗಕ್ಕೆ ಆತ್ಮೀಯನಾಗಿರುವ ಯೋಗ್ಯ ವ್ಯಕ್ತಿಯನ್ನು ಬಯಸುತ್ತಿದ್ದರು. ಈ ಹಿನ್ನೆಲೆಯಲ್ಲಿ ಅರಸು ಬಿಜ್ಜಳನು ಬಸವಣ್ಣನವರನ್ನು ಕರೆದು ಪ್ರಧಾನಿಕೆ ನೀಡಿರುವುದನ್ನು ಗಮನಿಸಬಹುದು. ಬಸವಣ್ಣನವರು ಈ ಹಿನ್ನೆಲೆಯಲ್ಲಿಯೇ ಬಿಜ್ಜಳನ ಆಸ್ಥಾನವನ್ನು ಪ್ರವೇಶಿಸಿದ್ದುದು ತಿಳಿದುಬರುತ್ತದೆ. (೫:೫೧)

ಆ. ರಾಜನ ಗುಣಗಳು :

ರಾಜನಾಗಬೇಕಾದವನಿಗೆ ಕೆಲವು ಅಸಾಧಾರಣ ಯೋಗ್ಯತೆ ಅರ್ಹತೆಗಳಿರಬೇಕೆಂದು ಪ್ರಾಚೀನ ರಾಜನೀತಿಶಾಸ್ತ್ರಜ್ಞರು ಹೇಳುತ್ತಾರೆ. "ಯಥಾರಾಜ ತಥಾಪ್ರಜಾ" ಎಂಬಂತೆ ರಾಜ್ಯದಲ್ಲಿಯ ಜನರು ಅರಸನನ್ನೇ ಅನುಸರಿಸುವುದರಿಂದ ನೃಪರ ಗುಣಶೀಲಗಳು ಉಚ್ಚಮಟ್ಟದವಾಗಿರಬೇಕೆಂಬುದು ಸತ್ಯ. 'ನಾಲ್ಕು ಉಪಾಯಗಳು', 'ಷಡ್ಗುಣಗಳು', 'ಐದು ಬಗೆಯ ತಂತ್ರಗಳು', 'ಮೂರು ಬಗೆಯ ಶಕ್ತಿಗಳು', 'ಚತುರಂಗಬಲ', 'ಸಪ್ತಾಂಗಗಳು' ಇವೇ ಮುಂತಾದುವು ರಾಜಲಕ್ಷಣಗಳೆಂದು ವಿವೇಕಚಿಂತಾಮಣಿಯಲ್ಲಿ ಹೇಳಿದೆ. (ವಿವೇಕ ಚಿಂತಾಮಣಿ, ಪು.೧೭೮)

ಬಸವಪುರಾಣದಲ್ಲಿ ಬಿಜ್ಜಳನ ವ್ಯಕ್ತಿತ್ವ ಈ ಮೇಲಿನ ಮೌಲ್ಯಾನುಸಾರವಾಗಿ ದೊರಕುವುದಿಲ್ಲ. ಕೆಲವು ಸಂದರ್ಭದಲ್ಲಿಯಂತೂ ಪೂರ್ವಾಪರ ವಿಚಾರಿಸದೆ ಅತ್ಯಂತ ಕ್ರೋಧನಾಗಿ ನಡೆದುಕೊಂಡ ಉಲ್ಲೇಖವನ್ನು ಕವಿ ಕೊಡುತ್ತಾನೆ. ಕೊಂಡೆಯರ ಮಾತಿನಂತೆ ಪೆಟ್ಟಿಗೆಯಲ್ಲಿಯ ಧನವನ್ನು ತೋರಿಸೆಂದು

ಆಗ್ರಹಪಡಿಸುತ್ತಾ "ನಮ್ಮ ಧನವಂ ತಂದೊಪ್ಪಿಸಿ ಹೋಗು ಸಾಕಿನ್ನೊಪ್ಪದಿಂ ಭಂಡಾರದೊಡೆತನಮುಂ ಪ್ರಧಾನಿಕೆಯುಂ" (೧೦:೭) ಎಂದು ಕೋಪಿಸಿಕೊಂಡು ನುಡಿಯುತ್ತಾನೆ. ಪೆಟ್ಟಿಗೆಯ ಧನವೆಲ್ಲ ಇದ್ದಂತಿರಲು ಅಚ್ಚರಿಯಿಂದ ಸಂತೋಷಪಟ್ಟು ಬಸವಣ್ಣನವರನ್ನು ಹೊಗಳುತ್ತಾನೆ. (೧೦:೧೫)

ಮಡಿಬಟ್ಟೆ ಸೋಕಿದ ಭವಿಯನ್ನು ಮಡಿವಾಳ ಮಾಚಯ್ಯಗಳು ಕೊಂದರೆಂಬುದನ್ನು ತಿಳಿದ ಬಿಜ್ಜಳನು "ಬಸವರಾಜನ ಮೊಗವನೀಕ್ಷಿಸಿ ಮುಸುಡ ಕೆಚ್ಚನೆ ಮಾಡಿ ಕೋಪಂ ಮಸಗಿ" ಅತ್ಯಂತ ಕೀಳು ನುಡಿಗಳನ್ನಾಡಿದನೆಂದು ಕವಿ ಹೇಳುತ್ತಾನೆ. (೨೦:೧೮) ನಂತರ ವಸ್ತುಸ್ಥಿತಿಯನ್ನು ತಿಳಿದು "ತಜ್ಞರು ಶಿಷ್ಟರುಗಳಂ ವಿದ್ವಜ್ಜನರು ಮಂತ್ರಿಗಳು ಸಹಿತಂ ಬಿಜ್ಜಳಂ ಸಾಷ್ಟಾಂಗವೆಱಗಿರಲ್ಕೆಸು ದೂರದಲಿ" (೨೧:೩೮) ಎಂದು ಪಶ್ಚಾತ್ತಾಪ ಪಡುವ ಸಂದರ್ಭವನ್ನು ಕವಿ ಉಲ್ಲೇಖಿಸುತ್ತಾನೆ. ಕನ್ನದ ಬೊಮ್ಮಯ್ಯನ ಪ್ರಸಂಗದಲ್ಲಿಯೂ ಸಹ ಬಿಜ್ಜಳನು ಪಶ್ಚಾತ್ತಾಪದಿಂದ ದಗ್ಧನಾದ ಸಂದರ್ಭ ಬರುತ್ತದೆ. (ಸಂ.೩೦) ಸೊಡ್ಡಳಬಾಚರಸನೆಂಬ ಶಿವಶರಣನು ಬಿಜ್ಜಳನಲ್ಲಿ ಕೊಠಾರದ ಅಧಿಕಾರಿಯಾಗಿದ್ದನು. ಪರವಾದಿ ಭಯಂಕರನಾದ ಆತನು ವರುಷವರುಷವೂ ಸೌರಾಷ್ಟ್ರಕ್ಕೆ ಹೋಗಿ ಶಿವರಾತ್ರಿಯನ್ನಾಚರಿಸುವ ನೇಮವನ್ನು ಕೈಗೊಂಡಿರುತ್ತಾನೆ. ಒಮ್ಮೆ ಅರಸನು ಆತನಿಗೆ ಬಿಡುವುಕೊಡದೆ ಹೀಗೆ ನುಡಿಯುತ್ತಾನೆ.

ಮುಂತೆ ಅರಸೂಳಿಗವು ಭಕ್ತಿಯು
ಮಿಂತೆರಡುಮಂ ಕೂಡಿ ನಡೆಸುವೊ
ಡೆಂತಹುದು ಸೌರಾಷ್ಟ್ರಕೀಗಳೇ ಹೋಗದಲ್ಲದಡೆ
ಅಂತು ತತ್‌ಶಿವನ ಬರಿಸಿಕೊಂ
ಬಂತೆ ಮಾಡೇನರಿದು ನಿಮಗೆ ಮ
ಹಂತರಿಗೆ ಶಿವರಾತ್ರೆಯಂ ಗಿವರಾತ್ರೆಯಂ ಮತ್ತೆ... (.೫೨: ೧೩)

ಎಂದು ಹಂಗಿಸಿ ನುಡಿಯುತ್ತಾನೆ. ಪ್ರತಾಪನಾರಾಯಣಪುರದಲ್ಲಿಯ ಗೋವಿಂದಪ್ರತಿಮೆಯನ್ನು ನೋಡಲು ಸೊಡ್ಡಳಬಾಚರಸರನ್ನು ಒತ್ತಾಯಪೂರ್ವಕವಾಗಿ ಕರೆಸುತ್ತಾನೆ. ಬಿಜ್ಜಳನ ಆಜ್ಞೆಯಂತೆ ಬಾಚರಸರು ಬಂದು ಗೋವಿಂದಪ್ರತಿಮೆಯನ್ನು ದುರದುರನೆ ನೋಡುತ್ತಾರೆ. ಒಡನೆಯೆ ಅದು ಪುಡಿಪುಡಿಯಾಯಿತು. ಬಿಜ್ಜಳ ತಲೆಬಾಗಿ ಸೊಡ್ಡಳಬಾಚರಸರನ್ನು ಹೊಗಳಿದನೆಂಬ ಉಲ್ಲೇಖವನ್ನು ಕವಿ ಕೊಡುತ್ತಾನೆ. (೫೨:೮೦) ಹೀಗೆ ಬಿಜ್ಜಳ ರಾಜನ ಗುಣಗಳು, ವ್ಯಕ್ತಿತ್ವ ಢಾಳುಢಾಳಾಗಿ ಬಸವಪುರಾಣದಲ್ಲಿ ಕಂಡುಬರುತ್ತದೆ. ಒಬ್ಬ ಧೀರೋದಾತ್ತ, ಸಂಯಮಿ, ಆದರ್ಶಗುಣಗಳ ಬಿಜ್ಜಳರಾಜನನ್ನು ಬಸವಪುರಾಣದಲ್ಲಿ ಕಾಣುವುದು ಕಷ್ಟ ಕವಿಯ ಮನೋಭಾವ ಬಸವಣ್ಣನವರನ್ನು ಉದಾತ್ತೀಕರಿಸುವ ಉತ್ಸಾಹದಲ್ಲಿ ಬಿಜ್ಜಳನ ವ್ಯಕ್ತಿತ್ವವನ್ನು ಕಡೆಗಣಿಸಿದೆಯೆಂದು ಕಾಣುತ್ತದೆ.

ಇ. ಸಮಗ್ರ ಪ್ರಭುವೃತ್ತಿ :

ಯೋಗ್ಯತೆಯನ್ನು ಹೊಂದಿದ ಮಂತ್ರಿಮಹೋದಯರಿಗೆ ರಾಜರಾದವರು ತಮ್ಮ ಸಂಪೂರ್ಣ ಅಧಿಕಾರ ಕೊಟ್ಟು ನಿಶ್ಚಿಂತರಾಗಿದ್ದ ಹೇರಳ ಉದಾಹರಣೆಗಳು ಇತಿಹಾಸದಲ್ಲಿ ದೊರೆಯುತ್ತವೆ. ಇಂತಹ ಉದಾಹರಣೆಗಳು ಪ್ರಸ್ತುತ ಬಸವಪುರಾಣದಲ್ಲಿಯೂ ದೊರೆಯುತ್ತವೆ. ಬಸವಣ್ಣನವರಿಗೆ ಬಿಜ್ಜಳ ತನ್ನ ಸಮಸ್ತ ರಾಜ್ಯಾಧಿಕಾರವನ್ನು ಕೊಟ್ಟ ಉಲ್ಲೇಖ ದೊರೆಯುತ್ತದೆ. ಬಿಜ್ಜಳನ ಅಣತಿಯಂತೆ ಅಮಾತ್ಯರು ಬಸವಣ್ಣನವರಲ್ಲಿಗೆ ಬಂದು –

ಧಾರುಣಿಗೆ ಸಚಿವಾಗ್ರಪಟ್ಟಕ
ಪಾರಭಂಡಾರಕ್ಕೆ ಬಹುಪರಿ
ವಾರಕಾಪ್ತಜನಕ್ಕೆ ವಿಶ್ವಾಸಕ್ಕೆ ಬಿಜ್ಜಳನ
ಭೂರಿಸಾಮ್ರಾಜ್ಯಕ್ಕೆ ಸಕಳದ
ಭಾರಮಂ ತಾಳಲ್ಕೆ ಮತ್ತೆ ವಿ
ಚಾರಿಸಲು ನೀವಲ್ಲದಾತಂಗಾವನಿರ್ದಹನು... (೫: ೯)

ಎನ್ನುವ ಮಾತುಗಳನ್ನು ಗಮನಿಸಬೇಕು. ಲಿಪಿಯ ಪವಾಡದ ನಂತರವಂತೂ ಸ್ವತಃ ಬಿಜ್ಜಳನೇ "ಧರೆಗಖಿಳ ಸಾಮ್ರಾಜ್ಯಪೂಜ್ಯಕ್ಕರಸು ನೀನೆಯಂತುಮಲ್ಲದೆ ಹರಣವೆನ್ನರ್ಥಕ್ಕೆ ಕರ್ತಂ ನೋಡಿವುದ್ಧರಿಸು" (೫:೬೬) ಎಂದು ಹೇಳುತ್ತಾನೆ. ಕವಿಯ ಈ ಮಾತುಗಳಿಂದ ಸಮಗ್ರ ಪ್ರಭುವೃತ್ತಿ ಬಸವಣ್ಣನವರದಾಯಿತೆಂದು ಭಾವಿಸಬಹುದು. ಪ್ರಭುವಿನಲ್ಲಿರಬೇಕಾದ ಅಧಿಕಾರಗಳೆಲ್ಲವೂ ಬಸವಣ್ಣನವರಿಗೆ ಬಿಜ್ಜಳನಿಂದ ನೀಡಲ್ಪಟ್ಟಿವೆಯೆಂದು ಇದರ ಅರ್ಥ.

ಕವಿಯ ಹೇಳಿಕೆಗಳ ಆಧಾರವನ್ನೆ ಆಶ್ರಯಿಸಿ ಬಿಜ್ಜಳ ಒಬ್ಬ ದುರ್ಬಲರಾಜ ಎಂದು ಭಾವಿಸಲಿಕ್ಕಾಗದು. ಬಸವಣ್ಣನವರು ಹಾಗೂ ಬಿಜ್ಜಳನ ಮಧ್ಯ ಆರೋಗ್ಯಕರ ಸಂಬಂಧಗಳಿದ್ದವು. ಬಿಜ್ಜಳನೊಬ್ಬ ಭುಜಬಲ ಚಕ್ರವರ್ತಿ ಎಂಬುದರಲ್ಲಿ ಯಾವ ಸಂಶಯವೂ ಇಲ್ಲ. 'ಬಳ್ಳಿಗಾವೆ ಶಾಸನ', (1155-B.G. Vol-1,PT. II. P.473) 'ಅಣ್ಣಿಗೇರಿ ಶಾಸನ', (1157-Ibid. P.474) 'ಚಿಕ್ಕಲಗಿ ಶಾಸನಗಳು'(1157-Ibid. P.474) ಈತನ ಪ್ರತಾಪವನ್ನು ವರ್ಣಿಸುತ್ತವೆ. 'ಅನುಮಗೊಂಡ ಶಾಸನ'ವಂತೂ ಈತನನ್ನು 'ರಾಯಸಮುದ್ಧರಣ'(1155-Ibid.D.G.42) ಎಂದು ಕರೆದಿದೆ. ಈ ಎಲ್ಲಾ ಆಧಾರಗಳ ಹಿನ್ನೆಲೆಯಲ್ಲಿ ಈತ ಅತ್ಯಂತ ಪರಾಕ್ರಮಶಾಲಿ ಎಂಬುದಂತೂ ಸತ್ಯ. ತೃತೀಯ ತೈಲಪನು ೧೧೫೭ರಲ್ಲಿ ಕಲ್ಯಾಣ ಬಿಟ್ಟಮೇಲೆ ಕ್ರಮೇಣ ಅಧಿಕಾರ ಸಾಧಿಸಿ ೧೧೬೨ರಲ್ಲಿ ಅವನು ತೀರಿದ ಮೇಲೋ, ತೀರಿಸಲ್ಪಟ್ಟ ಮೇಲೋ ಯಾವ ಮುಚ್ಚುಮರೆಯೂ ಇಲ್ಲದೆ ಬಿಜ್ಜಳನು ಬಹಿರಂಗವಾಗಿ ತಾನೇ ಚಕ್ರವರ್ತಿಯೆಂದು ೧೧೬೨ ರಲ್ಲಿ ಕಲ್ಯಾಣದ ಸಿಂಹಾಸನಾರೂಢನಾಗುತ್ತಾನೆ. (ಪುರಾಣಿಕ ಸಿದ್ಧಯ್ಯ, ೧೯೭೭, ಪು.೩೫) ಇಂತಹ ಭಂಡತನ, ಎದೆಗಾರಿಕೆ, ದಾರ್ಷ್ಟ್ಯ ಹೊಂದಿದ ಬಿಜ್ಜಳ ಬಸವಣ್ಣನಿಗೆ 'ನೀನೆ ಅರಸ'ಎಂದು ಹೇಳಿದನೆಂಬ ಭೀಮಕವಿಯ ಮಾತುಗಳು ಅತಿಶಯೋಕ್ತಿಯ ಔಪಚಾರಿಕತೆಯಿಂದ ಕೂಡಿವೆಯೆಂದು ಹೇಳಬಹುದು. ಬಸವಣ್ಣನವರಲ್ಲಿಯ ವಿಶೇಷ ವ್ಯಕ್ತಿತ್ವಕ್ಕೆ ಮಾರು ಹೋದ ಬಿಜ್ಜಳ ರಾಜ ಸ್ವಾತಂತ್ರ್ಯ ಕೊಟ್ಟಿರಲು ಸಾಧ್ಯವಿದೆ. ಅದನ್ನು

ಅತ್ಯಂತ ಜಾಣ್ಮೆಯಿಂದ ವಿಶ್ವಾಸಕ್ಕೆ ಧಕ್ಕೆಯಾಗದಂತೆ ಬಸವಣ್ಣನವರು ಬಳಸಿಕೊಂಡನೆಂಬುದು ಸರ್ವಶ್ರುತ.

ಈ. ಆಸ್ಥಾನ :

ನಮ್ಮ ಇಂದಿನ ವಿಧಾನಸಭೆ ಹಾಗೂ ಸಂಸತ್ತಿನ ಪ್ರಾತಿನಿಧಿಕ ಕೇಂದ್ರಗಳಂತೆ ಅಂದು ರಾಜನ ಆಸ್ಥಾನ ಕೆಲಸ ನಿರ್ವಹಿಸುತ್ತಿತ್ತು. ಸಮಗದ್ದುಗೆಯಲ್ಲಿ ಬಸವಣ್ಣನಿಗೆ ಸ್ಥಾನಕೊಟ್ಟು ಗೌರವಿಸಿದ ಚಿತ್ರಣ ಬಸವಪುರಾಣದಲ್ಲಿ ಬರುತ್ತದೆ. (೫:೬೫)

ಬಿಜ್ಜಳನ ಅಕ್ಕಪಕ್ಕದಲ್ಲಿ ಮಂತ್ರಿಗಳು, ಪುರೋಹಿತರು (ರಾಜಗುರುಗಳು) ಇದ್ದ ಉಲ್ಲೇಖವನ್ನು ಕವಿ ಕೊಡುತ್ತಾನೆ. (೫:೫೨) ಬಿಜ್ಜಳನ ಓಲಗದಲ್ಲಿ ಪನ್ನಿಬ್ಬರು (೫:೧೮) ಮಂತ್ರಿಗಳಿದ್ದರೆಂಬ ಉಲ್ಲೇಖ ಭೀಮಕವಿ ಕೊಡುತ್ತಾನೆ. 'ಅಮಾತ್ಯರು', 'ಮಾಂಡಳಿಕರು', 'ಸಾಮಂತರು', ಓಲಗದಲ್ಲಿ ಪಾಲ್ಗೊಂಡ ಕುರಿತು ಭೀಮಕವಿ ಹೇಳುತ್ತಾನೆ. (೫:೧೪) ಓಲಗದಲ್ಲಿ ತುಂಬ ಶಿಸ್ತಿನಿಂದ ಅವರವರ ಯೋಗ್ಯತೆ ಸ್ಥಾನಮಾನಕ್ಕೆ ತಕ್ಕಂತೆ ಕುಳಿತುಕೊಳ್ಳುವ ವ್ಯವಸ್ಥೆ ಇತ್ತೆಂದು ತೋರುತ್ತದೆ. 'ದ್ವಾರಪಾಲಕರು', (೩೪:೪೨) 'ಕರಣಿಕರು', 'ಪರಿಚಾರಕರು',(ಸಂ.೩೪) 'ಪಡಿಹಾರರು', (೩೬:೩) 'ಸಚಿವರು', 'ಸಾಮಂತರು', 'ದಂಡನಾಥರು', (೫:೧೪) 'ಮಂಗಳಪಾಠಕರು', 'ಕೈವಾರಿಗಳು', (೫:೩೮) 'ಕವಿಗಳು', 'ಗಮಕಿಗಳು', 'ಗಾಯಕರು', 'ಚಿತ್ರಕರು', 'ನರ್ತಕರು', 'ವಂದಿಮಾಗಧರು', 'ಮಾವತಿಗರು', 'ಲಾಳ', 'ಮಾಳವ', 'ಗೌಳ', 'ಕುರು', 'ನೇಪಾಳ', 'ಖರ್ಪರ, 'ಪಾಂಚಾಳ', 'ಗುರ್ಜರ', 'ಸಿಂಹಳ' ದೇಶದ ವಿವಿಧ ರಾಜರು ವಿವಿಧ ಅಧಿಕಾರಿಗಳು ಹಾಗೂ ವೃತ್ತಿವರ್ಗದವರು ಇದ್ದ ಚಿತ್ರಣವನ್ನು ಕವಿ ಕೊಡುತ್ತಾನೆ. (೬೦:೩೦)

ಕೈದೀವಿಗೆಗಳನ್ನು ಹಿಡಿದು ಚಾಮರ ಬೀಸುವ ವಿಳಾಸಿನಿಯರ ಉಲ್ಲೇಖ ನೋಡಿದರೆ ಆಸ್ಥಾನವು ಅತ್ಯಂತ ತುರ್ತು ಸಂದರ್ಭದಲ್ಲಿ ಓಲಗ ನಡೆಸುತ್ತಿರಬಹುದೆಂದು ತೋರುತ್ತದೆ. (ಅದೇ) ಈ ಸಂದರ್ಭದ ಓಲಗದ ವಿವರವನ್ನು ಕವಿ ಬಹು ಪರಿಣಾಮಕಾರಿಯಾಗಿ ಚಿತ್ರಿಸುತ್ತಾನೆ.

ಹರಿಗೆಗಳ ಅಡ್ಡಾಯಧಂಗಳ
ಕರದ ಕರವಾಳುಗಳ ಬಿಲುಗಳ
ಸರಳ ಹೆದೆಗಳ ಸಬಳಗಳ ಈಟಿಗಳ ಕೋಲುಗಳ
ಸುರಿಗೆಗಳ ಶೂಲಾಯುಧಂಗಳ
ಪರಿಪರಿಯ ಕೈದುಗಳ ಪಿಡಿಪಿಡಿ
ದುರವಣಿಯ ಸಂದಣಿಯ ಪರಿವಾರಂಗಳನ್ನುಳುಹಿ.. (೬೦: ೨೫)

ಊಟ್ಟ ಪಟ್ಟಾವಳಿಯ ಮೇಲಳ
ವಟ್ಟು ಉದ್ದುಗೆದಾರದೊಂಗಲ
ಕಟ್ಟ ಮೆಱೆವ ಕಠಾರಿಗಳ ಹೊಂಗಟ್ಟುಗಳೊಳೆಸೆವ
ಇಟ್ಟ ಕಬ್ಬುನ ಕೋಲುಗಳ ಪಿಡಿ
ದಿಟ್ಟಣಿಸಿ ಬಹ ಕೊಟ್ಟಗಾಱಿರ
ನೆಟ್ಟನೇಕಾಂಗಿಗಳನೆಲ್ಲರನೊಟ್ಟಯಿಸಿ ನಡೆದು..... (೬೦: ೨೬)

ದ್ವಾರದ್ವಾರಂಗಳೊಳಗಲದಿಹ
ಪಾತಕರ ಬಗೆಗೊಳ್ಳದಂತ
ದ್ವಾ್ರರದಾ ಸಾವಾಸಿಗಳ ಮೀಱುತ್ತ ನಡೆತರಲು
ಭಾರತ ನಿಯೋಗಾಳಿ ಜನಪದ
ಪಾರ ವಿಭವಂಗಳಿಂದ ಪಾರಾ.
ವಾರ ಗಂಭೀರಗಳೆಸೆವ ನೃಪಸಭೆ ಮೆಱೆವುತಿರಲು...(೬೦: ೨೯)

ಕವಿಯ ಮಾತುಗಳನ್ನು ಗಮನಿಸಿದರೆ ರಾತ್ರಿ ನಡೆದ ಈ ಓಲಗಕ್ಕೆ ವಿವಿಧ ಆಯುಧದಾರಿಗಳನ್ನು ಭದ್ರತೆಗಾಗಿ ನಿಯೋಜಿಸಿದ್ದು ತಿಳಿಯುತ್ತದೆ. ಈ ಓಲಗದಲ್ಲಿ ಅಪಾರ ಜನಸ್ತೋಮ ಭಾಗವಹಿಸಿತ್ತೆಂದೂ ಅತ್ಯಂತ ಗಂಭೀರವಾಗಿ ಕಾರ್ಯ ಕಲಾಪಗಳು ನಡೆಯುತ್ತಿದ್ದವೆಂದು ಕವಿ ಹೇಳುತ್ತಾನೆ. ಕಲ್ಯಾಣಕ್ರಾಂತಿಯ ಮುನ್ಸೂಚನೆಯ ಅಪಾಯವನ್ನರಿತ ಬಿಜ್ಜಳ ಹೀಗೆ ಸೂಕ್ತ ಭದ್ರತಾ ಏರ್ಪಾಡುಗಳನ್ನು ಮಾಡಿ ಓಲಗ ನಡೆಸುತ್ತಿರಬಹುದೆಂಬ ಅಂಶ ಇಲ್ಲಿ ಸ್ಪಷ್ಟವಾಗುತ್ತದೆ.

ಇಂತಹ ಆಸ್ಥಾನದಲ್ಲಿ ಚರ್ಚೆಯಾಗುವ ವಿಷಯಗಳೇನು? ತೆಗೆದುಕೊಂಡ ಪ್ರಜಾಹಿತ ತೀರ್ಮಾನಗಳೇನು ಎಂಬ ಉಲ್ಲೇಖ ದೊರೆಯುವುದಿಲ್ಲ. ಬಿಜ್ಜಳನ ಓಲಗದಲ್ಲಿ ಕುಳಿತ ಬಸವಣ್ಣನು ಇದ್ದಕ್ಕಿದ್ದ ಹಾಗೆ ಕೈಗಳನ್ನೆತ್ತಿ 'ಅಂಜದಿರು ಚೆಲ್ಲುವುದಿಲ್ಲ' ಎಂದು ನುಡಿಯುತ್ತಾನೆ. (೯:೧,೨) ಬಿಜ್ಜಳನು ಕಾರಣವನ್ನು ಕೇಳಿದಾಗ ತ್ರಿಪುರಾಂತಕ ದೇವಾಲಯದ ಪೂರ್ವಕ್ಕೆ ಅರ್ಧ ಗಾವುದದೊಳಗೆ ಕಪಿಲೇಶ್ವರವುಂಟು. ಅದಕ್ಕೆ ಪೂಜಾರಿ ಸಾವಿರದಾರನೂರು ಖಂಡುಗ ಕ್ಷೀರಾಭಿಷೇಕ ಮಾಡಿದನು. ಅದರಿಂದ ಬೀದಿಯಲ್ಲಿ ಕೆಸರಾಗಿದ್ದು ಗೊಲ್ಲಿತಿಯೊಬ್ಬಳು ಮಜ್ಜಿಗೆ ಹೊತ್ತುಕೊಂಡು ಬರುವಾಗ ಜಾರಿಬೀಳುತ್ತಾ 'ಬಸವಾ' ಎಂದಳು. ಅದಕ್ಕಾಗಿ ಹರವಿಯನ್ನು ಎತ್ತಿ ಹಿಡಿದೆನು ಎಂದು ತಿಳಿಸುತ್ತಾನೆ. ಆಸ್ಥಾನಕ್ಕೆ ಗೊಲ್ಲಿತಿಯನ್ನು ಕರೆಸಿಕೊಂಡು ಅದನ್ನು ಬಿಜ್ಜಳ ಖಚಿತಪಡಿಸಿಕೊಳ್ಳುತ್ತಾನೆ.

ಇನ್ನೊಂದು ಸಂದರ್ಭದಲ್ಲಿ ಬಿಜ್ಜಳನು ಪ್ರತಾಪನಾರಾಯಣಪುರದಲ್ಲಿ ಒಡ್ಡೋಲಗ ನಡೆಸಿದ ಸಂದರ್ಭವನ್ನು ಕವಿ ಹೇಳುತ್ತಾನೆ. (೫೭:೩೨, ೩೩) ಅಂದರೆ ಓಲಗವನ್ನು ಕೇವಲ ಅರಮನೆಯಲ್ಲಿ ನಡೆಸದೆ ಸಂದರ್ಭಾನುಸಾರ ಅದನ್ನು ಸ್ಥಳಾಂತರಿಸುತ್ತಿದ್ದರು ಎಂಬ ಸೂಚನೆ ಇಲ್ಲಿ ದೊರೆಯುತ್ತದೆ. ಈ ಉತ್ಸವದ ಒಡ್ಡೋಲಗಕ್ಕೆ ಒತ್ತಾಯಪೂರ್ವಕವಾಗಿ ಸೊಡ್ಡಳಬಾಚರಸರನ್ನು ಬಿಜ್ಜಳ ಕರೆಸಿಕೊಂಡನೆಂದು ನೋಡಿದರೆ ಕಡ್ಡಾಯವಾಗಿ ಆಸ್ಥಾನದ ಅಧಿಕಾರಿಗಳ ಹಾಜರಿ ಓಲಗದಲ್ಲಿರಬೇಕಾಗುತ್ತಿತ್ತೆಂಬ ಅಂಶ ಸ್ಪಷ್ಟವಾಗುತ್ತದೆ.

ವಿಪ್ರರ ಸೂಚನೆಯಂತೆ ಬಿಜ್ಜಳನು ಅರಮನೆಯ ಹೊರಗಡೆಯಲ್ಲಿಯೇ ಓಲಗ ನಡೆಸಿದ ಸಂದರ್ಭವೊಂದು ಉಕ್ತವಾಗಿದೆ. ಬಸವಣ್ಣನವರು ಶಿವನಾಗಮಯ್ಯಗಳ ಮನೆಯಲ್ಲಿ ಉಂಡರೆಂದು ವಿಪ್ರರು ಚಾಡಿ ಹೇಳಿದಾಗ ಶಿವನಾಗಮಯ್ಯಗಳನ್ನು ಕರೆಸುವಂತೆ ಬಿಜ್ಜಳನು ಆದೇಶಿಸುತ್ತಾನೆ. ಆಗ

ಓಲಗದಲ್ಲಿ ನಡೆಯುವ ಚರ್ಚೆಗಳಲ್ಲಿ ನಿಮ್ನ ವರ್ಗದವರ ಪರವಾಗಿ ಬಸವಣ್ಣನವರು ಶಿವನಾಗಮಯ್ಯಗಳವರನ್ನು ಸಮರ್ಥಿಸಿಕೊಳ್ಳುತ್ತಾರೆ. (ಸಂ.೫೪) ಏಕಪಕ್ಷೀಯವಾಗಿ ಬಿಜ್ಜಳ ವರ್ತಿಸುವುದನ್ನು ಖಂಡಿಸಿ ಸುರನದಿಗೆ ಪಳ್ಳಂಗಳೆಣೆಯೆ?, ಸುರಗಿರಿಗೆ ಬೆಟ್ಟಂಗಳೆಣೆಯೇ?, ಸುರಧೇನುಗೆ ಪಶುಗಳಹಿಪತಿಗಹಿಗಳೆಣೆಯೆ?, ಹರನೊಡನೆ ಮೇಣಿತರ ದಿವಿಜರ ಸರಿಯೆ?, ಶಿವನಾಗಮಯ್ಯಂಗೆ ಭೂಸುರರು ಧರೆಯೊಳೆಣೆಯೆ? (೫೪:೨೩) ಎಂದು ಬಿಜ್ಜಳನ ತಪ್ಪನ್ನು ಎತ್ತಿ ತೋರಿಸಿ ಒಡ್ಡೋಲಗದಲ್ಲಿ ಚರ್ಚೆಗೆ ಗ್ರಾಸವಾಗುವ ಕೆಲಸ ಮಾಡುತ್ತಿದ್ದರು. ಆ ಮೂಲಕ ತಮ್ಮ ಮತಧರ್ಮ ಆಚರಣೆಗೆ ರಾಜರು ಒಪ್ಪುವಂತೆ ಮಾಡುತ್ತಿದ್ದರು. ಇಂತಹ ಘಟನೆಗಳನ್ನು ನೋಡಿದರೆ ಆಗಾಗ ಒಡ್ಡೋಲಗದಲ್ಲಿ ಈ ರೀತಿಯ ಚರ್ಚೆ, ವಾದ-ವಿವಾದಗಳು ನಡೆದು ಅಂತಿಮವಾಗಿ ಶಿವಭಕ್ತರು ಗೆಲ್ಲುವ, ಬಿಜ್ಜಳನು ಪಶ್ಚಾತ್ತಾಪ ಪಡುವ ಸಂದರ್ಭಗಳು ಜರುಗುತ್ತಿದ್ದವೆನ್ನಬಹುದು.

ಇನ್ನುಳಿದಂತೆ ಪಿಳ್ಳೆಯನಯನಾರು ಎಂಬ ಶಿವಭಕ್ತ ಜ್ಞಾನಸಂಬಂಧಿ ಎಂಬ ಅಭಿದಾನದೊಡನೆ ಕುಲೋತ್ತುಂಗ ಚೋಳನ ಆಸ್ಥಾನಕ್ಕೆ ತೆರಳಿ ಅಲ್ಲಿಯ ಓಲಗದಲ್ಲಿ ಎರಡು ಸಾವಿರ ಬೌದ್ಧರನ್ನು ಶಿವಭಕ್ತರನ್ನಾಗಿ ಮಾಡಿದ ಉಲ್ಲೇಖ ದೊರೆಯುತ್ತದೆ. (೪೯:೧೮) ಮುಂದುವರೆದು ಮಧುರೆಯ ರಾಣಿಯ ಅಪೇಕ್ಷೆಯಂತೆ ಓಲಗದಲ್ಲಿ ಪಾಲ್ಗೊಂಡು ಬಹು ದೀರ್ಘವಾಗಿ ಜೈನರನ್ನು ಸೋಲಿಸಿದ ಸಂದರ್ಭವನ್ನು ಕವಿ ಉಲ್ಲೇಖಿಸುತ್ತಾನೆ. (೪೯:೪೨) ಇಲ್ಲಿಯೂ ಸಹ ಒಡ್ಡೋಲಗಗಳು ಧಾರ್ಮಿಕ ವಾತಾವರಣದ ಚರ್ಚೆಗೆ ಸೀಮಿತವಾದ ಉದಾಹರಣೆ ದೊರೆಯುತ್ತದೆ.

ಭವಿ ಬಿಜ್ಜಳನ ಓಲಗಕ್ಕಿಂತ ಮುಖ್ಯವಾಗಿ ಭೀಮಕವಿಯು ಶಿವನ ಆಸ್ಥಾನವನ್ನು ಅತ್ಯಂತ ಉತ್ಸಾಹದಿಂದ ವರ್ಣಿಸುವ ಬಗೆಯನ್ನು ಗಮನಿಸಬೇಕು. ತುಂಬಾ ಆಸಕ್ತಿಯಿಂದ ಕೈಲಾಸದ ಆಸ್ಥಾನವನ್ನು ವರ್ಣಿಸುವುದರ ಹಿಂದೆ ಕವಿಯ ಶಿವಭಕ್ತಿಯ ಆಧಿಕ್ಯ ಎದ್ದು ಕಾಣುತ್ತದೆ. ಶಿವನ ಓಲಗವನ್ನು ಕವಿಯು 'ಪೇರೋಲಗ' (೧:೫೧) ಎಂದು ಕರೆದಿದ್ದಾನೆ. ಶುಭ್ರತೆಯಲ್ಲಾ ಒಟ್ಟುಗೂಡಿ ಆಕಾರವಾಗಿದ್ದ ಕೈಲಾಸದಲ್ಲಿ ಶಿವನ ಓಲಗ. ರತ್ನಮಯ ಸಿಂಹಾಸನದ ಮೇಲೆ ಶಿವ ಆಸೀನನಾಗಿದ್ದಾನೆ. ಹರಿ, ಬ್ರಹ್ಮ, ದೇವೇಂದ್ರಾದಿಗಳು, ದ್ವಾದಶಾದಿತ್ಯರು, ಸಪ್ತಋಷಿಗಳು, ರುದ್ರರು, ಮುನಿವರರು, ವೇದಾದಿವೇದ್ಯರು, ಗಂಧರ್ವರು, ಕಿಂಪುರುಷರು ಮುಂತಾದವರು ಶಿವನನ್ನು ಓಲೈಸಲೆಂದು ನೆರೆದುದಾಗಿ ಕವಿ ಹೇಳುತ್ತಾನೆ. (೧:೪೨-೪೩) ತರಣಿಶಶಿಗಳು ಚಾಮರ ಬೀಸುವ, ಅನಿಮಿಷರು ಜಯಘೋಷ ಮಾಡುವ, ಚತುರ್ವೇದಗಳು ಹಾಗೂ ಓಂಕಾರಾದಿಗಳ ಮಂತ್ರೋಚ್ಛಾರಣೆ ಮಾಡುವ ವಿವರವನ್ನು ಕವಿ ಕೊಡುತ್ತಾನೆ. (೧:೪೬,೪೭) ಗೌತಮ ಮುನಿಗಳ ಪುರೋಹಿತ ಸಕಲಕಲಾಪ್ರವೀಣರು ಉಪಸ್ಥಿತರಿದ್ದರೆಂದು ಕವಿ ಹೇಳುತ್ತಾನೆ. ಓಲಗ ಪ್ರಾರಂಭವಾಗುವ ಮೊದಲು ಸಂಪ್ರದಾಯದಂತೆ

ಕರ್ಣಾನಂದ ಸಂಗೀತ ಕಾರ್ಯಕ್ರಮ ನಡೆದ ವಿವರ ಕೊಡುತ್ತಾನೆ. (೧:೪೮) ಶಿವನ ಓಲಗದ ಈ ವರ್ಣನೆಗಳನ್ನು ನೋಡಿದರೆ ಭೂಲೋಕದಲ್ಲಿ ನಡೆಯುವ ಓಲಗದ ಪೂರ್ವಭಾವಿ ಸೂಚನೆಗಳಿದ್ದಂತೆ ವರ್ಣಿತವಾಗಿವೆ.

೬. ಆಡಳಿತ ವರ್ಗ– ಆಡಳಿತಾಧಿಕಾರಿಗಳು, ನೌಕರವರ್ಗ :

ರಾಜರಾದವರು ಮಂತ್ರಿಗಳ ಮೂಲಕ ಆಡಳಿತವನ್ನು ನಡೆಸುತ್ತಿದ್ದರು. ಹೀಗೆ ಆಡಳಿತಾಧಿಕಾರಿಗಳು ಅಥವಾ ಮಂತ್ರಿಗಳು ಮತ್ತು ಸೇವಕವರ್ಗದವರಿಂದ ಸಾಮ್ರಾಜ್ಯದ ಕೆಲಸಕಾರ್ಯಗಳು ನಿರಾತಂಕವಾಗಿ ನಡೆಯುತ್ತಿದ್ದವು. ಆಡಳಿತವರ್ಗದಲ್ಲಿ ಮಂತ್ರಿಗಳೆ ಅತ್ಯಂತ ಪ್ರಮುಖರಾದವರು. ಪ್ರಧಾನಿ, ದಂಡನಾಯಕ ಭಂಡಾರಿಯಂತಹ ಆಡಳಿತಗಾರರು ಇಲ್ಲಿ ನಿರೂಪಿಸಲ್ಪಟ್ಟ ಪ್ರಮುಖರು. ಭೀಮಕವಿಯು 'ಬಾಹತ್ತರ ನಿಯೋಗ' (೪೨:೭೮) ಎಂಬ ಪದ ಪ್ರಯೋಗಿಸಿದ್ದಾನೆ. ಬಾಹತ್ತರ ನಿಯೋಗವೊಂದು ಈ ಕೆಳಗಿನ ಎಪ್ಪತ್ತೆರಡು ಬಗೆಯ ನೌಕರ ವರ್ಗವನ್ನು ಸೂಚಿಸುತ್ತದೆ.೧.ಗುರು ೨. ಮಹಾಪ್ರಧಾನ (೩) ಸಾಮಂತ (೪)ಸೇನಾಪತಿ (೫) ದ್ವಾರಪಾಲಕ ೬. ಅವಸಾರಿಕಾ ೭.ಘಟಿಕಾ ನಿರ್ಧಾರಿಕಾ (ವೇಳೆಯನ್ನು ಸೂಚಿಸುವವನು) ೮.ಗಣಕ ೯.ಲೇಖಕ ೧೦.ಪೌರಾಣಿಕ ೧೧.ಪುರೋಹಿತ ೧೨.ಜ್ಯೌತಿಷಿಕ ೧೩.ಕಾವ್ಯಜ್ಞ ೧೪.ವಿದ್ವಜ್ಜನ ೧೫.ದೇವತಾರ್ಚಕ ೧೬.ಮೌಲ್ಯಾಕಾರಕ ೧೭.ಪರಿಮಳಕಾರಕ ೧೮.ಗೋಷ್ಠಾಧಿಕಾರ ೧೯.ಗಜಾಧಿಕಾರ ೨೦.ಅಶ್ವಾಧಿಕಾರ ೨೧.ಭಂಡಾರಾಧಿಕಾರ ೨೨.ಧಾನ್ಯಾಧಿಕಾರ ೨೩.ಅಂಗರಕ್ಷಕ ೨೪.ಸೂತ (ಸಾರಥಿ) ೨೫.ಸೂದ (ಅಡಿಗೆಯವನು) ೨೬.ಭೇತಾಳ ೨೭.ಮಲ್ಲ ೨೮.ತಾಂಬೂಲಿಕ ೨೯.ತಾಳವೃಂತಕ (ಗಾಳಿ ಬೀಸುವವನು) ೩೦.ನರವಾಹಕ (ರಾಜ ಮುಂತಾದವರನ್ನು ಕುಳ್ಳಿರಿಸಿ ಎತ್ತಿಕೊಂಡು ಹೋಗುವವನು) ೩೧ಚೌತ್ರಿಕ (ಸತ್ತಿಗೆಯವನು) ೩೨.ಚಾಮರಿಕ ೩೩.ಕಳಾಚಿಕ ೩೪.ಕರಶಾರಿಕಾ ೩೫.ಕರಪಾಲಿಕ (ಕರದೀಪಕಾರ) (ಕೈಯಲ್ಲಿ ಚೂರಿ ಹಿಡಿದ ಅಂಗರಕ್ಷಕ)೩೬. ಪಾದುಕಾದಾರ ೩೭ನರ್ತಕ ೩೮.ಗಾಯಕ ೩೯.ವೈಣಿಕ ೪೦.ಶಾಕುನಿಕ ೪೧.ಮಾಗಧ (ಹೊಗಳುಭಟ್ಟ) ೪೨.ವೈತಾಳಿಕ (ಬೆಳಿಗ್ಗೆ ತನ್ನ ಹಾಡಿನಿಂದ ರಾಜನನ್ನು ಎಚ್ಚರಿಸುವವನು) ೪೩.ಪರಿಹಾಸಕ ೪೪.ಕಾಂಚುಕ ೪೫. ಕ್ಷೌರಕ ೪೬. ರಜಕ ೪೭.ಸೌಚಿಕ ೪೮.ಚರ್ಮಕಾರಕ ೪೯.ಮುದ್ರಾಧಿಕಾರ ೫೦.ಪುರಪಾಲಕ ೫೧.ವನಪಾಲಕ ೫೨.ನರವೈದ್ಯ ೫೩. ಗಜವೈದ್ಯ ೫೪.ಅಶ್ವವೈದ್ಯ ೫೫. ಪಶುವೈದ್ಯ ೫೬.ಭೇರಿವಾದಕ ೫೭.ಮುರಜವಾದಕ ೫೮. ರೌಮಕ(ಉಪ್ಪು ತಯಾರಿಸುವನು) ೫೯. ಶಿಲಾಚ್ಛೇದಕ ೬೦. ಕಾಂಸ್ಯಕಾರಕ ೬೧.ಕುಂಭಕಾರಕ ೬೨. ಚಿತ್ರಕಾರಕ ೬೩.ವ್ಯಾವಹಾರಿಕ ೬೪.ಮೃಗಯಾರ್ಥಿ ೬೫.ಪಕ್ಷಿಪೋಷಕ ೬೬.ಪಣಿಹಾರಕ (ಹಾವಿನ ವಿಷವನ್ನಿಳಿಸುವವನು) ೬೭ರಾಯಭಾರ ೬೮.ಉಗ್ರಾಣಾಧಿಕಾರ ೬೯.ವೇಶ್ಯಾಜನ ೭೦.ಬಂಟು ೭೧.ಸ್ವರ್ಣಕಾರ ೭೨.ಕಠಾರಿಕ. (೧೯೮೩, ಪು.೨೧೪) ರಾಜನನ್ನು ಹೊರತುಪಡಿಸಿ ಅರಮನೆಯ ಎಲ್ಲ ನೌಕರವರ್ಗವನ್ನು

ಇದು ಸೂಚಿಸುತ್ತದೆ. ಭೀಮಕವಿಯು ಈ ಮೇಲಿನ ಎಪ್ಪತ್ತೆರಡು ನೌಕರವರ್ಗದವರ ವಿವರಗಳನ್ನು ಕೊಡದಿದ್ದರೂ ಪ್ರಮುಖವಾದ ಕೆಲವು ಕೆಲಸಗಾರರ ವಿವರಗಳು ಇಲ್ಲಿ ದೊರೆಯುತ್ತವೆ.

ಅ. ಪ್ರಧಾನಿ :

ಅರಸನಿಗೆ ಆಡಳಿತದಲ್ಲಿ ಸಲಹೆ ನೀಡಲು ಮಂತ್ರಿವರ್ಗವೊಂದಿರುತ್ತಿತ್ತು. ಬಿಜ್ಜಳನ ಆಸ್ಥಾನದಲ್ಲಿ ಹನ್ನೆರಡು ಜನ ಮಂತ್ರಿಗಳಿದ್ದ ಉಲ್ಲೇಖವನ್ನು ಕವಿ ಕೊಡುತ್ತಾನೆ. (೫:೧೮) ಇವರಲ್ಲಿ ಪ್ರಧಾನ ಮತ್ತು ಹಿರಿಯ ಪ್ರಧಾನವೆಂಬ ವರ್ಗವಿತ್ತು. ಬಸವಪುರಾಣದಲ್ಲಿ ಪ್ರಧಾನ ಮತ್ತು ಮಂತ್ರಿ ಇವು ಬೇರೆ ಬೇರೆ ಎಂಬರ್ಥದಲ್ಲಿ ಕಂಡುಬರುತ್ತದೆ.

ಆ. ಪ್ರಧಾನನ ಆಯ್ಕೆ ಮತ್ತು ಗುಣಲಕ್ಷಣಗಳು :

ಬಿಜ್ಜಳನ ಓಲಗದಲ್ಲಿ ವಿವಿಧ ಮಂತ್ರಿಗಳಿದ್ದರು. ರಾಜಪುರೋಹಿತರಿದ್ದರು. ಅಗ್ರಹಾರದ ವಿಪ್ರರಿದ್ದರು. ಆದರೂ ಸಹ ಮನಕ್ಕೆ ಒಪ್ಪುವ ಒಬ್ಬರೂ ಇರಲಿಲ್ಲವೆಂಬುದು ತೋರುತ್ತದೆ. ಹಾಗಾಗಿಯೇ ಆತ ಬಲದೇವ ಸಚಿವನು ತೀರಿಕೊಂಡಾಗ ಓಲಗದಲ್ಲಿ "ಒಲಿವ ಹಿತವರು ಸೋದರರು ಮಕ್ಕಳುಗಳಾರಾಯ್ತಾದಡೀತನ ಬಲುನಿಯೋಗವನೆಲ್ಲಂ ಪ್ರತಿಪಾಲಿಸುವರೊಳರೆ" (೫:೪) ಎಂದು ಪ್ರಶ್ನಿಸುತ್ತಾನೆ. ಅಲ್ಲಿಯ ಜನರೆಲ್ಲರೂ ಒಕ್ಕೊರಲಿನಿಂದ "ಮಹಾರಾಜೇಂದ್ರ ಉಂಟು ವಿನಯವಾಕ್ಯಂ ನಿಮ್ಮ ರಾಜ್ಯವನುದ್ಧರಿಸಲಾಪ ಅನಘನತಿಬಳನಖಿಳಪಾವನದನಿಧಿಯಾತನದೆಂತೆನಲು ಭೂವಿನುತ ಸಂಗಮದೇವನಿಂ ಪಡೆದನು ಪ್ರಸನ್ನತೆಯ ಜನವವಜೆಯಲಂತಾಗಿಯಾತನು ನಿನಗೆ ಮಂತ್ರಿತನಕ್ಕೆ ತಕ್ಕವನು" (೫:೫,೬) ಎಂದು ಪುರದ ಜನ ಬಸವಣ್ಣನವರ ಪರಿಚಯ ಮಾಡಿಕೊಡುತ್ತ ಅವನೇ ಮಂತ್ರಿತನಕ್ಕೆ ತಕ್ಕವನೆಂದು ಹೇಳುತ್ತಾರೆ. ಬಿಜ್ಜಳನು ಬಸವನವರಲ್ಲಿಗೆ ನಿರೂಪವನ್ನು ಕಳಿಸುವನು. ಬಸವಣ್ಣನವರು ಬಿಜ್ಜಳನ ಕೋರಿಕೆಯಂತೆ ಮಂತ್ರಿಪದವಿಯನ್ನು ಸ್ವೀಕರಿಸುವರು. ಬಿಜ್ಜಳನು ೭೦೦ ಮದ್ದಾನೆ, ೯೦,೦೦೦ ಕುದುರೆ, ೧ ಲಕ್ಷ ೯೮,೦೦೦ ಕಾಲಾಳುಗಳೊಂದಿಗೆ ಹನ್ನೆರಡು ಮಂದಿ ಭಂಡಾರಿಗಳೊಳಗೆ ಹಿರಿಯ ಭಂಡಾರಿಯಾಗಿ ಬಸವಣ್ಣನವರನ್ನು ನೇಮಕ ಮಾಡುವನು. (೫:೧೮)

ಒಂದು ದಿನ ಸಭೆಯ ನಡುವೆ ಆಗಸದಿಂದ ಬಿದ್ದ ಓಲೆಯನ್ನು ಓದಿ ಬಿಜ್ಜಳನ ಸಿಂಹಾಸನದ ಕೆಳಗಿದ್ದ ಅಪಾರ ನಿಧಿಯನ್ನು ತೋರಿಸಿ ಕೊಡುವರು.ತಮ್ಮನ್ನು ಸಲಹಲೆಂದೇ ಬಸವಣ್ಣನವರು ಜನಿಸಿ ಬಂದಿರುವನೆಂದು ನಂಬಿದ ಬಿಜ್ಜಳ ಅವನನ್ನು ಗದ್ದುಗೆಯಲ್ಲಿ ಕುಳ್ಳಿರಿಸಿ ಮನ್ನಣೆವೆತ್ತ ಹನ್ನೆರಡು ಮಂದಿ ಅಮಾತ್ಯರೊಳಗೆ ಮುಖ್ಯಸ್ಥನನ್ನಾಗಿ ನೇಮಕ ಮಾಡುವನು. (೫:೬೫)

ಮೇಲಿನ ಸಂದರ್ಭಗಳನ್ನು ಅನುಲಕ್ಷಿಸಿದರೆ ಬಸವಣ್ಣನವರ ಈ ಆಯ್ಕೆ ಪ್ರಸಂಗವು ನೇರ ಮಾದರಿಯದಾಗಿದೆ. ಜೊತೆಗೆ ವಂಶಪಾರಂಪರ್ಯವಾಗಿ ಅಥವಾ ಅವರ ಸಂಬಂಧಿಕರಲ್ಲಿ

ಮಂತ್ರಿಗಳ ಆಯ್ಕೆ ನಡೆಯುತ್ತಿತ್ತೆಂದು ಕಂಡುಬರುತ್ತದೆ. ಬಹುಮುಖ್ಯವಾಗಿ ಈ ಸಂದರ್ಭಗಳು 'ಮಂತ್ರಿ' ಮತ್ತು 'ಪ್ರಧಾನಮಂತ್ರಿ' ಬೇರೆ ಬೇರೆಯೇ ಎಂದು ಕಂಡುಬರುತ್ತದೆ. ಮೊದಲು ಬಿಜ್ಜಳನು ಹನ್ನೆರಡು ಮಂತ್ರಿಗಳಲ್ಲಿ ಒಬ್ಬರೆಂದು ಪರಿಗಣಿತರಾದರೆ ಲಿಪಿಯ ಪವಾಡದಿಂದ ಅವರು ಪ್ರಧಾನಿಯಾದರೆಂದು ಭಾವಿಸಬಹುದು. ಇಲ್ಲಿಯ ಲಿಪಿಯ ಪವಾಡ ಹೊರತುಪಡಿಸಿದರೆ ಬಸವಣ್ಣನವರು ಯೋಗ್ಯತೆಯಿಂದಲೇ ಪ್ರಧಾನಿಯಾದರೆಂದು ಹೇಳಬಹುದು. 'ಬಡ್ತಿಕೊಟ್ಟ' ಪ್ರವರವೂ ಇಲ್ಲಿ ಉಲ್ಲೇಖಿತವಾದದ್ದನ್ನು ಗಮನಿಸಬಹುದು. ಹರಿಹರನ ಬಸವರಾಜದೇವರ ರಗಳೆಯಲ್ಲಿ ಕರಣಿಕ ಸ್ಥಾನದಿಂದ ಬಸವಣ್ಣನವರು ಮಂತ್ರಿಯಾದ ವಿವರಗಳು ಹೇಳಲ್ಪಟ್ಟಿವೆ. ಅಂದರೆ ಸಚಿವರಿಗಿಂತಲೂ ಪ್ರಧಾನನ ಕರ್ತವ್ಯಗಳು ಭಿನ್ನವಾಗಿ ಕಂಡುಬರುತ್ತವೆ. ಪ್ರಧಾನನ ಗುಣಲಕ್ಷಣಗಳು:೧.ಅರಸನ ಚಿತ್ತಕ್ಕೆ ಮನಸ್ಸಿಗೆ ಅನುಕೂಲನಾದವನು.೨.ಬುದ್ಧಿವಂತನೂ ನೀತಿವಿದನೂ ಸಮ್ಮಾನಿಯೂ ಆದವನು ೩.ಸಜ್ಜನ, ಭಾವಜ್ಞ ಅತಿನಿಯತ ಸಕಲಕಲಾಕೋವಿದನಾದವನು. (ಪಾಟೀಲ ಸದಾನಂದ, ೧೯೯೯, ಪು.೯೧) ಇಂತಹ ಗುಣವುಳ್ಳವರು ಪ್ರಧಾನಿಯಾಗಲು ಸಾಧ್ಯವಿತ್ತೆಂದು ಹೇಳಬಹುದು. ಈ ಸದ್ಗುಣಗಳನ್ನು ಅಂತರ್ಗತ ಮಾಡಿಕೊಂಡದ್ದರಿಂದಲೇ ಬಸವಣ್ಣನವರು ಬಿಜ್ಜಳನ ಪ್ರಧಾನಿಯಾಗಿದ್ದರೆನ್ನಲು ಪುರಾಣದಲ್ಲಿ ಉಲ್ಲೇಖ ಕಂಡುಬರುತ್ತದೆ.ಬಿಜ್ಜಳ ಹೇಳುವ "ಸಾಕಿನ್ನೊಪ್ಪದಿಂ ಭಂಡಾರದೊಡೆತನಮುಂ ಪ್ರಧಾನಿಕೆಯ" (೧೦:೭) ಎಂಬ ಮಾತಿನಿಂದ ಇದನ್ನು ಕಂಡುಕೊಳ್ಳಬಹುದು.

೩. ಭಂಡಾರ-ಭಂಡಾರಿ :

ಪುರಾಣದಲ್ಲಿ ಬಸವಣ್ಣನವರನ್ನು ಕುರಿತು 'ದಂಡನಾಯಕ', (೭:೧೯) 'ಭಂಡಾರಿ'(೩೦:೧೭) ಎಂಬ ಅಭಿದಾನಗಳಿಂದ ಕರೆದದ್ದು ಕಂಡುಬರುತ್ತದೆ. ಅಂದರೆ ಬಸವಣ್ಣನವರು ಒಂದಕ್ಕಿಂತ ಹೆಚ್ಚು ಹುದ್ದೆಗಳನ್ನು ನಿರ್ವಹಿಸಿರಲಿಕ್ಕೆ ಸಾಧ್ಯವಿದೆ ಎಂದು ಭಾವಿಸಬಹುದು. ಬಸವಣ್ಣನವರು ಭಂಡಾರಿಯಾಗಿ ಕೆಲಸ ಮಾಡಿದ್ದನೆನ್ನುವುದಕ್ಕೆ ಅವರವೇ ಆದ ವಚನಗಳು ಸಾಕ್ಷಿ ನುಡಿಯುತ್ತವೆ. "ಸೂಳೆಗೆ ಹುಟ್ಟಿದ ಕೂಸಿನಂತೆ ಆರನಾದಡೆಯೂ ಅಯ್ಯಾ, ಅಯ್ಯಾ ಎನಲಾರೆ. ಚೆನ್ನಯ್ಯನೆಮ್ಮಯ್ಯನು, ಚೆನ್ನಯ್ಯನ ಮಗ ನಾನು, ಕೂಡಲಸಂಗನ ಮಹಾಮನೆಯಲಿ ಧರ್ಮಸಂತಾನಿ ಭಂಡಾರಿ ಬಸವಣ್ಣನು" (ಸ.ವ.ಸಂ.೧, ವ.೩೪೭)ಎಂಬ ವಚನದಲ್ಲಿ ಇವನ್ನು ಕಂಡುಕೊಳ್ಳಬಹುದು. ಇನ್ನೊಂದು ಸಂದರ್ಭದಲ್ಲಿ 'ತಡತಂಡದ ಪೆರ್ಬಲಕೆ ಮುಂಕೊಂಡು ಜೀವಿತಮಂ ಕೊಡುವೆಡೆಗೆ' (೧೦:೨) ಎಂಬ ಕವಿಯ ಮಾತುಗಳು ರಾಯನ ಸೈನ್ಯಕ್ಕೂ ಹಾಗೂ ಇತರ ಸೇವಕವರ್ಗಕ್ಕೂ 'ಜೀವಿತ'ವನ್ನು ಕೊಡುವ ಉಲ್ಲೇಖದಿಂದ ಆ ಭಂಡಾರಿ ಸಚಿವನಾದ್ದರಿಂದಲೇ ಈ ಕಾರ್ಯ ನಡೆದಿರಲು ಸಾಧ್ಯವೆನಿಸುತ್ತದೆ. ಮಿಂಡಜಂಗಮರೂ ಸಹ ಬಸವಣ್ಣನವರಿಂದ ಪಡಿ ಪಡೆಯುವ ಉಲ್ಲೇಖವು ದೊರೆಯುತ್ತದೆ. (೧೧:೧,೨) ಈ ನಿದರ್ಶನಗಳಿಂದ ಬಸವಣ್ಣನವರು ಭಂಡಾರಿಯಾಗಿದ್ದನೆಂದು ಸ್ಪಷ್ಟವಾಗಿ ಒಪ್ಪಿಕೊಳ್ಳಬಹುದು.

ಬಸವಣ್ಣನವರು ಭಂಡಾರಿಯಾಗಿ ಅತ್ಯಂತ ಸಮರ್ಥನಾಗಿ ಕಾರ್ಯನಿರ್ವಹಿಸಿದನೆಂದು ಹೇಳಬಹುದು. "ರಾಜ್ಯಾಡಳಿತದಲ್ಲಿ ಹೆಚ್ಚಿನ ಆಸಕ್ತಿ ರಾಜ್ಯ ವಿಸ್ತರಣಕ್ಕೆ. ಎರಡನೆಯ ಪ್ರಮುಖ ಆಸಕ್ತಿ ರಾಜ್ಯಾದಾಯ ಹೆಚ್ಚಿಸುವುದಕ್ಕೆ". ಸಪ್ತಾಂಗ ವಿವರಣೆ ಕೊಡುತ್ತ ಕಲಬುರ್ಗಿಯವರು "ಭಂಡಾರವು ಸಪ್ತಾಂಗದ ಮಿಕ್ಕ ಆರು ಅಂಗಗಳನ್ನು ಪೋಷಿಸುವ ಜೀವಶಕ್ತಿ" ಎನ್ನುತ್ತಾರೆ. "ಆಗಾಗ ಯುದ್ಧದಲ್ಲಿ ಅಪಹರಿಸಿ ತಂದ ಸಂಪತ್ತು, ಅಧೀನ ರಾಜರಿಂದ ಪ್ರತಿವರುಷ ಬರುವ ಕಪ್ಪಕಾಣಿಕೆ, ಸ್ಥಳೀಯ ಮೂಲಗಳಿಂದ ನಿರಂತರ ಬರುವ ಸುಂಕ ಇತ್ಯಾದಿಗಳಿಂದ ಬೆಳೆದ ಸಂಪತ್ತಿನ ಮೊತ್ತವೆ ಭಂಡಾರ. ಇದನ್ನು ನೋಡಿಕೊಳ್ಳುವವ ಭಂಡಾರಿ ಅಥವಾ ಭಂಡಾರಿ ಸಚಿವ." (ಕಲಬುರ್ಗಿ ಎಂ.ಎಂ. ಶರಣ ಸೌರಭ, ಪು.೫೪) ಭೀಮಕವಿಯು ಬಸವಣ್ಣನವರನ್ನು ಅನೇಕ ಸಂದರ್ಭಗಳಲ್ಲಿ ಭಂಡಾರಿಯೆಂದೂ ಉಲ್ಲೇಖಿಸುತ್ತಾನೆ.

ರಾಜ್ಯಾದಾಯದ ವಿವರವೆಲ್ಲ ಭಂಡಾರಿಗೆ ಗೊತ್ತಿರುತ್ತಿತ್ತು. ಭಂಡಾರ ವಿನಿಯೋಗವೇ ಭಂಡಾರಿಯ ಮುಖ್ಯ ಕರ್ತವ್ಯವಾಗಿತ್ತು. ಕೂಡಿದ ಸಂಪತ್ತು ವಿನಿಯೋಗಿಸಿದ ವೆಚ್ಚಗಳ ಲೆಕ್ಕವನ್ನು ಅರಸರಿಗೆ ನೀಡುವುದು ಭಂಡಾರಿಯ ಕರ್ತವ್ಯವಾಗಿತ್ತು. ಅದಕ್ಕಾಗಿ ಭಂಡಾರಿಯ ಕೈಕೆಳಗೆ ಗಣಕಶಾಲೆ, ಕರಣಿಕರ ಸಮೂಹವಿರುತ್ತಿತ್ತು. ಮಿಂಡಜಂಗಮರಿಗೆ ಪೆಟ್ಟಿಗೆಯ ಹೊನ್ನನ್ನೆಲ್ಲ ಕೊಟ್ಟನೆಂದು ವಿಪ್ರರು ಚಾಡಿ ಹೇಳಿದಾಗ ಕೆರಳಿದ ಬಿಜ್ಜಳನು "ನಮ್ಮ ಧನವಂ ತಪ್ಪದೊಪ್ಪಿಸಿಹೋಗು" (೧೦:೨) ಎಂದು ಆದೇಶಿಸುತ್ತಾನೆ. ಇದನ್ನೆ ಹರಿಹರ "ನಿಂದ ಹೊನ್ನಿಂಗೆ ನಿರ್ಣಯಮಂ ಕೊಡುವುದು" (ಪು.೧೪೧) ಎನ್ನುತ್ತಾನೆ. ಆಗ ಬಸವಣ್ಣನವರು

ಬಿಡುಬಿಡಾ ಸಂದೇಹಮಂ ನಿ
ನ್ನೊಡವೆಯಲ್ಲದು ನಮ್ಮೊಡೆಯರುಗ
ಳೊಡವೆಯನೆ ಒಡೆಯರ್ಗೆ ಕೊಟ್ಟೆನದಲ್ಲದೇ ನಿನ್ನ
ಒಡವೆಯೊಳಗರೆ ಕಾಣೆಯುಂ ಸವೆ
ದಡೆ ಬಳಿಕ ನಾಂ ಭಕ್ತನಲ್ಲೆ
ಮುಡುಪಿನೆಣಿಕೆಗೆ ಕುಂದದಂತೆ ವಿಚಾರಿಸೈಯೆನುತ......(೧೦: ೧೪)

ಹೀಗೆ ಪೆಟ್ಟಿಗೆಗಳನ್ನು ತೆಗೆದು ತೋರಿಸಿದಾಗ ಧನವು ಇದ್ದಂತೆಯೇ ಇತ್ತೆಂದು ಕವಿ ಹೇಳುತ್ತಾನೆ. (೧೦:೧೫) ಈ ಸಂದರ್ಭಗಳಲ್ಲೆಲ್ಲ ಬಸವಣ್ಣನವರು ಬಿಜ್ಜಳನ ಭಂಡಾರಿಯಾಗಿದ್ದರೆಂಬುದನ್ನು ಒತ್ತಿ ಹೇಳುತ್ತಾನೆ. ಅಷ್ಟೇ ಅಲ್ಲ ಬಸವಣ್ಣನವರಂತಹ ಭಂಡಾರಿ ಕಾಕಭಾಜನವಾಗಿ ಹೋಗುವ ಭಂಡಾರವನ್ನು ಶಿವಭಕ್ತರಿಗೆ ವಿನಿಯೋಗಿಸಿರಲೂ ಸಾಧ್ಯವಿದೆ ಎಂಬುದರ ಸೂಚನೆಗಳು ಹೊಳೆಯುತ್ತವೆ. ಕಾಯಕವೇ ಕೈಲಾಸವೆಂಬ ಅವನ ದುಡಿಮೆಯ ಸಿದ್ಧಾಂತದಂತೆ ಭಂಡಾರ ವರ್ಧಿಸಿತ್ತು. ಇಂತಹ ಭಂಡಾರದ ದುರ್ವಿನಿಯೋಗ ತಪ್ಪಿಸಿ ಶಿವಭಕ್ತರಿಗೆ ಸದ್ವಿನಿಯೋಗ ಮಾಡುವ ಆ ರೀತಿಯ ಚಟುವಟಿಕೆಗಳನ್ನು ಬಸವಣ್ಣನವರು ಕೈಗೊಂಡಿದ್ದನೆಂಬುದರಲ್ಲಿ ಯಾವ ಸಂಶಯವೂ ಇಲ್ಲವೆಂದು ಕಾಣುತ್ತದೆ. ಈ ಸಂದರ್ಭವನ್ನು ಕುರಿತಂತೆ ಕಲಬುರ್ಗಿಯವರ ಅಭಿಪ್ರಾಯ ಸಾಧುವಾಗಿದೆ. ಕಲ್ಯಾಣ ಕ್ರಾಂತಿಗೆ ಮದುವೆ ನೆಪ ಮಾತ್ರವಾಗಿದೆ. ರಾಜ್ಯಭಂಡಾರದ

ಒಡೆತನವನ್ನು ಬಸವಣ್ಣನವರು ಅರಸನಿಂದ ತಪ್ಪಿಸಿ ಅದನ್ನು ದುಡಿಯುವ ಭಕ್ತರ ಮತ್ತು ದುಡಿಮೆಗಾರರ, ಪ್ರಜೆಗಳದನ್ನಾಗಿಸಿದ್ದಕ್ಕೆ ರಾಜವರ್ಗ, ಪುರೋಹಿತವರ್ಗದವರು ಅಸಮಾಧಾನಗೊಂಡರೆಂದು ವಿಶ್ಲೇಷಿಸುತ್ತಾರೆ. (ಶರಣ ಸೌರಭ, ಪು.೫೪-೫೭) ಈ ಹಿನ್ನೆಲೆಯಲ್ಲಿ ಭಂಡಾರ ಪೆಟ್ಟಿಗೆಯ ಪವಾಡ ಜನತೆಯ ದೃಷ್ಟಿಯಲ್ಲಿ ಬಸವಣ್ಣನವರನ್ನು ಅಪರಾಧಿಯನ್ನಾಗಿಸುವ ಬಿಜ್ಜಳನ ಮನೋಭಾವವನ್ನು ಎತ್ತಿ ತೋರಿಸುತ್ತದೆ.

ಈ. ದಂಡನಾಥ ಅಥವಾ ದಣ್ಣಾಯಕ :

'ಬಸವದಂಡನಾಥ', 'ದಂಡನಾಥಗ್ರೇಶ್ವರಂ' (೧೦:೨) ಎಂಬ ಪದಗಳ ಉಲ್ಲೇಖ ನೋಡಿದರೆ ಬಸವಣ್ಣನವರು ದಂಡನಾಯಕ ಅಥವಾ ದಣ್ಣಾಯಕನಾಗಿದ್ದರೆಂಬುದಕ್ಕೆ ಈ ಪದಗಳು ಪುಷ್ಠಿ ಕೊಡುತ್ತವೆ. ಸೇನೆಯ ಅಧಿಪತಿ ಎಂಬರ್ಥ ಕೊಡುವ ದಂಡನಾಥ ಪದವಿ ಪ್ರಾಚೀನ ಕಾಲದಲ್ಲಿ ಆಡಳಿತಕ್ಕೆ ಅನ್ವಯಿಸುವಂತಹ ಅಧಿಕಾರವಾಗಿದೆ. ನಾಗಯ್ಯನವರು 'ದಂಡ' ಶಬ್ದಕ್ಕೆ ಧಾರ್ಮಿಕ ವಲಯದ ಅರ್ಥ ಅನ್ವಯಿಸಿ "ದೀಕ್ಷೆಯಂಥ ಧಾರ್ಮಿಕ ಕಾರ್ಯದಲ್ಲಿ ವಟುಗಳಿಗೆ ಹಿಡಿಯಲು ದಂಡವನ್ನು ಕೊಡುತ್ತಾರೆ. ಸನ್ಯಾಸಿಗಳು, ಸ್ವಾಮಿಗಳು ದಂಡವನ್ನು ಹಿಡಿದಿರುತ್ತಾರೆ. ಹೀಗೆ ಹುದ್ದೆ ಸ್ವೀಕರಿಸುವ ಸಂದರ್ಭದಲ್ಲಿ ರಾಜನಿಂದ ದಂಡವನ್ನು ಸಾಂಕೇತಿಕವಾಗಿ ಪಡೆಯುತ್ತಿರುವುದೇ 'ದಂಡನಾಯಕ' ಹೆಸರು ರೂಢಿಗೆ ಬರಲು ಕಾರಣವಾಗಿರಬಹುದು" (ಆರನೆಯ ವಿಕ್ರಮಾದಿತ್ಯನ ಶಾಸನಗಳು: ಒಂದು ಅಧ್ಯಯನ, ಪು.೩೨೦) ಎಂದು ವಿವರಿಸುತ್ತಾರೆ. ಆದರೆ ಈ ಅಭಿಪ್ರಾಯವನ್ನು ಬಸವಣ್ಣನವರ ವಿಷಯದಲ್ಲಿ ಒಪ್ಪಲು ಸಾಧ್ಯವಾಗುವುದಿಲ್ಲ. ಏಕೆಂದರೆ ಬಸವಣ್ಣನವರು 'ಕರಣಿಕನಾಗಿ', 'ಮಂತ್ರಿಯಾಗಿ' ಯೋಗ್ಯತೆಯಿಂದ ಈ ಹುದ್ದೆಗಳೆಲ್ಲವನ್ನು ನಿರ್ವಹಿಸಿದರೆಂದು ಹೇಳಬಹುದು. ಹಾಗಾಗಿಯೇ ಪುರಾಣದಲ್ಲಿ ಈ ಎಲ್ಲ ಹುದ್ದೆಗಳ ಹೆಸರುಗಳು ಕೆಲವೊಮ್ಮೆ ನೇರವಾಗಿ ಹಾಗೂ ಕೆಲವೊಮ್ಮ ಪರ್ಯಾಯವಾಗಿ ಬಳಕೆಗೊಂಡಿವೆ. ಅಲ್ಲದೇ ಇವರು ದಂಡಾಧಿಕಾರಿಯಾಗಿದ್ದರೆನ್ನುವುದಕ್ಕೆ ಅವರವೇ ಆದ ಅನೇಕ ವಚನಗಳು ದೊರೆಯುತ್ತವೆ. ಈ ಕುರಿತು 'ಯುದ್ಧಕಲೆ ತಿಳಿದ ಬಸವೇಶ್ವರನು' ಎಂಬ ಲೇಖನದಲ್ಲಿ ಡಾ.ಫ.ಗು. ಹಳಕಟ್ಟಿಯವರು ಬಸವಣ್ಣನವರ ಸುಮಾರು ಇಪ್ಪತ್ತಾರು ವಚನಗಳನ್ನು ಉದಾಹರಿಸಿ ದಂಡನಾಯಕರಾಗಿದ್ದರು ಹಾಗೂ ಯುದ್ಧಕಲೆ ತಿಳಿದಿದ್ದರೆಂಬುದನ್ನು ಸೋದಾಹರಣವಾಗಿ ವಿವರಿಸುತ್ತಾರೆ. (ಸಮಗ್ರ ಸಾಹಿತ್ಯ ಸಂಪುಟ-೧೧, ಪು.೧೦೪-೦೮) ಹೀಗೆ ಪುರಾಣದಲ್ಲಿ 'ದಂಡನಾಥ', 'ದಂಡನಾಥಗ್ರೇಶ್ವರಂ' ಎಂಬ ಪದಗಳ ಆಧಾರದಿಂದ ಈ ಹುದ್ದೆಯನ್ನು ಇವರು ನಿರ್ವಹಿಸಿರಲು ಸಾಧ್ಯವಿದೆ ಎಂದು ಹೇಳಬಹುದು. ಆ ಕಾರಣದಿಂದಲೆ ಅವರು ಮತ್ತಷ್ಟು ಪ್ರಭಾವಶಾಲಿಯಾಗಿದ್ದನೆಂದು ಹೇಳಬಹುದು.

ಸೊಡ್ಡಳ ಬಾಚರಸನೆಂಬ ಶರಣನು ಬಿಜ್ಜಳನಲ್ಲಿ ಕೊಠ್ಠಾರದ (ಉಗ್ರಾಣಾಧಿಕಾರಿ) ಅಧಿಕಾರಿಯಾಗಿ ಕೆಲಸ ನಿರ್ವಹಿಸಿದ ಉಲ್ಲೆಖ ದೊರೆಯುತ್ತದೆ. (೫೨:೧೨) ಇಷ್ಟನ್ನು ಹೊರತುಪಡಿಸಿ ಇನ್ನುಳಿದಂತೆ ಪ್ರಮುಖ ಅಧಿಕಾರಿವರ್ಗದ ಉದಾಹರಣೆಗಳು ಪುರಾಣದಲ್ಲಿ ಕಂಡುಬರುವುದಿಲ್ಲ.

ಉ. ಸ್ಥಾನಮಾನ ವಸತಿ :

ಚಕ್ರವರ್ತಿ ನಂತರ ಪ್ರಧಾನಿಗಳು ಅಧಿಕಾರ ಚಲಾಯಿಸುವ ಆಧಿಪತ್ಯ ಹೊಂದಿದ್ದರು. ಬಿಜ್ಜಳ 'ಪಿರಿಯಗದ್ದುಗೆ' ಯಲ್ಲಿ ಬಸವಣ್ಣನವರನ್ನು ಕುಳ್ಳಿರಿಸಿ ಮಂತ್ರಿಸ್ಥಾನ ಕೊಡುವ ವಿವರವನ್ನು ಕೊಡುತ್ತಾನೆ. (೫:೬೫) "ಬಸವರಾಜಾ ನಿನ್ನನೆಲ್ಲಾ ದೆಸೆಗೆ ನಂಬಿದೆನೆನುತ" (೫:೬೭) ಅಧಿಕಾರಮನ್ನಣೆ ಕೊಟ್ಟದ್ದನ್ನು ಗಮನಿಸಬೇಕು. ಬಸವಣ್ಣನವರಿಗೆ "ಮಣಿಭೂಷಂಗಳನಿತ್ತು ಸತತಾನಂದಹರುಷಿತಚಿತ್ತದಿಂದಂ" ಕಳುಹಿಸಿ ಕೊಟ್ಟನೆಂದು ಬರೆಯುತ್ತಾನೆ. ಬಿಜ್ಜಳನಿಂದ ಬೀಳ್ಕೊಂಡ ಬಸವಣ್ಣನವರು "ಬಲದೇವೋತ್ತಮನ ಪಿರಿಯರಮನೆಯೆ ತನ್ನರಮನೆಯದಾಗೆ ಬಂದು ತನ್ನ ನಿಯೋಗದೋಲಗದಿಂದ ಶಿವಕೇಳೀವಿನೋದಾನಂದಸುಖದಿಂ ವರ್ಧಮಾನೈಶ್ವರ್ಯನಾಗಿಂತು" (೫:೭೦,೭೧) ಎಂಬ ಕವಿಯ ಮಾತುಗಳು ಮಂತ್ರಿಗಳಿಗೆ ಅರಸನಂತೆ ವಾಸಿಸಲು ಅರಮನೆಯೊಂದನ್ನು ನೀಡಲಾಗುತ್ತಿತ್ತು ಎಂಬುದನ್ನು ಕಂಡುಕೊಳ್ಳಬಹುದು. ರತ್ನಖಚಿತ ನವ್ಯಾಭರಣ ನವದುಕೂಲಗಳನ್ನು ಇಡತೊಡಲು ಪ್ರಧಾನಿಗಳಿಗೆ ನೀಡಲಾಗುತ್ತಿತ್ತೆಂಬ ಅಂಶಗಳು ತಿಳಿಯುತ್ತವೆ. ಸಾಕಷ್ಟು ಐಶ್ವರ್ಯವಂತರಾಗಿದ್ದು ಇತರ ಮಂತ್ರಿಗಳಿಗಿಂತ ಸ್ಥಾನಮಾನಗಳಲ್ಲಿ ಉಚ್ಚಮಟ್ಟದವರಾಗಿದ್ದರೆನ್ನುವುದು ಕಂಡುಬರುತ್ತದೆ.

ಬಸವಣ್ಣನವರು ಒಂದು ಸಲ ಶಿವಯೋಗನಿದ್ರಾಮುದ್ರೆಯೊಳಿದ್ದಾಗ ಜಂಗಮನೊಬ್ಬ ಬಂದನು. ದ್ವಾರಪಾಲಕನಿಂದ ವಿಷಯ ತಿಳಿದ ಅವನು ಹಾಗೆಯೇ ತಿರುಗಿ ಹೋದ ಉಲ್ಲೇಖವನ್ನು ಕವಿ ಕೊಡುತ್ತಾನೆ. (೩೪:೪೨) ಇದರಿಂದ ಅರಸನಿಗಿರುವ ಎಲ್ಲ ಸೌಲಭ್ಯ ಅನುಕೂಲಗಳನ್ನು ಮಂತ್ರಿಗಳು ಹೊಂದಿದ್ದರೆಂಬ ಅಂಶ ತಿಳಿಯುತ್ತದೆ.

ಊ. ಕರಣಿಕರು–ಕರಣಸಾಲೆ :

ಭಂಡಾರಿಯ ನಂತರ ಕರಣಿಕರ ಹುದ್ದೆ ಅರಮನೆಯಲ್ಲಿ ಅತ್ಯಂತ ಮುಖ್ಯವಾದದ್ದು. 'ಗಣಕ', 'ಕರಣಿಕ', 'ಲೆಕ್ಕಿಗ'ಎಂಬ ಪದಪ್ರಯೋಗಗಳ ಮೂಲಕ ಈ ಸಿಬ್ಬಂದಿಗಳನ್ನು ಗುರುತಿಸುತ್ತಿದ್ದರು. ಬಿಜ್ಜಳನ ಅರಮನೆಯಲ್ಲಿ ವಿವಿಧ ಭಾಷೆಯನ್ನು ಬಲ್ಲ ಕರಣಿಕರಿದ್ದರೆಂಬ ಉಲ್ಲೇಖ ದೊರೆಯುತ್ತದೆ. ಬಿಜ್ಜಳ ಒಡ್ಡೋಲಗಂಗೊಟ್ಟು ಕುಳಿತ ಸಂದರ್ಭದಲ್ಲಿ ಆಗಸದಿಂದ ಹರಲಿಖಿತವಾದ ಓಲೆಯೊಂದು ಬಿದ್ದಿತು. ಆಗ ಬಿಜ್ಜಳನು "ತೆಲುಗಲಿಪಿ, ನಾಗರದಲಿಪಿ, ಗ್ರಂಥಲಿಪಿ, ಹಳಗನ್ನಡದ ಲಿಪಿ, ದ್ರಾವಿಳಲಿಪಿ, ಪಾರಿಸಲಿಪಿ, ಲಾಳಲಿಪಿ" (೫:೫೩) ಮುಂತಾದ ಹಲವು ಲಿಪಿಗಳನ್ನೋದಬಲ್ಲ ಕರಣಿಕರನ್ನು

ಕರೆಸಿ ಓದಲು ಹೇಳಿದ ಸಂದರ್ಭವನ್ನು ಕವಿ ವಿವರಿಸುತ್ತಾನೆ. ಇದರಿಂದ ವಿವಿಧ ಭಾಷೆಯಲ್ಲಿ ತಜ್ಞರಾದ ಕರಣಿಕರು ಅರಮನೆಯಲ್ಲಿ ಇರುತ್ತಿದ್ದರೆಂದು ಸ್ಪಷ್ಟವಾಗುತ್ತದೆ. ಈ ಕರಣಿಕರಿಗೆ ಪ್ರತ್ಯೇಕವಾದ ವೇಷಭೂಣಗಳಿದ್ದವೆಂದು ಹರಿಹರ ಹೇಳುತ್ತಾನೆ. (ಪು.೪೪)

ಅರಮನೆ, ಆಸ್ಥಾನ, ಓಲಗದ, ನಂತರ ಪ್ರಮುಖ ಸ್ಥಾನ ಪಡೆಯುವಂತದ್ದೆಂದರೆ ಕರಣಸಾಲೆ. ಇಲ್ಲಿಗೆ ಬಂದು ಅರಮನೆಯ ಸೈನಿಕ ವರ್ಗದವರು, ಸೇವಕವರ್ಗದವರು ಜೀವಿತ ಪಡೆದುಕೊಳ್ಳುತ್ತಿದ್ದ ಸಂದರ್ಭವನ್ನು ಕವಿ ವಿವರಿಸುತ್ತಾನೆ.(೧೦:೨) ಕನ್ನದ ಬೊಮ್ಮಯ್ಯನೆಂಬ ಶಿವಶರಣನು 'ನಡೆ ಬಿಜ್ಜಳನ ಭಂಡಾರ ತೋರಿಸು' ಎಂದು ಬಸವಣ್ಣನವರನ್ನು ಕೇಳಿದಾಗ ಬಸವಣ್ಣನವರು ಕರಣಸಾಲೆಯನ್ನು ತೋರಿಸುವ ಸಂದರ್ಭ ಬಸವಪುರಾಣದಲ್ಲಿ ಉಕ್ತವಾಗಿದೆ. (೩೦:೧೦) ಹೀಗೆ ಅರಮನೆಯ ನಂತರ ಕರಣಸಾಲೆ ಅತ್ಯಂತ ಮುಖ್ಯವಾದ ಭಾಗವಾಗಿ ಕಂಡುಬರುತ್ತಿದೆ.

ಋ. ಇತರ ನೌಕರವರ್ಗ :

ಮಂತ್ರಿ ಹಾಗೂ ಅಧಿಕಾರಿ ವರ್ಗವನ್ನು ಹೊರತುಪಡಿಸಿದರೆ ಅರಸರನ್ನು ಆಶ್ರಯಿಸಿಕೊಂಡು ಅವನಿಂದ ಸಂಬಳ ಪಡೆದು ಬದುಕುವ ವಿವಿಧ ಸೇವಾವೃತ್ತಿಯವರ ಉಲ್ಲೇಖ ಬಸವಪುರಾಣದಲ್ಲಿ ಕಂಡುಬರುತ್ತದೆ. ಕರಣಿಕ ವೃತ್ತಿಯವರಂತೆ ಅರಮನೆಯಲ್ಲಿ, ಆಸ್ಥಾನದಲ್ಲಿ ಉನ್ನತ ಸಚಿವರ ಗಮನದಲ್ಲಿರುವವರೆಂದರೆ ಪಡಿಯರರು. ಬಾಗಿಲ ಹತ್ತಿರ ಶಿಸ್ತುವ್ಯವಸ್ಥೆ ನೋಡಿಕೊಳ್ಳುವವರು ಇವರು. ಇವರನ್ನು 'ಪರಿಚಾರಕರು' ಮತ್ತು 'ದ್ವಾರಪಾಲಕರು' ಎಂದೂ ಸಹ ಕರೆದ ಉಲ್ಲೇಖಗಳು ದೊರೆಯುತ್ತವೆ. (೩೪:೪೨) ಬಸವಣ್ಣನವರು ಶಿವಯೋಗನಿದ್ರಾಮುದ್ರೆಯೊಳಿದ್ದಾಗ ದೇಶಾಂತರದಿಂದ ಬಂದ ಭಕ್ತಜಂಗಮನಿಗೆ ಪಡಿಹಾರನು ಸಮಯವಿಲ್ಲೆಂದು ತಿಳಿಸಿದ ಉಲ್ಲೇಖ ಕವಿ ಕೊಡುತ್ತಾನೆ. ರಾಜ ಹಾಗೂ ಮಂತ್ರಿಗಳ ಸಮಯಾಸಮಯವರಿತು ಅವರನ್ನು ಒಳಗೆ ಬಿಡುವ ಕಾಯಕ ಪಡಿಹಾರರದು. ಬಸವಣ್ಣನವರು ಜಂಗಮಪ್ರಾಣಿತ್ವವನ್ನು ಪರೀಕ್ಷಿಸಲು ಶಿವನು ಕಿನ್ನರಯ್ಯನ ಪ್ರಾಣವನ್ನೊಯ್ದನು. ಆ ಸಂದರ್ಭದಲ್ಲಿ ಶರಣಗಣವೇ ನೆರೆದರೂ ಸಹ ಮಡಿವಾಳ ಮಾಚಯ್ಯ ಬಂದಿರಲಿಲ್ಲ. ಅವರನ್ನು ಕರೆತರಲು ಪಡಿಹಾರಿ ಬಾಚಯ್ಯನನ್ನು ಕರೆಕಳುಹಿಸುವ ಸಂದರ್ಭವನ್ನು ಕವಿ ವಿವರಿಸುತ್ತಾನೆ. (೩೫:೯,೧೦) ಇಲ್ಲಿ ಬರುವ ಬಾಚಯ್ಯ ಶಿವಶರಣರ ವಲಯದಲ್ಲಿ ಮಾತ್ರ ಈ ವೃತ್ತಿಯನ್ನು ಕೈಗೊಂಡಿದ್ದನೊ ಅಥವಾ ಬಿಜ್ಜಳನ ಅರಮನೆಯಲ್ಲಿ ಸೇವಾನಿರತನಾಗಿದ್ದನೊ ಹೇಗೆ ಎಂಬ ವಿಷಯ ತಿಳಿಯುವುದಿಲ್ಲ.

'ವಂದಿಮಾಗಧರು', (೨೫:೬) 'ಪುರೋಹಿತರು', 'ಮಂಗಳಪಾಠಕರು', 'ಗಾಯಕರು', 'ನರ್ತನದವರು', 'ಕವಿ ಗಮಕಿಗಳು', 'ಮಾವತಿಗರು', 'ರಾಹುತರು', (೬೦:೨೪) 'ಚಾಮರ

ಬೀಸುವವರು', 'ನಂದಿಧ್ವಜ', 'ಪತಾಕೆ ಸತ್ತಿಗೆ ಹಿಡಿಯುವವರು', 'ಬೇಹಿನವರು', 'ವೇದವಿಪ್ರರು', 'ವೀರರು', 'ಕೈವಾರಿಗಳು' ಮುಂತಾದ ವಿವಿಧ ನೌಕರವರ್ಗದವರ ವಿವರಗಳು ಪುರಾಣದಲ್ಲಿ ದೊರೆಯುತ್ತವೆ.

ಬಿಜ್ಜಳನ ಓಲಗದ ಸಂದರ್ಭದಲ್ಲಿ ವಿವಿಧ ರೀತಿಯ ಆಯುಧಗಳನ್ನು ಹಿಡಿದ ವೀರರ ವರ್ಣನೆ ಬರುತ್ತದೆ. ಬಹುಶಃ ಇವರು ಅರಸನ ಅಂಗರಕ್ಷಕನಾಗಿರಬೇಕು. ನೆಲವನುಗ್ಗಡಿಸುವ ಅಂಗರಕ್ಷಕರ ಬಗ್ಗೆ ಹೇಳುತ್ತ ಪಿ.ವಿ.ನಾರಾಯಣರು ಯಜಮಾನನ ಸಮಯಾಸಮಯವರಿತು ಸ್ಥಾನಮಾನಗಳಿಗೆ ಅನುಸಾರವಾಗಿ ಸಂದರ್ಶಕರ ಸಂದರ್ಶನಕ್ಕೆ ಬಿಡುತ್ತಿದ್ದ ಕೆಲಸವೇ 'ಉಗ್ಗಡಿಸುವ ಕಾಯಕ'ವೆನ್ನುತ್ತಾರೆ. (೧೯೮೩, ಪು.೨೧೪) ಬಹುಶಃ ದಾರಿಗುಂಟ ಜನತೆಯ ಬೇಡಿಕೆಗಳನ್ನು ರಾಜನಿಗೆ ಮುಟ್ಟಿಸುವ ವ್ಯಕ್ತಿಗಳೇ ಈ ಅಂಗರಕ್ಷಕರಾಗಿರಬೇಕು. ಸ್ವಾಭಾವಿಕವಾಗಿ ರಾಜನಿಗಿದ್ದಂತೆ ಪ್ರಧಾನಿ, ದಂಡನಾಥ, ಭಂಡಾರಿಗರಿಗೂ ಅಂಗರಕ್ಷಕರು ಇದ್ದಿರಲು ಸಾಧ್ಯವಿದೆ.

'ಬೇಹುಗಾರಿಕೆ' ಸಾಮಾನ್ಯವಾಗಿ ರಾಜ್ಯದಲ್ಲಿ ನಡೆಯುವ ರಹಸ್ಯವನ್ನು ತಂದು ಅರಸನಿಗೆ ತಿಳಿಸುವುದಾಗಿತ್ತು. ಈ ಕೆಲಸದಲ್ಲಿ ವಿಪ್ರವರ್ಗ ಹೆಚ್ಚಾಗಿ ತೊಡಗಿಕೊಂಡುದನ್ನು ಕಾಣಬಹುದು.ಭಂಡಾರ ಪೆಟ್ಟಿಗೆಯ ಸಂದರ್ಭ ಹಾಗೂ ಶಿವನಾಗಮಯ್ಯಗಳ ಮನೆಯಲ್ಲಿ ಬಸವಣ್ಣನವರು ಉಂಡ ಸಂದರ್ಭದಲ್ಲಿ ವಿಪ್ರರು ಅರಸನಿಗೆ ಚಾಡಿ ಹೇಳುವ ಸಂದರ್ಭ ನೋಡಿದರೆ ಹೀಗೆ ಗೌಪ್ಯವರದಿ ತರುವವರು ಆಯಾ ಧರ್ಮೀಯರಲ್ಲಿ ಇದ್ದಿರಬಹುದೆನಿಸುತ್ತದೆ. ಉಳಿದವರ ಚಟುವಟಿಕೆ ತಿಳಿಯುವುದು, ತಿಳಿದ ನಂತರ ಪ್ರತಿ ಚಟುವಟಿಕೆ ನಡೆಸುವ ಗುರಿಯು ಈ ಬೇಹುಗಾರಿಕೆಯ ಹಿನ್ನೆಲೆಯಲ್ಲಿದ್ದಿರಬೇಕೆನಿಸುತ್ತದೆ. ಬಹುಶಃ ಇವರು ರಾಜನಿಂದ ಅನುಗ್ರಹಿಸಲ್ಪಟ್ಟ ನೌಕರವರ್ಗದವರಾಗದೆ ಸ್ವಂತ ಉದ್ದೇಶಕ್ಕೆ ಮನಗೊಟ್ಟು ಈ ವೃತ್ತಿಯನ್ನು ಮುಂದುವರೆಸಿಕೊಂಡು ಹೋಗುವವರಾಗಿದ್ದರೆಂಬುದನ್ನು ಇಲ್ಲಿ ಗಮನಿಸಬಹುದು. ಎಷ್ಟೋ ಕೆಲಸಗಳಲ್ಲಿ ಅಂದು ರಾಜಸೇವಾಸಕ್ತರಾಗುವುದು ಹೆಮ್ಮೆಯ ಸಂಗತಿಯಾಗಿತ್ತು.

ಎ. ಜೋಳವಾಟಿ– ವೇಳೆವಾಟಿ –ಲೆಂಕಕಾರರು–ಅಂಕಕಾರರು–ಮಾಸಾಳ್ಗಳು :

"ಜೋಳವಾಳಿಯಾನಲ್ಲ, ವೇಳೆವಾಳಿಯವ ನಾನಯ್ಯಹಾಳುಗೆಟ್ಟೋಡುವ ಆಳು ನಾನಲ್ಲಯ್ಯಾ ಕೇಳು ಕೂಡಲ ಸಂಗಮದೇವಾ, ಮರಣವೇ ಮಹಾನವಮಿ" (ಸ.ವ.ಸಂ.೧: ವ.೬೯) ಎಂಬ ಬಸವಣ್ಣನವರ ಪ್ರಸಿದ್ಧ ವಚನ ಅವರೊಬ್ಬ ವೇಳೆವಾಳಿಯಾಗಿದ್ದರೆಂಬುದನ್ನು ತಿಳಿಸುತ್ತದೆ. ಜೋಳವಾಟಿ ಎಂದರೆ = (ಜೋಳ +ಪಾಟಿ) ಅನ್ನದ ಕರ್ತವ್ಯ, ಅನ್ನದ ಋಣ ಎಂದರ್ಥ. "ಅನ್ನವನ್ನು ಕೊಟ್ಟು ಸಾಕಿದ ಒಡೆಯನಿಗೆ ಕಷ್ಟ ಬಂದಾಗ ಅವನಿಂದ ಉಪಕೃತನಾಗಿರುವ ವ್ಯಕ್ತಿಯು ಒಡೆಯನಿಗೆ ಸಹಾಯ ಮಾಡಬೇಕು. ಯುದ್ಧವು ಒದಗಿದಾಗ ಅವನ ಪರವಾಗಿ ಹೋರಾಡಬೇಕು. ಇದೇ 'ಜೋಳವಾಟಿ'. ಜೋಳವಾಟಿ ಎಂಬುದು ಕರ್ತವ್ಯವನ್ನು ಪರಿಪಾಲಿಸುವ ವ್ಯಕ್ತಿಯನ್ನು

ಸೂಚಿಸುತ್ತದೆ." (ಚಿಮೂ.೨೦೦೮, ಪು.೩೩೪-೦೫) ಆದರೆ ವೇಳೆವಾಟಿತನವು ಕೃತಜ್ಞತೆಯ ಪರಾಕಾಷ್ಠೆ ಕೇವಲ ಕರ್ತವ್ಯದ ದೃಷ್ಟಿಯಿಂದ ನಡೆದುಕೊಳ್ಳುವುದು ಜೋಳವಾಟಿಯಾದರೆ ಒಡೆಯನಿಗೆ ಅಥವಾ ತಾವು ನಂಬಿದ ದೈವಕ್ಕೆ ಪ್ರಾಣವನ್ನೇ ಅರ್ಪಿಸುವುದು ವೇಳೆವಾಟಿತನದಲ್ಲಿದೆ.

ಸೊಡ್ಡಳ ಬಾಚರಸನು ಸೌರಾಷ್ಟ್ರ ಸೋಮೇಶನಲ್ಲಿ ವೇಟಿವಾಳಿತನ ಕೈಗೊಂಡು ನಿಶ್ಚಿಂತನಾಗಿದ್ದನು. ಬಿಜ್ಜಳ ಹಾಗೂ ಪರವಾದಿಗಳು ಸೇರಿ ಪ್ರತಾಪನಾರಾಯಣಪುರದಲ್ಲಿ ಗೋವಿಂದಪ್ರತಿಮೆಯನ್ನು ಸ್ಥಾಪಿಸಿ ಆ ಉತ್ಸವದಲ್ಲಿ ಪಾಲ್ಗೊಳ್ಳಲು ಕೊತ್ತಾರದ ಅಧಿಕಾರಿಯಾದ ಬಾಚರಸರು ಬಾರದೆ ಇದ್ದಾಗ ಆಗ್ರಹಪೂರ್ವಕವಾಗಿ ಬಿಜ್ಜಳನು ಪ್ರಶ್ನಿಸುತ್ತಾನೆ. ಆಗ ಬಸವಣ್ಣನವರು ಬಿಜ್ಜಳನನ್ನು ಕುರಿತು

.... ಅನ್ಯದೈವದ
ಮನೆಗದೇತಕೆ ಬಾರರವರೆಂ
ದೆನಲಹುದೆ ಪತಿ ಜೋಳವಾಳಿಗೆ ಮೇಳವಾಗಿರ್ದು
ಕನಲಲಹುದೆ ಅನ್ಯದೈವಸ
ದನಕೆ ಭಕ್ತರು ಬಹರೆ ಹುಗುವರೆ
ನೆನೆವರೇ ನೋಡುವರೆ ಕೇಳ್ವರೆ........ (೫೨: ೩೫)

ಎಂದು ಬಾಚರಸರು ತನ್ನ ದೈವಕ್ಕೆ ವೇಳೆವಾಟಿತನ ಕೈಗೊಂಡಿದ್ದು, ಜೋಳವಾಟಿತನ ಕೈಗೊಂಡ ನಿನ್ನ ಉತ್ಸವಕ್ಕೆ ಬರಲು ಸಾಧ್ಯವಾಗದ್ದನ್ನು ಹೇಳುತ್ತಾರೆ. ಆ ಮೂಲಕ ಅಂದಿನ ಸಮಾಜದಲ್ಲಿ ಈ ಪದ್ಧತಿ ಪ್ರಚಲಿತವಿದ್ದ ಬಗೆಯನ್ನು ಕಂಡುಕೊಳ್ಳಬಹುದು.

'ಲೆಂಕರು' ಎಂದರೆ "ತಾವಾಗಿ ರಾಜವಂಶಕ್ಕೆ ವಿಧೇಯರಾಗಿದ್ದುಕೊಂಡು ರಾಜರು ಮಡಿದಾಗಲೆಲ್ಲ ಪ್ರಾಣವನ್ನು ಬಿಡುತ್ತಿದ್ದವರು" (೨೦೦೮, ಪು.೩೪೨) ಎಂದು ಎಂ. ಚಿದಾನಂದಮೂರ್ತಿಯವರು ಹೇಳುತ್ತಾರೆ. ಒಂದೆರಡು ಸಂದರ್ಭಗಳಲ್ಲಿ 'ಲೆಂಕ', (೮:೩೯, ೫೩: ೨೭) 'ಲೆಂಗಿ' ಎಂಬ ಪದಗಳು ಸೇವಕ ಎಂಬರ್ಥದಲ್ಲಿ ಪ್ರಯೋಗಗೊಂಡಿವೆ.

'ಶಂಕರದಾಸಿಮಯ್ಯ' ಮತ್ತು 'ಏಕಾಂತರಾಮಯ್ಯ'ಗಳ ಕಥೆಯಲ್ಲಿ ಕವಿಯು 'ಅಂಕಕಾರ' ಎಂಬ ಪದವನ್ನು ಬಳಸಿದ್ದಾನೆ. ಅಂಕಕಾರ ಎಂಬುದಕ್ಕೆ 'ಸೇವಕ', 'ಬಂಟ', 'ವೀರ' ಎಂಬರ್ಥಗಳಿದ್ದು ವಿಶೇಷವಾಗಿ ಶಿವನ ಬಂಟರು ಎಂಬರ್ಥದಲ್ಲಿ ಈ ಪದ ಬಳಕೆಗೊಂಡಿದ್ದನ್ನು ಕಾಣಬಹುದು. ಶಂಕರದಾಸಿಮಯ್ಯಗಳ ಕಥೆಯಲ್ಲಿ ಬರುವ 'ಪೇರುಲ್ಲಾಸಚಿತ್ತದೊಳಂಕಕಾಜಿನವೊಲು' (೨೨:೨೫) ಹಾಗೂ ಏಕಾಂತರಾಮಯ್ಯಗಳಿಗೆ ಸಂಬಂಧಪಟ್ಟಂತೆ ಬರುವ 'ವೀರಭಕ್ತಿಯೊಳಂಕಕಾಜಿನವೊಲು' (೫೧:೩೮) ಎಂಬ ಪದಗಳು ಶಿವಶರಣರು ತ್ರಿಕಾಲಗಳಲ್ಲಿಯೂ ಶಿವನ ಭಂಟರಾಗಿದ್ದರು ಎಂಬುದನ್ನು ತಿಳಿಸುತ್ತವೆ.

ಈ 'ಮಾಸಾಳು' ಪದಕ್ಕೆ 'ವೀರ', 'ಶೂರ' ಎಂಬರ್ಥಗಳಿವೆ. ಮಹಾ+ಸಬಳ ಎಂಬುದೆ 'ಮಾಸಾಳ್' ಎಂದಾಗಿರಬೇಕು. (ಪಾಟೀಲ ಸದಾನಂದ, ೧೯೯೯, ಪು.೧೧೩) ಒಂದು ಸಂದರ್ಭದಲ್ಲಿ

ಮಡಿವಾಳ ಮಾಚಯ್ಯನಿಗೆ ಸಂಬಂಧಿಸಿದಂತೆ ಈ ಪದ ಪ್ರಯೋಗಗೊಂಡಿದ್ದನ್ನು ಹೊರತುಪಡಿಸಿದರೆ ಬೇರೆಲ್ಲಿಯೂ ಕವಿ ಇದನ್ನು ಬಳಸಿರುವುದು ಕಂಡುಬರುವುದಿಲ್ಲ .ಬಹುಶಃ ಬಿಜ್ಜಳನ ಅಂಗರಕ್ಷಕರಲ್ಲಿ ಕೆಲವರು ಈ ಮಾಸಾಳುಗಳೇ ಇದ್ದಿರಬೇಕು. ಹೀಗೆ ವಿವಿಧ ಉದ್ಯೋಗಗಳನ್ನು ಕೈಗೊಂಡು ಸಾರ್ಥಕ ಜೀವನ ನಡೆಸಿದ ವಿವರಗಳು ಕಂಡುಬರುತ್ತವೆ.

೭. ನ್ಯಾಯಪರಿಪಾಲನೆ : ಶಿಕ್ಷೆ ಪ್ರಕರಣಗಳು :

ರಾಜಾಜ್ಞೆಯನ್ನು ಉಲ್ಲಂಘಿಸಿದವರನ್ನು , ಪ್ರಜಾಪೀಡಕರನ್ನು ಹಿಡಿದು ಶಿಕ್ಷಿಸುವುದು ವ್ಯಕ್ತಿ–ವ್ಯಕ್ತಿಗಳ ಮಧ್ಯ, ಪಕ್ಷ–ಪಕ್ಷಗಳ ಮಧ್ಯ ಬರುವ ಸಮಸ್ಯೆಗಳನ್ನು ಪರಿಹರಿಸುವುದು ರಾಜನಾದವನ ಗುರುತರ ಹೊಣೆಗಾರಿಕೆಯಾಗಿರುತ್ತದೆ. ಪ್ರಾಚೀನ ಕಾಲದಲ್ಲಿ ರಾಜನೇ ಪ್ರಜೆಗಳ ವಿಚಾರಣೆ ಮಾಡುತ್ತಿದ್ದ. ಅಪರಾಧಕ್ಕಿಂತಲೂ ಹೆಚ್ಚು ಕ್ರೂರವಾದ ಶಿಕ್ಷೆಯನ್ನು ವಿಧಿಸುವುದರಿಂದ ರಾಜನು ಪ್ರಜೆಗಳ ದೃಷ್ಟಿಯಲ್ಲಿ ಭಯಂಕರನಾಗುತ್ತಾನೆ, ಅದೇ ಅಪರಾಧಕ್ಕೆ ಕಡಿಮೆಯೆನಿಸುವ ಶಿಕ್ಷೆಯನ್ನು ವಿಧಿಸುವುದರಿಂದ ರಾಜನನ್ನು ಜನರು ತಿರಸ್ಕಾರದಿಂದ ಕಾಣುತ್ತಾರೆ; ಆದ್ದರಿಂದ ಅಪರಾಧಕ್ಕೆ ತಕ್ಕ ಶಿಕ್ಷೆಯನ್ನೇ ವಿಧಿಸಬೇಕೆಂದು ಕಾಮುಂದಕನು ಎಚ್ಚರಿಸುತ್ತಾನೆ. (ನಾರಾಯಣ ಪಿ.ವಿ. ೧೯೮೩, ಪು.೨೧೬) "ಗ್ರಾಮಸಭೆಗಳು ವಿಚಾರಣೆ ನಡೆಸಿ ತೀರ್ಪು ಕೊಡುವ ಉಲ್ಲೇಖವನ್ನು ಎಂ.ಚಿದಾನಂದಮೂರ್ತಿಯವರು ಹೇಳುತ್ತಾರೆ." (೨೦೦೮, ಪು.೩೯೮) ಆದರೆ ಮಂತ್ರಿಗಳನ್ನು ಉನ್ನತ ಕುಲಜರನ್ನು ವಿಚಾರಣೆಗೊಳಪಡಿಸುವಾಗ ಅವನು ಸ್ವತಃ ತಾನೇ ತೀರ್ಪು ನೀಡಿದ ಕೆಲವು ನಿದರ್ಶನಗಳು ಕಂಡುಬರುತ್ತವೆ.

ಕಾಳಿಮರಸ, ಕರಿಯಕೇಶವ, ಚೋಳಿಯಣ್ಣರೆಂಬ ಕೊಂಡೆಯರು ಬಸವಣ್ಣನವರು 'ಭಂಡಾರದ ಧನವೆನೆಯ್ದೆ ಕೇಳರಸ ಮಿಂಡರ್ಗೆ ಕೊಟ್ಟನು' ಎಂದು ಬಿಜ್ಜಳನಿಗೆ ದೂರು ಹೇಳುತ್ತಾರೆ. ಕೋಪಗೊಂಡ ಬಿಜ್ಜಳನು ಬಸವಣ್ಣನವರನ್ನು ಕರೆಯಿಸಿ ತುಂಬಿದೋಲಗದಲ್ಲಿ ವಿಚಾರಿಸುತ್ತಾನೆ. 'ದಂಡಿಸುವವರು ಯಾರೂ ಇಲ್ಲವೆಂಬ ಉದ್ಧಟತನದಿಂದ ಭಕ್ತರಿಗೆ ಭಂಡಾರದ ಹಣವನ್ನು ಕೊಡುವುದೆ ? ನಿನ್ನನ್ನು ದಂಡಿಸದೆ ಬಿಡುವುದಿಲ್ಲ' (೧೦:೮) ಎಂದು ಬಸವಣ್ಣನವರು ಪ್ರಧಾನಿಗೆ ಹೇಳುವ ಬಿಜ್ಜಳನ ಮಾತುಗಳನ್ನು ಗಮನಿಸಬೇಕು ಭಂಡಾರ ಸಚಿವನಿಗೆ ಈ ರೀತಿಯ ನಿಕೃಷ್ಟ ವಿಚಾರಣೆ ನಡೆದುದನ್ನು ನೋಡಿದರೆ ರಾಜನಾದವನು ನ್ಯಾಯಪ್ರದಾನ ವ್ಯವಸ್ಥೆಯಲ್ಲಿ ಸರ್ವೋಚ್ಚ ಸ್ಥಾನವನ್ನು ಹೊಂದಿದ್ದನೆಂಬುದು ತಿಳಿಯುತ್ತದೆ. ಆಗ ಬಸವಣ್ಣನವರು 'ಪಾವನ ಜ್ಯೋತಿರ್ಮಯಾಂಗಿಗೆ ದೀವಿಗೆಯ ಹಂಗುಂಟೆ'? 'ಪರಶಿವ ಭಾವನಾಮೃತದನುಭವಿಗೆ ಮಾಧುರದ ಹಂಗುಂಟೇ'?, 'ಲಿಂಗಸದರ್ಥರೊಲಿದೆಮಗೀವ ಧನವುಂಟರಸ ನಿನ್ನಯ ಧನದ ಹಂಗುಂಟೆ'?, ಎಂದು ಹೇಳಿ ಪೆಟ್ಟಿಗೆಯನ್ನು ತೆರೆದು ತೋರಿಸಿದಾಗ ಧನವು ಇದ್ದಂತೆ ಇರುವುದನ್ನು ಕಂಡು ಬಿಜ್ಜಳ ಆಶ್ಚರ್ಯಪಡುತ್ತಾನೆ. ಆಗ ಬಿಜ್ಜಳನು 'ಬಿಸಿಯ ಮಳಲನ್ನು ಬಾಯಿಗೆ ಹಾಕಿಕೊಂಡಂತಾಯಿತು'

ಎಂದು ಪಶ್ಚಾತ್ತಾಪ ಪಟ್ಟು ಬಸವಣ್ಣನವರಿಗೆ ನವರತ್ನಾಂಬರಗಳನ್ನು ಕೊಟ್ಟು ಕಳಿಸುತ್ತಾನೆ.

ಇಂತಹುದೇ ಇನ್ನೊಂದು ಪ್ರಸಂಗ ಕನ್ನದ ಬೊಮ್ಮಯ್ಯನ ಕಥೆಯಲ್ಲಿ ವ್ಯಕ್ತವಾಗಿದೆ. ಕನ್ನದ ಬೊಮ್ಮಿದೇವನು ಕನ್ನವಿಕ್ಕಿ ಮನೆಮನೆ ಹೊಕ್ಕು ಭಕ್ತರ ಮನೆಯಾಗಿದ್ದರೆ ಧನವನ್ನು ಕದ್ದೊಯ್ದು ಜಂಗಮಕ್ಕೆ ಮಾಡುವನು. ಒಂದು ದಿನ ಬಹಳ ಜನ ಜಂಗಮರು ಬರಲು ದೊರೆಯ ಮನೆಗೇ ಕನ್ನವಿಕ್ಕಬೇಕೆಂದು ತೆರಳಿದನು. ದಾರಿಯಲ್ಲಿ ಎದುರಾದ ಬಸವಣ್ಣನವರಿಗೆ 'ನಡೆ ಬಿಜ್ಜಳನ ಭಂಡಾರವನ್ನು ತೋರಿಸು' ಎಂದು ಅವನನ್ನು ಕರೆದೊಯ್ದು ಪೆಟ್ಟಿಗೆಗಳ ಧನವನ್ನೆಲ್ಲಾ ಒಯ್ದನು. ವಿಷಯ ತಿಳಿದ ಬಿಜ್ಜಳನು ಕ್ರುದ್ಧನಾಗಿ "ಬಸವಣ್ಣನು ಇಷ್ಟು ಸೊಕ್ಕಿದನೆ? ವಿಶ್ವಾಸಿಯೆಂದು ಅಧಿಕಾರ ಕೊಟ್ಟುದಕ್ಕೆ ಭಂಡಾರಕ್ಕೆ ಹಗಲುಗನ್ನವನಿಕ್ಕಿಸಿದನೆ"? (೫:೩೦) ಎಂದು ಬಸವಣ್ಣನವರನ್ನು ಕರೆಸಿ ವಿಚಾರಿಸಿದನು. ಬಸವಣ್ಣನವರು ಕರಣಿಕರನ್ನು ಕರೆಸಿ ಬೊಕ್ಕಸದ ಧನವನ್ನು ಹೊತ್ತಿಗೆಯ ಲೆಕ್ಕವನ್ನು ತೋರಿಸಿದರು. ಲೆಕ್ಕಕ್ಕೆ ಇಮ್ಮಡಿಯಾಗಿಯೇ ಧನವಿದ್ದುದನ್ನು ಕಂಡು ಪಶ್ಚಾತ್ತಾಪ ಪಡುವ ಸಂದರ್ಭ ಬಿಜ್ಜಳನದಾಗುತ್ತದೆ. ಬಿಜ್ಜಳನು ಭಂಡಾರದ ಹಣವನ್ನು ವಿಚಾರಿಸಿದ್ದು ತನ್ನ ತಪ್ಪಿನ ಅರಿವಾಗಿ ಧನಧಾನ್ಯಗಳನ್ನು, ಉತ್ತಮಾಭರಣಗಳನ್ನು ತಪ್ಪುದಂಡವಾಗಿ ಕೊಟ್ಟದ್ದು ಇಲ್ಲಿ ಕಂಡುಬರುತ್ತದೆ. ಈ ಮೇಲಿನ ಎರಡು ಪ್ರಸಂಗಗಳು ಪವಾಡದ ಆವರಣವಿಲ್ಲದೆ ಶಿವಭಕ್ತರ ಪ್ರಾಮಾಣಿಕತೆಯನ್ನು ಹೇಳುವಂತಹವಾಗಿವೆ.

ಅನ್ಯರು ಭಕ್ತರ ಮಡಿಬಟ್ಟೆಗಳನ್ನು ಮುಟ್ಟಿದರೆ ಕುಟ್ಟಿ ಕೆಡಹುವೆನೆಂಬುದು ಮಡಿವಾಳ ಮಾಚಯ್ಯಗಳ ಭಾಷೆ. ಒಂದು ದಿನ ಮಡಿಬಟ್ಟೆ ಹೊತ್ತು ಬರುತ್ತಿದ್ದಾಗ ದಾರಿಯಲ್ಲಿ ಭವಿ ತಾಗುತ್ತಾನೆ. ಕೋಪಗೊಂಡ ಮಾಚಯ್ಯ ಅವನ ತಲೆ ಕಡಿದು ಗಗನಕ್ಕೆ ಹಾರಿಸಿದನು. ಜನರು ಅರಸನಲ್ಲಿ ದೂರಿದರು. ಇದಕ್ಕೆ ಪ್ರತಿಯಾಗಿ ಬಂದವರು ಬಸವಣ್ಣನವರು. ತಾನು ಅರಸನೆಂಬ ಅಹಂಕಾರದಿಂದ ಬಿಜ್ಜಳ ನ್ಯಾಯಾನ್ಯಾಯ ಪರಿಪಾಲಿಸದೆ ಅತ್ಯಂತ ಕೋಪಾವಿಷ್ಟನಾಗಿ ಆಡಿದ ಮಾತುಗಳು ಶಿವಶರಣರ ಬಗ್ಗೆ ಅರಸನಿಗಿದ್ದ ಅಸಹನೆಯನ್ನು ವಕ್ತಪಡಿಸುತ್ತವೆ.

ಕಟ್ಟರಸು ನಾನೆಂದು ನೋಡದೆ
ದಿಟ್ಟನಸಗಂ ಭಕ್ತನೆನತೀ
ಪಟ್ಟಣದ ಜನರಂ ಚರಿಸಲೀಯಂ ತಗುಳ್ದಪನು
ಮುಟ್ಟದಡೆ ಮುರುಟುವುದೆ ಸೀರೆಯ
ಮೊಟ್ಟೆಯೊಬ್ಬನು ಹೊಸಬನಂಗಡಿ
ಮುಟ್ಟಿ ಹೋಗುತ್ತಿರಲು ಕೊಂದನು ಅವನ ಹೆಣನಿಲ್ಲ.... (೨೦: ೨೦)

ಎಂದು ಜನರ ಪರವಾಗಿ ಬಿಜ್ಜಳ ಬಸವಣ್ಣನವರನ್ನು ಪ್ರಶ್ನಿಸುತ್ತಾನೆ. ಬಸವಣ್ಣನವರು ಮಾಚಯ್ಯನ ಮಹಿಮೆಯನ್ನು ಎಷ್ಟು ಹೇಳಿದರೂ ಕೇಳದೆ ಉದ್ವಿಗ್ನಗೊಂಡು ಅವನ ಮೇಲೆ ಮದ್ದಾನೆಯನ್ನು ಬಿಟ್ಟು ತುಳಿಸುವಂತೆ ರಾಜಾಜ್ಞೆಮಾಡುತ್ತಾನೆ. (೨೦:೩೮) ಮರಣಕ್ಕೆ ಪ್ರತಿಯಾಗಿ ಮರಣದಂಡನೆಯನ್ನೆ ವಿಧಿಸುವ ಬಿಜ್ಜಳನ ಆದೇಶವನ್ನು ಇಲ್ಲಿ ಗಮನಿಸಬೇಕು. ಪ್ರತಿಯಾಗಿ

ಮಾಚಯ್ಯನು ಆನೆಯನ್ನು ಕೊಂದಾಗ ಅರಸು ಭಂಗಿತನಾಗುತ್ತಾನೆ. ಬಸವಣ್ಣನವರಿಂದ ಶಿವಭಕ್ತದ್ವಯರಾದ ಇರಿವತ್ತನ ಹಾಗೂ ಬಾಹೂರಬೊಮ್ಮಯ್ಯಗಳ ಕಥೆಗಳನ್ನು ಕೇಳಿ ಮಡಿವಾಳಮಾಚಯ್ಯಗಳ ಮಹಿಮೆಯನ್ನು ವಿವರಿಸುತ್ತಾನೆ. ತನ್ನ ಪರಿವಾರಸಮೇತನಾಗಿ ಹೋಗಿ ಬಿಜ್ಜಳನು ಮಡಿವಾಳ ಮಾಚಯ್ಯಗಳ ಕಾಲಿಗೆರಗಿದನೆಂದು ಕವಿ ಹೆಳುತ್ತಾನೆ. (೨೧:೩೮) ಈ ಸಂದರ್ಭ ಶಿವಭಕ್ತ ಮಡಿವಾಳ ಮಾಚಯ್ಯಗಳ ಮಹಿಮೆಯನ್ನು ಹೇಳುವಂತಿದ್ದರೂ ಬಿಜ್ಜಳ ಮತ್ತು ಶಿವಭಕ್ತರ ಮಧ್ಯದ ನ್ಯಾಯಾನ್ಯಾಯ ಪ್ರಕರಣಗಳಲ್ಲಿ ಶಿವಭಕ್ತರೆ ಮೇಲುಗೈ ಪಡೆಯುತ್ತಿದ್ದರೆಂದು ಹೇಳುವುದು ಕವಿಯ ಅಭಿಪ್ರಾಯವಾಗಿರುವಂತಿದೆ. ಆ ಮೂಲಕ ಬಿಜ್ಜಳನ ಘನತೆ ಗೌರವಕ್ಕೆ ಧಕ್ಕೆ ತಂದುಕೊಂಡುದರ ಉದಾಹರಣೆಯೂ ಇದಾಗಿದೆಯೆನ್ನಬಹುದು.

ಹಿರಿಯ ಮಾಹೇಶ್ವರರ ಮನೆಗೆ ಹೋಗಿ ಬಸವಣ್ಣ ಉಂಡನೆಂಬ ವಿಷಯ ಕುರಿತಂತೆ ಬಯಲು ಓಲಗ ನಡೆಸಿ ನ್ಯಾಯಪ್ರಕರಣ ನೀಡಿದ ವಿಪರೀತವಾದ ಪ್ರಸಂಗವೊಂದು ಬಸವಪುರಾಣದಲ್ಲಿ ಉಕ್ತಗೊಂಡಿದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಬಸವಣ್ಣನನ್ನು ಹಾಗೂ ಶಿವನಾಗಮಯ್ಯನವರನ್ನು ಕರೆಸಿ ಬಿಜ್ಜಳನು 'ಹೊಲಗೆಲಸಿ ಕುಲಸಂಕರವನು ಕಲ್ಯಾಣಕಟಕವನಿಂತು ಕೆಡಿಸುವರೆ? ಸುರಿದಹವೇ ಮಳೆಗಳಿನ್ನು, ಬೆಳೆದವೇ ನಿನಿರ್ದಧರೆ'? ಎಂದು ಪ್ರಶ್ನಿಸುತ್ತಾನೆ. (೫೪:೧೨,೧೩) ಪ್ರತಿಯಾಗಿ ಬಸವನು ಶರಣರ ಸತ್ಕುಲವನ್ನು ಪ್ರತಿಪಾದಿಸಿ ಅನೇಕ ಶಿವಶರಣರ ಮಹಿಮೆಯನ್ನು ಹೇಳುತ್ತಾನೆ. ಅಂತಿಮವಾಗಿ ಬಿಜ್ಜಳನು ಈ ಸಂದರ್ಭದ ತೀವ್ರತೆಯೆಂಬಂತೆ "ಭಕ್ತರನ್ನು ಚಿವುಟಿದರೆ ಹಾಲು ಇತರರನ್ನು ಚಿವುಟಿದರೆ ರಕ್ತ ಹೊರಡುವುದೆ? ಏನು ಹೇಳುವೆ" (೫೫:೭೫) ಎನ್ನುತ್ತಾನೆ. ನೀವಂದಂತೆಯೇ ಆಗಲಿ ಎಂದು ಶಿವನಾಗಮಯ್ಯಗಳ ಕರಸ್ಥಲವನ್ನು ಹಿಸುಕಿದಾಗ 'ಶಿವಭಕ್ತಿಯೆಂಬ ಕಾಮಧೇನು' ಸುರಿದಂತೆ ಹಾಲು ಸುರಿಯಿತೆಂಬ ಪವಾಡವನ್ನು ಕವಿ ಹೇಳುತ್ತಾನೆ. ಇಲ್ಲಿಯ ಪವಾಡ ಕೇವಲ ಸಾಂಕೇತಿಕವೆಂದು ಭಾವಿಸಿದರೆ ಬಸವಣ್ಣ ಇಡೀ ಸ್ಪೃಶ್ಯಾಸ್ಪೃಶ್ಯ ವರ್ಗದ ಮಧ್ಯ ನಡೆಯುವ ಚರ್ಚೆಗೆ ಸೇತುವಾಗಿ ನಿಂತು ವಾದಿಸಿದ್ದನ್ನು ನೋಡಬಹುದು. ಈ ಸಂದರ್ಭದಲ್ಲಿಯೂ ಅರಸನದು ಇದ್ದೂ ಸತ್ತಂತಹ ಪರಿಸ್ಥಿತಿ. ತಪ್ಪಿನ ಅರಿವಾದ ಕೂಡಲೇ ಶಿವನಾಗಮಯ್ಯಗಳಿಗೆ ವಂದಿಸುತ್ತಾನೆ.

ಕಬ್ಬಿಲರು ಹಾಗೂ ಶಿವಭಕ್ತರ ಮಧ್ಯ ಪ್ರಸಾದಕ್ಕಾಗಿ ವಾಗ್ವಾದ ನಡೆದು ಅದು ಅರಸನಲ್ಲಿಗೆ ಚರ್ಚೆಗೆ ಬಂದ ಸಂದರ್ಭವೊಂದು ಉಲ್ಲೇಖಗೊಂಡಿದೆ. (೫೭:೩೮) ಸಮಾಜದ ಎರಡು ಪ್ರಮುಖ ವರ್ಗಗಳ ಮಧ್ಯ ವಿವಾದವುಂಟಾಗಿ ಬಗೆಹರಿಯದಾದಾಗ ಅಂತಿಮವಾಗಿ ನ್ಯಾಯ ನಿರ್ಣಯ ಮಾಡುತ್ತಿದ್ದನು ಎಂಬುದಕ್ಕೆ ಈ ಸಂದರ್ಭ ಸಾಕ್ಷಿಯಾಗಿ ನಿಲ್ಲುತ್ತದೆ. ಅಮೃತಮಥನ ಕಾಲದಲ್ಲಿ ಹುಟ್ಟಿದ ಹಾಲಾಹಲ ವಿಷವನ್ನು ಶಿವನು ಕುಡಿದ ಸಂದರ್ಭಕ್ಕೆ ಹೆಗಲೆಣೆಯಾಗಿ ನಿಲ್ಲಬಲ್ಲ ಈ ಸಂದರ್ಭದಲ್ಲಿ ಬಸವಣ್ಣನವರು ಕಟ್ಟುಗ್ರವಾದ ವಿಷವನ್ನು ಸೇವಿಸುವ ಪವಾಡದೊಂದಿಗೆ ಈ ಸಂದರ್ಭ ಮುಕ್ತಾಯವಾಗುತ್ತದೆ.

ಅರಸನಾದವನು ಪ್ರಜೆಗಳಿಗೆ ದುರ್ಲಭನಾಗಿರಲಿಲ್ಲ. ತಮಗೆ ಅನ್ಯಾಯವಾಗಿದೆ ಎಂದು ಭಾವಿಸಿದಾಗ ನೇರವಾಗಿ ಅರಸನಲ್ಲಿಗೆ ಹೋಗಿ ತಮ್ಮ ಕಷ್ಟವನ್ನು ತೋಡಿಕೊಂಡು ನ್ಯಾಯವನ್ನು ಯಾಚಿಸಿದ ಸಂದರ್ಭಗಳು ಬಸವಪುರಾಣದಲ್ಲಿ ಕಂಡು ಬರುತ್ತವೆ. ಕಿನ್ನರ ಬೊಮ್ಮಯ್ಯಗಳ ಆಶ್ರಯ ಪಡೆದ ಕುರಿಯನ್ನು ವಿಟಪುರುಷನು ಮರಳಿ ಕೊಡೆಂದು ಆಗ್ರಹ ಪಡಿಸಿದಾಗ ನಡೆದ ಜಗಳದಲ್ಲಿ ವಿಟಪುರುಷನು ಮರಣ ಹೊಂದುತ್ತಾನೆ. ಆಗ ವಿಟಪುರುಷನ ಸಂಬಂಧಿಗಳು ನೇರವಾಗಿ ಅರಸನಲ್ಲಿಗೆ ಈ ಪ್ರಕರಣ ತೆಗೆದುಕೊಂಡು ಹೋದುದನ್ನು ಕಾಣಬಹುದು. ಈ ಸಂದರ್ಭದಲ್ಲಿ ಬಿಜ್ಜಳನು ಬಸವಣ್ಣನವರನ್ನು ಕುರಿತು ಪೂರ್ವಾಪರ ಯೋಚಿಸದೆ ಹೀಗೆ ನುಡಿಯುತ್ತಾನೆ.

ಧರಣಿಯೊಳಗಿನ್ನೆಮ್ಮ ಮೇಲೊ
ಬ್ಬರಸನುಂಟೇ ಎಂಬವೋಲಾ
ಸುರದಿ ಕೊಂದಿಹರಲ್ಲದೇ ಮೇಣರಸನಾದಡೆಯು
ನಿರಪರಾಧಿಯನಿಂತು ಕೊಲುವನೆ
ಪರಮ ಪಾತಕವಾಗದೇ ಭ
ಕ್ತರಿಗಿದೋಜೆಯೆ ಅವರೊಳುಚಿತವನಱಿಸಲೇನುಂಟು..... (೨೭: ೩೦)

ಧರ್ಮವೆಂಬರು ತಾವು ನುಡಿದುದು
ಕರ್ಮವೆಂಬರು ಪರರ ನುಡಿದಡೆ
ಮಾರ್ಮನಿವುದೇಂ ನೀವೆಯೊಳೀ ರಾಷ್ಟ್ರವೆಲ್ಲವನು
ನಿರ್ಮಳದೊಳೆಮಗಾಳಲುಂಟೇ
ವರ್ಮುವೇಕಡಿಗಡಿಗೆ ನಿಮಗೀ
ಪೆರ್ಮೆ ಘನವಂಜುವೆವು ರಾಜ್ಯವನೊಪ್ಪು ಗೊಳ್ಳೆನಲು...(೨೭: ೩೩)

ಹೀಗೆ 'ನಿನ್ನ ಭಕ್ತರ ಉಪಟಳ, ಅನ್ಯಾಯ ಹೆಚ್ಚಿ ಹೋಯಿತು, ಸಾಕು ನೀನೇ ರಾಜ್ಯವಾಳಿಕೊ' ಎಂದು ಕೋಪದಿಂದ ನುಡಿಯುತ್ತಾನೆ. ಯತಾರ್ಥತೆಯನ್ನು ಮನಗಂಡು ಕಿನ್ನರಯ್ಯಗಳ ಅಡಿಗೆ ನಮಿಸುತ್ತಾನೆ. ಈ ಎಲ್ಲ ಸಂದರ್ಭಗಳ ಹಿನ್ನೆಲೆಯಲ್ಲಿ ಬಿಜ್ಜಳನು ಪ್ರಕರಣಗಳ ಸೂಕ್ಷ್ಮತೆಗಳನ್ನು ಅರಿತು ನ್ಯಾಯನಿರ್ಣಯ ಕೊಡುವ ಬುದ್ಧಿವಂತಿಕೆಯನ್ನು ತೋರುವುದಾಗಲಿ, ತತ್ಪರಿಣಾಮದ ಘನತೆ ಗೌರವ ಪಡೆಯುವ ಸಂದರ್ಭಗಳಾಗಲಿ ಪುರಾಣದಲ್ಲಿ ಕಂಡುಬರುವುದಿಲ್ಲ. ಈ ರೀತಿಯಾಗಿ ಅವಿವೇಕದಿಂದ ಬಿಜ್ಜಳ ನಡೆದುಕೊಂಡ ಸಂದರ್ಭದಲ್ಲಿ ಬಸವಣ್ಣನವರು ಅವನಿಗೆ ಅನೇಕ ಪುರಾತನರ, ಶಿವಭಕ್ತರ ಮಹಿಮಾತಿಶಯಗಳನ್ನೊಳಗೊಂಡ ಕಥೆಗಳನ್ನು ಹೇಳಿ ಸಾಂತ್ವನಗೊಳಿಸುವ, ಅವನ ಮನಸ್ಸಿನ ಹುಳಿಯನ್ನು ತಿಳಿಯಾಗಿಸುವ ಪ್ರಯತ್ನಗಳನ್ನು ಮಾಡುವ ಸಂದರ್ಭಗಳನ್ನು ಕಾಣಬಹುದು.

ಈ ಮೇಲಿನ ಎಲ್ಲ ಪ್ರಕರಣಗಳಲ್ಲಿ ಶಿವಭಕ್ತರ ಪರವಾಗಿ ಮತ್ತು ಅವರ ಪ್ರತಿನಿಧಿಯಾಗಿ ಹಾಗೂ ಬಿಜ್ಜಳನ ಪ್ರತಿವಾದಿಯಾಗಿ ನಿಲ್ಲುವವರು ಬಸವಣ್ಣನವರು. ಬಸವಣ್ಣನವರಿಲ್ಲದೆ ಯಾವ ನ್ಯಾಯಾನ್ಯಾಯ ವಿಚಾರವನ್ನು ಬಿಜ್ಜಳ ಮಾಡುವುದಿಲ್ಲ. ಬಸವಣ್ಣನವರ ಕಣ್ಣೆದುರಿನಲ್ಲೆ ಈ ಎಲ್ಲ ವಿಚಾರಣೆಗಳು ನಡೆಯುತ್ತವೆ. ಕಥಾನಾಯಕನ ಘನತೆ-ಗೌರವಗಳಿಗನುಗುಣವಾಗಿ ಪ್ರತಿ ಸಂದರ್ಭದಲ್ಲಿಯೂ ಬಸವಣ್ಣನವರನ್ನು ಎಳೆದು ತರುವುದು ಸಹಜವೇ ಆಗಿದೆ. ಅಂತಿಮವಾಗಿ

ಇಲ್ಲಿ ಗೆಲುವು ಶಿವಭಕ್ತರದ್ದೆ ಎಂಬುದನ್ನು ಮೇಲಿನ ಎಲ್ಲ ನಿದರ್ಶನಗಳಿಂದ ಕಂಡುಕೊಳ್ಳಬಹುದು. ಬಿಜ್ಜಳನ ಪರಿಸ್ಥಿತಿ ಏನಿದ್ದರೂ ಮುಖಭಂಗ ಎದುರಿಸುವ, ಪಶ್ಚಾತ್ತಾಪ ಪಡುವ, ಅರಸನಾದರೂ ಶರಣಾಗತನಾಗುವ, ತನ್ನ ಕೃತ್ಯಕ್ಕೆ ತಪ್ಪುದಂಡ ಕೊಡುವ ಸಂದರ್ಭಗಳನ್ನು ಕವಿ ಉಲ್ಲೇಖಿಸುತ್ತಾನೆ.

ಸಮಾಜದ ಮುಖ್ಯ ವರ್ಗವಾಗಿದ್ದ ವಿಪ್ರರ ಕೋರಿಕೆಯಂತೆ ತಕ್ಷಣವೇ ಅವರಿಗೆ ಸ್ಪಂದಿಸಿ ಶಿವಭಕ್ತರನ್ನು ಕರೆಸಿ ನ್ಯಾಯಾನ್ಯಾಯ ಚರ್ಚೆ ಕೈಗೆತ್ತಿಕೊಳ್ಳುವ ಬಿಜ್ಜಳನ ಮನೋಭಾವ ಅವನೊಬ್ಬ ಪಕ್ಷಪಾತಿಯಾಗಿ ವರ್ತಿಸುತ್ತಿದ್ದನೆಂಬುದಕ್ಕೆ ಉದಾರಹಣೆಯಾಗಿದೆ. ಬಿಜ್ಜಳ ಹಾಗೆ ವರ್ತಿಸಲು ವರ್ಣವ್ಯವಸ್ಥೆಯನ್ನು ಪೋಷಿಸಿಕೊಂಡು ಬರಬೇಕೆನ್ನುವ ಅವನ ಮನೋಭಾವವೂ ಕಾರಣವಿರಬಹುದು. ಸಾಮಾನ್ಯ ಜನಗಳು ಹೇಗೊ ಆದರೆ ಶಿವಭಕ್ತರು ಮಾತ್ರ ರಾಜನ ಆಜ್ಞೆಗಳನ್ನು ತಿರಸ್ಕರಿಸುವ, ಪ್ರತಿರೋಧವೊಡ್ಡುವ, ಅಪಸ್ವರವೆತ್ತುವ ನಿಲುವುಗಳನ್ನು ಬಸವಪುರಾಣದಲ್ಲಿ ಕಾಣಬಹುದು. ಬಸವಣ್ಣನವರು ಹೆಜ್ಜೆಹೆಜ್ಜೆಗೂ ಶರಣಗಣವನ್ನು ಸಮರ್ಥಿಸಿಕೊಳ್ಳುವ, ಪ್ರಭುತ್ವವನ್ನು ವಿರೋಧಿಸುವ ಆ ಮೂಲಕ ಶರಣಕುಲವೇ ಶ್ರೇಷ್ಠ ಎಂದು ಪ್ರತಿಪಾದಿಸುವ ಪ್ರಯತ್ನಗಳನ್ನು ಕಾಣಬಹುದು.

ಅ. ಶಿಕ್ಷೆಯ ವಿಧಾನಗಳು : ದಂಡ,ತಪ್ಪುದಂಡ, ಮರಣದಂಡನೆ ಇತ್ಯಾದಿ :

ಆರೋಗ್ಯಕರ ಸಮಾಜಕ್ಕೆ ಆರೋಗ್ಯಕರ ಮನಸ್ಸುಳ್ಳ ವ್ಯಕ್ತಿಗಳಿರಬೇಕುಂಬುದು ಮುಖ್ಯ. ಎಷ್ಟೋಸಾರಿ ಮನುಷ್ಯ ಸಂದರ್ಭದ ಕೈಗೊಂಬೆಯಾಗಿ ಅನೇಕ ರೀತಿಯ ತಪ್ಪುಗಳನ್ನೆದುರಿಸುತ್ತಾನೆ. ಇಂತಹ ತಪ್ಪುಗಳನ್ನು ವಿಚಾರಣೆ ಮಾಡಿ ಸೂಕ್ತವಾದ ಶಿಕ್ಷೆಯನ್ನು ವಿಧಿಸುವುದು ರಾಜನ ಕರ್ತವ್ಯವಾಗಿತ್ತು. ಇಂತಹ ಶಿಕ್ಷೆಯ ವಿವಿಧ ರೂಪಗಳೇ ದಂಡ, ತಪ್ಪುದಂಡ ಹಾಗೂ ಮರಣದಂಡನೆ. "ದಂಡ ಎಂಬುದು ತಪ್ಪು ಮಾಡಿದ ಆರೋಪಿಗೆ ಅನ್ವಯವಾದರೆ ತಪ್ಪು ದಂಡವು ಮಾಡಿದ ಆರೋಪವನ್ನು ಸಿದ್ಧಪಡಿಸದೆ, ಇದ್ದಾಗ ಆರೋಪ ಹೊರಿಸಿದವನಿಗೆ ಹೇರಲ್ಪಡುತ್ತಿತ್ತು." (ಪಾಟೀಲ ಸದಾನಂದ, ೧೯೯೯, ಪು.೧೨೦) ದಂಡದ ಪ್ರಕರಣಗಳು ಪುರಾಣದಲ್ಲಿ ದೊರೆಯುವುದಿಲ್ಲ. ಆದರೆ ತಪ್ಪುದಂಡ ಮತ್ತು ಮರಣದಂಡನೆಯಂತಹ ಶಿಕ್ಷೆಗಳು ಜಾರಿಯಲ್ಲಿದ್ದ ಬಗ್ಗೆ ಉಲ್ಲೇಖಗಳು ದೊರೆಯುತ್ತವೆ.

ಅಪರಾಧಗಳನ್ನು ಧರ್ಮಸೂತ್ರಗಳು ಈ ರೀತಿ ವಿಭಾಗ ಮಾಡುತ್ತವೆ. ೧.ವಾಕ್ಪರುಷ್ಯ–ಇತರರ ಬಗ್ಗೆ ಅಶ್ಲೀಲವಾದ ಮಾತುಗಳನ್ನಾಡುವುದು, ಧರ್ಮದ್ರೋಹದ ಮಾತನಾಡುವುದು ಇತ್ಯಾದಿ.೨. ದಂಡಪಾರುಷ್ಯ–ಇತರರನ್ನು ದೈಹಿಕವಾಗಿನೋಯಿಸುವುದು. ೩.ಸ್ತೇಯ–ಕಳ್ಳತನ ೪.ಸಾಹಸ–ಹಿಂಸಾಪ್ರಯೋಗ ೫. ಸ್ತ್ರೀಸಂಗ್ರಹನ– ಅತ್ಯಾಚಾರ– ವ್ಯಭಿಚಾರ. ಇವುಗಳಿಗನುಗುಣವಾಗಿ ಶಿಕ್ಷೆಯನ್ನು ನಾಲ್ಕು ಪ್ರಕಾರವಾಗಿ ಪ್ರಾಚೀನ ಗ್ರಂಥಗಳು ವರ್ಣಿಸುತ್ತವೆ. ೧. ಧಿಕ್ಕಾರದಂಡ ೨.ವಾಗ್ದಂಡ ೩. ಅರ್ಥದಂಡ ೪.ವಧಾದಂಡ ಎಂಬ ಶಿಕ್ಷೆಗಳನ್ನು ವಿಧಿಸುತ್ತಿದ್ದರೆಂದು ಪಿ.ವಿ. ನಾರಾಯಣ ಅವರು ಹೇಳುತ್ತಾರೆ. (೧೯೮೩, ಪು.೨೨೬)

ಜಗದೇವಮಂತ್ರಿ ಒಂದು ದಿನ ಬಸವಣ್ಣನವರನ್ನು ತನ್ನ ಮನೆಗೆ ಆರೋಗಣೆಗೆ ಕರೆದನು. ಬಸವಣ್ಣನವರು ಬರುವುದರೊಳಗಾಗಿ ಮನೆತನದ ಪೂರ್ವಾಚಾರದಂತೆ ಬ್ರಾಹ್ಮಣ ಭೋಜನ ಮಾಡಿಸಿದನು. ಇದನ್ನು ಸಹಿಸದ ಬಸವಣ್ಣನವರು 'ಕೆಲದಿನಕತಿ ಶಿವದ್ರೋಹವುದಯಿಸಲಾದುದುಂಟಾಗಿ ಮಡಿಹಿಸಾ ದ್ರೋಹಿಯ ನಮಗೊಡಂಬಡಿಕೆಯಾಯಿತು ನಿನ್ನ ಕೆಲಸಕೆ ಮೃಡನೊಲಿದು ಮೆಚ್ಚುವನು' (೫೯:೫೯, ೬೦) ಎಂದು ಜಗದೇವನಿಗೆ ತಪ್ಪುದಂಡ ವಿಧಿಸಿದುದನ್ನು ಕವಿ ಹೇಳುತ್ತಾನೆ. ಇದೇ ಜಗದೇವನು ಶಿವದ್ರೋಹಿಯಾದ ಬಿಜ್ಜಳನನ್ನು ಮೊದಲೇ ಕೊಲ್ಲದೆ ಬಿಟ್ಟದ್ದಕ್ಕಾಗಿ ತಪ್ಪುದಂಡವಾಗಿ ತನ್ನ ತಲೆ ಕಡಿದುಕೊಳ್ಳುವ ಉಲ್ಲೇಖವನ್ನು ಕವಿ ಹೇಳುತ್ತಾನೆ. (೬೦:೩೫) ಅಂದರೆ ಅಂದಿನ ಸಮಾಜದಲ್ಲಿ ತಪ್ಪುದಂಡವಾಗಿ ಹೀಗೆ ತಮ್ಮನ್ನು ತಾವು ಶಿಕ್ಷೆಗೊಳಪಡಿಸಿಕೊಳ್ಳಬಹುದಾದ ಆಚರಣೆಗಳಿದ್ದವೆಂದು ಕಂಡುಬರುತ್ತದೆ.

ಸ್ವತಃ ಬಿಜ್ಜಳನೇ ಅನೇಕ ಸಂದರ್ಭದಲ್ಲಿ ತಪ್ಪುದಂಡ ಕಟ್ಟಿದ ಉದಾಹರಣೆಗಳನ್ನು ನೋಡಿದ್ದೇವೆ. ತಪ್ಪಿನ ಅರಿವಾದಾಗ ಪ್ರಚಲಿತ ಪದ್ಧತಿಯಂತೆ ತಪ್ಪೊಪ್ಪುವುದು ಮತ್ತು ತಪ್ಪುದಂಡ ನೀಡುವುದು ರಾಜನಂಥವರಿಗೂ ಅನ್ವಯವಾಗುವ ಸಂಗತಿಯಾಗಿತ್ತು. ಆ ಮೂಲಕ ಪ್ರಭುಪ್ರಜೆ ಸಮಾನರು ಎಂಬ ಬಸವವಾಣಿಯು ಭೀಮಕವಿಯ ಬಸವಪುರಾಣದಲ್ಲಿ ಪ್ರತಿಬಿಂಬಿತವಾಗಿದೆ ಎಂದು ಹೇಳಬಹುದು.

ದಂಡ ತಪ್ಪುದಂಡಗಳಿಗಿಂತ ಅತ್ಯಂತ ಕ್ರೂರವಾದ ಶಿಕ್ಷೆ ಎಂದರೆ ದೈಹಿಕ ದಂಡನೆ ಮತ್ತು ಮರಣದಂಡನೆ. ಒಂದೆರಡು ಸಂದರ್ಭಗಳಲ್ಲಿ ದೈಹಿಕ ಶಿಕ್ಷೆಯ ಪ್ರಕಾರಗಳು ಉಕ್ತಗೊಂಡಿದ್ದನ್ನು ಕಾಣಬಹುದು. ಶಿವನಾಗಮಯ್ಯಗಳ ಕರಸ್ಥಳದಿಂದ ಹಾಲು ಚಿಮ್ಮಿಸುವ ಮೊದಲು ಬಸವಣ್ಣನವರು 'ನಾನು ಶಿವನಾಗಮಯ್ಯಗಳ ತನುವಿನಿಂದ ಹಾಲು ಹೊರಡಿಸುತ್ತೇನೆ. ನೀವು ಸೋಮಯಾಜಿಗಳ ತನುವಿನಿಂದ ನೀರನ್ನಾದರೂ ಹೊರಡಿಸಿ, ಇಲ್ಲದಿದ್ದರೆ ನಿಮ್ಮನ್ನೆಲ್ಲ ಪಟ್ಟಣದ ಸುತ್ತ ಎಳೆಹೊಟೆ ಹೊಡಿಸುವೆ' (೫೫:೮೦) ಎಂಬ ಸವಾಲನ್ನು ಹಾಕುತ್ತಾನೆ. ಇದರಿಂದ 'ಎಳೆಹೂಟೆ' ಎಂಬ ಶಿಕ್ಷೆ ಅಂದರೆ ಅಪರಾಧಿಗಳನ್ನು ಆನೆಯ ಕಾಲಿಗೊ, ಕುದುರೆಯ ಗೊರಸಿಗೊ ಕಟ್ಟಿ ಪಟ್ಟಣದಲ್ಲೆಲ್ಲಾ ಎಳೆದಾಡಿಸುವ ಶಿಕ್ಷೆ ಅಂದು ಜಾರಿಯಲ್ಲಿತ್ತೆಂದು ತೋರುತ್ತದೆ. ಇಂತಹ ಶಿಕ್ಷೆಗಳಿಂದ ಸಮಾಜದಲ್ಲಿ ಅಪರಾಧಗಳ ಪ್ರಮಾಣ ಕಡಿಮೆಯಾಗುತ್ತಿದ್ದಿರಬಹುದು. ಬಸವಪುರಾಣಾಂತ್ಯದಲ್ಲಿ ಕವಿಯು ಇನ್ನೊಂದು ರೀತಿಯ ಶಿಕ್ಷೆಯ ಪ್ರಕಾರವನ್ನು ಹೇಳಿದ್ದು ಕಂಡುಬರುತ್ತದೆ.

ಸೊಗಸದವದಿರ ಮಾತಿಗ್ಗಳ್ಳ
ಯ್ಯಗಳ ಮಧುವಯ್ಯಗಳನಾಗಳೆ
ಜಗತಿಪಂ ತಪ್ಪೇನುವಿಲ್ಲದೆ ನೀತಿಯಲ್ಲೆಂದು
ಬಗೆಯದವರಂ ಕರೆಸಿ ಕಣ್ಣಂ
ತೆಗೆಸಿದನು ....
.. ... (೬೦: ೪)

ಪ್ರತಿಲೋಮ ವಿವಾಹದ ನೆಪವೊಡ್ಡಿ ಬಿಜ್ಜಳನು ಅಳ್ಳಯ್ಯ (ಹರಳಯ್ಯ) ಹಾಗೂ ಮಧುವಯ್ಯಗಳ ಕಣ್ಣನ್ನು ಕೀಳಿಸಿದ ಸಂದರ್ಭವನ್ನು ನೋಡಿದರೆ ಅಂಗಚ್ಛೇದ ವೆಂಬ ಶಿಕ್ಷೆ ಜಾರಿಯಿದ್ದಿತೆಂದು ತಿಳಿದು ಬರುತ್ತದೆ. ಬಹುಶಃ ಬಿಜ್ಜಳನ ಈ ತಪ್ಪು ನಿರ್ಧಾರವೇ ಮುಂದಿನ ಅನೇಕ ದುರ್ಘಟನೆಗಳಿಗೆ ಕಾರಣವಾದದ್ದು ವಿಪರ್ಯಾಸ.

ದಂಡ, ತಪ್ಪುದಂಡ, ದೈಹಿಕ ಶಿಕ್ಷೆಗಿಂತ ಅತ್ಯಂತ ಕ್ರೂರವಾದ ಶಿಕ್ಷೆ ಎಂದರೆ ಮರಣದಂಡನೆ. ಮರಣದಂಡನೆಯನ್ನು ವಚನಕಾರರು 'ತಲೆದಂಡ' ಎಂದು ಕರೆಯುತ್ತಾರೆ. ಮೇಲಿಂದ ಮೇಲೆ ವಚನದಲ್ಲಿ ಕಾಣಿಸಿಕೊಳ್ಳುವ ಈ ಪದ ಪ್ರಯೋಗವನ್ನು ನೋಡಿದರೆ ಈ ಶಿಕ್ಷೆ ಅಂದು ಸರ್ವವ್ಯಾಪಿಯಾಗಿತ್ತೆಂದು ಕಾಣುತ್ತದೆ. ಈ ಉಗ್ರಶಿಕ್ಷೆಯೂ ಭೀಮಕವಿಯ ಕಾಲದಲ್ಲಿಯೂ ಮುಂದುವರೆದುಕೊಂಡು ಬಂದದ್ದನ್ನು ಕಾಣಬಹುದು. ಹಾಗಾಗಿಯೇ ಕವಿ ಇವುಗಳ ಉಲ್ಲೇಖವನ್ನು ಅತ್ಯಂತ ಸಹಜವಾಗಿ ಮಾಡಿದಂತೆ ತೋರುತ್ತದೆ.

ತನ್ನ ವ್ರತಭಂಗಕ್ಕೆ ಪ್ರತಿಯಾಗಿ ಕೋಪಗೊಂಡ ಮಡಿವಾಳ ಮಾಚಯ್ಯನು ಭವಿಯೊಬ್ಬನನ್ನು ಕೊಲ್ಲುತ್ತಾನೆ. ದೂರು ಆಲಿಸಿದ ಬಿಜ್ಜಳನು ಮಾಚಯ್ಯನವರನ್ನು ಕೊಲ್ಲಲು ಆನೆಯೊಂದನ್ನು ಬಿಟ್ಟನೆಂದು ಕವಿ ಉಲ್ಲೇಖಿಸುತ್ತಾನೆ.

ಧಾರ್ಮಿಕ ಜೀವನದ ಪರಿಧಿಯಲ್ಲಿ ಅನೇಕರನ್ನು ಶೂಲಕ್ಕೇರಿಸಿದ ಸಂದರ್ಭಗಳು ಪುರಾಣಗಳಲ್ಲಿ ದೊರೆಯುತ್ತವೆ. ಮಧುರೆಯಲ್ಲಿ 'ಪಿಳ್ಳೆಯನಯನಾರೆಂಬ' ಶಿವಭಕ್ತ ಹಾಗೂ ಜೈನರ ಮಧ್ಯ ವಾದ-ವಿವಾದ ನಡೆದು ಕೊನೆಗೆ ಶರಣು ಬಂದ ಹದಿನೆಂಟು ಸಾವಿರ ಜೈನರನ್ನು ಶೂಲಕ್ಕೆ ಏರಿಸಿದ ಪ್ರಸಂಗಕ್ಕೆ ಅರಸನೇ ಸಾಕ್ಷಿಯಾದದ್ದನ್ನು ಕವಿ ವಿವರಿಸುತ್ತಾನೆ. (೨೦:೩೮) ಅಲ್ಲದೇ ಇನ್ನೊಂದು ಸಂದರ್ಭದಲ್ಲಿ 'ನಿಡುಮಾರನೆಂಬ' ದೊರೆ ಶಿವಭಕ್ತರಾಗಲು ಒಪ್ಪದವರನ್ನು ಶೂಲಕ್ಕೇರಿಸಿದ ಸಂದರ್ಭವು ಉಕ್ತವಾಗಿದೆ. (ಸಂ.೪೯)

ಡೋಹರ ಕಕ್ಕಯ್ಯನೆಂಬ ಶಿವಶರಣನು 'ಸರ್ವಂ ವಿಷ್ಣುಮಯಂ' ಎಂದು ವಿಷ್ಣುವಿನ ಮಹಿಮೆಯನ್ನು ಹೇಳುತ್ತಿದ್ದ ಪುರಾಣಿಕನನ್ನು ಇರಿದು ಕೊಲ್ಲುವ ಉಲ್ಲೇಖ ಬಸವಪುರಾಣದಲ್ಲಿ ಕಂಡುಬರುತ್ತದೆ. ಈ ಎಲ್ಲ ಸಂದರ್ಭಗಳು ಧರ್ಮನಿಂದನೆಯ ಹಿನ್ನೆಲೆಯಲ್ಲಿ ವ್ಯಕ್ತವಾದದ್ದು ವಿಶೇಷ. ಈ ಹಿನ್ನಲೆಯ ತಪ್ಪುಗಳಿಗೆ ವಧಾದಂಡವೇ ಪ್ರಚಲಿತವಿತ್ತು ಎಂಬುದಕ್ಕೆ ಈ ಸಂದರ್ಭಗಳು ಸಾಕ್ಷಿಯನ್ನು ಒದಗಿಸುತ್ತವೆ.

ಆ. ಕಳ್ಳತನ-ಬಂದಿ-ಕೊಲೆ :

ಕರಿಯ ಬದನೆಯ ಕಾಯಿಗಳನ್ನು ಲಿಂಗವೆಂದು ಧರಿಸಿ, ಭಕ್ತರೆಂದು ವಂಚಿಸಲು ಬಸವಣ್ಣನವರ ಬಳಿಗೆ ಬಂದವರು ಪೂಜೆಯ ಕಾಲದಲ್ಲಿ ಉಟ್ಟಬಟ್ಟೆಯ ಸೆರಗಿನಲ್ಲಿ ಕಟ್ಟಿರ್ದ ಬದನೆಯ ಕಾಯಿಗಳು ಬಸವರಾಜನ ಸಂಗಭಾವದಿ (ಶಿವಭಾವದಿ) 'ಬಾಣಲಿಂಗ ಸುರಂಗ'

ವಾದುದನ್ನು ಕವಿ ಹೇಳುತ್ತಾನೆ. (ಸಂ.೮) ಇಲ್ಲಿ ಬದನೆಕಾಯಿಗೂ ಅಂದು ಪೂಜಿಸುತ್ತಿದ್ದ ಲಿಂಗಕ್ಕೂ ಹೇಳಿರುವ ಸಾದೃಶ್ಯವೂ ಗಮನಾರ್ಹ. 'ಪೀತ' ಮತ್ತು 'ಬಾಣ' ಲಿಂಗದ ಬಣ್ಣ ಕರಿದಾಗಿದ್ದಿತೆಂಬುದಕ್ಕೆ ಇದು ನಿದರ್ಶನ. ಬಸವಣ್ಣನವರು ಅವರನ್ನು ಆದರೋಕ್ತಿಗಳಿಂದ ಲಿಂಗಾರ್ಚನೆಗೆ ಭಿನ್ನವಿಸಿದನು. ಕಳ್ಳರು ಕಕ್ಕಾಭಿಕ್ಕಿಯಾಗಿ ಓಡಿ ಹೋಗಲು ಉಪಾಯವಿಲ್ಲದೆ ಒಬ್ಬರೊಬ್ಬರು ಮುಖವನ್ನು ನೋಡುತ್ತ ಪೂಜೆಗೆ ಕುಳಿತರು. ಅವರ ಕೊರಳಲ್ಲಿಯ ಬದನೆಕಾಯಿಗಳು ಲಿಂಗಗಳಾಗಿ ಕಳ್ಳರು ಭಕ್ತರಾಗಿ ಬಸವಮಹಿಮೆಯನ್ನು ಹೊಗಳಿದ ಅಪರೂಪದ ಪ್ರಸಂಗವಿದಾಗಿದೆ. ಆ ಮೂಲಕ ಬಸವಣ್ಣನವರ ಪ್ರಭಾವಕ್ಕೆ ಒಳಗಾದ ವಂಚಕರು ತಮ್ಮ ಮೂಲ ಕುತ್ಸಿತ-ದುರ್ಗುಣಗಳನ್ನು ಕಳೆದುಕೊಂಡು ಸಾತ್ವಿಕರಾಗುತ್ತಿದ್ದರು ಎಂಬುದನ್ನು ಈ ಪ್ರಸಂಗ ಹೇಳುತ್ತದೆ. ಅಲ್ಲದೇ ಕಳ್ಳತನಕ್ಕೆ, ಕೊಲೆಮಾಡಿದುದಕ್ಕೆ ಸೆರೆ ಸಿಕ್ಕವನಿಗೆ ಪುರಾಣದಲ್ಲಿ ಮೌಲ್ಯಪಲ್ಲಟದ ಮಾದರಿಯ ಉತ್ತರ ದೊರೆಯುತ್ತಿದೆಯೇ ಹೊರತು ಸಂಬಂಧಪಟ್ಟ ಶಿಕ್ಷೆಯಲ್ಲ ಎಂದು ಹೇಳುವುದೇ ಕವಿಯ ಉದ್ದೇಶವಾಗಿರುವಂತಿದೆ.

ಶಿವಭಕ್ತನ ವೇಷ ಧರಿಸಿ ಲೆಂಕರಸನೆಂಬುವನು ಬಸವಣ್ಣನವರ ಮಹಾಮನೆ ಹೊಕ್ಕು ಸತಿ ಗಂಗಾದೇವಿಯ ನೀಲಮುತ್ತಿನೋಲೆಯನ್ನು ಕದಿಯುತ್ತಾನೆ. ಆ ಸಂದರ್ಭದಲ್ಲಿ ಬಸವಣ್ಣನವರು "ಸಂಗನ ಕರಂ ನೊಂದುದೆ ಬೆಸಸುವಲ್ಲಿಂ ಮುನ್ನವೇ ಕೊಡದೆ ನಿಲ್ವುದೇ" (ಬ.ದೇ.ರ. ಪು.೧೭೬) ಎಂದು ಹೇಳುತ್ತಾನೆ. "ಒಡೆಯರು ತಮ್ಮ ಒಡವೆಯನ್ನು ಬಯಸಿದರೆ ಕೊಡದಿರುವುದು ಉನ್ನಯವೆ? ಒಡೆಯರು ಕನ್ನವಿಕ್ಕುವೆನೆಂದರೆ ಅವರ ಹಿಂದೆ ಕತ್ತಿ ಹಿಡಿದು ನಡೆಯುವೆ; ಅವರನ್ನು ಬಂಧಿಸಿದರೆ ಅವರಿಗಿಂತ ಮುನ್ನವೆ ಸೆರೆಮನೆಯ ಒಳಗಿರುವೆ" ಎಂದು ಹೇಳುವ ಹರಿಹರನ ಬಸವಣ್ಣನವರ ವ್ಯಕ್ತಿತ್ವ ಉದಾತ್ತವಾದದ್ದು. "ಒಡನಿರ್ದ ಸತಿಯೆಂದು ನಚ್ಚಿರ್ದೆನಯ್ಯಾ, ಕೈವಿಡಿದ ಸಜ್ಜನೆಯೆಂದು ನಂಬಿರ್ದೆನಯ್ಯಾ, ಅಯ್ಯಾ, ನಮ್ಮಯ್ಯನ ಕೈನೊಂದಿತು, ತೆಗೆದುಕೊಡಾ" (ಸ.ವ.ಸಂ.೧, ವ.೧೧೦೮) ಎಂಬ ಬಸವ ವಚನವೂ ಈ ಮೇಲಿನ ಸಂದರ್ಭಕ್ಕೆ ಪ್ರೇರಣೆಯಾಗಿರಬೇಕು.

ಏಲೇಶ್ವರ ಕೇತಯ್ಯನೆಂಬ ಭಕ್ತನ ಹಸುಗಳನ್ನು ಕಳ್ಳತನ ಮಾಡಿದಾಗಲೂ ಸಹ ಶಿವಶರಣರಿಂದ ವ್ಯಕ್ತವಾದ ಪ್ರತಿಕ್ರಿಯೆ ಆಶ್ಚರ್ಯವನ್ನುಂಟು ಮಾಡುತ್ತದೆ. 'ಗೋಗ್ರಹಣ' ಎಂಬುದು ಸನಾತನ ಕಾಲದ ಯುದ್ಧಾಹ್ವಾನದ ಒಂದು ಮೌಲ್ಯವಾಗಿತ್ತು. ಗೋವಳನ 'ಪುಯ್ಯಲು' ಅಂಥ ಮೌಲ್ಯವೊಂದರ ರಕ್ಷಣೆ ಮಾಡುವುದನ್ನು ಸೂಚಿಸುತ್ತದೆ. ಆದರೆ ಆಕಳುಗಳಿಗಾಗಿ ಪ್ರಾಣ ಕಳೆದುಕೊಳ್ಳಬೇಕೆನ್ನುವ ವೈದಿಕ ನಿರಾಕರಣೆಯ ಅರ್ಥ ಇಲ್ಲಿ ತುಂಬಿಕೊಂಡಿದ್ದನ್ನು ಗಮನಿಸಬಹುದು. ಏಳು ದಿನ ನಿರಾಹಾರದಲ್ಲಿದ್ದ ಆಕಳುಗಳನ್ನು ಕೊನೆಗೆ ಕಳ್ಳರೆ ಬಿಟ್ಟು ಕೊಡುತ್ತಾರೆ. (೫೯: ೨೫) ಕಳ್ಳರಿಗೆ ಶಿವಶರಣರಿಂದ ಸಿಗುವ ಉತ್ತರ ಸಂಗ್ರಹಭಾವನೆ ಅನೀತಿಯುತವಾದದ್ದು ಎಂಬುದೇ ಆಗಿದೆ. ಭೀಮಕವಿಯ ಈ ನಿದರ್ಶನಕ್ಕೆ "ಆಕಳ ಕಳ್ಳರು ಕೊಂಡೊಯ್ದರೆನ್ನದಿರಿಂ ಭೋ, ನಿಮ್ಮ

ಧರ್ಮ! ಬೊಬ್ಬಿಡದಿರಿಂ ಭೋ, ನಿಮ್ಮ ಧರ್ಮ!" (ಸ.ವ.ಸಂ.೧: ವ.೮೩೦) ಎಂಬ ಬಸವಣ್ಣನವರ ವಚನವೇ ಪ್ರೇರಣೆಯಾಗಿರಬಹುದು.

ಸಿರಿಯಾಳ ಚೆಂಗಳೆಯರು ಮತ್ತು ನಿಂಬಿಯಕ್ಕ ಎಂಬ ಶಿವಭಕ್ತರು ತಮ್ಮ ಮಗನನ್ನು ಕೊಂದು ಶಿವಭಕ್ತಿ ಆಚರಿಸಿದ ಉದಾಹರಣೆಗಳು ದೊರೆಯುತ್ತವೆ. (ಸಂ.೨೩) ಅರಿಯಮನೆಂಬ ಶಿವಭಕ್ತನು ಭಿಕ್ಷೆಗೆ ಬಂದ ಬ್ರಾಹ್ಮಣನಿಗೆ ಭಿಕ್ಷೆ ಹಾಕಿದಾಗ ಒಂದಗುಳು ನೆಲಕ್ಕೆ ಬಿದ್ದಿತೆಂದು ಬ್ರಾಹ್ಮಣ ಅನ್ಯ ಶಬ್ದ ನುಡಿಯುತ್ತಾನೆ. ಆಗ ಅರಿಯಮನು ಅವನನ್ನು 'ಸಟ್ಟುಗ'ದಿಂದ ಹೊಡೆದು ಕೊಲ್ಲುತ್ತಾನೆ. (೫೨: ೪೦) ಬಹುಶಃ ದೈವನಿಂದನೆಯ ಶಬ್ದದಿಂದ ಕ್ರೋಧಗೊಂಡ ಶಿವಭಕ್ತನು ಈ ರೀತಿ ಮಾಡಿರಲು ಸಾಧ್ಯ. ಶೂರನಾದ ಏಣಾದಿನಾಥನೆಂಬ ಭಕ್ತ ಕಪಟ ಶಿವಭಕ್ತನನ್ನು ಕಂಡು ರಣರಂಗದಲ್ಲಿ ಕರದ ಕರವಾಳನ್ನು ಬಿಸುಟು ನಮಸ್ಕರಿಸುತ್ತಾನೆ. ದಳಪತಿ ಅವನ ಕೊರಳನ್ನು ಇರಿದು ಕೊಲ್ಲುವ ಉಲ್ಲೇಖವನ್ನು ಕವಿ ಕೊಡುತ್ತಾನೆ. (೨೬:೩೧) ಈ ಘಟನೆಯು ಭಯಾನಕತೆಯಿಂದ ಕೂಡಿದ್ದು, ಇಂದಿನ ಭಯೋತ್ಪಾದಕತೆಯನ್ನು ನೆನಪಿಸುವಂತಿದೆ.

ಬಸವಪುರಾಣದ ಅಂತ್ಯದಲ್ಲಿಯೂ, ಭೀಕರವಾದ ಕೊಲೆಯ ಪ್ರಸಂಗದ ಉಲ್ಲೇಖವನ್ನು ಕವಿ ಕೊಡುತ್ತಾನೆ. 'ತದ್ರೋಹಿಯನಪಹರಿಸಿ ನನ್ನಿಯಂಮೆ' ಎಂಬ ಬಸವಣ್ಣನವರ ಆದೇಶದಂತೆ ಮೊಲ್ಲ ಬೊಮ್ಮಯ್ಯರೆಂಬಿಬ್ಬರು ಬಿಜ್ಜಳನ ಅರಮನೆ ಹೊಕ್ಕು ಓಲಗದಲ್ಲಿದ್ದ ಬಿಜ್ಜಳನನ್ನು ಇರಿದು ಕೆಡವಿದರು. (೬೦: ೩೧) ಈ ಹಿನ್ನೆಲೆಯಲ್ಲಿ ಉಂಟಾಗಿರುವ ದ್ವೇಷಮಯ ವಾತಾವರಣವನ್ನು ಕವಿ ವಿವರಿಸಿದ್ದಾನೆ. ಬಸವಪುರಾಣದ ಕಥೆಯ ಅಂತ್ಯ ಬಿಜ್ಜಳನ ಕೊಲೆಯೊಂದಿಗೆ ಅಂತ್ಯವಾಗುವುದು ವಿಪರ್ಯಾಸ. ಇದೊಂದು ದುರಂತ ಅಂತ್ಯವೆಂದೇ ಹೇಳಬಹುದು.

ಇ. ಅಗ್ರಹಾರ–ಶಿವಪುರ :

ಬ್ರಾಹ್ಮಣರ ಉಪಜೀವನಕ್ಕಾಗಿ ದತ್ತಿಯಾಗಿ ಬಿಟ್ಟುಕೊಟ್ಟ ಊರನ್ನು ಅಗ್ರಹಾರವೆಂದು ಕರೆಯುತ್ತಾರೆ. ಹಾಗೆಂದು ಅಗ್ರಹಾರದಲ್ಲಿ ಬ್ರಾಹ್ಮಣರೇ ಇರಬೇಕಿಲ್ಲ. ಬೇರೆ ಜಾತಿಯ ಜನಾಂಗಗಳು ಇರಬಹುದು. ಆದರೆ ಆ ಊರಿನ ಉತ್ಪತ್ತಿಯೆಲ್ಲವೂ ಬ್ರಾಹ್ಮಣರಿಗೆ ಸೇರುತ್ತದೆ. ಸಮಾಜದ ಮುಖ್ಯ ವರ್ಗವಾಗಿದ್ದ ಅವರು ಅನೇಕ ಅಗ್ರಹಾರಗಳನ್ನು ಪಡೆದು ರಾಜ್ಯಾದಾಯಕ್ಕೆ ಸಲ್ಲಬೇಕಾದ ಐಶ್ವರ್ಯವನ್ನು ಅನುಭವಿಸುತ್ತಿದ್ದರು.

'ಶಿವಭಕ್ತಿಬೀಜಕ್ಕಿರವೆನಿಸಿದೊಂದಿಗುಳೇಶ್ವರ ಬಾಗವಾಡಿಯದು ಆ ಮಹಾಬಹುಳಗ್ರಹಾರ' (೨:೪೫, ೪೬) ಎಂದು ಕವಿಯು ಬಸವಣ್ಣನವರು ಬಾಗೆವಾಡಿಯೆಂಬ ಅಗ್ರಹಾರದಲ್ಲಿ ಜನಿಸಿದನೆಂದು ಹೇಳುತ್ತಾನೆ. ಕಲ್ಯಾಣ ಪಟ್ಟಣದ ಅಕ್ಕಪಕ್ಕದಲ್ಲಿ ಇಂತಹ ಅಗ್ರಹಾರಗಳಿರಬಹುದು. ಪಟ್ಟಣದ ಒಂದು ಭಾಗವಾಗಿಯೂ ಅಗ್ರಹಾರಗಳು ಇರುತ್ತಿದ್ದವು. ಅಗ್ರಹಾರಗಳು 'ಊರು'ಗಳಾದರೆ ಬ್ರಹ್ಮಪುರಿಗಳು ಬ್ರಾಹ್ಮಣ ವಿದ್ವಾಂಸರು ವಾಸಿಸುವ ಭಾಗಗಳಾಗಿದ್ದವೆಂದು ಎಂ.ಚಿದಾನಂದಮೂರ್ತಿಯವರು ಹೇಳುತ್ತಾರೆ.

(೨೦೦೮, ಪು.೨೩೮) ಆದರೆ ಬಸವಪುರಾಣದಲ್ಲಿ ಅಗ್ರಹಾರ ಮತ್ತು ಬ್ರಹ್ಮಪುರಿಗಳನ್ನು ಏಕಾರ್ಥದಲ್ಲಿಯೇ ಕರೆದಿರುವುದು ಕಂಡುಬರುತ್ತದೆ. "ಅಗ್ರಹಾರವಿದಂ ಪುನರಪಿ ಸಮಗ್ರದಲ್ಲುದ್ಧರಿಸಿ ಧಾರೆಯನಗ್ರದಿಂದಿದು ನಿಮ್ಮ ಬ್ರಹ್ಮಪುರಿಗಳನು" (೫೫:೪೫) ಎಂಬ ಮಾತುಗಳಿಂದ ಎರಡೂ ಒಂದೇ ಎಂದು ಭಾವಿಸಲಿಕ್ಕಾಗದು.

ಅಗ್ರಹಾರಗಳಲ್ಲಿ ಸರ್ವಧರ್ಮೀಯರು ವಾಸ ಮಾಡುತ್ತಿದ್ದರೆಂಬುದಕ್ಕೆ 'ಕೆಂಭಾವಿ'ಯೆಂಬ (೫೬:೩೧) ಅಗ್ರಹಾರದಲ್ಲಿ ವಾಸಿಸುವ 'ಭೋಗಯ್ಯ' ಹಾಗೂ 'ನಾವದಿಗೆ' ಎಂಬ ಅಗ್ರಹಾರದಲ್ಲಿ ವಾಸಿಸುವ 'ಗುಡ್ಡವ್ವೆ' ಮತ್ತು 'ಗೊಬ್ಬೂರಲ್ಲಿ' ವಾಸ ಮಾಡುವ ಬಿಬ್ಬಿಬಾಚಯ್ಯ ಎಂಬ ಮೂವರು ಶಿವಭಕ್ತರ ಉಲ್ಲೇಖ ದೊರೆಯುತ್ತದೆ. (೫೬:೫೭, ೫೫:೧) ಭೋಗಯ್ಯನು ಮೃಡಮೂರ್ತಿಗೆ ಸತ್ತ ಕರುವಿನ ಮಾಂಸದಡಿಗೆ ಮಾಡಿ ಬಡಿಸುವ ವಿಷಯ ತಿಳಿದ ಅವನನ್ನು ಅಗ್ರಹಾರದಿಂದ ಹೊರ ಹಾಕುವ ಸಂದರ್ಭವಾಗಲಿ ಮತ್ತು ತೊನ್ನು ರೋಗದಿಂದ ವಿರೂಪಗೊಂಡ ಗುಡ್ಡವ್ವೆಯನ್ನು ಊರು ಬಿಟ್ಟು ಕಳುಹಿಸುವ ಸಂದರ್ಭಗಳನ್ನು ಗಮನಿಸಿದರೆ ಅಗ್ರಹಾರದಲ್ಲಿ ಬ್ರಾಹ್ಮಣರೆ ಅಧಿಪತ್ಯ ಪಡೆದಿದ್ದರೆಂಬುದು ತಿಳಿಯುತ್ತದೆ.

ಅಗ್ರಹಾರಕ್ಕೆ ಪ್ರತಿಯಾಗಿ ಶಿವಭಕ್ತರು ಸೃಷ್ಟಿಸಿಕೊಂಡ ಊರುಗಳೆ ಶಿವಪುರಗಳು. ಅಗ್ರಹಾರಗಳಲ್ಲಿ ಬ್ರಾಹ್ಮಣರು ಆಧಿಪತ್ಯ ಹೊಂದಿದ್ದರೆ ಶಿವಪುರಗಳಲ್ಲಿ ಶಿವಭಕ್ತರೆ ಮೇಲುಗೈ ಪಡೆದಿದ್ದರು. ಎಷ್ಟೋ ಸಂದರ್ಭಗಳಲ್ಲಿ ಅಸ್ಪೃಶ್ಯವರ್ಗ ವಾಸಿಸುವ ಸ್ಥಳವನ್ನು 'ಶಿವಪುರ' ಎಂದು ಕರೆಯುತ್ತಿದ್ದರು. ಅವರ ಕೇರಿಯನ್ನು 'ಮಾಹೇಶ್ವರ ಕೇರಿ' ಎಂದು ಕರೆಯುತ್ತಿದ್ದರು. ಶಿವಪುರಗಳು ೧.ಹಿರಿಯಮಾಹೇಶ್ವರರು ಎಂದು ಕರೆಯಲ್ಪಡುವ ಹೊಲೆಯರು ವಾಸಿಸುವ ಸ್ಥಳಗಳಾಗಿದ್ದವು. ೨.ರಾಜಧಾನಿಯಿಂದ ತುಸು ದೂರದಲ್ಲಿ ನಗರ ಜಂಜಡದಿಂದ ದೂರವಿರಲು ಗಣಪರ್ವ, ಶಿವರಾತ್ರಿ ಆಚರಿಸಲು ಶಿವಭಕ್ತರು ನಿರ್ಮಾಣ ಮಾಡಿಕೊಂಡವುಗಳಾಗಿದ್ದವು. ೩.ಪರಸಮಯಿಗಳನ್ನು ತಮ್ಮ ಅಂಕಿತಕ್ಕೊಳಪಡಿಸಿಕೊಂಡು ಶಿವಭಕ್ತ ಮತಕ್ಕೆ ಬದಲಾಯಿಸಿಕೊಂಡು ಊರಿಗೆ ಊರನ್ನೇ ಶಿವಪುರವೆಂದು ಸಾರಿಕೊಂಡ ಸ್ಥಳಗಳಾಗಿದ್ದವು. ಶಿವಭಕ್ತರ ಮೇಲಿನ ಪ್ರೀತಿ, ಅಭಿಮಾನ ದ್ಯೋತಕವಾಗಿ ರಾಜ-ರಾಣಿಯರು ಶಿವಭಕ್ತರಿಗೆ ನೀಡಿದ ಊರು ನಗರಗಳು ಆಗಿದ್ದವು. (ಪಾಟೀಲ ಸದಾನಂದ, ೧೯೯೯, ಪು.೧೨೫) "ಲಾಲಿಸುತ್ತ ಮೊನ್ನೆ ಈ ಸಿರಿಯಾಳನಂ ನೋಡಲ್ಕೆ ಕಂಚಿಯೊಳೇಳು ಕೇರಿಯನೊಯ್ಯಲದ'ಲಿ ಬೆರಸಿ ಶಿವಪುರಕೆ" (೨೪: ೧೧) ಎಂಬ ಉಲ್ಲೇಖವೊಂದನ್ನು ಹೊರತುಪಡಿಸಿದಂತೆ ಎಲ್ಲೂ ಸಹ ಶಿವಪುರಗಳ ಉಲ್ಲೇಖ ಪುರಾಣದಲ್ಲಿ ಕಂಡು ಬರುವುದಿಲ್ಲ. ಬಹುಶಃ ಏಕಾಂತರಾಮಯ್ಯಗಳು, ಪಿಳ್ಳೆಯನಯನಾರು, ನಿಡುಮಾರ ಹಾಗೂ ಮಾರುಡಿಗೆಯ ನಾಚಯ್ಯಗಳು ಜೈನ, ಬೌದ್ಧರೊಡನೆ ಮೇಲುಗೈ ಪಡೆದದ್ದನ್ನು ನೋಡಿದರೆ ಆ ಊರುಗಳೆಲ್ಲಾ ನಂತರ 'ಶಿವಪುರ'ಗಳಾಗಿರಬೇಕೆಂದು ತೋರುತ್ತದೆ.

ಈ. ಯುದ್ಧ ವಿವರಗಳು :

ಯುದ್ಧ ಇತಿಹಾಸದುದ್ದಕ್ಕೂ ತನ್ನ ಇರುವಿಕೆಯನ್ನು ತೋರಿಸುತ್ತಾ ಬಂದಿದೆ. ಯಾವುದೇ ಸಾಮ್ರಾಜ್ಯದ ಏಳು-ಬೀಳುಗಳಲ್ಲಿ ಅದು ಪ್ರಮುಖ ಪಾತ್ರವಹಿಸಿದೆ. ಯುದ್ಧ ನಡೆಯಲು ಕಾರಣಗಳು ಹಲವು. ಸಾಮ್ರಾಜ್ಯ ವಿಸ್ತರಣೆ, ಲೋಭ, ವೀರತೆಯ ಪ್ರದರ್ಶನ ಒಂದೆಡೆಯಾದರೆ, ಕುಟುಂಬ ಕಲಹಗಳೂ ಯುದ್ಧಕ್ಕೆ ನಾಂದಿ ಹಾಡಿದ ಘಟನೆಗಳು ದಾಖಲಾಗಿವೆ. ಬಸವಪುರಾಣದಲ್ಲಿ ಈ ಮೇಲಿನ ಕಾರಣಗಳಲ್ಲದೆ ಸಮಾಜದ ಉನ್ನತಿಕೆಯನ್ನು ಸಾಧಿಸಲು ಧಾರ್ಮಿಕ ಸಂಘರ್ಷದಲ್ಲಿ ಕೆಲವು ಯುದ್ಧಗಳೋಪಾದಿಯ ಚಟುವಟಿಕೆಗಳು ಕಂಡುಬರುತ್ತವೆ. ಚಾಣಕ್ಯನ ಪ್ರಕಾರ ಯುದ್ಧದಲ್ಲಿ ಮೂರು ಪ್ರಕಾರಗಳು, ೧.ಪ್ರಕಾಶಯುದ್ಧ-ಸೂಚಿತ ಸ್ಥಳದಲ್ಲಿ ನಿರ್ದಿಷ್ಟ ಸಮಯಕ್ಕೆ ನಡೆಯುವ ಸಂಗ್ರಾಮ ೨. ಕೂಟಯುದ್ಧ-ತಂತ್ರಗಳ ಮೂಲಕ ಯುದ್ಧ ಮಾಡುವುದು ೩. ಮೌನ ಯುದ್ಧ-ಶತ್ರು ಅಧಿಕಾರಿಗಳನ್ನು ನಾಶಪಡಿಸಲು ಗುಪ್ತ ಕಾರ್ಯಾಚರಣೆ ನಡೆಸುವುದು. (ಬಾಲಸೂರಿ ಹೆಚ್.ಕೆ. ರಕ್ಷಾವಾಹಿನಿ, ಪು.೨೭) ಪುರಾಣದಲ್ಲಿ ಬರುವ ಯುದ್ಧದ ಅಂಶಗಳು ಧರ್ಮಯುದ್ಧದ ಹಾಗೆ ಕಂಡುಬರುತ್ತವೆ.

ವೀರಮೌಲ್ಯವನ್ನೇ ನಂಬಿದ ವೀರಯುಗ ಹತ್ತನೆಯ ಶತಮಾನ. ಅದಕ್ಕೆ ಇಂದಿನ ನೂರಾರು ಶಾಸನ, ಸಾವಿರಾರು ವೀರಗಲ್ಲು, ಹಲವಾರು ಕೃತಿಗಳು ಹಾಗೂ ಅನೇಕ ರಾಜಸತ್ತೆಗಳೆ ಜೀವಂತ ಸಾಕ್ಷಿ. "ಜಿತೇನ ಲಭ್ಯತೆ ಲಕ್ಷ್ಮೀ ಮೃತೇನಾಪಿ ಸುರಂಗನಾ ಕ್ಷಣ ವಿಧ್ವಂಸಿನೀ ಕಾಯೇಕಾ ಚಿಂತಾಮರಣೇರಣೆ" (ಪಂಚತಂತ್ರ, ಪು.೧೧೦) ಎಂಬ ಸಿದ್ಧ ಘೋಷಣೆಗಳ ಮೂಲಕ ಮುಗ್ಧ ಸೈನಿಕರನ್ನು ಹುರಿದುಂಬಿಸಿ ರಣಭೂಮಿಗೆ ದಬ್ಬುತ್ತಲೇ ಇದ್ದರು. "ಈಯಲ್ ಇರಿಯಲ್ ಶರಣ್ಬುಗೆ ಕಾಯಲ್' ಎಂಬ ಮೂರು ಮೈಮರೆಸುವ ಮೌಲ್ಯಗಳನ್ನು ಪುರೋಹಿತವರ್ಗ ಚಲಾವಣೆಗೆ ಬಿಟ್ಟಿತ್ತು. ಈ ಸಂದರ್ಭಗಳಲ್ಲಿ ಬಲಿಯಾದವರಿಗೆ ಪುರೋಹಿತವರ್ಗ ಮತ್ತು ಪ್ರಭುಸತ್ತೆಗಳು ಕೊಟ್ಟ ಮೋಸದ ಉಡುಗೊರೆಯೇ ವೀರಗಲ್ಲು". (ಬಸವಪಥ, ಪು.೭೧) ದಾನಮೌಲ್ಯ, ವೀರಮೌಲ್ಯ, ರಕ್ಷಣಾಮೌಲ್ಯಗಳಿಗೆ ಪ್ರತಿರೋಧವಾಗಿ ಶಿವಶರಣರು 'ದಾಸೋಹಮೌಲ್ಯ', 'ಪ್ರಸಾದ ಮೌಲ್ಯ', 'ಕಾಯಕ ಮೌಲ್ಯ', ಮುಂತಾದುವುಗಳನ್ನು ಜಾರಿಗೆ ತರಲು ಅವಿರತ ಶ್ರಮಿಸಿದರು. ಸಮಾಜ ಸುಧಾರಣೆಯ ಹೆಗ್ಗುರಿಯನ್ನು ಹೊತ್ತ ಶಿವಶರಣರು ಸಂದರ್ಭದ ಅನಿವಾರ್ಯತೆಯಿಂದಾಗಿ ವೀರಮೌಲ್ಯವನ್ನು ಅಪ್ಪಿಕೊಳ್ಳಲೇಬೇಕಾಯಿತು.ಶಿವಶರಣರು ಎಂದೂ ಸಹ ತಾವಾಗಿ ಶಸ್ತ್ರಾಸ್ತ್ರಗಳನ್ನು ಹಿಡಿದು ಹೋರಾಡಿದವರಲ್ಲ. ಬಸವಪುರಾಣದಲ್ಲಿ ಆ ರೀತಿಯ ಯುದ್ಧ ವಿವರಗಳು ಕಂಡುಬರುವುದಿಲ್ಲ. ಸಾಂದರ್ಭಿಕವಾಗಿ ಹಾಗೂ ಧರ್ಮಸಂಘರ್ಷದ ಸಂದರ್ಭಗಳಲ್ಲಿ ಹೋರಾಡಿದ ಶಿವಶರಣರ ವಿವರಗಳನ್ನು ಕವಿಯು ಉಲ್ಲೇಖಿಸುತ್ತಾನೆ. ರಾಜಸತ್ತೆಯ ಅಡಿಯಲ್ಲಿ ಬದುಕುತ್ತಿದ್ದ ಶಿವಶರಣರಿಗೆ

ಯುದ್ಧಚಟುವಟಿಕೆಗಳು ಪರಿಚಯವಿರಲು ಸಾಧ್ಯವಿದೆ. ಬಸವಣ್ಣನವರು ಯುದ್ಧಗಳನ್ನು ಹತ್ತಿರದಿಂದ ಕಂಡಿದ್ದನೆಂಬುದಕ್ಕೆ ಅವನವೇ ಆದ ಸಾಕಷ್ಟು ವಚನಗಳಲ್ಲಿ ಉಲ್ಲೇಖ ದೊರೆಯುತ್ತವೆ.

ಕವಿಯು 'ರಣರಂಗದ' (೨೬:೩೩) ಉಲ್ಲೇಖ ಕೊಡುತ್ತಾನೆ. ಬಸವಣ್ಣನವರನ್ನು ಮಂತ್ರಿಪದವಿ ಸ್ವೀಕರಿಸಲು ಕರೆತರುವಂತೆ ಅಮಾತ್ಯರನ್ನು ಪಟ್ಟದಾನೆಯ ಸಮೇತ ಕಳಿಸಿಕೊಡುತ್ತಾನೆ (೫:೬: ಕಪಿಲೇಶ್ವರನಿಗೆ ಮಾಡಿದ ಕ್ಷೀರಾಭಿಷೇಕದಿಂದ ತೊಯ್ದ ಬೀದಿಯು ಗಜಸಮೂಹದಿಂದ ಕೆಸರಾಯಿತು ಎಂಬ ಮಾತುಗಳನ್ನು ನೋಡಿದರೆ ಬಿಜ್ಜಳನ ಸೈನ್ಯವ್ಯವಸ್ಥೆಯಲ್ಲಿ ಆನೆಗಳು ಪ್ರಮುಖ ಸ್ಥಾನ ಪಡೆದಿದ್ದವೆಂದು ತಿಳಿಯುತ್ತದೆ. ರಥ,ಕುದುರೆಗಳೂ ಸಹ ಪ್ರಮುಖ ಸ್ಥಾನ ಪಡೆದ ಬಗ್ಗೆ ತಿಳಿಯುತ್ತದೆ. ಮುಖ್ಯಸ್ಥನನ್ನಾಗಿ ಮಾಡುವಾಗ 'ಚತುರಂಗಬಲದ' (೫:೧೮, ೪೫:೫,೪೧) ವಿವರವನ್ನು ಕೊಡುತ್ತಾನೆ. ಬಿಜ್ಜಳನು ಅಪಾರ ಪ್ರಮಾಣದ ಸೈನ್ಯ ಹೊಂದಿದ್ದ ಎಂಬಂಶಗಳು ತಿಳಿಯುತ್ತವೆ.

'ಮಡಿವಾಳ ಮಾಚಯ್ಯ', 'ಇರಿವದಾಂಡಾರಿ' ,'ಬಾಹೂರ ಬೊಮ್ಮಯ್ಯ'ಗಳೆಂಬ ಶಿವಶರಣರು ಆನೆಯ ವಿರುದ್ಧ ಹೋರಾಡಿ ಜಯ ಪಡೆದ ಉಲ್ಲೇಖಗಳು ದೊರೆಯುತ್ತವೆ. (೨೦:೪೦-೪೪, ೨೧:೧೪,೧೫,೧೬, ೨೧: ೨೯-೩೩)

ಎರಡು ಕೈಗಳನುದ್ದಿಕೊಳುತ
ಬ್ಬರಿಸಿ ಬೆಳೆದೆಯ್ತೆಂದು ಪುಟನೆಗೆ
ದುರವಣಿಸಿ ಮಾವಂತರುಗಳಂ ಕೆಡಹಿ ಮದಕರಿಯ
ಕರವನುಟೆ ಪಿಡಿದೊತ್ತಿ ನೊಂಕುತ
ಬರಸೆಳೆದು ಹೊಡೆದಪ್ಪಳಿಸುತಂ
ಶರಣನೊಗೆವಂತಂಬರವನು ರ್ಮಿತಳಾಗ್ರದೊಳು....(೨೦: ೪೨)

ಇಲ್ಲಿ ಮಡಿವಾಳ ಮಾಚಯ್ಯಗಳು ದಿಟ್ಟತನದಿಂದ ಆನೆಯ ವಿರುದ್ದವಾಗಿ ಹೋರಾಡಿದ ಸಂದರ್ಭ ನೋಡಿದರೆ ಅವರೊಬ್ಬ ಯುದ್ಧಪರಿಣಿತರಾಗಿದ್ದರೆಂಬುದು ಸ್ಪಷ್ಟವಾಗುತ್ತದೆ. ಅಷ್ಟೇ ಅಲ್ಲದೆ ಆನೆಯನ್ನು ಕೊಂದು ಪ್ರಭುಸತ್ತೆಯನ್ನು ವಿರೋಧಿಸುವ ಗುಣ ಎದ್ದು ಕಾಣುತ್ತದೆ.

ಶಿವಶರಣರು ಭಕ್ತವೇಷ ಧರಿಸಿದವರನ್ನು ಕೊಲ್ಲುವುದು ಪಾಪವೆಂದು ನಂಬಿದ್ದರು. ಯುದ್ಧ ಸಂದರ್ಭದಲ್ಲಿ ಭಕ್ತವೇಷದ ಕಪಟ ಸೈನಿಕನನ್ನು ನೋಡಿ ಕತ್ತಿಯನ್ನು ಬಿಸುಟು ಕೈಮುಗಿದು ಹತ್ಯೆಗೀಡಾದ ಸಂದರ್ಭವೊಂದು 'ಏಣಾದಿನಾಥನ ಕಥೆಯಲ್ಲಿ ವ್ಯಕ್ತಗೊಂಡಿದೆ. (೨೬:೨೯-೩೦) 'ಏಕಾಂತರಾಮಯ್ಯ', 'ಮಾರುಡಿಗೆಯ ನಾಚಯ್ಯ' ರೆಂಬ ಶಿವಭಕ್ತರು ಜೈನರೊಡನೆ ಕಾದಿದ ಪ್ರಸಂಗಗಳು ಪುರಾಣದಲ್ಲಿ ದೊರೆಯುತ್ತವೆ.

ಯುದ್ಧದಲ್ಲಿ ಸೋತ ರಾಜರು ಗೆದ್ದವರಿಗೆ ಶರಣಾಗಿ ಕಪ್ಪ ಕಾಣಿಕೆ ಕೊಡುತ್ತಿದ್ದರೆಂಬ ವಿವರ ದೊರೆಯುತ್ತದೆ. (೨೬:೨೯) ಬಸವಪುರಾಣದ ಕೊನೆಯಲ್ಲಿ ಮೊಲ್ಲಬೊಮ್ಮಯ್ಯರೆಂಬ ವೀರಭಕ್ತರು ಬಿಜ್ಜಳನ ಓಲಗದ ಭದ್ರತೆಯನ್ನು ಭೇದಿಸಿ ಅವನ ಅಂಗರಕ್ಷಕರನ್ನು ಸೀಳಿಕೊಂಡು ಬಿಜ್ಜಳ ಮಹಾರಾಜನನ್ನು ಹತ್ಯೆ ಮಾಡುತ್ತಾರೆ. ಇಲ್ಲಿ ಕವಿ ಬಳಸಿದ

'ಕೊಟ್ಟಗಾ'ನೆಟ್ಟನೇಕಾಂಗಿಗಳನೆಲ್ಲರನೊಟ್ಟಯಿಸಿ ನಡೆದು', 'ಹಳಚುವಚ್ಚಾಳುಗಳನಂ ಕಳೆದು', 'ಮುಂದೆ ತೊಲಗದೆ ಬಪ್ಪವರ ಮುಡು ಪಿಂದೆಣೆದು ಹೊಯ್ಯುತ ಕೈದುಗಳಿಂದ ಚಿಮ್ಮುತ ಬಂದು ಹೊಕ್ಕರು ರಾಜಮಂದಿರವ' (೬೦:೨೬,೨೨,೨೮) ಎಂಬ ನುಡಿಗಳು ಯುದ್ಧದ ಭೀಕರತೆಯನ್ನು ಕಟ್ಟಿಕೊಡುತ್ತವೆ. ಅಷ್ಟೇ ಅಲ್ಲದೇ ರಾಜಸತ್ತೆಯ ವಿರುದ್ಧ ಶಿವಶರಣರಲ್ಲಿ ಮಡುಗಟ್ಟಿದ ತಾಪಕೋಪವನ್ನು ವ್ಯಕ್ತಪಡಿಸುತ್ತವೆ. ಈ ಸಂದರ್ಭಗಳನ್ನು ನೋಡಿದರೆ ಕವಿ ಕಾಲದ ರಾಜಕೀಯ ಸಂದರ್ಭಗಳಲ್ಲಿ ಯುದ್ಧಗಳು ಜೀವಂತವಿದ್ದ ಬಗೆಯನ್ನು ತಿಳಿಸಿ ಕೊಡುತ್ತವೆ.

ಉ. ಶಿವಭಕ್ತರಲ್ಲಿ ಆಯುಧ ಸಂಗ್ರಹ :

ಶಿವಭಕ್ತರು ಖಾಸಗಿಯಾಗಿ ಆಯುಧ ಹೊಂದಿದ ವಿವರಗಳು ದೊರೆಯುತ್ತವೆ. ಕವಿ ಬತ್ತೀಸಾಯುಧದ ಉಲ್ಲೇಖ ಕೊಡುತ್ತಾನೆ. (೫೨: ೫೩) ಮಧ್ಯಯುಗದಲ್ಲಿ ಯುದ್ಧದ ಕಾಲಕ್ಕೆ ಬಳಸುವ ಮೂವತ್ತೆರಡು ಪ್ರಕಾರದ ಆಯುಧಗಳಿವು. ೧.ಖಡ್ಗ ೨.ಕರಾಚೂರಿ ೩.ಕಕ್ಕಡ ೪.ಕಡುಗತ್ತಿ ೫. ಸೆಣೆಗತ್ತಿ.೬.ಸಬಳ ೭.ಈಟಿ ೮.ಇಡರುಗತ್ತಿ ೯.ಉಲ್ಬಣ ೧೦.ಕಬ್ಬಿಣಕೋವು ೧೧.ಚಕ್ರ ೧೨ ಚಂಡು ೧೩.ವೋಲೆ ೧೪.ಚಲ್ಲಹ.೧೫. ಬಲ್ಲೆಹ ೧೬. ಬಂಕು ೧೭. ಬಾಣ ೧೮. ಗದೆ ೧೯.ನರಾದಿ ೨೦.ಶೂಲ ೨೧.ಶಿರಾದಿ ೨೨.ಚೂರಿ ೨೩.ಚಿಕ್ಕಕಠಾರಿ ೨೪.ಕಿರಸಿ ೨೫.ಪರಡು ೨೬.ಪಾಶ ೨೭.ಪಟ್ಟಹ ೨೮.ಮಟ್ಟ ೨೯.ಅಂಕುಶ ೩೦.ವಂಕಿ ೩೧.ತೋಡಿ ೩೨.ಜವದಾಡಿ. (ವಿವೇಕ ಚಿಂತಾಮಣಿ, ಪು.೨೧೪) ಇವುಗಳನ್ನು ಮತ್ತೆ ಇಸುವ , ಎಸೆಯುವ, ಇರಿಯುವ ಹಾಗೂ ಪೊಯ್ವ ಆಯುಧಗಳೆಂದು ವಿಭಾಗಿಸುತ್ತಾರೆ. (ಅನಂತನಾಥಪುರಾಣ: ೧೪.೧)

'ಇರಿಭಕ್ತ ' ಹಾಗೂ 'ಮೋಳಿಗೆಯ ಮಾರಯ್ಯ' ಎಂಬ ಶಿವಭಕ್ತರು 'ಕುಠಾರ' (ಕೊಡಲಿ) ಎಂಬ ಆಯುಧವನ್ನು ಹೊಂದಿದ್ದು ಕಂಡು ಬರುತ್ತದೆ. ಇಲ್ಲಿ ಬರುವ ಆಯುಧ ವೃತ್ತಿಸೂಚಿಕವೂ ಹೌದು. "ಕುಠಾರದಿಂ ಕಟ್ಟಿಗೆಗಳಂ ಕೈಯಾರಿ ಕಡಿಕಡಿದೊಟ್ಟಿ"(೨೯:೪) ಎಂಬುದರಿಂದ ಅದನ್ನು ಕಂಡುಕೊಳ್ಳಬಹುದು. ಮಡಿವಾಳ ಮಾಚಯ್ಯನು 'ಕಠಾರಿ' (ಚಿಕ್ಕಕತ್ತಿ) ಎಂಬ ಆಯುಧ ಹೊಂದಿದ್ದು ಅದನ್ನು ಯಾವಾಗಲೂ ಸೊಂಟದಲ್ಲಿ ಸಿಕ್ಕಿಸಿಕೊಳ್ಳುತ್ತಿದ್ದ ಉಲ್ಲೇಖ ದೊರೆಯುತ್ತದೆ. "ಟೊಂಕದಲ್ಲಿ ಕಠಾರಿಯೊಂದಿರೆ" (೨೦:೧೫) ಎಂಬ ಮಾತುಗಳು ಆತ್ಮರಕ್ಷಣೆಗಾಗಿ ಆತ ಈ ಆಯುಧವನ್ನು ಹೊಂದಿದ್ದು ಕಂಡುಬರುತ್ತದೆ. 'ಸುರಗಿ' ಎಂಬ ಆಯುಧವಿಶೇಷವನ್ನು ಚೌಡಯ್ಯನೆಂಬ ಶಿವಶರಣ ಹೊಂದಿದ ಉಲ್ಲೇಖ ಬರುತ್ತದೆ. (೩೨:೧) ಸುರಗಿಯು ಗುಂಡಗಿದ್ದು ಬರುಬರುತ್ತ ಸಣ್ಣದಾಗುತ್ತ ಕೊನೆಯಲ್ಲಿ ಚೂಪಾಗಿರುತ್ತಿದ್ದು ಇರಿಯಲು ತಕ್ಕಂತೆ ಇದರ ರಚನೆಯಿರುತ್ತಿತ್ತು. ಶಿವನಿಂದ ಈ ಆಯುಧಗಳನ್ನು ಬೇಡಿ ಪಡೆದ ಕಾರಣದಿಂದಲೇ 'ಸುರಗಿಯ ಚೌಡಯ್ಯ'ನೆಂಬ ಅಭಿದಾನ ಇವನಿಗೆ ಬಂತೆಂದು ಹೇಳಲಾಗುತ್ತಿದೆ.

ಕನ್ನದ ಬೊಮ್ಮಯ್ಯನೆಂಬ ಶಿವಶರಣನು ಕತ್ತಿ, ಬಳಹ, ಮುಳ್ಳುಸೆಂಡು, ಕತ್ತರಿ, ಸೆಳೆಗೋಲು (೩೦:೩) ಎಂಬ ಆಯುಧಗಳನ್ನು ಹೊಂದಿದ್ದನೆಂಬ ಉಲ್ಲೇಖ ನೋಡಿದರೆ ಕಳ್ಳತನಕ್ಕೆ ವಿಶೇಷವಾಗಿ

ಈ ಆಯುಧಗಳ ಬಳಕೆ ಯಾಗುತ್ತಿತ್ತೆಂದು ತೋರುತ್ತದೆ. ಹರಿಹರನು ಹೇಳುವ 'ಬೊಳೆಯೆಂಬ' (ಪುಟ-೪೭) ಎಂದು ಹೇಳುವ ಆಯುಧವೆ ಇಲ್ಲಿಯ 'ಬಳಹ' ಇರಬಹುದು. ಇದೊಂದು ಬಾಣದ ಪ್ರಭೇದ. 'ಮುಳ್ಳುಸೆಂಡು' ಎಂಬ ಆಯುಧದ ವಿವರ ದೊರೆಯುವುದಿಲ್ಲ. ತುದಿಯಲ್ಲಿ ಚೂಪಾದ ಮುಳ್ಳಿನ ಆಕಾರದಲ್ಲಿರುವ 'ಇಸುವ' ಆಯುಧ ಇದ್ದಿರಬಹುದು. 'ಕವಳುಗೋಲು', 'ಎಡೆಗೋಲು', ಈ ಆಯುಧಗಳಂತೆ 'ಸೆಳೆಗೋಲು' ಸಹ ಒಂದು ಪ್ರಕಾರದ ಬಾಣವಾಗಿರಬಹುದು. ಇಂತಹ ಬಾಣದ ತುದಿಯ ಲೋಹಭಾಗಕ್ಕೆ ವಿಷವನ್ನು ಹಚ್ಚಿ ಬಾಣ ಚುಚ್ಚಿದವನಿಗೆ ವಿಷವೇರುವಂತೆ ಮಾಡುತ್ತಿದ್ದ ಪದ್ಧತಿಯನ್ನು ಪಿ.ವಿ.ನಾರಾಯಣರು ವಿವರಿಸುತ್ತಾರೆ.(೧೯೮೩, ಪು.೨೪೩) ಇನ್ನುಳಿದಂತೆ 'ಹರಿಗೆ', 'ಅಡ್ಡಾಯುಧ', 'ಕರವಾಳು', 'ಬಿಲ್ಲುಗಳು', 'ಸಬಳಗಳು', 'ಈಟಿಗಳು', 'ಕಬ್ಬಿಣದ ಕೋಲುಗಳು', 'ಶೂಲಾಯುಧಗಳು', 'ಸರಳ ಹೆದೆಗಳು' (೬೦:೨೫,೨೬) ಮುಂತಾದ ಆಯುಧಗಳ ಉಲ್ಲೇಖ ದೊರೆಯುತ್ತದೆ.

ಹೀಗೆ ಶಿವಶರಣರು ಆತ್ಮರಕ್ಷಣೆಗಾಗಿ ಹಾಗೂ ವೃತ್ತಿಸೂಚಕವಾಗಿ ಆಯುಧಗಳನ್ನು ಹೊಂದಿ ವೀರ ಬದುಕನ್ನು ಬಾಳಿದ ಉಲ್ಲೇಖಗಳು ಬಸವಪುರಾಣದಲ್ಲಿ ದೊರೆಯುತ್ತವೆ.

ಅಧ್ಯಾಯ–ಆರು

ಧರ್ಮ

ಅಧ್ಯಾಯ-ಆರು

ಧರ್ಮ

ಹನ್ನೆರಡನೆಯ ಶತಮಾನ ಧಾರ್ಮಿಕವಾಗಿ ಅತ್ಯಂತ ಸಂಕೀರ್ಣತೆಯ ಕಾಲ. ವೈಷ್ಣವ, ಜೈನ, ಶೈವ, ಧರ್ಮಗಳು ಪರಸ್ಪರ ಸಂಘರ್ಷಗಳಲ್ಲಿ ತೊಡಗಿ 'ಧರ್ಮ'ದ ಮೂಲ ಸತ್ವವನ್ನು ಕಳೆದುಕೊಂಡಿದ್ದವು. ಯಜ್ಞ ಯಾಗಾದಿ ವರ್ಣವ್ಯವಸ್ಥೆಯನ್ನು ಮುಂದೆ ಮಾಡಿ ವೈಷ್ಣವ ಧರ್ಮವು ಸಮಾಜದ ಬಹುಜನರಿಂದ ಅಂತರವನ್ನು ಕಾಯ್ದುಕೊಂಡಿದ್ದಿತು. ಜೈನ ಮತ್ತು ಬೌದ್ಧ ಧರ್ಮಗಳು ಪಾರಂಪರಿಕ ಸತ್ವವನ್ನು ಕಳೆದುಕೊಂಡು ಅವನತಿಯ ಅಂಚಿನಲ್ಲಿದ್ದವು. ಯಾರೋ ಒಬ್ಬ ಐತಿಹಾಸಿಕ ವ್ಯಕ್ತಿಯಿಂದ ಸ್ಥಾಪಿತವಾದ ಶೈವಧರ್ಮ ನಾನಾ ಪ್ರಭೇದಗಳಾಗಿ ಒಡೆದಿತ್ತು. (ನಾರಾಯಣ ಪಿ.ವಿ. ೧೯೮೩, ಪು.೪೫೨) 'ಪಾಶುಪತ', 'ಕಾಪಾಲಿಕ', 'ಕಾಳಾಮುಖ', 'ಶೈವ' ಹೀಗೆ ವಿವಿಧ ಪ್ರಭೇದಗಳಲ್ಲಿ ಕಾಪಾಲಿಕ ಶಾಖೆಯಂತೂ ಅತಿಯಾದ ವಾಮಾಚಾರವನ್ನು ರೂಢಿಸಿಕೊಂಡು ಜನರಲ್ಲಿ ಧರ್ಮದ ಬಗ್ಗೆ ಅಸಹ್ಯಕರ, ಭೀತಿಯ ವಾತಾವರಣವನ್ನು ಸೃಷ್ಟಿಸಿತ್ತು. ಇಂತಹ ಸಂದಿಗ್ಧತೆಯ ಪರಿಸ್ಥಿತಿಯಲ್ಲಿ ಬಸವಣ್ಣನವರು ಧಾರ್ಮಿಕ ಶುದ್ಧಿಯನ್ನು ಕೈಗೊಂಡರು. ಒಂದು ರೀತಿ ಶೈವಧರ್ಮ ವಚನಕಾರರ ಪ್ರಯೋಗಕ್ಕೆ ಒಳಗಾಯಿತೆಂದೇ ಹೇಳಬಹುದು. ಧರ್ಮದಲ್ಲಿಯ ಕೊಳೆಯನ್ನು ವರ್ಜಿಸಿ, ಅದನ್ನು ಸಂಸ್ಕರಿಸುವ, ಶೋಧಿಸುವ ಪ್ರಕ್ರಿಯೆ ನಡೆದು ಅದಕ್ಕೊಂದು ನೂತನ ಕಾಯಕಲ್ಪವನ್ನು ಬಸವಾದಿ ಪ್ರಮಥರು ದೊರಕಿಸಿಕೊಟ್ಟರು.

ಮಧ್ಯಕಾಲೀನ ತಾತ್ವಿಕ ಚಿಂತನೆಗಳು ಪ್ರಧಾನವಾಗಿ ರೂಪುಗೊಂಡ ಬಗೆಗಳಲ್ಲಿ ಅನುಭಾವ ಹಾಗೂ ಭಕ್ತಿ ಸ್ವರೂಪಗಳು ಮನುಷ್ಯನ ಅಸ್ತಿತ್ವದ ಬಗೆಗೆ ಸಂಬಂಧಿಸಿದಂತೆ ಆಶಯಗಳನ್ನು ಹುಡುಕುವುದರಲ್ಲಿ ಪ್ರಯತ್ನ ನಡೆಸಿದವು, ಎಂದೇ ಹೇಳಬೇಕು. ಈ ಕಾರಣದಿಂದ ಕರ್ನಾಟಕದ ಚರಿತ್ರೆಯಲ್ಲಿ ವ್ಯಕ್ತಿಯ ಬಗೆಗಿನ ಕಾಳಜಿಗಳು ಮೊಟ್ಟಮೊದಲ ಬಾರಿಗೆ ವ್ಯಕ್ತಗೊಂಡವು. ಜೈನಧರ್ಮದಲ್ಲಿ ದೇವರ ಅಸ್ತಿತ್ವದಲ್ಲಿ ನಂಬುಗೆಯಿಲ್ಲವಾದ್ದರಿಂದ ಭಕ್ತಿ ಸಾಹಿತ್ಯ ಹುಟ್ಟಲಿಲ್ಲ. ಆದರೆ ಹಿಂದೆ ಗಮನಿಸಿದಂತೆ, ಬದುಕಿನ ಬಗ್ಗೆ ರಾಜನ ಹಿನ್ನಲೆಯಲ್ಲಿ ವೈಭವ ಭೋಗದ ಕ್ಷಣಿಕತೆಯನ್ನು, ಅದರಿಂದುಂಟಾಗುವ ಅಮಾನುಷವಾದ ಹಿಂಸೆಯ ನೆಲೆಗಳನ್ನು ಪಂಪನ ಕಾವ್ಯಗಳಲ್ಲಿ ಅಭಿವ್ಯಕ್ತಿಗೊಂಡ ನಿದರ್ಶನಗಳು, ಜೀವನತತ್ವದ ದಾರ್ಶನಿಕ ಅನುಭವಗಳು ಗೋಚರಗೊಳ್ಳುತ್ತವೆ. "ಪಂಪನಿಂದ ವಚನಕಾರರಲ್ಲಿ

ಆದ ಮುಖ್ಯ ಬೆಳವಣಿಗೆಯೆಂದರೆ ಈ ಮಾನವ ಅಸ್ತಿತ್ವದ ಶೋಧನೆ ರಾಜನ ಹಿನ್ನಲೆಯಿಂದ ಮನುಷ್ಯನ, ವ್ಯಕ್ತಿಯ ನೆಲೆಗೆ ವಿಸ್ತಾರಗೊಂಡದ್ದೇ ಆಗಿದೆ. ರಾಜನನ್ನು ಅತ್ಯಂತ ತೀವ್ರವಾಗಿ ಇಲ್ಲಿ ನಿರಾಕರಿಸಲಾಗಿದೆ. ವಚನಕಾರ ತನ್ನನ್ನು ಒಳಗೊಂಡಂತೆ ಮನುಷ್ಯನ ಅಸ್ತಿತ್ವದ ಹಲವು ಕೊರತೆಗಳನ್ನು, ಹಲವಾರು ಅಭೀಪ್ಸೆಗಳನ್ನು ಶೋಧನೆಗೆ ಗುರಿಪಡಿಸುತ್ತಾನೆ "(ಬಸವರಾಜ ಕಲ್ಗುಡಿ ೧೯೮೮; ೧೨೧)

ಹನ್ನೆರಡನೇ ಶತಮಾನದಲ್ಲಿ ಅಂತಸ್ತು, ಜಾತಿಯೆನ್ನದೇ ಸಮಾಜದ ಎಲ್ಲ ವ್ಯಕ್ತಿಗಳಿಗೂ ಧಾರ್ಮಿಕ ಉನ್ನತಿಯನ್ನು ದೊರಕಿಸಿಕೊಡುವ ಆಶಯ ಹೊಂದಿದ್ದರು. ಹಿಂದೆ ನಿರಾಕರಿಸಲಾಗಿದ್ದ ಧಾರ್ಮಿಕ ವಲಯವು ಸಾಮಾನ್ಯನಿಗೂ ಸಿಗುವಂತೆ ಮಾಡಹೊರಟಿದ್ದು ಹೊಸದೊಂದು ಜಾಗೃತಿಯ ಆವಿಷ್ಕಾರವೇ ಆಯಿತು. ಪ್ರಾಚೀನ ಹಾಗೂ ಮಧ್ಯಕಾಲಿನ ಸಮಾಜದಲ್ಲಿ ಹುಟ್ಟಿಕೊಂಡ ಭಕ್ತಿಪಂಥೀಯ ಚಳುವಳಿಗಳು, ತಮ್ಮ ಹಿಂದಿನ ಸಾಂಸ್ಥಿಕಗೊಂಡ ಸಾಂಸ್ಕೃತಿಕ ಸ್ವರೂಪಗಳನ್ನು ವಿರೋಧಿಸುತ್ತ ಹಾಗೂ ವಿಮರ್ಶಿಸುತ್ತ ಚಿಂತನೆಗೆ ಒಳಪಡಿಸಿರುವುದು ಗಮನೀಯವಾಗಿದೆ.

ಬಸವರಾಜ ಕಲ್ಗುಡಿಯವರ ಮಾತಿನಲ್ಲಿ ಹೇಳುವುದಾದರೆ ವಚನಗಳ ಮೂಲಕ ಚಾರಿತ್ರಿಕ ಪ್ರಜ್ಞೆಯನ್ನು ಅರಿಯುವ ಅಧ್ಯಯನವು 'ಸ್ಥಲ' ಸಿದ್ಧಾಂತವನ್ನು ಮೀರಿದ ಜೀವನ ಮತ್ತು ಕಾವ್ಯ ಸ್ವರೂಪಗಳ ಸಂಬಂಧಗಳ ವಲಯವನ್ನು ಪ್ರವೇಶಿಸಬೇಕಾಗುತ್ತದೆ. ಚಾರಿತ್ರಿಕ ಪ್ರಜ್ಞೆಯ ಸ್ವರೂಪವು ಇಂತಹ ರಿಚ್ಯುಯಲ್‌ಗಳ ಮೂಲಕ ಅರಿವಾಗುವುದು ಸಾಧ್ಯವಿಲ್ಲ. ಏಕೆಂದರೆ ಬದುಕಿನ ಕ್ಷಣಗಳ ಎಲ್ಲ ಚಲನೆಯನ್ನು ಇವು ಸ್ತಬ್ದಗೊಳಿಸಿಬಿಟ್ಟಿರುತ್ತವೆ. ಚರಿತ್ರೆಯ ಮನಸ್ಥಿತಿಗೆ ಇರುವ ದ್ವಂದ್ವ ಆತಂಕಗಳನ್ನು ಧಾರ್ಮಿಕ ಆಚರಣೆಯ ಸ್ವರೂಪಗಳು ನಿರಾಕರಿಸುತ್ತವೆ. ಆದ್ದರಿಂದ ಧಾರ್ಮಿಕ ಮನುಷ್ಯನ ಅನುಭಾವದ ನೆಲೆಗಳು ಮುಖ್ಯವಾಗಿ ತನ್ನ ವ್ಯಕ್ತಿತ್ವ ಸುತ್ತಣ ಸಮಾಜಗಳ ದ್ವಂದ್ವಗಳಿಂದ ರೂಪುಗೊಳ್ಳುವಂತದ್ದು. ಆದ್ದರಿಂದಲೇ ಧರ್ಮದ ನೀತಿ, ನಿಯಮದ ಮೇರೆಯನ್ನೊಡೆದು ಅವರ ಅನುಭವದ ಅಭಿವ್ಯಕ್ತಿಗಳು ಹೊರ ಹೊಮ್ಮುತ್ತವೆ. ಆಗಲೇ ಅವುಗಳು ವ್ಯಕ್ತಿಯ ಬದುಕಿನ ವಿಶಿಷ್ಟ ಲಕ್ಷಣಗಳೆನ್ನುವಂತೆ ರೂಪುಗೊಳ್ಳುತ್ತವೆ. ಬಸವಣ್ಣ, ಅಲ್ಲಮ, ಅಕ್ಕಮಹಾದೇವಿ ಮುಂತಾದ ಶ್ರೇಷ್ಠ ವಚನಕಾರರಲ್ಲಿ ಉದ್ದಕ್ಕೂ ತುಂಬಿರುವ ಆತಂಕ, ವಿಮರ್ಶೆ ಹಾಗೂ ಪ್ರತಿಕ್ರಿಯೆಗಳು ಚಾರಿತ್ರಿಕ ಪ್ರಜ್ಞೆಯ ಮುಖ್ಯ ದ್ಯೋತಕಗಳಾಗಿಯೇ ಪ್ರಕಟಗೊಳ್ಳುತ್ತವೆ. (೧೯೮೮:೬೬)

ಅಕ್ಕ, ಬಸವಣ್ಣ ಮತ್ತು ಅಲ್ಲಮರಲ್ಲಿ ಜೀವನವನ್ನು ಗ್ರಹಿಸಿರುವ ನೆಲೆಗಳು ವಿಭಿನ್ನವಾಗಿವೆ. ಬದುಕಿನ ಸಂಕೀರ್ಣ ಸ್ವರೂಪವನ್ನು ಇವರೆಲ್ಲರೂ ವಚನಗಳಲ್ಲಿ ಗ್ರಹಿಸಿರುವ ವಿಧಾನಗಳನ್ನು ಭಿನ್ನ ಭಿನ್ನ ನೆಲೆಗಳಲ್ಲಿ ಶೋಧಿಸುವ ಸ್ವರೂಪದ್ದು. ವಚನಗಳು ಬಿಡಿ ಬಿಡಿಯಾಗಿ ಹಂಚಿಹೋಗಿರುವಂತೆ ಕಂಡರೂ ನಿರ್ಧಿಷ್ಟವಾಗಿ ಬದುಕನ್ನು ಗ್ರಹಿಸಿರುವ ಬೆಳವಣಿಗೆಗಳಿವೆ. ಅಲ್ಲದೆ ಈ ವಚನಕಾರರ ವಚನಗಳು ಕಾವ್ಯದ ಬಂಧ, ಸ್ವರೂಪಗಳನ್ನು ಗಳಿಸಿಕೊಳ್ಳುತ್ತವೆ.

ಭಕ್ತಿಪಂಥದ ಆಶಯಗಳು ಮುಖ್ಯವಾಗಿ ವ್ಯಕ್ತಿಯ ವ್ಯಕ್ತಿತ್ವದ ಹಂಬಲಗಳು, ಪ್ರಾಮಾಣಿಕತೆ ಇವುಗಳಿಂದ ಉಂಟಾದ ಬಗಲಾವಣೆ, ಬೆಳವಣಿಗೆಗಳನ್ನು ಕುರಿತು ಕಾಳಜಿಗಳು, ಪ್ರಧಾನವಾಗಿ ಹೆಚ್ಚು ಪ್ರಾಶಸ್ತ್ಯವನ್ನು ಕೊಟ್ಟಂತಹವು. ಈ ಅನುಭಾವ ಲಕ್ಷಣಗಳನ್ನು ದೇವರು ಮತ್ತು ಭಕ್ತನ ಭಿನ್ನತೆಯನ್ನು ಹೇಳುವ ದ್ವೈತದ ಮುಖ್ಯ ಲಕ್ಷಣಗಳೊಂದಿಗೆ ಇಟ್ಟು ಅಧ್ಯಯನಕ್ಕೊಳಪಡಿಸುವುದರಿಂದ ಹಲವಾರು ಒಳನೋಟಗಳು ಕಾಣುವ ಸಾಧ್ಯತೆ ಇದೆ. ಒಳನೋಟಗಳು ಚರಿತ್ರೆಕಾರನಿಗೆ ಅನುಭಾವದ ಸಂಘರ್ಷದ ಒಳನೋಟಗಳನ್ನು ಹೇಳುವುದರ ಜೊತೆಗೆ ಸಾಂಸ್ಕೃತಿಕವಾಗಿಯೂ ಮುಖ್ಯವಾದ ವಿಶಿಷ್ಟ ಲಕ್ಷಣಗಳನ್ನು ದೊರಕಿಸಿಕೊಡುತ್ತವೆ. ಭಕ್ತಿಪಂಥ ಚಳುವಳಿ ಕರ್ನಾಟಕದಲ್ಲಿ ೧೨ನೇ ಶತಮಾನದಲ್ಲಿ ಹಬ್ಬಲು ಸಾಂಸ್ಕೃತಿಕ ಕಾರಣದಿಂದಾಗಿಯೇ. ಇದರಿಂದಾಗಿ ಬದುಕನ್ನು ಅರಿಯುವ ಹೊಸ ನೆಲೆಗಳತ್ತ ವಚನಕಾರರು ದೃಷ್ಟಿಹರಿಸಿದ್ದುದು ಅವಶ್ಯಕತೆಯೇ ಆಗಿತ್ತು. ಸಾಂಸ್ಕೃತಿಕ ಘಟನೆ ಹಾಗೂ ವ್ಯಕ್ತಿಯ ಅಧ್ಯಯನ ಬರೀ ತೀರ್ಮಾನಗಳಿಂದ ನಿರ್ಣಯವಾಗದೆ ಒಳಸ್ವರೂಪಗಳನ್ನೇ ಗಮನಿಸುವುದರಿಂದ, ಧಾರ್ಮಿಕ ಅಭಿವ್ಯಕ್ತಿಗಳನ್ನು ಒಂದು ಕಾಲದ ಸಾಂಸ್ಕ್ರತಿಕ ಅಭಿವ್ಯಕ್ತಿಗಳೆಂದು ತಿಳಿಯಲು ಸಾಧ್ಯವಾಗುತ್ತದೆ.

ಹನ್ನೆರಡನೇ ಶತಮಾನದಲ್ಲಿ ಅತ್ಯಂತ ಅನಿವಾರ್ಯವಾದ ಬೆಳವಣಿಗೆಯಾಗಿ ಭಕ್ತನ ಅಸ್ತಿತ್ವವು ರೂಪುಗೊಂಡಿತೆನ್ನಬಹುದು. ಮನುಷ್ಯನ ಅಸ್ತಿತ್ವದ ಬಗೆಗೆ ಮಾಡಲಾದ ಚಿಂತನೆಗಳು ಮುಖ್ಯವಾಗಿ ಧಾರ್ಮಿಕ ಮನುಷ್ಯನ ಬದುಕಿನ ನೆಲೆಗಳನ್ನು ಕುರಿತು ಮಾಡಿದ ಹುಡುಕಾಟದ ಸ್ವರೂಪವೇ ಆಗಿದೆ. ಮಾನವನ ಆಧ್ಯಾತ್ಮಿಕ ಆಶಯಗಳೇ ಪ್ರಮುಖ ನೆಲೆಯಾಗಿದ್ದರೂ ಆಳದಲ್ಲಿ ಇಲ್ಲಿಯ ಮನುಷ್ಯನು ಐಹಿಕ ಸಂಘರ್ಷ, ಆತಂಕಗಳನ್ನು, ಆತ್ಮವಿಮರ್ಶೆಯನ್ನು ಮನುಷ್ಯನ ಅಸ್ತಿತ್ವದ ಸತ್ವಯುತ ನೆಲೆಗಳು ರೂಪುಗೊಳ್ಳಲು ಮುಖ್ಯ ಭಿತ್ತಿ ಎಂದು ತಿಳಿದಿದ್ದಾನೆ. ಮನುಷ್ಯನ ಹೊಸ ಅಸ್ತಿತ್ವವನ್ನು ಬಸವಣ್ಣನವರು ಭಕ್ತನ ಬೆಳವಣಿಗೆಯಲ್ಲಿ ಕಾಣುವ ಪ್ರಯತ್ನದಿಂದಾಗಿ ತಾನೇ ಸ್ವತಃ ಭಕ್ತನೊಬ್ಬನ ಎಲ್ಲ ಆತಂಕಗಳ ಮೂಲಕ ಬೆಳೆಯಲು ಪ್ರಯತ್ನಿಸಿದನೆನ್ನಬೇಕು. ಅಲ್ಲದೇ ತನ್ನ ಬದುಕಿನಲ್ಲಿಯೂ ಸಂಘರ್ಷಯುತವಾದ ಜೀವನವನ್ನು ನಡೆಸಿದನೆನ್ನುವುದು. ಹಾಗೆಯೇ ತನ್ನ ಬದುಕನ್ನು ಆಧ್ಯಾತ್ಮಿಕ ಔನ್ನತ್ಯಕ್ಕೇರಿಸಬೇಕೆನ್ನುವ ತೀವ್ರ ತುಡಿತದಿಂದಾಗಿ ತನ್ನ ಬಾಳಿನಲ್ಲಿ ಹಲವಾರು ಸಂಘರ್ಷಗಳನ್ನು ಎದುರಿಸಲು ಕಾರಣನಾದರು ಬಸವಣ್ಣನವರ ವಚನಗಳು ಮಾನವನ ಅಸ್ತಿತ್ವದ ಸ್ವರೂಪಗಳನ್ನು ಎತ್ತಿ ಹೇಳುವುದರೊಂದಿಗೆ, ಮನುಷ್ಯನ ಅಸ್ತಿತ್ವದ ಮೇಲ್‌ಸ್ತರದ ಬೆಳವಣಿಗೆಯನ್ನು ಅಶಿಸುವಂತದುವುಗಳೇ ಆಗಿವೆ. ವ್ಯಕ್ತಿತ್ವದ ಪರಿಶುದ್ಧತೆಗೆ ಪ್ರಾಮುಖ್ಯ ಕೊಡುವುದರೊಂದಿಗೆ, ಇಲ್ಲಿ ಪ್ರಧಾನವಾಗಿ ಕಾಣುವ ಭಕ್ತನ ತೊಳಲಾಟಗಳೂ ಬದುಕಿನ ಆತಂಕಸ್ಥಿತಿಗಳನ್ನು ಎದುರಿಸುತ್ತ ಲೌಕಿಕ ಜೀವನಕ್ಕೆ ತಮ್ಮನ್ನು ಒಳಗು ಮಾಡಿಕೊಂಡಿವೆ. ಈ ಕಾರಣಗಳಿಂದಾಗಿಯೇ ಇಲ್ಲಿಯ ಮನುಷ್ಯ ಒಂದು ರೀತಿಯ ಹೋರಾಟಗಾರನಾಗಿಯೇ ಕಾಣಿಸಿಕೊಳ್ಳುತ್ತಾನೆ.

ಬಸವಣ್ಣನವರ ವಚನಗಳ ಬಹುಭಾಗವನ್ನು ಆವರಿಸಿಕೊಂಡಿರುವುದು ಈ ಮನಸ್ಸು ಮತ್ತು ಕ್ರಿಯೆಗಳ ನಡುವಿನ ಬಿರುಕು ಹಾಗೂ ಅದರಿಂದ ಉಂಟಾದ ಆತಂಕದ ಲಕ್ಷಣಗಳು.

ಭಕ್ತನಾಗುವ ಮುಂಚಿನ ಅವಶ್ಯಕವಾದ ಸಿದ್ಧತೆಗಳನ್ನು ಸ್ವತಃ ಮನುಷ್ಯನೇ ತನ್ನ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬೇಕಾದ ಅನಿವಾರ್ಯತೆಯನ್ನು ಹೇಳುವುದಕ್ಕಾಗಿಯೇ ರೂಪುಗೊಂಡಿವೆ. ಬಸವಣ್ಣನವರ ವಚನಗಳಲ್ಲಿ ಈ ಮನುಷ್ಯ ಪ್ರಯತ್ನದ ಬಗೆಗೆ ಕೊಟ್ಟಿರುವ ಒತ್ತು ವ್ಯಕ್ತಿ ಹಾಗೂ ಅವನ ಬದುಕಿನ ನೆಲೆಗಳ ಸಂಬಂಧದಲ್ಲಿ ಉಂಟಾಗಬೇಕಾದ ಸಾಮರಸ್ಯವನ್ನು ಕುರಿತು ಹೇಳಬೇಕಾದಂತಹ ಅವಶ್ಯಕತೆಯಾಗಿದೆ. ಅಲ್ಲದೆ ಮನುಷ್ಯ ವ್ಯಕ್ತಿತ್ವದಲ್ಲಿ ರೂಪುಗೊಳ್ಳಬೇಕಾದ ಹೊಸನೀತಿ ನಡಾವಳಿಗಳ ಹುಡುಕಾಟದ ನೆಲೆಯಾಗಿಯೂ ಮೂಡಿಬಂದಿದೆ.

ಬಸವಣ್ಣನವರ ವಚನಗಳಲ್ಲಿ ದೇಹ ಮನಸ್ಸುಗಳ ಕಂದರವನ್ನು ವಿವರಿಸುವ ದ್ವಂದ್ವವೇ ಹೆಚ್ಚು ಪ್ರಧಾನ ನೆಲೆಯಲ್ಲಿರುವಂಥದ್ದು ಅಲ್ಲಿ ವ್ಯಕ್ತಿತ್ವದ ಛಿದ್ರತೆಯನ್ನು ಕುರಿತು ಆಂತಕವೇ ಹೆಚ್ಚು ಭಾಗವನ್ನು ಆಕ್ರಮಿಸಿಕೊಂಡ ಆಲೋಚನೆಯಾಗಿದೆ. ಆದ್ದರಿಂದಲೇ ಅವನ ವಚನಗಳ ಮುಖ್ಯ ದ್ವಂದ್ವವೊಂದು ಎರಡು ಹಂತಗಳಲ್ಲಿ ಪ್ರಧಾನವಾಗಿ ಎದ್ದು ಕಾಣುತ್ತದೆ. ವ್ಯಕ್ತಿತ್ವದ ಛಿದ್ರತೆಯು ಅಂದರೆ ಅಂತರಂಗ ಬಹಿರಂಗ ಕ್ರಿಯೆಗಳಲ್ಲಿ ಉಂಟಾದ ಕಂದರವು, ಇಲ್ಲಿನ ಆತಂಕದ ಮೊದಲ ಹಂತದ್ದಾದರೆ, ಇನ್ನೊಂದು ಹಂತದಲ್ಲಿ ಈ ಬಿರುಕನ್ನು, ವ್ಯಕ್ತಿತ್ವದ ಕಂದರವನ್ನು ನಿವಾರಿಸಿಕೊಳ್ಳಬೇಕೆನ್ನುವ ಆಶಯಗಳು, ಇನ್ನೊಂದು ಹಂತದ ಬೆಳವಣಿಗೆಗಳಾಗಿವೆ. ಈ ಸಿದ್ಧತೆಗಳ ಆಶಯ ಒಂದರ್ಥದಲ್ಲಿ ಭಕ್ತನೊಬ್ಬನ ಪೂರ್ವ ಪರಿಶ್ರಮವೇ ಆಗಿದೆ (ಅದೇ ೧೫೪)

ಬಸವಣ್ಣನವರು ಸ್ಥಾಪಿಸಿದ ನೂತನ ಧರ್ಮ ಯಾವುದು? ಎಂದರೆ, ತಕ್ಷಣ ಉತ್ತರಿಸುವುದು ಕಷ್ಟವಾಗುತ್ತದೆ. ಏಕೆಂದರೆ ಶೈವಧರ್ಮವನ್ನು ಅನೇಕ ವಚನಕಾರರು ಟೀಕಿಸಿದ್ದು ಕಂಡು ಬರುತ್ತದೆ. ಶೈವ ಧರ್ಮದ ಪ್ರಭೇದಗಳೆಲ್ಲ ಶಿವನನ್ನು ಪರಮದೈವವೆಂದು ಪೂಜಿಸಿದರೂ ಇವುಗಳಲ್ಲಿ ತಾತ್ವಿಕವಾದ ವ್ಯತ್ಯಾಸಗಳು ಕಂಡು ಬರುತ್ತವೆ. "ಶೈವ ಸೈವೆಜಗಾದ, ಪಾಶುಪತಿ ಪಥವನಜೆಯ, ಕಾಳಾಮುಖಿ ಕಂಗೆಟ್ಟ, ಮಹಾವ್ರತಿ ಮದವೇಜೆದ, ಸನ್ಯಾಸಿ ಪಾಷಂಡಿಯಾದ, ಕಾಪಾಲಿ ಮರುಳಾಗಿ ಹೋದ, ಈ ಆರು ಭಕ್ತಿಪಥಕ್ಕೆ ಸಲ್ಲವು ಕೇಳಿರಣ್ಣಾ" (ಸ.ವ.ಸಂ-೩: ವ.೫೯) ಎಂಬ ಚೆನ್ನಬಸವಣ್ಣನವರ ವಚನ ಶೈವಧರ್ಮಗಳನ್ನು ಖಂಡಿಸಿದೆ. ಶೈವ ಪ್ರಭೇದಗಳನ್ನು ಹೆಸರಿಸುವಾಗ ಪಾರಪಂಪರಿಕ ಪ್ರಕಾರಗಳನ್ನು ಬಿಟ್ಟು ವಚನಕಾರರು ಬೇರೊಂದು ಮಾರ್ಗವನ್ನೇ ಹಿಡಿದಂತೆ ತೋರುತ್ತದೆ. ಅಕ್ಕಮಹಾದೇವಿಯು 'ಜಾತಿಶೈವ' ಮತ್ತು 'ಅಜಾತಿಶೈವ' ಎಂಬ ಎರಡು ಪ್ರಕಾರಗಳನ್ನು ಹೆಸರಿಸುತ್ತಾಳೆ. ಜಾತಿಶೈವ ಇತರ ಶೈವರನ್ನು ಸೂಚಿಸಿದರೆ ಅಜಾತಿಶೈವವು ವೀರಶೈವರನ್ನು ಸೂಚಿಸುತ್ತದೆ ಎಂದು ಪಿ.ವಿ. ನಾರಾಯಣರು ಅಭಿಪ್ರಾಯ ಪಡುತ್ತಾರೆ. (೧೯೮೩, ಪು.೪೫೭) ಮೋಳಿಗೆ ಮಾರಯ್ಯನು ಶುದ್ಧಶೈವ, ಪೂರ್ವಶೈವ, ಮಾರ್ಗಶೈವ ಮತ್ತು ಆದಿಶೈವಗಳನ್ನು ವೀರಶೈವವನ್ನಲ್ಲದೇ ಹೆಸರಿಸುತ್ತಾನೆ. (ಅದೇ ಪು.೪೫೩) ಇವನ ವರ್ಗೀಕರಣ ಸಹ ಪಾರಂಪರಿಕ ಪ್ರಭೇದಗಳಿಂದ ಹೊರತಾಗಿದೆ. ಆದಯ್ಯನು ಅರವತ್ತಮೂರು ಪುರಾತನರನ್ನು ಶುದ್ಧಶೈವವೆಂದು

ಕರೆದಿರುವುದರಿಂದ ತಮಿಳು ಶೈವವನ್ನೆ ಶುದ್ಧಶೈವವೆಂದು ಕರೆದರು ಎಂದು ಭಾವಿಸಬಹುದೆಂದು ಪಿ.ವಿ.ನಾರಾಯಣರು ಹೇಳುತ್ತಾರೆ. (ಅದೇ ಪು.೪೫೫) ಹರಿಹರನು ಬಸವಣ್ಣನವರನ್ನು 'ಶುದ್ಧಶೈವಸರೋನಿಧಿಯೆಂದು' (ಪು.೮೭) ಕರೆದಿರುವುದು ಇದಕ್ಕೆ ಪುಷ್ಟಿಕೊಡುತ್ತದೆ. ತಮಿಳುನಾಡಿನಲ್ಲಿ ಹುಟ್ಟಿ ಪ್ರಸಿದ್ಧವಾದ ಶೈವವನ್ನು ಶೈವಸಿದ್ಧಾಂತವೆಂದು ಕರೆದರು. ಈ ಸಿದ್ಧಾಂತದ ಅಡಿಯಲ್ಲಿ ವಚನಕಾರರು ತಮ್ಮ ನೂತನ ಸಮಾಜ ರೂಪಿಸಿದರು. ಅರವತ್ತಮೂರು ಪುರಾತನರ ಉಲ್ಲೇಖ ಬಸವಪುರಾಣದಲ್ಲಿ ಬರುತ್ತದೆ. (೯:೮,೫೨:೨೮) "ವಚನಕಾರರ ಪ್ರಭಾವದಿಂದ ಶೈವಧರ್ಮ ಪರಿಶುದ್ಧಿಗೊಂಡಿತು. ವಚನಕಾರರ ಈ ಹೊಸ ಧರ್ಮ (ವೀರಶೈವ)ದ ಉದಯದೊಡನೆ ಇನ್ನುಳಿದ ಶೈವ ಪ್ರಭೇದಗಳು ಅದರಲ್ಲೂ ಲಿಂಗಪ್ರತಿಷ್ಠೆ ಹಾಗೂ ದೇವಸ್ಥಾನ ನಿರ್ಮಾಣ ಕಾರ್ಯವನ್ನು ವೀರವ್ರತದಂತೆ ಅಂಗೀಕರಿಸಿದ ಕಾಳಾಮುಖ ಧರ್ಮವೂ ಸಹ ಹೋರಾಡಿ ಎದುರಿಸಲು ಅಸಮರ್ಥವಾಗಿ ಅದರಲ್ಲೇ ವಿಲೀನಗೊಂಡಂತೆ ಕಾಣುತ್ತದೆ." (ಚಿಮೂ.೨೦೦೮,ಪು.೧೭೪)

ಹನ್ನೆರಡನೆ ಶತಮಾನದ ಶರಣಧರ್ಮದ ಉತ್ಕರ್ಷದಲ್ಲಿ ವಿಲೀನವಾದ ಘಟನೆಗೆ ಸಮರ್ಥನೆಯೆಂಬಂತೆ ಬಸವಪುರಾಣದಲ್ಲಿ ಸಾಕ್ಷ್ಯ ಸಿಗುತ್ತದೆ. ಕಲ್ಯಾಣದಲ್ಲಿ ಕಬ್ಬಿಲರು ನೆತ್ತರುಗೊಡುಗೆ (ಪ್ರಸಾದ ಉಪಭೋಗ) ವೃತ್ತಿಯನ್ನು ವಂಶಪಾರಂಪರ್ಯವಾಗಿ ಅನುಭವಿಸುತ್ತ ಬಂದಿರುತ್ತಾರೆ. ದುಡಿಯದೇ ಉಣ್ಣುವ ಈ ಪದ್ಧತಿಯನ್ನು ಬಸವಣ್ಣನವರು ನಿಲ್ಲಿಸಿದಾಗ ಜಗಳ ಬಿಜ್ಜಳನ ಕಡೆ ಹೋಗಿ ವಾದ ವಿವಾದ ನಡೆಯುತ್ತದೆ. ಆಗ ಕಬ್ಬಿಲರು ಹೇಳುವ "ಸೇವಕರು ಮಂತ್ರಪ್ರಕರ ದೀಕ್ಷಾವಿಧಜ್ಞರು ಪೂಜನಾರ್ತರು ಶೈವಪಾಶುಪತಾದಿ ಶಾಸನಧಾರಕರು ಬಂದು ತಾವು ತಮತಮಗೆಲ್ಲರುಂ ಮನವೋವಿ ಲಿಂಗೈಕ್ಯರುಗಳಂ ಕಂಡಾವಗಂ ಲಿಂಗೈಕ್ಯರುಗಳಾಗಿ". (೫೭: ೧೫) ಈ ಪದ್ಯದ ಸೂಚನೆಯನ್ನನುಸರಿಸಿ ಎಂ.ಎಂ.ಕಲಬುರ್ಗಿಯವರ ಅಭಿಪ್ರಾಯ ಈ ರೀತಿ ಇದೆ. ಮಂತ್ರಪ್ರಕರ ದೀಕ್ಷಾವಿಧಜ್ಞರು, ಪೂಜನಾರ್ತರಲ್ಲದೆ ಶೈವ, ಪಾಶುಪತ ಮೊದಲಾದ ಸಿದ್ಧಾಂತಗಳಿಗೆ ಸಂಬಂಧಿಸಿದವರು ಅದರಲ್ಲೂ ಈ ಸಿದ್ಧಾಂತಗಳ ಶಾಸನಧಾರಕರಂಥ ಮಹತ್ವದ ವ್ಯಕ್ತಿಗಳು ಬಂದು ಲಿಂಗೈಕ್ಯರಾದರು (ಶರಣರಾದರು) ಎಂದು ಹೇಳಲಾಗಿದೆ. "ಬಸವಣ್ಣನವರ ಈ ಹೊಸ ಧರ್ಮದಲ್ಲಿ ಹಳೆಯ ಧರ್ಮಗಳಾದ ಪಾಶುಪತ ಮತ್ತು ಶೈವಗಳ ಆಚಾರ್ಯರೂ ಸೇರಿಕೊಂಡರೆಂದು ಶ್ರೀಯುತರು ಅಭಿಪ್ರಾಯ ಪಡುತ್ತಾರೆ". (ಕಲಬುರ್ಗಿ ಎಂ.ಎಂ. ೨೦೦೫, ಪು.೨೦೧೫)

ಭೀಮಕವಿಯು ಬಸವಪುರಾಣದಲ್ಲಿ 'ಶೈವ ', 'ಶೈವಾಚಾರ', 'ಶೈವಶಾಸ್ತ್ರ' (೧: ೫೭, ೩೭:೧೨, ೫೭:೧೫, ೩:೩೯, ೩೭:೬೫) ಇತ್ಯಾದಿ ಪದಗಳನ್ನು ಬಳಸಿದ್ದಾನೆ. ವೀರಶೈವ ಪದವನ್ನು ಬಳಕೆ ಮಾಡಿದ್ದಾನೆ. (೪೩:೩೬, ೪೯:೫೩, ೫೯:೬) ಬಸವಣ್ಣನವರನ್ನು 'ವೀರಶೈವಾವೇಶಸಾರ' (೬೦:೯೪) ಎಂದು ಕರೆದಿದ್ದಾನೆ. ಬಸವ ಪುರಾಣದಲ್ಲೆಡೆಯಲ್ಲೆಲ್ಲ ಕವಿಯು 'ಶರಣ', 'ವೀರ', 'ಮಾಹೇಶ್ವರ', 'ವೀರಶೈವ' ಈ ಪದಗಳನ್ನು ಪರ್ಯಾಯ ಪದಗಳಂತೆ ಬಳಕೆ

ಮಾಡಿದ್ದಾನೆ. ಹೀಗಿದ್ದರೂ ಬಸವಪುರಾಣದಲ್ಲಿ ಚರ್ಚೆಯಾಗಿರುವುದು ಶೈವವೇ ಹೊರತು ವೀರಶೈವವಲ್ಲ. "ಇದಕ್ಕೆ ಕಾರಣ ಮೂಲ ಬಸವ ಪುರಾಣದ ಕರ್ತೃ ಪಾಲ್ಕುರಿಕೆ ಸೋಮನಾಥನು ಆಂಧ್ರದವನು. ಅವನಿಗೆ ಕರ್ನಾಟಕದ ಚಳುವಳಿಯ ಬಗ್ಗೆ ತಿಳಿದದ್ದು ಕಡಿಮೆ. ಅನುಭವಮಂಟಪದಲ್ಲಿ ವೀರಶೈವ ಧರ್ಮದ ತಾತ್ವಿಕ ಜಿಜ್ಞಾಸೆ ನಡೆದು ಚೆನ್ನಬಸವಣ್ಣ ಅದಕ್ಕೊಂದು ರೂಪುಕೊಡಲು ಪ್ರಯತ್ನಿಸಿದುದು ಪಾಲ್ಕುರಿಕೆ ಸೋಮನಾಥನಿಗೆ ತಿಳಿದಂತೆ ತೋರದು" ಎಂದು ವಿದ್ಯಾಶಂಕರ್ ಅವರು ಹೇಳುತ್ತಾರೆ. (ವಿದ್ಯಾಶಂಕರ್ ಎಸ್. ೨೦೦೮, ಪು.೧೩೯) 'ಲಿಂಗವಂತ' ಎಂಬ ಪದವೂ ಸಹ ಅನೇಕ ಕಡೆಯಲ್ಲಿ ಪ್ರಯೋಗವಾಗಿದೆ. (೩೫:೬೧, ૩೬:೪೨) ಈ ಎಲ್ಲ ಅಂಶಗಳಿಂದ ಬಸವಣ್ಣನವರು ಸ್ಥಾಪಿಸಿದ ನೂತನ ಧರ್ಮ ಶೈವವೆ? ವೀರಶೈವವೇ? ಲಿಂಗಾಯತವೆ? ಎಂಬ ಪ್ರಶ್ನೆಗಳು ಉದ್ಭವಿಸುತ್ತವೆ.

ಈ ಕುರಿತಂತೆ ಚರ್ಚಿಸುತ್ತ ಕಲಬುರ್ಗಿಯವರು "ಸೋಮನಾಥನ ವೀರಮಾಹೇಶ್ವರಕ್ಕೆ ಪ್ರತಿಯಾಗಿ ಭೀಮಕವಿಯು 'ವೀರಶೈವ ' ಎಂಬುದನ್ನು ಬಳಸುತ್ತಿದ್ದು ಕನ್ನಡದಲ್ಲಿ ವೀರಶೈವಪದ ಮೊಟ್ಟಮೊದಲು ಕಂಡು ಬರುವುದು ಭೀಮಕವಿಯ ಬಸವಪುರಾಣದಲ್ಲಿ" ಎಂದು ಅಭಿಪ್ರಾಯ ಪಡುತ್ತಾರೆ. (ಕಲಬುರ್ಗಿ ಎಂ.ಎಂ.೨೦೦೫, ಪು.೧೩೯) ಹಾಗಾದರೆ ಭೀಮಕವಿ ಕಾಲಕ್ಕೆ ಚಲಾವಣೆಗೆ ಬಂದ ಈ ಪದವನ್ನು ವಚನಕಾರರು ಬಳಸಿಲ್ಲವೆಂಬುದು ಸ್ಪಷ್ಟ. ಅದೇನೆ ಇದ್ದರೂ ಕಾಳಾಮುಖ, ಪಾಶುಪತ, ಮಹಾವ್ರತಿ, ಶೈವಗಳೆಂಬ ನಾಲ್ಕು ಶೈವಗಳನ್ನು ನಿರಾಕರಿಸಿ ಭಕ್ತ, ಮಾಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ನೆಲೆಗಳ ಷಟ್‌ಸ್ಥಲಸಿದ್ಧಾಂತವನ್ನು ಹೊಸದಾಗಿ ಸೃಷ್ಟಿಸಿ ಹೊಸ ಶರಣಧರ್ಮವನ್ನು ಬಸವಣ್ಣನವರು ಸ್ಥಾಪಿಸಿದರೆಂದು ಹೇಳಬಹುದು. (ಅದೇ ಪು.೧೩೭)

ಭೀಮಕವಿಯು ವೀರಶೈವಧರ್ಮದ ನೆಲೆಗಟ್ಟಾದ ಷಟ್‌ಸ್ಥಲ, ಅಷ್ಟಾವರಣ, ಏಕೋತ್ತರಶತಸ್ಥಲಗಳ ಬಗೆಗೆ ವಿವರಣೆ ನೀಡಿರುವುದು ಕಂಡುಬರುವುದಿಲ್ಲ. ಭೀಮಕವಿಯು 'ತೇರಸರ'(೧೩:೧೨, ೪೭:೧೮, ೫೦:೭೦, ೫೩: ೭೩) ಹಾಗೂ 'ಷೋಡಶರ' (೧೩:೧೨, ೪೭: ೧೮, ೫೩: ೭೩) ಉಲ್ಲೇಖ ಮಾಡಿರುವನು. ಆದರೆ ಇವರ ವಿವರ ನೀಡುವುದಿಲ್ಲ. ತ್ರಿವಿಧಪ್ರಸಾದ, (೪:೬೬, ೯:೫೫) ತ್ರಿವಿಧಭಕ್ತಿ, (೪೮:೩೫) ತ್ರಿವಿಧಾರ್ಪಣ, (೪೨:೫) ತ್ರಿವಿಧೋದಕ (೧೭:೪೯, ೪೬:೧೭) ಎಂಬ ವೀರಶೈವ ಧರ್ಮದ ಪಾರಿಭಾಷಿಕ ಪದಗಳನ್ನು ಅಲ್ಲಲ್ಲಿ ಬಳಸಿದರೂ ಸಹ ಇವುಗಳ ವಿವರ ದೊರಕುವುದಿಲ್ಲ.

ಬಸವಪುರಾಣದಲ್ಲಿ ಕಂಡುಬರುವ ಅನುಭವಗೋಷ್ಠಿಗಳು, ಇಷ್ಟಗೋಷ್ಠಿಗಳು, ಶಿವಯೋಗದ ಬಗೆಗಿನ ಮಹತ್ವದ ಅಂಶಗಳು ಶಿವಶರಣಧರ್ಮದ ಮಹತ್ವವನ್ನು ವಿವರಿಸುತ್ತವೆ. ಬಸವಣ್ಣನವರು ಸ್ಥಾವರಲಿಂಗವನ್ನು ವಿರೋಧಿಸಿ 'ಇಷ್ಟಲಿಂಗ ' ಪದ್ಧತಿಯನ್ನು ಜಾರಿಗೆ ತಂದರು. ಗುರುಗಳಿಗಿಂತ ಜಂಗಮಶ್ರೇಷ್ಠವೆಂಬ ಅಭಿಪ್ರಾಯದ ಅನೇಕ ನಿದರ್ಶನಗಳು ಪುರಾಣದಲ್ಲಿ ಕಂಡು ಬರುತ್ತವೆ.

ಸಕಲೇಶ ಮಾದರಸರ ಕಥೆಯಲ್ಲಿ ಲಿಂಗದ ಆದಿ ಅನಾದಿ ಸ್ಥಿತಿಯನ್ನು ಕುರಿತಂತೆ ಕವಿಯು ಸೋದಾಹರಣವಾಗಿ ವಿವರಿಸಿದ್ದಾನೆ. ಆಶ್ಚರ್ಯವೆಂದರೆ ಸ್ಥಾವರಲಿಂಗಪೂಜೆ ಹಾಗೂ ದೇವಾಲಯ ನಿರ್ಮಾಣಕಾರ್ಯ ವಿರೋಧಿಸಿದ ಬಸವ ಚಳುವಳಿಗೆ ವಿರುದ್ಧವಾಗಿ ಭೀಮಕವಿಯ ಕಾಲದಲ್ಲಿ ಈ ಎರಡು ಕ್ರಿಯೆಗಳು ನಡೆದದ್ದೂ ಕಂಡು ಬರುತ್ತದೆ. ಬಸವೋತ್ತರ ಕಾಲದಲ್ಲಿ ಮತ್ತೆ ಈ ಕ್ರಿಯೆಗಳು ಪುನರ್‌ಸ್ಥಾಪನೆಗೊಂಡ ಚಟುವಟಿಕೆಗಳು ಕಂಡುಬರುತ್ತವೆ. ಬಸವಪುರಾಣದಲ್ಲಿ ಇಷ್ಟಲಿಂಗಪೂಜೆಯ ಜೊತೆಗೆ ಸ್ಥಾವರಲಿಂಗ ಪೂಜೆಯೂ ಕಂಡು ಬರುತ್ತದೆ. ಶಿವದೇವಾಲಯಕ್ಕೆ ಹೋಗುವುದು; ಅಲ್ಲಿ ಅರ್ಚನೆ ಮಾಡುವುದು; ಸ್ಥಾವರಲಿಂಗಸ್ಥಾಪನೆ ಮಾಡುವುದು ಮುಂತಾದ ಕ್ರಿಯೆಗಳು ಪುರಾಣದಲ್ಲಿ ಕಂಡುಬರುತ್ತವೆ. ಅಲ್ಪ ಕಾಲಾವಧಿಯಲ್ಲಿ ಅಂದರೆ ೧೪ನೆಯ ಶತಮಾನದಲ್ಲಿ ಮತ್ತೆ ವಚನಪೂರ್ವದ ಸ್ಥಿತಿ ಮರುಕಳಿಸಿರುವುದನ್ನು ಇಲ್ಲಿ ಗುರುತಿಸಬಹುದು.

ಒಟ್ಟಿನಲ್ಲಿ ಪುರಾಣದಲ್ಲಿ ಬರುವ ಸಂದರ್ಭಗಳಿಂದ ಶರಣರು ಷಡ್ದರ್ಶನಗಳಾದ ಸಾಂಖ್ಯ, ಯೋಗ, ನ್ಯಾಯ, ವೈಶೇಷಿಕ, ಮೀಮಾಂಸೆ, ವೇದಾಂತಗಳನ್ನು ಕಡೆಗಣಿಸಿ ಮೃಡದರ್ಶನವನ್ನೇ ಎತ್ತಿ ಹಿಡಿದ ಉದಾಹರಣೆಗಳು ದೊರೆಯುತ್ತವೆ. 'ಇಂತು ಷಡ್ದರ್ಶನ ಕೀಳಾದುದು ಮೃಡದರುಶನ ಮೇಲಾದುದು' (ಬ.ದೇ.ರ. ಪು.೬೪) ಎಂಬ ಹರಿಹರನ ಅಭಿಪ್ರಾಯವೂ ಇದನ್ನೆ ಸೂಚಿಸುತ್ತದೆ. ಈ ಹಿನ್ನೆಲೆಯಲ್ಲಿಯೇ ಕವಿಯು ತಮಿಳುಶೈವ, ಆಂಧ್ರಶೈವ, ವೀರಶೈವ ಇತ್ಯಾದಿ ಶೈವ ಪ್ರಭೇದಗಳನ್ನು ಒಟ್ಟುಗೂಡಿಸಿ 'ಶೈವ'ವೆಂದು ನಿರೂಪಿಸಿರುವ ಸಾಧ್ಯತೆ ಬಸವಪುರಾಣದಲ್ಲಿ ಕಂಡುಬರುತ್ತದೆ ಎಂದು ಭಾವಿಸಬೇಕಾಗುತ್ತದೆ. ಅಷ್ಟಾವರಣಗಳು, ಪಂಚಾಚಾರಗಳು, ಷಟ್‌ಸ್ಥಲಗಳು ಈ ಧರ್ಮವಿಧಿಗಳಿಗೆ ಒಳಪಟ್ಟ ಶರಣಧರ್ಮ ಉಚ್ಛ್ರಾಯ ಸ್ಥಿತಿಗೆ ತಲುಪಿತ್ತು ಎಂಬ ಸೂಚನೆಗಳು ಬಸವಪುರಾಣದಲ್ಲಿ ದೊರೆಯುತ್ತವೆ. ಭೀಮಕವಿಯು ಈ ಕುರಿತು ವಿಂಗಡಣೆ ಮಾಡಿ ವಿವರಿಸಿಲ್ಲವಾದರೂ ಅಲ್ಲಲ್ಲಿ ಬರುವ ಕೆಲವು ಸೂಚನೆಗಳನ್ನನುಸರಿಸಿ ಇವುಗಳನ್ನು ತಿಳಿದುಕೊಳ್ಳಬೇಕಾಗುತ್ತದೆ.

೧. ಅಷ್ಟಾವರಣಗಳು :

ವೀರಶೈವರಿಗೆ ಅತ್ಯಂತ ಪೂಜ್ಯವಾದವುಗಳೆಂದರೆ ಅಷ್ಟಾವರಣಗಳು. 'ಗುರು', 'ಲಿಂಗ', 'ಜಂಗಮ', 'ಪಾದೋದಕ' 'ಪ್ರಸಾದ', 'ವಿಭೂತಿ', 'ರುದ್ರಾಕ್ಷಿ', 'ಮಂತ್ರ' ಇವುಗಳನ್ನು ಪ್ರತಿಯೊಬ್ಬ ವೀರಶೈವನು ಅತ್ಯಂತ ಭಕ್ತಿಯಿಂದ ಪರಿಭಾವಿಸಬೇಕೆಂದು ಹೇಳುತ್ತಾರೆ. ಬಸವಪುರಾಣದಲ್ಲಿ ಸಂದರ್ಭೋಚಿತವಾಗಿ ಉಕ್ತವಾಗಿರುವ ಈ ವಿಷಯಗಳ ಕುರಿತಂತೆ ಸ್ಥೂಲ ಚರ್ಚೆಯನ್ನು ಈ ರೀತಿಯಾಗಿ ಮಾಡಬಹುದು.

ಅ.ಗುರು :

'ಗುರು' ಎಂಬ ಶಬ್ದವೇ ಶಿಷ್ಯನನ್ನು ಕತ್ತಲೆಯಿಂದ ಬೆಳಕಿನೆಡೆಗೆ ನಡೆಸುವಂತದ್ದು. ವೀರಶೈವರಲ್ಲಿ ಗುರುವಿಗೆ ಅತ್ಯಂತ ಗೌರವಾದರಗಳಿವೆ. ಭಕ್ತನನ್ನು ಕಠಿಣ ಸಂದರ್ಭದಲ್ಲಿ ಮುನ್ನಡೆಸಲು ಗುರುವಿನ ಅವಶ್ಯಕತೆ ಇದೆ ಎಂದು ಹೇಳಬಹುದು. ಗುರುಗಳಲ್ಲಿ 'ದೀಕ್ಷಾಗುರು' ಮತ್ತು 'ಮೋಕ್ಷಾಗುರು'

ಎಂದು ವೀರಶೈವರು ಹೆಸರಿಸುತ್ತಾರೆ. (ನಾರಾಯಣ ಪಿ.ವಿ. ೧೯೮೩, ಪು.೪೦೨) ದೀಕ್ಷಾಗುರುವು ಶಿಷ್ಯನಿಗೆ ದೀಕ್ಷೆಯನ್ನಿತ್ತು ಅವನಿಗೆ ವೀರಶೈವದ ಪರಿಧಿಯಲ್ಲಿ ಸೇರುವಂತೆ ಮಾಡುವವನು. ಶಿಕ್ಷಾಗುರುವು ಶಿಷ್ಯನನ್ನು ಸನ್ಮಾರ್ಗದಲ್ಲಿ ನಡೆಯುವಂತೆ ತಯಾರು ಮಾಡುವವನು. ಮೋಕ್ಷಗುರುವು ಪರಮಪುರುಷಾರ್ಥವನ್ನು ಪಡೆಯಲು ಮಾರ್ಗದರ್ಶನವನ್ನು ಮಾಡುವವನು. ಇವರು ಬೇರೆ ಬೇರೆ ಆಗಿರಬಹುದು ಅಥವಾ ಒಬ್ಬನೇ ಆಗಿರಬಹುದು.

ವೀರಶೈವನಾದವನು ಗುರುವಿನಿಂದ ಉಪದೇಶವಾಗದೆ ಇಷ್ಟಲಿಂಗವನ್ನು ಧರಿಸಿ ಪೂಜಿಸುವುದನ್ನು ವಚನಕಾರರು ನಿಷೇಧಿಸುತ್ತಾರೆ. ಬಸವಪುರಾಣದಲ್ಲಿ ಬಸವಣ್ಣನವರಿಗೆ ಹುಟ್ಟಿದ ತಕ್ಷಣವೇ ಕೂಸಿನಲ್ಲಿಯ ಶಿವನೆ ಗುರುವಾಗಿ ಬಂದು ಲಿಂಗಧಾರಣೆ ಮಾಡಿದನು ಎಂದು ಕವಿ ಬರೆಯುತ್ತಾನೆ. "ಆ ತನಯನೊಳಗಿಹ ಶಿವಂ ವಿಖ್ಯಾತಗುರ್ವಾಕಾರಮಂ ತಾಳ್ದಾತನಂಗದ ಮೇಲೆ ಲಿಂಗಾಸಂಗಮಂ ಮಾಡಿ" (೩:೨೪) ಎಂಬ ಮಾತುಗಳು ಬಸವಣ್ಣನವರ ಗುರು ಯಾರು ? ಎಂಬ ಬಗ್ಗೆ ಯೋಚನೆಗೀಡುಮಾಡುತ್ತವೆ. ಜಡೆಮುಡಿಯನ್ನು ಹೊಂದಿರುವ, ಮೃಡನ ಸೆಜ್ಜೆ ಸೀತಾಂಬರ ಚೆಲುವುಡಿಗೆ ಹೊಂದಿರುವ, ರತ್ನಗಂಬಳಿ ಹೊದೆದಿರುವ, ರುದ್ರಾಕ್ಷಿಮಾಲೆ ಧರಿಸಿರುವ, ಭಸ್ಮಾವೃತವಾಗಿರುವ, ನೊಸಲಲ್ಲಿ ವಿಭೂತಿ ಧರಿಸಿರುವ ಗುರುವಿನ ವರ್ಣನೆ ಇಲ್ಲಿ ಬರುತ್ತದೆ. (೩:೨೬) ವೃಷಭ ಅಥವಾ ನಂದಿಯಿಂದ ಬಸವಣ್ಣನಿಗೆ ಲಿಂಗದೀಕ್ಷೆಯಾಯಿತೆಂದು ಹರಿಹರ ಹೇಳುತ್ತಾನೆ. (ಪು.೪೦) ಬಹುಶಃ ಇಲ್ಲಿಯ ನಂದಿಯ ಪವಾಡವನ್ನು ನಂಬದೇ ಹೋದರೆ ಈಶಾನ್ಯ ಗುರುಗಳು ಬಸವಣ್ಣನವರಿಗೆ ದೀಕ್ಷೆ ನೀಡಿರಬೇಕೆಂಬ ಊಹೆಗೆ ಆಸ್ಪದವಿದೆ. ಬಸವಣ್ಣನವರ ವಚನಗಳಲ್ಲಿಯೂ ಸಹ ತನ್ನ ಗುರು ಯಾರು ಎಂಬ ಬಗ್ಗೆ ಮಾಹಿತಿ ದೊರೆಯುವುದಿಲ್ಲ. ಅಲ್ಲಮಪ್ರಭುವಿನ ಗುರು ಅನಿಮಿಷನಾಗಿದ್ದಾನೆ. ಮಡಿವಾಳ ಮಾಚಿದೇವರ ಗುರು ಮಲ್ಲಿಕಾರ್ಜುನ. ಸಿದ್ಧರಾಮನಿಗೆ ಚೆನ್ನಬಸವಣ್ಣ ಲಿಂಗಧಾರಣೆ ಮಾಡಿದವನಿದ್ದಾನೆ. ಆದರೆ ಈ ಕುರಿತಂತೆ ಬಸವೇಶ್ವರನ ವಿಷಯವಾಗಿ ವಿವರಗಳು ತಿಳಿದು ಬರುವುದಿಲ್ಲ. ಈ ಕುರಿತಂತೆ ಚರ್ಚಿಸುತ್ತ ಫ.ಗು ಹಳಕಟ್ಟಿಯವರು ಬಹುಶಃ ಬಸವಣ್ಣನವರು ಉಪನಯನ ತಿರಸ್ಕರಿಸಿ ಹೋದ ಮೇಲೆ ಯಾವುದೋ ಒಬ್ಬ ಗುರುವಿನಿಂದ ಲಿಂಗಾಧಾರಣೆ ಪಡೆದು ವೀರಶೈವ ಧರ್ಮದಲ್ಲಿ ಸೇರಿರಬೇಕು ಎಂಬುದನ್ನು ಅವರವೇ ಅದ ವಚನಗಳಿಂದ ಸಾಧಾರಣವಾಗಿ ನಿರೂಪಿಸುತ್ತಾರೆ. ಅಂತಿಮವಾಗಿ "ದೀಕ್ಷೆಯನ್ನು ಯಾರು ಮಾಡಿದರೆಂಬುದು ವೀರಶೈವರಲ್ಲಿ ಅಷ್ಟು ಮಹತ್ವದ ಪ್ರಶ್ನೆಯಲ್ಲ. ಆದರೆ ಶಿವಾನುಭವವನ್ನು ತಿಳಿದು ಆಚರಿಸುವುದೇ ಬಹು ಮಹತ್ವವಾದದ್ದು" (ಹಳಕಟ್ಟಿ ಸಮಗ್ರ ಸಾಹಿತ್ಯ ಸಂ.೧೧, ಪು.೪೮–೫೨. ಎಂಬ ತೀರ್ಮಾನಕ್ಕೆ ಬರುತ್ತಾರೆ. ಬಸವನ ಗುರು ಯಾರು ಎಂಬ ಬಗ್ಗೆ ಖಚಿತ ಆಧಾರಗಳು ಸಾಲವು ಎಂದೇ ಹೇಳಬಹುದು.

ಗುರುವಿನ ಹಿರಿಮೆಯನ್ನು ತಿಳಿಸುವ ಒಂದೆರಡು ನಿದರ್ಶನಗಳು ಬಸವಪುರಾಣದಲ್ಲಿ ಉಲ್ಲೇಖಗೊಂಡಿವೆ. ಗುರುಭಕ್ತಯ್ಯನೆಂಬುವನು ಅಸದೃಶ ಗುರುಭಕ್ತನು. "ಹರಭಕ್ತಿಗಿಂತ ಮೊದಲು

ಗುರುಭಕ್ತಿ" ಎಂಬುದನ್ನು ಈ ಭಕ್ತನು ತನ್ನ ಗುರು ಅಮರಗುಂಡದ ಮಲ್ಲೇಶ್ವರನಲ್ಲಿ ಮೆರೆದಿದ್ದಾನೆ. ಗುರುಪಾದುಕೆಗೆ ಕಾಲು ತಾಗಿತೆಂದು ತಿಳಿದು ಅಯ್ಯೋ! ನಾನು ಮಹಾದ್ರೋಹಿಯಾದೆನು, ಮಹಾಪಾಪಿಯಾದೆನು ! ಎಂದುಕೊಂಡು ತನ್ನ ಪಾದಗಳನ್ನು ಕಡಿದುಕೊಂಡ ಉಲ್ಲೇಖವನ್ನು ಕವಿ ಕೊಡುತ್ತಾನೆ. ಅಷ್ಟೇ ಅಲ್ಲ ಗುರುವಚನಮಂ ಪಾಲಿಸಿದ ಗುರುವಿನ ಅಣತಿಯಂತೆ ಶೂಲವನ್ನೇರಿದ್ದಾನೆ. "ಗುರೋರಾಜ್ಞಾ ಅಲಂಘ್ಯಾ" (೩೮:೩೧,೩೨,೩೩,೫೧) ಎಂಬುದನ್ನು ಮೆರೆದಿದ್ದಾನೆ.

ಪ್ರೌಢವತಿ ಎಂಬ ವೇಶ್ಯೆಯ ಸೌಂದರ್ಯಕ್ಕೆ ಮರುಳಾದ ಗುರುಭಕ್ತಾಂಡಾರಿಯು ತನ್ನ ಸಖನ ಕೈಯಿಂದ ಆಕೆಗೆ ಒತ್ತೆಯನ್ನು ಕಳಿಸುತ್ತಾನೆ. ಅವಳು ಒತ್ತೆಯನ್ನು ತಿರಸ್ಕರಿಸಿದಾಗ ತಾನೇ ಹೋಗಿ ಏಕೆ ಒಲ್ಲೆ? ರೂಪು, ಯೌವನ, ಸಂಪತ್ತು ಯಾವುದಕ್ಕೂ ಕೊರತೆಯಿಲ್ಲ. ಬೇಕಾದರೆ ಮದುವೆಯಾಗಲೂ ಸಿದ್ಧನಿದ್ದೇನೆ. ನಿನ್ನನ್ನು ಬಿಟ್ಟು ಮಾತ್ರ ಜೀವಿಸಲಾರೆ ಎಂದು ಅಂಗಲಾಚುತ್ತಾನೆ. ಪ್ರೌಢವತಿ ಒಪ್ಪದೆ "ವೇಶ್ಯಾಗಮನವು ಸತ್ಪಥವಲ್ಲ, ವೇಶ್ಯೆಯರು ಅತಿ ಕುಟಿಲೆಯರು, ತತ್ವಜ್ಞನಾದ ನೀನು ಅವರ ಶರೀರಸುಖಕ್ಕೆ ಏಕೆ ಮರುಳಾದೆ "? ಎಂದು ಪರಿಪರಿಯಿಂದ ಹೇಳಿದರೂ ಗುರುಭಕ್ತಾಂಡಾರಿಗೆ ಅದಾವುದೂ ನಾಟಲಿಲ್ಲ. ಕೊನೆಗೆ ಶ್ವೇತ ಹಾಗೂ ಮಲುಹಣರ ಕಥೆಗಳನ್ನು ಹೇಳಿದರೂ ಕೇಳದಿದ್ದಾಗ ಪ್ರೌಢವತಿಯು "ಗುರುಭಕ್ತಿಯೇ ತಾಜೀವವೆಮಗಿಬ್ಬರಿಗೆ ನಿಜ ಎಂತಾವಗಂ ನಾ ನಿನ್ನ ಕೋಡಿಂಗಾಸೆಯ ಮಾಡಿ, ನಿನ್ನ ಸದ್ಗುರು ದೇವನೊಲಿದೊಂದಿರುಳು ಬಿಜಯಂಗೆಯ್ದು ಹರುಷದಲಿ ಎನ್ನ ಕೂಡಿದ್ದೆಯ್ದಿದದಜೆಂ ನಿನ್ನವಂ ಬೇಡೆಂದೆನೆನಲೆದೆ" (೪೪: ೫–೬) ಎಂದು ಹೇಳುವುದೇ ತಡ ಗುರುಭಕ್ತಾಂಡಾರಿಯು ಪಶ್ಚಾತ್ತಾಪದಿಂದ ದಗ್ಧನಾಗಿ ಹೋಗುತ್ತಾನೆ. ಪಾಪಿಯೇ, ದುರ್ವ್ಯಸನಿಯೇ, ಕೋಪಿಯೇ, ಮದಾಂಧನೆ, ಸಂತಾಪಚಿತ್ತನೆ, ಕರ್ಮವಾದಿಯೆ, ಧರ್ಮವಿಕ್ರಯನೆ, ಕಾಪುರುಷನೆ, ಧೂರ್ತನೆ, ದುರುಳನೆ ಎಂದು ತನ್ನನ್ನು ತಾನು ಹಳಿದುಕೊಳ್ಳುತ್ತಾನೆ. (೪೪:೨೨) ತನ್ನ ಕಣ್ಣುಗಳನ್ನು ಕಿತ್ತು ತನ್ನನ್ನೇ ತಾನು ಕೊಂದುಕೊಳ್ಳಲುರವಣಿಸಿದಾಗ ಅವನ ಗುರುಗಳೇ ಬಂದು "ಭಲಭಲರೆ ಭಕ್ತಿತಿಲಕಾ ಭಲಭಲರೆ ಗುರುಭಕ್ತಿಪುಳಕಾ, ಭಲಭಲರೆ ಗರುಭಕ್ತಿನಿಶ್ಚಳಕರತಳಾಮಳಕಾ" ಎಂದು ಆತನನ್ನು ಸಮಾಧಾನಿಸುತ್ತಾರೆ. ಇಲ್ಲೆಲ್ಲ ಗುರುಭಕ್ತಿಮಹಿಮೆ ಮನಂಬುಗುವಂತೆ ವರ್ಣಿತವಾಗಿದೆ. ಗುರುವಿಗೆ ಸಮಾಜದಲ್ಲಿರುವ ಸ್ಥಾನಮಾನಗಳು, ಗೌರವಾದರಗಳನ್ನು ಭೀಮಕವಿಯು ಮನೋಜ್ಞವಾಗಿ ಚಿತ್ರಿಸಿದ್ದಾನೆ.

ಕವಿಯು ಶೈವದೀಕ್ಷಾಚಾರ್ಯರನ್ನು ಕುರಿತು ಹೇಳುತ್ತಾನೆ. (ಸಂ.೫೭) ಅನೇಕಾನೇಕ ಶೈವದೀಕ್ಷಾಚಾರ್ಯರು ಬಸವಣ್ಣನವರ ಮಹಿಮೆಗೆ ಓತು ಬಂದು ದೀಕ್ಷೆ ಹೊಂದಿದ ಅಖಿಲ ಜನರೂ ಕಲ್ಯಾಣದಲ್ಲಿ ಪ್ರಸಾದಭೋಗಿಗಳಾಗಿದ್ದರು ಎಂಬುದನ್ನು ಕವಿ ವಿವರಿಸುತ್ತಾನೆ. ಶಿವಭಕ್ತರಿಗೆ ದೀಕ್ಷಾವಿಧಿ ನೀಡುವ ವೃತ್ತಿಯೊಂದು ಶೈವ ಆಚಾರ್ಯರಲ್ಲಿ ಇದ್ದಿರಬೇಕು. ಪರಮತೀಯರನ್ನು

ವೀರಶೈವಮತಕ್ಕೆ ಪರಿವರ್ತಿಸಲು ಈ ಶೈವಾಚಾರ್ಯರು ದೀಕ್ಷೆ ನೀಡುವಂತಹ ವೃತ್ತಿ ನಡೆಸುತ್ತಿದ್ದರೊ ಹೇಗೊ ತಿಳಿಯದು. ಇಂದಿನ ಗುರುವರ್ಗದಲ್ಲಿ ಬರುವ ಅಯ್ಯನವರೆಂಬ ವೀರಶೈವ ಪ್ರಭೇದ ಈ ಸಂಸ್ಕರಣೆಯ ವೃತ್ತಿ ಮಾಡುತ್ತಿರುವುದು ಇಂದಿಗೂ ಕಂಡು ಬರತ್ತಿದೆ. ಬಹುಶಃ ಇಲ್ಲಿ ಉಕ್ತವಾಗಿರುವ ಶೈವದೀಕ್ಷಾಚಾರ್ಯರು ಇವರೇ ಇರಬಹುದೇನೊ.

ಆ. ಲಿಂಗ :

ಬಸವಪುರಾಣದಲ್ಲಿ ಲಿಂಗದೀಕ್ಷೆಯ ಉಲ್ಲೇಖಗಳಿಗಿಂತ ಲಿಂಗಮೌಲ್ಯಕ್ಕೆ ಸಂಬಂಧಪಟ್ಟ ಚಟುವಟಿಕೆಗಳು ಹೆಚ್ಚು ಕಂಡುಬರುತ್ತವೆ. ಬಹುಶಃ ವೈದಿಕ ಧರ್ಮದ ಜನಿವಾರಕ್ಕೆ ಪ್ರತಿಸ್ಪರ್ಧಿಯಾಗಿ ವೀರಶೈವರಲ್ಲಿ ಲಿಂಗಧಾರಣೆ ಕಂಡು ಬರುತ್ತದೆ. "ಲಿಂಗಧಾರಣೆಯೆನ್ನುವುದು ಆತ್ಮೋದ್ಧಾರದ ಆತ್ಮಬಲದ ಒಂದು ಸಾಧಕವಾದಂತೆ ವರ್ಣ, ವರ್ಗ, ಲಿಂಗ ಭೇದಗಳನ್ನು ನಿರಾಕರಿಸಿದ ಒಂದು ಹೊಸ ಮೌಲ್ಯವಾಗಿದೆ. ಯಾವ ಸಂಸ್ಕಾರಗಳಿಂದ ವಿಪ್ರರು ಭೇದ ಸಂಸ್ಕೃತಿಯನ್ನು ಜತನವಾಗಿ ಕಾಪಾಡಿಕೊಂಡು ಬಂದಿದ್ದರೋ ಅದಕ್ಕೆ ನೀಡಿದ ದೊಡ್ಡ ಪೆಟ್ಟಾಗಿದೆ ಈ ಲಿಂಗ". (ಪಾಟೀಲ್ ಸದಾನಂದ, ೧೯೯೯, ಪು.೧೪೪)

ಲಿಂಗವು ಎರಡು ಬಗೆಯಲ್ಲಿ ಪೂಜಿಸಲ್ಪಡುವುದು ಹಿಂದಿನಿಂದ ಬಂದ ವಾಡಿಕೆ. ಸ್ಥಾವರಲಿಂಗ ದೇಹದ ಮೇಲೆ ಧರಿಸಿದ ಲಿಂಗ. ವೀರಶೈವದ ಒಂದು ಪ್ರಮುಖ ವೈಶಿಷ್ಟ್ಯವೆಂದರೆ ಸ್ಥಾವರಲಿಂಗ ಪೂಜೆಯ ನಿಷೇಧ ಮತ್ತು ಇಷ್ಟಲಿಂಗ ಪೂಜೆ. ಬಸವಪುರಾಣದಲ್ಲಿ ಈ ಎರಡೂ ರೀತಿಯ ಆಚರಣೆಗಳು ಜಾರಿಯಲ್ಲಿದ್ದಂತೆ ಕಂಡುಬರುತ್ತದೆ. ಬಸವಣ್ಣನವರು ವಿರೋಧಿಸಿದ ಸ್ಥಾವರಲಿಂಗಪದ್ಧತಿ ಒಂದು ಚಳವಳಿಯಂತೆ, ಆಂದೋಲನದಂತೆ ಮುಂದುವರಿದುಕೊಂಡು ಬಂದದ್ದು ಬಸವಪುರಾಣದಲ್ಲಿ ಕಂಡು ಬರುತ್ತದೆ.

ಬಸವಪುರಾಣದಲ್ಲಿ ಬಸವಣ್ಣ ಜನಿಸಿದ ತಕ್ಷಣವೇ ಆತನಿಗೆ ಲಿಂಗಧಾರಣೆಯಾಯಿತೆಂದು ಈ ಹಿಂದೆ ನೋಡಿದ್ದೇವೆ. (೩:೨೪) ಹರಿಹರ ಹೇಳುವಂತೆ ಬಸವೇಶ್ವರನು ಕಮ್ಮೆಕುಲದಲ್ಲಿ ಜನಿಸಿದುದನ್ನು ಮುಂದೆ ಮಾಡಿ ಬಸವೇಶ್ವರನು ಕಮ್ಮೆಕುಲದ ಬ್ರಾಹ್ಮಣ ತಂದೆತಾಯಿಗಳ ಮಗನೆಂಬುದು ಸ್ಪಷ್ಟ.

ಕಮ್ಮೆಕುಲಕಧಿಪತಿಯೆನಿಪ ಸಿದ್ಧದಂಡಾಧಿಪಂ
ಕುಲವೊಂದು ಕುಲವಾಗೆ ಗೋತ್ರವಂತನುವಾಗೆ
ನೆಲೆ ವಿಚಾರಿಸೆ ತನ್ನ ಸಂಬಂಧವೊಂದಾಗೆ
ಸಿದ್ಧದಂಡಾಧಿಪಂ ಹೆಚ್ಚುತಂ ಹಿಗ್ಗುತಂ

ಬಸವೇಶ್ವರನನ್ನು ಸಾಕುಮಗನನ್ನಾಗಿ ಮಾಡಿಕೊಂಡನು. ಆರಾಧ್ಯಬ್ರಾಹ್ಮಣರು ಸ್ಮಾರ್ತರೆಂದೂ, ಅವರು ಲಿಂಗಯಜ್ಞೋಪವೀತ ಧಾರಿಗಳಾಗಿ ದೇವಸ್ಥಾನದ ದೇವರುಗಳಿಗೆ ಅರ್ಪಿಸಿಕೊಡುವ ಪ್ರಸಾದವನ್ನು ಸ್ವೀಕರಿಸುವುದಿಲ್ಲವೆಂದೂ, ಸತ್ತವರನ್ನು ಹೂಳುವರೆಂದೂ, ಶ್ರಾದ್ಧ ಹೋಮಾದಿ

ಕರ್ಮಗಳನ್ನು ಮಾಡುವುದಿಲ್ಲವೆಂದೂ ಕೆ.ಎ. ನೀಲಕಂಠ ಶಾಸ್ತ್ರಿಗಳು "Devolopment of Religion in South India" ಎಂಬ ಗ್ರಂಥದಲ್ಲಿ ಹೇಳಿದ್ದಾರೆ. ಇಂದಿಗೂ ಕಮ್ಮೆಕುಲದವರು ಸ್ಮಾರ್ತರೆ. ಈ ಕಮ್ಮೆಕುಲದಲ್ಲಿ ಲಿಂಗಯಜ್ಞೋಪವೀತ ಧರಿಸುವ ಆರಾಧ್ಯ ಬ್ರಾಹ್ಮಣರಿದ್ದರು. ಬಸವೇಶ್ವರನೂ ಕಮ್ಮೆಕುಲದಲ್ಲಿ ಹುಟ್ಟಿದವನಾದುದರಿಂದ ಬಸವೇಶ್ವರನ ಚರಿತ್ರೆ ಹೇಳುವ ಗ್ರಂಥಗಳಲ್ಲಿರುವಂತೆ ಅವನು ಹುಟ್ಟಿದಾಗ ಇಷ್ಟಲಿಂಗವನ್ನು ಗುರುವು ಅನುಗ್ರಹಿಸಿದನೆಂದು ನಂಬಲೇಬೇಕಾಗುತ್ತದೆ. (ಬಸವೇಶ್ವರರ ಸಮಕಾಲೀನರು, ಪು.೪) "ನಿನ್ನವಂ ಗುರು-ಲಿಂಗರೂಪಾಗಿ ನಿಜತತ್ವಾರ್ಥ ಸೌಖ್ಯವನೊಂದಿಸುವೆ ನಾಂ ಪ್ರಾಣಲಿಂಗಾನಂದದಿಂ ತತ್ಪ್ರಾಣತನುಗಳೊಳಗಲದೊಲಿದಿಹೆನು" (೭:೪೧) ಎಂಬ ಕೈಲಾಸದಲ್ಲಿ ಶಿವನು ಹೇಳಿದ ಮಾತುಗಳೆ ಮುಂದೆ ಬಸವನ ಲಿಂಗಧಾರಣೆಗೆ ಹಿನ್ನಲೆಯಾದರೂ ಸಹ ಶ್ರೀ.ಟಿ.ಎನ್.ಮಲ್ಲಪ್ಪನವರ ಅಭಿಪ್ರಾಯ ಸಾಧುವಾದುದೆಂದೇ ಹೇಳಬಹುದು.

ಲಿಂಗಧಾರಣೆಯಲ್ಲಿ ಎರಡು ವಿಧ. ಶ್ರೌತ ಮತ್ತು ಅಶ್ರೌತ. ಶ್ರೌತ ಅಥವಾ ವೈದಿಕವಾದುದೆಂದರೆ ಷಡದ್ವಶೋಧನೆಯುಳ್ಳ ಲಿಂಗಧಾರಣ.ಅಶ್ರೌತ ಅಥವಾ ಅವೈದಿಕವಾದುದು ಲಿಂಗಮುದ್ರೆಯನ್ನು ಬೆಂಕಿಯಲ್ಲಿ ಕಾಯಿಸಿ ದೇಹದಲ್ಲಿ ಒತ್ತುವುದು. (ಷಣ್ಮುಖ ಶಾಸ್ತ್ರಿಗಳು, ಶೈವ ಮತ್ತು ವೀರಶೈವ, ಪು.೧೯) ವೀರಶೈವರು ಆಚರಿಸುವುದು ಮೊದಲನೆಯದನ್ನು. ಆದರೆ ಏಕಾಂತರಾಮಿ ತಂದೆಗಳ ಕಥೆಯಲ್ಲಿ ಶರಣಾಗತರಾದ ಜೈನರಿಗೆ ನಂದಿಮುದ್ರೆಯೊತ್ತಿದ ಉಲ್ಲೇಖ ಬರುತ್ತದೆ. "ಜಿನಸಮಯಿಗಳು ಶಿವಗಣವೃಂದಕಂ ಸಾಷ್ಟಾಂಗಮಾಗಲು ವಂದಿಸುತ ಮುಂದೆಸೆಯೊಳಿರಲಂತವರ ಹಣೆಗಳಲಿ ನಂದಿಮುದ್ರೆಯನೊತ್ತಿ" ಎಂಬ ಮಾತುಗಳನ್ನು ನೋಡಿದರೆ ಪರಸಮಯಿಗಳು ಶಿವಮತಕ್ಕೆ ಮತಾಂತರಗೊಳ್ಳುವ ಸಂದರ್ಭದಲ್ಲಿ ಇಂತಹ ಪದ್ಧತಿ ಜಾರಿಯಿತ್ತೆಂದು ತೋರುತ್ತದೆ. ಅಲ್ಲದೇ ದೇವರ ದಾಸಿಮಯ್ಯನು ಶ್ರಾವಕರಿಗೆ ಶಿವದೀಕ್ಷೆಯನ್ನು ಕೊಟ್ಟುದರ ಉಲ್ಲೇಖವನ್ನು ಸಹ ಕವಿ ಕೊಡುತ್ತಾನೆ. (೫೦:೬೨)

ಲಿಂಗವನ್ನು ದೇಹದ ಮೇಲೆ, ಕೌಂಕುಳ, ಕೈ,ಕಂಠ,ಎದೆ, ಬಾಯಿಗಳಲ್ಲಿ ಧರಿಸಬಹುದೆಂದು ವಚನಕಾರರು ಹೇಳುತ್ತಾರೆ. (ನಾರಾಯಣ ಪಿ.ವಿ. ೧೯೮೩, ಪು.೪೦೯) ಇದಕ್ಕೆ ಬಸವಪುರಾಣದಲ್ಲಿಯೂ ಸಮರ್ಥನೆ ದೊರೆಯುತ್ತದೆ. "ಉತ್ತಮಾಂಗಾಭರಣ ಶಾಸನವೆತ್ತ ಕಕ್ಷಕರಸ್ಥಲ ಗ್ರೀವೋತ್ತಮಾಂಗೋರಸ್ಥಲಾಧಿಕ ಲಿಂಗಧಾರಕರು" (೬:೧೫) ಎಂಬ ಕವಿ ಮಾತುಗಳು ಇದಕ್ಕೆ ಪುಷ್ಟಿ ಕೊಡುತ್ತವೆ.

ಅಲ್ಲಮಪ್ರಭು ಕಲ್ಯಾಣಕ್ಕೆ ಬರುವ ಸಂದರ್ಭದಲ್ಲಿ ಸಂಗಮೇಶನ ತನುವಿನಲ್ಲಿ ಹೊಳೆದ ಆತ ಕರಸ್ಥಳದಲ್ಲಿ ಲಿಂಗವಿಡಿದಿದ್ದನೆಂದು ಕವಿ ಹೇಳುತ್ತಾನೆ. (೭:೭) ಸಿದ್ಧರಾಮನು ಕೈಲಾಸಕ್ಕೆ ಹೋಗಿ ಈ ಪ್ರಮಥಲೋಕದಲ್ಲಿ ಬಸವನಿದ್ದಾನೆಯೆ?ಎಂದು ಪ್ರಶ್ನಿಸುತ್ತಾನೆ.ಆ ಲೋಕ ಈ ಲೋಕ

ಎಂದೇನು ಯಾವ ಲೋಕದಲ್ಲೇನು ಬಸವನಿಲ್ಲಾ ಎಂದು ಶಿವನು ತನ್ನ ಹೃದಯವನ್ನು ಬಿಚ್ಚಿ ತೋರಿಸಿದನು. ಕೈಯಲ್ಲಿ ಲಿಂಗ , ಅಲ್ಲಿಯೇ ನೆಟ್ಟ ದೃಷ್ಟಿ, ಪದ್ಮಾಸನಸ್ಥನಾದ ಬಸವ ಮೂರ್ತಿ ಕಂಗೊಳಿಸಿತು ಎಂಬ ವಿವರವನ್ನು ಗೊಲ್ಲತಿಯ ಕಥಾಸಂದರ್ಭದಲ್ಲಿ ದೊರೆಯತ್ತದೆ. ಕಿನ್ನರಿ ಬೊಮ್ಮಯ್ಯ ಕಲ್ಯಾಣಕ್ಕೆ ಬರುವ ಮೊದಲು ಅದರ ಪೂರ್ವಸೂಚನೆಯೆಂಬಂತೆ ಬಸವಣ್ಣನವರು ಲಿಂಗದಲ್ಲಿ ಅವನನ್ನು ಕಾಣುತ್ತಾನೆ. (೯:೫೧, ೨೭:೭) ಇದರಿಂದ ಶಿವಶರಣರು ಇಷ್ಟಲಿಂಗಾರಾಧಕರಾಗಿದ್ದರೆಂದು ಭಾವಿಸಲು ಯಾವ ತೊಂದರೆಯೂ ಇಲ್ಲ.

ಹೊಲಗೇರಿಯಲ್ಲಿದ್ದ ಒಬ್ಬ ಶಿವಾರ್ಚಕನಿಂದ ತಿರುವಾಕುರೀಶನಿಗೆ ಇಷ್ಟಲಿಂಗಾರ್ಚನಾ ವಿಧಾನವನ್ನು ತಿಳಿಸುವ ಸಂದರ್ಭವಾಗಲಿ, ಲಿಂಗಧಾರಿ ಭಾವನೆ ಬರುವಂತೆ ಬದನೆಕಾಯಿ ಕಟ್ಟಿಕೊಂಡು ವಂಚಕರು ಬಸವಣ್ಣನವರ ಮಹಾಮನೆ ಪ್ರವೇಶಿಸಿ ಅವರು ನಿಜಭಕ್ತರಾದ ಘಟನೆಗಳಾಗಲಿ ಸಮಾಜದಲ್ಲಿ ಅರ್ಹತೆ ಇರುವ ಯಾರು ಬೇಕಾದರೂ ಲಿಂಗಧಾರಣೆ ಮಾಡಿಕೊಳ್ಳಬಹುದಾಗಿತ್ತು ಎಂಬುದಕ್ಕೆ ಸಾಕ್ಷಿಯಾಗಿವೆ. (೮:೧-೫, ೪೮:೩೦-೩೨) ಲಿಂಗಧಾರಣೆಗೆ ಜಾತಿ ಮಾನದಂಡವಾಗಿರಲಿಲ್ಲ ಎಂಬ ಮಹತ್ವದ ಅಂಶ ಇದರಿಂದ ತಿಳಿಯುತ್ತದೆ.

ಪ್ರಾಣದ ಮೇಲೆ ಲಿಂಗಪ್ರತಿಷ್ಠೆಯ ಮಾಡಿಕೊಂಡು ಆರರಿಂದ ಮೀರಿದ ಸ್ಥಲವಿಟ್ಟು ವೀರಮಾಹೇಶ್ವರತ್ವ ಪಡೆಯುವುದು ವೀರಶೈವದ ಲಕ್ಷಣವಾಗಿದೆ. ಪಶುಸದೃಶ ಜೀವವು ತನಗಂಟಿದ ಅಣವ, ಮಾಯಾ, ಕಾರ್ಮಿಕಗಳೆಂಬ ಮಲತ್ರಯ ಕಳೆದುಕೊಳ್ಳುವುದು ವೀರಶೈವಾಚರಣೆಯ ಗುರಿಯಾಗಿದೆ. (ಪಾಟೀಲ ಸದಾನಂದ, ೧೯೯೯, ಪು.೧೪೨) ಶರಣಸತಿ ಲಿಂಗಪತಿಯೆಂಬ ಭಾವವೂ ಭಕ್ತನಿಗೆ ಪ್ರಮುಖವಾಗಿದೆ. ಬಸವಪುರಾಣದಲ್ಲಿ ಬಸವಣ್ಣ, ಅಲ್ಲಮ ಪ್ರಭುದೇವ, ಸಿದ್ಧರಾಮ ಮುಂತಾದ ಅನೇಕ ಶಿವಭಕ್ತರು ಈ ಶರಣಸತಿ-ಲಿಂಗಪತಿ ತತ್ವದ ಆಚರಣೆಯವರಾಗಿ ಕಂಡುಬರುತ್ತಾರೆ.

ಲಿಂಗಪ್ರತಿಷ್ಠಾಪನೆಯಂತಹ ಧಾರ್ಮಿಕ ಕಾರ್ಯ ಸಮಾಜದಲ್ಲಿ ಅತ್ಯಂತ ಮಹತ್ವದ್ದಾಗಿತ್ತು ಎಂಬುದಕ್ಕೆ ಅನೇಕ ನಿದರ್ಶನಗಳು ಬಸವಪುರಾಣದಲ್ಲಿ ದೊರೆಯುತ್ತವೆ. ಸೊನ್ನಲಿಗೆಯಲ್ಲಿ ಒಂದುಲಕ್ಷತೊಂಭತ್ತುಸಾವಿರ ಶಿವಲಿಂಗಗಳನ್ನು ಪ್ರತಿಷ್ಠಾಪಿಸಿದ ಸಿದ್ಧರಾಮನು ಅತಿಭಕ್ತಿಸುಖಗೋಷ್ಠಿಯಲ್ಲಿದ್ದನೆಂಬ ವಿವರ ದೊರೆಯುತ್ತದೆ. (೯:೧೩) ಸಾಮೂಹಿಕ ಲಿಂಗಾರ್ಚನೆಗೆ ಇದೊಂದು ಉದಾಹರಣೆಯಾಗಿದೆ. ಇಂತಹದೇ ಉದಾಹರಣೆ ಮುಗ್ಧಸಂಗಯ್ಯನ ಕಥೆಯಲ್ಲೂ ಕಂಡು ಬರುತ್ತದೆ. ಕೆಂಭಾವಿಯ ಭೋಗಯ್ಯನ ಕಥೆಯಲ್ಲೂ ಇದು ಪುನರುಕ್ತವಾಗಿದೆ. ಅಗ್ರಹಾರದ ಬ್ರಾಹ್ಮಣರು ಭೋಗಯ್ಯನನ್ನು ಊರಿನಿಂದ ಹೊರ ಹಾಕಿದಾಗ ಅವನ ಹಿಂದೆಯೆ ಕೆಂಭಾವಿಯ ಶೈವರ ಮನೆಯಲ್ಲಿಯ ಮತ್ತು ಆ ಊರಿನ ಗುಡಿಯಲ್ಲಿಯ ಲಿಂಗಗಳೂ ಅವನ ಹಿಂದೆ ಹೋದವು. ಉತ್ಪಾತಗಳಿಂದಾಗಿ ಬ್ರಾಹ್ಮಣರ ಕೋರಿಕೆಯಂತೆ ಭೋಗಣ್ಣ ಮರಳಿ ಬಂದಾಗ ಲಿಂಗಗಳೂ

ಸಹ ಮರಳಿದವೆಂದೂ ಕವಿ ವಿವರಿಸುತ್ತಾನೆ. "ಹಿರಿಯ ಲಿಂಗವು ಕಿರಿಯ ಪೀಠಕೆ ಹಿರಿಯ ಪೀಠಕೆ ಕಿಱಿಯ ಲಿಂಗವು ಸ್ಫುರಿತ ರುಚಿರ ಸ್ಫಟಿಕ ಲಿಂಗವು ಬಾಣಪೀಠದಲಿ ಭೀಮಲಿಂಗವು ರಾಮಪೀಠಕೆ ರಾಮಲಿಂಗವು ಭೀಮಪೀಠಕೆ" (೫೬:೫೩,೫೪) ಎಂಬ ಕವಿಯ ಮಾತುಗಳು ವಿಧವಿಧವಾದ, ವಿಭಿನ್ನ ಆಕಾರ, ಗಾತ್ರದ ಸ್ಥಾವರಲಿಂಗಗಳನ್ನು ಪ್ರತಿಷ್ಠಾಪಿಸಿದ್ದರು ಎಂಬ ಅಂಶ ತಿಳಿಯುತ್ತದೆ.

ಬಳ್ಳವು ಲಿಂಗವಾದ ಪವಾಡವಾಗಲಿ, ಆಡಿನ ಹಿಕ್ಕೆ ಲಿಂಗವಾದ ಪವಾಡ, ವೈಜಿಕವ್ವೆಯು ಜಿನಮೂರ್ತಿಯನ್ನು ಸ್ಪರ್ಶಿಸಿದಾಗ ಶಿವಲಿಂಗವಾದ ಉಲ್ಲೇಖ, ಸೋಮಣ್ಣನೆಂಬ ಭಕ್ತನ ಲಿಂಗಸ್ಪರ್ಶನದ ವ್ರತಗಳಾಗಲಿ ಇಲ್ಲೆಲ್ಲ ಲಿಂಗ ಮಹತ್ವವನ್ನು ಹಾಗೂ ಭಕ್ತಿಯ ಮಹತ್ವವನ್ನು ತಿಳಿಸುವ ಹಿನ್ನೆಲೆಯಲ್ಲಿ ಹೇಳಿದ ಕಥೆಗಳಾದರೂ ಸಾಮಾಜಿಕವಾಗಿ ಸ್ಥಾವರಲಿಂಗ ಪೂಜಾಪದ್ಧತಿ ಜಾಗೃತವಾಗಿತ್ತೆಂಬುದರ ಕುರುಹುಗಳಾಗಿವೆ. (೮:೬-೧೧, ೮:೧೨-೧೬, ೫೧:೨೩, ೫೦:೭೭-೮೩) ಸುರಂಗಗಣನಾಥನೆಂಬ ಶಿವಭಕ್ತನು ಶಿವನಿಗೆ ಲಿಂಗಧಾರಣೆ ಮಾಡಿಸಿದ ವೈಶಿಷ್ಟ್ಯಪೂರ್ಣವಾದ ಕಥಾವಿವರವನ್ನು ಕವಿ ಉಲ್ಲೇಖಿಸುತ್ತಾನೆ. (೩೬: ೫೬) "ಉಳ್ಳವರು ಶಿವಾಲಯ ಮಾಡಿಹರು ನಾನೇನ ಮಾಡಲಿ ಬಡವನಯ್ಯಾ. ಎನ್ನ ಕಾಲೇ ಕಂಭ, ದೇಹವೇ ದೇಗುಲ. ಶಿರ ಹೊನ್ನ ಕಲಶವಯ್ಯಾ. ಕೂಡಲಸಂಗಮದೇವಾ, ಕೇಳಯ್ಯಾ ಸ್ಥಾವರಕ್ಕಳಿವುಂಟು,ಜಂಗಮಕ್ಕಳಿವಿಲ್ಲ". (ಸ.ವ.ಸಂ.೧ ವ.೮೨೧) ಎಂಬ ಬಸವಣ್ಣನವರ ಸ್ಥಾವರಲಿಂಗಪೂಜಾ ವಿರೋಧಿ ಭಾವನೆಯನ್ನು ಮೀರಿ ಬಸವಪುರಾಣದಲ್ಲಿ ಈ ಚಟುವಟಿಕೆಗಳು ನಡೆದದ್ದು ಕಂಡು ಬರುತ್ತದೆ. ಆದ್ದರಿಂದಲೇ ಪುರಾಣಗಳು ಬಸವಾದಿ ಶರಣರ ಆಶಯಗಳಿಗಿಂತ ಹೆಚ್ಚಾಗಿ ಅಂದಿನ ಸಾಮಾಜಿಕ ಆಶಯವನ್ನು ಮೈಗೂಡಿಸಿಕೊಂಡವುಗಳಾಗಿ ಕಂಡುಬರುತ್ತವೆ.

ಬಸವಣ್ಣನವರ ಸಮಗ್ರ ಕ್ರಾಂತಿಗೆ 'ಧರ್ಮ' ಕೇಂದ್ರಬಿಂದುವಾದರೆ ಅವರ ಧಾರ್ಮಿಕ ಕ್ರಾಂತಿಗೆ ಇಷ್ಟಲಿಂಗ ಕೇಂದ್ರಬಿಂದುವಾಯಿತು. ಇಷ್ಟಲಿಂಗವನ್ನು ಅವರು ಆಧ್ಯಾತ್ಮ ಸಾಧನೆ ಹಾಗೂ ಸಾಮಾಜಿಕ ಸಮಾನತೆಯ ಸಾಧನವನ್ನಾಗಿ ಉಪಯೋಗಿಸಿಕೊಂಡರು. ಇಷ್ಟಲಿಂಗದ ಮುಖಾಂತರ ಆಧ್ಯಾತ್ಮಸಾಧನೆ ಬಹಳ ಸುಲಭವಾದ ಮಾರ್ಗ. ಇಷ್ಟಲಿಂಗವನ್ನು ನೆಟ್ಟದೃಷ್ಟಿಯಿಂದ ಬಿಟ್ಟೂಬಿಡದೆ ನೋಡುವುದೇ ಲಿಂಗಯೋಗ, ದೃಷ್ಟಿಯೋಗ, ಅನಿಮಿಷಯೋಗ ಅಥವಾ ಶಿವಯೋಗ. ಇದು ಎಲ್ಲ ಯೋಗಕ್ಕಿಂತಲೂ ಸುಲಭವಾದುದಲ್ಲದೆ ಇದರಲ್ಲಿ ಎಲ್ಲ ಯೋಗಗಳ ಸಮನ್ವಯವಿದೆ ಎಂದು ಹೇಳಲಾಗುತ್ತಿದೆ. ಇಂತಹ ಆರಾಧನೆಯಿಂದ ಪುರೋಹಿತರ ಕಾಟ ತಪ್ಪಿತು. ಅವರ ಶೋಷಣೆಗೆ ಅವಕಾಶವಿಲ್ಲದಾಯಿತು. ಇಷ್ಟಲಿಂಗ ಪೂಜಿಸುವುದು ಬಹಳ ಸುಲಭ. ಅದಕ್ಕೆ ಆಡಂಬರದ ಪೂಜೆ ಬೇಕಿಲ್ಲ. ಭಕ್ತಿಯಿಂದ ನೀರಿನ ಅಭಿಷೇಕ ಮಾಡಿ ಹೂಪತ್ರೆಗಳನ್ನರ್ಪಿಸಿದರೆ ಸಾಕು, ಇಷ್ಟಲಿಂಗರೂಪದ ಶಿವ ಪ್ರಸನ್ನನಾಗುತ್ತಾನೆ. "ಇಷ್ಟಲಿಂಗ ಪೂಜೆಯ ಜೊತೆಗೆ ಸಾಧನೆ ಮುಂದುವರಿದಾಗ ಪ್ರಾಣಲಿಂಗ ಹಾಗೂ ಭಾವಲಿಂಗಗಳೂ ಸೇರಿಕೊಳ್ಳುತ್ತವೆ. ಹೃದಯ ಪ್ರಾಣದ ಕೇಂದ್ರ, ಅಲ್ಲಿಂದಲೇ ದೇಹದ ಎಲ್ಲ ಭಾಗಗಳಿಗೂ ರಕ್ತ ಒದಗಿಸಲ್ಪಟ್ಟು ಪ್ರಾಣಜ್ಯೋತಿ ರಚಿಸಲ್ಪಡುತ್ತದೆ.

ಅಲ್ಲದೇ ಹೃದಯದಲ್ಲಿ ಅವರವರ ಅಂಗುಷ್ಟ ಪ್ರಮಾಣದಲ್ಲಿ ದೈವನಿರುವನೆಂದು ಉಪನಿಷತ್ತುಗಳು ಸಾರಿವೆ. ಕಾರಣ ಇದು ದೇವತ್ವದ ಕೇಂದ್ರ. ಇದರಂತೆ ತಲೆಯಲ್ಲಿರುವ ಬ್ರಹ್ಮರಂಧ್ರವೂ ದೇವತ್ವದ ಕೇಂದ್ರ. ಇದರಲ್ಲಿರುವ **'Pineal gland'** ವಿಶ್ವಶಕ್ತಿಯ ಆಗರವೆಂದು ಅಭಿಪ್ರಾಯಪಟ್ಟಿದ್ದಾರೆ. ಇದನ್ನು ಇಂದಿನ ವಿಜ್ಞಾನವೂ ಎತ್ತಿ ಹಿಡಿದಿದೆ". (ವಿರೂಪಾಕ್ಷಪ್ಪ ಬಿ. ಬಸವಪಥ ಸಂ.೩, ಪು.೭೪) ಹೀಗೆ ದೇಹವೆ ದೇವಾಲಯವಾಯಿತು. ದೇವಾಲಯಗಳಿಗೆ ಹೋಗುವ ಅವಶ್ಯಕತೆ ಉಳಿಯಲಿಲ್ಲ. ಇಷ್ಟಲಿಂಗದ ಮೂಲಕ ದೈವಸಾಕ್ಷಾತ್ಕಾರ ಮಾಡಿಕೊಳ್ಳುವುದು ಸಾಧ್ಯವಾಯಿತು.

ಇ. ಜಂಗಮ :

ತ್ರಿವಿಧಗಳಾದ ಗುರು ಲಿಂಗ ಜಂಗಮದಲ್ಲಿ ಜಂಗಮಕ್ಕೆ ಅತ್ಯಂತ ಪೂಜ್ಯ ಸ್ಥಾನವಿದೆ. ಗುರುವಿಗೆ ತನುವನ್ನು ಲಿಂಗಕ್ಕೆ ಮನವನ್ನು ಮತ್ತು ಜಂಗಮಕ್ಕೆ ಧನಕೊಟ್ಟು ಭಕ್ತಿಯಿಂದ ಆರಾಧಿಸಬೇಕೆಂಬ ಭಾವನೆ ಇದೆ. 'ದಾಸೋಹ' ಎಂಬ ಪದ ಮೌಲ್ಯ ಪಡೆದುಕೊಂಡದ್ದೇ ಈ 'ಜಂಗಮ' ದಿಂದ. ಹಾಗಾಗಿಯೇ 'ಜಂಗಮದಾಸೋಹ' ಎಂಬ ನುಡಿ ಚಾಲ್ತಿಯಲ್ಲಿದೆ. "ಭಕ್ತನ ಶಿವಜ್ಞಾನವಲಯವನ್ನು ರೂಪಿಸುವವನು ಗುರುವಾಗಿದ್ದರೆ, ಲಿಂಗವು ಶಿವರೂಪಿಯಾಗುವ ಸಾಧನೋಪಕರಣವಾಗಿದೆ. ಜಂಗಮವು ಈ ಲಿಂಗದ ಸಾಮಾಜೀಕರಣವೆನಿಸಿದೆ. ಹೀಗಾಗಿ ವಚನಕಾರರು ಗುರುವಿನ ಗುರುವೆಂದು ಜಂಗಮನನ್ನು ವರ್ಣಿಸುತ್ತಾರೆ". (ಪಾಟೀಲ ಸದಾನಂದ, ೧೯೯೯, ಪು.೧೪೯-೧೫೦) ಭವಿತನವನ್ನು ಹೋಗಲಾಡಿಸಿ ಭಕ್ತನನ್ನಾಗಿ ಮಾಡಿದ ಗುರುವು ಪವಿತ್ರನಾದರೂ ಜಂಗಮನು ಅವನಿಗಿಂತಲೂ ಶ್ರೇಷ್ಠನೆಂಬುದೇ ವಚನಕಾರರೆಲ್ಲರ ನಿಲುವು. ವಚನಕಾರರಲ್ಲೆಲ್ಲ ಜಂಗಮಭಕ್ತಿಯನ್ನು ಮೈಮರೆದು ತೋರ್ಪಡಿಸಿಕೊಂಡವರೆಂದರೆ ಬಸವಣ್ಣನವರು. "ಗುರು ಮುನಿದಡೆ ಒಂದು ದಿನ ತಾಳುವೆ ಲಿಂಗ ಮುನಿದೆಡೆ ದಿನವರೆ ತಾಳುವೆ, ಜಂಗಮ ಮುನಿದಡೆ ಕ್ಷಣಮಾತ್ರ ತಾಳಿದೆನಾದಡೆ, ಎನ್ನ ಪ್ರಾಣದ ಹೋಕು ಕೂಡಲಸಂಗಮದೇವಾ" (ಸ.ವ.ಸಂ.೧, ವ.೮೨೪) ಎಂಬ ವಚನದಲ್ಲಿ ಜಂಗಮನಿಷ್ಠೆಯ ಪರಾಕಾಷ್ಠೆ ಎದ್ದು ಕಾಣುತ್ತದೆ. ಜಂಗಮಸೇವೆಯೇ ಭಕ್ತನ ಗಳಿಕೆಯ ಸಾರ್ಥಕ್ಯವೆಂಬುದು ಶರಣರ ಭಾವನೆ. ಜಂಗಮಕ್ಕೆ ತೃಪ್ತಿಯಾದರೆ ಲಿಂಗಕ್ಕೆ ತೃಪ್ತಿಯಾಗುತ್ತೆನ್ನುವುದು ಅವನ ಭಾವನೆ.ಆದ್ದರಿಂದಲೇ "ಮರಕ್ಕೆ ಬೇರು ಬಾಯಿಯೆಂದು ತಳಯಿಂಕೆ ನೀರನೆರೆದಡೆ ಮೇಲೆ ಪಲ್ಲವಿಸಿತ್ತು ನೋಡಾ. ಲಿಂಗದ ಬಾಯಿ ಜಂಗಮವೆಂದು ಪಡಿಪದಾರ್ಥವ ನೀಡಿದಡೆ ಮುಂದೆ ಸಕಳಾರ್ಥವನೀವನು. ಆ ಜಂಗಮವ ಹರನೆಂದು ಕಂಡು, ನರನೆಂದು ಭಾವಿಸಿದಡೆ ನರಕ ತಪ್ಪದು, ಕಾಣಾ ಕೂಡಲಸಂಗಮದೇವಾ" (ಅದೇ ವ.೪೨೧) ಎನ್ನುತ್ತಾನೆ. ಹಾಗಾದರೆ ಶ್ರೇಷ್ಠವಾದ ಜಂಗಮದ ಮೂಲ ಯಾವುದೆಂಬುದು ಅಸ್ಪಷ್ಟವಾಗಿಯೇ ಇದೆ. "ವೀರಶೈವ ಪೂರ್ವದ ಲಾಕುಳಶೈವ ಯತಿಗಳೇ ಮುಂದಿನ ಜಂಗಮರ ಪೂರ್ವಜರೆಂದು ಕಪಟರಾಳರು ಹೇಳುತ್ತಾರೆ" (ಕರ್ನಾಟಕ ಲಾಕುಳಶೈವರ ಇತಿಹಾಸ, ಪು.೧೩೦) ಆದರೆ ಈ

ಅಭಿಪ್ರಾಯವನ್ನು ಒಪ್ಪದೇ ವಚನಕಾರರು ಅನೇಕ ಕಡೆ ಶೈವ ಗುರುಗಳನ್ನು ಖಂಡಿಸುತ್ತಾರೆ. ಅಲ್ಲದೆ "ಜಂಗಮರು ವಚನಕಾರರಿಗಿಂತ ಹಿಂದೆ ಇರಲಿಲ್ಲವೆಂದೂ ವಚನಕಾಲದಲ್ಲಿಯೇ ಈ ಸಂಸ್ಥೆಯು ಉಗಮವಾಯಿತೆಂದು ಹೇಳಲವಕಾಶವಿರುವುದರಿಂದ ಕಪಟರಾಳರ ಅಭಿಪ್ರಾಯ ಸಾಧುವಲ್ಲೆಂದು" ಪಿ.ವಿ. ನಾರಾಯಣರವರು ಹೇಳುತ್ತಾರೆ. (೧೯೮೩, ಪು.೪೧೩) ಅದೇನೆ ಇದ್ದರೂ ಲಿಂಗ–ಜಂಗಮದಲ್ಲಿ ವ್ಯವಹಾರಿಕವಾಗಿ ಜಂಗಮವು ಹೆಚ್ಚು ಶ್ರೇಷ್ಠವೆಂಬುದು ವಚನಕಾರರೆಲ್ಲರ ಅಭಿಪ್ರಾಯವಾಗಿದೆ.

ಭೀಮಕವಿಯು ಬಸವಪುರಾಣದಲ್ಲೆಡೆಯಲ್ಲೆಲ್ಲ 'ಮಹಂತರು', (೮:೩೩, ೪೮, ೨೨:೧೧, ೪೬:೬೦) 'ಮಾಹೇಶ್ವರರು', (೨೧:೧,೩೬) 'ಪುರಾತನರು', (೯:೮, ೫೨:೨೮, ೨೧:೧, ೩೬) 'ಷೋಡಶರು', 'ತೇರಸರು', (೪೭:೧೮) 'ಯೋಗಾಚಾರ್ಯರು' (೨೩: ೪೮) ಈ ಪದಗಳನ್ನು ಹೆಚ್ಚು ಬಳಸಿದಂತೆ 'ಜಂಗಮ' ಪದವನ್ನು ಪ್ರತ್ಯೇಕವಾಗಿ ಬಳಸದೆ ವಿವಿಧ ಶರಣರು ಕಾಯಕ ಕೈಗೊಂಡು ಜಂಗಮಾರಾಧನೆ ಮಾಡಿದರೆಂದು ಹೇಳುತ್ತಾನೆ. ಇದೂ ಸಹ ಜಂಗಮವರ್ಗ ಪ್ರತ್ಯೇಕವಾಗಿದ್ದುದರ ಸೂಚನೆ ಕೊಡುವುದಿಲ್ಲ. ಎಷ್ಟೋ ಸಂದರ್ಭಗಳಲ್ಲಿ ಶಿವಶರಣರನ್ನೇ ಜಂಗಮವೆಂದು ಕರೆದಂತೆ ಪುರಾಣದಲ್ಲಿಯ ಅಂಶಗಳಿಂದ ತಿಳಿದು ಬರುತ್ತದೆ. ಹಾಗೆಯೇ 'ಶರಣರು', 'ಪ್ರಮಥರು', ಎಂಬ ಪದಕ್ಕೆ ಪರ್ಯಾಯವಾಗಿ 'ಮಹಂತರು' ಪದ ಬಳಕೆಯಾದದ್ದೂ ಕಂಡು ಬರುತ್ತದೆ. ಒಟ್ಟಿನಲ್ಲಿ ಬಸವಪುರಾಣದಲ್ಲಿ ನೇರವಾಗಿ ಜಂಗಮರು ಒಂದು ವರ್ಗವಾಗಿ ಕಾಣಿಸಿಕೊಂಡಿಲ್ಲ. ಬಸವಣ್ಣನವರ ಜಂಗಮಪ್ರಾಣಿತ್ವದ ಸಂದರ್ಭದಲ್ಲಿ ಜಂಗಮಸೇವೆಯ ಉಲ್ಲೇಖವನ್ನು ಮಾತ್ರ ಕವಿ ವಿವರಿಸುತ್ತಾನೆ.

ಬಸವಣ್ಣನವರ ಭಕ್ತಿ ಎಲ್ಲೆಡೆಗೂ ಪಸರಿಸಿದುದನ್ನು ತಿಳಿದು ಬಸವಣ್ಣನವರಿದ್ದೆಡೆಗೆ ಅಲ್ಲಮಪ್ರಭು ಬರುತ್ತಾನೆ. ಆತನು "ರತ್ನಪರೀಕ್ಷೆಯಂ ತಾನರಿದು ಕೈಕೊಂಬ ಹರದನಂದದಿ ಬರುವಾಗ ಈತನ ಬರುವಿಕೆ ಸಂಗಮೇಶನ ವರತನುವಿನೊಳು ಹೊಳೆದುದನ್ನು ಬಸವಣ್ಣನವರು ಕಂಡು ವಂದಿಸಿದನಂತೆ". (೭:೯) ಇಲ್ಲಿ ಅಲ್ಲಮ ಹಾಗೂ ಬಸವಣ್ಣನವರ ಅನುಭಾವದ ಸ್ಥಿತಿಯೂ ತಿಳಿಯುತ್ತದೆ. ಅಲ್ಲಮಪ್ರಭು ಬಂದು ರುಚಿರ ಮಾಣಿಕ್ಯ ಪ್ರಭಾಮಯ ನಿಚಿತಮಾಗಿರ್ದ ಅಚಲಕಾಂಚನರಹಿತ ಘನಸಿಂಹಾಸನವನೇರಿದನಂತೆ! ಬಸವಣ್ಣನವರು ಆತನ ಪಾದಪದ್ಮಗಳನ್ನು ಅರ್ಚಿಸಿ ಪಾದಾಂಬುವನ್ನು ಧರಿಸಿದನು. ಹೊನ್ನ ಹರಿವಾಣವನ್ನಿಟ್ಟು ಪಂಚಪಕ್ವಾನ್ನಗಳನ್ನು ಬಡಿಸಿದನು. ಒಂದು ಲಕ್ಷದ ಮೇಲೆ ತೊಂಭತ್ತಾರು ಸಾವಿರ ಜಂಗಮಕ್ಕೆ ಮಾಡಿದ ಆಹಾರವನ್ನು ಬಸವಣ್ಣನವರು ನೀಡಲು ಒಂದು ವಿಘಳಿಗೆಯಲ್ಲಿ ನುಂಗಿದನಂತೆ. ಬಸವಣ್ಣನವರು ಕೈಮುಗಿದು ನಿಂತು ತನ್ನೊಡಲನ್ನೇ ನೀಡುತ್ತಾರೆ. ಬಸವಣ್ಣವರ ಈ ಕ್ರಿಯೆಯೆಲ್ಲವೂ ಜಂಗಮದಾಸೋಹದಂತೆ ಕಂಡು ಬಂದರೂ ಜಂಗಮನಾಗಿ ಅದನ್ನು ಅನುಭವಿಸಿದವನು ಅಲ್ಲಮ ಪ್ರಭುದೇವ. ಅಲ್ಲದೇ ಈ ಸಂದರ್ಭದಲ್ಲಿ ಉಲ್ಲೇಖಗೊಂಡ ಜಂಗಮರ ಸಂಖ್ಯೆ

ಒಂದು ಲಕ್ಷತೊಂಭತ್ತಾರು ಸಾವಿರ ಎಂಬುದು ಬಹಳ ಗಮನಾರ್ಹವಾದ ಸಂಗತಿ. (೭:೧೬) ಅಂದರೆ ಕಲ್ಯಾಣದಲ್ಲಿ ಅಪಾರ ಸಂಖ್ಯೆಯ ಜಂಗಮರಿದ್ದದ್ದನ್ನು ಇದರಿಂದ ತಿಳಿಯಬಹುದು. ಪ್ರತಿದಿನ ಅವರಿಗೆ ದಾಸೋಹ ಕ್ರಿಯೆಯನ್ನು ಬಸವಣ್ಣನವರು ನೆರವೇರಿಸುತ್ತಿದ್ದರೆಂಬುದೂ ಇದರಿಂದ ತಿಳಿಯುತ್ತದೆ.

ಈ ಜಂಗಮಸಂಖ್ಯೆ ಕೇವಲ ಪುರಾಣ ಕಾವ್ಯಗಳಲ್ಲಿ ಮಾತ್ರ ದೊರೆಯುತ್ತಿದ್ದು ಇದಕ್ಕೆ ಐತಿಹಾಸಿಕ ಆಧಾರಗಳಿಲ್ಲ. ಈ ಕುರಿತು ಚರ್ಚಿಸುತ್ತ "ಅಂದಿನ ಜನಸಂಖ್ಯೆಯ ಆಧಾರಗಳಿಂದ ಇಷ್ಟೊಂದು ಸಂಖ್ಯೆಯ ಜಂಗಮರು ಕಲ್ಯಾಣದಲ್ಲಿ ಇರಲು ಸಾಧ್ಯವೇ ಇಲ್ಲ. ಇಂಥ ಕಥೆಗಳನ್ನು ಭಕ್ತರಿಂದ ಭೋಜನವನ್ನು ಅಪೇಕ್ಷಿಸುತ್ತಿದ್ದ ಜಂಗಮರು ಮತ್ತು ಮಠಾಧಿಕಾರಿಗಳು ಹಿಂದುಗಡೆ ಹುಟ್ಟಿಸಿರಬಹುದೆಂದು" ಫ.ಗು ಹಳಕಟ್ಟಿಯವರು ಅಭಿಪ್ರಾಯ ಪಡುತ್ತಾರೆ. (ಹಳಕಟ್ಟಿ ಸಮಗ್ರ ಸಾಹಿತ್ಯ ಸಂಪುಟ-೧೧, ಪು.೧೨೭-೧೨೯)

ಲಿಂಗವು ವ್ಯಕ್ತಿಗತವಾದರೆ ಜಂಗಮವು ಸಮಷ್ಟಿಗತ. ಲಿಂಗಾರಾಧನೆಗಿಂತಲೂ ಜಂಗಮರಾಧನೆ ಈ ದೃಷ್ಟಿಯಿಂದ ಶ್ರೇಷ್ಠವಾದುದು. ಬಸವಣ್ಣನವರು ತನ್ನನ್ನು 'ಜಂಗಮಪ್ರಾಣಿ'ಎಂದು ಸಾರಿಕೊಂಡು ತನ್ನ ಪ್ರಾಣವನ್ನು ಜಂಗಮಕ್ಕೆ ಮೀಸಲಿರಿಸಿದ ಮೂರು ಸಂದರ್ಭಗಳನ್ನು ಭೀಮಕವಿ ವಿವರಿಸುತ್ತಾನೆ. ಬಸವಣ್ಣನವರು ಶಿವಯೋಗನಿದ್ರೆಯಲ್ಲಿ ಅವಿರತವಾಗಿ ಸಿಕ್ಕಿರುವನೆಂಬುದನ್ನು ದ್ವಾರಪಾಲಕರಿಂದ ತಿಳಿದ ಜಂಗಮನೋರ್ವನು ಹಿಂತಿರುಗಿ ಹೋಗುವನು. ಕೂಡಲೇ ಬಸವಣ್ಣನವರು ಪ್ರಾಣವೂ ಅವನೊಡನೆ ಹೋಯಿತು. ವಿಚಾರ ಮಾಡಿದ ಶಿವಭಕ್ತರು ಬಸವಣ್ಣನವರ ಜಂಗಮಪ್ರಾಣಿತ್ವ ಗುಣವೇ ಕಾರಣವಾಗಿ ಅವರ ಪ್ರಾಣ ಹೋಯಿತು ಎಂದು ಮರಳಿ ಹೋದ ಜಂಗಮನನ್ನು ಹುಡುಕಿ ಕರೆತರಲು ಅವನೊಡನೆ ಬಸವಣ್ಣನವರ ಪ್ರಾಣವೂ ಮರಳಿತು. (ಸಂ.೩೪) ವಚನಕಾರರೆಲ್ಲ ಮೈಗೂಡಿಸಿಕೊಂಡ ಈ ಭಾವನೆ ಭೀಮಕವಿಯ ಕಾಲಕ್ಕೆ ಹೆಚ್ಚು ಸ್ಫುಟಗೊಂಡಿತ್ತೆಂದು ಕಾಣುತ್ತದೆ. ಆದ್ದರಿಂದಲೇ ಕಿನ್ನರಯ್ಯಗಳ ಪ್ರಸಂಗ ಹಾಗೂ ಮೇದರ ಕೇತಿದೇವಯ್ಯಗಳ ಪ್ರಸಂಗಗಳಲ್ಲಿಯೂ ಜಂಗಮರ ಹಿಂದೆಯೇ ಬಸವಣ್ಣನವರ ಪ್ರಾಣವು ಹೋಗುವ, ಅವರು ಮರಳಿದಾಗ ಮತ್ತೆ ಸಜೀವವಾಗುವ ಪವಾಡ ಹೆಣೆಯಲಾಗಿದೆ. (೩೫:೩೬) ಲಿಂಗಭಕ್ತಿಗಿಂತಲೂ ಜಂಗಮಭಕ್ತಿಯೇ ಮಿಗಿಲು ಎಂಬುದಕ್ಕೆ ಈ ಸಂದರ್ಭಗಳು ಸಾಕ್ಷಿಯಾಗಿವೆ. ಬಹುಶಃ ಜಂಗಮರಿಗಿರುವ ಈ ಶ್ರೇಷ್ಠತೆಯನ್ನು ಮನಗಂಡೋ ಏನೋ ಕಳ್ಳರು ಬದನೆಕಾಯಿಯನ್ನು ಸಜ್ಜೆಯಲ್ಲಿ ಧರಿಸಿ ಕನ್ನವಿಕ್ಕಲು ಹೋಗಿ ಸಿಕ್ಕಿಬೀಳುವ ಪ್ರಸಂಗವೂ ಬಸವಪುರಾಣದಲ್ಲಿ ವರ್ಣಿತವಾಗಿದೆ.

ದುಕೂಲದ ಪವಾಡವಾಗಲಿ, ಒಬ್ಬ ಅಯ್ಯನು ಬಸವಣ್ಣನವರ ಮಡದಿ ಮಾಯಿದೇವಿಯ ಮುತ್ತಿನೋಲೆಯನ್ನು ಬಯಸಿದಾಗ ತಕ್ಷಣವೇ ತೆಗೆದುಕೊಡುವ ಪ್ರಸಂಗಗಳಾಗಲಿ ಇವು ಬಸವಣ್ಣನವರ ಜಂಗಮಭಕ್ತಿಗೆ ನಿದರ್ಶನಗಳಾಗಿವೆ. (೯:೩೩, ೪೩) ಇಲ್ಲಿ ಬರುವ 'ಅಯ್ಯ' ಜಂಗಮನೊ ಹೇಗೊ ಗೊತ್ತಾಗುವುದಿಲ್ಲ. ಇದಕ್ಕೆ ಸಂವಾದಿಯಾಗಿ ಹರಿಹರನ ರಗಳೆಯಲ್ಲಿ ಬಂದ ಪ್ರಸಂಗವಂತೂ

ಬಸವಣ್ಣನವರ ಜಂಗಮಭಕ್ತಿಗೆ ಶ್ರೇಷ್ಠ ನಿದರ್ಶನವಾಗಿದೆ. ಜಂಗಮನೊಬ್ಬನು ಬಸವಣ್ಣನವರ ಪರೀಕ್ಷೆಗೆಂದು ಬಂದು ಭೋಜನಾನಂತರ 'ಹೆಂಗೂಸಿಲ್ಲದೆ ಮಲಗಿರ್ದುದಿಲ್ಲ'ಎಂದು ಕೇಳುತ್ತಾನೆ. ಊರಲ್ಲಿ ಪುಣ್ಯಾಂಗನೆ ಸಿಗದೆ ಹೋದಾಗ ಬಸವಣ್ಣನವರು ತನ್ನ ಪತ್ನಿಯನ್ನೇ ಜಂಗಮನಿಗರ್ಪಿಸುತ್ತಾನೆ. ಅರ್ಪಿತಳಾಗಬೇಕಿದ್ದ ಬಸವಣ್ಣನವರ ಪತ್ನಿಯ ಮುಂದೆ ಜಂಗಮನ ಕೃತಕ ರೂಪ ಹೋಗಿ ಶಿವರೂಪ ಮೈದಾಳುತ್ತದೆ. ಮುಂದೆ ಜಂಗಮಾರ್ಪಿತ ಪತ್ನಿಯನ್ನು ಹರನ ಅರ್ಧಾಂಗಿಯೆಂದು ಭಾವಿಸಿ ಬಸವಣ್ಣನವರೆ ಅವಳನ್ನು ಪೂಜಿಸುತ್ತಿದ್ದನೆಂದು ಕವಿ ಹೇಳುತ್ತಾನೆ. (೯೧–೯೨) ಕುಲವಧುವನ್ನೇ ಅರ್ಪಿಸುವ ಮೂಲಕ ಜಂಗಮಭಕ್ತಿಯ ಪರಾಕಾಷ್ಠೆಯೇ ಇಲ್ಲಿ ಮೈವೆತ್ತಿದ್ದನ್ನು ಕಾಣಬಹುದು.

ಒಮ್ಮೆ ಬಸವಣ್ಣನವರು ತೈಲಾಭ್ಯಂಜನ ಮಾಡುತ್ತಿದ್ದಾಗ ಒಬ್ಬ ಜಂಗಮ ಬಂದು ತನ್ನ ವ್ರತ ಪೂರ್ಣಗೊಳಿಸಲು ಹತ್ತು ಖಂಡುಗ ಮುತ್ತು ಕೇಳಿದಾಗ ಬಸವಣ್ಣನವರು ಅಲ್ಲಿದ್ದ ಜೋಳದ ರಾಶಿಯನ್ನು ನೋಡಿ 'ಅದೊ, ಹತ್ತು ಖಂಡುಗವೇ ಏಕೆ,ನಿಮಗೆ ಬೇಕಾದಷ್ಟು ಒಯ್ಯಿರಿ' ಎಂದು ಹೇಳಿದ ಪವಾಡವು ಜಂಗಮಪ್ರೇಮದಿಂದಲೇ ವ್ಯಕ್ತವಾಗಿರುವಂತದ್ದು. (೮:೨೧) ಅತಿಯಾದ ಜಂಗಮಭಕ್ತಿಗೆ ಒಳಗಾದ ಬಸವಣ್ಣನವರು ಒಮ್ಮೆ 'ಬೇಳ್ಪವರಿಲ್ಲದೆ ಬಡವಾದೆ' ಎಂಬ ಗೀತವನ್ನು ಹಾಡುತ್ತಾನೆ. ಇದನ್ನು ಕೇಳಿದ ಮಡಿವಾಳ ಮಾಚಯ್ಯನವರು ಬಸವಣ್ಣನವರ ಈ ಅಹಂಕಾರವನ್ನು ಕಡಿಮೆ ಮಾಡಿ ಸನ್ಮಾರ್ಗದಲ್ಲಿ ಮುನ್ನಡೆಸುವ, ಅವನ ಮನದ ಮಲಿನವನ್ನು ಕಳೆಯುವ ಸಂದರ್ಭ ಬಸವಪುರಾಣದಲ್ಲಿ ಉಕ್ತವಾಗಿದೆ. (ಸಂ.೨೧) ಇದರಿಂದ ಜಂಗಮ ಭಕ್ತಿಯಲ್ಲಿ ಅಹಂಕಾರ ಕೂಡದು. ಹಾಗೆ ಮಾಡಿದ್ದಾದರೆ ಅಂತಹ ಭಕ್ತಿ ವ್ಯರ್ಥ ಎಂಬ ಭಾವ ಮನೆ ಮಾಡಿದೆ. 'ಸಕಲೇಶ ಮಾದರಸ' 'ಮಡಿವಾಳ ಮಾಚಯ್ಯ', 'ಶಂಕರ ದಾಸಿಮಯ್ಯ', 'ಕಿನ್ನರ ಬೊಮ್ಮಯ್ಯ', 'ಮೋಳಿಗೆ ಮಾರಯ್ಯ' 'ಮುಸುಟೆ ಚೌಡಯ್ಯ', 'ಸುರಗಿ ಚೌಡಯ್ಯ' ,'ಕಲಕೇತ ಬೊಮ್ಮಯ್ಯ' , 'ಮೇದಾರ ಕೇತಯ್ಯ', 'ದೇವರ ದಾಸಿಮಯ್ಯ', 'ಏಕಾಂತ ರಾಮಯ್ಯ', 'ಸೊಡ್ಡಳ ಬಾಚರಸ ', 'ಶಿವನಾಗಮಯ್ಯ', ಮುಂತಾದ ಶಿವಶರಣರು ಸತ್ಯ ಶುದ್ಧ ಕಾಯಕ ಕೈಗೊಂಡು ಜಂಗಮಾರಾಧನೆಯನ್ನು ಮಾಡಿದ ಉದಾಹರಣೆಗಳು ಬಸವಪುರಾಣದಲ್ಲಿ ಉಕ್ತವಾಗಿವೆ.

ಹೀಗೆ ಕವಿಯು ಜಂಗಮಭಕ್ತಿಯ ಮೂಲಕ ಶಿವಶರಣರ ನೈತಿಕ, ವೈಚಾರಿಕ ಜೀವನದ ತಿರುಳುಗಳನ್ನು ಕಟ್ಟಿ ಕೊಡುತ್ತಾನೆ. ಮುಖ್ಯವಾಗಿ ಶರಣರು ಪರಿಪಾಲಿಸಿಕೊಂಡು ಬಂದ ಆದರ್ಶಗಳನೇಕವಲ್ಲಿ 'ಸಂಗ್ರಹವಿರೋಧಿ ಗುಣ' ಈ ಪ್ರಸಂಗಗಳೆಡೆಯಲ್ಲೆಲ್ಲ ಸುವ್ಯಕ್ತಗೊಂಡಿದ್ದು ಅಂದಿನ ಸಮಾಜದ ಮೇಲೆ ಶರಣರ ಈ ಗುಣ ನಡತೆಗಳು ತೀವ್ರ ರೀತಿಯ ಪ್ರಭಾವ ಬೀರಿದ್ದವೆಂದು ಹೇಳಬಹುದು.

ಈ. ಪಾದೋದಕ :

ಗುರುಲಿಂಗಜಂಗಮಗಳು ತನ್ನಲ್ಲಿ ಒಳಗೊಳ್ಳುವ ರೀತಿಯನ್ನು ಅರುಹಿಕೊಡುವ ಕ್ರಿಯೆಯು ಇದಾಗಿದೆ. ಇದು ಸಂಪೂರ್ಣ ಭಾವನಾಮಯವಾದ ವಿಧಿಯು. ಇಂಥ ಈ ಪಾದೋದಕವು ಕೇವಲ ನೀರು ಅಲ್ಲ. ಅದು ಚಿತ್ ಸ್ವರೂಪವಾಗಿರುತ್ತದೆಂದು ತಿಳಿಯಬೇಕು. ಇದಕ್ಕೆ ಗುರುಲಿಂಗ ಜಂಗಮಗಳೆಲ್ಲವೂ ಬೇಕು. ಒಂದು ವೇಳೆ ಅವು ಪ್ರತ್ಯಕ್ಷ ದೊರೆಯದಿದ್ದರೆ ಭಕ್ತನೂ ಅವನಂತೆ ಜಂಗಮನೂ ಕೂಡ ಅವುಗಳನ್ನು ಸೂಕ್ಷ್ಮ ರೀತಿಯಿಂದ ತಮ್ಮ ಆಚರಣೆಯಲ್ಲಿಟ್ಟುಕೊಂಡು ಪಾದೋದಕ ಪ್ರಸಾದ ಸೇವನೆಯನ್ನು ಪಡೆಯುವ ಏರ್ಪಾಡನ್ನು ವಚನಕಾರರು ಮಾಡಿದ್ದಾರೆ. "ಹೀಗೆ ವೀರಶೈವರಲ್ಲಿ ಪಾದಪೂಜೆ ಎಂದರೆ ಪಾದವ ತೊಳೆದ ನೀರು ಎಂಬ ಅರ್ಥವಿಲ್ಲ. ಅದು ಗುರುಲಿಂಗ ಜಂಗಮವನ್ನು ತನುಮನ ಭಾವಗಳಲ್ಲಿ ಪ್ರಕಟಿಸಿಕೊಂಡು ಸಾಮರಸ್ಯ ಸ್ಥಿತಿಯನ್ನು ಹೊಂದುವ ರೀತಿಯನ್ನು ತಿಳಿಸುವ ಒಂದು ಬಗೆಯ ವಿಧಾನವಾಗಿದೆ". (ನಾರಾಯಣ ಪಿ.ವಿ ೧೯೮೩, ಪು.೪೨೨) ಮೇಲಿನ ಸಾಲುಗಳು ವೀರಶೈವ ಧರ್ಮದಲ್ಲಿ ಅಷ್ಟಾವರಣದಲ್ಲೊಂದಾದ 'ಪಾದೋದಕ'ದ ಸಮಗ್ರ ಪರಿಚಯವನ್ನು ಮಾಡಿಕೊಡುತ್ತವೆ. ವಚನಕಾರರು ಗುರು-ಕ್ರಿಯಾ-ಜ್ಞಾನ ಪಾದೋದಕಗಳನ್ನು ಹೆಸರಿಸುತ್ತಾರೆ. ಚೆನ್ನಬಸವಣ್ಣ ಪಾದೋದಕ, ಪ್ರಸಾದೋದಕಗಳನ್ನು ಹೆಸರಿಸುವುದರ ಜೊತೆಗೆ ದಶವಿಧ ಪಾದೋದಕಗಳನ್ನು ಹೆಸರಿಸುತ್ತಾನೆ. (ಅದೇ ಪು.೪೨೩-೪೨೫)

ಬಸವಪುರಾಣದಲ್ಲಿ ತ್ರಿವಿಧೋದಕದ ಉಲ್ಲೇಖ ಬರುತ್ತದೆ. (೧೭: ೪೯, ೪೬:೧೭) ಇವು ಗುರುಪಾದೋದಕ, ಲಿಂಗಪಾದೋದಕ, ಜಂಗಮಪಾದೋದಕವೇ ಆಗಿವೆ. ಆದರೆ ಈ ಕುರಿತು ವಿವರಣೆ ಕಂಡು ಬರುವುದಿಲ್ಲ. "ಸತ್ಕ್ರಿಯಾದಿಗಳಿಂ ಪ್ರಿಯಂಬಡಿಸಿ ಮನವೊಲಿದು ಕೈಯೊಡ್ಡಿ ಆ ಅಯ್ಯನ ಪಾದೋದಕಮಂ" ಎಂಬ ಮಾತುಗಳಿಂದ ಬಸವಣ್ಣನವರು ಕಿನ್ನರ ಬೊಮ್ಮಯ್ಯಗಳ ಜಂಗಮ ಪಾದೋದಕವನ್ನು ಕೊಂಡು ಸಂತೋಷದಿಂದಿದ್ದರು ಎಂಬ ವಿವರವನ್ನು ಕವಿ ಹೇಳುತ್ತಾನೆ. ಅಲ್ಲದೇ ನಿಂಬಿ ಎಂಬ ಶಿವಭಕ್ತೆ ಭಕ್ತ ಸಿರಿಯಾಳ ಹಾಗೂ ಶಿವನ ಪಾದೋದಕ ಕೊಂಡುದರ ಉಲ್ಲೇಖ ದೊರೆಯುತ್ತದೆ. (೨೭:೮, ೨೩: ೫೩) ಈ ಸಂದರ್ಭಗಳು ಶಿವಶರಣದಲ್ಲಿ ಪಾದೋದಕ ಪದ್ಧತಿ ಪ್ರಚಲಿತವಿತ್ತೆಂದು ಹೇಳುತ್ತವೆ.

ಮೋಳಿಗೆ ಮಾರಯ್ಯನವರು ಕಟ್ಟಿಗೆಯ ಹೊರೆಯ ಮೇಲೆ ಪಾದೋದಕ ಸಿಂಪಡಿಸಿ ಕಟ್ಟಿಗೆಯ ಹೊರೆ ಕನಕಮಯವಾದ ಸಂದರ್ಭದಲ್ಲಿ ಅದನ್ನೆ ಕಡಿದು ಜಂಗಮನಿಗೆ ಕೊಡುವ ಪವಾಡದ ಉಲ್ಲೇಖ ಬರುತ್ತದೆ. (೨೯: ೨೦-೨೧) ಪಾದೋದಕಕ್ಕೆ ಅಂತಹ ದಿವ್ಯಶಕ್ತಿ ಹಾಗೂ ಮಹತ್ವವನ್ನು ತಿಳಿಸಿ ಕೊಡುವುದು ಕವಿಯ ಉದ್ದೇಶವಾಗಿದ್ದರೂ ಸಹ ಧಾರ್ಮಿಕ ನೆಲೆಯಲ್ಲಿ ಅದಕ್ಕೊಂದು ಶ್ರೇಷ್ಠ ಸ್ಥಾನಮಾನಗಳಂತೂ ಇದ್ದೇ ಇದೆ.

ಶವಸಂಸ್ಕಾರದ ಸಂದರ್ಭದಲ್ಲಿ ಅತ್ಯಂತ ಮುಖ್ಯ ವಸ್ತುವಾಗಿ ಪಾದೋದಕ ಬಳಕೆಯಾದ ಉಲ್ಲೇಖ ಬಸವ ಪುರಾಣದಲ್ಲಿದೆ. ವೇಮನಾರಾಧ್ಯರೆಂಬ ಶಿವಶರಣರು ತೀರಿಹೋದ ಅರಸುಕುವರನನ್ನು ಪಾದೋದಕದಿಂದ ತೊಳೆದ ಸಂದರ್ಭ ಹಾಗೂ ಚಿಕ್ಕಮಾದಣ್ಣನೆಂಬ ಭಕ್ತನ ಹೆಂಡತಿ ಗಂಡ ತೀರಿಕೊಂಡಾಗ ಪಾದೋದಕದಿಂದಲೇ ಶವ ತೊಳೆದ ಉಲ್ಲೇಖವನ್ನು ಕವಿ ಹೇಳುತ್ತಾನೆ. (೪೫: ೬೦, ೪೬:೭) ಬಹುಶಃ ಸಂಸ್ಕಾರಾದಿಗಳ ಸಂದರ್ಭದಲ್ಲಿ ಪಾದೋದಕವು ಅತ್ಯಂತ ಪವಿತ್ರ ವಸ್ತುವಾಗಿ ಬಳಸಲ್ಪಡುತ್ತಿತ್ತು ಎಂಬುದು ಇದರಿಂದ ಗೊತ್ತಾಗುತ್ತದೆ. ಇಂದಿಗೂ ಸಹ ಪಾದೋದಕವನ್ನು ಭಕ್ತಭವಿಗಳಾದಿಯಾಗಿ ಅತ್ಯಂತ ಪೂಜ್ಯ ಭಾವನೆಯಿಂದ ಸೇವಿಸುವುದು ಅದರ ಮಹತ್ವವನ್ನು ಸಾರಿ ಹೇಳುತ್ತದೆ.

ಉ. ಪ್ರಸಾದ :

ಗುರುಲಿಂಗಜಂಗಮದಷ್ಟೆ ಮಹತ್ವದ ಸ್ಥಾನವನ್ನು ಶರಣರು ಪ್ರಸಾದಕ್ಕೆ ಕೊಟ್ಟಿದ್ದಾರೆ. ತಾನುಣ್ಣುವ ಪದಾರ್ಥವನ್ನು ಗುರುಲಿಂಗಜಂಮಗಮಾರ್ಪಿತಮಾಡಿ ನಂತರ ಸೇವಿಸಬೇಕು. ಈ ಹಿನ್ನೆಲೆಯಲ್ಲಿ "ನಂಬಿದಡೆ ಪ್ರಸಾದ; ನಂಬದಿದ್ದಡೆ ವಿಷವು; ತುಡುಕಬಾರದು ನೋಡಾ, ಲಿಂಗದ ಪ್ರಸಾದ, ಕೂಡಲಸಂಗನ ಪ್ರಸಾದ ಸಿಂಗಿ, ಕಾಳಕೂಟ ವಿಷವು" (ಸ.ವ.ಸಂ.೧, ವ.೭೭೩) ಎನ್ನುವ ವಚನದಲ್ಲಿ ಬಸವಣ್ಣನವರು ಪ್ರಸಾದ ಮಹಿಮೆಯನ್ನು ಸೊಗಸಾಗಿ ವಿವರಿಸಿದ್ದಾರೆ.

ಪ್ರಸಾದ ಆವರಣದ ದೊಡ್ಡ ಕೊಡುಗೆ 'ದಾಸೋಹ' ಕಲ್ಪನೆ. ಕೂಡಿ ದುಡಿಯುವ, ಕೂಡಿ ಉಣ್ಣುವ, ಮಿಕ್ಕುದನ್ನು ಸಮೂಹಕ್ಕೆ ಇಲ್ಲವೆ ರಾಜಬೊಕ್ಕಸಕ್ಕೆ ನೀಡುವ ವಿಶಿಷ್ಟ ಆರ್ಥಿಕ ಚಟುವಟಿಕೆ ಈ ದಾಸೋಹ ಹಿನ್ನೆಲೆಯಲ್ಲಿದೆ. (ಪಾಟೀಲ ಸದಾನಂದ, ೧೯೯೯, ಪು.೧೫೨) ಬಸವ ಪುರಾಣದಲ್ಲಿ ಬರುವ ಶರಣರು ಒಂದಲ್ಲ ಒಂದು ಕಾಯಕ ಮಾಡಿಯೇ ರಾಜ್ಯಾದಾಯವನ್ನು ಹೆಚ್ಚಿಸುವ ಹಾಗೂ ಕೆಲವರ್ಗ ಮಾತ್ರ ಈ ಸಂಪತ್ತನ್ನು ಅನುಭೋಗಿಸುವ ವಿವರಗಳು ಕಂಡುಬರುತ್ತವೆ. ಈ ಹಿನ್ನಲೆಯಲ್ಲಿ ಸಂಪತ್ತು ಕಾಕಭಾಜವಾಗಿ ಹೋಗಬಾರದು; ನಿಜವಾದ ಶ್ರಮಿಕರಿಗೆ ಅದು ವಿನಿಯೋಗವಾಗಬೇಕು ಎಂಬುದನ್ನು ಶಿವಶರಣರು ಪ್ರತಿಪಾದಿಸುತ್ತ ಬಂದಿದ್ದಾರೆ. ಹೀಗಾಗಿ ಕಾಯಕ ಮಹತ್ವ ತಿಳಿದವರೆ ಪ್ರಸಾದ ಭುಂಜಿಸಲು ಯೋಗ್ಯರು ಎಂಬುದನ್ನು ತಿಳಿಸುವಂತೆ ಪ್ರಸಾದ ವಿತರಣೆಯನ್ನು ತನ್ನ ಜೀವನೋದ್ದೇಶ ಮಾಡಿಕೊಂಡನೆಂಬಂತೆ ಅವನ ಜನನದ ಸದುದ್ದೇಶವನ್ನು ಕವಿ ಹೇಳುತ್ತಾನೆ. "ಮುಂದೆಯಿದು ಲಿಂಗಸ್ಥಳ ತಾನೆಂದಿದುವೆ ವರ ಜಂಗಮಸ್ಥಳವೆಂದು ತದ್ವಿಮಳಪ್ರಸಾದಸ್ಥಳಮಿದೆಂದಱುಪಿ" (೧:೫೯) ಎಂಬ ಕವಿಯ ಮಾತುಗಳಲ್ಲಿ ಇದನ್ನು ಕಂಡುಕೊಳ್ಳಬಹುದು. ಇದಕ್ಕನುಗುಣವಾಗಿ ಬಸವಪುರಾಣದಲ್ಲಿ ಬರುವ ಎಲ್ಲ ಶಿವಶರಣರು ಪ್ರಸಾದ ರೂಪದಲ್ಲಿ 'ದಾಸೋಹ' ದ ಮೂಲಕ ಸಮಾಜಕ್ಕೆ ವಿನಿಯೋಗಿಸುವುದನ್ನು ಕಾಣಬಹುದು.

ಪ್ರಸಾದಗಳಲ್ಲಿ ತ್ರಿವಿಧಪ್ರಸಾದ ಹಾಗೂ ಏಕಾದಶಪ್ರಸಾದದ ಉಲ್ಲೇಖವನ್ನು ವಚನಕಾರರು ಕೊಡುತ್ತಾರೆ. ಬಸವಪುರಾಣದಲ್ಲಿ ತ್ರಿವಿಧ ಪ್ರಸಾದದ ಉಲ್ಲೇಖ ಬರುತ್ತದೆ. (೪:೬೬, ೯:೪೫)

ಶುದ್ಧ, ಸಿದ್ಧ ಮತ್ತು ಪ್ರಸಿದ್ಧ ಎಂಬ ಪ್ರಸಾದಗಳನ್ನು ತ್ರಿವಿಧ ಪ್ರಸಾದ ಎಂದು ಕರೆಯಲಾಗಿದೆ. ಇದರಲ್ಲಿ ವಿಶೇಷವಾಗಿ ಸಿದ್ಧ ಪ್ರಸಾದದ ನೇಮವನ್ನು ಕೈಗೊಂಡ ಬಿಬ್ಬಿ ಬಾಚಯ್ಯನೆಂಬ ಶಿವಶರಣನ ವಿವರ ಕೊಡುತ್ತಾನೆ. ಬಂಡಿಯಲ್ಲಿ ಪ್ರಸಾದವನ್ನು ಹೇರಿಕೊಂಡು ವಾದ್ಯವೈಭವದೊಡನೆ ಊರನ್ನು ಪ್ರವೇಶಿಸುತ್ತಿದ್ದ ಸಂದರ್ಭದಲ್ಲಿ ವಿಪ್ರರು ತಡೆಯುತ್ತಾರೆ. ಬಿಬ್ಬಿ ಬಾಚಯ್ಯನವರು ಹೇಳಿದರೂ ಕೇಳದೆ ಪ್ರಸಾದ ಬಂಡಿಯ ಮೇಲೆ ದಾಳಿಯಿಟ್ಟಾಗ ಪ್ರಸಾದವು ಕಾಳ್ಗಿಚ್ಚಿನಂತೆ ಅಪಾಯಕಾರಿಯಾಗಿ ಹರಡಿತೆಂದೂ ವಿಪ್ರರು ಈ ಕಲ್ಪಾಂತವಿಲಯಾಗ್ನಿಯನ್ನು ಸಹಿಸದೆ ಓಡಿ ಹೋದರೆಂದು ಕವಿ ಹೇಳುತ್ತಾನೆ. "ಕೆಂಬೊಗೆಯೊ, ಮಿಂಚೋ, ಗಗನಮಣಿಯೋ, ಕೆಂಡವೋ, ಉರಿಯೋ" (೫೫:೩೧) ಎಂದು ಪ್ರಸಾದದ ತೀವ್ರತೆಯನ್ನು ಕವಿ ಹೇಳುತ್ತಾನೆ. ಅನೇಕ ವಿಪ್ರರನ್ನು, ಅವರ ಮನೆಗಳನ್ನು ಆಹುತಿ ತೆಗೆದುಕೊಳ್ಳುತ್ತಿರುವ ಪ್ರಸಾದದ ಕೆನ್ನಾಲಗೆಗಳು ಅವರ ಶರಣಾಗತಿಯೊಂದಿಗೆ ಶಾಂತವಾಗುತ್ತದೆ. ಕವಿ ಪ್ರಸಾದ ಮಹಿಮೆಯನ್ನು ಮಾಧ್ಯಮವನ್ನಾಗಿ ಮಾಡಿಕೊಂಡು ಭವಿ ಭಕ್ತರ ಮಧ್ಯ ನಡೆದ ಸಂಘರ್ಷವನ್ನೇ ಈ ರೂಪದಲ್ಲಿ ಬಳಸಿಕೊಂಡಿದ್ದಾನೆ ಎಂದು ಭಾವಿಸಬಹುದು.

ಅನೇಕಾನೇಕ ಶೈವದೀಕ್ಷಾಚಾರ್ಯರೂ ಅವರ ಮಹಿಮೆಗೆ ಓತು ಬಂದು ದೀಕ್ಷೆ ಹೊಂದಿದ ಅಖಿಲ ಜನರೂ ಕಲ್ಯಾಣದಲ್ಲಿ ಪ್ರಸಾದಭೋಗಿಗಳಾಗುತ್ತಿರಲು ಕಬ್ಬಿಲರು ಅರಸನಲ್ಲಿಗೆ ಬಂದು ಪ್ರಸಾದವನ್ನು ಭಕ್ತರೆ ಸೇವಿಸುತ್ತಿರುವರು. ನಮಗೆ ಒಂದಿಷ್ಟೂ ಕೊಡಲೊಲ್ಲರು ಎಂದು ದೂರುತ್ತಾರೆ. ಬಸವ ಹಾಗೂ ಕಬ್ಬಿಲರ ಮಧ್ಯ ವಾಗ್ವಾದ ನಡೆದು ಕಟ್ಟುಗ್ರವಾದ ನಾನಾ ವಿಷಪದಾರ್ಥಗಳನ್ನು ಭಕ್ತಿಯಿಂದ ಶಿವನಿಗರ್ಪಿಸಿ ಶಿವಶರಣರು ಸೇವಿಸತೊಡಗಿದರು. "ಒಬ್ಬರೊಬ್ಬರ ಭಾಜನಂಗಳನೊಬ್ಬರೊಬ್ಬರು ತೆಗೆದುಕೊಳುತೊಬ್ಬೊಬ್ಬರೀಸಿಕೊಳುತ್ತ ಕೈ ನೀಡಿ ಪ್ರಸಾದವನು ಒಬ್ಬರೊಬ್ಬರಕೂಡೆ ಕುಳ್ಳಿರ್ದೊಬ್ಬರೊಬ್ಬರೂ ಸೇವಿಸುತ ತಂದೊಬ್ಬರೊಬ್ಬರಿಗೀಯಲೊಬ್ಬೊಬ್ಬರು ಕಳೆದುಕೊಳುತಂ". (೫೮:೨೩) ಹೀಗೆ ಅತ್ಯಂತ ಸಂಭ್ರಮದಿಂದ, ಉತ್ಸಾಹದಿಂದ ಪ್ರಸಾದ ಸೇವಿಸುವ ವರ್ಣನೆಯನ್ನು ಕವಿ ಕೊಡುತ್ತಾನೆ. ಬಿಜ್ಜಳನ ಪರಿವಾರ , ಆನೆ, ಕುದುರೆ ಮುಂತಾದವುಗಳು ಪ್ರಸಾದ ಸೇವಿಸಿದ ಬಗ್ಗೆ ಹೇಳುವ ಕವಿ ಸೃಷ್ಟಿಯ ಚರಾಚರ ಜೀವಿಗಳಿಗೆ ಪ್ರಸಾದವೇ ಅಮೃತ ಎಂಬ ಭಾವನೆಯುಂಟು ಮಾಡುತ್ತಾನೆ. ಅಲ್ಲದೇ ಭಕ್ತಿಯಿಂದ ಅರ್ಪಿಸಿದ ಯಾವುದೇ ಪದಾರ್ಥವಾಗಲಿ ಅದು ಅಮೃತಸಮಾನ ಗುಣಗಳನ್ನು ಪಡೆದುಕೊಳ್ಳುತ್ತದೆ ಎಂಬುದನ್ನು ಕವಿ ಈ ಸಂದರ್ಭದಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಪ್ರಸ್ತಾಪಿಸುತ್ತಾನೆ.

ಹರನು ಲೋಕಹಿತಾರ್ಥವಾಗಿ ವಿಷಕಂಠನೆನಿಸಿದಂತೆ ಬಸವಣ್ಣನವರು ಶಿವಭಕ್ತಿಯ ಮಹಿಮೆಯನ್ನು ತಿಳಿಸಲು ಇಲ್ಲಿ ವಿಷದ ಪ್ರಸಾದ ಭೋಗಿಸಿ ಕಬ್ಬಿಲರಿಗೆ ಶಿವಭಕ್ತಿಯ ಮಹಿಮೆ ತಿಳಿಸುತ್ತಾರೆ. ಈ ಘಟನೆಯೊಂದಿಗೆ ಬಸವಣ್ಣನವರು 'ದ್ವಿತೀಯ ಶಂಭು' ಎಂಬ ಕೀರ್ತಿಗೆ ಭಾಜನನಾಗುವದನ್ನು ಗಮನಿಸಬೇಕು. "ನೀನೊಲಿದರೆ ವಿಷವೇ ಅಮೃತವಹುದಯ್ಯಾ"

ಎನ್ನುವ ಬಸವಣ್ಣನವರ ವಚನಾನುಸಾರ ಈ ಸನ್ನಿವೇಶ ವಿವರಣೆಗೊಂಡಂತಿದೆ. "ಅಖಿಳ ಲೋಕಾಲೋಕ ನಿಕರದೊಳು ಅಖಿಳ ಜಗದೀಶ್ವರನ ಭಕ್ತರೆ ಅಖಿಳಪಾವನರು; ಅದ್ವಿತೀಯರು; ಉಮೇಶ್ವರನೆ ಕರ್ತ; ನಾವೇ ಪ್ರಸಾದಕ್ಕಳಯೋಗ್ಯರು" (೩:೨೬) ಎಂಬ ಮಾತುಗಳ ವಿಶೇಷವನ್ನು ಗಮನಿಸಬಹುದು. ಈ ಘೋಷಣೆಯೊಂದಿಗೆ ಅದನ್ನು ಬಹಿರಂಗವಾಗಿ ಈ ಘಟನೆಯ ಮೂಲಕ ಬಸವಣ್ಣನವರು ಸಿದ್ಧಪಡಿಸಿದ್ದಾರೆ. ಈ ಬಗೆಯಾಗಿ ಪ್ರಸಾದ ಕಲ್ಪನೆಯು ಬಸವಪುರಾಣದಲ್ಲಿ ಶಿವಶರಣ ಸಮುದಾಯವನ್ನು ಏಕೀಕೃತಗೊಳಿಸಿ ಅದರಡಿಯಲ್ಲಿ ಪ್ರತಿಯೊಬ್ಬರೂ ನೆಮ್ಮದಿಯಿಂದ ಬದುಕಿದ ವಿವರಗಳು ವರ್ಣಿತವಾಗಿವೆ.

ಊ. ವಿಭೂತಿ :

ಕೋವೂರ ಬೊಮ್ಮಯ್ಯನೆಂಬ ಶಿವಶರಣನು ಜೈನರೆಲ್ಲರನ್ನು ವಾದದಲ್ಲಿ ಗೆದ್ದಾಗ ಜನಾಶ್ರಯವಾದ ಮರವನ್ನು ಮಂತ್ರದಿಂದ ಸುಟ್ಟು ಇದನ್ನು ಚಿಗುರಿಸು ಎಂದು ಆಹ್ವಾನಿವೀರುತ್ತಾನೆ. ಆಗ ಕೋವೂರ ಬೊಮ್ಮಯ್ಯನು ಮರದ ಬೂದಿಯ ಮೇಲೆ ಭಸಿತವನ್ನು ತಳಿದೊಡನೆ ಮರವು ಮುನ್ನಿನಂತೆ ಎದ್ದು ತಳತಳಿಸಿತೆಂದು ಕವಿ ಬರೆಯುತ್ತಾನೆ. ಜೈನರ ಕ್ರಿಯೆಯು ವಿಧ್ವಂಸಕ ರೀತಿಯದಾದರೆ ಬೊಮ್ಮಯ್ಯನದು ರಚನಾತ್ಮಕ ಕ್ರಿಯೆಯೆನಿಸುತ್ತದೆ. ಹೀಗೆ ಧಾರ್ಮಿಕ ಪರಿಧಿಯಲ್ಲಿ ಇಂತಹ ಮಂತ್ರ ತಂತ್ರಗಳು ಬಳಕೆಯಾಗಿ ಜನಸಾಮಾನ್ಯರಲ್ಲಿ ಅಚ್ಚರಿಯನ್ನುಂಟು ಮಾಡಿ ಶಿವಶರಣರ ಬಗ್ಗೆ ಗೌರವಾದರಗಳನ್ನು ಹೆಚ್ಚು ಮಾಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದವೆಂದು ಹೇಳಬಹುದು. ಮುಗ್ಧಸಂಗಯ್ಯನ ಪೂಜಾ ಸಂದರ್ಭದಲ್ಲಿಯೂ ದೇಹದ ಅಂಗಾಂಗಗಳಿಗೆ ಭಸ್ಮ ಧರಿಸುವ ಕುರಿತಂತೆ ಕವಿ ವಿವರಿಸುತ್ತಾನೆ. (೫: ೧,೩,೬೮)

ಎ. ಮಂತ್ರ :

ತಿರುವಾಕುರೀಶನೆಂಬ ಜೈನ ಮುನಿಯು ಹೊಟ್ಟೆಶೂಲಿಯಿಂದ ನರಳುವಾಗ ಪಂಚಾಕ್ಷರೀ ಮಂತ್ರದಿಂದ ಮಂತ್ರಿಸಿದ ಭಸ್ಮವನ್ನು ಸವರಿದಾಗ ಗುಣವಾದನೆಂಬ ಉಲ್ಲೇಖ ದೊರೆಯುತ್ತದೆ. 'ಪಂಚಾಕ್ಷರಿ' ಹಾಗೂ 'ಸಪ್ತಾಕ್ಷರಿ' (೧೧:೧೯-೨೧) ಮಂತ್ರಗಳ ಉಲ್ಲೇಖ ದೊರೆತರೂ ಕವಿ ಈ ಕುರಿತು ವಿವರಿಸಿಲ್ಲ.

೨. ಪಂಚಾಚಾರಗಳು :

ವೀರಶೈವಧರ್ಮದ ಬೆಳವಣಿಗೆಗೆ ಶಿವಶರಣರು ಕೆಲವು ಆಚಾರಗಳು ಹಾಗೂ ವಿಧಿನಿಷೇಧಗಳನ್ನು ಹೇರಿಕೊಂಡರು. ಧರ್ಮದ ಆಚರಣೆ ಹಾಗೂ ಅನುಸರಣೆಗೆ ಪ್ರಬಲವಾದ ಆಚರಣೆಗಳು ಸಹಾಯಕವಾದವು. ಯೋಗ್ಯವಲ್ಲದ ಕೆಲವು ನಿಯಮಗಳನ್ನು ವಚನಕಾರರು ತಿರಸ್ಕರಿಸಿ ಯೋಗ್ಯ ನಿಯಮಗಳನ್ನು ಆಚರಣೆಯಲ್ಲಿ ತಂದು ಧರ್ಮಕ್ಕೆ ನೂತನ ಸ್ವರೂಪ ಕಲ್ಪಿಸಿದರು. ಪಂಚಮಹಾಪಾತಕಗಳನ್ನು ಸಮಾಜದ ಸರ್ವರೂ ಮಾಡಬಾರದು ಎಂದು ನಿಷೇಧವಿದ್ದರೆ ವೀರಶೈವನಾದವನು ಮಾಡಲೇಬೇಕಾದ ಪಂಚಾಚಾರಗಳನ್ನು ಬೋಧಿಸಿ ಅದರಂತೆ ನಡೆದುಕೊಂಡರು

ಕೂಡ. ಪ್ರತಿಯೊಬ್ಬ ಶರಣರು ಈ ರೀತಿಯ ಪಂಚಾಚಾರವೆಂಬ ಆವರಣದ ಕಟ್ಟಿಗೆ ಸಿಲುಕಿದುದರಿಂದ ಅವರ ಅಂತರಂಗ ಬಹಿರಂಗ ಚಟುವಟಿಕೆಗಳು ಸರಿಯಾದ ದಿಕ್ಕಿನಲ್ಲಿ ನಿಯಂತ್ರಣಗೊಂಡು ಧಾರ್ಮಿಕ ಬದುಕು ಗಟ್ಟಿಗೊಂಡಿತು. ಅಂತಹ ಆಚಾರಗಳೆ ಲಿಂಗಾಚಾರ, ಸದಾಚಾರ, ಶಿವಾಚಾರ, ಗಣಾಚಾರ ಮತ್ತು ಭೃತ್ಯಾಚಾರ.

ಅ. ಲಿಂಗಾಚಾರ :

ಈಗಾಗಲೇ ಚರ್ಚಿಸಿದಂತೆ ಬಸವಕಾಲದ ಧರ್ಮ ಮೂಢನಂಬಿಕೆ, ಅರ್ಥಹೀನ ಕಂದಾಚಾರ, ವರ್ಣಾಶ್ರಮ, ಮೇಲು ಕೀಳುಗಳ, ಅಸ್ಥಿರತೆ ಮುಂತಾದ ಅಂಶಗಳ ತವರೂರಾಗಿತ್ತು. ಇಂತಹ ಸಂದರ್ಭದಲ್ಲಿ ಜನತೆ ದಿಕ್ಕೆಟ್ಟು ಕಂಡ ಕಂಡ ಕ್ಷುದ್ರದೇವತೆಗಳ ಉಪಾಸನೆಗೆ ಒಳಗಾಗಿದ್ದರು. ಇಂತಹ ಸಂದರ್ಭದಲ್ಲಿ ಸಮಾಜದ ಸರ್ವರೂ ಒಪ್ಪಬಹುದಾದ 'ಇಷ್ಟಲಿಂಗ ' ಕಲ್ಪನೆಯನ್ನು ಜಾರಿಗೆ ತಂದು ಶಿವನನ್ನು ಉಪಾಸಿಸುವ ನೂತನ ಮಾರ್ಗವನ್ನು ಬಸವಣ್ಣನವರು ಕಂಡುಕೊಂಡರು. ಇದರಿಂದ ಪುರೋಹಿತರ ಕಾಟ ತಪ್ಪಿ ತಮ್ಮ ತಮ್ಮ ಮನೆಯಲ್ಲಿಯೇ ದೇವನನ್ನು ಆರಾಧಿಸುವ ಪರಿಸ್ಥಿತಿ ಬೆಳೆದು ಧಾರ್ಮಿಕವಾಗಿ ಎಲ್ಲರೂ ಸಮಾನರು ಎಂಬ ಮಹತ್ವದ ಅಂಶ ಇದರಿಂದ ಜಾರಿಗೆ ಬಂದಂತಾಯಿತು. ಇದಕ್ಕೆ ಪ್ರೇರಕವಾದದ್ದೇ ಈ ಲಿಂಗಾಚಾರ. ಜಾತಿ ಆಧಾರಿತ ಸಮಾಜ ಈ ಇಷ್ಟಲಿಂಗ ಕಲ್ಪನೆಯಿಂದ ಸಾಮಾಜಿಕ ಸ್ಥಿತ್ಯಂತರಕ್ಕೆ ಒಳಗಾಗಿ ಸಮಾಜದ ಸರ್ವರೂ ಸಮಾನರು ಎಂಬುದನ್ನು ಬತ್ತಿ ಹೇಳಿತು. ಆ ಮೂಲಕ ಸಮಾಜದಲ್ಲಿ ಹೊಸ ಬದಲಾವಣೆಗೆ ಕಾರಣವಾಗಿ ಅಂತ್ಯಜರೆಲ್ಲ ಶ್ರೇಷ್ಠರಾದರು. ಕನಿಷ್ಟರೆಲ್ಲ ಇಷ್ಟಲಿಂಗ ಮೂಲಕ ಆಧ್ಯಾತ್ಮಸಾಧನೆ ಕೈಗೊಂಡು ಪಾವಿತ್ರ್ಯತೆಯನ್ನು ಪಡೆದುಕೊಂಡರು.

ಆ. ಶಿವಾಚಾರ :

ಲಿಂಗಧಾರಿಗಳೆಲ್ಲ ಸಮಾನೆಂದು ಪರಿಗಣಿಸುವುದೇ ಶಿವಾಚಾರ. ಶಿವಭಕ್ತರಲ್ಲಿ ಮೇಲು-ಕೀಳು, ಭೇದ-ಭಾವವಿಲ್ಲದೇ ಸರ್ವರೂ ಸಮಾನರು ಎಂಬ ಭಾವನೆಯುಂಟು ಮಾಡುವುದು ಶಿವಾಚಾರ. ಶಿವಭಕ್ತರಲ್ಲಿ ಸಹಭೋಜನ, ಕೊಡುಕೊಳ್ಳುವ ವ್ಯವಹಾರ ನಡೆಯುತ್ತಿತ್ತು. ಇದಕ್ಕೆ ಪೂರಕವಾಗಿ ಅನುಭವಮಂಟಪದಲ್ಲಿ ತರ್ಕ, ಜಿಜ್ಞಾಸೆಗಳು ನಡೆದು ಅಂತಿಮ ನಿರ್ಧಾರಕ್ಕೆ ಬರುತ್ತಿದ್ದರು. ಈ ಹಿನ್ನೆಲೆಯಲ್ಲಿ ಅಂತ್ಯಜ ಹರಳಯ್ಯನ ಮಗ ಹಾಗೂ ಉಚ್ಚವರ್ಣದ ಮಧುವರಸನ ಮಗಳಿಗೆ ನೆಡೆದ ವಿವಾಹವೇ ಕಾರಣವಾಗಿದೆ. ಬಹುಶಃ ಈ ಘಟನೆ ಶಿವಭಕ್ತರು ಸಮಾನರು ಎಂಬುದನ್ನು ಸ್ಥಾಪಿಸಲು ಬಸವಣ್ಣನವರು ಕಾರ್ಯರೂಪಕ್ಕೆ ತಂದ ಉದಾಹರಣೆಯಾಗಿದೆ. ಆದರೆ ಇದು ದುರಂತ ಅಂತ್ಯ ಕಂಡದ್ದು ಮಾತ್ರ ವಿಪರ್ಯಾಸ.

ಇ. ಸದಾಚಾರ :

ಸದಾಚಾರದ ಒಂದು ಅರ್ಥ ಕಾಯಕ ದಾಸೋಹವಾದರೆ ಮತ್ತೊಂದು ಅರ್ಥ ಸನ್ನಡತೆ, ನೈತಿಕಾಚರಣೆ. ಧಾರ್ಮಿಕಾಚರಣೆಗಳಿಗಿಂತ ಅವರು ನೈತಿಕ ಮೌಲ್ಯಗಳಿಗೆ ಹೆಚ್ಚು ಮಹತ್ವ

ಕೊಟ್ಟರು. ಕಾಯಕದಲ್ಲಿ ಮೇಲು ಕೀಳುಗಳನ್ನೆಣಿಸಲಿಲ್ಲ. ಎಲ್ಲ ಕಾಯಕ ಸಮಾನವೆಂಬ ತತ್ತ್ವವನ್ನು ತಾವೇ ಸ್ವತಃ ಅಚರಿಸಿ ಜಾರಿಯಲ್ಲಿ ತಂದರು. ಹರಳಯ್ಯನ ಕಾಯಕವೂ ತಮ್ಮ ಪ್ರಧಾನಿ ಕಾಯಕದಷ್ಟೇ ಗೌರವಯುತವಾದುದೆಂದು ಪರಿಗಣಿಸಿದರು. ಹಾಗಾಗಿಯೇ ಇಡೀ ಪುರಾಣದಾದ್ಯಂತ ವೈವಿಧ್ಯಮಯ ಕಾಯಕ ಕೈಗೊಂಡ ಶಿವಶರಣ ಪಡೆಯೇ ಗೋಚರಿಸುತ್ತದೆ. ನಾವು ಯಾವಾಗಲೂ ಇತರರಲ್ಲಿರುವ ದೋಷಗಳನ್ನರಸುತ್ತ ಅವರನ್ನು ತಿದ್ದಲು ಪ್ರಯತ್ನಿಸುತ್ತೇವೆ. ನಮ್ಮ ದೋಷಗಳ ಕಡೆ ಗಮನ ಹರಿಯುವುದೇ ಇಲ್ಲ. ಎಲ್ಲರೂ ಹೀಗೆ ಮಾಡಿದರೆ ಸಮಾಜವೇ ದೋಷಪೂರ್ಣವಾಗಿ ಉಳಿದು ಬಿಡುತ್ತದೆ. ಆದ್ದರಿಂದಲೇ ಲೋಕದ ಡೊಂಕ ನೀವೇಕೆ ತಿದ್ದುವಿರಿ? ಎಂದು ಪ್ರಶ್ನಿಸಿ ನಿಮ್ಮ ನಿಮ್ಮ ತಪ್ಪುಗಳನ್ನು ಸರಿಪಡಿಸಿಕೊಳ್ಳಿ ಎಂಬ ಕಿವಿಮಾತನ್ನು ಹೇಳುತ್ತಾರೆ. ಆ ಮೂಲಕ ಸಮಾಜವನ್ನು ಎಚ್ಚರಿಸುತ್ತಾರೆ; ಬಡಿದೆಬ್ಬಿಸುತ್ತಾರೆ. ಅದರ ಊರ್ಧ್ವಮುಖಿ ಚಲನೆಗೆ ಪ್ರಯತ್ನಿಸುತ್ತಾರೆ.

ಈ. ಭೃತ್ಯಾಚಾರ :

'ಭೃತ್ಯಾಚಾರ ' ಎಂದರೆ ಸೇವಕಭಾವವನ್ನು ಅಳವಡಿಸಿಕೊಳ್ಳುವುದು. ಈ ಹಿನ್ನೆಲೆಯಲ್ಲಿ ಬಸವಣ್ಣನವರು 'ಎನಗಿಂತ ಕಿರಿಯರಿಲ್ಲ, ಶಿವಭಕ್ತರಿಗಿಂತ ಹಿರಿಯರಿಲ್ಲ ' ಎನ್ನುತ್ತಾರೆ. ಈ ಭಾವನೆಯಿಂದ ಮನಸ್ಸಿನ ಅಹಂ ಅಳಿದು ನಿರ್ಮಲವಾಗುತ್ತದೆ. ವ್ಯಕ್ತಿ ವ್ಯಕ್ತಿಗಳಲ್ಲಿರುವ ಅಹಂಕಾರ ಸಮಾಜದ ಆರೋಗ್ಯಕ್ಕೆ ಹಾನಿಕರ. ಅದು ಸಮಾಜದಲ್ಲಿ ವಿಷಮತೆಯ ಬೀಜವನ್ನು ಬಿತ್ತಿ, ಘರ್ಷಣೆಗಳುಂಟುಮಾಡಿ ಅದರ ಸ್ವಾಸ್ಥ್ಯಕ್ಕೆ ಭಂಗ ತರುತ್ತದೆ. ಇದಕ್ಕಾಗಿಯೇ ಬಸವಣ್ಣನವರು ಭೃತ್ಯಾಚಾರ ತತ್ತ್ವವನ್ನು ಪ್ರತಿಪಾದಿಸಿದರು. ಬಸವಣ್ಣನವರು ಏನೆಲ್ಲ ಅರ್ಹತೆಯನ್ನು ಹೊಂದಿದ್ದರೂ, ಸ್ವತಃ ಬಿಜ್ಜಳನ ಪ್ರಧಾನಿಯಾಗಿದ್ದರೂ ಆಹಂಕಾರಕ್ಕೆ ಎಡೆ ಕೊಟ್ಟಿರಲಿಲ್ಲ. ಯಾವ ಪದವಿ ಸನ್ಮಾನಗಳನ್ನು ಬಯಸದೆ ಅವುಗಳಿಂದ ದೂರವಿದ್ದರು. ಅವರ ಈ ಆದರ್ಶ ಗುಣಗಳೆ ಇಂದಿನ ಸಮಾಜದ ಎಲ್ಲ ವರ್ಗದ ಜನರಿಗೆ ಅನುಕರಣೀಯವಾಗಿವೆ ಎಂದು ಹೇಳಬಹುದು.

ಉ. ಗಣಾಚಾರ :

ಸಾಮಾಜಿಕವಾಗಿ ಧಾರ್ಮಿಕವಾಗಿ ಜರುಗುವ ಅನ್ಯಾಯಗಳ ವಿರುದ್ಧದ ಹೋರಾಟವೇ ಗಣಾಚಾರ. ಹಾಗೆಂದು ಈ ಭಾವನೆ ಬೇರೆ ಧರ್ಮಗಳ ಬಗೆಗಾಗಲಿ ಅಥವಾ ಇತರ ಸಮಾಜದ ಬಗೆಗಾಗಲಿ ತಾಳುವ ದ್ವೇಷವಲ್ಲ. ಇದೊಂದು ಆತ್ಮರಕ್ಷಣೆಯ ಶಸ್ತ್ರ.. ಆತ್ಮರಕ್ಷಣೆಗಾಗಿ ಅನ್ಯಾಯದ ವಿರುದ್ಧ ಹೋರಾಡಬೇಕು. ಪ್ರಾಣವನ್ನಾದರೂ ಇದಕ್ಕೆ ಪಣವನ್ನಾಗಿಡಬೇಕು. ತಾವು ನಂಬಿ ನಡೆದ ಧರ್ಮಾಚರಣೆಗಳಿಗೆ ಚ್ಯುತಿ ಬಂದಾಗ ಅದನ್ನು ಸಮರ್ಥಿಸಲೋಸುಗ ಶಿವಶರಣರು ಈ ಆಚಾರಕ್ಕೆ ಒಳಗಾಗಿ ನಡೆದುಕೊಂಡ ಅನೇಕ ಸಂದರ್ಭಗಳು ಬಸವಪುರಾಣದಲ್ಲಿ ವ್ಯಕ್ತವಾಗಿವೆ.

ಲಿಂಗಾಚಾರವು ವೀರಶೈವನು ಶ್ರೇಷ್ಠವಸ್ತುಗಳಲ್ಲೊಂದಾದ ಲಿಂಗದ ಬಗ್ಗೆ ನಡೆದುಕೊಳ್ಳಬೇಕಾದ ರೀತಿಯನ್ನು ವಿವರಿಸಿದರೆ, ಸದಾಚಾರವು ಸಮುದಾಯದ ಸದಸ್ಯನೊಬ್ಬನು ತನ್ನ ಬಾಳನ್ನು ಇತರರೊಂದಿಗೆ ಕಳೆಯಬೇಕಾದ ರೀತಿಯನ್ನು ಕುರಿತು ಹೇಳುತ್ತದೆ. ಶಿವಾಚಾರ ಅಥವಾ ಸಮಯಾಚಾರವೆಂಬುದು ತನ್ನ ಧರ್ಮಕ್ಕೆ ಸೇರಿದವರನ್ನು ಕಾಣಬೇಕಾದ ಬಗೆಯನ್ನು ವಿವರಿಸುತ್ತದೆ. ವೀರಶೈವನು ಇತರ ಧರ್ಮಗಳಿಂದ ತನ್ನ ಧರ್ಮವನ್ನು ರಕ್ಷಿಸಬೇಕಾದ, ಪೋಷಿಸಬೇಕಾದ ಕರ್ತವ್ಯವನ್ನು ಗಣಾಚಾರವು ಹೇಳಿದರೆ, ಭೃತ್ಯಾಚಾರವು ವೀರಶೈವನು ತನ್ನ ಮತದ ಹಿರಿಯರೊಡನೆ ನಡೆದುಕೊಳ್ಳಬೇಕಾದ ಬಗೆಯನ್ನು ವಿಧಿಸುತ್ತದೆ. ಭೀಮಕವಿಯ ಬಸವಪುರಾಣದಲ್ಲಿಯ ಎಲ್ಲ ಪಾತ್ರಗಳು ಒಂದಿಲ್ಲೊಂದು ಆಚಾರಗಳ ಆವರಣ ಹಾಕಿಕೊಂಡೆ ತಮ್ಮ ಮಣಿಹವನ್ನು ಪೂರೈಸಿದ್ದು ಕಂಡುಬರುತ್ತದೆ. ಕಥಾನಾಯಕ ಬಸವಣ್ಣನವರು ಭೃತ್ಯಾಚಾರಕ್ಕೆ ಸಂಕೇತವಾದರೆ ಮಡಿವಾಳ ಮಾಚಯ್ಯ, ಶಂಕರ ದಾಸಿಮಯ್ಯ, ಸಿರಿಯಾಳ, ಸುರಗಿ ಚೌಡಯ್ಯ, ಕಿನ್ನರ ಬೊಮ್ಮಯ್ಯ, ಏಕಾಂತ ರಾಮಯ್ಯ, ದೇವರ ದಾಸಿಮಯ್ಯ, ಸೊಡ್ಡಳ ಬಾಚರಸ ಮುಂತಾದ ಶಿವಶರಣರು ಶಿವಾಚಾರ ಹಾಗೂ ಗಣಾಚಾರಕ್ಕೆ ಹೆಸರಾಗಿದ್ದಾರೆ. ಪುರಾಣದಲ್ಲಿ ವರ್ಣಿತವಾಗಿರುವ ಎಲ್ಲ ಶಿವಭಕ್ತರು ಲಿಂಗಾಚಾರದ ಏಕಸೂತ್ರದಲ್ಲಿದ್ದುಕೊಂಡೆ ಪ್ರತಿಯೊಬ್ಬರೂ ಸಹ ಒಂದಲ್ಲ ಒಂದು ಭಕ್ತಿಕಾಯಕ ಕೈಗೊಂಡು ಸಂಪಾದನೆಯ ಸಂಗ್ರಹ ಮಾಡದೆ ಲಿಂಗ ಜಂಗಮಕ್ಕೆ ಅರ್ಪಿಸುವ, ಶಿವಭಕ್ತರಲ್ಲಿ ವಿನಿಮಯ ಮಾಡಿಕೊಂಡು ಸತ್ಪಥದಲ್ಲಿ ನಡೆಯುವ ದಿಟ್ಟ ನಿರ್ಧಾರ ಕೈಗೊಂಡ ಸದಾಚಾರಿಗಳಾಗಿದ್ದಾರೆ. ಈ ಎಲ್ಲಾ ಪಂಚಾಚಾರಗಳು ಪ್ರತ್ಯೇಕವಾಗಿ ವಿಂಗಡಿಸಲ್ಪಡದೇ ಸಂದರ್ಭೋಚಿತವಾಗಿ ಶಿವಶರಣರು ನಡೆದುಕೊಂಡಿದ್ದನ್ನು ಕವಿ ಪರಿಣಾಮಕಾರಿಯಾಗಿ ಚಿತ್ರಿಸಿದ್ದಾನೆ. ಭೀಮಕವಿಯು ತನ್ನ ಸಮಾಜದಲ್ಲಿ ಕಾಣುವ ಈ ಧಾರ್ಮಿಕ ಆವರಣಗಳ ದಟ್ಟ ಪ್ರಭಾವವನ್ನು ಬಸವಪುರಾಣದಲ್ಲಿ ಕಾಣಬಹುದಾಗಿದೆ.

ಊ. ಬಸವಣ್ಣನವರ ಆಚಾರಗಳು:

ಬಸವಣ್ಣನವರು ತೊಟ್ಟ ಭಕ್ತಿ ಪ್ರತಿಜ್ಞೆಯನ್ನು ಭೀಮಕವಿ ಹೀಗೆ ಪಟ್ಟಿಮಾಡುವನು. (೬:೧–೭)

೧. ನಿತ್ಯವೂ ಶಿವರಾತ್ರಿಯನ್ನು ಮಾಡುವ ಭಾಷೆ.

೨. ಭಕ್ತರನ್ನು ಅಚ್ಚ ಶಿವನೆಂದಿರುವ ಭಾಷೆ.

೩. ಶಿವೈಕ್ಯರ ಎಗ್ಗುಗಳನ್ನು (ದೋಷಗಳನ್ನು) ಹೇಳಿ ಎಚ್ಚರಿಸದಿರುವ ಭಾಷೆ.

೪. ಶರಣರ ಹೆಚ್ಚು ಕುಂದುಗಳನ್ನು ಆಡದಿರುವ ಭಾಷೆ.

೫. ಪರಿಸ್ಥಿತಿ ಗಮನಿಸಿ ವಂಚಿಸದ ಭಾಷೆ.

೬. ಶಿವನನ್ನಾದರೂ ಒಮ್ಮೆಯೂ ಬಲತ್ಕಾರದಿಂದ ಬೇಡದ ಭಾಷೆ.

೭. ಏನೇ ಆಗಲಿ ಭಕ್ತರು ಬಯಸಿದ ಒಡವೆಗಳನ್ನು ಕೂಡಲೇ ಕೊಡುವ ಭಾಷೆ.
೮. ನೆನಹಿನ ಮೊತ್ತವು ಹೇಗೋ ಹಾಗೆ ವಕ್ರವಿಲ್ಲದ ನುಡಿವ ಭಾಷೆ.
೯. ನುಡಿದು ಹುಸಿಯದ ಭಾಷೆ.
೧೦. ನುಡಿದಂತೆ ನಡೆಸುವ ಭಾಷೆ.
೧೧. ಛಲವನ್ನು ಬಿಡದ ಭಾಷೆ.
೧೨. ಭಕ್ತರ ಸಲಿಗೆಯ (ಬೇಡಿಕೆಯನ್ನು) ಪೂರೈಸುವ ಭಾಷೆ.
೧೩. ದಾಸೋಹವನ್ನು ಸದಾ ಮಾಡುವ ಭಾಷೆ.
೧೪. ಕನಸಿನಲ್ಲೂ ಶಿವನಿಗೆ ಗೆಲುವನ್ನು ಈಯದ ಭಾಷೆ.
೧೫. ಭಕ್ತರುಗಳಿಗೆ ಗೆಲುವನ್ನು ಕೊಟ್ಟು ತಾನು ಸೋಲುವ ಭಾಷೆ.
೧೬. ಪರಧರ್ಮಿಗಳ ದರ್ಪವನ್ನು ಸಂಹರಿಸುವ ಭಾಷೆ.
೧೭. ಕುತರ್ಕದಿಂದ ಮತ್ಸರಿಸುವ ಪರವಾದಿಗಳನ್ನು ಸೋಲಿಸುವ ಭಾಷೆ.
೧೮. ಶಿವನಿಂದಕರನ್ನು ಸಂಹರಿಸುವ ಭಾಷೆ.
೧೯. ಶಿವಭಕ್ತರನ್ನು ಉದಾಸೀನ ಮಾಡಿ ನುಡಿವವರ ಮಾತನ್ನು ಕೇಳದಿರುವ ಭಾಷೆ.
೨೦. ಶಿವಶರಣನೊಡನೆ ಶಿವಾನುಭವದಲ್ಲಿ ಕೂಡಿ ನಡೆಯುವ ಭಾಷೆ.
೨೧. ಶಿವಗಣಕ್ಕೆ ಅರ್ಪಿತವಾದುದನ್ನು ಕಿಂಚಿತ್ತು ಮುಟ್ಟಿಸಿದ ಭಾಷೆ.
೨೨. ಶರಣರು ಏನೆಂದರೂ ಅವರಿಗೆ ಪ್ರತ್ಯುತ್ತರ ಕೊಡದ ಭಾಷೆ.
೨೩. ಜಂಗಮರುಗಳನ್ನು ಸದಾ ಪ್ರಾಣಲಿಂಗವೆಂದು ಭಾವಿಸುವ ಭಾಷೆ.
೨೪. ನರರನ್ನು ಬೇಡದ ಭಾಷೆ.
೨೫. ಶರಣರಲ್ಲದೆ ಇತರರಿಗೆ ಕೈಮುಗಿಯದ ಭಾಷೆ.
೨೬. ಭವದ ಬಾಧೆಗೆ ಸಿಲುಕದಿರುವ ಭಾಷೆ.
೨೭. ಕರಣಗಳ ವಿಷಯವಾಸನೆಗೆ ಅವಕಾಶ ಕೊಡದಿರುವ ಭಾಷೆ.
೨೮. ಅರಿಷಡ್ವರ್ಗಗಳನ್ನು ನಿವಾರಿಸುವ ಭಾಷೆ.
೨೯. ಶಿವಭಕ್ತಿ ಪಸರಿಸುವ ಭಾಷೆ.
೩೦. ಶಿವಾಚಾರವನ್ನು ಮುಂದಿಟ್ಟು ಬೆಳೆಯಿಸುವ ಭಾಷೆ.
೩೧. ತಲೆ ಹರಿದು ಮುಂಡ ಉರುಳಿದರೂ ಶರಣೆನ್ನುತ್ತಿರುವ ಭಾಷೆ.
೩೨. ಮುಂಡದಿಂದ ರುಂಡ ಬೇರೆಯಾದರೂ ಶರಣರಿಗೆ ವಂದಿಸುವ ಭಾಷೆ.
೩೩. ಮುಟ್ಟಿದಡೆ (ಮೇಲೆ ಬಂದರೆ) ಹಿಮ್ಮೆಟ್ಟದ ಭಾಷೆ.
೩೪. ಇವೆಲ್ಲವನ್ನು ಕೊನೆಗಾಣಿಸುವ ಭಾಷೆ.

ಬಸವಣ್ಣನವರ ಈ 'ಭಕ್ತಿಪ್ರತಿಜ್ಞೆ'ಯು ಅವನ ಪ್ರಸಿದ್ಧ ಬಾವನ್ನ ಆಚಾರಗಳೇ ಆಗಿರಬಹುದು. ಮಹಾದೇವಿಯಕ್ಕ ತನ್ನ ವಚನವೊಂದರಲ್ಲಿ ಈ ಬಾವನ್ನ ಆಚಾರಗಳನ್ನು ಹೇಳಿರುವಳು. ಚೆನ್ನಬಸವಣ್ಣನು ಐವತ್ತು ಆಚಾರಗಳ ಪಟ್ಟಿಯೊಂದನ್ನು ತನ್ನ ವಚನವೊಂದರಲ್ಲಿ ಕೊಟ್ಟಿದ್ದಾನೆ. (ಸ.ವ.ಸಂ.೩, ವ. ೯೭೧) ಬಸವಣ್ಣನವರು ಅರವತ್ತನಾಲ್ಕು ಶೀಲದಲ್ಲಿ ನಡೆದು ತೋರಿದನೆಂದು ಚೆನ್ನಬಸವಣ್ಣ ಹೇಳಿದ್ದಾನೆ. ಇಲ್ಲಿ ಬರುವ ಭಾಷೆ, ಶೀಲ ಹಾಗೂ ಆಚಾರಗಳ ನಡುವೆ ವ್ಯತ್ಯಾಸವಿದೆಯಾದರೂ, ವಚನಕಾರರು ಇವುಗಳ ನಡುವೆ ಹೆಚ್ಚಿನ ಅಂತರವನ್ನು ಕಂಡಂತಿಲ್ಲ. ಬಸವಣ್ಣನವರು ಧರಿಸಿದ ಭಾಷೆಗಳು ಬಸವಪುರಾಣಾದ್ಯಂತದಲ್ಲಿ ಪ್ರಕಟವಾಗಿವೆ. ದೃಢತೆ, ಕಾರ್ಯ, ಉಗ್ರಭಕ್ತಿಯಂತಹ ಶೀಲಗಳನ್ನು ಒರೆಗೆ ಹಚ್ಚಿ ಆ ಮೂಲಕ ತಮ್ಮ ಆಚಾರ, ಭಾಷೆ, ಶೀಲಗಳನ್ನು ಕಾಪಾಡಿಕೊಂಡುದರ ವಿವರವನ್ನು ಕವಿ ಪ್ರತಿಪಾದಿಸುತ್ತಾನೆ. ಪ್ರಾತಿನಿಧಿಕವಾಗಿ ಬಸವಪುರಾಣದಲ್ಲಿ ಬಸವಣ್ಣನವರ ಮೂವತ್ನಾಲ್ಕು ಆಚಾರಗಳನ್ನು ಇಲ್ಲಿ ಹೇಳಲ್ಪಟ್ಟಿದ್ದರೂ ಸಹ ಇಡೀ ಶರಣಕುಲವೇ ಇಂತಹ ಆಚಾರಗಳ ಸೂತ್ರಕ್ಕೆ ಒಳಗಾಗಿ ಬದುಕಿದ ಅನೇಕ ಉದಾಹರಣೆಗಳು ಪುರಾಣದಲ್ಲಿ ಅಲ್ಲಲ್ಲಿ ಕಂಡುಬರುತ್ತವೆ.

೩೪. ಶಿವಭಕ್ತರ ಬಲಿದಾನ ಮರಣಗಳು :

ಆತ್ಮಬಲಿಯ ಹಲವು ಪ್ರಕಾರಗಳಾದ ಜೈನರ ಸಲ್ಲೇಖನ ವ್ರತ, ಕ್ಷತ್ರಿಯರ ಕೀಳ್ಗುಂಟೆ, ಸಹಗಮನ ಇಂತಹ ಪದ್ಧತಿಗಳ ವಿರುದ್ಧ ಶಿವಶರಣರು 'ಲಿಂಗದ ವೇಳೆವಾಳಿ', 'ಜಂಗಮದ ವೇಳೆವಾಳಿ' ಎಂಬಂತಹ ವ್ರತ ನೇಮಗಳನ್ನು ಆಚರಿಸಿದ್ದು ಕಂಡುಬರುತ್ತದೆ. ತಾವು ನಂಬಿದ ದೈವಕ್ಕೆ, ಧರ್ಮಕ್ಕೆ ಚ್ಯುತಿ ಬಂದಾಗ ಹಿಂದೆ ಮುಂದೆ ನೋಡದೆ ಪ್ರಾಣವನ್ನೇ ಅರ್ಪಿಸುವ ಅನೇಕ ವೀರವ್ರತಿಗಳು ಉಲ್ಲೇಖಗೊಂಡಿದ್ದಾರೆ. ಜೈನ ಹಾಗೂ ವೈದಿಕ ಧರ್ಮಕ್ಕೂ ತಮ್ಮ ನಿಷ್ಠಾವಂತ ಧರ್ಮಾಚರಣೆಯ ಮೂಲಕ ತಿರುಗೇಟು ನೀಡಿದ್ದು ಕಂಡು ಬರುತ್ತದೆ. ಭೀಮಕವಿಯು ಇಂತಹ ವಿವರಗಳನ್ನು ಕೊಡುವ ಮೂಲಕ ವಚನಕಾರರ ಮೌಲ್ಯಗಳನ್ನು ಜೀವಂತವಾಗಿಡಲು ಪ್ರಯತ್ನಿಸಿದ್ದಾನೆ. ಉಪವಾಸ, ವ್ರತ, ವೀರಮರಣ, ಅಂಗಚ್ಛೇದ ಮತ್ತು ಶಿರಚ್ಛೇದಗಳಂತಹ ವಿವಿಧ ರೀತಿಯ ವೀರಮಾರ್ಗವನ್ನೆ ಅಪ್ಪಿ ಶಿವಶರಣರು ಲಿಂಗಜಂಗಮಕ್ಕೆ ತಮ್ಮದೇ ಆದ ರೀತಿಯ ವೀರಭಕ್ತಿಯನ್ನು ಸಲ್ಲಿಸಿದ್ದು ಕಂಡುಬರುತ್ತದೆ.

ಭಕ್ತಿಯೆಂಬುದು ಸುಲಭಸಾಧ್ಯವಲ್ಲ. ಅಂತಹ ಅಸಾಧ್ಯಭಕ್ತಿಯನ್ನು ಸಾಧ್ಯವಾಗಿಸಿದ ಸಂದರ್ಭಗಳು ಉಲ್ಲೇಖಗೊಂಡಿವೆ. ಆತ್ಮಭವರನ್ನೇ ಕೊಂದು ಶಿವನಿಗೆ ಅರ್ಪಿಸಿದ ಸಂದರ್ಭ ಪುರಾಣದಲ್ಲಿ ಉಲ್ಲೇಖಗೊಂಡಿವೆ. ಭಕ್ತ ಸಿರಿಯಾಳ ಹಾಗೂ ಚಂಗಳೆ ಎಂಬ ಶಿವದಂಪತಿಗಳು ಜಂಗಮನ ಅಪೇಕ್ಷೆಯಂತೆ ತಮ್ಮ ಮಗನನ್ನೇ ಕೊಂದು ಉಣಬಡಿಸಿದ ಉಲ್ಲೇಖ ಭಕ್ತಿಯ ಪರಾಕಾಷ್ಠೆಯನ್ನು ಸೂಚಿಸುತ್ತದೆ. ನಿಂಬಿಯೆಂಬ ಶಿವಭಕ್ತೆಯು ಮಗ ಮೀಸಲು ಮುರಿದನೆಂದು

ಅವನನ್ನು ಕೊಂದು ಶಿವಭಕ್ತಿ ಸಲ್ಲಿಸಿದ ಸಂದರ್ಭವಂತೂ ಶಿವನೇ ಸರ್ವಸ್ವ ಮಿಕ್ಕಿದ್ದೆಲ್ಲವೂ ಶಿವಸಮಾನವೆಂಬ ಭಾವನೆಯನ್ನು ಉಂಟು ಮಾಡುತ್ತವೆ. (ಸಂ.೨೩) ಕಾಟಕೋಟನೆಂಬ ಭಕ್ತ ತನ್ನ ಶಿವಭಕ್ತಿಗೆ ಅಡ್ಡಿ ಮಾಡಿದನೆಂದು ತಂದೆಯನ್ನೇ ಕೊಲ್ಲುವ ಉಗ್ರ ಭಕ್ತಿಯ ಆಚರಣೆಯನ್ನು ಕವಿ ಉದಾಹರಿಸುತ್ತಾನೆ. (೮:೧೨) ಈ ಉದಾಹರಣೆಗಳು "ಭಕ್ತಿಯೆಂಬುದ ಮಾಡಬಾರದು ಕರಗಸದಂತೆ ಹೋಗುತ್ತ ಕೊಯ್ವುದು, ಬರುತ್ತ ಕೊಯ್ವುದು" (ಸ.ವ.ಸಂ.೧ ವ.೨೧೨) ಎಂಬ ಬಸವ ವಚನದ ಆಶಯವೇ ಮೈವೆತ್ತಿದಂತಿದ್ದನ್ನು ಕಾಣಬಹುದು.

ಕೋಳೂರು ಕೊಡಗೂಸಿನ ಮುಗ್ಧಭಕ್ತಿಯಂತೂ ಎಂಥವರ ಹೃದಯವನ್ನಾದರೂ ಕಲಕುತ್ತದೆ. ಬಿಜ್ಜಮಹಾದೇವಿ ಶಿವನಿಗೆ ತಾಯಿಯಾಗಿ ಸಾಕಿ ಸಲಹಿದ ವಿವರವನ್ನು ಕವಿ ಕೊಡುತ್ತಾನೆ. ದೀಪದ ಕಲಿಯನಾರು, ನಾಟ್ಯ ನಮಿತ್ತಂಡಿಯರು ಕೂರಲಗಿನಿಂದ ತಮ್ಮನ್ನು ತಾವು ಕೊಂದುಕೊಳ್ಳುವ ಆಚರಣೆಗಳು ಭಕ್ತಿ ಪರಾಕಾಷ್ಠೆಯವರೆಗೆ ಕೊಂಡೊಯ್ಯುತ್ತವೆ. ಬೇಡರ ಕಣ್ಣಪ್ಪನಂತೂ ಯಾವುದೇ ಆಸೆ ಆಮಿಷಕ್ಕೆ ಒಳಗಾಗದೆ ತನ್ನ ಕಣ್ಣುಗಳನ್ನು ಕಿತ್ತು ಶಿವನಿಗರ್ಪಿಸುವ ಉಗ್ರ ಭಕ್ತಿಯನ್ನು ಕೈಗೊಳ್ಳುತ್ತಾನೆ. (ಸಂ.೧೨,೧೩,೧೪,೧೫,೧೬,೧೭) ಈ ರೀತಿಯ ಅಂಗಚ್ಛೇದಗಳಂತಹ ಭಕ್ತಿಯು ಅಂದಿನ ಸಮಾಜದಲ್ಲಿ ಸಹಜವಾಗಿತ್ತು ಎಂಬುದು ಗಮನಾರ್ಹವಾಗಿದೆ. ಇಂತಹ ಭಕ್ತಿಯ ಉಲ್ಲೇಖಗಳು ಸಾಮಾಜಿಕ, ಧಾರ್ಮಿಕ ಜೀವನದ ಸಂದರ್ಭಗಳಲ್ಲಿ ದಾರಿದೀಪವಾಗಿ ಅವರ ಧಾರ್ಮಿಕಾಚರಣೆಯಲ್ಲಿ ದೈನಂದಿನ ಬದುಕಿನ ಭಾಗವಾಗಿ ಪ್ರಭಾವ ಬೀರುವಲ್ಲಿ ಯಶಸ್ವಿಯಾಗಿದ್ದವೆಂದು ಭಾವಿಸಬಹುದು

'ಅಣುಮೂರ್ತಿ', 'ಕಡವಳ ನಂಬಿ', 'ಗುಗ್ಗುಳು ಕಲಿಯನಾರು', 'ಅರಿವಳದಾಂಡಾರಿ', 'ಅತಿಭಕ್ತ', 'ಏಣಾದಿನಾಥ', 'ಸೇದಿರಾಜ', 'ಕರವೂರ ಚೋಳ', 'ಕಲಿಯೆಂಬ', 'ಅವನಿದಾಂಡಾರಿ', 'ದಂಗುಳಿಯ ಮಾರಯ್ಯ', ಸುರಂಗಗಣನಾಥ ಈ ಮುಂತಾದ ಶಿವಭಕ್ತರು ತಮ್ಮ ಸರ್ವಸ್ವವನ್ನೇ ಶಿವನಿಗರ್ಪಿಸಿ ಭಕ್ತಿ ಸಾಮ್ರಾಜ್ಯದಲ್ಲಿ ಮೆರೆಯುತ್ತಿದ್ದರು ಎಂಬ ವಿವರಗಳನ್ನು ಕವಿ ಕೊಡುತ್ತಾನೆ. (ಸಂ.೨೫,೨೬)

ಇವರಲ್ಲಿ ಏಣಾದಿನಾಥ ಹಾಗೂ ಸೇದಿರಾಜರೆಂಬ ಭಕ್ತರು ಯುದ್ಧ ಮಾಡುವಾಗ ಕಪಟ ಶಿವಭಕ್ತರನ್ನು ನಿಜಭಕ್ತರೆಂದೇ ಭಾವಿಸಿ ಯುದ್ಧ ನಿಲ್ಲಿಸಿ ಅವರಿಗೆ ವಂದಿಸುವ ಮೂಲಕ ತಮ್ಮ ಸಾವನ್ನು ತಂದುಕೊಳ್ಳುತ್ತಾರೆ. ಈ ಉದಾಹರಣೆ ಅಂದಿನ ಸಮಾಜದಲ್ಲಿ ರೂಢಿಯಲ್ಲಿದ್ದ ಭಕ್ತಿಯಾಚರಣೆಯ ವಿಧವನ್ನು ವಿವರಿಸುತ್ತದೆ. ಭಕ್ತರನ್ನು ಕಂಡರೆ ಅವರನ್ನು ಅತ್ಯಾನಂದದಿಂದ ಆದರಿಸುವ, ಉಪಚರಿಸುವ ಪದ್ಧತಿ ಜಾರಿಯಲ್ಲಿತ್ತೆಂಬ ಸೂಚನೆಯನ್ನು ಕೊಡುತ್ತದೆ. ಸುರಂಗಗಣನಾಥನೆಂಬ ಭಕ್ತನಂತೂ ತನ್ನ ರಾಜ್ಯದಲ್ಲಿ ಭವಿಯೊಬ್ಬನೂ ಉಳಿಯದಂತೆ ಭಕ್ತರನ್ನಾಗಿ ಮಾಡುವ ಭಾಷೆಯನ್ನು ತೊಟ್ಟಿದ್ದನು. ಉಪದೇಶ, ದೃಷ್ಟಗಳಿಗೆ ಒಲಿಯದಿದ್ದರೆ ಧನಕನಕಾದಿಗಳನ್ನು ಕೊಡುವನು. ಅದಕ್ಕೆ ಒಲಿಯದಿದ್ದರೆ ಅವರನ್ನು ಕೊಲ್ಲುವವರಿಗೆ ಈತನ ಲಿಂಗಭಕ್ತಿಯು

ಮುಂದುವರಿಯುತ್ತಿತ್ತು. ಪ್ರತ್ಯಕ್ಷನಾಗಿ ವರ ಕೊಡಲು ಸಿದ್ಧನಾದ ಶಿವನನ್ನು ಕುರಿತು "ನೀ ಕೊಡುವೀ ವರವೆ ಸಾಕು ಲಿಂಗಸನ್ನಿಹಿತಾಂಗನಾಗಿರು ಮಂಗಳೋದಯವಿದುವೆನುತ್ತ ಕುರಂಗಧರ ಶಕಲಾಭರಣನಂ ಭಕ್ತನಂ ಮಾಡಿ" (೨೬: ೫೫-೫೬) ಎಂದು ಹೇಳಿ ಶಿವನನ್ನೇ ಲಿಂಗಧಾರಿಯಾಗಿ ಮಾಡಿದನೆಂದು ಕವಿ ಹೇಳುತ್ತಾನೆ. ಸಮಾಜದ ಜನರನ್ನು ಲಿಂಗಧಾರಿಯನ್ನಾಗಿ ಮಾಡುವ ಪ್ರತಿಜ್ಞೆಯನ್ನು ಹೊತ್ತ ಅನೇಕ ಭಕ್ತರು ಈ ಕಾರ್ಯದಲ್ಲಿ ತೊಡಗಿ ಅದನ್ನೊಂದು ವೀರವ್ರತದಂತೆ ಪಾಲಿಸುತ್ತಿದ್ದರೆಂಬುದು ಈ ಸಂದರ್ಭದಿಂದ ಸ್ಪಷ್ಟವಾಗುತ್ತದೆ. ಆಸೆ-ಆಮಿಷಗಳನ್ನು ಮುಂದೆ ಮಾಡಿ ತಮ್ಮ ಧಾರ್ಮಿಕ ಚಟುವಟಿಕೆಗಳನ್ನು ನಿರಾತಂಕವಾಗಿ ಮುಂದುವರೆಸಿಕೊಂಡು ಬರುವ ಪದ್ಧತಿ ಅಂದು ಜಾರಿಯಲ್ಲಿದ್ದಿತೆಂಬ ಅಂಶ ಈ ಘಟನೆಯಿಂದ ತಿಳಿಯುತ್ತದೆ. (ಇಂದಿಗೂ ಸಹ ಈ ರೀತಿಯ ಧಾರ್ಮಿಕಾಚರಣೆಗಳು ಜಾರಿಯಲ್ಲಿವೆ.)

ಕನ್ನದ ಬೊಮ್ಮಯ್ಯ ಭವಿಗಳ ಮನೆಗೆ ಕನ್ನವಿಕ್ಕಿ ಹಾಗೂ ಮೂರ್ಖನಾಯ್ನಾರು ಎಂಬ ಭಕ್ತ ದ್ಯೂತವಾಡಿ (ಜೂಜಾಡಿ) ಶಿವಭಕ್ತಿಯನ್ನಾಚರಿಸಿದ ಉದಾಹರಣೆಗಳು ಬಸವಪುರಾಣದಲ್ಲಿ ಉಲ್ಲೇಖಗೊಂಡಿವೆ. (ಸಂ.೩೦,೪೪) ಇವೆರಡರ ಹಿಂದಿರುವುದು ವೀರಭಕ್ತಿಯೇ ಎಂಬುದನ್ನು ಲಕ್ಷಿಸಬೇಕು. ಕನ್ನದ ಬೊಮ್ಮಯ್ಯನದು ವಿಚಾರಪೂರ್ಣ ಸಂದರ್ಭ. ಈತನ ಕಾಯಕವೆಂದರೆ ಪಿಸುಣರ ಗೃಹಂಗಳಿಗೆ ತಾನೈದಿ ಕನ್ನವ ಹಾಕುವುದು; ಶಿವಭಕ್ತರ ಮನೆಗಳಿಗೆ ಕನ್ನ ಹಾಕದಿರುವುದು. ಕನ್ನದಿಂದ ತಂದ ಹಣವನ್ನು ಜಂಗಮದಾಸೋಹಕ್ಕೆ ಹರನಿಮಿತ್ತಕ್ಕೆ ವಿನಿಯೋಗಿಸುವುದು. ಇದನ್ನು ಬಸವಣ್ಣನವರು ಅನುಚಿತವೆಂದು ಬಗೆಯದೆ ಆ ಶರಣನಿಗೆ ಪ್ರೋತ್ಸಾಹವಿತ್ತನೆಂದು ಕವಿ ಬಣ್ಣಿಸಿದ್ದಾನೆ. ಕೆಲವು ಪ್ರಸಂಗಗಳಲ್ಲಿ ಅಧರ್ಮವೇ ಧರ್ಮವೆಂದು ತಿಳಿಯಲ್ಪಡುತ್ತದೆ. ಹೀಗಾಗಿ ಬಿಜ್ಜಳನ ಭಂಡಾರಕ್ಕೆ ಕನ್ನವಿಕ್ಕಿದ ಕನ್ನದ ಬೊಮ್ಮಯ್ಯನ ಕೃತ್ಯ ದೂಷಣೀಯವಲ್ಲ ಎಂದು ಬಿಜ್ಜಳನಿಗೆ ಬಸವಣ್ಣನವರು ಹೇಳುತ್ತಾರೆ. ಹಿಂದಿನಿಂದಲೂ ಹೀನವೃತ್ತಿಯಲ್ಲಿದ್ದವರನ್ನು ಸನ್ಮಾರ್ಗಿಗಳನಾಗಿ ಮಾಡಲು ಬಸವಣ್ಣನವರು ಗೈದ ಯತ್ನವನ್ನು ಇಲ್ಲಿ ಕಾಣಬಹುದಾಗಿದೆ.

ಇರಿಭಕ್ತ ಹಾಗೂ ಬಾಹೂರ ಬೊಮ್ಮಯ್ಯಗಳ ಕಥೆಯಲ್ಲಂತೂ ಶಿವಶರಣರ ಧಾರ್ಮಿಕ ನೀತಿ ಮಡುಗಟ್ಟಿ ನಿಂತಿದೆ. (ಸಂ.೨೧) "ಮಾರ್ಮಲೆತರಂ ಸಲೆ ಕೊಲುವುದು; ಅಂಜಿ ಮುಂತೆ ಶರಣೆನಲು ಆಗ ಕಾಯ್ವರು ಕಂತು ಮದನನ ಭಕ್ತಿಪರರು, ಮಹಂತರು". (೨೦:೩೬) ಶಿವಶರಣರು ನೀತಿಯುತವಾಗಿ, ಧರ್ಮದಿಂದ ನಡೆವವರು; ಸತ್ಯ ಮಾರ್ಗದಿಂದ ನಡೆವವರು; ಅವರು ನಡೆದ ಮಾರ್ಗ ಯಾರಾದರೂ ಕುಹಕವಾಡಿದರೆ, ನಿಂದಿಸಿದರೆ, ಪ್ರತಿಭಟಿಸಿದರೆ ಅವರು ಅದನ್ನೆಂದೂ ಸಹಿಸುತ್ತಿರಲ್ಲಿಲ್ಲವೆಂಬುದನ್ನು ಈ ಕಥೆಗಳ ಮೂಲಕ ಕವಿಯು ಮನೋಜ್ಞವಾಗಿ ಕಟ್ಟಿಕೊಡುವ ಪ್ರಯತ್ನ ಮಾಡಿದ್ದಾನೆ. ಇಲ್ಲಿ ಈ ಶಿವಶರಣದ್ವಯರು ಆನೆಯನ್ನು ಕೊಲ್ಲುವ ಸಂದರ್ಭ ನೋಡಿದರೆ ಶಸ್ತ್ರಾಸ್ತ್ರಗಳ ತರಬೇತಿಯಲ್ಲಿ ಪರಿಣಿತರಾಗಿರಬಹುದೆಂದು ಊಹಿಸಬಹುದು.

ಅನ್ಯದೈವದ ಹೆಸರುಗೊಂಡರೆ ಸಾಕು ತಕ್ಷಣವೇ ಅವರನ್ನು ಕೊಂದು ಹಾಕುವ ಸಂದರ್ಭವನ್ನು ಅರಿಯಮನೆಂಬ ಶಿವಭಕ್ತ ಹಾಗೂ ಡೋಹರ ಕಕ್ಕಯ್ಯನೆಂಬ ಶಿವಭಕ್ತರ ಕಥೆಗಳಲ್ಲಿ ಕಾಣಬಹುದಾಗಿದೆ. (ಸಂ.೫೨,೫೫) ಆ ಮೂಲಕ ಇವರು ಶಿವಭಕ್ತಿಯೇ ಶ್ರೇಷ್ಠವೆಂದು ಭಾವಿಸಿ ಅದಕ್ಕೆ ಪೂರಕವಾದ ಚಟುವಟಿಕೆಗಳನ್ನು ಕೈಗೊಂಡ ಉದಾಹರಣೆಯನ್ನು ಕವಿ ವಿವರಿಸುತ್ತಾನೆ. ಅಲ್ಲದೇ ಏಕಾಂತ ರಾಮಯ್ಯ, ಮಡಿವಾಳ ಮಾಚಯ್ಯ, ಶಂಕರ ದಾಸಿಮಯ್ಯ, ಸೊಡ್ಡಳ ಬಾಚರಸ ಮುಂತಾದ ಶರಣರು ತಾವು ನಂಬಿದ ದೈವಕ್ಕೆ, ಲಿಂಗಜಂಗಮಕ್ಕೆ ವೇಳೆವಾಳಿಯಾಗಿ ವೀರ ಬದುಕನ್ನು ಬಾಳಿದ ಅನೇಕ ದೃಷ್ಟಾಂತಗಳು ಪುರಾಣದಲ್ಲಿ ಎಡೆ ಪಡೆದಿವೆ. ಭೌತಿಕ, ಶಾರೀರಿಕ ಸುಖವನ್ನು ತ್ಯಜಿಸಿ, ಅಂಜಿಕೆಯನ್ನು ಮೀರಿ ಈ ಶಿವಭಕ್ತರ ಒಡಬಾಳು ಧರ್ಮಕ್ಕಾಗಿ ಸ್ಥಾಪಿತಗೊಂಡು ಸಮಾಜದಲ್ಲಿ ಅನೂಚಾನವಾಗಿ ನಡೆದುಕೊಂಡು ಬಂದ ಒಡೆಯ –ಸೇವಕ ಸಂಬಂಧ ಇತ್ಯಾದಿ ಮರಣ ಪ್ರಸಂಗಗಳನ್ನು ಪ್ರತಿಭಟಿಸಿರುವುದನ್ನು ಕಾಣಬಹುದಾಗಿದೆ.

ಈ ಎಲ್ಲ ಶಿವಭಕ್ತರ ಧಾರ್ಮಿಕ ನಿಷ್ಠೆ, ತಾವು ನಂಬಿರುವ ದೈವಕ್ಕಾಗಿ ಸಲ್ಲಿಸುವ ತ್ಯಾಗ, ದಿಟ್ಟ ಧಾರ್ಮಿಕಾಚರಣೆಗಳನ್ನು ಕಂಡು ಸಹಜವಾಗಿ ಸಮಾಜದ ಇತರ ವರ್ಗದರು ದಂಗುಬಡಿದಿರಲು ಸಾಕು. ಕೆಲವರು ಶಿವಧರ್ಮದ ಮಹತ್ವವನ್ನು ತಿಳಿದು ಈ ಧರ್ಮಕ್ಕೆ ಸೇರ್ಪಡೆಯಾಗಿರಬೇಕು. ಮಿಕ್ಕುಳಿದವರ ಧಾರ್ಮಿಕಾಚರಣೆಯ ಪ್ರಭಾವ ತಗ್ಗಿರಬೇಕು. ಆದ್ದರಿಂದಲೇ ಶರಣಧರ್ಮ ಎಗ್ಗಿಲ್ಲದೇ ಸಮೃದ್ಧವಾಗಿ ಬೆಳೆಯಲು ಸಾಧ್ಯವಾಗಿರಬೇಕು. ಹೀಗೆ ಪ್ರಾಚೀನ ಮೌಲ್ಯವನ್ನು ಪಲ್ಲಟಿಸುವ ಕ್ರಿಯೆಯಾಗಿ ಶಿವಭಕ್ತರಲ್ಲಿ ಮರಣಕ್ಕೆ ಸಂಬಂಧಿಸಿದ ಉದಾಹರಣೆಗಳು ಪುರಾಣದಲ್ಲಿ ಅಭಿವ್ಯಕ್ತಿ ಪಡೆದಿವೆ.

೩. ಶೈವೇತರ ಧರ್ಮಗಳು : ಸಂಘರ್ಷಗಳು :

ಅ. ವೈಷ್ಣವ ಧರ್ಮ :

ಪ್ರಾಚೀನ ಕಾಲದಿಂದ ಸಮಾಜದಲ್ಲಿ ಅತ್ಯಂತ ಭದ್ರವಾಗಿ ವರ್ಣವ್ಯವಸ್ಥೆಯನ್ನು ಪೋಷಿಸಿಕೊಂಡು ಬಂದದ್ದು ಈ ವೈಷ್ಣವಧರ್ಮ. ಸಮಾಜದ ಪ್ರಧಾನ ಸಂಸ್ಕೃತಿಯ ಅಂಗವಾದ ಇವರು ಉಪಸಂಸ್ಕೃತಿಯ ಜನರನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡು ಶತಮಾನಗಳಿಂದ ಅವರನ್ನು ಶೋಷಣೆಗೆ ಈಡುಮಾಡಿದ್ದು ಇತಿಹಾಸ. ಮೊಟ್ಟಮೊದಲ ಬಾರಿಗೆ ಈ ಪುರೋಹಿತ ಶಕ್ತಿಯ ವಿರುದ್ಧವಾಗಿ ಸಿಡಿದೆದ್ದವರು ಬಸವಾದಿ ಶರಣರು. ಯಜ್ಞಯಾಗಾದಿಗಳಿಗೆ ವರ್ಣಾಶ್ರಮಕ್ಕೆ ಪ್ರಾಮುಖ್ಯತೆ ಕೊಟ್ಟಿದ್ದರಿಂದಾಗಿ ಸಮಾಜದ ಇತರ ಧರ್ಮಗಳು ಮತ್ತು ವೈಷ್ಣವ ಧರ್ಮದ ಮಧ್ಯ ಕಂದಕ ನಿರ್ಮಾಣವಾಯಿತು. ವಿಷ್ಣುವಿನ ಪ್ರಾರ್ಥನೆಯೊಂದಿಗೆ ಪ್ರಾರಂಭವಾಗುವ ಹಲ್ಮಿಡಿ ಶಾಸನದ ಆಧಾರದಿಂದ ಕ್ರಿಸ್ತಶಕದ ಆರಂಭದಲ್ಲಿಯೇ ಈ ಧರ್ಮ ಕರ್ನಾಟಕ ಪ್ರವೇಶಿಸಿರಬೇಕೆಂದು ಎಂ. ಚಿದಾನಂದಮೂರ್ತಿಯವರು ಊಹಿಸುತ್ತಾರೆ. (೨೦೦೮, ಪು.೧೮೨) ಪೌರೋಹಿತ್ಯವನ್ನು ಪ್ರಧಾನ ಉದ್ಯೋಗ ಮಾಡಿಕೊಂಡು ಬದುಕುತ್ತಿದ್ದ ಇವರು ಕ್ಷತ್ರಿಯರಾಜರಲ್ಲಿ ಪ್ರಮುಖ

ಉದ್ಯೋಗಗಳನ್ನು ಕೈಗೊಂಡು ರಾಜನಿಗೆ ನಿರ್ದೇಶನ ಹಾಗೂ ಮಾರ್ಗದರ್ಶನ ಮಾಡುವಲ್ಲಿ ಮಹತ್ವಿಕರಾಗಿ ನಿಯಂತ್ರಣ ಹೊಂದಿದ್ದರು. ರಾಜಾಸ್ಥಾನದ ಅಕ್ಕ ಪಕ್ಕದಲ್ಲಿ ಆಯಕಟ್ಟಿನ ಹುದ್ದೆಗಳಲ್ಲಿದ್ದುದರಿಂದ ಸಹಜವಾಗಿಯೇ ರಾಜನಿಂದ ಪುರಸ್ಕಾರವನ್ನು, ಜನಸಾಮಾನ್ಯರಿಂದ ಘನತೆ ಗೌರವಗಳನ್ನು ಪಡೆದರು. ಮರಣದಂಡನೆಯಂತಹ ಘೋರ ಶಿಕ್ಷೆಗಳಿಂದ, ತೆರಿಗೆಯಂತಹ ಪದ್ಧತಿಗಳಿಂದ ಇವರಿಗೆ ವಿನಾಯಿತಿ ಇತ್ತು.

ರಾಜನಾದವನಿಂದ ಅಗ್ರಹಾರಗಳನ್ನು, ಬ್ರಹ್ಮಪುರಿಗಳಂತಹ ಸ್ಥಳಗಳನ್ನು ಪಡೆದು ಅಲ್ಲಿಯ ಉತ್ಪತ್ತಿಯೆಲ್ಲವನ್ನು ಅನುಭವಿಸುತ್ತ ಸಮೃದ್ಧ ಜೀವನವನ್ನು ಈ ವರ್ಗ ನಡೆಸುತ್ತಿತ್ತು. (ಅದೇ ಪು.೨೩೦) ಬಸವಪುರಾಣದಲ್ಲಿಯ ವಿವರಗಳಿಂದ ಬಹಳಷ್ಟು ವ್ಯಾಪಕವಾಗಿ ಈ ಧರ್ಮ ನೆಲೆ ಕಂಡಿತ್ತೆಂದು ತಿಳಿದು ಬರುತ್ತದೆ. ಹಾಗಾಗಿಯೇ ಕ್ರಾಂತಿಕಾರಿಗಳಾದ, ಸಮಾಜ ಸುಧಾರಣಾವಾದಿಗಳಾದ ಶಿವಭಕ್ತರ ವಿರುದ್ಧ ಅರಸರಿಗೆ ಚಾಡಿ ಹೇಳುತ್ತ ಅವರ ವಿರುದ್ಧ ಸಿಡಿದೇಳುವ ಪ್ರಸಂಗಗಳು ಗೋಚರವಾಗುತ್ತವೆ. ಕಾಯಕಮಹತ್ವವನ್ನು ತಮ್ಮ ಉಸಿರಾಗಿಸಿಕೊಂಡ ಶಿವಶರಣರು, ಶ್ರಮಸಾಧನವು ಶಿವಭಕ್ತರಿಗೆ ಸಲ್ಲಬೇಕೆಂಬ ಪರ್ಯಾಯ ಅರ್ಥವ್ಯವಸ್ಥೆ ರೂಪುಗೊಂಡಾಗ ವೈಷ್ಣವ ಮತಿಯರು ಕೆರಳುವ ಪ್ರಸಂಗಗಳು ಉಲ್ಲೇಖಗೊಂಡಿವೆ. ಈ ಹಿನ್ನಲೆಯಲ್ಲಿಯೇ ಸಂಘರ್ಷಗಳು ನಡೆದು ಇವರ ಚಾಡಿಯಿಂದಾಗಿ ರಾಜನಾದವನು ಎಷ್ಟೋ ಸಂದರ್ಭದಲ್ಲಿ ಪಶ್ಚಾತ್ತಾಪ ಪಡುವ ವಿವರಗಳು ದಾಖಲಾಗಿವೆ. ಶಿವಭಕ್ತರ ಶಕ್ತಿಯನ್ನು ಒರೆಗೆ ಹಚ್ಚಲು ಹೋಗಿ ಎಷ್ಟೋ ಪ್ರಸಂಗಗಳಲ್ಲಿ ಈ ವರ್ಗ ಭಂಗಪಟ್ಟುದುಂಟು. ಶಂಕರದಾಸಿಮಯ್ಯ, (ಸಂ.೨೨) ಸೊಡ್ಡಳ ಬಾಚರಸ, (ಸಂ.೫೨) ಶಿವನಾಗಮಯ್ಯ, ಬಿಬ್ಬಿ ಬಾಚಯ್ಯನ (೫೫: ೨, ೫೪) ಪ್ರಸಂಗಗಳು ಇದಕ್ಕೆ ಜೀವಂತ ಉದಾಹರಣೆಗಳಾಗಿವೆ. ಆದರೂ ಸಹ ಪ್ರಭುಶಕ್ತಿಯ ಮೇಲೆ ನಿಯಂತ್ರಣ ಹೊಂದಿದ ಇವರು ಮೇಲಿಂದ ಮೇಲೆ ಶಿವಭಕ್ತರ ವಿರುದ್ಧ ಆಪಾದನೆ ಮಾಡುವ ಸಂದರ್ಭಗಳನ್ನು ಬಸವಪುರಾಣದಲ್ಲಿ ಕಾಣಬಹುದು.

ವೈಷ್ಣವರ ಪರಂಪರಾಗತ ಬದುಕಿಗೆ ತಮ್ಮ ವೈಶಿಷ್ಟ್ಯಪೂರ್ಣವಾದ ಶಿವಭಕ್ತಿ ಆಚರಣೆಯಿಂದ ಶರಣರು ಪ್ರತಿರೋಧ ಒಡ್ಡಿದರು. ಯಜ್ಞಯಾಗಗಳನ್ನು ಮಾಡುವ, ಗೋದಾನ ಸ್ವೀಕರಿಸುವ, ವೇದಗಳಲ್ಲಿಯ ಕಂದಾಚಾರಗಳನ್ನು ಟೀಕಿಸುವ ಹೀಗೆ ವೈಷ್ಣವರ ಎಲ್ಲ ಅರ್ಥಹೀನ ಚಟುವಟಿಕೆಗಳನ್ನು ಶಿವಶರಣರು ಟೀಕಿಸುತ್ತಿದ್ದರು. ಬಸವಣ್ಣನವರ ವಚನದ ಆಶಯಗಳು ಬಹುಪಾಲು ಬಸವಪುರಾಣದಲ್ಲಿ ಸ್ಥಾನ ಪಡೆದಿವೆ. ಕುಲ ಹಾಗೂ ಜಾತಿ ಕುರಿತಂತೆ ಬಸವಣ್ಣನವರು ಅನೇಕ ಸಂದರ್ಭಗಳಲ್ಲಿ ವಚನಗಳ ಮೂಲಕ ಟೀಕಿಸಿದ್ದುಂಟು. "ಹಾರುವ ಹಾರುವನಪ್ಪೆ ನಾನು– ಸದ್ಭಕ್ತರೆನ್ನವರೆನ್ನವರೆಂದು" (ಸ.ವ.ಸಂ.೧, ವ.೪೬೦) ಹಾಗೂ "ವ್ಯಾಸ ಬೋಯಿತಿಯ ಮಗ, ಮಾರ್ಕಂಡೇಯ ಮಾತಂಗಿಯ ಮಗ" (ಅದೇ ವ.೫೪೯) ಈ ವಚನಗಳನ್ನು ಅತ್ಯಂತ ಉತ್ಸಾಹದಿಂದ ಭೀಮಕವಿಯು ತನ್ನ ಪುರಾಣದಲ್ಲಿ ಹೆಣೆದಿದ್ದಾನೆ. "ಗುರು ಪದಾರ್ಚನೆಗೊಲಿದು ಹಾರುವ ಪರಮ ಶೈವೋನ್ನತಿಗೆ

ಹಾರುವ ಶರಣ ಸ್ವಾನುಭವಕ್ಕೆ ಹಾರುವ ತತ್‌ಪ್ರಸಾದಕ್ಕೆ" (೩:೮೦) ಹಾಗೂ "ಇಳೆಯೊಳೀ ಭೂಸುರರ ಗುರು ಕಬ್ಬಿಗಲಿಗನಲಾ ವ್ಯಾಸನೊಗೆದನು ಕುಲಜರೆಲ್ಲರೊಳಗ್ರಜನ್ಮನು ಋಷಿ ವಸಿಷ್ಠನಲಾ ತೊಳಸಲೇನೂರ್ವನಿಗೆ ಜನಿಸಿದ ಅಲಘಮುನಿ ಮಾತಂಗನೆಂಬಗ್ಗಳೆಯನುದ್ಭವಿಸಿದನಲಾ ಮಾತಂಗಿಯುದರದಲಿ" (೫೮:೧೭) ಎಂದು ಬಸವ ವಚನದ ಆಶಯಗಳನ್ನು ಕವಿಯು ವಿವರಿಸುತ್ತಾನೆ. ಹೀಗೆ ಅನೇಕ ಬಸವ ವಚನದ ಆಶಯಗಳು ಪುರಾಣದಲ್ಲಿ ಸ್ಥಾನ ಪಡೆದದ್ದು ಕಂಡು ಬರುತ್ತದೆ. "ಬಸವಣ್ಣನಿಗೆ ಧಾರ್ಮಿಕ ರಂಗದಲ್ಲಿ ವಿರೋಧವಾಗಿ ನಿಂತುದು ಜೈನ ಬೌದ್ಧ ಧರ್ಮಗಳಲ್ಲ. ವರ್ಣವಿಭೇದಗಳ ಜಾತಿಮತಗಳ ಕೋಟೆಯನ್ನು ಕಟ್ಟಿಕೊಂಡಿದ್ದ ವೈದಿಕ ಧರ್ಮವೇ ಎಂಬುದು ಕಂಡುಬರುತ್ತದೆ" (ತಿಪ್ಪೇರುದ್ರಸ್ವಾಮಿ ಹೆಚ್. ಶ್ರೀ ಬಸವೇಶ್ವರರು, ಪು. ೧೧) ಎಂಬ ಅಭಿಪ್ರಾಯ ಸರಿಯಾದುದೇ. ಹಾಗಾಗಿಯೆ ಬಸವವಚನಗಳಲ್ಲಿ ಎದ್ದು ಕಾಣುವ ವೈದಿಕಧರ್ಮ ವಿರೋಧಿ ಭಾವನೆಗಳು ಬಸವಪುರಾಣದಲ್ಲಿ ಗೋಚರಿಸುತ್ತವೆ.

ಆ. ಜೈನಧರ್ಮ :

ಕ್ರಿ.ಶ. ದ ಆದಿಯ ಶತಮಾನದಿಂದ ಹತ್ತನೆಯ ಶತಮಾನದವರೆಗಿನ ಕಾಲವನ್ನು ಜೈನಧರ್ಮದ ಸಮೃದ್ಧಿಯ ಯುಗವೆನ್ನಬಹುದು. ಕದಂಬರು, ರಾಷ್ಟ್ರಕೂಟರು, ಬಾದಾಮಿ ಚಾಳುಕ್ಯರು, ಇವರೆಲ್ಲ ಜೈನರಲ್ಲದಿದ್ದರೂ ಜೈನಧರ್ಮಕ್ಕೆ ವಿಶೇಷ ಪ್ರೋತ್ಸಾಹವನ್ನಿತ್ತರು. ಇದಕ್ಕೆ ಸಾಕ್ಷಿಯೆಂಬಂತೆ ಹಳಗನ್ನಡ ಸಾಹಿತ್ಯ ಸಮೃದ್ಧವಾಗಿ ರಾಜಾಸ್ಥಾನದಲ್ಲಿ ಬೆಳೆದ ಇತಿಹಾಸ ನಮ್ಮ ಕಣ್ಣ ಮುಂದಿದೆ. ಆದರೆ ಈ ಸುವರ್ಣಯುಗದ ಕಾಲ ಸ್ಥಿರವಾಗಿ ಮುಂದುವರಿಯಲಿಲ್ಲ. ಗಂಗ ಹಾಗೂ ರಾಷ್ಟ್ರಕೂಟ ಮನೆತನಗಳು ನಶಿಸುತ್ತಿದ್ದ ಹಾಗೆ ಜೈನಧರ್ಮದ ಸುವರ್ಣಯುಗ ಮುಗಿಯಿತು. "ಜೈನಧರ್ಮದ ಇಳಿಮುಖಕ್ಕೆ ರಾಜಾಶ್ರಯದ ಜೊತೆಗೆ ಯಕ್ಷೀ ಆರಾಧನೆ, ತಂತ್ರಮಂತ್ರಗಳ ಮೋಹ, ಕೇವಲ ಸಾತ್ವಿಕವಾದ ವೈರಾಗ್ಯವನ್ನೇ ಬೋಧಿಸುವುದು, ಅತಿರೇಕದ ಆಚರಣೆಗಳಾದ ಅಹಿಂಸಾ ತತ್ವ, ಕಠಿಣವಾದ ಸಲ್ಲೇಖನವ್ರತ" (೨೦೦೮, ಪು.೧೯) ಮುಂತಾದವುಗಳು ಕಾರಣವಾಗಿವೆಯೆಂದು ಚಿದಾನಂದಮೂರ್ತಿಯವರು ಗುರುತಿಸುತ್ತಾರೆ.

ಹೀಗೆ ಇಳಿಮುಖವಾಗುತ್ತಿದ್ದ ಜೈನಧರ್ಮಕ್ಕೆ ಮೊತ್ತಮೊದಲು ಪ್ರಬಲವಾದ ಅಡ್ಡಿಯನ್ನೊಡ್ಡಿದವರು ವೀರಶೈವರು. ವೈದಿಕ ಹಾಗೂ ಜೈನಧರ್ಮದ ಮಧ್ಯೆ ಬಹುಪಾಲು ಸಂಘರ್ಷಗಳಿದ್ದಂತೆ ಕಾಣುವುದಿಲ್ಲ. ಅವೆರಡೂ ಪರಸ್ಪರ ಹೊಂದಿಕೊಂಡೆ ಬಾಳಿದವು. ಆದರೆ ಲಕ್ಷಿಸಬೇಕಾದ ಸಂಗತಿಯೆಂದರೆ ಬಸವಣ್ಣನವರ ವಚನಗಳಲ್ಲಿ ವ್ಯಕ್ತವಾದ ವೈದಿಕ ವಿರೋಧಿ ಭಾವನೆಗಳು ಜೈನರ ಮಧ್ಯ ವ್ಯಕ್ತವಾಗಿಲ್ಲ. ಬಸವಪುರಾಣದಲ್ಲಿ ಕಂಡು ಬರುವಂತೆ ಜೈನ ವಿರೋಧಿ ಸಂಘರ್ಷಗಳು ಶಿವಶರಣರ ವಚನಗಳಲ್ಲಿ ಕಂಡುಬರದೇ ಇರುವುದು ಆಶ್ಚರ್ಯವನ್ನುಂಟುಮಾಡುತ್ತದೆ. ಜೈನಧರ್ಮದ ಕುರಿತು ಬಸವಣ್ಣನವರ ಮನೋಧರ್ಮ ಕೇವಲ ಮೂರು ವಚನಗಳಲ್ಲಿ

ಪ್ರಕಟವಾದದ್ದನ್ನು ಕುರಿತು ಚರ್ಚಿಸುತ್ತ "ಪುರಾಣಗಳಲ್ಲಿ ಈ ಕುರಿತು ಬರುವ ಸಂಘರ್ಷ ವಿಚಾರಗಳು ಅತಿಶಯೋಕ್ತಿಯಿಂದ ಕೂಡಿವೆ" (ಹಳಕಟ್ಟಿ ಸಮಗ್ರ ಸಾಹಿತ್ಯ ಸಂಪುಟ-೧೧, ಪು.೯೪-೦೪) ಎಂದು ಫ.ಗು ಹಳಕಟ್ಟಿಯವರು ಅಭಿಪ್ರಾಯ ಪಡುತ್ತಾರೆ. "ವಿಷ್ಣುವ ಪೂಜಿಸಿ ಮುಡುಹ ಸುಡಿಸಿಕೊಂಬುದ ಕಂಡೆ , ಜಿನನ ಪೂಜಿಸಿ ಬತ್ತಲೆಯಿಪ್ಪುದ ಕಂಡೆ"/, "ಭಕ್ತರ ಕಂಡರೆ ಬೋಳಪ್ಪಿರಯ್ಯಾ ಸವಣರ ಕಂಡರೆ ಬತ್ತಲೆಯಪ್ಪಿರಯ್ಯಾ", "ಹರನ ಕೊರಳಲಿಪ್ಪ ಕರೋಟಿಮಾಲೆಯ" (ಸ.ವ.ಸಂ.೧ ವ. ೫೬೯, ೧೦೩, ೫೩೮) ಎಂಬ ಬಸವಣ್ಣನವರ ಕೇವಲ ಮೂರು ವಚನಗಳು ಜೈನರನ್ನು ಕುರಿತು ಹೇಳಿದುವಾಗಿವೆ. ಆದರೆ ಅಬ್ಬಲೂರಿನ ಒಂದು ಶಾಸನ ಏಕಾಂತದ ರಾಮಯ್ಯನು ಜೈನಬಸದಿಯನ್ನೊಡೆದು ಶೈವ ವಿಗ್ರಹಗಳನ್ನು ಪ್ರತಿಷ್ಠಾಪಿಸಿದ ವಿಷಯವನ್ನು ಪ್ರಸ್ತಾಪಿಸಿರುವುದಲ್ಲದೆ ಅವನು ಬಸದಿಯ ಯಾವ ಯಾವ ಸ್ಥಳಗಳಲ್ಲಿ ಯಾವ ಯಾವ ಸಾಹಸ ಕಾರ್ಯಗಳನ್ನು ಮಾಡಿದ ಎಂಬುದನ್ನು ಶಿಲ್ಪದಲ್ಲಿ ಚಿತ್ರಿಸಿ ಕೆಳಗೆ ಆ ವಿಷಯಗಳನ್ನು ಕೊರೆಯಲಾಗಿದೆ ಎಂಬುದನ್ನು ಸಾರಿ ಹೇಳುತ್ತಿದೆ. (EI.V-P.213. XXIX, P.140, C.1200 AD) ಈ ಶಾಸನದ ವಿಷಯೋಲ್ಲೇಖದಿಂದ ಜೈನ ಹಾಗೂ ವೀರಶೈವ ಧರ್ಮದ ಮಧ್ಯ ಸಂಘರ್ಷ ಅತ್ಯಂತ ತೀವ್ರವಾಗಿದ್ದಿತೆಂದು ತಿಳಿಯುತ್ತದೆ. ಬಹುಶಃ ಈ ಕುರಿತ ವಿವರಗಳು ಪುರಾಣಗಳಲ್ಲಿಯೂ ಉಲ್ಲೇಖಗೊಂಡದ್ದನ್ನು ನೋಡಿದರೆ ವೀರಶೈವ ಹಾಗೂ ಜೈನಧರ್ಮದ ಮಧ್ಯ ಕಲಹಗಳು ಸಂಭವಿಸುತ್ತಿದ್ದವೆಂದು ಭಾವಿಸಬಹುದು. ಈ ಕಲಹಗಳಿಂದ ಜೈನ ಬಸದಿಗಳನ್ನು ನಾಶ ಮಾಡಿ ಶಿವಲಿಂಗವನ್ನು ಸ್ಥಾಪಿಸುವ, ಜೈನಧರ್ಮ ತ್ಯಜಿಸಿ ಶಿವಧರ್ಮ ಸೇರುವ ಪ್ರಕ್ರಿಯೆಯವರೆಗೆ ಮುಂದುವರಿದ ಘಟನೆಗಳನ್ನು ಪುರಾಣದಲ್ಲಿ ಕಾಣಬಹುದು.

'ಅಬ್ಬಲೂರು', 'ಜಂಬೂರು', 'ತಿರುವನಾಲೂರು', 'ಆರೂರು', 'ಮಧುರೆ', 'ಚಿಲ್ಲತ್ತಿರುವದೂರು', 'ಹೊಟಲಕೆರೆ', 'ಮಾರುಡಿಗೆ', 'ಪುಲಿಗೆರೆ', 'ಪರಿವಳಿಗೆ' ಈ ಊರುಗಳಲ್ಲಿ ಅನೇಕ ಬಸದಿಗಳಿದ್ದವು. ಶಿವಭಕ್ತರ ಮತ್ತು ಜೈನರ ಮಧ್ಯ ನಡೆದ ಧರ್ಮಸಂಘರ್ಷದಿಂದಾಗಿ ಅವುಗಳೆಲ್ಲ ಶಿವದೇವಾಲಯಗಳಾಗಿ ಪರಿವರ್ತನೆಗೊಂಡು ಅಲ್ಲಿಯ ಜೈನರು ಶಿವಧರ್ಮವನ್ನಪ್ಪುವ ಚಟುವಟಿಕೆಗಳು ಜಾಗೃತವಾಗಿದ್ದ ಉದಾಹರಣೆಗಳು ಪುರಾಣಗಳಲ್ಲಿ ದಾಖಲಾಗಿವೆ.

ಜೈನಧರ್ಮೀಯರೂ ಸಹ ಧರ್ಮಾಂಧರಾಗಿ ವರ್ತಿಸಿದ, ಶಿವಭಕ್ತರ ವಿರುದ್ಧ ಅರಸನಿಗೆ ದೂರು ಹೇಳಿದ ಪ್ರಸಂಗಗಳು ಕಂಡು ಬರುತ್ತವೆ. ಇವುಗಳಿಂದ ಶಿವಭಕ್ತರು ಮತ್ತು ಜೈನರ ಮಧ್ಯ ವಾಗ್ವಾದಗಳು ಜೀವಂತವಾಗಿದ್ದು ತಮ್ಮ ತಮ್ಮ ಮತಧರ್ಮ ಪ್ರತಿಪಾದನೆಗಾಗಿ ಉಗ್ರ ಚಟುವಟಿಕೆಗಳನ್ನು ಈ ಎರಡೂ ಧರ್ಮದವರು ಕೈಗೊಂಡ ವಿವರಗಳು ದೊರೆಯುತ್ತವೆ.

೩. ಬೌದ್ಧ ಮತ್ತಿತರ ಧರ್ಮಗಳು :

ಕರ್ನಾಟಕದಲ್ಲಿ ಕ್ರಿ.ಶ. ಮೂರನೇ ಶತಮಾನದಿಂದ ಹದಿನಾರನೇ ಶತಮಾನದವರೆಗೆ ಬೌದ್ಧಧರ್ಮ ಅಸ್ಥಿತ್ವದಲ್ಲಿತ್ತು ಎಂಬುದಾಗಿ ಎಂ. ಚಿದಾನಂದಮೂರ್ತಿಯವರು ಶಾಸನಗಳ ಆಧಾರದೊಂದಿಗೆ ವಿವರಿಸುತ್ತಾರೆ. (೨೦೦೮, ಪು.೧೩೭) ಕನ್ನಡ ಸಾಹಿತ್ಯಕ್ಕೆ ಇವರ ಒಂದೂ ಕೃತಿಗಳು ದೊರೆಯದಿರುವ ಕಾರಣ ಈ ಧರ್ಮ ಕರ್ನಾಟಕದಲ್ಲಿ ಪ್ರಭಾವಯುತವಾಗಿರಲಿಲ್ಲವೆಂದೇ ಹೇಳಬಹುದು. ಒಂದೆರಡು ಸಂದರ್ಭದಲ್ಲಿ ಮಾತ್ರ ಬೌದ್ಧ ಧರ್ಮದ ಉಲ್ಲೇಖಗಳು ದೊರೆಯತ್ತವಾದ್ದರಿಂದ ವೈಷ್ಣವ ಹಾಗೂ ಜೈನಧರ್ಮಗಳೇ ವೀರಶೈವ ಧರ್ಮಕ್ಕೆ ಪ್ರಬಲ ಪ್ರತಿಸ್ಪರ್ಧಿಯಾಗಿದ್ದವೆಂದು ಹೇಳಬಹುದು. "ಸವಣರಂ ತಲೆಗಳನರಿದು ವೈಷ್ಣವರ ಘೋಣಾಗ್ರಗಳಂಮಿಗೆ ಚಿವುಟಿ ಬೌದ್ಧರುಗಳಂ ಮದೋದ್ಧತಿಯೆಂಬ ಕಾನನವ ಸವರಿ ಅದ್ವೈತರನಪಹರಿಸಿ ತವಿಸಿ ಚಾರ್ವಾಕರನವನಿಯೊಳು ಶಿವನ ಭಕ್ತಿಯಂ ತಾಂ ಪ್ರತಿಷ್ಠಿಸಿ ತೇಜವಂ ಮೆಜೆದು" (೫೨:೧೦) ಇಲ್ಲಿ ಶಿವಶರಣರು ಸಮಾಜದ ವಿವಿಧ ಧರ್ಮಗಳ ವಿರುದ್ಧ ಹೋರಾಡಿ ಶಿವಮತ ಸ್ಥಾಪನೆಯ ಹಂಬಲ ತೀರಿಸಿಕೊಳ್ಳುವಲ್ಲಿ ಯಶಸ್ವಿಯಾಗಿ ವಿಜಯ ಪಡೆದರೆಂಬ ಅಂಶ ಗೊತ್ತಾಗುತ್ತದೆ. ಆದರೆ 'ಚಾರ್ವಾಕ' ಎಂಬ ಶಬ್ದದ ಉಲ್ಲೇಖ ನೋಡಿದರೆ ದುಷ್ಟ ಆಚರಣೆಗಳನ್ನು ರೂಢಿಸಿಕೊಂಡು ಸಮಾಜದಲ್ಲಿ ಜಾರಿಯಲ್ಲಿದ್ದ ಇನ್ನಿತರ ಶಿವೇತರ ಧರ್ಮಗಳ ವಿರುದ್ಧವೂ ಹೋರಾಡಿರಬೇಕೆಂದು ಊಹಿಸಲು ಅವಕಾಶವಿದೆ.

ಸಂಘರ್ಷಗಳು :

ಜಗತ್ತಿನ ಯಾವುದೇ ಧರ್ಮದ ಉದ್ದೇಶ ಸಮಾಜದ ಸರ್ವಸದಸ್ಯರನ್ನು ತನ್ನ ತೆಕ್ಕೆಗೆ ತೆಗೆದುಕೊಂಡು ಸಾಂತ್ವನ, ನೆಮ್ಮದಿ ಬದುಕುವ ಭರವಸೆ ಕೊಡುವುದು. ಆದರೆ ಈ ಧರ್ಮಗಳಲ್ಲಿ 'ಜಾತಿ' ಎಂಬ ಸೀಮಿತ ಭಾವನೆ ತಲೆದೋರಿದರೆ ಸಾಕು ಅದು ಪ್ರತ್ಯೇಕತೆಯನ್ನು ಕಾಯ್ದುಕೊಡು ಧರ್ಮದ ವೈಶಾಲ್ಯತೆಯನ್ನು ಧಿಕ್ಕರಿಸಿ ಸಂಕುಚಿತವಾಗಿ ಬಿಡುತ್ತದೆ. ಸಹಜವಾಗಿಯೇ ಧರ್ಮಾಧರ್ಮಗಳ ಅನುಚರರಲ್ಲಿ ದ್ವೇಷ, ಹಗೆತನಗಳು, ಸಂಘರ್ಷಗಳು ಏರ್ಪಟ್ಟು ಅಶಾಂತಿ ಮನೆಮಾಡುತ್ತದೆ. ಮನಸ್ಸು ಮನಸ್ಸುಗಳ ಮಧ್ಯ ಮಧುರ ಭಾವನೆಗಳು ಕಾಣೆಯಾಗಿ ಧರ್ಮ ಕಲುಷಿತವಾಗಿ ಬಿಡುತ್ತದೆ. ಆ ಕೊಳೆಯನ್ನು ತೊಳೆಯಲು, ಮನಸ್ಸುಗಳ ಮಲಿನ ತಿಳಿಯಾಗಿಸಲು ಒಬ್ಬ ಮಹಿಮಾಪುರುಷರು ಹುಟ್ಟಿ ಬರಬೇಕು. ಬುದ್ಧ ಬಸವ, ಅಂಬೇಡ್ಕರ್, ಲೋಹಿಯಾ, ಗಾಂಧಿ, ಪೆರಿಯಾರ್ ಮುಂತಾದ ದಾರ್ಶನಿಕರು ಅವತರಿಸಿ ಈ ರೀತಿಯ ಸಮಾಜ ಶುದ್ಧೀಕರಣ ಕೆಲಸವನ್ನೇ ಮಾಡಿದ್ದಾರೆ. ಅದು ಅಷ್ಟು ಸುಲಭದ ಕೆಲಸವಲ್ಲ. ಪಟ್ಟಭದ್ರ ಹಿತಾಸಕ್ತಿಗಳ ವಿರುದ್ಧ ಹೋರಾಡುವುದು ಎಷ್ಟು ಕಷ್ಟವೆಂಬುದನ್ನು ಇತಿಹಾಸದ ಘಟನೆಗಳು ಸಾರಿ ಹೇಳುತ್ತವೆ. ಹೀಗೆ ಧರ್ಮಕ್ಕೆ ಜಡತೆ ಆವರಿಸಿದಾಗ ಅದನ್ನು ಚಲನಶೀಲಗೊಳಿಸುವ ಪ್ರಯತ್ನ ಹನ್ನೆರಡನೇ

ಶತಮಾನದಲ್ಲಾಯಿತು. ಬಸವಾದಿ ಶರಣರಿಂದ ಈ ಕಾರ್ಯ ಪರಿಣಾಮಕಾರಿಯಾಗಿ ನಡೆಯಿತು. ಶರಣರು ತಮ್ಮ ಅನುಭಾವ ಸಾಹಿತ್ಯದ ಮೂಲಕ "ಮನುಷ್ಯನು ಸಮಾಜ ಜೀವಿಯಾಗಿರುವುದರಿಂದ ಪರಸ್ಪರವಾಗಿ ಬಾಂಧವ್ಯವನ್ನು ಬೆಳೆಸಿರಿ. ಅನ್ಯರಿಗೆ ಹಂಗಾಗಿ ಬಾಳದೆ ಕಾಯಕವನ್ನು ಮಾಡಿ ನೀವು ಉಂಡು ಅನ್ಯರನ್ನು ಉಣಿಸಿರಿ. ಪ್ರಪಂಚದ ನರನಾರಿಯರನ್ನು ಸಮವಾಗಿ ಭಾವಿಸಿರಿ. ಐಹಿಕ ಸುಖಸಾಧನಗಳಾದ ಸಿರಿಸಂಪತ್ತುಗಳನ್ನು ಆಧ್ಯಾತ್ಮಿಕ ಸಾಧನೆಗೆ ಸಹಾಯ ಮಾಡಿಕೊಳ್ಳಿರಿ. ನಿಮ್ಮ ನಿಮ್ಮ ಧರ್ಮ, ಸಂಪ್ರದಾಯ ಸರಿಯಾದ ರೀತಿಯಲ್ಲಿ ತಿಳಿದು ನಡೆಯಿರಿ. ಯಾವಾಗಲೂ ನಿಮ್ಮ ಬಾಳಿನ ಹೆಗ್ಗುರಿಯು ಧರ್ಮವೇ ಆಗಿರಲಿ. ತ್ರಿಕರಣಗಳಲ್ಲಿಯೂ ಪಾಪಕ್ಕೆ ಇಂಬು ಕೊಡಬೇಡಿರಿ. ಪ್ರತಿಯೊಂದು ಕಾರ್ಯವನ್ನು ದೇವಸಾಕ್ಷಿಯಾಗಿ ಮಾಡಿರಿ. ಜಗತ್ತು ಭಗವಂತನದು. ಜೀವನವು ಅವನ ಅಧೀನವಾದುದಾದರೂ ಸ್ವಪ್ರಯತ್ನವನ್ನು ಮರೆಯಬೇಡಿರಿ. ಬಾಳಿರಿ; ತೇಜಸ್ಸಿನಿಂದ ಬಾಳಿರಿ; ನಗೆಮೊಗದಿಂದ ಬಾಳಿರಿ". (ಸಂಭಾವನ ಪು.೨೭೫-೭೬) ಹೀಗೆ ಅತ್ಯಂತ ಮೌಲಿಕ ಮಾತುಗಳನ್ನು, ಸಾರ್ವಕಾಲಿಕ, ಲೋಕೋತ್ತರ ಸತ್ಯಗಳನ್ನು ಶರಣರು ನುಡಿದಿದ್ದಾರೆ. ಶರಣರ ಎಲ್ಲ ವಚನಗಳು ಸಮಾಜದ ಅಂಕುಡೊಂಕುಗಳನ್ನು, ಓರೆಕೋರೆಗಳನ್ನು ತಿದ್ದಲು ಆ ಕ್ಷಣವೇ ಹೊರಟ, ರಸಸ್ಯಂದಿಯಾದ, ಆಪ್ತಗೆಳೆಯನಂತೆ ತಿದ್ದುವ ಸಾಹಿತ್ಯ ಪ್ರಕಾರಗಳು ಎಂಬುದನ್ನು ಕಂಡುಕೊಳ್ಳಬಹುದು. ಸಹಜವಾಗಿಯೇ ಇಂತಹ ಆದರ್ಶ ಹಾಗೂ ಮೌಲ್ಯವನ್ನು ಸಮಾಜದಲ್ಲಿ ಬಿತ್ತುವ ಸಂದರ್ಭದಲ್ಲಿ ಅನೇಕ ಅಡೆತಡೆಗಳನ್ನು ಅವರು ಅನುಭವಿಸಬೇಕಾಯಿತು. ತಮ್ಮ ಕಣ್ಣೆದುರಿಗೆ 'ಧರ್ಮಗ್ಲಾನಿ' ನಡೆದಾಗ ಅದನ್ನು ತಹಬಂದಿಗೆ ತರುವ ಇಚ್ಛಾಶಕ್ತಿಯ ದ್ಯೋತಕವಾಗಿ ಸಮಾಜದ ಇತರರೊಂದಿಗೆ ಸಂಘರ್ಷಕ್ಕಿಳಿಯಬೇಕಾಯಿತು. ಈ ಸಂಘರ್ಷಗಳನ್ನು 'ಆಂತರಿಕ ಹೋರಾಟ', 'ಸ್ವಸಮುದಾಯಿಕ ಹೋರಾಟ' ಹಾಗೂ 'ಅನ್ಯಸಮುದಾಯಿಕ ಹೋರಾಟ'ಗಳೆಂದು ಮೂರು ಪ್ರಕಾರಗಳನ್ನಾಗಿ ವಿಂಗಡಿಸಬಹುದು. (೧೯೯೯, ಪು.೧೭೦-೭೨)

ಈ. ಆಂತರಿಕ ಹೋರಾಟ :

ವ್ಯಕ್ತಿಗತವಾಗಿ ಮನುಷ್ಯ ಪರಿಶುದ್ಧನಾಗದ ಹೊರತು ಸಮಾಜದ ಉದ್ಧಾರ ಸಾಧ್ಯವಿಲ್ಲ ಎಂಬ ಸತ್ಯವನ್ನು ಕಂಡುಕೊಂಡ ಶಿವಶರಣರು ಅಂತರಂಗಿಕ ಶುದ್ಧತೆಯ ಕಡೆಗೆ ಆದ್ಯ ಗಮನ ಕೊಟ್ಟರು. ಮೌಲಿಕವಾದ ಬದುಕು ಭಕ್ತನದು. ಅಂತರಂಗ ಮತ್ತು ಬಹಿರಂಗ ಶುದ್ಧಿಗೆ ಒತ್ತು ಕೊಟ್ಟ ಇವರು ತಾವು ನುಡಿದಂತೆ ನಡೆದರು. ವಚನಗಳಲ್ಲಿಯ ಅನೇಕ ವಿಷಯಗಳು ಇದನ್ನು ಸ್ಪಷ್ಟಪಡಿಸುತ್ತವೆ. ಬಸವಪುರಾಣದಲ್ಲಿ ಬರುವ ಅನೇಕ ಶಿವಶರಣರು ಆಚರಿಸುವ ವ್ರತ, ನೇಮ, ಲಿಂಗ ಜಂಗಮಭಕ್ತಿ, ಕಾಯಕ ಮುಂತಾದ ಚಟುವಟಿಕೆಗಳಿಂದ ತನ್ನ ಆರಾಧ್ಯ ದೈವಕ್ಕೆ ಹತ್ತಿರವಾಗುವ, ಆಪ್ತರಾಗಲು ತುಡಿಯುವ ಸಂದರ್ಭಗಳನ್ನು ಗಮನಿಸಬಹುದು. ಉಪನಯನ ಧಿಕ್ಕರಿಸುವ ಸಂದರ್ಭದಲ್ಲಿ ಬಸವಣ್ಣನವರು ಹೇಳುವ "ತೊಳಸದಿರು ಬ್ರಾಹ್ಮ್ಯವನ್ನು ಭಕ್ತಿಸ್ಥಳವು ಬೇಜೆಯೇ ಮಾರ್ಗವಹುದಿದು ತಿಳಿದು ನೋಡಾ ದರ್ಶಂಗಳೆನಲ್ಕೆ ತಾಂ ಕೆಲವು

ಒಲವಳಾಯೆನುತಧಮ ಮನುಜರು ಕೆಲಬರುಲಿದಪರಜೆಯದವರೊಳಗೆ ಮುನ್ನೊಂದೊಂದಜಿಲಿ ಬೆರಸಿಪ್ಪ ಪರಿಯೆಂತೊ" (೩:೭೧) ಎಂಬ ಮಾತುಗಳು ಇಡೀ ಮನುಕುಲ ಒಂದೆಂಬ ಭಾವನೆಯನ್ನು ಕಟ್ಟಿ ಕೊಡುತ್ತವೆ. ಶಿವನ ಸರ್ವಾಂತರ್ಯಾಮಿತ್ವವನ್ನು ಪ್ರತಿಪಾದಿಸುವಾಗ "ತಿಲದೊಳಿಹ ತೈಲದವೊಲಿಂದನದೊಳಿಹ ಪಾವಕನಂತೆ ಕನ್ನಡಿಯೊಳಿಹ ನೆಳಲವೊಲಕ್ಷಿಯೊಳಗಿಹ ರೂಪಿನಂದದಲಿ" (೫೦: ೩೨) ಎಂದು ದೇವರ ದಾಸಿಮಯ್ಯಗಳು ಹೇಳುತ್ತಾರೆ. ಅಂತರಂಗ ಶುದ್ಧಿಯಿಂದಲೇ ತಾವು ಕಂಡುಕೊಂಡ ಸತ್ಯವನ್ನು ಹೀಗೆ ಪ್ರತಿಪಾದಿಸುತ್ತಾರೆ. ಸೊಡ್ಡಳ ಬಾಚರಸನ ದೈವಭಕ್ತಿ, ಶಿವನಾಗಮಯ್ಯಗಳ ಶಿವಭಕ್ತಿ, ಮಡಿವಾಳ ಮಾಚಯ್ಯನ ಕಾಯಕನಿಷ್ಠೆ ಇವೆಲ್ಲ ವ್ಯಕ್ತಿಗತವಾಗಿ ಸಾಧ್ಯವಾಗಿ ಸಮಷ್ಟಿಯ ಮೇಲೆ ಪ್ರಭಾವ ಬೀರಿದ ಉದಾಹರಣೆಗಳಾಗಿವೆ. ಆದ್ದರಿಂದಲೇ ಸಮಾಜದ ಬಹುಜನ ವರ್ಗ ಇವರನ್ನು ಅನುಕರಿಸಿರುವುದರಲ್ಲಿ ಸಂದೇಹವೇ ಇಲ್ಲ. ತಮ್ಮ ನಿರ್ಮಲ ಭಾಕ್ತಿಕ ಬದುಕಿನಿಂದ ಸಮಾಜದ ಇತರರಿಗೆ ಶಿವಶರಣರು ಮಾದರಿಯಾದರು.

ಉ. ಸ್ವ ಸಮುದಾಯಿಕ ಹೋರಾಟ :

ಶಿವಭಕ್ತರ ಮಧ್ಯೆಯೇ ಇರುವ ಕೆಲವು ವ್ಯತ್ಯಾಸಗಳನ್ನು ಬಗೆಹರಿಸಿಕೊಳ್ಳುವ, ತಮ್ಮ ಮತದಲ್ಲಿನ ಲೋಪ ದೋಷಗಳನ್ನು ತಿದ್ದಿಕೊಳ್ಳುವ ಮೂಲಕ, ಸ್ವವಿಮರ್ಶೆಮಾಡಿಕೊಳ್ಳುವ ಮೂಲಕ ತಮ್ಮಲ್ಲಿನ ಅವಗುಣಗಳನ್ನು ದೂರ ಮಾಡಿಕೊಳ್ಳುವ ಕ್ರಿಯೆಗಳು ಸ್ವಸಮುದಾಯಿಕ ಹೋರಾಟಗಳಲ್ಲಿ ಕಂಡುಬರುತ್ತವೆ. ಆ ಮೂಲಕ ತಮ್ಮ ಮತವೇ ಶ್ರೇಷ್ಠವೆಂದು ಸಮುದಾಯಕ್ಕೆ ತೋರಿಸುವ ಪ್ರಯತ್ನಗಳು ನಡೆದದ್ದು ಪುರಾಣದಲ್ಲಿ ಕಂಡುಬರುತ್ತದೆ.

ಬಸವಣ್ಣನವರು ವಿಪ್ರಾಚಾರಗಳನ್ನು ಪ್ರತಿಭಟಿಸಿ ಇಷ್ಟಲಿಂಗಧಾರಿಯಾಗಿ ಹೊರಬರುವ ಪ್ರಸಂಗವು ಶೈವವನ್ನು ವೀರಶೈವವನ್ನಾಗಿಸುವ ಕ್ರಿಯೆಯಲ್ಲಿ ಒಂದಾಗಿದೆ. ತಾವು ಜನಿಸಿದ ಮತದಲ್ಲಿಯೇ ತುಂಬಿತುಳುಕುತ್ತಿದ್ದ ಅಂಧಶ್ರದ್ಧೆಗಳನ್ನು ನಿರ್ಭೀತಿಯಿಂದ ಹೀಗಳೆಯುತ್ತಾರೆ. ಉಪನಯನದ ಸಂದರ್ಭದಲ್ಲಿ "ತೋಜಿಪಟ್ಟ ಬ್ರಾಹ್ಮ್ಯವೆಂಬುದು ಬೇಜೆ ದರ್ಶನವೀಶಭಕ್ತಿಯು ಬೇಜೆಯಿಂತಿದನೆರಡುಮಂ ಕೂಡಿ ನುಡಿಯದಿರು ಬೇಜೆ ದೈವವು ಬೇಜೆ ಮಂತ್ರವು ಬೇಜೆ ಗುರುವುಂ ಬೇಜೆ ವೇಷವು ಬೇಜೆ ಬೇಜೆ ಧ್ಯಾನಬಾಹ್ಯಾಕ್ರಿಯೆಗಳಾಚಾರ" (೩:೮೧) ಎಂದು ಹೇಳುವ ಮಾತುಗಳನ್ನು ಗಮನಿಸಬೇಕು. 'ಕೋಟಿಕೊಟ್ಟರೂ ಕುಲ ಸಿಗುವುದಿಲ್ಲ' ಎಂಬ ಮಾತಿರುವಾಗ ಉತ್ತಮ ಕುಲದಲ್ಲಿ ಜನಿಸಿದರೂ ಆ ಧರ್ಮದಲ್ಲಿಯ ಸಮಷ್ಟಿಹಿತ ಗುಣ ಕೊರತೆಯಿಂದಾಗಿ ಅದನ್ನು ತ್ಯಜಿಸುವ ಎದೆಗಾರಿಕೆಯನ್ನು ಬಸವಣ್ಣನವರು ತೋರುತ್ತಾರೆ. "ತಂದೆ ನಿನ್ನೊಡಲಂ ಭವಾಳಿಗೆ ತಂದೆಯಕ್ಕಟ ನೀನದೆಲ್ಲಿಯ ತಂದೆಯೆನ್ನಗಿನ್ನೀಶಭಕ್ತರೆ ತಂದೆ ತಾಯಿಗಳು" ಎಂದು ಹೇಳಿ ಜನ್ಮಕುಲದ ಹಂಗನ್ನು ಕಳೆದುಕೊಂಡು ಶೋಷಿತರ ಪರವಾಗಿ ತೆರೆದುಕೊಳ್ಳುವ ಪ್ರಯತ್ನ ಅಪರೂಪ ಹಾಗೂ ಅಪೂರ್ವವಾದುದು.

ಕಣ್ಣಪ್ಪನ ಮುಗ್ಧ ಭಕ್ತಿಯನ್ನು ಸಹಿಸದೇ ದೇವಸ್ಥಾನದ ಪೂಜಾರಿಯೊಬ್ಬನು ಕರುಬಿದ ಘಟನೆ ಬಸವಪುರಾಣದಲ್ಲಿ ಉಕ್ತವಾಗಿದೆ. (ಸಂ.೧೭) ಭಕ್ತಿಯಿಂದ ಅರ್ಪಿಸಿದ ಏನನ್ನಾದರೂ ದೇವ ಸ್ವೀಕರಿಸುವನೆಂಬುದಕ್ಕೆ ಈ ಕಥೆ ಉದಾಹರಣೆಯಾಗಿದೆ. ಅಲ್ಲದೇ ಭಕ್ತ ಹಾಗೂ ದೇವರ ಮಧ್ಯ 'ಪೂಜಾರಿ'ಯ ಮಧ್ಯಸ್ಥಿಕೆಯನ್ನು ವಿರೋಧಿಸುವ ರೀತಿಯಲ್ಲಿ ವ್ಯಕ್ತಗೊಂಡಿದೆ. ಅಂದಿನ ದಿನಗಳಲ್ಲಿಯೂ ಇಂತಹ ಪೂಜಾರಿ ವರ್ಗದವರಿಂದ ಸ್ವಮತದವರು ಶೋಷಣೆಗೊಳಗಾಗುತ್ತಿದ್ದರೆಂದು ಈ ಸಂದರ್ಭ ತಿಳಿಸುತ್ತದೆ.

ಬಸವಣ್ಣನವರೊಂದು ದಿನ 'ಬೇಡುವವರಿಲ್ಲದೆ ಬಡವಾದೆ' ನೆಂಬ ಗೀತವನ್ನು ಹಾಡಲು ಮಡಿವಾಳ ಮಾಚಯ್ಯ ಇದರಿಂದ ಕುಪಿತಗೊಂಡು ಬಸವಣ್ಣನವರ ಅಹಂಕಾರವಿಳಿಸಲು ಮುಂದಾಗುತ್ತಾನೆ. "ಎಲವೊ ಅಧಮಾ ಕೊಬ್ಬಿದೆಯಲಾ ಮಲಹರಾರ್ಚಕರಧಮರೇ ನೀ ಬಲು ಧನಿಕನೇ ಬೇಳ್ಪರಿಲ್ಲದೆ ಹೇಂಗೆ ಬಡವಾದೈ". (೨೧:೫೪) ಎಂದು ಪ್ರಶ್ನಿಸಿ ಅವರ ಮನದ ಮಲಿನವನ್ನು ಕಳೆಯುತ್ತಾನೆ. ಧನಮದದಿಂದ ಬಸವಣ್ಣನವರು ಮೈಮರೆತ ಕ್ಷಣದಲ್ಲಿ ಮಡಿವಾಳಯ್ಯಗಳು ಕೈಯಿಂದ ನೀರನ್ನು ಸಿಂಪಡಿಸಿ ನವರತ್ನಗಳನ್ನಾಗಿ ಪವಾಡ ಮಾಡಿದ ಘಟನೆಯೊಂದಿಗೆ ದೋಷ ತಿದ್ದಿಕೊಂಡು ಬಸವಣ್ಣನಂತಹವರೂ ಸಹ ಪರೀಕ್ಷೆಗೆ ಒಳಗಾದ ಪ್ರಯತ್ನ ನಡೆದುದನ್ನು ಕವಿ ಹೇಳುತ್ತಾನೆ. ಇಲ್ಲಿಯ ಪವಾಡದ ಆವರಣವನ್ನು ತೆಗೆದರೆ ಶಿವಭಕ್ತರು ತಪ್ಪು ಮಾಡಿದಾಗ ಯಾರು ಬೇಕಾದರೂ ತಿದ್ದಿ ಸರಿಪಡಿಸಬಹುದಾಗಿತ್ತೆಂಬುದಕ್ಕೆ ಈ ಉದಾಹರಣೆ ಸಾಕ್ಷಿಯಾಗಿದೆ. ಶಿವಭಕ್ತರಿಗೆ ಸಂಗ್ರಹ ಬುದ್ಧಿ ಕೂಡದು ಎಂಬುದಕ್ಕೂ ಸಹ ಈ ಘಟನೆ ತೆರೆದುಕೊಳ್ಳುತ್ತದೆ. ಶಿವಶರಣರು ಹೀಗೆ ಪ್ರಾಂಜಲ ಮನಸ್ಸಿನಿಂದ ತಮ್ಮ ದೋಷಗಳನ್ನು ತಿದ್ದಿಕೊಳ್ಳುತ್ತಿದ್ದರು.

ತವನಿಧಿಯ ದಾಸಿಮಯ್ಯನೆಂದೇ ಪ್ರಖ್ಯಾತನಾದ ಜೇಡರ ದಾಸಿಮಯ್ಯನೆಂಬ ಶಿವಶರಣನ ಅಹಂಕಾರವನ್ನು ಶಂಕರದಾಸಿಯೆಂಬ ಶಿವಶರಣನು ತೊಡೆದು ಆತನಿಗೆ ವಿವೇಕೋದಯವಾಗುವಂತೆ ಮಾಡಿದ ಉಲ್ಲೇಖವನ್ನು ಕವಿ ಕೊಡುತ್ತಾನೆ. (ಸಂ.೨೨) ಭಕ್ತನಾದವನಿಗೆ ವಿನಯವೇ ಭೂಷಣ ಎಂಬ ಆಚಾರಸೂತ್ರವೊಂದು ಈ ಕಥೆಯಲ್ಲಿ ಪ್ರಕಟಗೊಂಡರೂ ಶಿವಶರಣರು ಎಂದೂ ಬೇಡುವವರಲ್ಲ ಎಂಬ ತತ್ವವನ್ನು ತಿಳಿಸುವ ನಿಟ್ಟಿನಲ್ಲಿ ವಿವರಗೊಂಡಿದೆ. ಜೇಡರ ದಾಸಿಮಯ್ಯನು ತನ್ನ ತಪ್ಪನ್ನು ಅರಿತು ಬೇಡಿಕೊಂಡು ಮತ್ತೆ ತವನಿಧಿಯನ್ನು ಪಡೆಯುತ್ತಾನೆ ಎಂದು ಕವಿ ವಿವರಿಸುವುದರ ಹಿಂದೆ ಶಿವಶರಣರು ಪವಾಡಪುರುಷರಾಗಿ ಸರ್ವಜನಾದರಣೀಯರಾಗಿದ್ದರು ಎಂಬುದನ್ನು ಕವಿ ಹೇಳುತ್ತಾನೆ. "ಅಹಂಕರಿಸಿದಡೆ ಸದಮಳೋತ್ತಮಭಕ್ತಿ ದೊರಕೊಳುವುದೆ ವಿಚಾರಿಸೆ ಭಕ್ತನೆಂಬಂಗಷ್ಟಮದವುಂಟೆ" (೨೨:೪೨) ಎಂಬ ಮಾತುಗಳು ಭಕ್ತನಾದವನು ಅಷ್ಟಮದಗಳಿಂದ ಹೊರತಾಗಿರಬೇಕೆಂಬ ನೀತಿಯನ್ನು ಹೇಳುತ್ತವೆ.

ಭಕ್ತ ಸಿರಿಯಾಳನು ತನ್ನ ಭಕ್ತಿಯ ಮಹಿಮೆಯ ಫಲವಾಗಿ ಅಹಂಕಾರದಿಂದ ನಡೆದುಕೊಳ್ಳುತ್ತಾನೆ. ಆತನಿಗೆ ಬುದ್ಧಿ ಕಲಿಸಬೇಕೆಂದು ಸಾಕ್ಷಾತ್ ಶಿವನೆ ಬಂದು ನಿಂಬಿಯಕ್ಕ

ಮತ್ತು ಹಲಾಯುಧನ ನಿರ್ವ್ಯಾಜ ಭಕ್ತಿಯನ್ನು ವಿವರಿಸಿ ಸಿರಿಯಾಳನ ಅಹಂಕಾರವುಡುಗುವಂತೆ ಮಾಡುವ ಉಲ್ಲೇಖವನ್ನು ಕವಿ ವಿವರಿಸುತ್ತಾನೆ. (೨೩:೨೪) ಶಿವಸಮುದಾಯದಲ್ಲಿ ಆಂಶಿಕವಾಗಿ ಭವಿತನ ಹೆಚ್ಚಿದಾಗ ಸಾಕ್ಷಾತ್ ಶಿವನೆ ಬಂದು ಅದರ ನಿವಾರಣೆಗಾಗಿ ಮುಂದಾಗುವ, ಭಕ್ತರನ್ನು ಉದ್ಧಾರ ಮಾಡುವ ಪರಿಯನ್ನು ಗಮನಿಸಬೇಕು.

ಶಿವಮತಸ್ಥರಲ್ಲಿ ಮಾಹೇಶ್ವರರಿಗೆ ಅತ್ಯಂತ ಹೆಚ್ಚಿನ ಗೌರವಾದರಗಳಿದ್ದ ಬಗ್ಗೆ ಪುರಾಣದಲ್ಲಿ ಉಲ್ಲೇಖ ಕಂಡುಬರುತ್ತದೆ. ನಂಬಿಯೆಂಬ ಶಿವಭಕ್ತನು ತಿರುವಾರೂರ ವಾಲ್ಮೀಕೇಶ್ವರನ ಮಂದಿರದೊಳಗೆ ಮಾಹೇಶ್ವರರನ್ನು ಲೆಕ್ಕಿಸದೇ, ಶರಣೆನ್ನದೆ ಒಳಗೆ ಹೋದನು. ಇದನ್ನು ಗಮನಿಸಿದ ಮೆರೆಮಿಂಡದೇವನೆಂಬ ಭಕ್ತನು ನಂಬಿಯ ಅಹಂಕಾರ ಕಂಡು ಸಿಡಿಮಿಡಿಗೊಳ್ಳುತ್ತಾನೆ. ಈತ ನಂಬಿ, ಈತನ ಹಾಡಿಗೋ, ಭಕ್ತಿಗೋ ಮೆಚ್ಚಿ ವಾಲ್ಮೀಕೇಶ್ವರ ನಿತ್ಯ ಸಾವಿರಹೊನ್ನು ಕೊಡುತ್ತಾನೆ. ಶಿವ ಈತನಿಗೆ ಕುಂಟಣಿಯಾಗಿರುವನು ಎಂಬುದನ್ನು ಅಲ್ಲಿದ್ದ ಭಕ್ತರು ಹೇಳುತ್ತಾರೆ. ಮಾಹೇಶ್ವರರನ್ನೇ ನಿರ್ಲಕ್ಷಿಸಿದವನು ಎಂತಹ ಭಕ್ತನವನು? ಎಂದು ಮೆರೆಮಿಂಡದೇವನು "ನಂಬಿಗಿಂಬಿಯ ನಂಬಿಗೊಲಿದಿಹ ಶಂಭುಗಿಂಭು ಭಕ್ತಾಡಂಬರಕೆ ಹೊಜಹೊಜಗು" (೨೫:೨೨) ಎಂದು ಡಂಗುರ ಹೊಡೆಯಿಸಿ ಭಕ್ತ ಸಮೂಹದಿಂದ ಶಿವನನ್ನು ಹಾಗೂ ನಂಬಿಯಣ್ಣನನ್ನು ಹೊರಗಿಡುತ್ತಾರೆ. ಬಹುಶಃ ಈ ಘಟನೆಯು ಭಕ್ತರು ಯಾವ ಕಾರಣಕ್ಕೂ ಅಹಂಕಾರಕ್ಕೆಡೆಕೊಡಬಾರದು, ಮಾಹೇಶ್ವರರನ್ನು ನಿರ್ಲಕ್ಷಿಸಬಾರದು, ಹಾಗೆ ಮಾಡಿದ್ದಾದರೆ ಅಂತವರನ್ನು ಭಕ್ತ ಸಮೂಹ ದೂರೀಕರಿಸುತ್ತಿತ್ತು, ತಿರಸ್ಕರಿಸುತ್ತಿತ್ತು, ಬಹಿಷ್ಕರಿಸುತ್ತಿತ್ತು ಎಂಬ ಮಹತ್ವದ ಅಂಶಗಳನ್ನು ಕವಿ ಹೇಳುತ್ತಾನೆ.

ಸೌರಾಷ್ಟ್ರ ಸೋಮೇಶ್ವರನ ನಿಶ್ಚಲ ಭಕ್ತನಾದ ಓಹಿಲನು ಅಕಾಲದಲ್ಲಿ ಬಂದು ಶಿವನಿಗೆ ಮಹಿಷಾಕ್ಷಿಗುಗ್ಗುಳದ ಧೂಪವಿಕ್ಕುತ್ತಿದ್ದನು. ಇದನ್ನು ಸಹಿಸದ ಗೌಳಪೂಜಾರಿಗಳೆಂಬುವರು ಆತನ ವ್ರತಭಂಗಕ್ಕಾಗಿ ಅನೇಕ ಪ್ರಯತ್ನಗಳನ್ನು ಮಾಡುತ್ತಾರೆ. ಈ ಅಡೆತಡೆಯನ್ನು ಲೆಕ್ಕಿಸದೆ ತನ್ನ ನಿರ್ಮಲ ಭಕ್ತಿಯಿಂದ ಶಿವನನ್ನು ಮೆಚ್ಚಿಸಿ ಸಾಯುಜ್ಯ ಪದವಿಯನ್ನು ಪಡೆಯುವ ಉಲ್ಲೇಖ ಪುರಾಣದಲ್ಲಿ ಬರುತ್ತದೆ. ಈ ಪ್ರಸಂಗದಿಂದ ಶಿವಭಕ್ತರಲ್ಲಿಯೇ ಕೆಲವೊಂದು ಸಂದರ್ಭಗಳಲ್ಲಿ ಭಕ್ತಿಯಾಚರಣೆಯ ಮೇಲುಕೀಳುಗಳು ವ್ಯಕ್ತವಾಗಿ ಅವರಲ್ಲಿ ವೈಮನಸ್ಸುಗಳು ಮೂಡಲು ಸಾಧ್ಯವಾಗುತ್ತಿತ್ತೆಂದು ಊಹಿಸಲವಕಾಶವಿದೆ.

ಸ್ವಸಮುದಾಯಿಕ ಶಿವಭಕ್ತರ ಮಧ್ಯ ನಡೆಯುವ ಈ ವಾದ-ವಿವಾದ, ತರ್ಕ ಜಿಜ್ಞಾಸೆಗಳಿಂದ ತಮಗರಿವಿಲ್ಲದೆ ಓರೆ ಕೋರೆಗಳನ್ನು ತಿದ್ದಿಕೊಳ್ಳುವುದಕ್ಕೆ ಸಹಾಯವಾಗಿರಬೇಕು. ಇಂತಹ ಘಟನೆಗಳಿಂದ ಶುದ್ಧ ಶಿವಭಕ್ತಿಯು ಪ್ರಕಾಶಿಸಿರಬೇಕು. ಪರಿಣಾಮವಾಗಿ ಶಿವಮತ ಇನ್ನಷ್ಟು ಉತ್ಕರ್ಷವಾಗಿ, ಜಾಜ್ವಲ್ಯಮಾನವಾಗಿ ಬೆಳೆಯಲು ಇಂತಹ ಘಟನಾವಳಿಗಳು ಇಂಬು ಕೊಟ್ಟಿರಬೇಕು.

ಊ. ಅನ್ಯಸಮುದಾಯಿಕ ಹೋರಾಟ :

ಅನ್ಯಸಮುದಾಯಿಕ ಹೋರಾಟದಲ್ಲಿ ಶಿವಶರಣರಿಗೆ ಪ್ರಬಲವಾದ ಎದುರಾಳಿಗಳು ಬಿಜ್ಜಳನ್ನೊಳಗೊಂಡಂತೆ ವೈಷ್ಣವರು ಮತ್ತು ಜೈನರು. ತಾವು ಬಾಳುವ ಧರ್ಮ, ಸಂಸ್ಕೃತಿಗೆ ಆಘಾತವಾದಾಗ ಸಹಜವಾಗಿಯೇ ಶಿವಶರಣರು ಪ್ರತಿಭಟಿಸುತ್ತಾರೆ. ವ್ಯಕ್ತಿಗತವಾಗಿ ಮತ್ತು ಸಾಮೂಹಿಕವಾಗಿ ಪ್ರತಿರೋಧ ಒಡ್ಡಿ ಶಿವಾಧಿಕ್ಯ ಸ್ಥಾಪಿಸಿದ ಚಟುವಟಿಕೆಗಳು ಬಸವಪುರಾಣದಲ್ಲಿ ಕಂಡುಬರುತ್ತವೆ. ತಮ್ಮ ಪ್ರಾಣದ ಹಂಗು ತೊರೆದು ಧಾರ್ಮಿಕ ಸಂಘರ್ಷಗಳಲ್ಲಿ ಪಾಲ್ಗೊಳ್ಳುವ ಮೂಲಕ ಆತ್ಮಸಂತೃಪ್ತಿಯನ್ನು ಪಡೆಯುವ ಅನೇಕ ಶಿವಶರಣರ ಉಲ್ಲೇಖವನ್ನು ಕವಿ ಕೊಡುತ್ತಾನೆ.

ಸದಾ ವೈಷ್ಣವರ ಪಕ್ಷಪಾತಿಯಾಗಿಯೇ ನಡೆದುಕೊಳ್ಳುವ ಬಿಜ್ಜಳನು ಸಹಿತ ವೈಷ್ಣವರು ಭಂಗಪಟ್ಟ ಘಟನೆಯೊಂದು ಬಸವಪುರಾಣದಲ್ಲಿ ಉಲ್ಲೇಖಗೊಂಡಿದೆ. ಲಿಂಗಜಂಗಮ ಪೂಜಾಸಕ್ತ, ಪರದೈವ ಪರಸಮಯಭೀಷಣನಾದ ಮಹಾಭಕ್ತೋತ್ತಮನಾದ ಸೊಡ್ಡಳ ಬಾಚರಸ ಜೈನ, ಬೌದ್ಧ, ವೈಷ್ಣವ, ಅದ್ವೈತ, ಚಾರ್ವಾಕರನ್ನು ಗೆಲಿದು ಶಿವನೊಬ್ಬನೆ ದೈವವೆಂದು ಸಾರಿದವನಾಗಿದ್ದನು. ಇಂತವನ ಭಕ್ತಿಗೆ ಒಲಿದ ಸೌರಾಷ್ಟ್ರ ಸೋಮೇಶ್ವರನು ಕೊಠ್ಠಾರದಲ್ಲಿಯೇ ಆವಿರ್ಭವಿಸಿದನು. ಬಿಜ್ಜಳ ಪರವಾದಿಗಳೊಡನೆ ಸೇರಿ ಗೋವಿಂದ ದೇವಾಲಯವನ್ನು ಪ್ರತಾಪನಾರಾಯಣಪುರದ ನಡುವೆ ಕಟ್ಟಿಸಿದ ಸಂದರ್ಭದಲ್ಲಿ ಈ ಉತ್ಸವದಲ್ಲಿ ಪಾಲ್ಗೊಳ್ಳಲು ಬಾಚರಸರು ಬಂದಿರಲಿಲ್ಲ. ಕಾರಣ ಕೇಳಿದ ಬಿಜ್ಜಳನಿಗೆ ಬಸವಣ್ಣನವರು "ನಿಮ್ಮ ಊಳಿಗವ ತಪ್ಪಿಸಿದಡೆ ತಪ್ಪು; ;ಅನ್ಯದೈವದ ಮನೆಗೆ ಬಾರರು; ಅದು ತಪ್ಪಲ್ಲ , ಸೋಮೇಶ್ವರನಿಗೆ ಅವನು ವೇಳೆವಾಳಿ ಕೈಗೊಂಡಿದ್ದ ನಿನಗೆ ಜೋಳವಾಳಿ ಮಾತ್ರ" (೫೭:೩೫) ಎಂದು ಸಮರ್ಥಿಸಿಕೊಳ್ಳುತ್ತಾರೆ. ರಾಜನ ಆಗ್ರಹಕ್ಕೆ ಕಟ್ಟುಬಿದ್ದು ಬಂದ ಬಾಚರಸರು ಗೋವಿಂದಪ್ರತಿಮೆಯನ್ನು ನೋಡಿದ ತಕ್ಷಣವೇ ಅದು ಕರಗಿ ಬೆಂದು ಹೋದ ಘಟನೆಯನ್ನು ಕವಿ ವಿವರಿಸುತ್ತಾನೆ. (೫೩:೮೦) ಈ ಘಟನೆ ಪವಾಡದಂತೆ ಕಂಡರೂ ಶಿವಭಕ್ತರು ಹಾಗೂ ವೈಷ್ಣವ ಸಮುದಾಯದವರ ಮಧ್ಯ ಹೊಗೆಯಾಡುತ್ತಿದ್ದ ಧಾರ್ಮಿಕ ಸಂಘರ್ಷಕ್ಕೆ ಸಾಕ್ಷಿಯಾಗಿದೆ.

ಈ ಸಂದರ್ಭದ ಪೂರ್ವದಲ್ಲಿ ಬಸವಣ್ಣನವರು ಬಿಜ್ಜಳನಿಗೆ ಪುರಾತನರ ವೀರಭಕ್ತಿಯ ಮಹಿಮೆಯನ್ನು ಕುರಿತು ಹೇಳುತ್ತಾರೆ. ಅರಿಯಮನೆಂಬ ಶಿವಭಕ್ತ ಬ್ರಾಹ್ಮಣನನ್ನು ಸಟ್ಟುಗದಿಂದ ಹೊಡೆದು ಕೊಂದದ್ದು, ಕನಸಿನಲ್ಲಿ ಬೌದ್ಧನೊಬ್ಬ ಸೋಂಕಿದನೆಂದು ಕಾವಲಿಯ ಮೇಲೆ ಸುಟ್ಟುಕೊಳ್ಳಲುದ್ಯುಕ್ತನಾಗಿದ್ದು ಶಿವಲೆಂಕ ಮಂಚಯ್ಯನ ಆದೇಶದಂತೆ ಗದಾಧರಮೂರ್ತಿಯು ಗುಡಿಯಿಂದ ಹೊರಬಿದ್ದು ಶಿವನಿಗೆ ವಂದಿಸಿದ್ದು, (ಸಂ.೫೩) ಈ ಎಲ್ಲ ದೃಷ್ಟಾಂತಗಳು ಅಂದಿನ ಸಮಾಜದಲ್ಲಿ ತೀವ್ರ ರೀತಿಯ ತರ್ಕ, ವಾದ, ವಿವಾದಗಳೊಂದಿಗೆ ಸ್ವಮತ ಪ್ರತಿಪಾದನೆಯೊಂದಿಗೆ ಪರಮತ ಖಂಡನೆ ವ್ಯಾಪಕವಾಗಿ ನಡೆಯುತ್ತಿತ್ತೆಂದು ಹೇಳಬಹುದು.

ಶಿವನಾಗಮಯ್ಯಗಳ ಪ್ರಸಂಗವಂತೂ ಅನ್ಯಸಮುದಾಯದ ಹೋರಾಟಕ್ಕೆ ಕೇಂದ್ರಬಿಂದುವಂತಿದೆ. ಬ್ರಾಹ್ಮಣರ ಪರವಾಗಿದ್ದ ಬಿಜ್ಜಳ ಒಂದು ಕಡೆಯಾದರೆ, ಅಸ್ಪೃಶ್ಯರಾದರೂ ಮಹಾಶರಣರಾಗಿರ್ದವರ ಕಡೆ ಬಸವಣ್ಣನವರು ನಿಂತು ವಾದ ಮಾಡುವ, ಶಿವಮತವೇ ಶ್ರೇಷ್ಠ ಎಂದು ವಾದಿಸುವ ಪ್ರಸಂಗಗಳನ್ನು ಕವಿ ಇಲ್ಲಿ ನಿರೂಪಿಸುತ್ತಾನೆ. ಏಣಿಶ್ರೇಣಿಗಳಿಂದ ಕೂಡಿದ ಅಂದಿನ ಸಮಾಜದ ನಾಡಿಮಿಡಿತವೇ ಇಲ್ಲಿ ವ್ಯಕ್ತವಾಗಿದೆಯೆನ್ನಬಹುದು.

ಹಿಂದುಳಿದ ಜಾತಿಯವನಾಗಿ ಹುಟ್ಟಿ ಶಿವಭಕ್ತೋತ್ತಮನಾದ ಶಿವನಾಗಮಯ್ಯನನ್ನು ಬಸವಣ್ಣನವರು ಪ್ರಶಂಸಿಸಿ, ಅವನೊಡನೆ ಕೂಡಿರ್ದು; ಕೂಡುಂಡುದರ ವಿವರಗಳು ಇಲ್ಲಿ ಉಕ್ತವಾಗಿವೆ. ಬಸವಣ್ಣನವರ ಅಸ್ಪೃಶ್ಯೋದ್ಧಾರದ ನಿಲುವು ಇಲ್ಲಿ ವ್ಯಕ್ತವಾಗಿದೆ. (೫೪:೫೫,೫೬) ವೈಷ್ಣವರು ಬಿಜ್ಜಳನಿಗೆ, ಬಸವಣ್ಣನವರು ಹಾಗೂ ಶಿವನಾಗಮಯ್ಯನ ಸಂಬಂಧದಿಂದಾಗಿ ವರ್ಣವ್ಯವಸ್ಥೆ, ಧರ್ಮ, ನೀತಿ ಹಾಳಾದುವು ಎಂದು ಚಾಡಿ ಹೇಳಿ ಅದರಿಂದ ಪಾಪ ಹೆಚ್ಚಾಯಿತೆಂದೂ, ಅವರ ಕುಲ ಕೆಟ್ಟಿತೆಂದು ವಾದಿಸಿದಾಗ, ಆ ವಾದವನ್ನು ಸಾಧಾರವಾಗಿ ಖಂಡಿಸಿ ಹಾವಿನಹಾಳ ಕಲ್ಲಯ್ಯನು ನಾಯಿಯಿಂದ ವೇದವನ್ನು ನುಡಿಸಿದನೆಂದು ಹೇಳುತ್ತಾನೆ. ವೈಷ್ಣವರನ್ನು ನಾಯಿಗೆ ಸಾಮಾನ್ಯೀಕರಿಸುವ ಕಲ್ಲಯ್ಯನ ಮನೋಭಾವ ಗಮನಾರ್ಹ. ಮುಂದುವರೆದು ಬಸವಣ್ಣನವರು ಬಿಬ್ಬಿ ಬಾಚಯ್ಯಗಳು ತೋರಿದ ಶಿವಭಕ್ತರ ಪ್ರಸಾದಮಹಿಮೆಯನ್ನು, ಮಾದರ ಧೂಳಯ್ಯನ ಮನೆಯ ಬಚ್ಚಲು ನೀರ ಮಹಿಮೆಯನ್ನು, ಸಾಮವೇದಿಯು ಶ್ವಪಚಯ್ಯದೇವನ ಅಡಿಗಳಿಗೆರಗಿದುದನ್ನು ಹೊಗಳಿದ್ದಾನೆ. ಕೆಂಭಾವಿ ಭೋಗಯ್ಯ ಹಾಗೂ ಗುಡ್ಡವ್ವೆಯ ಉದಾಹರಣೆಗಳು ಶಿವಭಕ್ತರು ಹಾಗೂ ವೈಷ್ಣವಭಕ್ತರ ಮಧ್ಯ ನಡೆದ ಸಂಘರ್ಷಗಳು ತಾರಕಕ್ಕೇರಿದ ಉಲ್ಲೇಖಗಳು ದೊರೆಯುತ್ತವೆ. ಅಂತಿಮವಾಗಿ ಶಿವನಾಗಮಯ್ಯನ ಕರಾಂಗುಲಿಯಿಂದ ಹಾಲು ಸುರಿಯುವ ಪವಾಡದೊಂದಿಗೆ ಈ ಸಂಬಂಧ ತಾರ್ಕಿಕ ಅಂತ್ಯ ಕಾಣುತ್ತದೆ. ಪವಾಡರಹಿತವಾದರೆ ಈ ಸಂದರ್ಭ ವರ್ಣವ್ಯವಸ್ಥೆಯನ್ನು ಪೋಷಿಸಿಕೊಂಡು ಬಂದ ಬಿಜ್ಜಳ ಹಾಗೂ ಇದನ್ನು ಪೋಷಿಸಿಕೊಂಡು ಬಂದ ವೈಷ್ಣವರ ವಿರುದ್ಧ ನಡೆದ ಪ್ರಭಾವಶಾಲಿಯಾದ ವಾಕ್ಸಮರವೆನ್ನಬಹುದು.

ವೈಷ್ಣವ ಧರ್ಮದ ವಿರುದ್ಧ ನಡೆದ ಸಂಘರ್ಷಗಳು,ತರ್ಕ, ವಾಗ್ಯುದ್ಧ , ಪವಾಡದೊಂದಿಗೆ ಅಂತ್ಯಗೊಂಡರೆ ಜೈನರ ವಿರುದ್ಧ ನಡೆದ ಸಂಘರ್ಷಗಳು ಶಿವಭಕ್ತರ ಪ್ರಾಣಾರ್ಪಣೆ ಹಾಗೂ ವಿರೋಧಿಗಳ ಪ್ರಾಣಾಹುತಿಯವರೆಗೂ ಮುಂದುವರಿದು ಬಸದಿಗಳ ನಾಶ, ಶಿವಲಿಂಗ ಪ್ರತಿಷ್ಠಾಪನೆಯಂತಹ ಚಟುವಟಿಕೆಗಳು ಸಕ್ರಿಯವಾಗಿದ್ದ ಉದಾಹರಣೆಗಳು ದೊರೆಯುತ್ತವೆ.

'ಅಬ್ಬಲೂರು', 'ಜಂಬೂರು', 'ತಿರುವನಾಲೂರು', 'ಆರೂರು', 'ಶ್ರೀಕಾಳಿ', 'ಮಧುರೆ', 'ಚಿಲ್ಲತ್ತಿರವೂರು', 'ಕೋವೂರು', 'ಹೊಟಲಕೆರೆ', 'ಮಾರುಡಿಗೆ', 'ಪುಲಿಗೆರೆ', 'ಪರಿವಳಿಗೆ' ಈ ಎಲ್ಲ ಪ್ರದೇಶಗಳು ಜೈನಧರ್ಮ ಆಳವಾಗಿ ಬೇರೂರಿದ್ದ ಪ್ರದೇಶಗಳಾಗಿದ್ದವು. ಏಕಾಂತರಾಮಿಯು

ಜೈನರೊಡನೆ ಸ್ಪರ್ಧಿಸಿ ಹೋರಾಡಿದ ವಿವರಗಳು ಶಾಸನದಲ್ಲಿಯ ನೈಜ ಚಿತ್ರದಂತೆ ಪುರಾಣದಲ್ಲಿ ವರ್ಣಿತವಾಗಿವೆ. ಅಬ್ಬಲೂರಿನ ಶಿವಾಲಯದಲ್ಲಿ ಏಕಾಂತ ರಾಮಯ್ಯ ಕುಳಿತಾಗ ಜೈನನೊಬ್ಬನು ಕೆರಹುಗಾಲಿನಿಂದ ಶಿವಾಲಯ ಪ್ರವೇಶಿಸುತ್ತಾನೆ. ಸ್ವಾಭಿಮಾನಿ ರಾಮಯ್ಯ ವ್ಯಗ್ರವಾಗಿ "ಎಲೋ ಸ್ರವಣ ಇದು ಧರ್ಮವೇ? ಕಾಲ ಕೆರಹುಗಳು ತೆಗೆಯದಂತಿರ್ದಡೆಲೊ ನಿನ್ನ ಬೀಳಹೊಡೆವೆನು ಸಂದುಸಂದಿಗೆ ಸೀಳಿದಪೆನ್" (೪೮:೯,೧೦) ಎಂದು ಘರ್ಜಿಸುತ್ತಾನೆ. ಪ್ರತಿಯಾಗಿ ಜೈನನು "ನಿನ್ನ ಮಸ್ತಕವಂ ಪಜಿದುಕೊಂಡು ನಾಗಕಂಕಣನಿಂದೆ ಪಡೆ ದಿಟವಾಗಿ ಭಕ್ತನು ನೀನೆ ಜಗದೊಳು" (೪೮:೧೨) ಎಂದು ಸವಾಲನ್ನು ಹಾಕುತ್ತಾನೆ. ಈ ಸವಾಲಿಗೆ ಪ್ರತ್ಯುತ್ತರವಾಗಿ ಏಕಾಂತರಾಮಿಯು ಪ್ರತಿಜ್ಞೆಗೈಯುತ್ತ ತನ್ನ ಶಿರ ಕತ್ತರಿಸಿಕೊಂಡು ಏಳು ದಿನಕ್ಕೆ ಪಡೆಯುತ್ತಾನೆ. ಈ ಅದ್ಭುತಕ್ಕೆ ಬಿಜ್ಜಳನನ್ನೊಳಗೊಂಡು ಕಲ್ಯಾಣದ ಸಮಸ್ತರು ಸಾಕ್ಷಿಯಾದರೆಂದು ಕವಿ ಬರೆಯುತ್ತಾನೆ. ಧಾರ್ಮಿಕ ವಿಜಯದ ಸಂಕೇತವಾಗಿ ಜೈನರೆಲ್ಲ ಬಂದು ಶಿವಗಣವೃಂದಕ್ಕೆ ಶರಣಾಗಿ ಅವರ ಹಣೆಗಳಿಗೆ ನಂದಿಮುದ್ರೆಯನ್ನೊತ್ತಿದರೆಂದು ವಿವರಿಸುತ್ತಾನೆ.ಧಾರ್ಮಿಕ ವಿಜಯೋತ್ಸವದ ಪ್ರತೀಕವಾಗಿ ಎಂಬಂತೆ "ಬಸದಿಗಳನಧಿಕಾರವದಿ ಹಿರಿದೊಡಕುಟ್ಟಿ ಜಿನರೆಂಬವರ ತಲೆಗಳನೆಲ್ಲವಂ ಮುಟಿಮುಜಿದು ನುಗ್ಗೊತ್ತಿ ಅವಿರತಂ ಕಲ್ಯಾಣದೊಳಗೆಣಿಸುವರೆ ಜಿನನಂ ಬಸದಿಯೆಂಬಿ ಜವಳಿನುಡಿಯಿಲ್ಲೆನಲು ಹುಡಿ ಹುಡಿ ಮಾಡಿ" ಎಂದು ಜಿನ ಬಸದಿಗಳನ್ನು ಸರ್ವನಾಶ ಮಾಡಿ ಶಿವಲಿಂಗಸ್ಥಾಪನೆಯು ಸಮರೋಪಾದಿಯಲ್ಲಿ ನಡೆದ ಬಗೆಯನ್ನು ಕವಿ ವಿವರಿಸುತ್ತಾನೆ.

ಇಲ್ಲಿ ಉಕ್ತವಾಗಿರುವ ಏಕಾಂತರಾಮಯ್ಯನು ಜಿನಸಂಹಾರ ಸತ್ರದ ನಾಯಕನಾಗಿರಬೇಕು. ಇವನ ಮುಂದಾಳತ್ವದಲ್ಲಿಯೇ ಈ ರೀತಿಯ ವಾಸ್ತುಭಂಜನೆ, ಮೂರ್ತಿಭಂಜನೆ, ಮತಪರಿವರ್ತನೆ, ಬಸದಿಪರಿವರ್ತನೆ, ಲಿಂಗಪ್ರತಿಷ್ಠಾಪನೆಯಲ್ಲಿ ಅಂತ್ಯಗೊಂಡದ್ದು ಕಂಡುಬರುತ್ತದೆ.

ಮಾರುಡಿಗೆಯಲ್ಲಿ ಸಾವಿರದ ಏಳನೂರು ಬಸದಿಗಳಿದ್ದು ಒಂದೇ ಒಂದು ಶಿವದೇವಾಲಯವಿದ್ದಿತು. ಬಹುಶಃ ಈ ಸಂಖ್ಯೆ ಅತಿಶಯೋಕ್ತಿಯಿಂದ ಕೂಡಿದೆ. ಒಂದೇ ಊರಿನಲ್ಲೆ ಇಷ್ಟು ಸಂಖ್ಯೆಯ ಬಸದಿಗಳಿರುವುದು ಅಸಾಧ್ಯ. ಜೈನಧರ್ಮದ ದಟ್ಟ ಪ್ರಭಾವವಿರುವುದಂತೂ ಸ್ಪಷ್ಟ ಆ ಊರಿನ ಜೈನರು ದೇವಸ್ಥಾನದ ಪೂಜಾರಿಯನ್ನು ದಂಡಿಸುತ್ತಾರೆ. ಬಹು ಸಂಖ್ಯಾತರಾದ ಜೈನರು ಹೀಗೆ ಪೂಜಾರಿಯನ್ನು ದಂಡಿಸಿದ ವಿಷಯ ಕೇಳಿ ಮಾರುಡಿಗೆಯ ನಾಚಯ್ಯನು ಹನ್ನೆರಡು ಸಾವಿರ ಶಿವಭಕ್ತರೊಂದಿಗೆ ಸಾವಿರದ ಏಳ್ನೂರು ಶಿವಲಿಂಗಗಳೊಂದಿಗೆ ಬಂದು ಅವರೊಡನೆ ಕಾದಿ ಶಿವಲಿಂಗ ಪ್ರತಿಷ್ಠಾಪನೆಯನ್ನು ಒಂದು ಯಜ್ಞದಂತೆ ಕೈಗೊಂಡುದರ ವಿವರ ದೊರೆಯುತ್ತದೆ. ಬಹುಶಃ ಈ ರೀತಿಯ ಧಾರ್ಮಿಕ ಕೆಲಸಗಳಲ್ಲಿ ಸಾಮೂಹಿಕವಾಗಿ ಯುದ್ಧಗಳೋಪಾದಿಯಲ್ಲಿ ಜನರು ಉತ್ಸಾಹದಿಂದ ಪಾಲ್ಗೊಂಡ ವಿವರಗಳು ದೊರೆಯುತ್ತವೆ.

ಪಿಳ್ಳೆಯನಯನಾರು ಎಂಬ ಭಕ್ತನು ಜ್ಞಾನಸಂಬಂಧಿ ಎಂಬ ಹೆಸರಿನಿಂದ ಮಧುರೆಗೆ ಬರುತ್ತಾನೆ. ಅವನನ್ನು ಗಡಿಪಾರು ಮಾಡುವಂತೆ ಜೈನರು ಒತ್ತಾಯಿಸಿದರೂ ಸಹ ರಾಜನು ಮನ್ನಿಸದೆ ಜೈನರು ಹಾಗೂ ಜ್ಞಾನ ಸಂಬಂಧಿಯ ಮಧ್ಯೆ ಚರ್ಚೆಗೆ ಅವಕಾಶ ಮಾಡಿಕೊಡುತ್ತಾನೆ. ಏನೆಲ್ಲ ವಾದವಿವಾದ, ಪ್ರತಿವಾದ, ದೃಷ್ಟ ಎಲ್ಲ ಪರೀಕ್ಷೆಗಳಲ್ಲೂ ಜೈನರು ಸೋಲುತ್ತಾರೆ. ರಾಜನ ಸಮ್ಮುಖದಲ್ಲಿಯೇ ನಡೆದ ಈ ಪ್ರಸಂಗ ಜ್ಞಾನಸಂಬಂಧಿಗೆ ಜಯಪತ್ರ ಕೊಡುವುದರೊಂದಿಗೆ, ಸೋತ ಹದಿನೆಂಟು ಸಾವಿರ ಜೈನರನ್ನು ಶೂಲಕ್ಕೇರಿಸಲಾಯಿತು ಎಂಬ ವಿಷಯ ಗೊತ್ತಾಗುತ್ತದೆ. ಧಾರ್ಮಿಕ ಪರೀಕ್ಷೆಯಲ್ಲಿ ಸೋತವರು ಶರಣಾಗತರಾಗಬೇಕು, ಇಲ್ಲ ಮರಣಕ್ಕೆ ಒಳಗಾಗಬೇಕೆಂಬ ಅಲಿಖಿತ ನಿಯಮ ಪ್ರಚಲಿತವಿದ್ದಂತೆ ಕಂಡು ಬರುತ್ತದೆ. ಇದೇ ರೀತಿ ನಿಡುಮಾರನೆಂಬ ದೊರೆಯೂ ಸಹ ಅನೇಕ ಜೈನರನ್ನು ಶೂಲಕ್ಕೇರಿಸಿದ ಸಂದರ್ಭದ ಉಲ್ಲೇಖ ಬಸವಪುರಾಣದಲ್ಲಿ ಉಕ್ತವಾಗಿದೆ.

ದೇವರ ದಾಸಿಮಯ್ಯನದು ಪ್ರಭಾವಶಾಲಿಯಾದ ವ್ಯಕ್ತಿತ್ವ. ಹೊಟಲಕೆರೆಯ ದೇಸಿಂಗರಾಯನ ಪತ್ನಿ ಸುಗ್ಗಲಾದೇವಿಯ ಆಮಂತ್ರಣದ ಮೇರೆಗೆ ಅಲ್ಲಿಗೆ ಆಗಮಿಸುತ್ತಾನೆ. ದೇಸಿಂಗರಾಯನು ಜೈನಧರ್ಮ ಪ್ರಭಾವದಲ್ಲಿದ್ದವನು. ಸುಗ್ಗಲಾದೇವಿ ಶಿವಭಕ್ತೋತ್ತಮೆ. ಜೈನರನ್ನು ವಾದದಲ್ಲಿ ಗೆದ್ದು ದೇಸಿಂಗರಾಜನನ್ನು ಶೈವಮತಕ್ಕೆ ಮತಾಂತರಿಸುತ್ತಾನೆ. (ಸಂ.೫೦) ಅದರಂತೆ ಬೌದ್ಧರನ್ನು ವಾದದಲ್ಲಿ ಸೋಲಿಸುತ್ತಾನೆ. ಜೈನರೆಲ್ಲ ದೀಕ್ಷೆಯನ್ನು ಹೊಂದಿ ಸುಖಿಗಳಾದರೆಂಬ ವಿವರಣೆ ದೊರೆಯುತ್ತದೆ. ಶಿವಭಕ್ತರು ರಾಜರಂಥವರ ಮೇಲೆ ಪ್ರಭಾವ ಬೀರಿ ಅವರನ್ನು ಸಹ ಮತಾಂತರಿಸಿದ ಈ ಸಂದರ್ಭ ಅದ್ಭುತವಾದದ್ದು.

ಪರಿವಳಿಗೆಯ ವೈಜಿಕವ್ವೆ ಜೈನ ಪತಿಯನ್ನು ಧಿಕ್ಕರಿಸಿ ಶಿವಭಕ್ತಿಯನ್ನು ಆಯ್ದುಕೊಂಡ ಅಪರೂಪದ ವಿವರ ಬಸವಪುರಾಣದಲ್ಲಿ ಕಂಡುಬರುತ್ತದೆ. ಅವಳ ನಾಯಕತ್ವದಲ್ಲಿ ಪರಿವಳಿಗೆಯ ಜೈನ ಬಸದಿಯಲ್ಲಿಯ ಜಿನಮೂರ್ತಿ ಭಂಜನಕ್ರಿಯೆ ನಡೆದು ವೈಜನಾಥಲಿಂಗ ಸ್ಥಾಪನೆಯಾದ ವಿವರ ದೊರೆಯುತ್ತದೆ.

ಒಟ್ಟಿನಲ್ಲಿ ಇಲ್ಲಿ ಕಂಡು ಬರುವ ಪವಾಡವನ್ನು ಹಿಂದಿಕ್ಕಿದರೆ ಆ ಕಾಲದ ಧಾರ್ಮಿಕ ಸ್ಥಿತಿಯಲ್ಲಿ ಜೈನಧರ್ಮ ಕ್ರಮೇಣ ಅವನತಿಯಲ್ಲಿದ್ದು ಶಿವಧರ್ಮ ಉನ್ನತ ಸ್ಥಿತಿಯಲ್ಲಿತ್ತೆಂದು ಭಾವಿಸಬಹುದು. ಈ ಹಿನ್ನೆಲೆಯಲ್ಲಿ ವಾದ, ವಿವಾದ, ಚರ್ಚೆ, ವಾಗ್ವಾದ, ತರ್ಕ ನಡೆದು ಸೋಲಿಸಲ್ಪಟ್ಟವರು ಶರಣಾಗತರಾಗುವುದು ಅಥವಾ ಶೂಲಕ್ಕೇರುವ ಸಂದರ್ಭಗಳು ಸಾಮಾನ್ಯವಾಗಿ ಜಾರಿಯಲ್ಲಿದ್ದ ವಿವರಗಳು ದೊರೆಯುತ್ತವೆ.

೪. ಪವಾಡಗಳು :

ಜನಸಾಮಾನ್ಯರ ಆಚರಣೆಗೆ ನಿಲುಕದ ಮಹಾತ್ಮರ ಸಹಜ ನಡುವಳಿಕೆಗಳೇ ಅಥವಾ ಕಠಿಣ ನಿಯಮಗಳೇ ಪವಾಡಗಳು. ತಮ್ಮಿಂದಾಚರಿಸಲು ಅಸಾಧ್ಯವಾದ, ಅಂತಹ ನಡೆನುಡಿಗಳು

ಪವಾಡಗಳಾಗಿ ತೋರುತ್ತವೆ. "ಪವಾಡ ಪದಕ್ಕೆ ಸಮಾನಾಂತರವಾಗಿ 'ಪ್ರತ್ಯಕ್ಷ', 'ಸಾಮರ್ಥ್ಯ', 'ದೃಷ್ಟ', 'ಮಹಿಮೆ'ಇವುಗಳನ್ನು ಬಳಸಲಾಗಿದೆ." (ವಿದ್ಯಾಶಂಕರ ಎಸ್. ೨೦೦೬, ಪು.೩೪೭) ದಿವ್ಯಗಳನ್ನು ಸಹ ಪವಾಡದ ಬೇರೊಂದು ಪ್ರಕಾರವೆಂದು ಕರೆಯಬಹುದು. ಪವಾಡಗಳು ನಮ್ಮ ಪುರಾತನ ಶರಣರ ಬಗೆಗೆ ನಮ್ಮ ಪೂರ್ವಿಕರಿಗಿದ್ದ ಪೂಜ್ಯ ಭಾವನೆಗೆ ಸಾಕ್ಷಿಗಳಂತಿವೆ. ಬಸವಪುರಾಣದ ಅನೇಕ ಪುಟಗಳು ಪವಾಡಗಳಿಂದಾವೃತವಾಗಿವೆ. ಹಠಯೋಗದಿಂದ ಪ್ರಾಪ್ತವಾಗುವ ಸಿದ್ಧಿಯನ್ನು ಪವಾಡವೆಂದು ಕರೆಯಲಾಗಿದೆ. (ಅದೇ ಪು.೩೬೮) ಬಸವಾದಿ ಪ್ರಮಥರನ್ನು ಕುರಿತು ಕಾಲದಿಂದ ಕಾಲಕ್ಕೆ ಪವಾಡಗಳು ಹೆಚ್ಚುತ್ತಲೇ ಹೋದದ್ದು ಕಂಡುಬರುತ್ತವೆ. ಬಹುಶಃ ಬಸವ ವಚನಗಳಲ್ಲಿ ಸಿಗುವ ಸೂಚನೆಗಳೆ ಇದಕ್ಕೆ ಕಾರಣಗಳಿರಬಹುದು. ಸ್ವತಃ ಬಸವಣ್ಣನವರೆ "ಮುನ್ನೂರ ಅರವತ್ತು ಸತ್ತ ಪ್ರಾಣವನ್ನೆತ್ತಿಸಿ, ಮೂವತ್ತಾಱು ಕೊಂಡೆಯವ ಗೆಲಿಸಿ, ಎಂಬತ್ತೆಂಟು ಪವಾಡಗಳಂ" (ಸ.ವ.ಸಂ.೧, ವ.೧೦೦೭) ಮಾಡಿದ್ದರು ಎಂಬುದು ಗೊತ್ತಾಗುತ್ತದೆ. "ಎಂಬತ್ತೆಂಟು ಪವಾಡವ ಮೆರೆದು ಹಗರಣದ ಚೋಹದಂತಾಯಿತೆನ್ನ ಭಕ್ತಿ" (ಅದೇ ವ.೧೯೨) ಎಂಬಲ್ಲಿ ಪವಾಡಗಳ ಬಗೆಗೆ ಬಸವಣ್ಣನವರಿಗೆ ವಿಶ್ವಾಸವಿತ್ತೆಂದು ಅರ್ಥವಲ್ಲ. ಹಗರಣದ ಚೋಹ (ವೇಷಗಾರಿಕೆ) ವೆಂದು ಕರೆದಿರುವುದನ್ನು ಗಮನಿಸಿದಾಗ ಅವರಿಗೆ ಪವಾಡಗಳ ಬಗೆಗೆ ಗೌರವಾದರಗಳಿಲ್ಲವೆನ್ನುವುದು ಸ್ಪಷ್ಟವಾಗುತ್ತದೆ. 'ಪವಾಡ', 'ವಶೀಕರಣ', 'ಇಂದ್ರಜಾಲ', 'ಮಹೇಂದ್ರಜಾಲ' ಮೊದಲಾದ ವಿದ್ಯೆಗಳಿಂದ ಜನಸಾಮಾನ್ಯರನ್ನು ಬಸವಣ್ಣನವರು ಮರುಳುಗೊಳಿಸುತ್ತಿದ್ದಾರೆಂದು ಆಡಿಕೊಂಡಿರಬಹುದು. ಆಗ ಬಸವಣ್ಣನವರು "ವಶ್ಯವ ಬಲ್ಲೆವೆಂದೆಂಬಿರಯ್ಯಾ ಬುದ್ಧಿಯನರಿಯದ ಮನುಜರು ಕೇಳಿರಯ್ಯಾ ವಶ್ಯವಾವುದೆಂದರಿಯದೆ ಮರುಳುಗೊಂಬಿರಿ, ಎಲೆ ಗಾವಿಲ ಮನುಜರಿರಾ, ಓಂ ನಮಃ ಶಿವಾಯ ಎಂಬ ಮಂತ್ರ ಜನವಶ್ಯ ಕೂಡಲಸಂಗಮದೇವಾ" (ಅದೇ ವ.೭೮) ಎಂಬ ವಚನದಲ್ಲಿಯೂ ಬಸವಣ್ಣನವರು ಇಂತಹ ದುಷ್ಟ ವಿದ್ಯೆಗಳ ಕುರಿತು ತಿರಸ್ಕಾರ ಭಾವನೆಯನ್ನು ವ್ಯಕ್ತಪಡಿಸಿದ್ದು ಕಂಡುಬರುತ್ತದೆ.

"ಪವಾಡ ಎಂದರೆ ಧಾರ್ಮಿಕ, ಆಧ್ಯಾತ್ಮಿಕ ಕ್ಷೇತ್ರಕ್ಕೆ ಸೇರಿದ ವ್ಯಕ್ತಿಗಳು ಜನರ ಭಕ್ತಿಶ್ರದ್ಧೆಗಳನ್ನು ಗಟ್ಟಿಗೊಳಿಸುವ ಉದ್ದೇಶದಿಂದ ಮತ್ತು ಲೋಕಾನುಕಂಪದಿಂದ ಪ್ರಾಸಂಗಿಕವಾಗಿ ಪ್ರದರ್ಶಿಸುವ ಕೆಲವು ಅಘಟಿತ ಘಟನೆಗಳು ಎಂದು ಹೇಳಬಹುದು. ನೋಡುವವರಲ್ಲಿ ಆಶ್ಚರ್ಯವನ್ನು ಹುಟ್ಟಿಸುವುದು ಅದರ ಮೊದಲ ಲಕ್ಷಣ. ದೈನಂದಿನ ಪರಿಚಿತ ಸಂಗತಿಗಳಿಂದ ಭಿನ್ನವಾದ ನಮ್ಮ ತಿಳುವಳಿಕೆಯ ಮಾನದಿಂದ ವಿವರಿಸಲಾಗದಂಥ ಒಂದು ವಿಲಕ್ಷಣವಾದ ಅಥವಾ ಅತೀಂದ್ರಿಯ ಸಾಮರ್ಥ್ಯದ ಪರಿಣಾಮ ಅದು" (ಬೆಡಗು ಪು.೬೨) ಎಂದು ಜಿ.ಎಸ್. ಶಿವರುದ್ರಪ್ಪನವರು ಹೇಳುತ್ತಾರೆ. ಹನ್ನೆರಡನೆ ಶತಮಾನದ ಆರಂಭದಲ್ಲಿಯ ಚೌಡದಾನಪುರ ಶಿಲಾಶಾಸನದಲ್ಲಿ ಶಿವನು ನಂದಿಯನ್ನು ಶಿವಮತದ ಉದ್ಧಾರಾರ್ಥವಾಗಿ ಪೃಥ್ವಿಯಲ್ಲಿ ಅವತರಿಸಲು ಆಜ್ಞಾಪಿಸಿದ್ದರ ವರ್ಣನೆ ಇದೆ. ಈ ಆಧಾರದಿಂದ ಬಸವಣ್ಣನವರು ಇನ್ನೂ ಜೀವಂತವಿದ್ದಾಗಲೇ ಅವರ ಬಗ್ಗೆ ದಂತಕಥೆಗಳು ಉದ್ಭವವಾಗಿದ್ದು

ಅವರೊಬ್ಬ ಪವಾಡಪುರುಷರಾಗಿದ್ದರೆಂದು ಊಹಿಸಬಹುದೆಂದು ಫ.ಗು. ಹಳಕಟ್ಟಿಯವರು ಅಭಿಪ್ರಾಯ ಪಡುತ್ತಾರೆ. (ಹಳಕಟ್ಟಿ ಸಮಗ್ರ ಸಾಹಿತ್ಯ ಸಂಪುಟ–೧೧, ಪು.೧೩–೪)

ಸಂದರ್ಭೋಚಿತವಾಗಿ ಬಸವಣ್ಣನವರು ಕೆಲವು ಪವಾಡಗಳನ್ನು ಮಾಡಿದ್ದಿರಬಹುದು. "ಬಸವಣ್ಣನ ಕೀರ್ತಿ ಲೋಕದಲ್ಲಿ ವಿಸ್ತಾರವಾಗಿ ಹಬ್ಬಿದ್ದು, ಜನತೆಯ ದೃಷ್ಟಿಯಲ್ಲಿ ಅವನು ಮಹತ್ವದ ವ್ಯಕ್ತಿಯಾದದ್ದು ಈ ಪವಾಡಗಳಿಂದಲ್ಲ. ಒಬ್ಬ ಮಹಿಮಾನ್ವಿತ ವ್ಯಕ್ತಿಯ ಬಗೆಗೆ ಅವನ ಕಾಲದಲ್ಲಿಯೇ ಇಲ್ಲವೇ ಅವನ ಕಾಲಾನಂತರ ಪವಾಡ ಕಥೆಗಳು ಹುಟ್ಟುವುದು ಸಾಮಾನ್ಯ. ಅವು ಆಯಾ ಕಾಲದ ಜನ, ಮಹಿಮಾನ್ವಿತ ವ್ಯಕ್ತಿಯ ಬಗೆಗೆ ತೋರಿದ ಭಯ, ಭಕ್ತಿ ಗೌರವಗಳ ಪ್ರತೀಕ. "ಎಲ್ಲ ಪವಾಡಗಳನ್ನು ವಾಚ್ಯಾರ್ಥದಲ್ಲೇ ಸ್ವೀಕರಿಸಿ, ಅವು ಐತಿಹಾಸಿಕ ಸತ್ಯವೆಂದು ವಾದಿಸುವುದು ಭಾವುಕತನದ ಪರಮಾವಧಿ. ಈ ಪವಾಡಗಳಲ್ಲಿ ನಾವು ಕಾಣಬೇಕಾದುದು ಸಾಂಕೇತಿಕ ಮತಿತಾರ್ಥವನ್ನು, ಇವುಗಳಿಂದ ಪುರಾಣಗಳಲ್ಲಿ ವರ್ಣಿತವಾಗಿರುವ ಸಂಗತಿಗಳು ವಿಶೇಷಾರ್ಥವನ್ನು ಮಹತ್ವವನ್ನು ಪಡೆದುಕೊಳ್ಳುತ್ತವೆ". ವಿದ್ಯಾಶಂಕರ ಎಸ್. ೨೦೦೮, ಪು.೧೨೨) ಅದರಲ್ಲೂ ಹನ್ನೆರಡನೆಯ ಶತಮಾನದ ನಂತರ ವೀರಶೈವ ಕವಿಗಳು ತಮಗೆ ಸಮೀಪ ಕಾಲದವರಾಗಿದ್ದ ಬಸವ, ಸಿದ್ಧರಾಮ, ಅಲ್ಲಮ ಇಂತಹ ಚಾರಿತ್ರಿಕ ವ್ಯಕ್ತಿಗಳನ್ನು ತಮ್ಮ ಕೃತಿಯ ಕಥಾನಾಯಕರನ್ನಾಗಿ ಯಾವಾಗ ಮಾಡಿಕೊಂಡರೋ ಆಗ ಆ ವ್ಯಕ್ತಿಗಳನ್ನು ದೇವಾಂಶಸಂಭೂತರೆಂದೋ, ಅಲೌಕಿಕ ಮಹಿಮಾಶಾಲಿಗಳೆಂದೋ ವೈಭವೀಕರಿಸುವ ಉದ್ದೇಶದಿಂದ ಅವರು ಅನೇಕ ಪವಾಡಗಳನ್ನು ಮಾಡಿದರೆಂಬಂತೆ ಹೇಳಿದ್ದಾರೆ. "ಇದಕ್ಕೆ ನಮ್ಮ ಕನ್ನಡ ಕವಿಗಳಿಗೆ ಇರುವ ಚಾರಿತ್ರಿಕ ಪ್ರಜ್ಞೆಯ ಅಭಾವ ಒಂದು ಕಾರಣವಾದರೆ ಜನಸಾಮಾನ್ಯರಿಗೆ ಪವಾಡಗಳ ಬಗ್ಗೆ ಇರುವ ವಿಲಕ್ಷಣವಾದ ಆಸಕ್ತಿಯೂ ಒಂದು ಕಾರಣವೆನ್ನಬಹುದು". (ಶಿವರುದ್ರಪ್ಪ ಜಿ.ಎಸ್. ಬೆಡಗು, ಪು.೬೩) ಆದ್ದರಿಂದ ಬಸವಣ್ಣನವರು ಮಾಡಿದ ಪವಾಡಗಳ ಸಂಖ್ಯೆ ಕೃತಿಯಿಂದ ಕೃತಿಗಳಿಗೆ ಹೆಚ್ಚುತ್ತಾ ಹೋಗಿರುವುದು ಕಂಡು ಬರುತ್ತದೆ.

ಭೀಮಕವಿಯ ಬಸವಪುರಾಣದಲ್ಲಿ ಬಸವಣ್ಣನವರು ಮಾಡಿದನೆನ್ನಲಾದ ಪವಾಡಗಳು ಇಂತಿವೆ. ೧ ಬದನೆಕಾಯಿ ಲಿಂಗವಾದುದು. ೨. ಜೋಳವನ್ನು ಮುತ್ತಾಗಿಸಿದುದು. ೩ ಜಂಗಮವೇಷಿ ಶಿವನಿಗೆ ನೊಸಲ ಕಣ್ಣು ತೋರಿದುದು ೪. ಮೊಸರಿನ ಮಡಕೆಯನ್ನು ಆಕಾಶದಲ್ಲಿ ನಿಲ್ಲಿಸಿದುದು ೫. ಭಂಡಾರದ ದ್ರವ್ಯವನ್ನು ನೂರ್ಮಡಿಯಾಗಿಸಿದುದು. ೬ ಗಂಗಾಂಬಿಕೆಯ ಸೀರೆ ಅಕ್ಷಯವಾದುದು. ೭. ಶಿವನಾಗಮಯ್ಯನ ಕರಾಂಗುಲಿಯಿಂದ ಹಾಲು ಕರೆದುದು. ೮. ವಿಷವನ್ನು ಅಮೃತವನ್ನಾಗಿ ಮಾಡಿದುದು. ೯. ಲಿಬಿಯ ಪವಾಡ. ೧೦. ಚರಲಿಂಗ ಪ್ರಾಣೋತ್ಸವದ ಪವಾಡ. ಮೊದಲ ಎಂಟು ಪವಾಡಗಳನ್ನು ಪಾಲ್ಕುರಿಕೆ ಸೋಮನಾಥನು ಹೇಳಿದ್ದಾನೆ. ಅವುಗಳ ಜೊತೆಗೆ ಅವನಿಗೆ ತಿಳಿಯದೇ ಇದ್ದ ಕೊನೆಯ ಎರಡು ಪವಾಡಗಳನ್ನು ಭೀಮಕವಿ ಹೇಳುತ್ತಾನೆ. ಇದರಿಂದ ಒಟ್ಟು ಬಸವಪುರಾಣದಲ್ಲಿ

ಹೇಳಿರುವ ಬಸವಣ್ಣನವರ ಪವಾಡಗಳ ಸಂಖ್ಯೆ ಹತ್ತು. ಮುಂದೆ ಶಿವತತ್ವಚಿಂತಾಮಣಿಯು ಅರವತ್ತು ಪವಾಡಗಳನ್ನು ಹೇಳಿದರೆ, ಸಿಂಗಿರಾಜನು ಅರವತ್ನಾಲ್ಕು ಪವಾಡಗಳನ್ನು ಹೆಸರಿಸುತ್ತಾನೆ. ಗುರು ಚೆನ್ನಬಸವನ ಶಿಷ್ಯನ ಬಸವ ಪವಾಡವು ಎಂಭತ್ತು ಪವಾಡಗಳನ್ನು ಹೇಳುತ್ತದೆ.

ಬಸವಪುರಾಣದಲ್ಲಿಯ ಪವಾಡಗಳನ್ನು ಎರಡು ರೀತಿಯಾಗಿ ವಿಂಗಡಿಸಬಹುದು. ಬಸವನನ್ನೊಳಗೊಂಡು ಶರಣರು ನೇರವಾಗಿ ಮಾಡುವ ಪವಾಡಗಳು. ಇನ್ನೊಂದು ಸಂದರ್ಭಕ್ಕೆ ತಕ್ಕಂತೆ ನೆನೆಯುವ ಪುರಾತನ ಶರಣರು, ಹಿರಿಯ ಶರಣರು ಮಾಡಿದರೆನ್ನಲಾದ ಪವಾಡಗಳು. ಹಾಗೆ ನೋಡಿದಾಗ ಬಸವಪುರಾಣದ ಮೈಮನವೆಲ್ಲ ಪವಾಡಗಳಿಂದಲೇ ಆವರಿಸಿರುವುದು ಕಂಡು ಬರುತ್ತದೆ. ರಾಜ–ಪ್ರಜೆ, ಪುರೋಹಿತ–ಭಕ್ತ, ಮೇಲ್‌ವರ್ಗ–ಶೂದ್ರವರ್ಗ, ಭವಿ–ಭಕ್ತ, ಪಕ್ಷ–ಪ್ರತಿಪಕ್ಷಗಳು ತಮ್ಮ ಉನ್ನತಿಕೆ ಮೆರೆಯಲು ಸಂಘರ್ಷಕ್ಕೆ ತೊಡಗಿದಾಗ ಉಂಟಾದ ಗೆಲುವನ್ನು ವೈಜ್ಞಾನಿಕವಾಗಿ ಒಪ್ಪದೇ ಅಸಾಮಾನ್ಯ ಘಟನೆಯೆಂಬ ಅರ್ಥ ಕಲ್ಪಿಸಿ ಪವಾಡಗಳ ರೂಪ ಪಡೆದಿರುವುದು ಪುರಾಣದ ಅಲ್ಲಲ್ಲಿ ಕಂಡುಬರುತ್ತದೆ.

ಬದನೆಕಾಯಿ ಬಾಣಲಿಂಗವಾದ ಪವಾಡವು ಬಸವಣ್ಣನವರ ಸಂಪರ್ಕಕ್ಕೆ ಬಂದ ದುಷ್ಟರು ಶಿಷ್ಟರಾಗುತ್ತಿದ್ದರೆಂಬುದಕ್ಕೆ ನಿದರ್ಶನವಾದರೆ ಆಪತ್ಕಾಲದಲ್ಲಿದ್ದ ಭಕ್ತರನ್ನು ಶಿವ ಕಾಪಾಡುತ್ತಾನೆ ಎಂಬುದು ಗೊಲ್ಲತಿಯ ಪವಾಡದಿಂದ ತಿಳಿಯುತ್ತದೆ. (೯: ೨–೬) ದುಕೂಲದ ಪವಾಡ ಹಾಗೂ ಜೋಳ ಮುತ್ತಾದ ಪವಾಡಗಳು ಬಸವಣ್ಣನವರ ಅಸಂಗ್ರಹ ಗುಣವನ್ನು ಎತ್ತಿ ತೋರಿಸುತ್ತವೆ. (೧೦: ೨೦,೩೯) ವಿಷದ ಪವಾಡವು ಭಕ್ತನಾದವನಿಗೆ ದೃಢಭಕ್ತಿ ಬೇಕೆಂಬುದರ ಸಂಕೇತವಾಗಿ ವರ್ಣಿತಗೊಂಡಂತಿದೆ. ಶಿವನಾಗಮಯ್ಯಗಳ ಕರಾಂಗುಲಿಯಿಂದ ಹಾಲು ಚಿಮ್ಮಿದ ಪವಾಡವು ಬಸವಣ್ಣನವರು ಅಂತ್ಯಜರ ಬಗ್ಗೆ ಹೊಂದಿದ್ದ ಮಾನವೀಯತೆ, ಅಂತಃಕರಣ, ಅಭಿಮಾನ ಮುಂತಾದ ಸದ್ಗುಣಗಳ ಪ್ರತೀಕವಾಗಿದೆ. (ಸಂ. ೫೪)

ಭಂಡಾರದ ದ್ರವ್ಯ ನೂರ್ಮಡಿಸಿದ ಪವಾಡ ವಿರೋಧಿಗಳ ಹುಸಿ ಆಪಾದನೆಗಳನ್ನು ಅಲ್ಲಗಳೆಯಲು ಬಳಸಿಕೊಂಡಂತಿದೆ. (೧೦:೧–೧೪)

ಏಕಾಂತರಾಮಯ್ಯಗಳು ಶಿರವರಿದ ಪವಾಡ ಮತ್ತು ಧಾರ್ಮಿಕ ಹಿನ್ನೆಲೆಯಲ್ಲಿ ಶಿವಭಕ್ತರು ತಮ್ಮ ಎದುರಾಳಿಗಳ ಅಹವಾಲನ್ನು ಸ್ವೀಕರಿಸಿ ಪ್ರಾಣದ ಹಂಗನ್ನು ತೊಡೆದು ಧರ್ಮನಿಷ್ಠೆ ಮೆರೆಯುತ್ತಿದ್ದರು ಎಂಬುದಕ್ಕೆ ಸಾಕ್ಷಿಯಾಗಿವೆ. (೫೧:೪೧–೪೩) ಕೆಲವು ಪವಾಡಗಳು ಸಹಜ ಚಟುವಟಿಕೆಗಳಂತೆ ನಡೆಯುತ್ತವೆ. ಬಸದಿಗಳು ದೇವಸ್ಥಾನಗಳಾಗುವುದು, ಜಿನಮೂರ್ತಿಗಳು ಭಗ್ನಗೊಂಡು ಶಿವಲಿಂಗ ಪ್ರತಿಷ್ಠಾಪಿಸುವುದು ಕಂಡುಬರುತ್ತವೆ. ಕೆಲವು ಸಂದರ್ಭಗಳಲ್ಲಿ ಮಂತ್ರ ತಂತ್ರ ವಿದ್ಯೆಗಳಂಥ ಹಾಗೂ ಇಂದ್ರಜಾಲ ಸಂಮೋಹಿನಿ ವಿದ್ಯೆ ಪ್ರದರ್ಶಿಸಿಯೂ ಪವಾಡದ ರೀತಿಯನ್ನು ಕಲ್ಪಿಸಿರುವ ಉದಾಹರಣೆಗಳು ಉಕ್ತಗೊಂಡಿವೆ.

ಶಿವಭಕ್ತರ ಗುರು-ಲಿಂಗ-ಜಂಗಮಾರಾಧನೆ, ಏಕದೇವೋಪಾಸನೆ, ಸತ್ಯಶುದ್ಧಕಾಯಕನಿಷ್ಠೆ, ಪರಮತಖಂಡನೆ, ಸ್ವಮತಮಂಡನೆ, ಶಿವಾಧಿಕ್ಯ ಸ್ಥಾಪನೆ, ಅಸ್ಪೃಶ್ಯೋದ್ಧಾರ, ಸರ್ವಸಮಾನತೆ, ಆದರ್ಶ ಸಮಾಜ, ಮೌಲ್ಯನುಷ್ಠಾನ ಈ ಎಲ್ಲ ಗುಣಗಳ ಹಿನ್ನೆಲೆಯಲ್ಲಿ ಪವಾಡಗಳು ಪರಸಂಸ್ಕೃತಿಗೆ ಉತ್ತರ ರೂಪವಾಗಿ ಪ್ರಕಟಗೊಂಡದ್ದು ಕಂಡುಬರುತ್ತದೆ. ಆ ಮೂಲಕ ಶಿವಸಂಸ್ಕೃತಿಯ ಬಗ್ಗೆ ಜನಸಾಮಾನ್ಯರಲ್ಲಿ ಭಯ ಭಕ್ತಿ ಪೂಜ್ಯ ಭಾವನೆಗಳು ಮೂಡುವಂತೆ ಪವಾಡಗಳು ಕಂಡುಬರುತ್ತವೆ.

ಪವಾಡಗಳು ವ್ಯಕ್ತಿಯ ಮಹಿಮಾತಿಶಯವನ್ನು ಬಿತ್ತರಿಸುವುದರಿಂದಲೂ ಜನಸಾಮಾನ್ಯರ ಚಿತ್ತವನ್ನು ಸುಲಭವಾಗಿಯೇ ಸೆಳೆದು ಅಲ್ಲಿಯ ಭಕ್ತಿಯ ಬೀಜವನ್ನು ಬಿತ್ತವಲ್ಲವಾದುದರಿಂದಲೂ ನೈಜಚರಿತ್ರೆಗಿಂತಲೂ ಪವಾಡಗಳಿಗೇ ಪ್ರಧಾನ ಸ್ಥಾನವನ್ನು ಕವಿ ಇತ್ತಿರುವನು.

ಹೀಗೆ ಶಿವಶರಣರು ಸರ್ವಗ್ರಾಹ್ಯವಾದ ಧಾರ್ಮಿಕ ಆಚರಣೆಗಳನ್ನು ಪಾಲಿಸಿಕೊಂಡು ನಿರಂತರವಾಗಿ ಶಿವಮತದ ಅನುಷ್ಠಾನಕ್ಕೆ ಪ್ರಯತ್ನಿಸಿದ ಅಂಶಗಳನ್ನು ಈ ಭಾಗದಲ್ಲಿ ಗುರುತಿಸಲಾಗಿದೆ.

ಅಧ್ಯಾಯ–ಏಳು
ಕಲೆ

ಅಧ್ಯಾಯ–ಏಳು
ಕಲೆ

"ಸಾಹಿತ್ಯ ಸಂಗೀತ ಕಲಾವಿಹೀನಃ ಸಾಕ್ಷಾತ್ ಪಶುಃ ಪುಚ್ಛ ವಿಶಾನಹೀನಹಿ ತೃಣಂ ನ ಖಾದನ್ನಪಿ ಜೀವಮಾನಸ್ತದ್ಭಾಗಧೇಯಂ ಪರಮಂ ಪಶೂನಾಂ" ಎಂಬ ಆರ್ಯೋಕ್ತಿ ಕಲೆ, ಸಂಗೀತ, ಸಾಹಿತ್ಯಗಳ ಮಹತ್ವವನ್ನು ಹೇಳುತ್ತದೆ. "ಕಲೆ ಜೀವನೋತ್ಸಾಹದ ಸೆಲೆ" (ತಿಪ್ಪೇಸ್ವಾಮಿ ಪಿ.ಆರ್. ಕಲೆಯ ಆಗರ ಪ್ಯಾರಿಸ್, ಪು.೫) ಎಂಬ ಮಾತೂ ಸಹ ಮನುಷ್ಯನ ಜೀವನದ ಸರ್ವರಂಗಗಳಿಗೂ ಪೂರಕವಾಗಿರುವ ಕಲೆಯ ಅಗತ್ಯತೆಯನ್ನು ಒತ್ತಿ ಹೇಳುತ್ತದೆ. ಸಾಹಿತ್ಯ, ಸಂಗೀತ, ಕಲೆಯನ್ನು ಮೇಳೈಸಿಕೊಂಡವನೆ ನಿಜವಾದ ಮನುಷ್ಯನೆಂದು ಪಂಪ ಹೇಳುತ್ತಾನೆ. (೧:೨೯) ಕಲೆಗಳೆಂದರೆ ಇಲ್ಲಿ ಲಲಿತ ಕಲೆಗಳು. ಹಾಗಾದರೆ ಈ ಕಲೆಗಳಲ್ಲಿ ಎಷ್ಟು ಪ್ರಕಾರಗಳು ಎಂಬ ಬಗ್ಗೆ ವ್ಯತ್ಯಾಸಗಳಿವೆ. ಜೈನಗ್ರಂಥಗಳಲ್ಲಿ ಎಪ್ಪತ್ತೆರಡು ಕಲೆಗಳನ್ನು ಹೇಳಿದರೆ ಯಶೋಧರನೆಂಬುವನು ಬರೆದ 'ಕಾಮಸೂತ್ರ'ದಲ್ಲಿ ೫೧೨ ಕಲೆಗಳಿವೆಯೆಂಬುದನ್ನು ಪಿ.ವಿ.ನಾರಾಯಣರು ಹೇಳುತ್ತಾರೆ. (ನಾರಾಯಣ ಪಿ.ವಿ.೧೯೮೩, ಪು.೨೯೧) ಆದರೆ ಪ್ರಾಚೀನ ಭಾರತವು ಹಿಂದಿನಿಂದಲೂ ಒಪ್ಪಿಕೊಂಡು ಬಂದಿರುವ ವಾತ್ಸಾಯನನ ಕಾಮಸೂತ್ರದಲ್ಲಿರುವ ಅರವತ್ತುನಾಲ್ಕು ಕಲೆಗಳನ್ನು ಎಂ.ಚಿದಾನಂದಮೂರ್ತಿಯವರು ಹೆಸರಿಸುತ್ತಾರೆ. ಅವು ಇಂತಿವೆ. (೨೦೦೮, ಪು.೨೦೯) ೧. ಗೀತಂ ೨. ವಾದ್ಯಂ ೩. ನೃತ್ಯಂ ೪. ಆಲೇಖ್ಯಂ ೫. ವಿಶೇಷಕಚ್ಛೇದಂ ೬. ತಂಡುಲಕುಸುಮಬಲಿವಿಕಾರಾಃ ೭. ಪುಷ್ಪಾಸ್ತರಣಂ ೮. ದಶನವಸನಾಂಗರಾಗಃ ೯. ಮಣಿಭೂಮಿಕಾಕರ್ಮ ೧೦. ಶಯನರಚನಂ ೧೧. ಉದಕವಾದ್ಯಂ ೧೨. ಉದಕಘಾತಃ ೧೩. ಚಿತ್ರಾಶ್ಚಯೋಗಾಃ ೧೪. ಮಾಲ್ಯಗ್ರಥನವಿಕಲ್ಪಾಃ ೧೫. ಶೇಖರಕಾಪೀಡಯೋಜನಃ ೧೬.ನೇಪಥ್ಯಪ್ರಯೋಗಾಃ ೧೭.ಕರ್ಣಪತ್ರಭಂಗಃ ೧೮.ಗಂಧಯುಕ್ತಿಃ ೧೯.ಭೂಷಣಯೋಜನಂ ೨೦. ಐಂದ್ರಜಾಲಯೋಗಾಃ ೨೧. ವೈನಯಿಕೀನಾಂ ೨೨. ಬಾಲಕ್ರೀಡನಕಾನಿ ೨೩. ಕೌಚುಮಾರಾಶ್ಚಯೋಗಾಃ ೨೪.ಹಸ್ತಲಾಘವಂ ೨೫. ವಿಚಿತ್ರಶಾಕಯೂಷಭಕ್ಷ್ಯವಿಕಾರಕ್ರಿಯಾ ೨೬.ಪಾನಕರ ಸರಾಗಾಸವಯೋಜನಂ ೨೭. ಸೂಚೀವಾನಕರ್ಮಾಣಿ ೨೮.ಸೂತ್ರಕ್ರೀಡಾ ೨೯. ವೀಣಾಡಮರುಕವಾದ್ಯಾನಿ ೩೦. ಪ್ರಹೇಲಿಕಾ ೩೧.ಪ್ರತಿಮಾಲಾ ೩೨.ದುರ್ವಾಚಕಯೋಗಾ

೩೩. ಪುಸ್ತಕವಾಚನಂ ೩೪. ನಾಟಕಾಖ್ಯಾಯಿಕಾದರ್ಶನಂ ೩೫. ಕಾವ್ಯಸಮಸ್ಯಾಪೂರಣಂ ೩೬. ಪಟ್ಟಿಕಾವೇತ್ರವಾನವಿಕಲ್ಪಾಃ ೩೭.ತಕ್ಷಕರ್ಮಾಣಿ ೩೮. ತರ್ಕ್ಷಣಂ ೩೯.ವಾಸ್ತುವಿದ್ಯಾ ೪೦. ರೂಪ್ಯರತ್ನಪರೀಕ್ಷಾ ೪೧. ಧಾತುವಾದಃ ೪೨. ಮಣಿರಾಗಾಕರಜ್ಞಾನಂ ೪೩.ವೃಜಿಯಿಕೀನಾಂ ವಿದ್ಯಾನಾಂ ಜ್ಞಾನಂ ೪೪. ವೃಷಾಯುರ್ವೇದಯೋಗಾಃ ೪೫. ಮೇಷಕುಕ್ಕುಟಲಾವಕಯುದ್ಧವಿಧಿಃ ೪೬.ಶುಕಸಾರಿಕಪ್ರಲಾಪನಂ ೪೭. ಉತ್ಸಾದನೇ ಸಂವಾಹನೇ ಕೇಶಮರ್ದನೇ ಚಕೌಶಲಂ ೪೮. ಅಕ್ಷರಮುಷ್ಟಿಕಾಕಥನಂ ೪೯. ಮ್ಲೇಚ್ಛಿತವಿಕಲ್ಪಾಃ ೫೦. ದೇಶಭಾಷಾವಿಜ್ಞಾನಂ ೫೧. ಪುಷ್ಪಶಕಟಿಕಾ ೫೨. ನಿಮಿತ್ತಜ್ಞಾನಂ ೫೩. ಯಂತ್ರಮಾತೃಕಾ ೫೪. ಧಾರುಣಮಾತೃಕಾ ೫೫. ಸಂಪಾಠ್ಯ ೫೬. ಮಾನಸೀ ೫೭. ಕಾವ್ಯಕ್ರಿಯಾ ೫೮. ಅಭಿಧಾನಕೋಶ ಛಂದೋವಿಜ್ಞಾನಂ ೫೯.ಕ್ರಿಯಾಕಲ್ಪಃ ೬೦. ಛಲಿತಕಯೋಗಾಃ ೬೧. ವಸ್ತ್ರಗೋಪನಾನಿ ೬೨. ದ್ಯೂತವಿಶೇಷಾಃ ೬೩. ಆಕರ್ಷಕ್ರೀಡಾ ೬೪. ವ್ಯಾಯಾಮಿಕೀನಾಂ ವಿದ್ಯಾನಾಂ ಜ್ಞಾನಂ.

ಪ್ರಾಚೀನ ಕೃತಿಗಳಲ್ಲಿ ಸಾಂದ್ರವಾಗಿ ಮೈದೋರಿದ ಕಲಾಭಿಜ್ಞತೆಯ ಕೆಲವು ಅಂಶಗಳನ್ನು ಗುರುತಿಸಬಹುದು. ಈ ಹಿನ್ನೆಲೆಯಲ್ಲಿ 'ಬಸವಪುರಾಣ'ದಲ್ಲಿ ತೋರಿ ಬರುವ ಕೆಲವಂಶಗಳನ್ನು ಕಂಡುಕೊಳ್ಳುವ ಪ್ರಯತ್ನ ಮಾಡಬಹುದು.

ಛಂದಸ್ಸು:

ವೀರಶೈವ ಪುರಾಣಗಳನ್ನು ವಸ್ತುಕ ವರ್ಣಕ ಈ ಕಾವ್ಯ ಮಾರ್ಗಗಳಲ್ಲಿ ಯಾವುದಕ್ಕೆ ಸೇರಿಸಬೇಕು ಎನ್ನುವ ಪ್ರಶ್ನೆ ಎಷ್ಟು ಸರಳವೊ ಇದಕ್ಕೆ ಬರುವ ಉತ್ತರವೂ ಅಷ್ಟೇ ಚುಟುಕಾಗಿದೆ. ವೀರಶೈವ ಪುರಾಣಗಳಲ್ಲಿ 'ವಸ್ತುಕ'ಗಳೂ ಉಂಟು. 'ವರ್ಣಕ'ಗಳೂ ಉಂಟು. ವಸ್ತುಕವಾದ ವೀರಶೈವ ಪುರಾಣಗಳು ಬೆರಳೆಣಿಸುವಷ್ಟು ಸಂಖ್ಯೆಯಲ್ಲಿದ್ದರೆ ವರ್ಣಕವಾದ ವೀರಶೈವ ಪುರಾಣಗಳು ಬಹಳವಿವೆ. ಜೈನಪುರಾಣಗಳು ಕನ್ನಡ ಸಾಹಿತ್ಯಕ್ಕೆ ಒಂದು ವಿಶಿಷ್ಟ ಕೊಡುಗೆ. ಕಾವ್ಯ ಧರ್ಮ ಹಾಗೂ ಧರ್ಮ ಇವೆರಡೂ ಪಾಕಗೊಂಡು ಬರಬೇಕೆಂಬುದು ಬಹುಮಂದಿ ಜಿನಪುರಾಣ ಕರ್ತೃಗಳ ಉದ್ದೇಶವಾಗಿದ್ದಿತ್ತು. ಹತ್ತನೆಯ ಶತಮಾನ ಜೈನರ ಅಭ್ಯುದಯದ ಕಾಲ. ರಾಜರ, ಮಾಂಡಲಿಕರ ಆಶ್ರಯದಲ್ಲಿ ಕವಿಗಳು ತಮ್ಮ ಮತದ ಪ್ರಚಾರ ಪ್ರಸಾರ ಕಾರ್ಯದಲ್ಲಿ ಆಸಕ್ತರಾಗಿ ಕೃತಿರಚನೆಗೆ ತೊಡಗಿದರು.

ಹತ್ತನೆ ಶತಮಾನದ ಪ್ರತಿಭಾನ್ವಿತ ಕವಿತ್ರಯರಾದ ಪಂಪ, ಪೊನ್ನ, ರನ್ನರು ಒಂದೊಂದು ಲೌಕಿಕ ಒಂದೊಂದು ಆಗಮಿಕ (ಪೌರಾಣಿಕ) ಕೃತಿ ರಚಿಸಿದರು. ಈ ರೀತಿಯ ಕಲ್ಪನೆಗೆ ಪಂಪ ಕಾರಣಪುರುಷನಲ್ಲ. ಪಂಪಪೂರ್ವಯುಗದ ಮೊದಲನೆಯ ಗುಣವರ್ಮನಿಗೆ ಬಹುವಾಗಿ ಈ ಬಗ್ಗೆ ಪ್ರಪ್ರಥಮ ಕಲ್ಪನೆಯ ಶ್ರೇಯಸ್ಸು ಸಲ್ಲಬಹುದೇನೋ. ಏಕೆಂದರೆ ಆತ ಲೌಕಿಕ ಕಾವ್ಯವಾದ 'ಶೂದ್ರಕ'ವನ್ನು ಆಗಮಿಕ ಕಾವ್ಯವಾದ 'ಹರಿವಂಶ'ವನ್ನು ರಚಿಸಿ ಮುಂದಿನವರಿಗೆ

ಮಾರ್ಗದರ್ಶಿಯಾಗಿರುವನು. ಲೌಕಿಕ ಕೃತಿಗಳು ಕವಿಗೆ ಆಶ್ರಯವಿತ್ತ ಚಾಲುಕ್ಯ ಎರಡನೆಯ ಅರಿಕೇಸರಿಯ ಕೀರ್ತಿ ಶಾಶ್ವತವಾಗಿ ಭೂಮಂಡಲದಲ್ಲಿ ನೆಲಸಲಿ ಎಂದು ಮಹಾಭಾರತದ ನಾಯಕ ಅರ್ಜುನನನ್ನಾಗಿ ಮಾಡಿ ಮಹಾಭಾರತದ ಕಥೆಯನ್ನು ರಚಿಸಿದನು. ಆತನು ತನ್ನ ಸಮಕಾಲೀನ ಜನಜೀವನ, ರಾಜಕೀಯ ವಿಚಾರಗಳನ್ನೆಲ್ಲ ಪಂಪಭಾರತದಲ್ಲಿ ತಂದನು.

ಇತಿಹಾಸದೊಂದಿಗೆ ಸಮಕಾಲೀನ ವ್ಯಕ್ತಿಯೊಬ್ಬನ ಚರಿತ್ರೆಯನ್ನು ಮೇಳೈಸಿ ಬರೆದುದು ಕನ್ನಡ ಸಾಹಿತ್ಯ ಇತಿಹಾಸದಲ್ಲಿ ಗಮನಾರ್ಹ ವಿಚಾರ. ನೇರವಾದ ಚರಿತ್ರೆ ಕಾವ್ಯಗಳಿಂಗಿತ ಬೇರೆಯಾದ ಈ ಸರಣಿ ಕನ್ನಡ ಹಾಗೂ ಭಾರತೀಯ ಸಾಹಿತ್ಯಕ್ಕೆ ವಿಶಿಷ್ಟವಾದುದು. ಪಂಪನ ಸಮಕಾಲೀನ ಕವಿಗಳು ಪಂಪನ ಹಾದಿಯಲ್ಲೇ ನಡೆದು ಅವರೂ ಒಂದೊಂದು ಲೌಕಿಕ ಕೃತಿರಚನೆಗೆ ಕೈ ಹಾಕಿದರು.

ಪೊನ್ನ ತನಗೆ ಆಶ್ರಯವಿತ್ತ ರಾಷ್ಟ್ರಕೂಟ ಮೂರನೆಯ ಕೃಷ್ಣನನ್ನು ರಾಮಾಯಣದ ಕಥಾನಾಯಕ ರಾಮನನ್ನಾಗಿ ಸಂಬೋಧಿಸಿ "ಭುವನೈಕರಾಮಾಭ್ಯುದಯ'(ರಾಮಕಥೆ)ಯನ್ನು ರಚಿಸಿರಬಹುದು. ರನ್ನ ತನಗೆ ಆಶ್ರಯವಿತ್ತ ಚಾಲುಕ್ಯ ತೈಲಪ ಚಕ್ರವರ್ತಿಯ ಮಗ ಇರಿವಬೆಡಂಗ ಸತ್ಯಾಶ್ರಯನು ಚೋಳ ರಾಜನಾದ ಅಪರಾಜಿತನ ಮೇಲೆ ದಂಡೆತ್ತಿ ಹೋಗಿ ಅವನ ರಾಜಧಾನಿಯಾದ ಕಂಚಿಯನ್ನು ಸುಟ್ಟ. ಹಾಗೂ ಮೇಲೇರಿ ಬಂದ ಘೂರ್ಜರನ್ನು ಸಂಹರಿಸಿದ ಸಾಹಸದ ಕಥೆಯಿಂದ ಪ್ರೇರಿತನಾಗಿ 'ಸತ್ಯಾಶ್ರಯಯದೇವನೆ ಪೃಥ್ವೀವಲ್ಲಭಂ ಕಥಾನಾಯಕನಾಗೆ, ಅಖಿಲಜನೋಳ್ಪೊಲಿಸಿ' ಗದಾಯದ್ಧ ಕಾವ್ಯವನ್ನು ರಚಿಸಿದನು.

ಜೈನ ಕವಿಗಳು ಲೌಕಿಕ ಕಾವ್ಯಗಳ ಜತೆಗೆ ತಮ್ಮ ಧರ್ಮದ ಮೇಲಿನ ಅಭಿಮಾನದಿಂದ ಧರ್ಮಕ್ಕೆ ಸಂಬಂಧಿಸಿದ ಪ್ರಕ್ರಿಯೆಗಳನ್ನು ತ್ರಿಷಷ್ಠಿ ಶಲಾಕಾಪುರುಷರ ಜೀವನ ಚರಿತ್ರೆಗಳನ್ನು ತಿಳಿಸುವ ಕೃತಿಗಳನ್ನು ರಚಿಸಿದರು. ಜೈನಧರ್ಮದ ಪ್ರಚಾರ ಈ ಪುರಾಣ ಕಾವ್ಯಗಳ ಉದ್ದೇಶಗಳಲ್ಲೊಂದು. ಜೈನಕವಿಗಳು ತೀರ್ಥಂಕರರ ಚರಿತ್ರೆಯನ್ನು ಪುರಾಣರೂಪದಲ್ಲಿ ಬರೆದರೂ ಅದನ್ನು ಅವರು ಮಹಾಕಾವ್ಯವೆಂದೇ ಭಾವಿಸಿದ್ದರು. ಜಿನಸೇನಾಚಾರ್ಯರು ಹೇಳುವಂತೆ ಬಹು ಪ್ರಾಚೀನ ಕಾಲದ ಇತಿಹಾಸ ಮೊದಲಾದ ವಿಷಯಗಳುಳ್ಳುದೂ ತೀರ್ಥಂಕರರು ಮೊದಲಾದ ಮಹಾಪುರುಷರ ವರ್ಣನೆಯಳ್ಳದೂ ಧರ್ಮ ಅರ್ಥ ಕಾಮಗಳೆಂಬ ತ್ರಿವರ್ಗಗಳ ವರ್ಣನೆಯುಳ್ಳದೂ ಆದ ಕಾವ್ಯವು ಮಹಾಕಾವ್ಯವೆನಿಸುವುದು. ಜಿನಸಮಯ ದೀಪಕರಲ್ಲಿ ಮೊದಲಿಗನಾದ ಪಂಪ ತನ್ನ ಕೃತಿರಚನೋದ್ದೇಶವನ್ನು ಆದಿಪುರಾಣದ ಪ್ರಾರಂಭದಲ್ಲಿ ಹೇಳಿರುವನು. (ಆ.ಪು.೧.೩೭) ಧರ್ಮಪ್ರಚಾರವೊಂದೇ ಅಲ್ಲ ಈ ಪುರಾಣಕೃತಿಗಳ ಉದ್ದೇಶ, 'ಭವವಾರಾಶಿ ನಿಮಗ್ನರಂದಯೆ ದಮಂ ತಪಂಶೀಲಮೆಂಬಿವೆ ಮೆಯ್ಯುಗಿರೆಸಂದ ಧರ್ಮಮೆ ವಲಂ ಪೊತ್ತೆತ್ತಗುಂ ಮುಕ್ತಿಪರ್ಯವಸಾನಂಬರಮಾನುಷಂಗಿಕ ಫಲಂ ಭೂಪೇಂದ್ರ ದೇವೇಂದ್ರ ರಾಜ್ಯವಿಳಾಸಂ ತಲ್ತು

ನಂಬು' ಎಂದು ಸವಿನಯವಾಗಿ ಸದ್ಧರ್ಮ ಪ್ರಭಾವನೆಯನ್ನು ಮಾಡುವುದೂ ಈ ಪುರಾಣಗಳ ಉದ್ದೇಶವಾಗಿದೆ. ಸಂಸಾರಚಕ್ರದಲ್ಲಿ ಸುತ್ತುತ್ತಿರುವ ಅಘಧರರಿಗೆ ಮುಕ್ತಿ ಮಾರ್ಗದರ್ಶನ ಮಾಡಿಸುವುದು. ಸಂಸಾರ ಎಷ್ಟು ಹೇಯವಾದುದು ಎನ್ನುವುದರ ಪರಿಚಯ ಮಾಡಿಕೊಟ್ಟು ಅದರ ಬಗ್ಗೆ ಕೊಕ್ಕರಿಕೆ ಬರುವಂತೆ ಮಾಡಿ ಸತ್ಪಥದತ್ತ ಒಯ್ಯುವುದು. ಈ ಪುರಾಣ ಕಾವ್ಯಗಳ ಪ್ರಧಾನೋದ್ದೇಶ. ಅತಿ ಕ್ಲಿಷ್ಟ ಸಾಧನೆಯ ಮೂಲಕ ಪ್ರಯತ್ನಪಟ್ಟು ಮಾನವ ತನ್ನ ಹಿಂದಿನ ನಿಕೃಷ್ಟ ಅವಸ್ಥೆಯ ರಾಗಾವೇಶಗಳಿಂದ ಬಿಡುಗಡೆ ಹೊಂದಿ ಬೇರೊಂದು ಬಗೆಯ ಮುಕ್ತಾವಸ್ಥೆಯನ್ನು ಹೊಂದಬಹುದೆಂಬ ಶಾಶ್ವತವಾದ ಮಹತ್ ಸಂದೇಶವನ್ನು ಬೀರಿದ ಕೃತಿಗಳಿವು.

ಆರ್.ಸಿ.ಹಿರೇಮಠರು ಅಭಿಪ್ರಾಯಪಡುವಂತೆ "ಮಾರ್ಗ ಮತ್ತು ದೇಸಿಗಳನ್ನು ಅನುಕ್ರಮವಾಗಿ 'ಕ್ಲಾಸಿಕಲ್' ಮತ್ತು 'ರೊಮ್ಯಾಂಟಿಕ್' ಎಂಬ ಆಂಗ್ಲ ಪರಿಭಾಷೆಯಲ್ಲಿ ವಿವರಿಸಬಹುದಾಗಿದೆ, ಮಾರ್ಗವು ಸಂಪ್ರದಾಯಬದ್ಧವಾದ, ಪರಂಪರೆಯುಳ್ಳುದು, ನಿತ್ಯ ನೂತನವಾದದು."

ಮಾರ್ಗ ಮತ್ತು ದೇಸಿ ಪ್ರತ್ಯೇಕ ಪ್ರತ್ಯೇಕವಾಗಿ ಕೃತಿಗಳಲ್ಲಿ ವ್ಯಕ್ತವಾಗುತ್ತಿದ್ದುದು ನಾಗಚಂದ್ರನ ಕಾಲಕ್ಕೆ ಬದಲಾದಂತೆ ಕಂಡುಬರುತ್ತದೆ. ಮಾರ್ಗ ಮತ್ತು ದೇಶಿಗಳೆರಡನ್ನು ಒಟ್ಟುಗೂಡಿಸುವ ಪ್ರಯತ್ನವನ್ನು ನಾಗಚಂದ್ರ ಮಾಡಿದನು. ರಾಮಕಥೆಯುಂ ಕೀಱಿದಾಗಿರೆ ದೇಸಿ ಮಾರ್ಗಮೆಂಬೆರಡುಱೊಳಂ ಜಸಂಬಡೆದು ಪಂಡಿತ ಮಂಡಲಿ ಮೆಚ್ಚೆ ತಾನು ರಾಮಚಂದ್ರ ಚರಿತ ಪುರಾಣವನ್ನು ಹೇಳಿದುದಾಗಿ ಸ್ವತಃ ನಾಗಚಂದ್ರನೇ ಹೇಳಿರುವುದು.

ಜೈನ ಧರ್ಮದ ಪ್ರಚಾರಕ್ಕಾಗಿ ಪುರಾಣಕಾವ್ಯವನ್ನು ಚಂಪೂವಿನಲ್ಲಿ ಬರೆಯಹೊರಟ ಪಂಪ, ಆ ಮೂಲಕ ತನ್ನ ಮುಂದಿನವರಿಗೆ ಮಾರ್ಗದರ್ಶಕನಾದನು. ಪಂಪನು ಅನುಸರಿಸಿದ ಮಾರ್ಗ ಆತನ ಮುಂದಿನವರಿಗೂ ಹಿಡಿಸಿತು. ಹೀಗಾಗಿ ಚಂಪೂ ಅಂದು ವಿಶೇಷ ಸ್ಥಾನಮಾನ ವಹಿಸಿತು. ೧೨ನೇ ಶತಮಾನದವರೆಗೂ ಚಂಪೂವಿನ ರಾಜಮಾರ್ಗದಲ್ಲೆ ನಡೆದ ಕವಿಗಳು ಅದನ್ನು ಸಮೆಸಿದರು. ಹನ್ನೆರಡನೆಯ ಶತಮಾನದ ಹೊತ್ತಿಗೆ ವಿರಶೈವ ಧರ್ಮದ ಉದಯದೊಂದಿಗೆ ಜೈನಧರ್ಮದ ಪ್ರಭಾವ ಕಡಿಮೆಯಾಗುವಂತಾಯಿತು. ಸಾಲದುದಕ್ಕೆ ಪಂಡಿತ ಪಾಮರರೆಂಬ ಭೇಧಬಾವವಿಲ್ಲದೆ, ತಮ್ಮ ಅನುಭವಗಳು, ಅನಿಸಿಕೆಗಳು ಸರ್ವರ ಸೊತ್ತಾಗಬೇಕೆಂದು ಶರಣರು 'ವಚನ'ಗಳನ್ನು ರಚಿಸಿದರು. ಅವು ಬಹುಜನಪ್ರಿಯವಾದುದು ಜೈನಕವಿಗಳಿಗೆ ಚಂಪೂವಿನಲ್ಲಿ ಕೃತಿರಚನೆ ಮಾಡಲು ದೊಡ್ಡ ಅಡಚಣೆಯಾಯಿತು.

ವೀರಶೈವ ಶರಣರು ವಚನ ರಚನೆಯಲ್ಲಿ ಕೈಹಾಕಿ ಜನಬಳಕೆಯ ಮಾತು ಕಾವ್ಯಕ್ಕೆ 'ವಾಹಕ'ವಾಗಬಲ್ಲುದೆಂಬುದನ್ನು ಮೊದಲು ತೋರಿಸಿಕೊಟ್ಟರು. ಶರಣರ ಸ್ವತಂತ್ರ ದೇಸಿನಿಷ್ಠ ಅಭಿವ್ಯಕ್ತಿವಿಧಾನದಿಂದ ಪ್ರೇರಣೆಗೊಂಡ ಹರಿಹರ ರಾಘವಾಂಕರು ರಗಳೆ, ಷಟ್ಪದಿಗಳಲ್ಲಿ ಕಾವ್ಯರಚನೆ ಮಾಡಿದರು. ಇವರ ಕೃತಿಗಳೆ, ಬಹುವಾಗಿ ಹಿಂದಿನ ಚಂಪೂ ಪದ್ಧತಿಯಿಂದ ಭಿನ್ನವಾದುವು.

ಹರಿಹರ ಬಸವ ಪುರಾತನರು ಹಾಗೂ ಬಸವ ಸಮಕಾಲೀನರುಗಳ, ಶಿವನ ಭಕ್ತರ ಮತ್ತು ತಮುಳುನಾಡಿನ ಅರುವತ್ತುಮೂವರು ಪುರಾತನ ಭಕ್ತರ ಚಾರಿತ್ರೆಗಳನ್ನು ಮೊತ್ತಮೊದಲು ರಗಳೆಯಲ್ಲಿ ಬರೆದನು. ಈತ ಶತಕ, ಅಷ್ಟಕಗಳನ್ನು ರಚಿಸಿದ ಮೊದಲ ವೀರಶೈವ ಕವಿಯಾಗಿಯೂ ಕಂಡುಬರುವನು.

ರಾಘವಾಂಕನು ಪುರಾಣ ಪ್ರಸಿದ್ಧರೂ ಕಾಲ್ಪನಿಕ ವ್ಯಕ್ತಿಗಳೂ ಅಲ್ಲದ ಸಿದ್ಧರಾಮ ಹಾಗೂ ಆದಯ್ಯ ಇವರ ಚಾರಿತ್ರವನ್ನು ಹೇಳಿದರೆ, ಪದ್ಮಣಾಂಕನು ಹರಿಹರ-ರಾಘವಾಂಕರ ಸಮಕಾಲೀನನೆನ್ನುವ ಪದ್ಮರಾಜನನ್ನು ಕುರಿತು ಪುರಾಣವನ್ನು ಬರೆದನು. ಹೀಗೆ ಚಂಪೂಕಾವ್ಯಗಳಿಂದ ಭಿನ್ನವಾದ ರೀತಿಯಲ್ಲಿ ಕಥಾವಸ್ತುವಿನ ಆಯ್ಕೆ, ನಿರೂಪಣೆ, ಭಾಷಾಶೈಲಿ ಇವುಗಳಲ್ಲಿ ಗಮನೀಯ ವ್ಯತ್ಯಾಸಗಳನ್ನು ವೀರಶೈವ ಕವಿಗಳು ಕಾಣಿಸಿದರು. ಈ ಭಿನ್ನತೆಗಳಿಂದಾಗಿ ಕನ್ನಡ ಕಾವ್ಯ ಪ್ರಪಂಚದಲ್ಲಿ ವಸ್ತುಕ ವರ್ಣಕಗಳೆಂಬ ಎರಡು ಕಾವ್ಯಮಾರ್ಗಗಳು ತಲೆದೋರಿದವು.

'ವಸ್ತುಕ' 'ವರ್ಣಕ' ಎಂಬ ಬಗೆಯ ಕಾವ್ಯ ಸಂಪ್ರದಾಯಗಳು ಕನ್ನಡ ಸಾಹಿತ್ಯದಲ್ಲಿ ಪ್ರಸಿದ್ಧವಿದ್ದರೂ, ಕೆಲವು ಕವಿಗಳು ಇವುಗಳ ಹೆಸರನ್ನು ಉಲ್ಲೇಖಿಸಿದ್ದರೂ ಇವುಗಳ ನಿರ್ದಿಷ್ಟ ಲಕ್ಷಣಗಳನ್ನು ಹೇಳಲಿಲ್ಲ. ಅವರಿಗೆ ಇವುಗಳ ಅರ್ಥ ಸ್ಪಷ್ಟವಾಗಿ ತಿಳಿದಿದ್ದುದರಿಂದ ಇವುಗಳ ಸಾಂಕೇತಿಕ ಲಕ್ಷಣಗಳ ಅನವಶ್ಯಕವೆಂದೂ ತೋರಿರಬಹುದು.ಬಹುಶಃ ತಿರುಮಲಾರ್ಯ ವಸ್ತುಕದ ಲಕ್ಷಣಗಳನ್ನು ಹೇಳಿದವರಲ್ಲಿ ಮೊದಲಿಗನಿರಬಹುದು. ಈತ 'ಇದಕ್ಕೆ (ಗದ್ಯ ಪದ್ಯಗಳಿಂದ ಕೂಡಿರುವ ಕಾವ್ಯಕ್ಕೆ) 'ಚಂಪುವೆಂದುಂ ವಸ್ತುಕವೆಂದುಂ ಪೆಸರ್' ಎಂದು ಹೇಳುತ್ತಾ 'ಚಂಪೂ' ಹಾಗೂ 'ವಸ್ತುಕ'ಗಳನ್ನು ಪರ್ಯಾಯ ಪದಗಳನ್ನಾಗಿ ಸ್ವೀಕರಿಸಿದನು. ಷಡಕ್ಷರದೇವ ತನ್ನ ಕೃತಿಗಳಾದ ರಾಜಶೇಖರ ವಿಳಾಸ, ಶಬರಶಂಕರ ವಿಳಾಸ, ಬಸವರಾಜ ವಿಜಯಗಳು ವಸ್ತುಕ ಕಾವ್ಯಗಳೆಂದು ತಿಳಿಸಿರುವನು. ಇವನ ಹೇಳಿಕೆಯ ಆಧಾರದ ಮೇಲೆ 'ವಸ್ತುಕ' ವೆಂದರೆ 'ಚಂಪೂ' ಕಾವ್ಯವೆಂದು ಊಹಿಸಬೇಕಾಗುತ್ತದೆ. ಭೀಮಕವಿ ತನ್ನ 'ಬಸವಪುರಾಣದ ಎರಡನೆಯ ಸಂಧಿಯಲ್ಲಿ ಪೂರ್ವಕವಿ ಸ್ಮರಣೆ ಮಾಡುತ್ತಾ ಹರಿಹರನೆ, ಗಿರಿಜಾಕಲ್ಯಾಣವನ್ನು ವಸ್ತುಕ ಕೃತಿಯಾಗಿಯೂ ಶಿವಶರಣರ ರಗಳೆಯನ್ನು ವರ್ಣಕ ಕೃತಿಗಳಾಗಿಯೂ ರಚಿಸಿರುವ ವಿಷಯವನ್ನು ಪ್ರಸ್ತಾಪಿಸಿರುವರು. ವಸ್ತುಕ ಕಾವ್ಯದ ಮುಂದೆ ವರ್ಣಕ ಕಾವ್ಯದ ಬೆಲೆ ಏತಕ್ಕೂ ಬಾರದೆನ್ನುವ ಕೆಲವರ ಅಭಿಪ್ರಾಯವನ್ನು ಭೀಮಕವಿ ನಿರಾಕರಿಸ ಬಯಸಿ

ಪ್ರಾಸ ಯತಿ ಗಣ ಗದ್ಯ ಪದ್ಯ ಸ
ಮಾಸಯುತ ವಸ್ತುಕದ ಮುಂದೆ ವಿ
ಳಾಸಮೇ ಸಾಮಾನ್ಯಮೀ ವರ್ಣಕ ಕವಿತೆಯೆಂದು
ಓಸರಿಸದಿರಿ ಬರಿಯ ಕನ್ನಡ
ಭಾಷೆಯೆಂದೆನಲಾಗದು ಇಳೆಗಿದು
ಲೇಸೆನಿಪ ವೇದಪ್ರಮಾಣವೆನಿಪ್ಪುದು........॥(೧.೨೧)

ಎಂದಿರುವನು. ಈ ಅಭಿಪ್ರಾಯಗಳ ಹಿನ್ನೆಲೆಯಲ್ಲಿ 'ಕನ್ನಡಕೈಪಿಡಿ'ಯ ಸಂಪಾದಕರು ಈ ಬಗ್ಗೆ ವಿವೇಚಿಸುತ್ತಾ "ಈ ಸಂಸ್ಕೃತ ಚಂಪೂ ಲಕ್ಷಣವನ್ನೂ, ಸರಣಿಯನ್ನು ಅನುಸರಿಸಿ ಬರೆದಿರುವ ಗದ್ಯ

ಪದ್ಯಾತ್ಮಕವಾದ ಕಾವ್ಯಕ್ಕೆ ವಸ್ತುಕವೆಂದೂ, ಯಾವುದೊಂದು ವಿಶೇಷ ಕಾವ್ಯಲಕ್ಷಣವನ್ನಾಗಲಿ, ಸಂಸ್ಕೃತಕಾವ್ಯದ ಮಾದರಿಯನ್ನಾಗಲೀ, ಇಟ್ಟುಕೊಳ್ಳದೆ ಬರೆದಿರುವ ಪದ್ಯಕಾವ್ಯಕ್ಕೆ 'ವರ್ಣಕವೆಂದು' ಹೆಸರೂ ಸಲ್ಲುವಂತೆ ಹೇಳಬೇಕಾಗುತ್ತದೆ" ಎಂದು ಅಭಿಪ್ರಾಯ ಪಡುವರು.

ವರ್ಣಕ:

ಹಿಂದೆಯೇ ತಿಳಿಸಿರುವಂತೆ 'ವಸ್ತುಕ'ದಲ್ಲಿ ಚಂಪೂ ಒಂದೇ ಅಡಕವಾದರೆ 'ವರ್ಣಕ'ದಲ್ಲಿ ಹಲವು ಬಗೆಯ ಛಂದೋಪ್ರಕಾರಗಳು ಸಮಾವೇಶಗೊಳ್ಳುತ್ತವೆ. ಭೀಮಕವಿಯ ರಗಳೆಯನ್ನು 'ವರ್ಣಕ'ವೆಂದು ಕರೆದಿರುವನು. ಈತ ವಿದ್ವಜ್ಜನ ವರ್ಗದಲ್ಲಿ ವಸ್ತುಕ ವರ್ಣಕಗಳ ಬಗೆಗಿರುವ ತರ-ತಮ ಭಾವವನ್ನು ಹೇಳುತ್ತಾ 'ಪ್ರಾಸಯತಿಗಳನ್ನು ಗದ್ಯ ಪದ್ಯ ಸಮಾಸಯತ ವಸ್ತುಕದ ಮುಂದೆ ವಿಳಾಸಮೇ ಸಮಾನ್ಯವೀ ವರ್ಣಕ ಕವಿತೆಯೆಂದು ಓಸರಿಸದಿರಿ' ಎಂದೂ, ತನ್ನ ವರ್ಣಕ ಕೃತಿಯಾದುದು "ಪರಿಮಿತಾಕ್ಷರ ತತಿಯೊಳಪರಿಮಿತಾರ್ಥ ರಚನೆಯಲಿ ವಿರಚಿಸುವುದನು ಕವಿಯ ಚತುರತೆ"ಯೆಂದೂ ಹೇಳಿ ಆ ಮೂಲಕ ವಸ್ತುಕ ವರ್ಣಕಗಳ ಸ್ಥೂಲವಾದ ಲಕ್ಷಣಗಳನ್ನು ಗುರುತಿಸಿ ಹೇಳಿರುವನು. ಭೀಮಕವಿ ಪ್ರಕಾರ ಷಟ್ಪದಿ ವರ್ಣಕವೆಂದಾಯಿತು. ಗುಬ್ಬಿಯ ಮಲ್ಲಣಾರ್ಯನ ಭಾವಚಿಂತಾರತ್ನ ವಾರ್ಧಕಷಟ್ಪದಿಯಲ್ಲಿದ್ದು ಇದನ್ನು ಷಡಕ್ಷರಿ 'ವರ್ಣಕ'ಕೃತಿಯೆಂದು ಕರೆದಿರುವನು. ಒಟ್ಟನಲ್ಲಿ ರಗಳೆ, ಷಟ್ಪದಿ, ಸಾಂಗತ್ಯ, ತ್ರಿಪದಿ, ಯಕ್ಷಗಾನ ಈ ಎಲ್ಲಬಗೆಯ ಕಾವ್ಯ ಪ್ರಕಾರಗಳನ್ನು 'ವರ್ಣಕದ' ಗುಂಪಿಗೆ ಸೇರಿಸಲಾಗುವುದು.

ವರ್ಣಕದ ಲಕ್ಷಣವನ್ನು ನೇರವಾಗಿ ಕವಿಗಳು ಹೇಳದಿದ್ದರೂ ಪರೋಕ್ಷವಾಗಿಯಾದರೂ ಹೇಳಿರುವರು. 'ವಸ್ತುಕ' ಕಾವ್ಯಗಳಲ್ಲಿ ಅಷ್ಟಾದಶ ವರ್ಣನೆಯು ಪ್ರಧಾನವಾಗಿ ಬರುತ್ತದೆ, ವ್ಯಾಕರಣ, ಛಂದಸ್ಸು, ಅಲಂಕಾರ, ಭಾವ, ರಸ ಮೊದಲಾದವುಗಳೂ ಚಂಪುವಿನಲ್ಲಿ ಪ್ರಾಧ್ಯಾನ್ಯ ಪಡೆದಿವೆ. ಮೊತ್ತಮೊದಲು ರಾಘವಾಂಕ ತನ್ನ 'ಸಿದ್ಧರಾಮ ಚಾರಿತ್ರ'ದಲ್ಲಿ 'ನೆರೆದ ಸೂಗಸಿನ ಸುಗ್ಗಿ ರಸದ ಮಡು ಪುಣ್ಯದಾಗರಮೆನಿಪ ಸಿದ್ಧರಾಮನ ಕಥೆಗೆ ಕಾವ್ಯಮಂ ವಿರಚಿಸುವಡಷ್ಟಾದಶಸ್ಥಲವ ಪೇಳಲೇಕಗ್ಗದ ಸಮರ್ಥಕವಿಗೆ' ಎಂದು ಘೋಷಿಸಿದರು. ಆತ ಹಾಕಿಕೊಟ್ಟ ಒಂದು ಮಾರ್ಗ ಮುಂದಿನ ಕವಿಗಳಿಗೆ ಸತ್‌ಸಂಪ್ರದಾಯವಾಯಿತು.

ಅಷ್ಟಾದಶ ವರ್ಣನೆಯನ್ನು ಕೈಬಿಟ್ಟಿರುವುದು ವಿಶೇಷವಾಗಿ ವರ್ಣಕ ಕೃತಿಗಳಲ್ಲಿ ಈ ಲಕ್ಷಣ ಗುಣ ಕಂಡು ಬಂದಿರುವುದು ವರ್ಣಕದ ಮುಖ್ಯ ಲಕ್ಷಣವೆನ್ನಬಹುದು. ಭೀಮಕವಿಯು ವರ್ಣಕ ಕೃತಿಗಳನ್ನು 'ಬರಿಯ ಕನ್ನಡ ಭಾಷೆಯೆಂದೆನಲಾಗದು ವೇದ ಪ್ರಮಾಣವೆನಿಪ್ಪುದು' ಎಂದಿರುವನು. ವರ್ಣಕ ಕಾವ್ಯಗಳ ಸರಳ ನಡಿಗೆಯನ್ನು ನೋಡಿ ಅವನ್ನು ತಪ್ಪಾಗಿ ಭಾವಿಸಬಾರದಾಗಿಯೊ; ಅವು ಸರಳ ಭಾಷೆಯಲ್ಲಿ ಸರಳ ನಿರೂಪಣೆಯಲ್ಲಿ ಜನಮನವನ್ನಾಕರ್ಷಿಸಿದ್ದರೂ ಅವು ವೇದಪ್ರಮಾಣಗಳ ಆಧಾರವನ್ನು ಹೊಂದಿರುವ ಪ್ರಮಾಣಗ್ರಂಥಗಳಾಗಿರುವುದಾಗಿಯೂ ತಿಳಿಸುವನು. ಭೀಮಕವಿ ಹೇಳುವ ವರ್ಣಕ ಕಾವ್ಯಗಳ ಮತ್ತೊಂದು ಪರಿಮಿತಾಕ್ಷರ

ತತಿಯೊಳಪರಿಮಿತಾರ್ಥ ರಚನೆ. ಇದನ್ನೇ ಇನ್ನೂ ಸರಳಗೊಳಿಸಿ ಹೇಳುವುದಾದರೆ 'ಕಿರಿದೊಳ್ ಪಿರಿದು ಅರ್ಥ' ಎನ್ನಬಹುದು. ವರ್ಣಕ ಕೃತಿಗಳು ಯಾವುದನ್ನೂ 'ಉಚಿತಕ್ಕೆ ತಕ್ಕಷ್ಟು' ಹೇಳುವುವು. ಉದಾಹರಣೆಗೆ ಧರ್ಮ, ತತ್ವ, ನೀತಿ ವರ್ಣನೆ, ರಸ ಇತ್ಯಾದಿ

ಆರ್. ಸಿ ಹೀರೆಮಠರವರು ವರ್ಣಕದ ಮುಖ್ಯ ಲಕ್ಷಣ ಗೇಯತೆ ಅಂದರೆ ಹಾಡಿಕೆ ಎಂದು ಹೆಳುವರು, "ವರ್ಣಕದ ಲಕ್ಷಣ ಕೇವಲ ಛಂದಸ್ಸಿನಲ್ಲಿರದೆ ಅದರ ಪಠಣ ರೀತಿಯಲ್ಲಿ ಇದ್ದಂತೆ ತೋರುತ್ತದೆ. ಪದ, ಮೆಲ್ವಾಡು, ಪಾಡು, ಪಾಡುಗಬ್ಬ ಮುಂತಾದುವೆಲ್ಲ ಗೇಯಪ್ರಧಾನವಾಗಿರಬಹುದೆಂದು ಅವುಗಳ ಹೆಸರುಗಳಿಂದಲೇ ಊಹಿಸಬಹುದಾಗಿದೆ. ಷಟ್ಪದಿ ಕಾವ್ಯಗಳನ್ನು ಮೊದಲಿನಿಂದಲೂ ಹಾಡುತ್ತಲೇ ಬಂದಿರುವರೆಂಬುದಕ್ಕೆ ಆ ಕಾವ್ಯಗಳ ತಾಡವೋಲೆಯ ಪ್ರತಿಗಳಲ್ಲಿ ಅನೇಕ ರಾಗಗಳನ್ನು ಸೂಚಿಸಿರುವದೇ ಸಾಕ್ಷಿ. (ಭೀಮಕವಿಯ ಬಸವಪುರಾಣವನ್ನು ನೋಡಬಹುದು) ಸಾಂಗತ್ಯ ತ್ರಿಪದಿಗಳು ಇಂದಿಗೂ ಗೇಯಪ್ರಧಾನವೇ ಆಗಿವೆ. ರಗಳೆಯನ್ನು ಹರಿಹರದೇವರು ಪಂಪಾವಿರೂಪಾಕ್ಷನ ಸನ್ನಿಧಿಯಲ್ಲಿ ಭಕ್ತಿನಿರ್ಭರತೆಯಲ್ಲಿ ಹಾಡುತ್ತಿದ್ದನೆಂದು ಪ್ರತೀತಿಯಿದೆ, ಅಂತೆಯೇ ಷಟ್ಪದಿ, ಸಾಂಗತ್ಯ, ರಗಳೆ ತ್ರಿಪದಿ ಮುಂತಾದ ದೇಶಿಯ ಛಂದಸ್ಸುಗಳಲ್ಲಿ ಬರೆದ ಕಾವ್ಯಗಳನ್ನು ಹಾಡುಗಬ್ಬಗಳೆಂದು ಕರೆವ ರೂಢಿಯುಂಟು ಎಂದಿರುವರು.

ಷಟ್ಪದಿ:

ಹನ್ನೆರಡನೆಯ ಶತಮಾನದ ಮಧ್ಯಭಾಗ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಗಮನಾರ್ಹವಾಗಿದೆ. ವೀರಶೈವ ಶರಣರಿಂದ ಸಾಹಿತ್ಯಕ್ಕೆ ಸಂಬಂಧಿಸಿದ ಕ್ರಾಂತಿ ಛಂದಸ್ಸಿನ ಪುನರುಜ್ಜೀವನ ಹಾಗೂ ಪರಿವರ್ತನೆಗೆ ಎಡೆಮಾಡಿಕೊಟ್ಟಿತು. ಅಂಶಗಣವಾದ ತ್ರಿಪದಿ ಮಾತ್ರಾಗಣಕ್ಕೆ ಪರಿವರ್ತಿತವಾದಂತೆ ಅಂಶಗಣ ಷಟ್ಪದಿಯೂ ಮಾತ್ರಾಗಣಕ್ಕೆ ಪರಿವರ್ತಿತವಾಯಿತು. ಪ್ರಾರಂಭದಲ್ಲಿ ಅಂಶಗಣಾನ್ವಿತವಾಗಿದ್ದು ಒಂದೇ ಒಂದು ಷಟ್ಪದಿ ಈ ಕಾಲದಲ್ಲಿಯೇ ಮಾತ್ರಾಗಣಕ್ಕೆ ಪರಿವರ್ತಿತವಾಗಿ ನಿರ್ಧಿಷ್ಟವಾದ ಸ್ವರೂಪವನ್ನು ಪಡೆದುಕೊಂಡಿತು.

ಈಗ ಬಳಕೆಯಲ್ಲಿರುವ ಷಟ್ಪದಿಗಳು ಏಕಕಾಲದಲ್ಲಿ ಎಲ್ಲವೂ ಪ್ರಕಟಗೊಂಡುವು ಎಂದು ಹೇಳಿದರೆ ತಪ್ಪಾದೀತು. ಅವು ಕಾಲದಿಂದ ಕಾಲಕ್ಕೆ ಕವಿಗಳ ಪ್ರಯೋಗಪ್ರಿಯತೆಗೆ ಸಾಕ್ಷಿ ಎನ್ನವಂತೆ ಬೆಳಕಿಗೆ ಬಂದುವು. ಬಹುತೇಕ ವೀರಶೈವ ಪುರಾಣ ಹಾಗೂ ಪುರಾಣ ಛಾಯಾಕೃತಿಗಳು ವಾರ್ಧಕ ಮತ್ತು ಭಾಮಿನೀ ಷಟ್ಪದಿಯಲ್ಲಿ ಬರೆಯಲ್ಪಟ್ಟಿವೆ. "ಕನ್ನಡದಲ್ಲಿ ಷಟ್ಪದಿ ಎರಡು ಹಾದಿಯಿಂದ ನಡೆದಿದೆ; ಒಂದು ಗಂಭೀರವಾದ, ಸುಸಂಸ್ಕೃತವಾದ, ಪ್ರೌಢಶೈಲಿ ವಾರ್ಧಕದ ಮಾರ್ಗವಾಗಿ ನಡೆದುದು, ಇನ್ನೊಂದು ದೇಸಿನಿಷ್ಠವಾದ ಭಾಮಿನಿಯ ಶೈಲಿ..." ವೀರಶೈವ ಪುರಾಣ ಹಾಗೂ ಪುರಾಣ ಛಾಯೆಯ ಕೃತಿಗಳಿಗೆ ಈ ಮಾತು ನೇರವಾಗಿ ಅನ್ವಯಿಸುತ್ತಿದೆ. ಭೀಮಕವಿಯವರೆಗೆ ಬಂದ ವಾರ್ಧಕ ಷಟ್ಪದಿಗಳ ಮೌಲ್ಯಮಾಪನ ಮಾಡುತ್ತಾ ಎಂ.ಆರ್. ಶ್ರೀನಿವಾಸಮೂರ್ತಿಗಳು ಹೀಗೆ ಅಭಿಪ್ರಾಯ ಪಡುವರು.,,, "ಇದಕ್ಕೆ (ಬಸವಪುರಾಣ) ಹಿಂದೆ ಬಂದ ಕವಿಗಳು ಸಾಮಾನ್ಯವಾಗಿ,

ಷಟ್ಪದಿಶೈಲಿಯ ಧೋರಣೆಯನ್ನು ಅಷ್ಟಾಗಿ ಗ್ರಹಿಸಿದಂತೆ ತೋರುವುದಿಲ್ಲ. ಆ ಪದ್ಯಗಳು ರಗಳವಾಗಿ, ಧಾರಾಳವಾಗಿ, ಪ್ರವಾಹರೂಪವಾಗಿ ಓಡುವುದಕ್ಕೆ ಬದಲು, ಅಲ್ಲಲ್ಲಿ ತೊಡರಿಕೊಂಡು, ಭಾರ ಭಾರವಾಗಿ ಕತ್ತರಿಸಿ ಬಿದ್ದಂತೆ ಏನೋ ಬಗೆಯಾಗಿ ಕಾಣಬರುತ್ತದೆ. ಆ ಕಾಲದ ಕವಿಗಳು ಸಂಸ್ಕೃತ ವಾಕ್ಯಗಳನ್ನೊ ಪದಗಳನ್ನೂ ಹೇಗೆ ಹೇಗೋ ಮಧ್ಯದಲ್ಲಿ ತಂದು ಪದಾರ್ಥಗಳ ಕೊನೆಯಲ್ಲಿ ಅನುಸ್ವಾರಾನ್ವಿತ ಪದಗಳನ್ನು ಸೇರಿಸಿ ಷಟ್ಪದಿ ಶೈಲಿಯ ಲಾಲಿತ್ಯಕ್ಕೆ ಕುಂದನ್ನುಂಟು ಮಾಡಿದರು.... ಈತನಿಂದೀಚೆಗೆ (ಭೀಮಕವಿ) ಭಾಮಿನೀ ಮತ್ತು ವಾರ್ಧಕ ಷಟ್ಪದಿಗಳು ಉತ್ತಮೋತ್ತಮವಾಗುತ್ತ ಕಥಾ ವಿಸ್ತಾರಗಳ ಕಾರ್ಯಕ್ಕೆ ಅತ್ಯುಪಯುಕ್ತವಾಗಿ ಪರಿಣಮಿಸಿರುತ್ತದೆ."

ಭಾಮಿನಿ:

ಉತ್ಸಾಹ ರಗಳೆಯು ಬ್ರಹ್ಮಗಣದಿಂದ ಕೂಡಿರುತ್ತದೆ. ಉತ್ಸಾಹವು ಮೂರು ಮಾತ್ರೆಗಳಿಂದ ನಡೆದರೂ ಮಾತ್ರೆಗಳ ಸಂಯೋಜನೆಯ ಕ್ರಮ ೩:೪ ಇರುವ ಸಂಭವವಿರುವುದು. ಇದನ್ನೇ ಅನ್ವಯಿಸಿ ಭಾಮಿನಿಯು ಹುಟ್ಟಿಕೊಂಡಿದೆ. ಇದು ೩:೪:೩:೪ ಈ ಮಾತ್ರೆಗಳುಳ್ಳ ತಾಳವನ್ನು ಹೊಂದಿದ್ದು, ಇದರ ೧:೨:೪:೫ನೇಯ ಸಾಲುಗಳಲ್ಲಿ ಹದಿನಾಲ್ಕು ಮಾತ್ರೆಗಳೂ ೩,೬ನೇಯ ಸಾಲುಗಳಲ್ಲಿ ೩:೪ ಈ ಬಗೆಯ ಗಣ ವಿಭಜನೆಯನುಸಾರ ೨೧ ಮಾತ್ರೆಗಳ ಕೊನೆಯಲ್ಲಿ ಒಂದು ಲಘುವೂ ಬರುತ್ತದೆ. ಕೊನೆಯ ಲಘುವನ್ನು ಗುರುವಾಗಿ ಸ್ವೀಕರಿಸಿದಲ್ಲಿ ೨೩ ಮಾತ್ರೆಗಳಾಗುತ್ತವೆ.

ಮೊತ್ತಮೊದಲು ಭಾಮೀನಿಷಟ್ಪದಿಯನ್ನು ಬಳಸಿ ಅದನ್ನು ಜನಪ್ರಿಯಗೊಳಿಸಿದ ಶ್ರೇಯಸ್ಸು ಭೀಮಕವಿಗೆ ಸಲ್ಲುತ್ತದೆ. "ಷಟ್ಪದಿಗಳ ಗುಟ್ಟನ್ನು ತಿಳಿದು, ಅದನ್ನು ಹೇಗೆ ಉಪಯೋಗಿಸಬೇಕೆಂಬುದನ್ನು ಪತ್ಯಕ್ಷಪಡಿಸಿದವರಲ್ಲಿ ಭೀಮಕವಿಯೇ ಮೊದಲಿಗನು. ಈತನಿಂದೀಚೆ ಭಾಮಿನಿ ಮತ್ತು ವಾರ್ಧಕ ಷಟ್ಪದಿಗಳು ಉತ್ತಮೋತ್ತಮವಾಗುತ್ತ ಕಥಾವಿಸ್ತರಣ ಕಾರ್ಯಕ್ಕೆ ಅತ್ಯುಪಯುಕ್ತವಾಗಿ ಪರಿಣಮಿಸುತ್ತಿವೆ. ಚಾಮರಸ, ಕುಮಾರವ್ಯಾಸ, ಕುಮಾರವಾಲ್ಮೀಕಿ ಇವರುಗಳ ಕೈಯಲ್ಲಿ ಭಾಮಿನಿ ಷಟ್ಪದಿಯು ಪರಿಪೂರ್ಣ ಸೌಂದರ್ಯದಿಂದ ತುಂಬಿ ಭಾವಪ್ರದರ್ಶಕವಾಗಿ, ರಸಿಕಜನ ಚೇತೋಹಾರಿಯಾಗಿ, ಶೋಭಿಸಿರುತ್ತದೆ...."

ಭಾಮಿನಿಯ ಜನಪ್ರಿಯತೆಗೆ ಅದರ ಸರಳ ದೇಸಿನಿಷ್ಠವಾದ ಶೈಲಿ ಹಾಗೂ ಗೇಯಾಂಶ ಬಹು ಮುಖ್ಯ ಕಾರಣಗಳಾಗಿವೆ. ಈ ಷಟ್ಪದಿಯ ಗಣವಿನ್ಯಾಸವು ಅದರ ತಾಳಗಳ ಗತಿಗೆ ಅನುಗುಣವಾಗಿರುವುದನ್ನು ಕಾಣುತ್ತೇವೆ. ೩:೪.೩:೪ ಈ ಮಾತ್ರೆಗಳುಳ್ಳ ತಾಳ ಕೇಳುಗರಿಗೆ ಇನಿದಾಗಿದೆ. ಭೀಮಕವಿಯ 'ಬಸವಪುರಾಣ'ವನ್ನು ತಾಳದ ಗಣನೆಗೆ ಓಡಂಬಟ್ಟು ಹಾಡುತ್ತಿದ್ದರೆಂಬುದಕ್ಕೆ ಆಧಾರಗಳಿವೆ. ಗುಬ್ಬಿಯ ಮಲ್ಲಣಾರ್ಯನು (೧೫೩೦) 'ಬಸವಪುರಾಣ'ದ ವಾಚನ ಹಾಗೂ ಅರ್ಥ ವಿವರಣೆ ಮಾಡುವುದರಲ್ಲಿ ಬಹಳ ಪ್ರಸಿದ್ಧನಾಗಿದ್ದನು. ಈತನನ್ನು ಜನರು ಮೆಚ್ಚುಗೆಯಿಂದ ಬಸವಪುರಾಣದ ಮಲ್ಲಣಾರ್ಯನೆಂದೇ ಕರೆಯುತ್ತಿದ್ದರು. ಭಾವ ಚಿಂತಾರತ್ನದಲ್ಲಿ ಈತ ತನ್ನನ್ನು 'ಬಸವಪುರಾಣದ ಮಲ್ಲಣಾರ್ಯನೆಂದು ಕರೆದುಕೊಂಡಿರುವನು. ಕರ್ನಾಟಕದ ಎಲ್ಲೆಡೆಗಳಲ್ಲೂ ಶ್ರಾವಣ

ಮಾಸದಲ್ಲಿ ಮಠ-ಮಾನ್ಯಗಳಲ್ಲಿ ಪುರಾಣಪ್ರವಚನಗಳನ್ನು ಏರ್ಪಡಿಸುವುದು ಸರ್ವೆಸಾಮಾನ್ಯ. ಈ ಸಂದರ್ಭಗಳಲ್ಲಿ ಭೀಮಕವಿಯ 'ಬಸವಪುರಾಣ' ಈ ಗ್ರಂಥ ವಿಶೇಷವಾಗಿ ಓದಿಸುವುದು, ಅರ್ಥ ಹೇಳಿಸುವುದು ಪದ್ಧತಿಯಾಗಿದೆ. ಪುರಾಣಪ್ರವಚನಕಾರರು ಹಾಡುಗಬ್ಬಗಳಾದ ಇವುಗಳನ್ನು ರಾಗವಾಗಿ, ಅರ್ಥವತ್ತಾಗಿ ಹೇಳಿ ಜನಸಾಮಾನ್ಯರ ಮೇಲೆ ವಿಶೇಷ ಪರಿಣಾಮವನ್ನು ಬೀರುತ್ತಿರುವುದನ್ನು ಈ ಸಂದರ್ಭದಲ್ಲಿ ನೆನೆಯಬಹುದು.

ವೀರಶೈವ ಪುರಾಣದ ಹಾಗೂ ಪುರಾಣಛಾಯಾ ಕೃತಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಮಿನೀ ಷಟ್ಪದಿಯಲ್ಲಿ ಬಂದಿವೆ. ಭಾಮಿನೀ ಷಟ್ಪದಿಯ ಗಣವಿನ್ಯಾಸವು ಕಥಾವಿಸ್ತರಣಾ ಕಾರ್ಯಕ್ಕೆ, ಕಥೆಯ ಸುಲಲಿತ ಓಟಕ್ಕೆ ಚೆನ್ನಾಗಿ ಹೊಂದಿಕೊಳ್ಳುವುದರಿಂದ ವೀರಶೈವ ಕವಿಗಳು ಇದನ್ನು ಹೆಚ್ಚಾಗಿ ಬಳಸಿದರು. ಭೀಮಕವಿಯ (೧೩೬೯) ಬಸವ ಪುರಾಣ, ಭಾಮಿನೀ ಷಟ್ಪದಿಯಲ್ಲಿ ಬಂದಿದೆ.

ಕನ್ನಡ ಸಾಹಿತ್ಯಕ್ಕೆ ಮೊಟ್ಟ ಮೊದಲು ಗೇಯತೆಯನ್ನು ಲೇಪಿಸಿದವರು ವಚನಕಾರರು. ಆ ಹಿಂದೆ ಹಳೆಗನ್ನಡದ ಸಾಹಿತ್ಯದಲ್ಲಿ ಕಾವ್ಯಗಳೇ ಪ್ರಧಾನವಾಗಿದ್ದರೂ ಗೇಯಾಂಶಗಳ ಕೊರತೆ ಅಲ್ಲಿ ಕಂಡುಬರುತ್ತಿತ್ತು. ಆದರೆ ಬಸವಣ್ಣನವರು 'ಆನು ಒಲಿದಂತೆ ಹಾಡುವೆ' (ಸ.ವ.ಸಂ.೧, ವ.೪೯೫) ಎಂಬಲ್ಲಿ ವಚನಗಳನ್ನು ಹಾಡುಗಬ್ಬ ಎಂದು ಭಾವಿಸಿರುವುದು ತಿಳಿಯುತ್ತದೆ. ಅಷ್ಟೇ ಅಲ್ಲದೇ ಅನೇಕ ಕಡೆಗಳಲ್ಲಿ ವಚನಗಳನ್ನು 'ಗೀತ' ಎಂದು ಕರೆದಿರುವುದು ಕಂಡು ಬರುತ್ತದೆ. (ಸ.ವ.ಸಂ.-೧, ವ.ಸಂ. ೧೫೩, ೧೭೫, ೧೮೮, ೨೭೬, ೭೮೮) 'ಹಾಲ ತೊರೆಗೆ ಬೆಲ್ಲದ ಕೆಸರು ಸಕ್ಕರೆಯ ಮಳಲು' (ಅದೇ ವ.೨೯೧) ಎಂಬ ಬಸವವಚನ, ವಚನಗಳಲ್ಲಿಯ ರಸಸ್ವಾದನೆಯ ಗುಣಗ್ರಾಹಕತೆಯನ್ನು ಎತ್ತಿ ತೋರಿಸುತ್ತದೆ. ಗದ್ಯವೂ ಅಲ್ಲದ ಪದ್ಯವೂ ಅಲ್ಲದ ವಿಶಿಷ್ಟವಾದ ರಸಸ್ಯಂದಿಯಾದ ಹಾಡುಗಬ್ಬಗಳನ್ನು ವಚನಗಳೆಂದು ಕರೆಯಬಹುದಾಗಿದೆ. ಇಂತಹ ವಚನಗಳಲ್ಲಿರುವ ಗೇಯತೆಯೇ ಭೀಮಕವಿಯು ಭಾಮಿನಿಷಟ್ಪದಿಯನ್ನು ಆಯ್ಕೆ ಮಾಡಿಕೊಳ್ಳಲು ಪ್ರೇರೇಪಿಸಿರಬಹುದು.

ಇಂತಹ ಸತ್ವಪೂರ್ಣವಾದ ಸಾಹಿತ್ಯ ರಚನಕಾರರಾದ ವಚನಕಾರರ ಪ್ರಭಾವಲಯದ ಹರಿಹರನಿಂದ ಕನ್ನಡ ದಿಕ್ಕು ದೆಸೆಯೆ ಬದಲಾಗಿದ್ದನ್ನು ಈ ಹಿಂದೆ ಗಮನಿಸಿದ್ದೇವೆ. ಅವನನ್ನು ಬಳಿವಿಡಿದು ರಾಘವಾಂಕ ಅವನ ಮಾರ್ಗವನ್ನನುಸರಿಸಿದ್ದೂ ಆಗಿದೆ. ಇವರಿಬ್ಬರ ಮನೀಷೆಯನ್ನು ಭೀಮಕವಿಯೂ ಪೂರ್ಣಗೊಳಿಸಿದ್ದಾನೆಂದು ಹೇಳಬಹುದು. ಸುಸಂಸ್ಕೃತ ವ್ಯಕ್ತಿಯಾದ ಬಸವಣ್ಣನವರ ಕಾವ್ಯಕ್ಕೆ ಭೀಮಕವಿಯು ಸುಸಂಸ್ಕೃತ ಛಂದಸ್ಸನ್ನು ಬಳಸಿದ್ದಾನೆ. ವಚನಕಾರರೆಲ್ಲರ ಮೈಮನಸ್ಸುಗಳು ದೇಶೀಯ ಬಲವುಳ್ಳವಾದ್ದರಿಂದ ಅದಕ್ಕೆ ಪೂರಕವಾದ ಭಾಮಿನಿ ಷಟ್ಪದಿಯನ್ನು ಬಳಸಿ ಭೀಮಕವಿ ಬಸವಣ್ಣನವರ ಇಚ್ಛೆಯನ್ನು ಪೂರೈಸಿದ್ದಾನೆಂದೇ ಹೇಳಬಹುದು. ಭೀಮಕವಿಯು ಕನ್ನಡ ಭಾಷೆಯನ್ನು "ಬರಿಯ ಕನ್ನಡ ಭಾಷೆಯೆಂದೆನಲಾಗದು; ಇಳೆಗಿದು ಲೇಸೆನಿಪ ವೇದ ಪ್ರಮಾಣಭಾಷೆ" (೧:೨೧) ಯೆಂದಿದ್ದಾನೆ. ಭೀಮಕವಿಯು ವಚನಕಾರರ ಆಶಯದಂತೆ ಅತ್ಯಂತ ಶಾಸ್ತ್ರಬದ್ಧವಾದ ಭಾಷೆಯನ್ನು

ಬಳಸಿದ್ದಾನೆ. ಇಲ್ಲಿ "ವೈರಿಪದ, ಅಪಶಬ್ದ, ನೀರಸ, ಶೈಥಿಲ್ಯವರ್ಣ, ಕಾರಕವಿರಹಿತ ಕ್ರಿಯಾಳಂಕಾರವಿಹೀನ, ಮೊದಲಾದ ಕಾವ್ಯದೋಷಗಳನ್ನು ತೂರಿ ಕಳೆದು, ಸರಸಮೃದುತರಪದ, ಯಮಕ, ಗಮಕ, ಸಮಾಸ, ಪ್ರಾಸ, ದೇಶೀಸರಣಿ, ಸುಶಬ್ದಾರ್ಥ, ಉಪಮಾಚಾತುರ್ಯ, ಮಾಧುರ್ಯ, ನಿಯಮಾಕ್ಷರ ಸುಲಕ್ಷಣ ಭಾವವುಳ್ಳ ಭಾಷೆಯನ್ನು ಬಳಸಿ 'ವಸ್ತುಕ' ಕಾವ್ಯಕ್ಕೆ ಸಮಾನವಾದ ಪಾಂಡಿತ್ಯಪೂರ್ಣ ಪ್ರೌಢ 'ವರ್ಣಕ' ಕಾವ್ಯ ರಚಿಸುವಲ್ಲಿ ಅವನಿಗಿರುವ ಕಾಲಪ್ರಜ್ಞೆ ವ್ಯಕ್ತವಾಗುತ್ತದೆ". (ಜವಳಿ ಬಿ.ಸಿ. ಬಸವಪುರಾಣದ ಸಾಹಿತ್ಯಿಕ ಅಧ್ಯಯನ, ಪು.೫೪) ಹೀಗಾಗಿ ತನ್ನದು ದೇಶೀಕಾವ್ಯವಾಗಿದ್ದರೂ ಅದೊಂದು ಪಂಡಿತರು ಮೆಚ್ಚಬಲ್ಲ ಮಾರ್ಗ ಕಾವ್ಯವೆಂದೇ ನಿರೂಪಿಸಿದ್ದಾನೆ. ಮಾರ್ಗದಲ್ಲಿ ದೇಸಿಯನ್ನು ಸೇರಿಸಿ ಪಂಪ ಕಾವ್ಯ ಬರೆದಿದ್ದರೆ (೧.೮) ಭೀಮಕವಿಯು ವರ್ಣಕ ಕಾವ್ಯವನ್ನು ಮಾರ್ಗದ ಶೈಲಿಯಲ್ಲಿ ಬರೆಯುವ ಪ್ರಯತ್ನ ಗೋಚರವಾಗುತ್ತದೆ. ದೇಸಿಯ ವಿಸ್ತೃತ ಸ್ವರೂಪಕ್ಕೆ ಬಸವಪುರಾಣ ಒಂದು ಅತ್ಯುತ್ತಮ ಉದಾಹರಣೆ. ವರ್ಣಕ ಕಾವ್ಯಗಳು ನೋಡಲು ಸರಳವಾಗಿದ್ದರೂ ಅವು ಕಿರಿದರಲ್ಲಿ ಪಿರಿದರ್ಥವನ್ನು ಹೊಂದಿರುವುವು. ವರ್ಣಕ ಕಾವ್ಯಗಳು ನಾಯಕನ ವ್ಯಕ್ತಿತ್ವಕ್ಕೆ ಹೆಚ್ಚಿನ ಗಮನ ಹರಿಸಿವೆ. ನಾಯಕನ ವ್ಯಕ್ತಿತ್ವವನ್ನು ಅವನ ನಡೆ–ನುಡಿಗಳಿಂದ ಕಾರ್ಯಗಳಿಂದ ವಿವರಿಸಲಾಗಿದೆ. ಮಾರ್ಗದ ತೀವ್ರತೆ ತಗ್ಗಿದ್ದು ವಚನಕಾರರ ದೇಸಿಯ ಪ್ರಭಾವದಿಂದ. 'ಮಾರ್ಗ' ವಸ್ತುಕವಾದರೆ 'ದೇಸಿ' ವರ್ಣಕ. ಈ ವಸ್ತುಕ ಮತ್ತು ವರ್ಣಕ ಕುರಿತಂತೆ ದ.ರಾಬೇಂದ್ರೆಯವರು "ವಸ್ತುಕದ ರೀತಿ ರಾಜಮಾರ್ಗ, ವರ್ಣಕದ ರೀತಿ ಹಳೆಯ ಹಾದಿ. ಮೊದಲನೆಯದು ಸಂಸ್ಕೃತ, ಎರಡನೆಯದು ದ್ರಾವಿಡ;ಒಂದು ನಾಗರ ಇನ್ನೊಂದು ಜಾನಪದ. ಜನಪದದ ಏಳಿಗೆಯಾಗಬೇಕೆಂಬ ಕಾಲದಲ್ಲೆಲ್ಲ ವರ್ಣಕ ಸಾಹಿತ್ಯಕ್ಕೆ ಉಕ್ಕು ಹೆಚ್ಚು. ಷಟ್ಪದಿ ಸಾಂಗತ್ಯಗಳೂ, ಶರಣರವಚನ, ದಾಸರ ಪದಗಳೂ ಆ ಬುದ್ಧಿಯಿಂದ ಹುಟ್ಟಿದವುಗಳು" (ಬೇಂದ್ರೆ ದ.ರಾ. ಗರತಿಯ ಹಾಡು, ಪು.೧೩) ಎನ್ನುತ್ತಾರೆ.

ಬಹುಮುಖ್ಯವಾಗಿ ಭಾಮಿನಿಷಟ್ಪದಿಯ ಗೇಯಗುಣ ಭೀಮಕವಿಯನ್ನು ಬಹುವಾಗಿ ಆಕರ್ಷಿಸಿದ ಬಗೆಯನ್ನು ತಳ್ಳಿಹಾಕುವಂತಿಲ್ಲ. ಷಟ್ಪದಿ ಇದೊಂದು ಹಾಡುಗಬ್ಬವಾಗಿದ್ದು ಇದರ ಜನಪ್ರಿಯತೆಗೆ ಅದರ ಸರಳ ದೇಸಿನಿಷ್ಠವಾದ ಶೈಲಿ ಹಾಗೂ ಗೇಯಾಂಶ ಪ್ರಮುಖ ಕಾರಣವಾಗಿರುವಂತಿದೆ. ೩:೪,೩:೪ ಈ ಮಾತ್ರಾಗಣ ಪರಿಮಿತಿಯುಳ್ಳ ಭಾಮಿನಿ ಕೇಳುಗರ ಕಿವಿಗೆ ಹಿತವಾಗಿದೆ, ಇನಿದಾಗಿದೆ. ಭೀಮಕವಿಯ ಬಸವಪುರಾಣವನ್ನು ತಾಳದ ಗಣನೆಗೆ ಒಡಂಬಟ್ಟು ಹಾಡುತ್ತಿದ್ದರೆಂಬುದಕ್ಕೆ ಆಧಾರಗಳಿವೆ. ಆರ್.ಸಿ. ಹಿರೇಮಠರು ಪ್ರತಿಯೊಂದು ಸಂಧಿಯ ಪ್ರಾರಂಭದಲ್ಲಿ ಬೇರೆ ಬೇರೆ ಹಸ್ತಪ್ರತಿಗಳಲ್ಲಿ ರಾಗಗಳ ಉಲ್ಲೇಖ ಮಾಡಿರುವುದನ್ನು ಗಮನಿಸಿ ಅದನ್ನು ಅಡಿ ಟಿಪ್ಪಣಿ ಭಾಗದಲ್ಲಿ ಸೂಚಿಸಿರುವರು.

ಭೀಮಕವಿಯ ಒಟ್ಟು ಕೃತಿಯನ್ನು ಹೀಗೆ ವಿವಿಧ ರಾಗ ತಾಳಗಳಲ್ಲಿ ಹಾಡಲಾಗುತ್ತಿತ್ತು. ಭೀಮಕವಿ ಭಾಮಿನಿಯನ್ನು ತನ್ನ ಕಾವ್ಯದ ಛಂದೋಮಾಧ್ಯಮವಾಗಿ ಬಳಸುವುದರ ಮೂಲಕ

ಅದಕ್ಕೊಂದು ನಿಶ್ಚಿತ ನೆಲೆಬೆಲೆಯನ್ನು ತಂದು ಕೊಟ್ಟನು. ಇದರ ಗಣವಿನ್ಯಾಸವು ಸರಳವಾಗಿದ್ದು ಕಥಾ ವಿಸ್ತರಣಾ ಕಾರ್ಯಕ್ಕೆ ಕಥೆಯ ಸುಲಲಿತ ಓಟಕ್ಕೆ ಬಹಳ ಚೆನ್ನಾಗಿ ಹೊಂದಿಕೊಳ್ಳುವುದರಿಂದಲೋ ಏನೋ ವೀರಶೈವ ಕವಿಗಳು ಹಾಗೂ ವೀರಶೈವೇತರ ಕವಿಗಳು ಇದನ್ನು ಹೆಚ್ಚಾಗಿ ಬಳಸಿದಂತಿದೆ. "ಷಟ್ಪದಿಗಳ ಗುಟ್ಟನ್ನು ತಿಳಿದು ಅದನ್ನು ಹೇಗೆ ಉಪಯೊಗಿಬೇಕೆಂಬುದನ್ನು ಪ್ರತ್ಯಕ್ಷಪಡಿಸಿರುವವರಲ್ಲಿ ಭೀಮಕವಿಯೇ ಮೊದಲಿಗನು" (ವೀರಶೈವ ಪುರಾಣ, ಪು.೭೦) ಎಂದು ಎಂ.ಆರ್. ಶ್ರೀಯವರು ಹೇಳುತ್ತಾರೆ.

ತನ್ನ ಗೇಯಗುಣದಿಂದಲೇ ಈ ಕೃತಿ ಅನೇಕ ವರ್ಷಗಳ ಕಾಲ ಇಡೀ ಸಮುದಾಯವನ್ನು ಆಕರ್ಷಿಸಿದ್ದು ಸಾಂಸ್ಕೃತಿಕ ಪರಂಪರೆಗೆ ದೊರೆತ ಹೆಗ್ಗಳಿಕೆಯಾಗಿದೆ. ಮುಂದೆ ಇಂತಹ ಮಹತ್ವದ ಸ್ಥಾನವನ್ನು ಕುಮಾರವ್ಯಾಸನ 'ಕರ್ನಾಟಕ ಭಾರತ ಕಥಾಮಂಜರಿ' ಕೃತಿ ಪಡೆದುಕೊಂಡಿದ್ದು ವಿಶೇಷ. ಬಸವಪುರಾಣ ವೀರಶೈವ ಪರಂಪರೆಗೆ ನಾಂದಿಯಾದರೆ ಕುಮಾರವ್ಯಾಸ ಭಾರತವು ವೈದಿಕ ಪರಂಪರೆಗೆ ನಾಂದಿಯಾದ ಪ್ರಮುಖ ವರ್ಣಕ ಕಾವ್ಯಗಳಾಗಿವೆ.

ವರ್ಣಕದ ಲಕ್ಷಣ ಕೇವಲ ಛಂದಸ್ಸಿನಲ್ಲಿರದೆ ಅದರ ಪಠಣ ರೀತಿಯಲ್ಲಿ ಇದ್ದಂತೆ ತೋರುತ್ತದೆ. ಪದ, ಮೆಲ್ವಾಡು, ಪಾಡು, ಹಾಡುಗಬ್ಬ ಮುಂತಾದುವೆಲ್ಲ ಗೇಯಪ್ರಧಾನವಾಗಿರಬಹುದೆಂದು ಅವುಗಳ ಹೆಸರುಗಳಿಂದಲೇ ಊಹಿಸಬಹುದಾಗಿದೆ. "ಸಾಂಗತ್ಯ ತ್ರಿಪದಿಗಳು ಇಂದಿಗೂ ಗೇಯಪ್ರಧಾನವೇ ಆಗಿವೆ. ರಗಳೆಗಳನ್ನು ಹರಿಹರದೇವನು ಪಂಪಾ ವಿರೂಪಾಕ್ಷನ ಸನ್ನಿಧಿಯಲ್ಲಿ ಭಕ್ತಿ ನಿರ್ಭರತೆಯಲ್ಲಿ ಹಾಡುತ್ತಿದ್ದನೆಂದು ಪ್ರತೀತಿಯಿದೆ. ಅಂತೆಯೇ ಷಟ್ಪದಿ, ಸಾಂಗತ್ಯ ರಗಳೆ, ತ್ರಿಪದಿ ಮುಂತಾದ ದೇಶೀಯ ಛಂದಸ್ಸುಗಳಲ್ಲಿ ಬರೆದ ಕಾವ್ಯಗಳನ್ನು ಹಾಡುಗಬ್ಬಗಳೆಂದು ಕರೆವ ರೂಢಿಯುಂಟು". (ತ್ರಿಷಷ್ಠಿ ಪುರಾತನ ಚಾರಿತ್ರ್ಯ ಪು.೧೨೦)

ಭೀಮಕವಿಯು ಬಸವಣ್ಣನವರ ವಚನಗಳನ್ನು ಆಳವಾಗಿ ಅಧ್ಯಯನ ಮಾಡಿದ್ದಾನೆ ಎಂಬುದಕ್ಕೆ ಅವನ ಕಾವ್ಯದಲ್ಲಿ ಅನೇಕ ಉದಾಹರಣೆಗಳು ಸಿಗುತ್ತವೆ. ಸದ್ಯಕ್ಕೆ ಅದು ಇಲ್ಲಿ ಪ್ರಕೃತವಲ್ಲ. ಏಕೆಂದರೆ ಅದೊಂದು ಬೇರೆಯದೆ ಆದ ಅಧ್ಯಯನ ಶಿಸ್ತಾಗುತ್ತದೆ. ಆದರೂ ಅನೇಕ ವಚನಗಳ ಸಾರ ಭಾಮಿನಿ ಷಟ್ಪದಿಯಲ್ಲಿ ಬೆರೆತು ಬಂದ ಬಗೆಯನ್ನು ಉದಾಹರಣೆ ಸಹಿತ ಎಸ್.ಆರ್. ಗುಂಜಾಳ ಹಾಗೂ ವಿದ್ಯಾಶಂಕರ್‌ರವರು ಗುರುತಿಸಿದ್ದಾರೆ. (ಗುಂಜಾಳ್ ಎಸ್. ಆರ್. ೧೯೯೭, ಪು.೪೫–೬)

"ಭೀಮಕವಿಯಿಂದ ಪ್ರಾರಂಭಗೊಂಡು ಇಂದಿನವರೆಗೂ ಭಾಮಿನಿಷಟ್ಪದಿಯ ಝೇಂಕಾರನಾದ ಮಂಜುಳವಾಗಿ ಕನ್ನಡ ಸಾಹಿತ್ಯದಲ್ಲಿ ಹಬ್ಬಿ ಹರಡಿರುವುದು ಕಂಡುಬರುತ್ತದೆ. ಬಹುಸಂಖ್ಯೆಯ ಕವಿಗಳಿಂದ ಬಳಸಲ್ಪಡುವ ಇದು ಪಂಡಿತ ಪಾಮರದ್ವಯರನ್ನು ತಣಿಸಿದೆ. ಶರಣರ ಚಾರಿತ್ರ್ಯ, ಶರಣರ ಧರ್ಮ–ತತ್ವ–ನೀತಿಗಳೆಂಬ ಪರಮಾನ್ನವನ್ನು ಉಣಿಸಿದೆ" (೨೦೦೮, ಪು. ೧೦೫–೧೯) ಎಂಬ ವಿದ್ಯಾಶಂಕರ ಅವರ ಮಾತುಗಳು ಯಥೋಚಿತವಾಗಿವೆ.

೧. ಕಲೆ :

ಕಲೆಗಳು ಬದುಕಿನ ನಿತ್ಯದ ಗಳಿಗೆಗಳಲ್ಲಿ ಹಾಸುಹೊಕ್ಕಾಗಿರುವಂತೆ ಸಾಹಿತ್ಯದಲ್ಲಿ ಪ್ರಾಸಂಗಿಕವಾಗಿ ಕಾಣಿಸಿಕೊಳ್ಳುತ್ತವೆ. ಹಾಡು,ಕುಣಿತ, ಶಾಸ್ತ್ರ,, ಸಂಗೀತ, ಚಿತ್ರ, ಉತ್ಸವ, ಪೂಜೆ, ಮದುವೆಯಾದಿ ಸಂದರ್ಭಗಳ ನಿರೂಪಣೆಯಲ್ಲಿ ಭೀಮಕವಿ ಬಳಸಿದ ಕಲೆಯ ವಿವಿಧ ಅಂಶಗಳನ್ನು ಬಸವಪುರಾಣದಲ್ಲಿ ಗುರುತಿಸಬಹುದಾಗಿದೆ. ವೃತ್ತಿಗೆ ಅಳವಡಿಸಿಕೊಂಡ ಉಡುಗೆ ತೊಡುಗೆಗಳು, ಅರಮನೆ ಮಹಾಮನೆಯ ಸಮಾರಂಭಗಳು, ಗಣಪರ್ವಗಳ, ಮೆರವಣಿಗೆಗಳ, ಗೋಷ್ಠಿಗಳ, ನರ್ತನದ ವಿವಿಧ ವರ್ಣನೆಗಳು ಪುರಾಣದಲ್ಲಿ ಕಾಣಿಸಿಕೊಂಡಿದ್ದನ್ನು ಕಲೆಯ ಹಿನ್ನೆಲೆಯಲ್ಲಿ ನೋಡಬಹುದು. ಬಸವಪುರಾಣದಲ್ಲಿ ಎಲ್ಲ ಮತೀಯರಲ್ಲೂ ಶಾಸ್ತ್ರವಿದರು, ಕವಿಗಳು, ಕಲಾವಿದರು ಇದ್ದರು. ಕವಿ ಅಂಥವರನ್ನು ಬಸವಪುರಾಣದುದ್ದಕ್ಕೂ ಹಿಡಿದಿದ್ದಾನೆ. "ಬರೆಹ ವಾಚನ ಗಣಿತ ಶಬ್ದಾರ್ಥ ರಸ ಭಾವೋಕ್ತಿ ಪ್ರವೀಣತೆ ಛಂದೋ ವ್ಯಾಕರಣ ಸಂಗೀತ ಸಾಹಿತ್ಯ ಹರ ರಹಸ್ಯಾಗಮ ಪುರಾಣೋತ್ಕರ ಸಕಳ ವೇದಾದಿ ಕಲೆಗಳು ಸ್ಮರಿಸಲೊಡನೆ ಮುಖೋದ್ಗತಂ ಬಸವದೇವೂಗಳ್ಗೆ" (೩:೪೨) ಎಂಬ ಮಾತುಗಳು ಬಸವಣ್ಣನವರು ಸಕಲ ಕಲೆಗಳನ್ನು ತಿಳಿದಿದ್ದನು ಎಂಬುದನ್ನು ಸೂಚಿಸುತ್ತವೆ. ಇದರಿಂದ ಅಂದಿನ ಸಮಾಜದಲ್ಲಿ ಸರ್ವಕಲೆಗಳು ಪ್ರಚಲಿತವಿದ್ದುದು ಗೊತ್ತಾಗುತ್ತದೆ. ಈ ಹಿನ್ನೆಲೆಯಲ್ಲಿ ಪುರಾಣದಲ್ಲಿ ಸಾಂದರ್ಭಿಕವಾಗಿ ಹಾಗೂ ವೃತ್ತಿಯ ಹಿನ್ನೆಲೆಯಲ್ಲಿ ಉಕ್ತವಾಗಿರುವ ಕೆಲವು ಕಲೆಗಳು ದೊರೆಯುತ್ತವೆ.

ಅ. ಪುರಾಣಿಕ :

ಪ್ರಾಚೀನ ಕಾಲದ ಸಮಾಜದಲ್ಲಿ ಪುರಾಣಪ್ರವಚನ ಮಾಡುತ್ತಿದ್ದ ಉಲ್ಲೇಖಗಳು ದೊರೆಯುತ್ತವೆ. ಪುರಾಣ ಓದುವುದು ಹಾಗೂ ಕಲಿಯುವುದು ರೂಢಿಯಲ್ಲಿದ್ದ ಉಲ್ಲೇಖ ಬರುತ್ತದೆ. (೧೨: ೧, ೫೯: ೨೧, ೨೮, ೩೦) ಆಯಾ ಮತಧರ್ಮಕ್ಕೆ ಸಂಬಂಧಿಸಿದವರು ತಮ್ಮ ದೈವದ ಪುರಾಣಪ್ರವಚನ ಕೈಗೊಳ್ಳುವ ಮೂಲಕ ಸಮಾಜದಲ್ಲಿ ಧಾರ್ಮಿಕ ವಾತಾವರಣವನ್ನು ನಿರ್ಮಾಣ ಮಾಡುತ್ತಿದ್ದರು. ಶ್ರೋತೃಗಳೂ ಸಹ ಅಷ್ಟೇ ಆಸಕ್ತಿಯಿಂದ ಪುರಾಣ ಕೇಳುತ್ತಿದ್ದುದು ಸಾಮಾನ್ಯವಾಗಿದ್ದ ಸಂದರ್ಭಗಳು ದೊರೆಯುತ್ತವೆ.

ಆ. ಪಾಠಕರು :

ಒಡ್ಡೋಲಗದಲ್ಲಿ ಉಕ್ತರಾದ ಪಾಠಕರು ಅರಸನನ್ನು ಹೊಗಳುವ ಹೊಗಳುಭಟ್ಟರೆಂಬ ಅರ್ಥವನ್ನೊಳಗೊಂಡಿದೆ. ಶಬ್ದಕೋಶದಲ್ಲಿ ಈ ಶಬ್ದಕ್ಕೆ 'ಅಕ್ಷರ ಕಲಿಸುವವ, ಅಕ್ಷರ ಓದುವವ, ಅಕ್ಷರ ಪಠಿಸುವವ, ಅರಸನನ್ನು ಹೊಗಳುವವ' (ಕಾರಂತ ಶಿವರಾಂ, ಸಿರಿಗನ್ನಡ ಅರ್ಥಕೋಶ) ಎಂಬ ಅರ್ಥಗಳಿವೆ. ಕೈವಾರಿಗಳು, ಹೊಗಳುಭಟ್ಟರೂ ಎಂದು ಇವರನ್ನು ಕರೆಯುತ್ತಾರೆ. ಇಲ್ಲಿ ಒಡ್ಡೋಲಗದಲ್ಲಿ ರಾಜನನ್ನು ಹೊಗಳುವವರು ಎಂಬ ಅರ್ಥವ್ಯಾಪ್ತಿಯನ್ನು ಹೊಂದಿದ್ದು ಪುರಾಣದಲ್ಲಿ ಕಂಡುಬರುತ್ತದೆ. ಆಸ್ಥಾನಕ್ಕೆ ರಾಜ ಆಗಮಿಸುವಾಗ, ಆಸ್ಥಾನದಿಂದ ನಿರ್ಗಮಿಸುವಾಗ ಇವರು

ಕಲಾತ್ಮಕವಾಗಿ ತಮ್ಮ ಕಾರ್ಯವನ್ನು ನಿರ್ವಹಿಸುತ್ತಿದ್ದರು. ಬಸವಪುರಾಣದಲ್ಲಿ ಅಲ್ಲಲ್ಲಿ ಇವರ ಉಲ್ಲೇಖಗಳು ಕಂಡುಬರುತ್ತವೆ. (೫:೩೮, ೪೯: ೧೫, ೨೪, ಸಂ.೪೭-೪೮)

ಇ. ಪುರೋಹಿತರು :

ಪುರಾಣದಲ್ಲಿ ಇವರ ಉಲ್ಲೇಖ ಬರುತ್ತದೆ. (೫:೫೨) ಇವರು ರಾಜಪುರೋಹಿತರೊ ಹೇಗೆ ಎಂಬ ಬಗ್ಗೆ ಉಲ್ಲೇಖ ದೊರೆಯುವುದಿಲ್ಲ. ಮಂತ್ರಿಗಳ ಸರಿಸಮಾನವಾಗಿ ಆಸೀನರಾದ ಪುರೋಹಿತರು ಬಹುಶಃ ರಾಜಪುರೋಹಿತರೇ ಇರಬೇಕೆಂದು ತೋರುತ್ತದೆ.

ಈ. ಕವಿಗಳು :

ಪ್ರಾಚೀನ ಕಾಲದ ಎಲ್ಲ ಕವಿಗಳು ಬಹುಪಾಲು ಆಸ್ಥಾನದಲ್ಲಿದ್ದವರೆ. ಬಹುತೇಕ ಕನ್ನಡ ಕೃತಿಗಳು ರಾಜಾಸ್ಥಾನದಲ್ಲಿಯೇ ಜನ್ಮ ತಾಳಿರುವುದು ಇದಕ್ಕೆ ಸಾಕ್ಷಿ. ರಾಜನಾದವನು ಪ್ರಜಾಪಾಲನೆಯೊಂದಿಗೆ ಸಾಹಿತ್ಯ ಸಂಪತ್ತನ್ನು ಬೆಳೆಸುವುದೂ ಸಹ ಅವನ ಆದ್ಯ ಕರ್ತವ್ಯವಾಗಿತ್ತು. ಬಸವಪುರಾಣದಲ್ಲಿ ಕವಿಗಳ ಉಲ್ಲೇಖ ಕಂಡುಬರುತ್ತದೆ. (೪೫:೫೨-೫೩, ೨೫: ೭) ಬಹುಶಃ ವಿವಿಧ ಭಾಷೆಯ ಕವಿಗಳು ರಾಜಾಸ್ಥಾನದಲ್ಲಿದ್ದಿರಬೇಕು.

ಕಲಕೇತ ಬೊಮ್ಮಯ್ಯನೆಂಬ ಶಿವಭಕ್ತನು ಹಾಸ್ಯಗಾರ ವೇಷವನ್ನು ಕಟ್ಟಿ ಭಕ್ತರ ಮನೆ ಮನೆಗೆ ಹೋಗಿ ನಗಿಸಿ ತಣಿಸುವ ಕಾಯಕ ಕೈಗೊಂಡು ಜಂಗಮ ಭಕ್ತಿ ನೆರವೇರಿಸಿದ ಉಲ್ಲೇಖ ದೊರೆಯುತ್ತದೆ. "ಗಿಲಿಕೆ ಫಲಿಲೆಂದುಲಿಯೆ ದಕ್ಷನ ತಲೆಯ ಕೋಡಿನ ತೆಜಿದಿ ತಗರಿನ ಬಲಿದಕೊಂಬ ತನ್ನೆಡೆದ ಕೈಯಲಿ ಪಿಡಿದುಕೊಂಡು ಕಾಲಹರಣ ಕಾರಣಕವತರಿಸಿ ಬೆಳೆದವನ ನೆಟ್ಟೆಲುವಿನಂದದಿ ಬೆಳಗುದುಗೆಯಂ ಬಲದ ಕರದಲಿ ಪಿಡಿದು ತಿರುಪುತ್ತ ಅಳವಡಿಪ ಕಲಕೇತವೇಷಂದಳೆದು" (೨೮:೪,೫) ಎಂಬ ಕವಿಯ ವಿವರಣೆಗಳು ಕಲಕೇತ ಬೊಮ್ಮಯ್ಯನ ಕಲಾತ್ಮಕ ಬದುಕನ್ನು ಕಟ್ಟಿ ಕೊಡುತ್ತವೆ.

ರಾಜನ ಒಡ್ಡೋಲಗದಲ್ಲಿ ನೆರೆದವರ ವಿವರಣೆ ನೀಡುತ್ತ ಕವಿಯು ಅನೇಕ ಕಲಾವಿದರ ವಿವರ ಕೊಡುತ್ತಾನೆ. 'ಪಾಠಕರು' 'ಕವಿಗಳು', 'ಗಣಿಕೆಯರು', 'ಗಮಕಿಗಳು', 'ಪಂಡಿತರು', 'ಗಾಯಕಿಯರು', 'ಚಿತ್ರಕರು', 'ನರ್ತಕರು', ಹೀಗೆ ಕಲಾವಿದರಲ್ಲದೆ 'ಮಾವಂತರು', 'ಗಜಾರೋಹಕರು', 'ಭಾಷೆಯಾಳುಗಳು', 'ವೀರರು', 'ಲೆಂಕರು', 'ಅಂಕಕಾರರು', 'ಮಾಸಾಳ್ಗಳು' ಮುಂತಾಗಿ ವ್ರತನಿಷ್ಠ ವ್ಯಕ್ತಿತ್ವದವರು ಆಸ್ಥಾನದಲ್ಲಿದ್ದರು. ಈ ಎಲ್ಲ ಉದಾಹರಣೆಗಳು ಭೀಮಕವಿಯ ಕಾಲದ ಪರಿಸರದಲ್ಲಿ ವಿವಿಧ ಕಲೆಗಾರರು ಇದ್ದುದನ್ನು ಸೂಚಿಸುತ್ತದೆ. ಇವೆಲ್ಲವೂ ಕಲೆಯ ಹಿನ್ನೆಲೆಯಲ್ಲಿ ಗಮನಿಸಿದರೂ ಬಹಳಷ್ಟು 'ವೃತ್ತಿಯಲ್ಲಿಯೇ' ಅಂತರ್ಗತವಾಗಿರುವುದರಿಂದ ಇವರು ಕಲಾವಿದರೂ ಹೌದು; ಆ ವೃತ್ತಿಯವರೂ ಹೌದು.

೨. ಸಂಗೀತ :

ವಚನಕಾರರು ತಮ್ಮ ವಚನಗಳನ್ನು 'ಗೀತ' ಎಂದು ಕರೆದಿದ್ದಾರೆ. ಇದರಿಂದ ಅವರ ಕಾಲದಲ್ಲಿ ವಚನಗಳನ್ನು ಸುಶ್ರಾವ್ಯವಾಗಿ ಹಾಡುತ್ತಿದ್ದರೆಂದು ಕಾಣುತ್ತದೆ. ಗೀತದ ಉಲ್ಲೇಖ

ಬಸವಪುರಾಣದಲ್ಲೂ ಬರುತ್ತವೆ. (೫೬:೯೬–೯೭) "ಜ್ಯೋತಿಗಳು ಸಕಳಾಮೋಕ್ತವಿಭೂತಿಗಳು ನಾನಾ ಭುವನ ವಿಖ್ಯಾತಿಗಳು ಭಂಡಾರಿ ಬಸವನ ಗೀತಜಾತಗಳು" ಹಾಗೂ "ಭಾಳನಯನಪ್ರತಿಮ ಕರುಣಾಲೋಲಮಾನಸ ನಾಲ್ಕು ಲಕ್ಷದ ಮೇಲೆ ತೊಂಬತ್ತಾಱುಸಾವಿರ ಗೀತಸಂಕುಳವ ಪೇಳಿದಪೆವಿದು". (೨೧:೫೨, ೫೬:೯೬) ಎಂಬ ಉಲ್ಲೇಖ ದೊರೆಯುತ್ತದೆ. ವಚನಗಳ ಗುಣ ವೈಶಿಷ್ಟ್ಯತೆಗಳೂ ಸಹ ಇವುಗಳನ್ನು ಗೀತವೆ ಎಂದು ಕರೆದಿರಬಹುದೆಂಬುದಕ್ಕೆ ಪುಷ್ಟಿ ಕೊಡುತ್ತವೆ. ಬಸವಣ್ಣನವರು ತಮ್ಮ ವಚನದಲ್ಲಿ "ತಾಳಮಾನ ಸರಿಸವನರಿಯೆ ಓಜೆ ಬಜಾವಣೆಯ ಲೆಕ್ಕವನರಿಯೆ ಅಮೃತಗಣ ದೇವಗಣವನರಿಯೆ, ಕೂಡಲಸಂಗಮದೇವಾ, ನಿನಗೆ ಕೇಡಿಲ್ಲವಾಗಿ ಆನು ಒಲಿದಂತೆ ಹಾಡುವೆ" (ಸ.ವ.ಸಂ.೧, ವ.೪೯೪) ಎಂದಿದ್ದಾರೆ. ಇದರಿಂದ ಅಂದು ವಚನಕಾರರಿಗೆ ಸಂಗೀತದ ಸ್ಪಷ್ಟ ಕಲ್ಪನೆ ಇದ್ದದ್ದು ತಿಳಿದು ಬರುತ್ತದೆ. ಈ ಸಂಗೀತ ಗುಣಗಳನ್ನು ಮೇಳೈಸಿಕೊಂಡು ವಚನಗಳು ಬೆಳೆದು ಬಂದದ್ದೂ ಈ ಸಾಹಿತ್ಯ ಸೃಷ್ಟಿಯ ಪ್ರತೀಕವಾಗಿಯೇನೊ ಎಂಬಂತೆ ರಗಳೆ, ಷಟ್ಪದಿ, ಸಾಂಗತ್ಯ, ತ್ರಿಪದಿ ಮುಂತಾದ ದೇಸಿನಿಷ್ಠ ಕಾವ್ಯಗಳು ಬೆಳೆದು ಬಂದದ್ದು ಇದಕ್ಕೆ ಸಾಕ್ಷಿ. ಬಸವಪುರಾಣವನ್ನು ವಿವಿಧ ರಾಗಗಳಿಗೆ ಒಡಂಬಟ್ಟು ಹಾಡುತ್ತಿದ್ದರೆಂಬುದಕ್ಕೆ ರಾಗಗಳ ಉಲ್ಲೇಖಗಳಿವೆ. ಕವಿಗೆ ಸಂಗೀತ ಕುರಿತಂತೆ ಸ್ಪಷ್ಟ ಜ್ಞಾನ, ತಿಳುವಳಿಕೆ ಇದ್ದದ್ದು ಪುರಾಣದ ಮೂಲಕ ತಿಳಿದು ಬರುತ್ತದೆ.

ಅ. ಸ್ವರ–ರಾಗಗಳು :

ಭೀಮಕವಿಯು ಸಪ್ತಸ್ವರಗಳ ಉಲ್ಲೇಖ ಕೊಡುತ್ತಾನೆ. (೯:೩೨) 'ಸ,ರಿ,ಗ,ಮ,ಪ,ಧ,ನಿ' ಎಂಬುವು ಭಾರತೀಯ ಸಂಗೀತಶಾಸ್ತ್ರದ ಪ್ರಕಾರ ಸಪ್ತಸ್ವರಗಳು. ಈ ಸ್ವರನಿಯಮದಿಂದ ಹಾಡಿದ ಉಲ್ಲೇಖದಿಂದ ಅಂದು ಶಾಸ್ತ್ರೀಯ ಸಂಗೀತವೇ ಪ್ರಚಲಿತವಿದ್ದದ್ದೂ ಕಂಡುಬರುತ್ತದೆ. ಈ ಸಪ್ತಸ್ವರಗಳಿಗೆ ಕ್ರಮವಾಗಿ ಷಡ್ಜ,ಋಷಭ, ಗಾಂಧಾರ, ಮಧ್ಯಮ, ಪಂಚಮ, ದೈವತ ಮತ್ತು ನಿಷಾದವೆಂದು ಕರೆಯುತ್ತಾರೆ. "ಷಡ್ಜಾದಿಸಪ್ತಶ್ರುತಿಗಳಿಂಪುಗೆ ಮಂದ್ರಮಧ್ಯಮತಾರವಿಶ್ರಮದ ಅತಿಮಧುರಮೃದುಗೀತ" (೧:೪೮) ಎಂಬ ಕವಿಯ ಮಾತುಗಳು ಸಪ್ತಸ್ವರಗಳಿಗೆ ಇರುವ ಪರ್ಯಾಯ ಹೆಸರುಗಳನ್ನು ಸೂಚಿಸುತ್ತವೆ. ಈ ಉಲ್ಲೇಖಗಳಿಂದ ಅಂದು ಶಾಸ್ತ್ರೀಯ ಸಂಗೀತವು ಅತ್ಯಂತ ಪ್ರಬುದ್ಧವಾಗಿ ಬೆಳೆದ ರೀತಿಯನ್ನು ತೋರಿಸುತ್ತದೆ. ಶ್ರುತಿ ಸುಭಗವಾಗಿ ಹಾಡುತ್ತಿದ್ದರೆಂಬುದು ಸಂಗೀತದ ಪ್ರೌಢಿಮೆಯನ್ನು ತೋರಿಸುತ್ತದೆ. 'ಶ್ರುತಿ' ಎಂದರೆ "ಸ್ವರದ ಬರುವಿಕೆಗೆ ಶ್ರುತಿಯು ಪೂರ್ವಭಾವೀ ಅಸ್ತಿತ್ವವನ್ನು ಪಡೆದಿರುತ್ತದೆ ; ಸ್ವತಂತ್ರವಾಗಿರುತ್ತದೆ; ಎಂದರೆ ಸ್ವರದ ಉತ್ಪತ್ತಿಯಲ್ಲಿ ಪ್ರಪ್ರಥಮ ಕ್ಷಣದಲ್ಲಿ ಕೇಳಿದ ಹ್ರಸ್ವವಾದ ಶಬ್ದವು ಶ್ರುತಿ" (ನಾರಾಯಣ ಪಿ.ವಿ. ೧೯೮೩, ಪು.೨೯೪) ಎಂದು ಸಂಗೀತ ರತ್ನಾಕರದಲ್ಲಿ ವಿವರಣೆಯಿದೆ.

ಸ್ಥಾಯಿಯ ಉಲ್ಲೇಖವೂ ಸಹ ಬಸವಪುರಾಣದಲ್ಲಿ ಕಂಡುಬರುತ್ತದೆ. (೧: ೪೮, ೧೮:೧) ಆರೋಹಣ ಮತ್ತು ಅವರೋಹಣಕ್ಕೆ ಸುಲಭವಾಗಿ ಹೊಂದಿ ಬರುವ ಸಪ್ತಸ್ವರ ಸಮೂಹಕ್ಕೆ

'ಸ್ಥಾಯಿ' ಎಂದು ಹೆಸರು. (ರಾಜಾರಾವ್ ಎಲ್. ಸಂಗೀತಶಾಸ್ತ್ರಚಂದ್ರಿಕೆ, ಪು-೧೭) ಮುಖ್ಯವಾಗಿ ಮೂರು ಪ್ರಕಾರಗಳಿವೆ. 'ಮಂದ್ರ', 'ಮಧ್ಯ', 'ತಾರ'. "ಸಾರಮಾರ್ದವ ಮಂದ್ರ ಮಧ್ಯಮ ತಾರವೆಂಬ ತ್ರಿವಿಧವೊಂದಲು ಚಾರುತರ ಲಯ ಲಂಕಿತಂಗಳು ನಿಮಿರ್ದಮರ್ದಿರಲು" (೧೮:೧೧) ಎಂದು ಕವಿಯು ಶಾಸ್ತ್ರೀಯವಾಗಿ ಮೂರು ರೀತಿಯ ಸಪ್ತಕಗಳ ಉಲ್ಲೇಖ ಕೊಡುವುದನ್ನು ನೋಡಿದರೆ ಕವಿ ಸ್ವತಃ ಸಂಗೀತಗಾರನಾಗಿದ್ದು ಸಂಗೀತದಲ್ಲಿ ವಿಶೇಷ ಪ್ರೌಢಿಮೆಯನ್ನು ಪಡೆದಂತೆ ಕಾಣುತ್ತದೆ.

ಬಸವಪುರಾಣದಲ್ಲಿ ಬತ್ತೀಸ (ಮೂವತ್ತೆರಡು) ರಾಗಗಳ ಉಲ್ಲೇಖ ಬರುತ್ತದೆ. ಮೂವತ್ತೆರಡು ರಾಗಗಳಿಗೆ ಒಳಪಡುವಂತೆ ಸಕಲೇಶ ಮಾದರಸನು ದಂಡಿಗೆಯನ್ನು ರಚಿಸಿದನೆಂದು ಕವಿ ಹೇಳುತ್ತಾನೆ. (೧೮:೬) ಬಸವಣ್ಣನವರ ವಚನಗಳಲ್ಲಿ ಈ ಕುರಿತು ವಿವರ ದೊರೆಯುತ್ತದೆ. "ಎನ್ನ ಕಾಯವ ದಂಡಿಗೆಯ ಮಾಡಯ್ಯಾ, ಎನ್ನ ಶಿರವ ಸೋರೆಯ ಮಾಡಯ್ಯ, ಎನ್ನ ನರವ ತಂತಿಯ ಮಾಡಯ್ಯಾ,ಎನ್ನ ಬೆರಳ ಕಡ್ಡಿಯ ಮಾಡಯ್ಯಾ, ಬತ್ತೀಸ ರಾಗವ ಪಾಡಯ್ಯ, ಉರದಲೊತ್ತಿ ಬಾರಿಸು, ಕೂಡಲಸಂಗಮದೇವಾ" (ಸ.ವ.ಸಂ.೧, ವ.೪೯) ಎಂದು ಬಸವಣ್ಣನವರು ತಮ್ಮ ಶರೀರವನ್ನು ದಂಡಿಗೆಗೆ ಸಮೀಕರಿಸಿರುವುದನ್ನು ಗಮನಿಸಿದರೆ ವಚನಕಾರರ ಹಾಗೂ ಭೀಮಕವಿಯ ಕಾಲಕ್ಕೆ ಮೂವತ್ತೆರಡು ರಾಗಗಳು ಪ್ರಚಲಿತವಿದ್ದಂತೆ ತೋರುತ್ತದೆ. ವಿವೇಕಚಿಂತಾಮಣಿಯು ಹೇಳುವ ಮೂವತ್ತೆರಡು ರಾಗಗಳು ಇವು. 'ರಾಮಕ್ರಿ', 'ಭೂಪಾಳಿ', 'ವಸಂತ', 'ನಾಟಿ', 'ಸಾಳಗ', 'ಚೌಳಿ', 'ಕಾಂಬೋದಿ', 'ಗುಜ್ಜರಿ', 'ಭೈರವಿ', 'ಗುಂಡಕ್ರಿ', 'ಮಲಹರಿ', 'ಧನ್ಯಾಸಿ', 'ಲಲಿತೆ', 'ಫಳಮಂಜರಿ', 'ಬಂಗಾಳಿ', 'ದೇಸಿ', 'ದೇವಗಾಂಧಾರಿ', 'ಮೇಘರಂಜಿ', 'ಕುರಂಜಿ', 'ಆಹರಿ', 'ಶ್ರೀರಾಗ', 'ಪಹಡಿ', 'ಗೌಳ', 'ಸಿಂಧುರಾಮಕ್ರಿ', 'ಶಂಕರಾಭರಣ', 'ಭುಲ್ಲತಿ', 'ದೇಶಾಕ್ಷಿ', 'ವರಾಳಿ', 'ದೇವಗುಪ್ತಿ,' 'ಮಂಗಳಕೌಶಿಕ', 'ನಾರಣಿ', 'ಆರಂಭಿ'. (ವಿವೇಕಚಿಂತಾಮಣಿ, ಪು.೧೪೯) ಈ ಮೂವತ್ತೆರಡು ರಾಗಗಳನ್ನು ಪುರುಷರಾಗ ಮತ್ತು ಸ್ತ್ರೀರಾಗಳೆಂದು ವಿಭಾಗಿಸುತ್ತಾರೆ. ಭೀಮಕವಿಯ ಬಸವಪುರಾಣದಲ್ಲಿ ಇಪ್ಪತ್ತೆಂಟು ರಾಗಗಳ ಉಲ್ಲೇಖವಿದ್ದು ಒಟ್ಟಾರೆಯಾಗಿ ಸ್ತ್ರೀರಾಗ ಹಾಗೂ ಪುರುಷರಾಗಗಳೆಂದು ಕವಿ ಹೇಳುತ್ತಾನೆಯೇ ವಿನಾ ಅವುಗಳನ್ನು ಪ್ರತ್ಯೇಕಿಸಿಲ್ಲ. (೧೮:೧೬-೧೭) ವಿವೇಕಚಿಂತಾಮಣಿಯು ಮಾತ್ರ ಎಂಟು ಪುರುಷರಾಗಗಳೂ ಹಾಗೂ ಇಪ್ಪತ್ತುನಾಲ್ಕು ಸ್ತ್ರೀರಾಗಗಳೆಂದು ಹೇಳುತ್ತದೆ. "ವೇಳಾನುಕ್ಕೂಲಕ್ಕಡರ್ವ ರಾಗಂಗಳು ಪಿರಿದು ಪರಿವಡೆಯೆ ತಿರುಪಾಡುಗಳಂ ವಿರಚಿಸಿ ಪುರಾತನರ" (೨೫:೬೮) ಹೀಗೆ ನಂಬಿಯಣ್ಣನು ಪುರಾತನರನ್ನು ಕುರಿತು ವಿವಿಧ ರಾಗಗಳಿಗೆ ಅಳವಡುವ ಹಾಗೆ ತಿರುಪಾಡುಗಳನ್ನು ರಚಿಸಿದನೆಂದು ಕವಿ ಹೇಳುತ್ತಾನೆ.

ಆ. ವಾದ್ಯಗಳು :

ಅರಮನೆಯ ಆಸ್ಥಾನದಲ್ಲಿ, ದೇವಾಲಯಗಳಲ್ಲಿ, ಮೆರವಣಿಗೆಯಲ್ಲಿ, ಮದುವೆಯಲ್ಲಿ, ಶರಣ ಗೋಷ್ಠಿಗಳಲ್ಲಿ, ಉತ್ಸವಾದಿಗಳಲ್ಲಿ ವೈವಿಧ್ಯಮಯವಾದ ವಾದ್ಯಗಳ ಬಾಜನೆಯಿರುವ ಚಿತ್ರಣ ಬಸವಪುರಾಣದಲ್ಲಿ ದೊರೆಯುತ್ತದೆ. ರಾಗಗಳಷ್ಟೆ ತಾಳ ಪ್ರಾಧಾನ್ಯ ಹೊಂದಿರುವ ಇವುಗಳು ಸಂಗೀತ

ಕ್ಷೇತ್ರದಲ್ಲಿ ಬಹುಮುಖ್ಯವಾಗಿರುವಂತಹವು. ವಾದ್ಯಗಳ ರಚನೆಯ ಆಧಾರದ ಮೇಲಿಂದ ಅವುಗಳನ್ನು ನಾಲ್ಕು ಪ್ರಕಾರಗಳನ್ನಾಗಿ ವಿಂಗಡಿಸಲಾಗಿದೆ. ತತ–ತಂತಿವಾದ್ಯಗಳು, ಅನದ್ಧ–ಚರ್ಮವಾದ್ಯಗಳು, ಸುಷಿರ–ಗಾಳಿಯೂದಿದಾಗ ನಾದ ಹೊಮ್ಮುವಂತಹ ವಾದ್ಯಗಳು, ಘನ–ತಾಳ, ಗಂಟೆ ಮುಂತಾದ ಲೋಹವಾದ್ಯಗಳು. ಇವುಗಳನ್ನು ತಂತಿವಾದ್ಯಗಳು, ಮರುದ್ವಾದ್ಯಗಳು, ಚರ್ಮವಾದ್ಯಗಳು ಮತ್ತು ಲೋಹವಾದ್ಯಗಳೆಂದು ವಿಂಗಡಿಸಲಾಗಿದೆ. ಆದಯ್ಯಗಳ ವಚನವೊಂದು ಈ ವಾದ್ಯ ಪ್ರಕಾರಗಳನ್ನು ಈ ರೀತಿಯಾಗಿ ವಿಂಗಡಿಸಿ ವಿವರಿಸಿದೆ. (ಆದಯ್ಯಗಳ ವಚನ, ವ.೨೬೧)

೧. ತಂತಿವಾದ್ಯ – ವೀಣೆ, ರುದ್ರವೀಣೆ,ತುಂಬುರವೀಣೆ, ಕೈಲಾಸವೀಣೆ, ಕಿನ್ನರವೀಣೆ.

೨. ಮರುದ್ವಾದ್ಯ – ಕಹಳೆ, ಹೆಗ್ಗಹಳೆ, ಶಂಖ, ವಾಸ, ನಾಗಸ್ವರ, ಉಪಾಂಗ.

೩. ಚರ್ಮವಾದ್ಯ– ಪಟಹ, ಪಡ, ಡಕ್ಕ, ಡಮರುಗ, ಡಿಂಢಿಮ, ಆಮಟ, ಪಟಾವುಜ, ಮೃದಂಗ, ಮುರುಜ, ಭೇರಿ.

೪. ಲೋಹವಾದ್ಯ– ಗಂಟೆ, ಜಯಗಂಟೆ, ತಾಳ,ಕಂಸಾಳ.

ಭೀಮಕವಿಯು ಈ ನಾಲ್ಕು ಪ್ರಕಾರದ ವಾದ್ಯಗಳ ಬಳಕೆಯನ್ನು ಹೆಸರಿಸುತ್ತಾನೆ. (೧:೪೦, ೩೬: ೯೨, ೫೬: ೯೪) ಸಾಂದರ್ಭಿಕವಾಗಿ ಕೆಲವೊಂದು ವಾದ್ಯಗಳನ್ನು ಹೆಸರಿಸುತ್ತಾನೆ. ಬಸವಪುರಾಣದಲ್ಲಿ ತಂತಿವಾದ್ಯವಾದ ವೀಣೆಯ ವಿವರ ಹೆಚ್ಚು ಕಂಡುಬರುತ್ತದೆ. ವೀಣೆಯು ಭಾರತದ ಪ್ರಾಚೀನ ಹಾಗೂ ಪ್ರಸಿದ್ಧವಾದ ವಾದ್ಯಗಳಲ್ಲೊಂದು "ಆದಿಶಿವನಂ ಸ್ತುತಿಸುವುದಟೆಂ ಮಾದಿರಾಜಂ ಮತ್ತೆ ಬತ್ತೀಸಾದಿ ರಾಗಂಗಳಿಗನಿತು ದಂಡಿಗೆಗಳಂ ರಚಿಸಿ" (೧೮:೬) ಎಂದು ಕವಿ ಹೇಳುತ್ತಾನೆ. ಶಿವನನ್ನು ಸ್ತುತಿಸುವುದಕ್ಕಾಗಿಯೇ ಮಾದರಸನು ಮೂವತ್ತೆರಡು ರಾಗಗಳಿಗೆ ಅಳವಡುವ ವೀಣೆಗಳನ್ನು ರಚಿಸಿದ್ದನೆಂದು ಕವಿ ಉದಾಹರಿಸುತ್ತಾನೆ. ಸಕಲೇಶ ಮಾದರಸ ಒಂಭತ್ತು ವೀಣೆಗಳನ್ನು ನುಡಿಸುತ್ತಿದ್ದನೆಂದು ಕವಿ ಅವುಗಳ ವಿವರ ಕೊಡುತ್ತಾನೆ. 'ರಾವಳವೀಣೆ', 'ಪದ್ಮಜವೀಣೆ', 'ಕೈಲಾಸವೀಣೆ', 'ಪಿನಾಕಿವೀಣೆ', 'ಸಾರಂಗವೀಣೆ' 'ಕಚ್ಛಪವೀಣೆ', 'ಸ್ವಾಯಂಭುವೀಣೆ' 'ಗೌರಿವೀಣೆ', 'ಕಿನ್ನರಿವೀಣೆ'" (೧೮:೭) ಇವೇ ಅವನು ನುಡಿಸುತ್ತಿದ್ದ ವೀಣೆಗಳು. ಈ ಮೇಲಿನ ಒಂಭತ್ತು ವೀಣೆಗಳು ಶಿವಶರಣರು ಸಹ ಸಂಗೀತ ಕ್ಷೇತ್ರದಲ್ಲಿ ಕೃಷಿ ಮಾಡಿದ್ದರು ಎಂಬ ವಿವರ ತಿಳಿಯುತ್ತದೆ. ಈ ಮೇಲಿನ ವೀಣೆಗಳಲ್ಲಿ ಕಿನ್ನರ ವೀಣೆಯನ್ನೇ ಸುಶ್ರಾವ್ಯವಾಗಿ ನುಡಿಸಿ ಶಿವನನ್ನು ಮೆಚ್ಚಿಸಿ ಪ್ರತಿದಿನ ಒಂದು 'ಹೊನ್ನು' ಒಂದು 'ಹಣ' ಹಾಗೂ ಒಂದು 'ಹಾಗ' ವನ್ನು 'ಪಡಿ'ಯಾಗಿ ಪಡೆಯುತ್ತಿದ್ದ ಕಿನ್ನರ ಬೊಮ್ಮಯ್ಯನ ಉಲ್ಲೇಖ ಪುರಾಣದಲ್ಲಿ ಬರುತ್ತದೆ. (೨೭:೬) ಇದರಿಂದ ವೀಣೆಗಳಲ್ಲಿ ಅತ್ಯಂತ ಪ್ರಸಿದ್ಧವಾದ ವೀಣೆ ಈ ಕಿನ್ನರಿ ವೀಣೆಯೇ ಇರಬೇಕು. ವೀಣೆಯ ಗತಿಗೆ ತಕ್ಕಂತೆ ಕುಣಿಯುವವರ ಉಲ್ಲೇಖವೂ ಸಹ ಪುರಾಣದಲ್ಲಿ ಕಂಡುಬರುತ್ತದೆ. (೫:೪೨) ಇದರಿಂದ ವೀಣಾವಾದನ ನೃತ್ಯ ಪ್ರಚಲಿತದಲ್ಲಿದ್ದಂತೆ ತೋರುತ್ತದೆ.

ಪಂಚಮಹಾವಾದ್ಯಗಳಾದ ಕಹಳೆ, ಪಟಹ, ಶಂಖ ಭೇರಿ, ಜಯಘಂಟೆ (೧೦:೪೯, ೫೮: ೫೮) ಇವುಗಳ ಉಲ್ಲೇಖ ಪುರಾಣದಲ್ಲಿ ಕೆಲವೆಡೆ ಬರುತ್ತದೆ. ಈ ವಾದ್ಯಗಳು ಪೂಜೆ ಹಾಗೂ ಉತ್ಸವಾದಿ ಸಂದರ್ಭಗಳಲ್ಲಿ ಮೊಳಗದೆ ಬೇರೊಂದು ಸಂದರ್ಭದಲ್ಲಿ ಬಳಕೆಯಾದ ವಿವರಗಳು ಪುರಾಣದಲ್ಲಿ ಕಂಡುಬರುತ್ತವೆ. ಬಸವಣ್ಣನು ಪೆಟ್ಟಿಗೆಯ ಪವಾಡ ಸ್ಥಿರಪಡಿಸಿದ ನಂತರ ಈ ವಾದ್ಯಗಳು ಮೊಳಗಿದ ಸಂದರ್ಭ ಕಂಡುಬರುತ್ತದೆ. ಬಹುಶಃ ವಿಜಯೋತ್ಸವದ ಸಂದರ್ಭದಲ್ಲಿಯೂ ಈ ವಾದ್ಯಗಳನ್ನು ಬಾಜಿಸುವ ಪರಿಪಾಠವಿತ್ತೆಂದು ತೋರುತ್ತದೆ.

ಇನ್ನುಳಿದಂತೆ 'ತಂಬಟ', (೫:೩೯) 'ವೀರಹಲಗೆ', (೫:೪೦) 'ಬಿರುಗಹಳೆ' (೪೯:೧೭) ಮುಂತಾದ ವಾದ್ಯಗಳ ವಿವರಗಳು ದೊರೆಯುತ್ತವೆ. ಇಲ್ಲಿಯ 'ತಂಬಟ' ಚರ್ಮವಾದ್ಯವಾದ 'ತಮಟೆ'ಯೆ ಇರಬೇಕು. ವೀರಹಲಗೆಯು ಹಲಗೆಯ ಇನ್ನೊಂದು ಪ್ರಭೇದ. ಹಾಗೆಯೇ ಬಿರುಗಹಳೆಯೂ ಸಹ ಕಹಳೆಯ ಪ್ರಕಾರವಾಗಿದ್ದು ಅತ್ಯಂತ ಹೆಚ್ಚು ಶಬ್ದವನ್ನುಂಟುಮಾಡುವ ವಾದ್ಯ. 'ಕಂಸಾಳಗಿತ್ತಿ' (೫:೪೩) ಯರ ಉಲ್ಲೇಖ ಸಹ ಪುರಾಣದಲ್ಲಿ ಬರುತ್ತದೆ. ಬಹುಶಃ ಹೆಣ್ಣು ಮಕ್ಕಳೂ ಸಹ ತಂಡ ಕಟ್ಟಿಕೊಂಡು ವಾದ್ಯಗಳನ್ನು ಬಾಜಿಸುವ ವೃತ್ತಿ ಕೈಗೊಂಡಿದ್ದರ ಸೂಚನೆಯನ್ನು ಇದು ಕೊಡುತ್ತದೆ. ಹೆಬ್ಬಡೆ (೫೫:೧೪) (ದೊಡ್ಡ ಹಲಗೆ) ಎಂಬುದು ಪುರಾಣದಲ್ಲಿ ಬಳಕೆಗೊಂಡ ಇನ್ನೊಂದು ವಾದ್ಯ ವಿಶೇಷ. ಬಿಬ್ಬಿ ಬಾಚಯ್ಯನು ಸಿದ್ಧಪ್ರಸಾದದ ಬಂಡಿಯನ್ನು ಹೊಡೆದುಕೊಂಡು ಬರುವ ಸಂದರ್ಭದಲ್ಲಿ ಇದನ್ನು ಕವಿ ಉಲ್ಲೇಖಿಸುತ್ತಾನೆ. ಇದನ್ನು ನೆಲದ ಮೇಲೆ ಎಡಗೈಯಿಂದ ಉರುಳಿಸುತ್ತ ಬಲಗೈನ ಕೋಲಿನಿಂದ ಉತ್ಸಾಹದಿಂದ ಗತಿಗೆ ತಕ್ಕಂತೆ ಬಾಜಿಸುವ ಚರ್ಮದ ದೊಡ್ಡ ವಾದ್ಯ.

ಹೀಗೆ ಬಸವಪುರಾಣದಲ್ಲಿ ಶಿಷ್ಟ ಹಾಗೂ ಜಾನಪದ ವಾದ್ಯಗಳು ಸಂದರ್ಭೋಚಿತವಾಗಿ ಕಾಣಿಸಿಕೊಂಡಿವೆ. ಲಿಂಗಾರ್ಚನೆ ಸಂದರ್ಭದಲ್ಲಿ, ಎದುರುಗೊಳ್ಳುವಾಗ, ಮದುವೆ, ಮುಂಜಿ, ಮೆರವಣಿಗೆ, ಉತ್ಸವ, ಹಬ್ಬ ಹರಿದಿನ, ಶಿವಗೋಷ್ಠಿ, ಧಾರ್ಮಿಕ ವಿಜಯ ಈ ಮೊದಲಾದ ಸಂದರ್ಭದಲ್ಲಿ ವೈವಿಧ್ಯಮಯ ವಾದ್ಯಗಳು ಮೊಳಗುತ್ತಿದ್ದವು. ಆ ಮೂಲಕ ವೈಶಿಷ್ಟ್ಯಪೂರ್ಣವಾದ ಸಾಮಾಜಿಕ ಮತ್ತು ಸಾಂಸ್ಕೃತಿಕ ವಾತಾವರಣವನ್ನು ನಿರ್ಮಾಣ ಮಾಡುತ್ತಿದ್ದವು. ಈ ಹಿನ್ನೆಲೆಯಲ್ಲಿ ಅಂದಿನ ಸಾಂಸ್ಕೃತಿಕ ಜೀವನ ಉಚ್ಚಮಟ್ಟದ್ದಾಗಿದ್ದಿತೆಂದು ಭಾವಿಸಬಹುದು.

ಇ.ಗೋಷ್ಠಿ :

ಲಿಂಗಧಾರಿ ಸಮಾನಮನಸ್ಕ ಶಿವಶರಣರೆಲ್ಲರೂ ಸೇರಿ ಗೋಷ್ಠಿ ನಡೆಸುವ ಉಲ್ಲೇಖಗಳು ಪುರಾಣದಲ್ಲಿ ಕಂಡುಬರುತ್ತವೆ. "ಲಿಂಗನಿಷ್ಠಾಮಾನಸರು ಗುರುಲಿಂಗಸೇವಾತತ್ಪರರು ಚರಲಿಂಗನಿತ್ಯಾರಾಧಕರು ತ್ರಿವಿಧಪ್ರಸಾದಿಗಳು ಹಿಂಗದಾ ಕಲ್ಯಾಣದಲ್ಲಿಯೆ ಮಂಗಳೋತ್ಸುಕ ಭಕ್ತಸುಗೋಷ್ಠಿ ಸಂಗತಿಯೊಳಾ ಬಸವನುಂ ತಾವುಂ ಪ್ರವರ್ತಿಸಲು" (೬೦:೨) ಎನ್ನುವಲ್ಲಿ ಲಿಂಗಧಾರಿ ಶರಣರು, ಜಾತಿ, ವರ್ಗ, ಭೇದವಿಲ್ಲದೆ ಗೋಷ್ಠಿಗಳನ್ನು ನಡೆಸುವ ಸಂದರ್ಭಗಳು ಕಂಡುಬರುತ್ತವೆ.

ಇವುಗಳು ವೈಯಕ್ತಿಕ ಮತ್ತು ಸಾಮೂಹಿಕ ಹಿನ್ನೆಲೆಯಲ್ಲಿ ಗೋಷ್ಠಿಗಳು ನಡೆದದ್ದು ಕಂಡುಬರುತ್ತವೆ. 'ಶರಣಗೋಷ್ಠಿ' (೬:೪೧) 'ಅನುಭಾವ ಗೋಷ್ಠಿ,' (೨೨:೫) 'ಇಷ್ಟಗೋಷ್ಠಿ', (೨೫:೪) 'ತತ್ವಗೋಷ್ಠಿ' (೨೭:೮) 'ಸಂಗೋಷ್ಠಿ', (೩೬:೩೬) ಏಕಾಂತರಾಮಯ್ಯನ ಅನುಭವಗೋಷ್ಠಿ(೪೮: ೫-೬) ಗಳು ಬಸವನ ಭಕ್ತಿಗೋಷ್ಠಿ (೬೦:೨) ಹೀಗೆ ವೈವಿಧ್ಯಮಯ ಗೋಷ್ಠಿಗಳು ನಡೆದದ್ದು ಕಂಡುಬರುತ್ತದೆ. ಇಲ್ಲೆಲ್ಲ ಶಿವಪರವಾದ ಚರ್ಚೆ, ಪೂಜೆ, ಧ್ಯಾನ ಮುಂತಾದ ಚಟುವಟಿಕೆಗಳು ನಡೆಯುತ್ತಿದ್ದವೆಂದು ಕಾಣುತ್ತದೆ. ಇವೆಲ್ಲವನ್ನು ಒಟ್ಟಾರೆ ಶಿವಗೋಷ್ಠಿಗಳೆಂದು ಕರೆಯಬಹುದೇ ವಿನಾ ಹೆಚ್ಚಿನ ವಿವರ ನಿರೀಕ್ಷಿಸಲು ಸಾಧ್ಯವಿಲ್ಲ.

ವ್ಯಕ್ತಿಗತ ಹಿನ್ನೆಲೆಯಲ್ಲಿ ಶಿವಗೋಷ್ಠಿಯಲ್ಲಿ ಬಸವಣ್ಣನವರು ಲಿಂಗವನ್ನು ನೋಡುತ್ತಾ ಮೈಮರೆಯುತ್ತಿದ್ದರೆಂದು ಕವಿಯು ಮನೋಜ್ಞವಾಗಿ ವಿವರಿಸುತ್ತಾನೆ. "ಲಿಂಗವಂ ತಾ ನೋಡಿನೋಡಿ ಸುರಂಗಿಸುತ್ತಂ ಪರಮಶಿವಸುಖಸಂಗಸುಧೆಯ ಸವಿಸವಿದು ತಣಿವಿಲ್ಲದೀಂಟುತ್ತ ಹೊಂಗಿ ಹರನಂ ಮುಟ್ಟಿ ಮುಟ್ಟಿ ಕರಂಗುತವಿರಳ ಭಕ್ತಿ ಶುಭಗನು ಹಿಂಗದವಿರತವೊಂದಿವೊಂದಿಯಲರ್ದು ನಲಿವುತ್ತ" (೩೪:೨) ಎಂದು ಭಕ್ತಿನಿರ್ಭರನಾಗಿ ಶಿವಯೋಗದಲ್ಲಿ ಮಗ್ನನಾದ ಬಸವಣ್ಣನವರನ್ನು ಚಿತ್ರಿಸುತ್ತಾನೆ. ಶರಣಸತಿ ಲಿಂಗಪತಿ ಭಾವದ ಬಸವಣ್ಣನವರು ಮೈಮರೆತು ಭಕ್ತಿಸಾಮ್ರಾಜ್ಯದಲ್ಲಿ ಒಂದಾಗಿರುತ್ತಿದ್ದರು. "ಸ್ವಾಮಿ ಭೃತ್ಯಜ್ಞಾನಸುಖದಭಿರಾಮವದು ತಪ್ಪುವುದೊ ತುದಿಯಂ ನೇಮಿಸುವುದೆಂದೆನುತ ತನ್ನಂ ತಾನೆ ನೆನಪುಗಳ ತಾ ಮಱೆದು ಶಿವಯೋಗನಿಷ್ಠಾ ಸೀಮೆಯಲ್ಲಿ ಮದೀಯ ಸದ್ಗುರು ಸ್ವಾಮಿಯಿರುತಿರ್ದಂದಮೋ ಮತ್ತಂತುಮಲ್ಲದೆಯು" (೩೪:೨೭) ಇಲ್ಲಿ ಬಸವಣ್ಣನವರ ಯೋಗಶಕ್ತಿ, ಶಿವಸಮಾಧಿಸ್ಥಿತಿಯ ಔನ್ನತ್ಯಗಳನ್ನು ಕವಿ ಉದಾಹರಿಸುತ್ತಾನೆ. "ಕ್ರಿಯೆಗಳೊಡಗೂಡಲ್ಕೆವಪುರಿಂದ್ರಿಯ ಮನಃಪ್ರಾಣಗಳೆಂಬಾಶ್ರಯದ ಹೊರೆಗಳನೊಡನೆ ಸುಲಿಸುಲಿದೀಶನಂ ಕೂಡಿ ಪ್ರಯುತಸುಖ ಶಿವ ಯೋಗಮಯ ನಿದ್ರೆಯೊಳೞಗಿ ತಾನಿರ್ದಸೆವ ಮಾಳ್ಕೆಯೊ ಬಳಿಕ ಮನಮಂ ಶಿವಂಗೆ ಸಮರ್ಪಣಂಗೆಯ್ದು"(೩೪:೩೯) ಶಿವಯೋಗನಿದ್ರೆಯಲ್ಲಿ ತನ್ನನ್ನೇ ತಾನು ಮರೆಯುವ ಬಸವಣ್ಣನವರ ಅಪೂರ್ವವಾದ ಚಿತ್ರವನ್ನು ಭೀಮಕವಿ ಇಲ್ಲಿ ಕಟ್ಟಿಕೊಡುತ್ತಾನೆ.

ಬಸವಪುರಾಣದಲ್ಲಿ ಕವಿಯು ಅನೇಕ ಶಿವಶರಣರನ್ನು ಹೆಸರಿಸುತ್ತಾನೆ. ಇವರೆಲ್ಲರೂ ಒಟ್ಟಿಗೆ ಕಲೆತು ಶಿವಗೋಷ್ಠಿ ಆಚರಿಸುತ್ತಿರಬೇಕು. 'ಅನುಭವ ಮಂಟಪದ' ವಿವರಗಳು ಪುರಾಣದಲ್ಲಿ ದೊರೆಯುವುದಿಲ್ಲ. ಬಹುಶಃ ಕವಿಗೆ ಈ ಕುರಿತ ವಿವರಗಳು ತಿಳಿದಿರಲು ಸಾಧ್ಯವಿಲ್ಲವೆಂದು ಕಾಣುತ್ತದೆ. ಆದರೆ ಅಲ್ಲಲ್ಲಿ ಅನೇಕ ಶರಣರು, ಪುರಾತನರು, ಆದ್ಯರು ಸಮಕಾಲೀನ ವಚನಕಾರರನ್ನು ಕವಿ ಹೆಸರಿಸುತ್ತಾನೆ. ಇವರಲ್ಲಿ ಬಸವಪೂರ್ವದ, ಬಸವ ಸಮಕಾಲೀನ ಹಾಗೂ ಬಸವೋತ್ತರ ಕಾಲದ ಎಲ್ಲ ಶಿವಶರಣ ಸಮೂಹವನ್ನು ಕಾಣಬಹುದು. ಸುಮಾರು ಎಪ್ಪತ್ತುಮೂರು ಮಹಂತರ ಉಲ್ಲೇಖವನ್ನು ಒಂದೆಡೆಯಲ್ಲಿ ಉದಾಹರಿಸುತ್ತಾನೆ. (೮:೩೩-೪೮) ಬಸವಪುರಾಣದ ಕೊನೆಯಲ್ಲಿ ರಾಚಮಲ್ಲಯ್ಯ ಹೆಸರಿನಿಂದ ಪ್ರಾರಂಭವಾಗಿ ಮೌಳಿದೇವಯ್ಯನವರೆಗೆ ಸುಮಾರು ಒಂದುನೂರಾಹನ್ನೆರಡು ಭಕ್ತರ

ಹೆಸರುಗಳ ವಿವರವನ್ನು ಕೊಡುತ್ತಾನೆ. (೫೭:೧-೧೨) ಇವರಲ್ಲಿ ವಚನಕಾರರೂ, ಬಸವ ಸಮಕಾಲೀನರೂ ಇರುವರು.

ಬಸವಪುರಾಣಾಂತ್ಯದಲ್ಲಿ ಮಾತ್ರ 'ಮುಸುಟೆ ಚೌಡಯ್ಯ', 'ಬೊಮ್ಮಿದೇವ', 'ಕಿನ್ನರ ಬೊಮ್ಮಯ್ಯ', 'ಕನ್ನದ ಬೊಮ್ಮಯ್ಯ', 'ಕಕ್ಕಯ್ಯ', 'ಮಸಣಯ್ಯ', 'ಕಲಕೇತ ಬೊಮ್ಮಯ್ಯ', 'ಕೇಶಿರಾಜಯ್ಯ', 'ಮಾದಿರಾಜ', ಮೊದಲಾದ ಲಿಂಗವಂತರು ಮತ್ತು ತಂಡ ತಂಡದ ಜಂಗಮಾವಳಿಯೊಡನೆ ಬಸವಣ್ಣನವರು ಸಂಗಮೇಶ್ವರಕ್ಕೆ ಹೊರಟ ವಿವರ ದೊರೆಯುತ್ತದೆ. ಇಲ್ಲಿಯೂ ಸಹ ಸ್ಪಷ್ಟವಾಗಿ ಬಸವ ಸಮಕಾಲೀನ ಶರಣರ ಉಲ್ಲೇಖ ಕಂಡುಬರುವುದಿಲ್ಲ. ಅನುಭವಮಂಟಪದಲ್ಲಿದ್ದ ಬಸವನ ಸಮಕಾಲೀನರಾಗಿದ್ದ ಸುಮಾರು ಮೂವತ್ತುನಾಲ್ಕು ವಚನಕಾರರನ್ನು ಫ.ಗು. ಹಳಕಟ್ಟಿಯವರು ಗುರುತಿಸಿದ್ದಾರೆ. (ಹಳಕಟ್ಟಿ ಸಮಗ್ರ ಸಾಹಿತ್ಯ, ಸಂ.ಪು.೧೨೬)

ಈ. ರಂಗಕಲೆ :

ಮನರಂಜನೆಯ ವಿವಿಧ ಸಾಧ್ಯತೆಗಳ ಹಿನ್ನೆಲೆಯಲ್ಲಿ ರಂಗಕಲೆ ಅಂದು ಪ್ರಚಲಿತದಲ್ಲಿದ್ದಿರಲು ಸಾಧ್ಯವಿದೆ. ಕವಿರಾಜಮಾರ್ಗದ 'ಪಗರಣ'ವು ನಮ್ಮ ಹಳೆಯ ರಂಗಪ್ರಕಾರವಾಗಿದ್ದು ವಚನಕಾರರಲ್ಲಿ ಇದರ ಪ್ರಸ್ತಾಪ ಕಂಡುಬರುತ್ತದೆ.ಗಂಭೀರ ವಿಷಯಗಳಾದ ಪುರಾತನದ ಗದ್ಯಪದ್ಯ ಗೀತಗೋಷ್ಠಿ, ಪಂಡಿತವರ್ಗದ ನಾಟ್ಯ ಸಂಗತಿಗಳು ಇರುವಂತೆ ಸಾಮಾನ್ಯ ಜನತೆಯ ಲಘು ರಂಗಪ್ರಕಾರ ಇರಬಹುದೆನಿಸುತ್ತದೆ. "ಸರಸ ಭಾಷಾಂಗಕ್ರಿಯಾಂಗೋತ್ಕರದ ನಾಟಕ ಗದ್ಯಪದ್ಯ ವಿಸರ ಮಧುರಗೀತೋಕ್ತಿಯಿಂಸಲೆ ದೇಶದೇಶದಲಿ ಕರಮೆಸೆಯಲೂರೂರೊಳತಿ ಶುಭಕರಮೆನಲು ಸಿರಿಯಾಳ ಚರಿತೆಯನೊರೊದೊರೆದು ವಿರಚಿಪರು ಭಕ್ತ ಸಭಾಂತರಂಗಳೊಳು"(೨೪:೨೦) ಎಂಬ ಪದ್ಯ ಈ ಕುರಿತಂತೆ ಮಹತ್ವದ ಬೆಳಕನ್ನು ಚೆಲ್ಲುತ್ತದೆ. ಇಲ್ಲಿ ಕವಿ ಬಳಸಿರುವ 'ಭಾಷಾಂಗ' (ಸಂಭಾಷಣೆ, ಹಾಡು), 'ಕ್ರಿಯಾಂಗ' (ಅಭಿನಯ) ಪದಗಳನ್ನು ಗಮನಿಸಬೇಕು. ಸಿರಿಯಾಳನ ಕಥೆಯನ್ನು ವಸ್ತುವಾಗಿ ಉಳ್ಳ ನಾಟಕಗಳನ್ನು ಹಳ್ಳಿ ಹಳ್ಳಿಯಲ್ಲಿ ಅಭಿನಯಿಸುತ್ತಿದ್ದರೆಂಬ ಸೂಚನೆ ಇಲ್ಲಿ ಕಂಡುಬರುತ್ತದೆ. ಇದರಂತೆಯೇ ಅನೇಕ ಪುರಾತನರ ಕಥೆಗಳನ್ನು ಸಂಭಾಷಣೆ, ಹಾಡು, ಅಭಿನಯದಿಂದ ಜನಮಾನಸಕ್ಕೆ ತಲುಪಿಸುವ ಕಾರ್ಯ ನಡೆಯುತ್ತಿದ್ದಿಬೇಕು. ಈ ಉದಾಹರಣೆಯಿಂದ ಅಂದಿನ ಕಾಲದಲ್ಲಿ 'ರಂಗಕಲೆ' ಯೆಂಬುದು ಸಮಾಜದಲ್ಲಿ ಪ್ರಚಲಿತವಿತ್ತು ಎಂದು ಹೇಳಬಹುದಾಗಿದೆ. ಇದೇ ಸಂದರ್ಭದಲ್ಲಿ 'ಒನಕೆವಾಡು' (೨೪:೩೧) ಪದವೂ ಉಲ್ಲೇಖಗೊಂಡಿರುವುದರಿಂದ ರಂಗಕಲೆಯ ವಾತಾವರಣ ಜೀವಂತವಾಗಿದ್ದಿತೆಂದು ಹೇಳಬಹುದು.

ಉ. ನರ್ತನ :

ನರ್ತನವು ನಾಟ್ಯಕ್ಕಿಂತ ಹಳೆಯದು ಎಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. (ನಾರಾಯಣ ಪಿ.ವಿ. ೧೯೮೩, ಪು.೩೦೭) ಯಾವುದೇ ಕುಣಿತವನ್ನು ನರ್ತನವೆನ್ನಬಹುದಾದರೆ

ನಾಟ್ಯವು ಶಾಸ್ತ್ರೀಯವಾಗಿದ್ದು ದೃಶ್ಯಕಾವ್ಯಗಳಲ್ಲಿನ ಅಭಿನಯವನ್ನು ಸೂಚಿಸುತ್ತದೆ. ಬಸವಪುರಾಣದಲ್ಲಿ ಈ ಎರಡೂ ರೀತಿಯ ಸಂದರ್ಭಗಳು ಉಲ್ಲೇಖವಾಗಿವೆ. ಬಸವಣ್ಣನವರನ್ನು ಕಲ್ಯಾಣಕ್ಕೆ ಕರೆದುಕೊಂಡು ಬರುವ ಸಂದರ್ಭದಲ್ಲಿ ವೀಣಾದಿವಾದ್ಯಧ್ವನಿಗಳಿಗೆ ನರ್ತಿಸಿದ ಉಲ್ಲೇಖ ಬರುತ್ತದೆ. (೫:೪೧,೪೨) ಇದೊಂದು ಸಾಮೂಹಿಕ ನರ್ತನವೆಂದು ತೋರುತ್ತದೆ. ಕಲಕೇತ ಬೊಮ್ಮಯ್ಯನು ಕಾಲಿಗೆ ಗೆಜ್ಜೆಯನ್ನು ಕಟ್ಟಿಕೊಂಡು ಗಹಗಹಿಸಿ ನಗುತ್ತ ಓಡಾಡುತ್ತ ನಡೆಯುತ್ತಿದ್ದನು. (೨೮: ೩,೪) ಮುಂದಲೆಯಲ್ಲಿ ಎತ್ತಿ ಕಟ್ಟಿದ ಮುಡಿ, ನೊಸಲಲ್ಲಿ ವಿಭೂತಿ, ಕಿವಿಗಳಲ್ಲಿ ಕೆಂದಳಿರು, ಎಡಗಾಲಲ್ಲಿ ಅಂದುಗೆ, ಬಲಗಾಲಲ್ಲಿ ಗೆಜ್ಜೆ, ಎಡಗೈಯಲ್ಲಿ ದಕ್ಷನ ಕುರಿದಲೆಯ ತೆರನ ತಗರಿನ ಕೋಡು, ಬಲಗೈಯಲ್ಲಿ ಬೆತ್ತ, ಮೈಮೇಲೆ ಹೊದೆದ ಕಾಗಿನ ಕಪ್ಪಡಗಳಿಂದ ಶೋಭಿಸುವ ಕಲಕೇತ ಬ್ರಹ್ಮಯ್ಯನ ವೇಷದ ವರ್ಣನೆ ಬಹುರೂಪಿಗಳನ್ನು ಹೋಲುತ್ತದೆ. ಕಾಲಂದುಗೆ ಗೆಜ್ಜೆಗಳು 'ಘಿಲ್‌ಘಿಲ್' ಎಂದು ಉಲಿಯುತ್ತಿರಲು ಕೈಯ ಬೆತ್ತವನ್ನು ತಿರುವುತ್ತ ನೃತ್ಯಮಾಡುವುದೇ ಬ್ರಹ್ಮಯ್ಯನ ಕಾಯಕವೆಂದು ಕವಿ ವಿವರಿಸುತ್ತಾನೆ.

ಶಾಸ್ತ್ರೀಯವಾದ ನಾಟ್ಯ ಪ್ರಕಾರವೂ ಸಹ ಪ್ರಚಲಿತವಿದ್ದ ವಿವರ ಪುರಾಣದಲ್ಲಿ ದೊರೆಯುತ್ತದೆ. 'ನಾಟ್ಯನಮಿತ್ತಡಿ' ಎಂಬ ಭಕ್ತನಿಗೆ ಶಿವನು ಪ್ರಾತ್ಯಕ್ಷಿತೆಯ ರೂಪದಲ್ಲಿ ತಾಂಡವನೃತ್ಯವನ್ನು ಮಾಡಿ ತೋರಿಸಿದ ಉಲ್ಲೇಖ ಬರುತ್ತದೆ. (ಸಂ.೧೬) ಆ ಸಂದರ್ಭದ ವಿವರಗಳು ಶಾಸ್ತ್ರೀಯ ನೃತ್ಯ ಪ್ರಚಲಿತದಲ್ಲಿದ್ದುದನ್ನು ಎತ್ತಿ ತೋರಿಸುತ್ತದೆ. "ಚರಣಗತಿಗಳ ಸಂಚಳತೆಯಿಂನೆರೆದ ನಕ್ಷತ್ರಂಗಳುದುರಲು ಭರಿತ ರೌದ್ರೋದ್ರೇಕ ವಿಕಟಾಲೋಕನೋತ್ಕರದಿಂ ಸುರಪ ಹರಿಯುಜಮುಖ್ಯರಳುಕಲು ಪಿರಿದು ನಿಗಳದ ಗೆಜ್ಜೆಗಳ ಪೆರ್ಮೊರಹಿಗಂಜಿಭವಾನಿಯರ್ಧಶರೀರಂ ಬೆರಸೆ, ಭಾಸುರೋನ್ನತ ಬಹಳ ಪಟು ಘಂಟಾಸುರಧ್ವನಿಯಿಂದೆ ದಿಕ್ಕುಗಳೋಸರಿಸೆ ವುಚ್ಛ್ವಾಸ ನಿಶ್ವಾಸೋಪಹತಿಯಿಂದ ಆ ಸಮುದ್ರ ಜ್ವಲನವಾಱಲು ಲೇಸೆನಿಪ ಭೀಕರ ಸುಗತಿಗುಲ್ಲಾಸದಿಂ ಮೆಟ್ಟುವ ಪದದೊಳಿಳೆ ಧೂಳಿಪಟವಾಗೆ". (೧೬:೧೫, ೧೬) ಈ ಭಾಗದಲ್ಲಿ ವ್ಯಕ್ತವಾಗುವ ತಾಂಡವ ನೃತ್ಯದ ಭಾವ, ಭಂಗಿ, ಗತಿಗಳನ್ನು ಲಕ್ಷಿಸಿದರೆ ಶಾಸ್ತ್ರೀಯವಾದ ನಾಟ್ಯ ಪ್ರಕಾರ ಅಂದು ಸಮೃದ್ಧವಾಗಿ ಬೆಳೆದಿತ್ತೆಂಬುದು ತಿಳಿಯುತ್ತದೆ.

ಊ. ಕೇಳಿಕೆ :

ಬಸವಪುರಾಣದಲ್ಲಿ ಮತ್ತೆ ಮತ್ತೆ ಕೇಳಿ ಬರುವ ವಿಶಿಷ್ಟ ಪದ 'ಕೇಳಿಕೆ'. ಇದು ಹನ್ನೆರಡನೇ ಶತಮಾನದ ಶಿವಶರಣರ ಸಾಂಸ್ಕೃತಿಕ ಬದುಕಿನೊಂದಿಗೆ ಹಾಸುಹೊಕ್ಕಾಗಿದ್ದ ವಿಶಿಷ್ಟ ಪದ. "ಕೇಳಿಕೆ ಎನ್ನುವುದು ದೇಸಿ ಸಂಪ್ರದಾಯದ ಹಾಡು ಕುಣಿತಗಳಿಂದ ಕೂಡಿ ಸುತ್ತಣವರನ್ನು ಭಕ್ತಿಯ ಪರಿಸರದಲ್ಲಿ ಉತ್ಸಾಹದಿಂದ ಪಾಲ್ಗೊಳ್ಳುವಂತೆ ಮಾಡುತ್ತಿದ್ದ ಒಂದು ಆಚರಣೆ". (ವಿದ್ಯಾಶಂಕರ ಎಸ್. ೨೦೦೮, ಪು.೧೪೬) ಇದೊಂದು ನೃತ್ಯ ಪ್ರಕಾರವೆಂದು ಪಿ.ವಿ.ನಾರಾಯಣರು ಹೇಳುತ್ತಾರೆ.(೧೯೮೩, ಪು.೩೧೧)

ಹರಿಹರನ ರಗಳೆಗಳಲ್ಲಿ ಬರುವ ಆಧಾರದಿಂದ 'ಕೇಳಿಕೆ' ಕೇವಲ ಉತ್ಸವಾದಿಗಳಲ್ಲಿ ಪ್ರಕಟವಾಗಿರುವುದರಿಂದ ಇದು ಶುದ್ಧ ರಂಗಪ್ರಕಾರವಾಗಲಿ ನೃತ್ಯಪ್ರಭೇದವಾಗಲಿ ಆಗಿರದೆ ಬೀದಿಗುಣಿತವಾಗಿರಬೇಕೆಂದು ಸದಾನಂದ ಪಾಟೀಲರು ಅಭಿಪ್ರಾಯ ಪಡುತ್ತಾರೆ. (೧೯೯, ಪು.೧೯೪) ಇದೊಂದು ಶಾಸ್ತ್ರೀಯ ನೃತ್ಯವಾಗಿರದೆ 'ದೇಸಿ' ನೃತ್ಯ ಪ್ರಕಾರವಂತೂ ಹೌದು, ಎಂಬುದರಲ್ಲಿ ಸಂದೇಹವೇ ಇಲ್ಲ. ಬಸವಪುರಾಣದಲ್ಲಿ ವಿವಾಹ ಸಂದರ್ಭ, ಮೆರವಣಿಗೆ, ಲಿಂಗಜಂಗಮ ಪೂಜಾದಿ ಸಂದರ್ಭ, ಜಂಗಮದೋಲಗ, ಕೂಡಲಸಂಗಮದಲ್ಲಿ ಬಸವಣ್ಣನವರು ಐಕ್ಯರಾದ ಸಂದರ್ಭ ಹೀಗೆ ವಿವಿಧ ಸಂದರ್ಭದಲ್ಲಿ ಕೇಳಿಕೆಯು ಉಲ್ಲೇಖಗೊಂಡಿದೆ. (೪:೭, ೫೪:೧೯, ೧೧:೪೨, ೧೮, ೩೬: ೨, ೫೫: ೬, ೬೦:೬೪) "ಟಕ ವಿಕಟ ಧಿಕ್ಕಟ ಧಿಕಟಥಲಮಿಕಟವೆಂಬಾ ರವವೆಸೆವ ಕೇಳಿಕೆಯನಾಡಿಸುತ್ತಿದ್ದಹರು" (೩೬:೮) ಎಂಬ ಮಾತನ್ನು ಗಮನಿಸಿದರೆ ಕೇಳಿಕೆಯು ವಿವಿಧ ವಾದ್ಯಗಳ ಗತಿಗೆ ತಕ್ಕಂತೆ ನರ್ತಿಸುವ ವಿಶಿಷ್ಟ ರೀತಿಯ ನೃತ್ಯವಾಗಿತ್ತೆಂದು ಹೇಳಬಹುದು. ಶಾಸ್ತ್ರೀಯ ನೃತ್ಯಕ್ಕೆ ಸಮೀಪವಾಗಿರಬಹುದಾದ ನೃತ್ಯ ಪ್ರಕಾರ ಇದಾಗಿತ್ತೆಂದು ಹೇಳಬಹುದು. ಇದೊಂದು ಸಂದರ್ಭ ಹೊರತುಪಡಿಸಿ ಇನ್ನುಳಿದಂತೆ ಉತ್ಸವಾದಿಗಳ ಸಂದರ್ಭದಲ್ಲಿ ಬೀದಿಗುಣಿತವಾಗಿ ಕೇಳಿಕೆಯು ಪುರಾಣದಲ್ಲೆಡೆಯಲ್ಲೆಲ್ಲ ಬಳಕೆಗೊಂಡಿದ್ದೂ ತಿಳಿದುಬರುತ್ತದೆ.

ಬಿಬ್ಬಿ ಬಾಚಯ್ಯನು ಪ್ರಸಾದಬಂಡಿಯನ್ನು ಹೊಡೆದುಕೊಂಡು ಗೊಬ್ಬೂರನ್ನು ಪ್ರವೇಶಿಸುವ ಸಂದರ್ಭದಲ್ಲಿ "ಭೂಪ್ರಸಿದ್ಧದೊಳೆಂದಿನಂತೆ ಬಹುಪ್ರಕಾರದ ಕೇಳಿಕೆಗಳು" (೫೫:೧೦) ಎಂಬ ಉಲ್ಲೇಖ ಬರುತ್ತದೆ. ಈ ಸೂಚನೆಯಿಂದ ಕೇಳಿಕೆಗಳಲ್ಲಿ ಕೆಲವು ಪ್ರಕಾರಗಳಿರಬಹುದೆಂಬುದು ಸ್ಪಷ್ಟ ೧. ಶಿವಭಕ್ತರ ಲೀಲಾ ಘಟನೆಗಳ ತುಣುಕುಗಳನ್ನು ಉದ್ಗರಿಸುವ ರೀತಿ. ೨. ವೀರಭದ್ರದೇವರ ಒಡಪಿನ ಹಾಗೆ ಆರಾಧ್ಯದೇವರ ನಾಮಗಳನ್ನು ಮೇಲಿಂದ ಮೇಲೆ ಉಗ್ಗಡಿಸುವ ರೀತಿ ೩. ಜಯಕಾರದ ಉದ್ಘೋಷದ ರೀತಿ . ೪.ಕೇವಲ ಬೀದಿಗುಣಿತ. ಹೀಗೆ ವಿವಿಧ ಪ್ರಕಾರದ ಕೇಳಿಕೆಗಳಿರಬಹುದೆಂದು ಸದಾನಂದ ಪಾಟೀಲರು ಅಭಿಪ್ರಾಯ ಪಡುತ್ತಾರೆ. (೧೯೯, ಪು.೧೯೩-೯೪)

'ಕೇಳಿಕೆಯ ಮಹದೇವಿ' ಎಂಬ ಸ್ತ್ರೀಯೊಬ್ಬಳ ಉಲ್ಲೇಖ ಪುರಾಣದಲ್ಲಿ ಬರುತ್ತದೆ. ಬಹುಶಃ ಇವಳು 'ಕೇಳಿಕೆ' ತಂಡದ ಸದಸ್ಯೆಯಾಗಿಯೋ ಅಥವಾ ಮುಖ್ಯಸ್ಥಳಾಗಿಯೋ, ಈ ರೀತಿಯ ನೃತ್ಯಪ್ರಕಾರದಲ್ಲಿ ಪರಿಣತಿಯನ್ನು ಪಡೆದಿದ್ದುದರಿಂದ ಈ ಹೆಸರು ಬಂದಿತೊ ಹೇಗೊ ಎಂಬುದು ಗೊತ್ತಾಗುವುದಿಲ್ಲ. ಒಟ್ಟಾರೆಯಾಗಿ ಈ 'ಕೇಳಿಕೆ' ಎಂಬುದು 'ದೇಸಿ' ನೃತ್ಯದಲ್ಲಿ 'ಹಾಡು','ಕುಣಿತ'ಗಳು ಅವಿಭಾಜ್ಯ ಅಂಗವಾಗಿ ಸೇರ್ಪಡೆಯಾಗಿರುವುದರಲ್ಲಿ ಅನುಮಾನವಿಲ್ಲ.

೩.ಕುಶಲಕಲೆ :

ಮಾನವ ವಿಕಾಸದ ಹಂತದಲ್ಲಿ ನಾಗರಿಕತೆಯ ಪಾತ್ರ ಅತ್ಯಂತ ದೊಡ್ಡದು. ಮನುಷ್ಯ ನಾಗರಿಕನಾದಂತೆ ಹೊಸ ಹೊಸ ಬಯಕೆ, ಆಸೆ-ಆಕಾಂಕ್ಷೆಗಳನ್ನು ಈಡೇರಿಸಿಕೊಳ್ಳಲು ಮೊದಲು

ಮಾಡಿದ. ಈ ಹಿನ್ನೆಲೆಯಲ್ಲಿಯೇ ವೈವಿಧ್ಯಮಯವಾದ ವಸ್ತುಗಳನ್ನು ಶೋಧಿಸಿ ಅವುಗಳನ್ನು ತನ್ನ ಬದುಕಿನಲ್ಲಿ ಉಪಯೋಗಿಸಿಕೊಳ್ಳಲು ಶುರು ಮಾಡಿದ. ಕೌಶಲ್ಯತೆ ರೂಢಿಗೊಂಡಂತೆ ಕ್ರಮೇಣ ತನ್ನೆಲ್ಲ ಒಟ್ಟು ಬದುಕಿಗೆ ಅನ್ವಯಾಗತವಾಗುವ ವಿವಿಧ ವಸ್ತುವೈವಿಧ್ಯತೆಗಳನ್ನು ಸೃಷ್ಟಿಸಿಕೊಂಡ. ನಾಗರಿಕತೆ ಬೆಳೆದಂತೆ ಅವನ ಬದುಕೂ ಸಹ ಸುಂದರವಾಗತೊಡಗಿತು. ಮಾನವ ಮನಸ್ಸಿನ ಶಕ್ತಿಯನ್ನು ಕಂಡುಕೊಂಡನಂತರ ಅದರ ಕೃಷಿಯ ಕಡೆಗೆ, ಅಂದರೆ ಅಂತರಂಗ ವ್ಯವಸಾಯದ ಕಡೆಗೆ ಅವನ ಗಮನ ಹರಿಯುತ್ತದೆ. ಅವನ ಆಂತರಿಕ ಸಂಸ್ಕಾರ ಅವನ ಬಾಹ್ಯ ಕ್ರಿಯೆಗಳಲ್ಲಿ, ವ್ಯವಸಾಯೋಪಕರಣಗಳ ತಯಾರಿಕೆಯಲ್ಲಿ,ಜೀವನೋಪಾಯಗಳ ಸಾಧನೆಯಲ್ಲಿ, ಸಾಮಾಜಿಕ ಸಂಘಟನೆಯಲ್ಲಿ, ಆಡಳಿತ ವ್ಯವಸ್ಥೆಯಲ್ಲಿ, ರಾಜಕೀಯಾರ್ಥಿಕ ವಿಷಯಗಳಲ್ಲಿ, ಮತೀಯ ವ್ಯವಹಾರಗಳಲ್ಲಿ, ಆಚಾರ ಸಂಪ್ರದಾಯಗಳಲ್ಲಿ, ಯಂತ್ರತಂತ್ರಗಳಲ್ಲಿ, ವಾಸ್ತುಶಿಲ್ಪದಲ್ಲಿ, ಕಲಾಪ್ರಕಾರಗಳಲ್ಲಿ, ದಾರ್ಶನಿಕ ಸಂಗತಿಗಳಲ್ಲಿ, ಯುದ್ಧಕ್ರೀಡೆಗಳಲ್ಲಿ, ನೈಸರ್ಗಿಕ ಶಕ್ತಿಗಳ ನಿಯಂತ್ರಣದಲ್ಲಿ, ವ್ಯಾಪಾರ ವಾಣಿಜ್ಯಗಳಲ್ಲಿ, ವಿಜ್ಞಾನ ಕೈಗಾರಿಕೆಗಳಲ್ಲಿ , ಭೋಗೋಪಕರಣಗಳಲ್ಲಿ ಇನ್ನೂ ಅಸಂಖ್ಯ ವಿಧಾನಗಳಲ್ಲಿ ಹೊರ ಹೊಮ್ಮುತ್ತದೆ. ಈ ರೀತಿಯ ಮನುಷ್ಯನ ಮಾನಸಿಕ ಕೌಶಲ್ಯ ವಿವಿಧ ಆಯಾಮಗಳಿಗೆ ಕಾರಣವಾಗಿ ಹಿಂದೆಂದಿಗಿಂತಲೂ ಮನುಷ್ಯನ ಬದುಕು ಊರ್ಜಿತಗೊಂಡಿದೆ ಎಂದು ಹೇಳಬಹುದು. ಈ ದೃಷ್ಟಿಯಿಂದ ಬಸವಪುರಾಣದಲ್ಲಿ ಕಂಡು ಬರುವಂತೆ ಶಿವಶರಣರು ಲೌಕಿಕದಲ್ಲಿದ್ದು ಅಲೌಕಿಕತೆಯ ಕಡೆಗೆ ಮುಖ ಮಾಡಿದವರು. ಬಸವಣ್ಣ ಅರಸೊತ್ತಿಗೆಯ ಪ್ರಭಾವದಲ್ಲಿದ್ದು ಅತ್ಯಂತ ಸರಳವಾಗಿ ಬದುಕಿದವನು.

> **ಕ್ಷೀರಶರಧಿಯೊಳಿಪ್ಪ ಹಂಸಂ**
> **ಕ್ಷಾರನೀರಂ ಸೇವಿಪುದೆ ಕಂ**
> **ಠೀರವಂ ಪುಲ್ಮೇವುದೇ ಮಾವಣ್ಗಳಂ ಪೀರ್ವ**
> **ಕೀರವಿಟ್ಟಿಯ ಪಣ್ಗೆಚಿತ್ತಂ**
> **ಹಾರಿದಪುದೇ ಪೆಜಿರವೊಲು ಮಾ**
> **ರಾರಿಭಕ್ತರು ಪರಧನಕೆ ಕೈ ನೀಡುವರೆ ಭೂಪ...** (ಬ.ಪು. ಸಂಧಿ. ೧೦: ಪದ್ಯ ೧೧)

ಎಂದು ಬಿಜ್ಜಳನಿಗೆ ಹೇಳಿದವನು. ಸಾಮಾನ್ಯ ಜನರ ಹಾಗೆ ಶಿವಶರಣರು ಭೋಗವಸ್ತುಗಳಲ್ಲಿ ಸುಖ ಕಂಡವರಲ್ಲ. ಆತ್ಮಸುಖಕ್ಕೆ ಅವರು ಹೆಚ್ಚು ತುಡಿಯುತ್ತಿದ್ದರು. ಹಾಗಾಗಿಯೇ ಪುರಾಣದಲ್ಲಿ ಶಿವಶರಣರ ಭೋಗಸಾಮಗ್ರಿಗಳು, ಆಭರಣಗಳು, ಒಡವೆಗಳು, ಉಣಿಸುಗಳು ವೈಭವೋಪೇತವಾಗಿ ವರ್ಣಿತವಾಗಿಲ್ಲ. ಭೀಮಕವಿಯ ಕಾಲದ ಅಂದಿನ ಸಮಾಜದ ಇಂತಹ ಅಂಶಗಳನ್ನು ಅಲ್ಲಲ್ಲಿ ಚಿತ್ರಣವಾದದ್ದು ಕಂಡು ಬರುತ್ತದೆ.

ಸಾಯುಜ್ಯ ಪದವಿ ಪಡೆದ ಕೆಲವು ಜೀವಗಳು ಪುಷ್ಪಕ ವಿಮಾನದಲ್ಲಿ ಕೈಲಾಸಕ್ಕೆ ತೆರಳುತ್ತವೆ. (೫೮:೭, ೧೧:೭೯) ಕಾಲ್ಪನಿಕವಾಗಿ ಕವಿ ಈ ಸಂದರ್ಭ ಉಲ್ಲೇಖಿಸಿರಬಹುದು. ಇಂದ್ರಜಾಲ, ಮಹೇಂದ್ರಜಾಲ, ಯಂತ್ರ, ತಂತ್ರ, ಮಂತ್ರ ಮುಂತಾದ ಕೈಚಳಕದ ವಿದ್ಯೆಗಳು ಪ್ರಚಲಿತವಿದ್ದದ್ದನ್ನು ಪುರಾಣದಲ್ಲಿ ಗಮನಿಸಬಹುದು. (೪೯:೭೮, ೪೧) ಅಂದಿನ ಸಮಾಜದ ಕೌಶಲ್ಯತೆಯ ಪ್ರತೀಕವಾಗಿ

ಏನೋ ಎಂಬಂತೆ 'ಕೋಟೆಕೊತ್ತಲುಗಳು', (೧೫:೧೪) 'ಮಹಡಿ ಮನೆಗಳು',(೩:೩೮) 'ಆಯುಧಗಳು',(೨೪:೪) 'ಸುಗಂಧ ದ್ರವ್ಯಗಳು', (೧೧:೧೧) 'ಕನ್ನಡಿ ಕಳಸಗಳು' ವರ್ಣಿತವಾಗಿವೆ.

ಅಂದಿನ ಗಣಿಕಾಸ್ತ್ರೀಯರ ಮನೆಗಳು ಅತ್ಯಂತ ವೈಭವಯುತವಾಗಿದ್ದವು ಎಂಬುದನ್ನು ಕವಿ ವಿವರಿಸುತ್ತಾನೆ. ಮನೆಗೆ ಬಂದವರನ್ನು ಸ್ವಾಗತಿಸಲು ಮನೆಯ ಮುಂಭಾಗದ ಪಂಜರದಲ್ಲಿ ಗಿಣಿ, ಕೋಗಿಲೆ, ನವಿಲುಗಳಿರುತ್ತಿದ್ದವು. ಹಾಸುಮಂಚ, ಉಯ್ಯಾಲೆ, ತಲೆದಿಂಬು, ಗದ್ದುಗೆ, ನಿಲುವುಗನ್ನಡಿ, ಬೀಸಣಿಗೆ, ತೆರೆಗಿಂಡಿ, ಕುಡಿಯಲು ತಂಬಿಗೆಯಲ್ಲಿ ಪಾನೀಯ, ಕಸ್ತೂರಿ, ಚಂದನ, ಕರ್ಪೂರದಂತಹ ಸುಗಂಧ ದ್ರವ್ಯಗಳು, ಅರಳ ಪಡಲಿಗೆ, ಧಾರೆವಟ್ಟಲು, ಸುಣ್ಣದ ಕಂಡಿಕೆ, ಪರಿಗವಟ್ಟಣಿಗೆ, ಪರಿಯಾಣ, ಹಿರಿಯ ಚಿತ್ರದ ಭಿತ್ತಿ ,ಮನೆಯ ಮುಂದೆ ಮಂಗಳೋದಯವೆತ್ತಂತೆ ಮುತ್ತಿನ ರಂಗವಾಲೆ ಮುಂತಾದ ವೈವಿಧ್ಯಮಯ ವಸ್ತುಗಳು ಅಂದಿನ ಸಮಾಜದ ಸಮೃದ್ಧ ಭೋಗಜೀವನವನ್ನು ಚಿತ್ರಿಸುತ್ತವೆ. (೧೧: ೯-೧೩) ಶ್ರೀಮಂತಿಕೆಯ ಜೀವನ ಈ ಭಾಗದಲ್ಲಿ ಚಿತ್ರಣಗೊಂಡಿದೆ.

ಅ. ಆಭರಣಗಳು :

ಮನುಷ್ಯನ ಸೌಂದರ್ಯ ಹೆಚ್ಚಿಸುವಲ್ಲಿ ಆಭರಣಗಳ ಪಾತ್ರ ದೊಡ್ಡದು. ಬಸವಣ್ಣನವರ ವಿವಾಹ ಸಂದರ್ಭದಲ್ಲಿ ಗಂಗಾಂಬಿಕೆಯ ಆಭರಣಗಳನ್ನು ಕವಿ ವಿವರಿಸುತ್ತಾನೆ. ಅಂದಿನ ಸಮಾಜದ ಹೆಣ್ಣು ಮಕ್ಕಳು ಧರಿಸುವ ಆಭರಣಗಳು ಪ್ರಾತಿನಿಧಿಕವಾಗಿ ಇಲ್ಲಿ ಉಲ್ಲೇಖಿಸಲ್ಪಟ್ಟಿವೆ. 'ಅಂದುಗೆ', 'ಭುಜಕೀರ್ತಿ', 'ಕಡಗ', 'ಕಂಕಣ', 'ಸುಡಗ', 'ಮುತ್ತಿನಕೊಪ್ಪು', 'ಮೂಕುತಿ' ಮುಂತಾದ ಆಭರಣಗಳ ಉಲ್ಲೇಖ ಬರುತ್ತದೆ. 'ಮಂಟಿಗೆ' ಎಂಬ ಆಭರಣದ ಉಲ್ಲೇಖ ಬರುತ್ತದೆ. ಬಹುಶಃ ಇದು 'ಒಂಟಿ' ಇರಬಹುದು. 'ನೇವಳ' ಎಂಬುದು ಸೊಂಟಪಟ್ಟಿ ಇರಬಹುದು. ಮೌಕ್ತಿಕಹಾರ ಹಾಗೂ ಮಣಿಪದಕಗಳ ಉಲ್ಲೇಖಗಳೂ ಕಂಡುಬರುತ್ತವೆ.(೪:೩೬-೩೯) 'ಹೀರಾವಳಿ' (ಮುತ್ತಿನ ಸರ) ಆಭರಣದ ಉಪಯೋಗವಿತ್ತು. ಕಿವಿಗಳಿಗೆ ಹಾಕಿದ ಬಂಗಾರದ ಹೂಗಳು ಎದ್ದು ತೋರುತ್ತಿದ್ದವೆಂದು ವಿವರಿಸುತ್ತಾನೆ. 'ಉಂಗುರ' ಹಾಗೂ ಮುದ್ರಿಕೆಯುಂಗುರ ಬೇರೆ ಬೇರೆಯೆ ಎಂದು ತೋರುತ್ತದೆ. ರಾಜಮುದ್ರೆಯುಂಗುರವೇ ಮುದ್ರಿಕೆಯುಂಗುರವಿರಬಹುದೇನೊ. ಇವೆಲ್ಲ ಆಭರಣಗಳು ರಾಜಪರಿವಾರದ ಹಿನ್ನೆಲೆಯಲ್ಲಿ ಉಕ್ತಗೊಂಡಿದ್ದನ್ನು ಕಾಣಬಹುದು.

'ಓಲೆ', 'ಚೌಕುಳಿ', 'ಕಡಕು', 'ಮೂಕುತಿ', 'ತಾಲಿ', 'ಕಡಗ', 'ಬಣ್ಣಸರ', 'ತೋಳಬಂದಿ'ಯ ಉಲ್ಲೇಖ ಇನ್ನೊಂದು ಕಡೆ ಬಂದಿದೆ. (೧೩:೪) ಕವಿ ಇವುಗಳನ್ನು ಬಾಲದೊಡಿಗೆಗಳು ಎಂದು ಕರೆಯುತ್ತಾನೆ. ವಿಶೇಷವಾಗಿ ಮಕ್ಕಳು ಈ ಆಭರಣಗಳನ್ನು ಧರಿಸುತ್ತಿದ್ದಂತೆ ಕಾಣುತ್ತದೆ. 'ನಿಗಳ' (ತೋಡೆ), 'ಗೆಜ್ಜೆಯುಂಗುರ', 'ಅಂದುಗೆ' (೧೩:೧೫) ಇವುಗಳೂ ಸಹ ವಿಶೇಷವಾಗಿ ಮಕ್ಕಳೇ ಧರಿಸುವ ಆಭರಣಗಳಾಗಿರಬೇಕು.

'ಪೆಂಡೆಯ', 'ತೋಳಮಣಿ', 'ಹಸ್ತಕಡಗ', 'ನೀಲಮುತ್ತಿನ ತೊಂಬೆಗಡುಕು'ಮುಂತಾದ ವೀರರು ಧರಿಸುವ ಆಭರಣಗಳನ್ನು ಕವಿ ಹೆಸರಿಸುತ್ತಾನೆ. (೬೦:೨೬,೨೭) ಇಲ್ಲಿಯ 'ಪೆಂಡೆಯ'

ಗೆಜ್ಜೆಯಂ ಬಿಗಿದಂದರಿಂದೊಲೆದೊಲೆದು ನಡೆವುತ" (೨೮:೩) ಹೀಗೆ ಕಲಕೇತ ಬೊಮ್ಮಯ್ಯನ ವೇಷಭೂಷಣ ವಿವರಿಸುವಲ್ಲಿ ಅಂದಿನ ಸಮಾಜದ ವೇಷಭೂಷಣಗಳ ಒಂದು ಭಾಗ ದೊರೆಯುತ್ತದೆ.

ಜಂಗಮರು ತಲೆಯನ್ನು ಬೋಳಿಸಿ ಮೂರೆಳೆಯ ಉಡುದಾರವನ್ನು ಕಟ್ಟಿ, ಬಿಳಿಯ ಸೀರೆಯನ್ನುಡುತ್ತಿದ್ದರೆಂಬ ಜಂಗಮನ ಉಡುಪಿನ ವಿವರವು ದೊರೆಯುತ್ತದೆ. (೩೭:೧೪-೧೫) ಇದರಿಂದ ಜಂಗಮರ ವೇಷಭೂಷಣಗಳು ಅತ್ಯಂತ ಸರಳವಾಗಿದ್ದವು ಎಂದು ಹೇಳಬಹುದು. ಮೊಲ್ಲ ಬೊಮ್ಮಯ್ಯರು ದೇವವಸ್ತ್ರವನುಟ್ಟು ಬಿಜ್ಜಳನ ಅರಮನೆ ಹೊಗುವ ವಿವರವು ಬರುತ್ತದೆ. 'ದೇವವಸ್ತ್ರ' (೬೦:೨೨) ಎಂದರೆ ಧಾರ್ಮಿಕ ವಿಜಯಕ್ಕೆ ಹೊರಡುವ ಸಂದರ್ಭದಲ್ಲಿ ಈ ರೀತಿಯ ಉಡುಪುಗಳನ್ನು ಧರಿಸುತ್ತಿದ್ದರೋ ಅಥವಾ ಇದೊಂದು ವಿಶೇಷವಾದ ಬೇರೊಂದು ರೀತಿಯ ವಸ್ತ್ರವೈವಿಧ್ಯವೊ ತಿಳಿಯದು.

ಇ.ಉಣಿಸುಗಳು :

ಬಸವಪುರಾಣದಲ್ಲಿ ವ್ಯಕ್ತವಾದ ಆಹಾರಾದಿಗಳೆಲ್ಲ 'ಪ್ರಸಾದ', (೪:೯೯, ೯:೪೫) 'ದಾಸೋಹ' (೧: ೬೩, ೩೬:೫೮) ಪ್ರಯೋಗಗೊಂಡು ವಿಶಿಷ್ಟ ಸಾಂಸ್ಕೃತಿಕ ಪರಿಸರವನ್ನು ಉಂಟು ಮಾಡುತ್ತವೆ. ಶಿವಶರಣರದು ಜನಪರ ಸಂಸ್ಕೃತಿ. ಪುರೋಹಿತರದು ಜನದೂರ ಸಂಸ್ಕೃತಿ. ಆದ್ದರಿಂದ ಶಿವ ಶರಣರು ತಾವು ಭುಂಜಿಸುವ ಪದಾರ್ಥವನ್ನು ಗುರುಲಿಂಗ ಜಂಗಮಕ್ಕೆ ಸಮರ್ಪಿಸಿ ಉಪಭೋಗಿಸುವ ಮೂಲಕ ಅದಕ್ಕೊಂದು ದೊಡ್ಡ ಮೌಲ್ಯ ತಂದುಕೊಟ್ಟ ಉಲ್ಲೇಖಗಳು ಪುರಾಣದಲ್ಲಿ ಕಂಡುಬರುತ್ತವೆ.

ಬಸವಣ್ಣನವರು ಷಡ್ರಸನ್ಯೆವೇದ್ಯವನ್ನು ಜಂಗಮರಿದ್ದಲ್ಲಿಗೆ ದಿನದ ಮೂರು ಹೊತ್ತು ಸಲ್ಲಿಸುತ್ತಿದ್ದನೆಂದು ಕವಿ ಬರೆಯುತ್ತಾನೆ. 'ಮೂಱವಸರದೊಳೋಗರಂಗಳನಾಱುಸದ ರಸಾಯನಂಗಳನೊಜೆದ ಪದಾರ್ಥಂಗಳಂ ಬಾಸಣಿಸಿ ವಿವರದಲಿ ಬೇಱೆ ಬೇಱುಱೆ ಕಂಬಿಗಳೊಳಗೆ ನೇಱೆ' ತಪ್ಪದೆ ಕಳುಹುವನು. ಪ್ರಸಾದವಾದಿಯಾದ ಬಸವಣ್ಣನವರು ಲಿಂಗಜಂಗಮದಾಸೋಹವನ್ನು ಪ್ರತಿನಿತ್ಯ ಕೈಗೊಂಡ ಉಲ್ಲೇಖ ಸಮಾಜದ ಸರ್ವಸದಸ್ಯರು ಹಂಚಿಕೊಂಡು ತಿನ್ನಬೇಕೆಂಬ ಸಂದೇಶವನ್ನು ನೀಡಿದಂತಿದೆ ಈ ಪ್ರಸಂಗ. "ಕಾಗೆ ಒಂದಗುಳ ಕಂಡಡೆ ಕರೆಯದೆ ತನ್ನ ಬಳಗವನು? ಕೋಳಿ ಒಂದು ಕುಟುಕ ಕಂಡಡೆ ಕೂಗಿ ಕರೆಯದೆ ತನ್ನ ಕುಲವನೆಲ್ಲವ" (ಸ.ವ.ಸಂ.೧, ವ.೪೩೮) ಎಂಬ ಬಸವವಚನದ ಆಶಯದಂತೆ ಆಹಾರಾದಿಗಳ ವಿತರಣೆ ನಡೆವಂತೆ ಪುರಾಣದಲ್ಲಿ ಉಕ್ತವಾಗಿದೆ. ಒಂದುಲಕ್ಷ ತೊಂಬತ್ತೆಂಟುಸಾವಿರ ಜಂಗಮರಿಗೆ ಮಾಡಿದ ಪಂಚಪಕ್ವಾನ್ನಗಳನ್ನು ಅಲ್ಲಮ ಪ್ರಭುದೇವರಿಗೆ ಅರ್ಪಿಸಿದ ಉಲ್ಲೇಖವನ್ನು ಕವಿ ನೀಡುತ್ತಾನೆ. ಈ ಸಂದರ್ಭದಲ್ಲಿ 'ಪರಿಯಾಣ'ದಲ್ಲಿ ದೇವಾನ್ನ, ದಿವ್ಯಾನ್ನಗಳನ್ನು ಸಮರ್ಪಿಸಿದನೆಂದು ಹೇಳುತ್ತಾನೆ. (೭:೧೪,೧೫, ೪೨: ೨೦)

ಕೋಳೂರ ಕೊಡಗೂಸಿನ ಕಥೆಯಲ್ಲಿ ಬರುವ ಆಹಾರಗಳ ವಿಧಗಳು ಅಂದಿನ ಸಮಾಜದ ವಿವಿಧ ರೀತಿಯ ಉಣಿಸುಗಳನ್ನು ಸೂಚಿಸುತ್ತವೆ. "'ಹೂರಿಗೆ', 'ಘಾರಿಗೆ', 'ತುಪ್ಪ' , 'ಸಕ್ಕರೆ',

'ಪಾಯಸ', 'ಹೆಸರ ಹುಗ್ಗಿ', 'ಚಿಗುಳಿ', 'ಚಕ್ಕಲಿ', 'ಮಂಡಗೆ', 'ಲಡ್ಡುಗೆ', 'ತಱಗುವಿಡ್ಡಲಿ', 'ಕಳವೆಯೋಗರ'" (೧೩:೧೧, ೧೩, ೧೫) ಮುಂತಾದ ಆಹಾರಗಳು ಅಂದಿನ ಸಮಾಜದಲ್ಲಿ ಈ ರೀತಿಯ ಸಮೃದ್ಧ ಉಣಿಸುಗಳು ಸ್ಥಾನ ಪಡೆದದ್ದು ತಿಳಿದು ಬರುತ್ತವೆ.

ವಿಷವನ್ನೇ ಪ್ರಸಾದವೆಂದು ಶಿವನಿಗೆ ನೈವೇದ್ಯ ಮಾಡಿ ಬಸವನನ್ನೊಳಗೊಂಡು ಶಿವಶರಣರಾದಿಯಾಗಿ ಸೇವಿಸಿದ ಪ್ರಸಂಗವಂತೂ ಪ್ರಸಾದ ಮಹಿಮೆಯ ಪರಾಕಾಷ್ಠೆಯನ್ನು ವಿವರಿಸುತ್ತದೆ. ಭಕ್ತಿಪೂರ್ವಕವಾಗಿ ಶಿವನಿಗರ್ಪಿಸಿದ ಎಂತಹ ಪದಾರ್ಥವೂ ತನ್ನ ಮೂಲ ತಾಮಸಿಕ ಗುಣ ಕಳೆದುಕೊಂಡು ಸಾತ್ವಿಕವಾಗಿ ಪರಿವರ್ತನೆಯಾಗುತ್ತದೆ ಎಂಬ ತತ್ವ ಇಲ್ಲಿ ಅಡಕವಾಗಿರುವಂತಿದೆ. "ಹೊಡವಡುತ ತರ್ಕೈಸುತಂ ಕೈವಿಡಿದು ಕುಣಿವುತ ತಣಿವುತಂ ಬೊಬ್ಬಿಡುತ ಹಾಱುತ ಚಪ್ಪಳಿಕ್ಕುತ ಪಾಡುತಾಡುತ್ತಾ ಮೃಡಗಣಾವಳಿ ಈ ಪ್ರಕಾರದೊಳುಡುಗದತಿ ವಿಕ್ರಮ ವಿನೋದದೊಳಡರ್ದು ಪಟು ವಿಷಯ ಕೇಳಿಯುಂ ಸಲಿಸುತ್ತಮಿರಲೊಡನೆ". (೫೮:೨೪) ಹೀಗೆ ಶರಣರು ಉತ್ಸಾಹದಿಂದ ಪ್ರಸಾದ ಸೇವಿಸಿದ ಹಿನ್ನೆಲೆಯಲ್ಲಿ ವ್ಯಕ್ತವಾಗಿರುವ ಸಪಂಕ್ತಿ ಭೋಜನದ ಆಚರಣೆಯನ್ನು ಕಾಣಬಹುದು. ಬಿಜ್ಜಳನ ಸಹಿತ ಆತನ ಪರಿವಾರ, ಆನೆ, ಕುದುರೆಗಳಿಗೂ ಪ್ರಸಾದ ಕೊಡುವ ಸಂದರ್ಭ ವೈಶಿಷ್ಟ್ಯಪೂರ್ಣವಾಗಿ ವಿವರಗೊಂಡಿದೆ.

ತಾವು ಸೇವಿಸುವ ಆಹಾರಾದಿಯಾಗಿ ಮಡಿಮೈಲಿಗೆ ಸೃಷ್ಟಿಸಿಕೊಂಡ ಆಚರಣೆಯನ್ನು ವಿರೋಧಿಸಿ ವೈದಿಕ ಸಂಸ್ಕೃತಿಯನ್ನು ಪ್ರತಿಭಟಿಸಿದ ಸಂದರ್ಭಗಳು ಪುರಾಣದಲ್ಲಿ ಉಕ್ತಗೊಂಡಿದೆ. ಬೇಡರ ಕಣ್ಣಪ್ಪ ಮೃಗಗಳನ್ನು ಬೇಟೆಯಾಡಿ "ಸುಂಟಗೆಯ ಕೋಲಲಿ ಪೊರಳ್ಚಿ ಕಾಸುತ್ತ ಚೆಲುವವಹ ಮೃದುತರವೆನಿಪ ಪರಿಮಳಿಪ ಹೊಸ ಖಂಡುಗಳಂ ಸವಿಗೊಳುತ ಪುಳಕಿಸಿ ಹೊಲಿದ ದೊನ್ನೆಯೊಳಿರಿಸಿ ಬಾಸಣಿಸಿ" (೧೭:೨೯) ತಂದು ಲಿಂಗಕ್ಕೆ ಅರ್ಪಿಸಿದ ವಿವರ ಬಂದಿದೆ. ಈ ಮೂಲಕ ಉಣ್ಣುವ,ತಿನ್ನುವ, ಅರ್ಚಿಸುವ ವಿಚಾರದಲ್ಲಿ ಮಡಿ ಮೈಲಿಗೆಯನ್ನು ಮೀರಿದ ಸಂದರ್ಭ ಇಲ್ಲಿ ಉಕ್ತವಾಗಿದೆ. ಇಂತಹುದೇ ಇನ್ನೊಂದು ಸಂದರ್ಭ ವೈಶಿಷ್ಟ್ಯಪೂರ್ಣವಾಗಿ ಉಲ್ಲೇಖಗೊಂಡದ್ದನ್ನು ಕಾಣಬಹುದು. ಶ್ವಪಚಯ್ಯ 'ಶ್ವ'ಅಂದರೆ ನಾಯಿ, 'ಪಚ' ಎಂದರೆ ಬೇಯಿಸು. ನಾಯಿಯ ಕಪೋಲದಲ್ಲಿ (ತಲೆಬುರುಡೆ) ಆಹಾರ ಬೇಯಿಸಿ ಉಣ್ಣುವವನು ಶ್ವಪಚಯ್ಯ. ಇಂಥ ಶ್ವಪಚಯ್ಯನು ಅಡಿಗೆ ಮಾಡುತ್ತಿದ್ದಾಗ ಗಗನದಲ್ಲಿ ಹೊರಟ ಸಾಮವೇದಿಯ ದೃಷ್ಟಿ ಬಿದ್ದೀತೆಂದು ಶ್ವಪಚಯ್ಯನು ತನ್ನ ಅಡಿಗೆಗೆ ಕೆರಹಿನಿಂದ ಮುಚ್ಚುತ್ತಾನೆ. (೫೬:೩) ಭಕ್ತಸ್ಪರ್ಶದ ಭೋಜ್ಯವು ಪ್ರಸಾದವೆನಿಸಿದಾಗ, ಭವಿಯಾದವನು ದೃಷ್ಟಿಸಿದರೂ ಅದು ತನ್ನ ಶುದ್ಧತೆ ಕಳೆದುಕೊಂಡು ಅಪವಿತ್ರವಾಗವುದೆಂಬ ಅಂಜಿಕೆ ಶ್ವಪಚಯ್ಯನದು. ಬ್ರಾಹ್ಮಣವರ್ಗದ ಶೀಲ, ಮಡಿ ಮೈಲಿಗೆಗಳ ಚಟುವಟಿಕೆಯನ್ನು ನಿಯಂತ್ರಿಸಲೆಂದೇ ಆ ಶಿವಭಕ್ತ ಈ ನಿಲುವು ತಾಳಿದಂತಿದೆ. ಭಕ್ತನ ಸ್ಪರ್ಶ, ನೋಟವೂ ಕೂಡ ಭವಿಯ ಸ್ಪರ್ಶ, ಮತ್ತು ನೋಟಕ್ಕೆ ಹೇಗೆ ಹೊರತಾಗಿದೆ ಎಂಬುದರ ಸಾದೃಶ್ಯವನ್ನು ಶ್ವಪಚಯ್ಯನ ನಡುವಳಿಕೆಯಿಂದ ಕಾಣುತ್ತೇವೆ. ಹಾವಿನಹಾಳ ಕಲ್ಲವ್ವೆ ಬ್ರಾಹ್ಮಣಸ್ಪರ್ಶಕ್ಕೆ ಹೇಸಿಕೊಂಡು ನೀರು

ತುಂಬಿದ ಕೊಡವನ್ನು ಒಡೆದು ಹಾಕುತ್ತಾಳೆ. (೫೪:೭೮) ಕುಡಿವ ನೀರು ಭಕ್ತಸ್ಪರ್ಶದಿಂದ ಪರಿಶುದ್ಧವಾಗಿದ್ದು ಬ್ರಾಹ್ಮಣಸ್ಪರ್ಶದಿಂದ ಅಶುದ್ಧವಾಯಿತೆಂಬ ಅಸ್ಪೃಶ್ಯತಾಚರಣೆಯು ಬ್ರಾಹ್ಮಣವರ್ಗಕ್ಕೆ ಮುಟ್ಟಿಸಿದ ಬಿಸಿಯಾಗಿ ಈ ಪ್ರಸಂಗ ಕಂಡುಬರುತ್ತದೆ.

ಸತ್ತ ಕರುವಿನ ಮಾಂಸವನ್ನು ಅಡಿಗೆಮಾಡಿ ಪ್ರಸಾದವೆಂದು ಜಂಗಮನಿರ್ಪಿಸುವ 'ಕೆಂಭಾವಿ ಭೋಗಯ್ಯ', (೫೬:೩೪-೩೫) ಹಾಗೆಯೇ ತಮ್ಮ ಆತ್ಮಭವನನ್ನೇ ಕೊಂದು ಶಿವನಿಗರ್ಪಿಸಿದ ಸಿರಿಯಾಳ ಚಂಗಳೆಯರ ದೃಷ್ಟಾಂತಗಳು (೨೩:೭) ಉಣಿಸು ತಿನಿಸುಗಳ ವಿಚಾರ ಮೌಲ್ಯಮಾಪನ ಮಾಡಿದಂತಿವೆ. ಇದರಿಂದ ಕವಿಯು ಮಾಂಸಾಹಾರಕ್ಕೆ ಹೇಸಿಕೊಂಡದ್ದಾಗಲಿ ವಚನಕಾರರಂತೆ ಮಾಂಸಾಹಾರ ನಿಷೇಧಕ್ಕೆ ಒಲವು ತೋರಿದ್ದಾಗಲಿ ಕಂಡುಬರುವುದಿಲ್ಲ. ಈ ರೀತಿಯಾಗಿ ಅಂದಿನ ಜನಸಮುದಾಯದ ಪರಿಪೂರ್ಣ ಆಹಾರಾದಿಗಳು ಪುರಾಣದಲ್ಲಿ ಕಂಡುಬರುತ್ತವೆ. ಹೀಗೆ ಪ್ರಸಾದ ಮಹಿಮೆ, ದಾಸೋಹ ಸಪಂಕ್ತಿ ಭೋಜನ, ಸರ್ವಜನ ಭೋಜನ, ಮಾಂಸಾಹಾರ ಮುಂತಾದ ಆಹಾರ ಕುರಿತಾದ ಮೌಲ್ಯಗಳ ಹಿನ್ನೆಲೆಯಲ್ಲಿ ಶಿವಶರಣರ ದೃಷ್ಟಿಕೋನಗಳು ವ್ಯಕ್ತವಾಗಿದ್ದುದು ಪುರಾಣದಲ್ಲಿ ಕಂಡು ಬರುತ್ತದೆ.

ಈ ಬಗೆಯಾಗಿ ಪ್ರಸ್ತುತ ಬಸವಪುರಾಣದಲ್ಲಿ ಕಲೆಗೆ ಸಂಬಂಧಿಸಿದ ವಿವಿಧ ಅಂಶಗಳು ಗೋಚರವಾಗುತ್ತವೆ.

ಅಧ್ಯಾಯ–ಎಂಟು

ಸಮಾರೋಪ

ಅಧ್ಯಾಯ–ಎಂಟು
ಸಮಾರೋಪ

ವೀರಶೈವ ವಾಙ್ಮಯದಲ್ಲಿ ಶಿವಶರಣರ ತರುವಾಯ ಉದಿಸಿದ್ದು ಶಿವಕವಿ ಸಾಹಿತ್ಯ. ಈ ಶಿವಕವಿ ಸಾಹಿತ್ಯದ ದೊಡ್ಡ ಪಾಲು ಪುರಾಣಗಳು. ವೀರಶೈವ ಪುರಾಣಗಳಿಗೆ ಆದಿಯೆನ್ನಬಹುದಾದ ಭೀಮಕವಿಯ ಬಸವಪುರಾಣ ಬೃಹತ್ತು ಮಹತ್ತಿನಲ್ಲಿ ವೈಶಿಷ್ಟ್ಯವೆನ್ನಬಹುದಾದ ಕೃತಿ. ಮುಂದಿನ ಅನೇಕ ಪುರಾಣಗಳು ಇದರ ಮಾದರಿಯನ್ನನುಸರಿಸಿಯೇ ರಚನೆಗೊಂಡದ್ದು ಇದಕ್ಕೆ ಸಾಕ್ಷಿ. ಸಾಂಸ್ಕೃತಿಕವಾಗಿ ಇಡೀ ಜನ ಸಮುದಾಯವನ್ನು ಹಿಡಿದಿಡುವ ಶಕ್ತಿ ಪುರಾಣಗಳಿಗಿದೆ. ಈ ದೃಷ್ಟಿಯಿಂದ ಬಸವಪುರಾಣ ಮುಂಚೂಣಿಯಲ್ಲಿದೆ. ಆದ್ದರಿಂದಲೇ ಈ ಕೃತಿಯ ಸಾಂಸ್ಕೃತಿಕ ಅಧ್ಯಯನ ಪ್ರಸ್ತುತವೆನಿಸುತ್ತದೆ. ಈಗಾಗಲೇ ನೋಡಿದಂತೆ ಬಸವಪುರಾಣದ ಭಿತ್ತಿ ವಿಶಾಲ. ಅನೇಕ ರೀತಿಯ ಅಧ್ಯಯನ ಸಾಧ್ಯತೆಗಳನ್ನು ಒದಗಿಸಿಕೊಡುವ ಗ್ರಂಥ. ಆದರೆ ಸಾಂಸ್ಕೃತಿಕವಾಗಿ ಈ ಕೃತಿಯನ್ನು ಅಧ್ಯಯನ ಮಾಡುವ ಮಿತಿಯನ್ನು ಹಾಕಿಕೊಂಡು ತೊಡಗುವ ಪ್ರಸ್ತುತ ಅಧ್ಯಯನವು ಹಲವು ಮುಖವಾಗಿ ಹರಡಿಕೊಳ್ಳುತ್ತಿದ್ದು ಅಧ್ಯಯನದ ಫಲಿತಗಳನ್ನು ಹೀಗೆ ಗುರುತಿಸಬಹುದು.

ಪರಸಂಸ್ಕೃತಿಯೊಂದರ ಆಘಾತಕಾರಿ ಸಂದರ್ಭದಲ್ಲಿ ಈ ಕೃತಿ ಜನ್ಮ ತಾಳಿ ವೀರಶೈವ ಧರ್ಮವನ್ನು ರಕ್ಷಿಸುವಲ್ಲಿ ಪ್ರಮುಖ ಪಾತ್ರ ವಹಿಸಿತು. ಬಸವಪುರಾಣ ಮುಂದಿನ ಪುರಾಣಪ್ರಪಂಚಕ್ಕೆ ಹೆದ್ದಾರಿಯನ್ನೆ ನಿರ್ಮಿಸಿದೆ. ಇದರ ಬಳಿವಿಡಿದು ಅನೇಕ ಪುರಾಣಗಳು ರಚನೆಯಾದವು. ಭೀಮಕವಿ ಈ ಕೃತಿಯನ್ನು ರಚಿಸದೇ ಹೋಗಿದ್ದರೆ ಲಕ್ಕಣ್ಣದಂಡೇಶ, ಸಿಂಗಿರಾಜ, ವಿರೂಪಾಕ್ಷಪಂಡಿತ, ಷಡಕ್ಷರಕವಿ ಮುಂತಾದವರಿಗೆ ಕಾವ್ಯಮಾದರಿ ದೊರಕುತ್ತಿರಲಿಲ್ಲ.

ಪುರಾಣದ ಮೈಮನವೆಲ್ಲ ಪವಾಡಗಳಿಂದಾವೃತವಾಗಿ ಇಡೀ ಶರಣಕುಲದ ಮಹತ್ವವನ್ನು ಪರಿಣಾಮಕಾರಿಯಾಗಿ ಚಿತ್ರಿಸಲು ನೆರವಾದದ್ದು ಕಂಡುಬರುತ್ತದೆ. ಪಂಡಿತರಿಗಿಂತ ಹೆಚ್ಚಾಗಿ ಪಾಮರರಿಗೆ ಅತ್ಯಂತ ಯಶಸ್ವಿಯಾಗಿ ತಲುಪಿದ ಕೆಲವೇ ಕೆಲವು ಕೃತಿಗಳಲ್ಲಿ ಬಸವಪುರಾಣವೂ ಒಂದೆಂಬುದರಲ್ಲಿ ಯಾವುದೇ ಸಂಶಯವಿಲ್ಲ. ಪುರಾಣಕಾರರಿಂದಲೇ ಅತ್ಯಂತ ಹೆಚ್ಚು ಜನಪ್ರಿಯವಾಯಿತೆಂದು ಹೇಳಬೇಕು. 'ಬಸವಪುರಾಣದ ರಾಮಯ್ಯ', 'ಬಸವಪುರಾಣದ ಮಲ್ಲಣಾರ್ಯ', 'ಬಸವಪುರಾಣದ ರಾಚವಟ್ಟೀಶ' ಈ ಕಾರ್ಯವನ್ನು ಪರಿಣಾಮಕಾರಿಯಾಗಿ ಮಾಡಿದ್ದು ತಿಳಿಯುತ್ತದೆ.

ಧಾರ್ಮಿಕ ಹಿನ್ನೆಲೆಯ ದೃಷ್ಟಿಯಿಂದ ಈ ಕೃತಿ ಅನೇಕ ಶತಮಾನಗಳವರೆಗೆ ತನ್ನ ಪ್ರಭಾವವನ್ನು ಉಳಿಸಿಕೊಂಡು ಬಂದಿತು. ಒಂದು ಕೃತಿಯ ಸಾಫಲ್ಯದ ದೃಷ್ಟಿಯಿಂದ ಬಸವಪುರಾಣ ಯಶಸ್ವಿಯಾಗಿದೆಯೆಂದು ಹೇಳಬಹುದು. ಶಿವಶರಣರು ಮತಸ್ಥಾಪನೆಗಾಗಿ ವೈದಿಕ ಹಾಗೂ ಜೈನ ಧರ್ಮದವರೊಡನೆ ನಿರಂತರವಾಗಿ ಸೆಣಸುತ್ತ ಯಶಸ್ವಿಯಾದ ಪ್ರಸಂಗಗಳು ಭಾರತದ ಆಧುನಿಕ ಕ್ರಾಂತಿ ಪುರುಷರಿಗೆ ಮೂಲ ಪ್ರೇರಣೆಯನ್ನು ಒದಗಿಸುವಲ್ಲಿ ಪೂರಕವಾಗಿದೆ ಎಂಬ ಸತ್ಯ ಗೋಚರವಾಗುತ್ತದೆ.

ಒಂದು ಕಾಲಘಟ್ಟದಲ್ಲಿ ಬಸವಪುರಾಣ ರಚನೆಯಾದದ್ದು ವೈದಿಕ, ಜೈನ ಹಾಗೂ ಬೌದ್ಧ ಮತಗಳನ್ನು ವಿರೋಧಿಸಿ ವೀರಶೈವ ಧರ್ಮವನ್ನು ಎತ್ತಿಹಿಡಿಯುವುದು ಪ್ರಮುಖ ಉದ್ದೇಶವಾದರೆ, ಮಿಶನರಿಗಳ ಸಂದರ್ಭದಲ್ಲಿ ಅದನ್ನು ವೀರಶೈವ ಮಠಗಳು ಪ್ರಸಾರ ಮಾಡಿ ಧಾರ್ಮಿಕ ಆಧಿಪತ್ಯ ಸ್ಥಾಪಿಸಲು ಹೆಣಗಾಡಿದ್ದು ಮತ್ತೊಂದು ಘಟ್ಟ. ಹೀಗೆ ಕೃತಿರಚನೆ ಹಾಗೂ ಕೃತಿಪ್ರಸಾರದ ಹಿನ್ನೆಲೆಯ ಮಹತ್ವದ ಸಂದರ್ಭವನ್ನು ಈ ಪುರಾಣ ಎದುರಿಸಿದೆ. ಬಸವಪುರಾಣದ ರಚನೆಯ ಸಂದರ್ಭದಲ್ಲಿ ಪುರಾಣ ಲಕ್ಷಣಗಳು ವಿರಳವಾಗಿ ಕಂಡುಬರುತ್ತಿದ್ದು ನಂತರದ ಪುರಾಣಗಳಲ್ಲಿ ಈ ಅಂಶಗಳು ಬೆಳೆದು ಬಂದದ್ದು ಕಂಡುಬರುತ್ತದೆ.

ಮಿಶನರಿಗಳು ಮೊಟ್ಟ ಮೊದಲು ಈ ಬಸವಪುರಾಣ ಕೃತಿಯ ಪ್ರಕಟಣೆ ಮಾಡಿದ್ದನ್ನು ಗಮನಿಸಿದರೆ ಧಾರ್ಮಿಕವಾಗಿ, ಸಾಮಾಜಿಕವಾಗಿ ಈ ಕೃತಿ ಉಂಟುಮಾಡಿದ ಪರಿಣಾಮ ಸಂಚಲನ ಅತ್ಯಂತ ವಿಶಿಷ್ಟವಾದದ್ದು ಎಂಬುದು ತಿಳಿಯುತ್ತದೆ. ಮೊಟ್ಟಮೊದಲು ತೆಲುಗಿನ ಪಾಲ್ಕುರಿಕೆ ಸೋಮನಾಥ ಈ ಕೃತಿಯನ್ನು ದ್ವಿಪದ ಛಂದಸ್ಸಿನಲ್ಲಿ ರಚಿಸಿದ್ದನ್ನು ಭೀಮಕವಿ ಕನ್ನಡದಲ್ಲಿ ರಚಿಸಿದ. ಇದನ್ನು ಆಧಾರವಾಗಿಟ್ಟುಕೊಂಡು ತಮಿಳಿನ 'ವಸವಪುರಾಣಂ' ರಚನೆಯಾಯಿತು. ಈ ಎಲ್ಲ ಬೆಳವಣಿಗೆಗಳನ್ನು ಗಮನಿಸಿದರೆ ತಮಿಳುನಾಡು, ಆಂಧ್ರ ಕರ್ನಾಟಕ ಈ ಎಲ್ಲ ಭೂಪ್ರದೇಶದಲ್ಲಿ ೬೩ ಪುರಾತನರ ಕಥೆಗಳು ಜನಪ್ರಿಯವಾಗಿದ್ದವಷ್ಟೆ ಅಲ್ಲ, ಈ ಧರ್ಮದ ಪ್ರಸಾರ, ಉನ್ನತಿಗೆ ಕಾರಣವಾಗಿದ್ದವೆಂದು ಹೇಳಬಹುದು.

ಬಸವಣ್ಣನವರ ವಚನಗಳನ್ನು ಅಂತರ್ಗತ ಮಾಡಿಕೊಂಡ ಭೀಮಕವಿ ಅವುಗಳನ್ನು ತನ್ನ ಷಟ್ಪದಿಯಲ್ಲಿ ಸಂದರ್ಭೋಚಿತವಾಗಿ ಹೆಣೆದಿದ್ದಾನೆ. ಭಾಷೆ ಹಾಗೂ ಛಂದಸ್ಸಿನಲ್ಲಿಯೂ ಈ ಕೃತಿ ಕ್ರಾಂತಿಯನ್ನೇ ಮಾಡಿತೆಂದು ಹೇಳಬಹುದು. ಮೊಟ್ಟ ಮೊದಲ ಕನ್ನಡದ ಭಾಮಿನಿ ಷಟ್ಪದಿಕೃತಿ ಎಂದು ಇದನ್ನು ಹೆಸರಿಸಬಹುದು. ಆ ಮೂಲಕ ವರ್ಣಕ ಕಾವ್ಯವೆಂದು ಪ್ರಸಿದ್ಧಿ ಪಡೆದು ಮಹತ್ವಪೂರ್ಣ ಕೃತಿಯೆನಿಸಿದೆ. ಬಸವಪುರಾಣವು ಕನ್ನಡದ ಬೃಹತ್ ಕಾವ್ಯಗಳಲ್ಲಿ ಒಂದು. ಕನ್ನಡದ ರಾಜಷಟ್ಪದಿಯೆನಿಸಿದ ಭೀಮನಿಗೆ ಬಸವಪುರಾಣವೇ ಆದಿ. ಕ್ರಿಶ ೧೨೭೫ ರಲ್ಲಿ ಕಾವ್ಯ ರಚಿಸಿದ ಕುಮುದೇಂದು ತನ್ನ ರಾಮಾಯಣದಲ್ಲಿ ಮಿಕ್ಕ ಷಟ್ಪದಿಗಳೊಡನೆ ಭಾಮಿನಿ ಷಟ್ಪದಿಯನ್ನು ಅಲ್ಲಲ್ಲಿ ಬಳಸಿರುವುದೇನೋ ನಿಜ. ಆದರೆ ಸಮಗ್ರ ಕಾವ್ಯವನ್ನೇ ಭಾಮಿನೀಷಟ್ಪದಿಯಲ್ಲಿ ಬರೆದ

ಕವಿಯೆಂದರೆ ಭೀಮಕವಿ.ದೇಸಿಯ ಪ್ರಯೋಗ,ಭಾಮಿನಿಯ ಬಳಕೆ ಈ ದೃಷ್ಟಿಯಿಂದ ಬಸವಪುರಾಣವು ಮುಂದಿನ ಮಹಾಕವಿಗಳಿಗೆ ಮಾರ್ಗದರ್ಶಿಯಾಗಿದೆ.

ಬಸವಣ್ಣ ಇಲ್ಲಿ ಕೇವಲ ನಿಮಿತ್ತ ಮಾತ್ರ. ಪುರಾಣದ ಆದಿ ಹಾಗೂ ಅಂತ್ಯದಲ್ಲಿ ಮಾತ್ರ ಕವಿ ಆತನ ಕಥೆಯನ್ನು ಹೇಳುತ್ತಾನೆ. ಪುರಾಣದಲ್ಲೆಲ್ಲ ಅನೇಕ ಶಿವಶರಣರ ಕಥೆಗಳೇ ಇಡಿಕಿರಿದಿವೆ. ಬಸವಪುರಾಣದ ಕಥಾವಸ್ತು ಬಸವಣ್ಣನವರ ಚಾರುಚರಿತೆ. ಆದರೆ ಬಸವಣ್ಣನವರೊಬ್ಬ ಸಾಮಾನ್ಯ ವ್ಯಕ್ತಿಯಾಗಿರದೆ, ಅಸಾಮಾನ್ಯ ಶಕ್ತಿಯಾಗಿ ಹನ್ನೆರಡನೆಯ ಶತಮಾನದ ಕನ್ನಡನಾಡಿನ ಧಾರ್ಮಿಕ, ಸಾಮಾಜಿಕ, ಸಾಹಿತ್ಯಿಕ ಕ್ಷೇತ್ರದ ಅದ್ಭುತ ಕ್ರಾಂತಿಗೆ ಕಾರಣರಾಗಿರುವರು; ಮಾನವೀಜೀವನದ ಹೊಸ ಮೌಲ್ಯಗಳನ್ನು ಕಂಡುಹಿಡಿದಿರುವರು; ಮರ್ತ್ಯಕ್ಕೆ ಮಹವನ್ನು ತಂದಿರುವರು. ಧಾರ್ಮಿಕ ಸಾಮಾಜಿಕ ಕ್ಷೇತ್ರಗಳಲ್ಲಿ ವಿಷಮತೆಯ ಬಿರುಗಾಳಿ ಬೀಸುತ್ತಿದ್ದ ಕಾಲದಲ್ಲಿ ಬಸವಣ್ಣನವರ ಸತ್ಯ, ಸಮತೆ, ಪ್ರೇಮ, ದಯೆ, ದಮೆ, ಶಾಂತಿ, ಭಕ್ತಿ, ಕಾಯಕಗಳ ಸಂದೇಶ ಮಾನವಕುಲಕೋಟಿಗೆ ಅಮೃತ ಸಂಜೀವಿನಿಯಾಗಿ ಪರಿಣಮಿಸಿತು. ಬಸವಣ್ಣನವರ ಭಕ್ತಿಯ ಸೌರಭ ನಾಡಿನ ಸುತ್ತೆಲ್ಲ ಪಸರಿಸಿತು. ಅಸಂಖ್ಯಾತ ಶಿವಶರಣರು ಕಲ್ಯಾಣಕ್ಕೆ ಆಗಮಿಸಿದರು. ಕಲ್ಯಾಣ ಮನುಕುಲದ ಕಲ್ಯಾಣವಾಯಿತು. ಬಸವಣ್ಣನವರ ಮಹಾಮನ ಮಹಾಮನೆಗಳು ವಿಶ್ವದಷ್ಟು ವಿಶಾಲವಾದವು. ಅನುಭವ ಮಂಟಪ ಲೋಕದ ಕಲ್ಯಾಣಮಂಟಪವಾಯಿತು. ಬಸವಣ್ಣನವರ ಭಕ್ತಿಯ ಬಳ್ಳಿ ಸುತ್ತೆಲ್ಲ ಪಸರಿಸಿ ಹೂತು ಕಾತು ಲಿಂಗದ ಗೊಂಚಲುಗಳಿಗೆ ಎಡೆಯಾಯಿತು. ಬಸವಪುರಾಣದ ಬೃಹತ್ ಕಾವ್ಯದಲ್ಲಿ ಬಸವಣ್ಣನವರ ಈ ಅದ್ಭುತವಾದ, ಅಗಾಧವಾದ, ವಿಶಾಲವಾದ ವ್ಯಕ್ತಿತ್ವದ ಮಂದಿರವನ್ನು ಕಂಡರಿಸಲಾಗಿದೆ.

ಅದೊಂದು ವೇರೂಳು ಕೈಲಾಸ ದೇವಾಲಯ, ಕಲೆಯ ಸೊಗಸು, ಕಾವ್ಯದ ಕಾವು, ಭಕ್ತಿಯ ನಿರ್ಭರತೆ, ಜೀವನ್ಮುಕ್ತಸ್ಥಿತಿ ಇವುಗಳ ಅನುಭೂತಿ. ಬಸಪುರಾಣವು 'ಸರ್ಗಶ್ಚ ಪ್ರತಿಸರ್ಗಶ್ಚ ವಂಶೋಮನ್ವಂತರಾಣಿಚ ವಂಶಾನುಚರಿತಂ ಚ' ಎಂಬ ಲಾಕ್ಷಣಿಕರ ತತ್ವಕ್ಕನುಸಾರವಾಗಿ ಬರೆದ ಸಾಂಪ್ರದಾಯಿಕ ಪುರಾಣವಲ್ಲ.ಔಚಿತ್ಯವಿಲ್ಲದೆ ಜಗತ್ತಿನ ಎಲ್ಲ ವಸ್ತುಗಳನ್ನು ತನ್ನಲ್ಲಿ ಅಳವಡಿಸಿಕೊಳ್ಳಬೇಕೆಂಬ ಹವ್ಯಾಸ, 'ಇಲ್ಲಿಲ್ಲದುದೆಲ್ಲಿ ಇಲ್ಲ' ಎಂದು ಹೇಳಿಕೊಳ್ಳುವ ಹೆಮ್ಮೆ ಬಸವಪುರಾಣಕ್ಕಿಲ್ಲ. ಕಥಾನಾಯಕನ ವ್ಯಕ್ತಿತ್ವವನ್ನು ಮರೆಯದೆ ಅದಕ್ಕೆ ಸಂಬಂಧಪಟ್ಟ ಪೋಷಕವಾಗುವ ಕಥೆಗಳನ್ನು ಜೋಡಿಸಿ ಆದರ್ಶಪುರಾಣದ ಕಥಾವಸ್ತುವನ್ನು ನಿರ್ಮಿಸಲಾಗಿದೆ. ಭಾರತೀಯ ಪುರಾಣಪರಂಪರೆಯಲ್ಲಿ ಅದಕ್ಕೊಂದು ವೈಶಿಷ್ಟ್ಯವಿದೆ, ನೂತನತೆ ಇದೆ. ಕನ್ನಡದಲ್ಲಿದ್ದ ಭಿನ್ನ ಭಿನ್ನ ಸಂಪ್ರದಾಯಗಳ ಪುರಾಣಕಾವ್ಯಗಳ ಹಿನ್ನೆಲೆಯಲ್ಲಿ ನೋಡಿದಾಗ ಬಸವಪುರಾಣದ ಕಥಾವಸ್ತುವೊಂದು ನೂತನ ನಿರ್ಮಿತಿಯೆಂದು ಯಾರಿಗಾದರೂ ಹೊಳೆಯದಿರದು.

ಐತಿಹಾಸಿಕ ದೃಷ್ಟಿಯಿಂದಲೂ ಬಸವಪುರಾಣವು ಬಹು ಮಹತ್ವವಾದುದು. ಸಾಮಾನ್ಯವಾಗಿ ಇದುವರೆಗೆ ಪಂಡಿತರು ಬಸವಾದಿ ಪ್ರಮಥರ ಚಾರಿತ್ರಿಕ ವಿಷಯದ ಬಗ್ಗೆ ಬಸವಪುರಾಣಕ್ಕಿಂತಲೂ

ಹರಿಹರಾದಿ ಕವಿಗಳ ಕಾವ್ಯಗಳಿಗೆ ಹೆಚ್ಚು ಮಹತ್ವ ಕೊಟ್ಟಿರುವುದು ಕಂಡುಬರುತ್ತದೆ. ಬಸವಪುರಾಣವನ್ನು ಕೇವಲ ಪುರಾಣವೆಂದು ಪರಿಭಾವಿಸಿದುದೇ ಇದಕ್ಕೆ ಕಾರಣವೆಂದು ತೋರುತ್ತದೆ. ಆದರೆ ವಸ್ತುಸ್ಥಿತಿ ತೀರ ಭಿನ್ನವಾಗಿದೆ. ಕಲ್ಯಾಣದ ಕ್ರಾಂತಿಯು ವಿಪ್ಲವದಲ್ಲಿ ಕೊನೆಗೊಳ್ಳಲು ಅಲ್ಲಿದ್ದ ಶರಣರು ಸುತ್ತೆಲ್ಲ ಚದುರಿರುವರು. ಅವರಲ್ಲಿ ಮುಖ್ಯವಾದುದು ಎರಡು ಗುಂಪುಗಳು. ಒಂದು ಉಳವೆಯತ್ತ ಹೋದುದು; ಇನ್ನೊಂದು ಶ್ರೀಶೈಲದತ್ತ ತೆರಳಿದುದು. ಶ್ರೀಶೈಲದ ಕಡೆಗೆ ಹೊರಟ ಶಿವಶರಣರು ಓರಂಗಲ್ಲಿನಲ್ಲಿ ನಿಂತಂತೇ ತೋರುತ್ತದೆ. ಓರಂಗಲ್ಲಿನ ಕಾಕತೀಯ ದೊರೆಗಳು ಕಲ್ಯಾಣದ ಕ್ರಾಂತಿಯ ಅನಂತರ ವೀರಶೈವ ಧರ್ಮಕ್ಕೆ ವಿಶೇಷವಾದ ಪ್ರೋತ್ಸಾಹವನ್ನಿತ್ತಿರುವರು. ಅಲ್ಲಿಗೆತಂದ ಶಿವಶರಣರ ಬಾಯಿಂದ ನೆರೆಹೊರೆಯ ಜನ ಬಸವಾದಿ ಪ್ರಮಥರ ಚರಿತ್ರೆಯನ್ನು ಕೇಳಿರಬೇಕು. ಓರಂಗಲ್ಲಿಗೆ ಸಮೀಪದಲ್ಲಿದ್ದ ಪಾಲ್ಕುರಿಕೆ ಸೋಮನಾಥನು ಇಂಥ ಪ್ರತ್ಯೇಕ ನಿದರ್ಶನಗಳ ಆಧಾರದಮೇಲೆ ತನ್ನ ಬಸವಪುರಾಣವನ್ನು ರಚಿಸಿದನು. ಅಂತೆಯೇ ಬಸವಣ್ಣನವರ ಚರಿತ್ರೆಯ ದೃಷ್ಟಿಯಿಂದಲೂ ಬಹಳ ಮಹತ್ವಪೂರ್ಣವಾಗಿದೆ. ಕಲ್ಯಾಣದ ಶಿವಶರಣರು ಓರಂಗಲ್ಲಿನಲ್ಲಿ ಅವತರಿಸುವರೆಂದು ಹೇಳುವ ಕಾಲಜ್ಞಾನ ಈ ಮಾತಿಗೆ ಪುಷ್ಟಿಯನ್ನು ಕೊಡುತ್ತದೆ.

'ಬಸವನ ಭಕ್ತಿ' ಎಂದು ಕವಿಗಳು ಕೊಂಡಾಡಿರುವರು. 'ಬಸವ ಶರಣೆನೆ ಪಾಪವಳಿವುದು. 'ಬಸವ ಶರಣೆನೆ ತಾಪವಾಱುಗು,' 'ಬಸವ ಶರಣೆನೆ ಭವವುಡುಗುವುದು,' 'ಬಸವ ಶರಣೆನೆ ಶೀಲವೊಪ್ಪುಗು' ಎಂದು ಬಸವಪುರಾಣದ ಆದಿಯಲ್ಲಿ ಕವಿ ಭಕ್ತಿಯ ನಿರ್ಭರಭಾವದಿಂದ ಹಾಡಿರುವನು. ಅಸಮನೇತ್ರನೆ ಬಸವನಾಮದಿಂದ ಇಳೆಗವತರಿಸಿರುವನು. ಸಾಯುಜ್ಯ ಸ್ವಾರೂಪ್ಯ ಪದವಿಗಳನ್ನು ಪಡೆಯಬಹುದು. ಆದರೆ 'ಸಶಿವನೆಂದೆನಿಪ ಬಸವ' ನಾಗುವುದು ಲೋಕದಲ್ಲಿ ಕರಕಷ್ಟ ಬಸವಾಕ್ಷರತ್ರಯ ಲೋಕದ ತಾರಕಮಂತ್ರ, ಆತನ ದೆಸೆಯೊಳು ಎಲ್ಲರೂ ಧನ್ಯರಾದಪರೆಂದು ಕವಿ ಬಸವಣ್ಣನವರನ್ನು ಸ್ತುತಿಸುವನು.

ಬಸವಣ್ಣನವರ ಅನುಪಮ ವ್ಯಕ್ತಿತ್ವ ಈ ಕಾವ್ಯದಲ್ಲಿ ಒಡಮೂಡಿದೆ. ಬಸವಣ್ಣನವರ ಅಂತರಂಗ ಪರೀಕ್ಷೆ, ಸೂಕ್ಷ್ಮವಾದ ಮನೋವಿಶ್ಲೇಷಣೆ ಇವು ಎಂತವರನ್ನೂ ಮುಗ್ಧಗೊಳಿಸುವಂತಿವೆ. ಬೇಡ ಬೇಡೆಲೆ ಹಂದೆ ಬೇಡಿದುದುನೀವೆ ಎಂದು ಹಾಡಿದ ಬಸವಣ್ಣನವರ ಭಕ್ತಿಯ ಹಮ್ಮು ಬಿಮ್ಮುಗಳನ್ನು ಪ್ರಭುದೇವ, ಮಡಿವಾಳ ಮಾಚಯ್ಯ, ಮೋಳಿಗೆಯ ಮಾರಯ್ಯ ಮೊದಲಾದ ಶಿವಶರಣರು ಕಳೆದು, ಅವರ ಭಕ್ತಿ ದಿಟಪುಟವಾಗುವಂತೆ, ಸತ್ಯ ಶುದ್ಧವಾಗುವಂತೆ ಮಾಡಿರುವರು. ಸತ್ಯಶುದ್ಧ ಭಕ್ತಿಯ ಸ್ವರೂಪವನ್ನೂ, ಮಹಿಮೆಯನ್ನೂ ಸಹೃದಯರ ಮನಂಬುಗುವಂತೆ ವರ್ಣಿಸಿ ಅವರ ಹೃದಯದಲ್ಲಿ ಭಕ್ತಿ ಪ್ರಜ್ವಲಿಸುವಂತೆ ಮಾಡುವುದೇ ಬಸವಪುರಾಣದ ಉದ್ದೇಶ, ಸಂದೇಶ.

ಕಾಯಕವೇ ಕೈಲಾಸವೆಂಬುದು ಬಸವಪುರಾಣದ ದಿವ್ಯ ಸಂದೇಶ. ಬಸವಪುರಾಣ ಅನೇಕ ಸನ್ನಿವೇಶಗಳಲ್ಲಿ ಇದಕ್ಕೆ ನಿದರ್ಶನಗಳು ದೊರೆಯಬಲ್ಲವು. ಮಾಚಯ್ಯನನ್ನು ಬಿಜ್ಜಳನು ಕೀಳುಕುಲದ ಅಗಸನೆಂದು ಕೀಳ್ನುಡಿದಾಗ ಬಸವಣ್ಣನವರ ಕಾಯಕದ ರಹಸ್ಯವನ್ನು ಬಿಚ್ಚಿ ಹೇಳುವ

ಮಾತುಗಳು ಗಮನಾರ್ಹವಾಗಿವೆ. ನಾದ ಬಿಂದುಗಳು ಅಡ್ಡವಲಿಗೆಗಳಾಗಿ, ಆದಿಶಕ್ತಿಯೆ ತಿಗುರಿಯಾಗಿ ಬ್ರಹ್ಮಾಂಡ ಭಾಂಡಗಳನು ವಿರಚಿಸುವವನು ಕುಂಬಾರ. ಗಮಸುವಸುವಿನ ಮೋಹವನ್ನು ಹದಗೊಳಿಸುವವನು ಕಮ್ಮಾರ. ಹೀಗೆ ಒಂದೊಂದು ಕಾಯಕದ ತತ್ವವನ್ನು ದಿವ್ಯಕ್ಕೇರಿಸುವ ಬಸವಣ್ಣನವರ ನುಡಿಗಳಲ್ಲಿ ವಿಶ್ವಕ್ಕೆ ಸಂದೇಶವಡಗಿದೆ.

ದಯವೇ ಧರ್ಮದ ಮೂಲವೆಂಬ ವಿಶ್ವಸಂದೇಶ ಬಸವಪುರಾಣದಲ್ಲಿ ಬಹಳ ಮಾರ್ಮಿಕವಾಗಿದೆ. ಕಿನ್ನರಯ್ಯಗಳು ಒಂದು ದಿವಸ ವಿನೋದಾರ್ಥವಾಗಿ ತ್ರಿಪುರಾಂತಕೇಶ್ವರ ದೇವಾಲಯದಲ್ಲಿ ಕುಳಿತಿರುವರು. ಒಬ್ಬನು ತನ್ನ ವೇಶ್ಯೆಗಾಗಿ ವಧೆ ಮಾಡಲೆಂದು ಕುರಿಯನ್ನು ಕೊಂಡು ಒಯ್ಯುತ್ತಿರುವನು. ನೇಣು ಹರಿದು ಕುರಿ ತ್ರಿಪುರಾಂತಕೇಶ್ವರ ದೇವಾಲಯವನ್ನು ಪ್ರವೇಶಿಸುತ್ತಿದೆ. ಕಿನ್ನರಯ್ಯಗಳು ಆ ವಿಟನಿಗೆ ಹೇಳುವ ಮಾತುಗಳು ಎಷ್ಟು ಮಾರ್ಮಿಕವಾಗಿವೆ.! 'ಕೊಲುವುದು ದೋಷ, ಬಿಲತಿ ಬೆಲೆಯನು ಹೇಳು ಇಮ್ಮಡಿಯಾದೊಡಂ ಕೊಳ್ಳು, ನೋವು ಸಾವು ಜೀವಿಗಳಿಗೆಲಾ ಸರಿಯೆಲಾ' ಎಂದು ಹೇಳಿ ಸಾವಿರ ಹೊನ್ನು ಕೊಟ್ಟು ಕುರಿಯ ಪ್ರಾಣವನ್ನುಳಿಸುವ ದೃಶ್ಯ ಅತ್ಯಂತ ಹೃದಯ ಸಂವೇದಿಯಾಗಿದೆ. ಸಕಲ ಜೀವಾತ್ಮರಿಗೆ ಲೇಸನೇ ಬಯಸಬೇಕೆಂಬುದೇ ಬಸವಪುರಾಣದ ದಿವ್ಯ ನವ್ಯ ಸಂದೇಶ.

ಒಟ್ಟಾರೆಯಾಗಿ ಸಾಹಿತ್ಯದಲ್ಲಿ ಸಾಂಸ್ಕೃತಿಕ ಅಧ್ಯಯನ ಕೈಗೊಳ್ಳುವವರಿಗೆ ಇದು ಹಲವು ಸಾಧ್ಯತೆಗಳನ್ನು ತೆರೆದು ತೋರಿಸುತ್ತದೆ. ಇದು ಬಸವಪುರಾಣದ ಸಾಂಸ್ಕೃತಿಕ ಅಧ್ಯಯನವಾಗಿದ್ದರೂ ಇಲ್ಲಿ ಶಿವಶರಣರ ಕಥಾವಿವರಗಳೆ ಆದ್ಯತೆ ಪಡೆದಿರುವುದರಿಂದ ವಚನಗಳ ಸಾಂಸ್ಕೃತಿಕ ಅಧ್ಯಯನದ ಮುಂದುವರಿದ ರೂಪವೂ ಹೌದು. ಇಲ್ಲಿನ ಸಾಂಸ್ಕೃತಿಕ ಅಧ್ಯಯನದ ಮೂಲಕ ಅಂದಿನ ಚರಿತ್ರೆಯನ್ನು ಇನ್ನಷ್ಟು ವಿವರವಾಗಿ, ವಸ್ತುನಿಷ್ಠವಾಗಿ ತಿಳಿಯಲು ಸಾಧ್ಯವಿದೆ. ಈ ಬಗೆಯ ಅಧ್ಯಯನದಿಂದಾಗಿ ಈ ಪ್ರಬಂಧ ಹದಿನಾಲ್ಕನೆಯ ಶತಮಾನಕ್ಕೆ ಅದರಾಚೆಗಿನ ಹನ್ನೆರಡನೆಯ ಶತಮಾನದ ವಿವರವಾದ ಅಧ್ಯಯನಕ್ಕೆ ಭೂಮಿಕೆಯನ್ನು ಒದಗಿಸಿ ಕೊಡುತ್ತದೆ.

ನಾನು ಕೈಗೊಂಡ ಈ **"ಭೀಮಕವಿಯ ಬಸವಪುರಾಣ: ಸಾಂಸ್ಕೃತಿಕ ಅಧ್ಯಯನ"**ವು ಮಹತ್ವಪೂರ್ಣವಾದ ಸಾಂಸ್ಕೃತಿಕ ಅಂಶಗಳನ್ನು ಬಿಂಬಿಸುವಂತಿದ್ದು ತಕ್ಕಮಟ್ಟಿಗೆ ಈ ವಿಷಯಕ್ಕೆ ಸಂಬಂಧಿಸಿದಂತೆ ನ್ಯಾಯ ಒದಗಿಸಲು ಪ್ರಯತ್ನಿಸಿದ್ದೇನೆ ಎಂದು ಹೇಳಬಹುದು. ಮುಂದಿನ ಅಧ್ಯಯನಕಾರರಿಗೆ ಈ ಪ್ರಬಂಧ ಸ್ವಲ್ಪಮಟ್ಟಿಗಾದರೂ ದಾರಿ ಮಾಡಿಕೊಡಬಲ್ಲದು ಎಂಬ ವಿಷಯವನ್ನು ವಿನಮ್ರವಾಗಿ ನಿವೇದಿಸುತ್ತ ಈ ಮಹಾಪ್ರಬಂಧವನ್ನು ಸಮಾರೋಪಿಸುತ್ತೇನೆ.

ಅನುಬಂಧಗಳು

ಅನುಬಂಧ-೧ : ಛಾಯಾಚಿತ್ರಗಳು

ಅನುಬಂಧ-೨ : ಬಸವ ಶಾಸನ ಸೂಚಿ

ಅನುಬಂಧ-೩ : ಬಸವಪುರಾಣ: ವಿವಿಧ ಹಸ್ತಪ್ರತಿಗಳಲ್ಲಿಯ ರಾಗಗಳು


ಅನುಬಂಧ-೪ : ಗ್ರಂಥಋಣ

ಅನುಬಂಧ-೧

ಛಾಯಾ ಚಿತ್ರಗಳು



ಶ್ರೀ ಬಸವೇಶ್ವರರು



ಭೀಮಕವಿಯ ಸಮಾಧಿ



ಗಡೇಕಲ್ಲಿನಲ್ಲಿರುವ (ಆಂಧ್ರ ಪ್ರದೇಶದ ಅನಂತಪುರ ಜಲ್ಲೆ ಗುತ್ತಿ ತಾಲ್ಲೂಕು) ಭೀಮಕವಿಯ ಸಮಾಧಿ







ಬಾಗೇವಡಿಯ ಬಸವೇಶ್ವರನ ಗುಡಿ




ಸಂಗಮೇಶ್ವರ ದೇವಾಲಯ – ಕೂಡಲ ಸಂಗಮ







ಬಸವಣ್ಣನವರ ಐಕ್ಯ ಮಂಟಪ – ಕೂಡಲ ಸಂಗಮ



ಅನುಬಂಧ – ೨
ಬಸವ ಶಾಸನ ಸೂಚಿ

ಇಲ್ಲಿ 'ಬಸವ' ನಾಮದ ಉಲ್ಲೇಖವಿರುವ ಒಂಬತ್ತು ಶಿಲಾಶಾಸನಗಳನ್ನು ಕಾಲಾನುಕ್ರಮವಾಗಿ ಕೊಡಲಾಗಿದೆ. ಬಸವಣ್ಣ ನಾಮ ಬರುವ ಶಾಸನದ ಹಿಂದು ಮುಂದಿನ ಅಲ್ಪಭಾಗವನ್ನೂ ಕೊಡಲಾಗಿದೆ.

೧. **ಮಣಿಗವಳ್ಳಿ (ಮನಗೋಳಿ) ಶಾಸನ : ಕ್ರಿ.ಶ. ೧೧೪೨**

"ಆ ಚಂದಿರಾಜ ವಿಭುಗಂ
ಶ್ರೀ ಚಂದ್ರಾಂಬಿಕದಾತ್ಮಜಂ ಪುಟ್ಟಿದನು!
ರ್ವಿಚಕ್ರನುತ ಗುಣಾಬ್ಧಿಸ
ದಾಚಾರತೆಯಿಂ ನಿಮಿರ್ಚೆ ಜಸವಂ **ಬಸವಂ** ॥ ೨೫॥"

"ಪರವಿತದೊಳ್ ಪರಾಕ್ರಮದೊಳಾರ್ಪಿನೊಳೂರ್ಜಿತ ಶಕ್ತಿಯೊಳ್ ಮಹೇ
ಶ್ವರ ಪದಭಕ್ತಿಯೊಳ್ ತನಗೆ ಪಾಸಟಿಯಾರ್ಪೆರರೆಂಬ ಹೆಮ್ಮೆಯೊಳ್
ನೆರೆದು ಮಣಿಂಗವಳ್ಳಿಯ ಧರಾಮರ ಪಂಚಶತಾನುರಾಗಪಂ
ಕರುಹ ವಿಕಾಸ ಭಾಸ್ಕರನೆನಲ್ ನೆಗಳ್ದಂ **ಬಸವಂ** ಗುಣಾಕಾರಂ ॥೨೬॥"

"ಕೈ ಯ್ಯಂ ನೊಸಲ್ಗೆಗಿದಂದೆಮ್ಮಯ್ಯಂ ಗುಣಿಯೆಂದು ಪೊಗಳೆ
ಧರೆ ಸಲೆ ಲೋಕಕ್ಕಯ್ಯನೆನಿಪ್ಪ **ಬಸವರಸಯ್ಯಂ**
ಶ್ರೀ ಮಣಿಗವಳ್ಳಿಗೂರ್ಜಿತವೆನಿಸಲ್ ॥೨೭॥"

"ಇದು ರಜತಾದ್ರಿಯಿಂದಧಿಕವೆಂಬಿನೆಗಂ **ಬಸವಂ** ನಿವಾಸ
ಸಂಪದಮನೊಡರ್ಚಿದಂ ಮಣಿಗವಳ್ಳಿಯ ವಿಪ್ರವರರ
ಕುಬೇರನೊಳ್ ಪುದುವೆನಿಸಿರ್ಪ ಭಕ್ತಿಯುತರಿಲ್ಲಿಯೆ
ಸಂತತವಿರ್ಪೆನೆಂಬ ಸನ್ನಿದತನವಪ್ಪು ವಂತೆ ಶಲಿದೇವ
ಮಹೇಶ ನಿವಾಸವೊಪ್ಪು ಗುಂ ॥೨೯॥"

೨. **ಕಣ್ಣಾನೂರಿನ ಶಾಸನ : ಕಾಲಃ ಕ್ರಿ.ಶ.೧೨೫೧**

"ಕರಸ್ಥಳ **ಬಸವಿದೇವ** ಉತ್ತಮಾಂಗದ ಮಲ್ಲಿದೇವ
ತಾನೇಶ್ವರ ಚಾಮಯ್ಯ ಜಡೆ ಮಲ್ಲಯ್ಯ ಪಾಡುವ
ಮಲ್ಲಯ್ಯನಾಯಕ"

೩. **ಹಿರಿಯೂರ ಶಾಸನ : ಕಾಲ: ಕ್ರಿ.ಶ.೧೨೫೮–೫೯**

"ಸಿರಿಯಾಳ್ವಂ ಬಸವಯ್ಯನೊಳ್ಪೆಸೆವ...
ಮಂ ಬಾಣನುಂ ಧರ ಭೋಗಂ ಸಲೆ ಚೋಳನುದ್ಭಟನತರ್ಕಂ
ಸಿಂದಬಲ್ಲಾಳನಿಂ ಧರೆ ಕೊಂಡಾಡುವ ದಾಸಿಮಯ್ಯನೆನಿಸಿರ್ದ್ದೀ.
ಭಕ್ತ ಸಂದೋವಾದರದಿಂ ಕಾಕರ ಕಂಡ ನಂಬಿ ನಿನನೀಗುದ್ಬೋಧ
ಸಂಪತ್ತಿಯಂ"

೪. **ಮರಡಿಪುರದ ಶಾಸನ : ಕಾಲ: ಕ್ರಿ.ಶ.೧೨೬೦**

ಮತ್ತಂ ಮರ್ತ್ಯಲೋಕದ ಗಣಂಗಪಸ್ರಿರಿಯಾಳುವ ದಾಸದಸ ವರ್ಮ್ಯದಿಹಿಲ ಉದ್ಭಟ ನಂಬಿ ಕುಂಬಾರ ಗುಂಡ ಅಂಡವಲ ಕರಿಕಾಲ ಚೋಳ ಭೋಗದೇವ ಬಾಣ ಮಯೂರ ಕಾಳಿದಾಸ ಕೇಶಿರಾಜ ದಣ್ನಾಯಕ ಸುರಿಗೆಯ ವಲ್ಲಡ ರಾಯ **ಸಂಗಬಸವಯ್ಯ** ಆ ನಿಮಿತಿ ಕೇಶವರಾಜ ಜಗದೇವ ದಣ್ನಾಯಕ ಏಕಾನ್ತದ ರಾಮಯ್ಯ ಸೊನ್ನಲಿಗೆಯ ರಾಮಯ್ಯ ಹುಲಿಗೆರೆಯ ಪೊನ್ನಯ್ಯ ನೆಲುವಿಗೆಯ ಸಾಂತಯ್ಯ ಸಕಳಗಣ ಪರಿವೇಷ್ಟಿತ ಶ್ರೀಕಲಿದೇವರ ಪ್ರಸಕ್ತಿ ಮಂಗಳಂ.

೫. **ಅರ್ಜುನವಾಡದ ಶಾಸನ : ಕಾಲ: ಕ್ರಿ.ಶ.೧೨೬೦**

ಮತ್ತಂ ತರ್ದವಾಡಿ ಮಧ್ಯಗ್ರಾಮ ಭಾಗವಾಡಿ ಪುರವರಾಧೀಶ್ವರ ಮಾದಿರಾಜನ
ತನೂಜಂ **ಬಸವರಾಜನ**
ಮಹಿಮೆಯೆಂತೆಂದಡೆ–

"ಮಂಗಳಕೀರ್ತಿಪುರಾತನ
ಜಂಗಮ ಲಿಂಗೈಕ ಭಕ್ತಿನಿರ್ಭರ ಲೀಲಾ।
ಸಂಗಂ ಸಂಗನ ಬಸವಂ॥
ಸಂಗತಿಯಂ ಮಾಳ್ಕೆ ಭಕ್ತಿಯೊಳಗನವರತಂ" ॥೩॥

"**ಸಂಗನಬಸವನಗ** (ಜ)
(ಲಿಂಗೈಕ್ಯಂ) ದೇವರಾಜ ಮುನಿಪನ ತನಯಂ
ಜಂಗಮಪರುಸಂ (ಕಾವ)ರ
ಸಂಗಂ ಪ್ರಿಯಸಂತನೆನಿಪ ಕಲಿದೇವರಸಂ ॥೧೦॥
ಭಕ್ತಿಸಂಪನ್ನ ಶ್ರೀಬಸವರಾಜನ ನಾನ್ದರುಮಪ್ಪತಪಶ್ಚಕ್ರವರ್ತ್ತಿ...
....

ಸಂಗಮೇಶ್ವರಕೆ ಪಾರಣಿಯ ಜಂಗಮಾರಾಧನೆಗೆ ಕೊತ್ತನಿಗೆ ಇ (ಈ) ಧರ್ಮಕೆ (ಇ)ದು ವಿವರವು ಎಂದು ನಾಗರಸ (ರು) ಕೊಟೆ (ಟಿ) ಎ..... ಶಾಸನ ನಾಲ್ಕುಂ ಪಟ್ಟಣಂಗಳು ನೂಲೆನಾಡೊಳಗೆ ಸಂತೆಗಳ ಆಯದಾಯ ಇಪರಿತು... ಕೋಣನ ಮೆಯ್ದೆಪೆ ಸುಂಕ ಹದಿನೆಂಟು ಸಮಯವೂ ಅರುವತ್ತಮೂವರೂ : ಬಣಜು ಭಕುತಿ ಭೇದವಿ(ಲ್ಲ) ಕವಿಳಾಸ ಪುರವೆ ಸಾಸನದವನೆ **ಬಸವರಾಜನೆ** ಸಾಸನಿಕನೆಂದು ಮುಭಯ ನಾನಾದೇಸಿ ಮುಮ್ಮರಿ ದಂಡಂಗಳು ಕೊಟ್ಟ ಸಾಸನ.

೬ **ಚೌಡದಾನಪುರ ಶಾಸನ : ಕಾಲ ಕ್ರಿ.ಶ.೧೨೬೨.**

ನೆಗಲ್ದುದ್ರಿಜೆ ಬಿನ್ನಪಂ ಶಿವ ಜಗಕ್ಕೀ ಮಾರ್ಗವಂ ತೋರಬೇ।
ಕೆನಲಾಗ ಪ್ರಭು ನಂದಿನಾಥನ ಮೊಗಂ ನೋಡಲ್ಕೆ (–)
ಸಂಗಮೇಶನಪುತ್ರ **ಬಸವಯ್ಯ** ಬಂ . . . . .॥

೭. **ಜಗಳೂರು ಶಾಸನ : ಕಾಲ:ಕ್ರಿ.ಶ.೧೨೭೮.**

ಶರಣಜನ ಮನಸ್ಸರೋಜ ರಾಜಹಂಸನುಂ ।
ಚೇರಚೋಳ ನಂಬಿ ನಂಬಿ । ಚಿಕ್ಕ ಕಕ್ಕ ಚೆಂಗಹೊಂನ
ಬಂಕ ಬಸವರಾಜ ಭೋಜಾದಿ ಮರ್ತ್ಯಲೋಕದ
ಮಹಾಗಣಾಚಾರ ಧರಾಭಾರ ಧೌರೇಯ
ತಿಕ್ಕುಂಜರನುಂ॥

೮. **ಕಲ್ಲೇದೇವರ ಪುರದ ಶಾಸನ : ಕಾಲ: ಕ್ರಿಶ. ೧೨೭೯-೮೦.**

.........ಕುರ್ಣ್ಣಾವತಂಸನುಂ ಶರಣಜನ ಮನಸ್ಸರೋಜ
ರಾಜ ಹಂಸನುಂ ಚೇರಚೋಳ ನಂಬಿ ನಂಬಿ
ಚೆಕ್ಕ ಕಕ್ಕ ಚೆಂನ ಹೊಂನ ಬಂಕ **ಬಸವರಾಜ** ಭೋಜಾದಿ
ಮರ್ತ್ಯಲೋಕದ ಮಹಾಗಣಾಗಣಾಚಾರ.............

೯. **ಗುಡಿಹಾಳ ಕುಂಟೋಜಿ ಶಾಸನ**

ಕಾಲ: ?
ಇದು **ಬಸವರಾಜದೇವರ** ಮಾನ್ಯ
ಇದನ್ನಾರೂ ಅಳುಪಬಾರದು

ಅನುಬಂಧ–೩
ಬಸವಪುರಾಣ: ವಿವಿಧ ಹಸ್ತಪ್ರತಿಗಳಲ್ಲಿಯ ರಾಗಗಳು

ಸಂಧಿ : ೧

ನಾಟಿರಾಗ (ಅ.ಕ ಪ್ರತಿಗಳು); ಮಲಹರಿ (ಚ ಪ್ರತಿ); ಶಾಂತಮಲಹರಿ (ತ,ಥ ಪ್ರತಿಗಳು); ಭೈರವಿ (ಸ.ಪ್ರತಿ)

ಸಂಧಿ : ೪

ಲಳಿತೆ (ಅ,ಡಾ,ಧ,ಮ ಪ್ರತಿಗಳು) ; ವರಾಳಿ (ಚ ಪ್ರತಿ);ವಸಂತ ಭೈರವಿ (ತ.ಪ್ರತಿ)

ಸಂಧಿ : ೫

ಧನ್ಯಾಸಿ (ಮ,ಚ, ಅ ಪ್ರತಿಗಳು); ಭೈರವಿ (ತ)

ಸಂಧಿ : ೬

ದೇಶಿ (ಚ.ಮ.ಡಾ ಪ್ರತಿಗಳು); ವಸಂತ ಭೈರವಿ (ತ)

ಸಂಧಿ : ೭

ದೇಸಿ (ಚ.ಪ್ರತಿ); ದೇಸೋಕ್ತಿ (ಮ ಪ್ರತಿ); ವಡ್ಡಿ ಧನ್ಯಾಸಿ (ತಪ್ರತಿ)

ಸಂಧಿ : ೮

ಮಾಳವಗೌಳ (ಅ,ಚ,ಧ,ಪ,ಮ ಪ್ರತಿಗಳು); ವಡ್ಡಿಧನ್ಯಾಸಿ (ತ ಪ್ರತಿ)

ಸಂಧಿ : ೯

ನಾಟಿ (ಚ. ಪ್ರತಿ); ಮಾಳವಗೌಳ (ಅ ಪ್ರತಿ); ಬಹುಳಿ (ಡಾ ಪ್ರತಿ)

ಸಂಧಿ : ೧೦

ನಾಟಿ (ಅ,ಡಾ,ಧ,ಮ, ಪ್ರತಿಗಳು) ; ದೇಶಿ (ತ)

ಸಂಧಿ : ೧೧

ಗೌಳ (ಅ,ಚ,ಡಾ,ಧ ಪ್ರತಿಗಳು); ರಾಮಕ್ರೀ (ಮ ಪ್ರತಿ)

ಸಂಧಿ: ೧೨

ಕನ್ನಡಗೌಳ (ಅ,ಚ,ಡಾ,ಧ, ಮ ಪ್ರತಿಗಳು); ಸೌರಾಷ್ಟ್ರ (ತ ಪ್ರತಿ)

ಸಂಧಿ : ೧೩

ಮಧುಮಾಧವಿ (ಧ ಪ್ರತಿ); ಭೂಪಾಳಿ (ತ ಪ್ರತಿ)

ಸಂಧಿ : ೧೪

ಗುಜ್ಜರಿ (ಧ ಪ್ರತಿ); ಲಲಿತೆ (ತ ಪ್ರತಿ)

ಸಂಧಿ : ೧೫

ಗೌಳ (ಕ,ಚ,ಡಾ,ಧ ಪ್ರತಿಗಳು); ದೇಸಿ (ಮ, ಅ ಪ್ರತಿಗಳು); ಪಂತುರಾವಳಿ (ತ ಪ್ರತಿ)

ಸಂಧಿ : ೧೬

ಮಾಳವಗೌಳ (ಅ,ಡಾ,ಮ ಪ್ರತಿಗಳು) ; ನಾಟಿ (ಚ, ಧ ಪ್ರತಿಗಳು); ತೋಡಿ (ತ ಪ್ರತಿ)

ಸಂಧಿ : ೧೭

ಕಾಂಬೋದಿ (ಧ); ಭೂತಾಳಿ (ತ)

ಸಂಧಿ : ೧೮

ನಾಟಿ (ಅ,ಡಾ,ಪ್ರತಿಗಳು); ಕೇತಾರಗೌಳ (ತ ಪ್ರತಿ); ಭೂಪಾಳಿ (ಮ ಪ್ರತಿ)

ಸಂಧಿ : ೧೯

ಕೇತಾರಗೌಳ (ಚ,ಧ.ಮ ಪ್ರತಿಗಳು); ಕನ್ನಡಗೌಳ (ಅ.ಚಾ. ಪ್ರತಿಗಳು); ಗುಂಡಾಕ್ರೀ) (ತ ಪ್ರತಿ)

ಸಂಧಿ : ೨೦

ವರಾಳಿ (ಅ,ಡಾ ಪ್ರತಿಗಳು); ನಾಟಿ (ಧ, ಪ,ಚ,ಮ ಪ್ರತಿಗಳು); ಮೇಘರಂಜೀ (ತ ಪ್ರತಿ)

ಸಂಧಿ : ೨೧

ಬುವಳಿ (ಕ ಪ್ರತಿ); ನಾಟಿ (ಅ,ಡಾ,ಪ್ರತಿಗಳು) ; ಫಳಮಂಜರಿ (ಧ, ಪ, ಪ್ರತಿಗಳು)

ಸಂಧಿ : ೨೨

ಕನ್ನಡಗೌಳ (ಅ,ಡಾ,ಥ,ಧ ಮ ಪ್ರತಿಗಳು); ಕನ್ನಡ ಕಾಂಬೋಧಿ (ಚ ಪ್ರತಿ); ವೊಡ್ಡಿಧನ್ಯಾಸಿ (ತ)

ಸಂಧಿ : ೨೩

ಫಲಮಂಜರಿ (ಅ,ಡಾ,ಚ,ಧ ಪ್ರತಿಗಳು); ಭೂಪಾಳಿ (ಮ ಪ್ರತಿ);ದೇಶಿ (ತ, ಪ್ರತಿಗಳು)

ಸಂಧಿ : ೨೪

ಬಹುಳಿ (ಧ, ವ ಪ್ರತಿಗಳು); ನಾಗಗಾಂಧಾರಿ (ತ)

ಸಂಧಿ : ೨೫

ವರಾಳಿ (ಅ,ಡಾ,ಚ,ಧ, ಪ ಪ್ರತಿಗಳು); ಮಧುಮಾಧವಿ (ಮ ಪ್ರತಿ); ಭೈರವಿ (ತ ಪ್ರತಿ)

ಸಂಧಿ : ೨೬

ನಾಟಿ (ಡಾ ಪ್ರತಿ); ಸೌರಾಷ್ಟ್ರ (ತ ಪ್ರತಿ); ಅಹಿರ (ಧ,ವ ಪ್ರತಿಗಳು)

ಸಂಧಿ : ೨೭

ನಾಟಿ (ಧ, ಪ ಪ್ರತಿಗಳು); ಶುದ್ಧಕಾಂಬೋಧಿ (ತ ಪ್ರತಿ)

ಸಂಧಿ : ೨೮

ಕನ್ನಡಗೌಳ (ಚ,ಬ ಪ್ರತಿಗಳು); ಶಾಂತಮಲಹರಿ (ಅ,ಧ,ಪ ಪ್ರತಿಗಳು); ಮಾಖಾರಿ (ತ,ಪ ಪ್ರತಿ)

ಸಂಧಿ : ೨೯

ಮಾಳವಗೌಳ (ಮ ಪ್ರತಿ); ಗೌಳ (ಅ,ಚ,ಧ,ಪ ಪ್ರತಿಗಳು); ವಸಂತ ಭೈರವಿ (ತ ಪ್ರತಿ)

ಸಂಧಿ : ೩೦

ನಾಟಿ (ಅ,ಧ,ಮ, ಪ್ರತಿಗಳು) ; ಬಹುಳಿ (ಚ,ದಾ,ಪ ಪ್ರತಿಗಳು); ತೆಲುಗು ಕಾಂಬೋಧಿ (ತ ಪ್ರತಿ)

ಸಂಧಿ : ೩೧

ನಾಟ (ಟ,ಪ, ಪ್ರತಿಗಳು) ; ಮೇಚ ಬಹುಳಿ (ಅ,ಡಾ ಪ್ರತಿಗಳು) ;ಬಹುಳಿ (ಮ ಪ್ರತಿ); ತೊಂಡಿ (ತ ಪ್ರತಿ); ಗುಂಡಶ್ರೀ (ಧ ಪ್ರತಿ)

ಸಂಧಿ : ೩೨

ಮಧುಮಾಧವಿ (ಅ,ಡಾ,ಮ ಪ್ರತಿಗಳು); ಕೇತಾರಗೌಳ (ತ ಪ್ರತಿ); ಶ್ರೀರಾಗ (ಕ,ಪ ಪ್ರತಿಗಳು); ಗುಜ್ಜರಿ (ಧ ಪ್ರತಿ)

ಸಂಧಿ :೩೩

ಗುಜ್ಜರಿ (ಪ ಪ್ರತಿ); ಗೌಳಪಂತು (ತ ಪ್ರತಿ); ಕೇತಾರಗೌಳ (ಧ ಪ್ರತಿ)

ಸಂಧಿ : ೩೪

ಬಂಗಾಳ (ಅ,ಮ ಪ್ರತಿಗಳು); ರಾಮಕ್ರೀ (ಡಾ,ಚ,ಪ ಪ್ರತಿಗಳು); ಶಾಂತಮಲಹರಿ (ಧ ಪ್ರತಿ); ಅಹಿರ (ತ ಪ್ರತಿ)

ಸಂಧಿ : ೩೫

ಮಲಹರಿ (ಕ,ಚ,ಡಾ,ಪ ಪ್ರತಿಗಳು);ಅಹರಿ (ಮ ಪ್ರತಿ); ಶಂಕರಾಭರಣ (ತ ಪ್ರತಿ)

ಸಂಧಿ : ೩೬

ಏರಾಳಿ (ಡಾ,ಚ,ಧ, ಫ ಪ್ರತಿಗಳು); ಶೋಕವರಾಳಿ (ಅ,ಮ, ಪ್ರತಿಗಳು) ; ಪಹಡಿ (ತ ಪ್ರತಿ)

ಸಂಧಿ : ೩೭

ವಸಂತ (ಕ,ಚ,ಡಾ,ಧ,ಪ ಪ್ರತಿಗಳು); ಕನ್ನಡಗೌಳ (ಅ ಪ್ರತಿ); ಮಾಳವಗೌಳ (ಮ ಪ್ರತಿ); ಸೌರಾಷ್ಟ್ರ (ತ ಪ್ರತಿ)

ಸಂಧಿ : ೩೮

ಬಹುಳಿ (ಚ.ಡಾ,ಪ,ಮ ಪ್ರತಿಗಳು) ;ದೇವಗಾಂಧಾರ (ಅ ಪ್ರತಿ); ಮೇಘರಂಜಿ (ತ ಪ್ರತಿ)

ಸಂಧಿ : ೩೯

ಗುಂಡಾಶ್ರೀ (ಚ,ಧ,ಪ, ಪ್ರತಿಗಳು); ಭೈರವಿ (ಅ ಪ್ರತಿ); ರಾಮಕ್ರೀ (ಡಾ ಪ್ರತಿ) ದೇಶಾಖಿ (ಮ ಪ್ರತಿ); ಮೇಘರಂಜಿ (ತ ಪ್ರತಿ)

ಸಂಧಿ : ೪೦

ನಾಟಿ (ಡಾ,ಚ,ಪ,ಮ ಪ್ರತಿಗಳು); ಭೈರವಿ (ಅ ಪ್ರತಿ); ಕುರಂಜಿ (ತ ಪ್ರತಿ)

ಸಂಧಿ : ೪೧.

ನಾಟಿ (ಚ,ಧ,ಪ ಪ್ರತಿಗಳು:) ಮಲಹರಿ; (ತ ಪ್ರತಿ)

ಸಂಧಿ : ೪೨

ಬಹುಳಿ (ಡಾ, ಧ, ಚ, ಪ ಪ್ರತಿಗಳು); ರಾಮಕ್ರೀ (ಅ ಪ್ರತಿ); ಪಹಡಿ (ತ ಪ್ರತಿ)

ಸಂಧಿ : ೪೩

ಗುಂಡಾತ್ರೀ (ಧ ಪ್ರತಿ); ನಾದರಾಮಕ್ರೀ (ವ ಪ್ರತಿ); ವಸಂತ ಭೈರವಿ (ತ ಪ್ರತಿ)

ಸಂಧಿ : ೪೪

ವರಾಳಿ (ಅ,ಚ,ಡಾ,ಧ,ಪ ಪ್ರತಿಗಳು); ನಾಟಿ (ಮ ಪ್ರತಿ); ಶುದ್ಧಕಾಂಬೋದಿ (ತ ಪ್ರತಿ)

ಸಂಧಿ : ೪೫

ಶ್ರೀರಾಗ (ಅ,ಚ,ಡಾ,ಥ ಪ್ರತಿಗಳು) ; ರೇಗುಪ್ತಿ (ಮ ಪ್ರತಿ); ವರಾಳಿ (ಪ ಪ್ರತಿ); ಶಂಕರಾಭರಣ (ತ ಪ್ರತಿ)

ಸಂಧಿ : ೪೬

ವರಾಳಿ (ಡಾ,ಚ,ತ,ಪ, ಪ್ರತಿಗಳು); ಶೋಕವರಾಳಿ (ಮ ಪ್ರತಿ) ; ಜೋನಿಗ ವರಾಳಿ (ಅ ಪ್ರತಿ); ಗುಂಬ್ಧಕಾಂಬೋಧಿ

(ತ ಪ್ರತಿ)

ಸಂಧಿ : ೪೭

ನಾಟಿ (ಅ,ಚ,ಡಾ,ಧ, ಪ ಪ್ರತಿಗಳು) ಅಹರಿ (ಮ ಪ್ರತಿ); ವಸಂತ ಭೈರವಿ (ತ ಪ್ರತಿ)

ಸಂಧಿ : ೪೮

ನಾಟಿ (ಚ,ಧ, ಮ ಪ್ರತಿಗಳು); ಅಹರಿ (ಡಾ ಪ್ರತಿ); ಸಾವೇರಿ (ತ ಪ್ರತಿ); ವಸಂತ (ಪ ಪ್ರತಿ)

ಸಂಧಿ : ೪೯

ನಾಟಿ (ಅ, ಚ, ಥಾ, ಧ,ಮ ಪ್ರತಿಗಳು); ಗುಂಡಕ್ರೀ (ಪ ಪ್ರತಿ); ಕೇತಾರಗೌಳ (ತ ಪ್ರತಿ)

ಸಂಧಿ : ೫೦

ಗೌಳ (ಅ,ಚ,ಥಾ,ಧ, ಪ ಪ್ರತಿಗಳು); ಮಲಹರಿ (ತ, ಮ ಪ್ರತಿಗಳು)

ಸಂಧಿ : ೫೧

ಮಾಳವಶ್ರೀ (ಧ, ಪ ಪ್ರತಿಗಳು); ಕನ್ನಡ ಗೌಳ (ತ ಪ್ರತಿ)

ಸಂಧಿ : ೫೨

ನಾಟಿ (ಅ,ಚ ಡಾ,ಧ,ಮ ಪ್ರತಿಗಳು); ಸಾಳಂಗ (ಪ ಪ್ರತಿ); ಕೇತಾರಗೌಳ (ತ ಪ್ರತಿ)

ಸಂಧಿ : ೫೩

ದೇಸಿ (ಅ,ಡಾ,ಚ,ಧ, ಪ ಪ್ರತಿಗಳು); ನಾಟಿ (ಮ ಪ್ರತಿ);ನಾಗಗಾಂಧಾರಿ (ತ ಪ್ರತಿ)

ಸಂಧಿ : ೫೪

ನಾಟಿ (ಅ,ಡಾ,ಧ,ಪ,ಮ ಪ್ರತಿಗಳು); ಶ್ರೀರಾಗ (ಚ ಪ್ರತಿ);ಕೇತಾರ ಗೌಳ (ತ ಪ್ರತಿ)

ಸಂಧಿ : ೫೫

ವರಾಳಿ (ಅ,ಡಾ.ಧ ಪ ಪ್ರತಿಗಳು);ನಾಟಿ (ಚ ಪ್ರತಿ) ;ಸೌರಾಷ್ಟ್ರ (ತ ಪ್ರತಿ)

ಸಂಧಿ : ೫೬

ದೇಸಿ (ಅ,ಡಾ.ಧ.ಪ ಪ್ರತಿಗಳು); ನಾಟಿ (ಮ ಪ್ರತಿ); ಮಧುಮಾಧವಿ (ಚ ಪ್ರತಿ); ಶ್ರೀರಾಗ (ತ ಪ್ರತಿ)

ಸಂಧಿ : ೫೭

ಗುಜ್ಜರಿ (ಅ,ಡಾ.ಧ,ಪ,ಮ ಪ್ರತಿಗಳು);ಗೌಳ (ಚ ಪ್ರತಿ)

ಸಂಧಿ : ೫೮

ಮಾಳವಶ್ರೀ (ಧ,ಪ ಪ್ರತಿಗಳು) ; ಕಲ್ಯಾಣಿ (ತ ಪ್ರತಿ)

ಸಂಧಿ : ೫೯

ಫಲಮಂಜರಿ (ಢ, ಪ ಪ್ರತಿಗಳು); ಪಂತುರಾಳಿ (ತ ಪ್ರತಿ)

ಸಂಧಿ : ೬೦

ಗುಂಡಾಕ್ರೀ (ಅ,ಡಾ.ಧ, ಪ ಪ್ರತಿಗಳು) ; ಮಲಹರಿ (ಅ,ಮ ಪ್ರತಿಗಳು); ನಾಟಿ (ಚ ಪ್ರತಿ); ಶಂಕರಾಭರಣ (ತ ಪ್ರತಿ)

ಅನುಬಂಧ–೪

ಗ್ರಂಥಋಣ

೧) ಉತ್ತರದೇಶದ ಬಸವಲಿಂಗ – ಭೈರವೇಶ್ವರ ಕಾವ್ಯದ ಕಥಾಸಾಗರ ಮತ್ತು ಉಚಿತ ಕಥೆಗಳು, ವೀರಶೈವ ಅಧ್ಯಯನ ಸಂಸ್ಥೆ, ಗದಗ, (೨೦೦೦)

೨) ಉತ್ತರದೇಶದ ಬಸವಲಿಂಗ – ಉಮಾಪತಿ ಎಸ್. (ಸಂ) ಬಸವೇಶ್ವರ ಪುರಾಣದ ಕಥಾಸಾಗರ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು, (೧೯೭೬)

೩) ಕಲಬುರ್ಗಿ ಎಂ. ಎಂ. – ಕನ್ನಡ ಸಂಶೋಧನ ಶಾಸ್ತ್ರ, ಸಪ್ನ ಬುಕ್ ಹೌಸ್, ಬೆಂಗಳೂರು, (೨೦೦೧)

೪) ಕಲಬುರ್ಗಿ ಎಂ. ಎಂ. – ಸುಂಕಾಪುರ ಎಂ. ಎಸ್ ಚೆನ್ನಂಜೆದೇವರು ಮತ್ತು ಬೋಳ ಬಸವರಾಜರು ಸಂಪಾದಿಸಿದ ಬಸವಸ್ತೋತ್ರದ ವಚನಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, (೧೯೭೬)

೫) ಕಲಬುರ್ಗಿ ಎಂ. ಎಂ. – ಮಾರ್ಗ – ಸಂಪುಟ ಒಂದು, ನರೇಶ ಮತ್ತು ಕಂಪನಿ, ಬೆಂಗಳೂರು, (೧೯೮೮)

೬) ಕಲಬುರ್ಗಿ ಎಂ. ಎಂ. – ಮಾರ್ಗ–ಸಂಪುಟ ನಾಲ್ಕು, ಸಪ್ನ ಬುಕ್ ಹೌಸ್, ಬೆಂಗಳೂರು, (೨೦೦೫)

೭) ಕಲಬುರ್ಗಿ ಎಂ. ಎಂ – ಶಾಸನಗಳಲ್ಲಿ ಶಿವಶರಣರು, ವೀರಶೈವ ಅಧ್ಯಯನ ಸಂಸ್ಥೆ, ಶ್ರೀಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಗದಗ, (೧೯೭೮)

೮) ಕಲಬುರ್ಗಿ ಎಂ.ಎಂ.(ಸಂ) – ಸಮಗ್ರ ವಚನ ಸಂಪುಟ–೧, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, (೨೦೦೧)

೯) ಕಲಬುರ್ಗಿ ಎಂ.ಎಂ.(ಸಂ) – ಸಮಗ್ರ ವಚನ ಸಂಪುಟ–೬, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, (೨೦೦೧)

೧೦) ಕುವೆಂಪು ಮತ್ತು ಮಾಸ್ತಿ ವೆಂಕಟೇಶ್ ಅಯ್ಯಂಗಾರ್(ಸಂ) – ಕುಮಾರವ್ಯಾಸನ ಕರ್ನಾಟಕ ಭಾರತ ಕಥಾಮಂಜರಿ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು,–(೨೦೦೧)

೧೧) ಗುಂಜಾಳ ಎಸ್. ಆರ್ – ಬಸವಣ್ಣನವರ ಸುತ್ತಮುತ್ತ, ದುರದುಂಡೀಶ್ವರ ಮಠ, ಮುರಗೋಡ, (೧೯೯೭)

೧೨) ಗುಂಜಾಳ ಎಸ್. ಆರ್. ಮತ್ತು ಮಡಿವಾಳ ಸ್ವಾಮಿಗಳು – ಬಸವಣ್ಣನವರ ವಚನಪದಪ್ರಯೋಗ ಕೋಶ, ಲಿಂಗಾಯತ ಸಂಶೋಧನ ಕೇಂದ್ರ, ನಾಗನೂರು ಶ್ರೀ ರುದ್ರಾಕ್ಷಿಮಠ, ಬೆಳಗಾವಿ, (೨೦೧೦)

೧೩) ಗುಂಜಾಳ ಎಸ್. ಆರ್. – ವಿದ್ವಾಂಸರ ದೃಷ್ಟಿಯಲ್ಲಿ ಬಸವಣ್ಣ, ಬಸವತತ್ವ ಪ್ರಸಾರ ಸಂಸ್ಥೆ, ಧಾರವಾಡ, (೨೦೦೮)

೧೪) ಗುಂಜಾಳ ಎಸ್. ಆರ್ – ಶಿವಾನುಭವ ಪತ್ರಿಕೆಯ ಲೇಖನ ಸೂಚಿ, ಬಿ.ಎಲ್. ಡಿ.ಇ. ಸಂಸ್ಥೆ, ವಿಜಾಪುರ, (೨೦೦೨)

೧೫) ಗುಂಡಪ್ಪ ಡಿ. ವಿ – ಸಂಸ್ಕೃತಿ, ಕಾವ್ಯಾಲಯ ಪ್ರಕಾಶಕರು, ಮೈಸೂರು, (೧೯೫೫)

೧೬) ಗೋಗಿ. ಹನುಮಾಕ್ಷಿ ಮತ್ತು– ರಾಠೋಡ. ಪಿ. ಕೆ – ಡಂಬಳ: ಸಾಂಸ್ಕೃತಿಕ ಅಧ್ಯಯನ, ಲಿಂಗಾಯತ ಅಧ್ಯಯನ ಸಂಸ್ಥೆ, ಗದಗ. (೨೦೦೮)

೧೭) ಗೋಪಾಲಕೃಷ್ಣಯ್ಯಕೆ.ಎಲ್.– ಪುರಾಣ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, (೧೯೯೮)

೧೮) ಚಂದ್ರಶೇಖರ್ ಎಂ. – ವಿರೂಪಕ್ಷಪಂಡಿತನ ಚೆನ್ನಬಸವಪುರಾಣ, (ಗದ್ಯಾನುವಾದ) ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು, (೧೯೭೯)

೧೯) ಚಿದಾನಂದಮೂರ್ತಿ ಎಂ. – ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಸಪ್ನಬುಕ್ ಹೌಸ್, ಬೆಂಗಳೂರು, (೨೦೦೮)

೨೦) ಚಿದಾನಂದಮೂರ್ತಿ ಎಂ. – ಬಸವಣ್ಣ : ಕರ್ನಾಟಕ : ಭಾರತ, ಚಿದಾನಂದ ಸಮಗ್ರ ಸಂಪುಟ–V ಸಪ್ನ ಬುಕ್ ಹೌಸ್, ಬೆಂಗಳೂರು, (೨೦೦೮)

೨೧) ಚಿದಾನಂದಮೂರ್ತಿ ಎಂ. – ಲಿಂಗಾಯತ ಅಧ್ಯಯನಗಳು, ವಾಗ್ದೇವಿ ಪುಸ್ತಕಗಳು, ಮೈಸೂರು, (೧೯೮೬)

೨೨) ಚಿದಾನಂದಮೂರ್ತಿ ಎಂ. – ಸಂಶೋಧನೆ, ಡಿ.ವಿ.ಕೆ.ಮೂರ್ತಿ ಪ್ರಕಾಶಕರು, ಮೈಸೂರು, (೨೦೦೨)

೨೩) ಜಗದ್ಗುರುಮಾತೆಮಹಾದೇವಿ– ವಿಶ್ವವಿಭೂತಿ ಬಸವಣ್ಣ, ಸುಯಿದಾನ ಸುಗ್ರಂಥಮಾಲೆ, ಧಾರವಾಡ, (೧೯೭೭)

೨೪) ಜಗದ್ಗುರು ಶಿವರಾತ್ರಿದೇಶಿ ಕೇಂದ್ರ ಮಹಾಸ್ವಾಮಿಗಳು – (ಸಂ) ನಂಜುಂಡ ಭಾಗವತನ ವೃಷಭೇಂದ್ರವಿಳಾಸ ಮೈಸೂರು, (೨೦೦೮)

೨೫) ಜಾಲವಾದಿ ಅನ್ನಪೂರ್ಣ – ಶಂಕರದಾಸಿಮಯ್ಯ ಪುರಾಣ : ಒಂದು ಅಧ್ಯಯನ, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಗದಗ, (೧೯೯೯)

೨೬) ತರೀಕೆರೆ ರಹಮತ್ – ಸಾಂಸ್ಕೃತಿಕ ಅಧ್ಯಯನ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, (೨೦೦೪)

೨೭) ದಿವಾಕರ ಆರ್. ಆರ್. – ವಚನಶಾಸ್ತ್ರಸಾರ, ಶ್ರೀ ಜಗದ್ಗುರು ಗಂಗಾಧರ ಧರ್ಮ ಪ್ರಚಾರಕ ಮಂಡಲಿ, ಹುಬ್ಬಳ್ಳಿ, (೧೯೬೮)

೨೮) ದೇವೀರಪ್ಪ ಎಚ್. (ಸಂ) – ಶಿವಶರಣ ಸಂಪುಟ, ಬೆಂಗಳೂರು ವಿಶ್ವವಿದ್ಯಾನಿಲಯ, (೧೯೭೩)

೨೯) ದೇವೀರಪ್ಪ ಎಚ್. ಮತ್ತು ರಾಚಪ್ಪ ಆರ್.(ಸಂ)– ಶಿವತತ್ವಚಿಂತಾಮಣಿ, ಪ್ರಾಚ್ಯವಿದ್ಯಾ ಸಂಶೋಧನಾಲಯ, ಮೈಸೂರು, (೧೯೯೦)

೩೦) ದೇವೀರಪ್ಪ ಎಚ್. ಮತ್ತು ಹೆಚ್.ಸಿ.ಪದ್ಮನಾಭಶರ್ಮ (ಸಂ) – ಅನಂತನಾಥ ಪುರಾಣ, ಮೈಸೂರು ವಿಶ್ವವಿದ್ಯಾನಿಲಯ,ಮೈಸೂರು, ೧೯೭೩,

೩೧) ನರಸಿಂಹಾಚಾರ್ ಆರ್. – ಕರ್ನಾಟಕ ಕವಿಚರಿತೆ ಸಂಪುಟ–೧,೩, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ ಬೆಂಗಳೂರು, (೧೯೯೧)

೩೨) ನಂಜೇಗೌಡ ಎಚ್. – ಬಸವರಾಜದೇವರ ರಗಳೆ (ಪಕ್ಷಿನೋಟ) ಚೇತನ್ ಬುಕ್ ಹೌಸ್, ಬೆಂಗಳೂರು, (೨೦೦೦)

೨೩) ಜವರೇಗೌಡ ದೆ. – ಗದುಗಿನ ಭಾರತ: ಒಂದು ಸಾಂಸ್ಕೃತಿಕ ಅಧ್ಯಯನ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೬

೩೪)	ನರಸಿಂಹಾಚಾರ್ ಡಿ.ಎಲ್. – (ಸಂ)	ಸಿದ್ಧರಾಮಚಾರಿತ್ರ್ಯ, ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು, (೧೯೭೫)
೩೫)	ನಾಗಯ್ಯ ಜೆ.ಎಂ. –	ಆರನೆಯ ವಿಕ್ರಮಾದಿತ್ಯನ ಶಾಸನಗಳು, ವೀರಶೈವ ಅಧ್ಯಯನ ಅಕಾಡೆಮಿ, ಶ್ರೀನಾಗನೂರು ರುದ್ರಾಕ್ಷಿಮಠ, ಬೆಳಗಾವಿ, (೧೯೯೨)
೩೬)	ನಾಯಕ ಹಾ. ಮಾ –	ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ಸಾಹಿತ್ಯ ಚರಿತ್ರೆ (ಸಂ.ಐದು)
೩೭)	ನಾಗೇಗೌಡ ಎಚ್. ಎಲ್. –	ಪ್ರಾವಾಸಿ ಕಂಡ ಇಂಡಿಯಾ (ಸಂ–೧ಮತ್ತು೨) ಮೈಸೂರು ವಿಶ್ವವಿದ್ಯಾಲಯ, ಮೈಸೂರು, (೧೯೬೪)
೩೮)	ನಾರಾಯಣ ಪಿ.ವಿ –	ವಚನ ಸಾಹಿತ್ಯ ; ಒಂದು ಸಾಂಸ್ಕೃತಿಕ ಅಧ್ಯಯನ, ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಗದಗ, (೧೯೮೩)
೩೯)	ನಾರಾಯಣ ಪಿ.ವಿ (ಅನು)–	ಪಾಲ್ಕುರಿಕೆ ಸೋಮನಾಥ ಬಸವಪುರಾಣ, ತರಳಬಾಳು ಪ್ರಕಾಶನ ಸಿರಿಗೆರೆ (೧೯೮೨)
೪೦)	ಪರಡ್ಡಿ ಮಲ್ಲಿಕಾರ್ಜುನ ಶಾಸ್ತ್ರಿ ನಾಗಭೂಷಣ ದೇಶಪಾಂಡೆ ಸಿ. ಎನ್(ಸಂ –	ಕಂಚೀ ಶಂಕರಾರಾಧ್ಯ ವಿರಚಿತ ಶ್ರೀಬಸವಪುರಾಣ, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, (೧೯೯೩)
೪೧)	ಪಾಟೀಲ ಸದಾನಂದ –	ಹರಿಹರನ ರಗಳೆಗಳು ; ಒಂದು ಸಾಂಸ್ಕೃತಿಕ ಅಧ್ಯಯನ, ವೀರಶೈವ ಅಧ್ಯಯನ ಸಂಸ್ಥೆ, ಶ್ರೀಜಗದ್ಗುರು ತೋಂಟದಾರ್ಯಸಂಸ್ಥಾನಮಠ, ಗದಗ (೧೯೯೯)
೪೨)	ಪುಟ್ಟಸ್ವಾಮಯ್ಯ ಬಿ. –	ಕ್ರಾಂತಿಕಲ್ಯಾಣ, ಶಾರದಾ ಪ್ರಕಟನಾಲಯ, ಬೆಂಗಳೂರು, (೧೯೬೯)
೪೩)	ಪುರಾಣಿಕ ಸಿದ್ಧಯ್ಯ –	ಬಸವಣ್ಣನವರ ಜೀವನ ಹಾಗೂ ಸಂದೇಶ, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, – (೧೯೭೭)
೪೪)	ಬಸವರಾಜು ಎಲ್. –	ಬಸವ ವಚನಾಮೃತ (ಭಾಗ ೧ಮತ್ತು ೨) ಬಸವ ಸಮಿತಿ, ಬೆಂಗಳೂರು (೨೦೦೨)

೪೫) ಬಸವರಾಧ್ಯ ಎನ್ .(ಸಂ) – ಪಾಲ್ಕುರಿಕೆ ಸೋಮನಾಥ : ಒಂದು ಅಧ್ಯಯನ ಬಸವ ಸಮಿತಿ, ಬೆಂಗಳೂರು (೨೦೦೦)

೪೬) ಬಾಲಸೂರಿ ಎಚ್.ಕೆ. – ರಕ್ಷಾವಾಹಿನಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೮೩

೪೭) ಭೂಸನೂರಮಠ ಸಂ.ಶಿ(ಸಂ) – ಶ್ರೀ ಗುರುರಾಜಚಾರಿತ್ರ, ಮುರುಘಾಮಠ, ಧಾರವಾಡ, (೧೯೫೦)

೪೮) ಮಹಾದೇವಪ್ಪ ಎನ್. ಜಿ – ಸಮಗ್ರ ವಚನ ಸಂಪುಟ–೧೫ ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, (೨೦೦೧)

೪೯) ಮಾಳವಾಡ ಸ.ಸ, ಪ್ರಮ. ನಿ.ಪ್ರ,ಮೃತ್ಯುಂಜಯ ಸ್ವಾಮಿಗಳು (ಸಂ) – ಸಿದ್ಧನಂಜೇಶನರಾಘವಾಂಕಚಾರಿತ್ರ, ಮುರುಘಾಮಠ, ಧಾರವಾಡ (೧೯೫೪)

೫೦) ಮಾಗಿ ಬಿ.ಎಂ. (ಸಂ) – ದುರ್ಗಸಿಂಹನ ಪಂಚತಂತ್ರದ ಕಥೆಗಳು ಸುಂದರ ಪುಸ್ತಕ, ಧಾರವಾಡ, (೧೯೭೯)

೫೧) ಮುಗಳಿ ರಂ. ಶ್ರೀ – ಕನ್ನಡ ಸಾಹಿತ್ಯ ಚರಿತ್ರೆ, ಉಷಾ ಸಾಹಿತ್ಯ ಮಾಲೆ, ಮೈಸೂರು (೧೯೯೪)

೫೨) ರಾಯಚೂರು ಶಾಂತರಸ ಬೆಟ್ಟದೂರು ಚೆನ್ನಬಸಪ್ಪ ಸತ್ಯಂಪೇಟೆ ಲಿಂಗಣ್ಣ(ಸಂ) – ಕಾಯಕ ಪರಿಣಾಮಿ, ಭೀಮಣ್ಣ ಖಂಡ್ರೆ (೧೯೯೧)

೫೩) ರಾಜೂರು ವೀರಣ್ಣ (ಸಂ) – ಸಮಗ್ರ ವಚನ ಸಂಪುಟ–೫, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು (೨೦೦೧)

೫೪) ರಾಜೂರು ವೀರಣ್ಣ (ಸಂ) – ಸಮಗ್ರ ವಚನ ಸಂಪುಟ–೧೦, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು (೨೦೦೧)

೫೫) ರಾಜೂರು ವೀರಣ್ಣ(ಸಂ) – ಸಮಗ್ರ ವಚನ ಸಂಪುಟ–೧೨, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು (೨೦೦೧)

೫೬) ರಾಜೂರು ವೀರಣ್ಣ (ಸಂ) – ಸಮಗ್ರ ವಚನ ಸಂಪುಟ–೧೪, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು (೨೦೦೧)

೫೭) ರಾಜೂರು ವೀರಣ್ಣ (ಸಂ) – ಬಸವಮಾರ್ಗ–೮, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, (೧೯೯೪)

೫೮) ವಿದ್ಯಾಶಂಕರ ಎಸ್.(ಸಂ) – ಭೀಮಕವಿಯ ಬಸವಪುರಾಣ (ಒಂದು ತುಲನಾತ್ಮಕ ಅಧ್ಯಯನ) ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು, (೨೦೦೩)

೫೯) ವಿದ್ಯಾಶಂಕರ ಎಸ್. (ಸಂ) – ಭೀಮಕವಿ ಬಸವಪುರಾಣ, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು, (೨೦೦೮)

೬೦) ವಿದ್ಯಾಶಂಕರ ಎಸ್.(ಸಂ) – ವೀರಶೈವ ಪುರಾಣಗಳು; ಒಂದು ಅಧ್ಯಯನ, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು, (೨೦೦೬)

೬೧) ವಿದ್ಯಾಶಂಕರ ಎಸ್.(ಸಂ) – ಸಮಗ್ರ ವಚನ ಸಂಪುಟ–೪, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, (೨೦೦೧)

೬೨) ವಿದ್ಯಾಶಂಕರ ಎಸ್. (ಸಂ) – ಸಮಗ್ರ ವಚನ ಸಂಪುಟ–೭, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, (೨೦೦೧)

೬೩) ವೆಂಕಣ್ಣಯ್ಯ ಟಿ. ಎಸ್. – ಹರಿಹರನ ಬಸವರಾಜದೇವರ ರಗಳೆ, ವೆಸ್ಲಿ ಪ್ರೆಸ್, ಮೈಸೂರು, (೧೯೩೮)

೬೪) ಶಾಮರಾಯ ತ.ಸು – ಶಿವಶರಣ ಕಥಾರತ್ನಕೋಶ, ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು, (೧೪೯೭) ೯

೬೫) ಶಾಮರಾಯ ತ.ಸು ಮತ್ತು ರಾಜೇಶ್ವರಯ್ಯ ಮೇ – ಕನ್ನಡ ಸಾಹಿತ್ಯ ಚರಿತ್ರೆ, ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಮೈಸೂರು (೧೯೬೪)

೬೬) ಶಿವಣ್ಣ ಎಸ್. (ಸಂ) – ಸಮಗ್ರ ವಚನ ಸಂಪುಟ–೧೧ ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು (೨೦೦೧)

೬೭) ಶಿವಲಿಂಗಯ್ಯ ಜಿ.ಎ. (ಸಂ)– ವಿವೇಕ ಚಿಂತಾಮಣಿ, ಶಿವಕವಿ ಪ್ರಕಾಶನ, ಮೈಸೂರು, ೧೯೮೯

೬೮) ಶ್ರೀನಿವಾಸಮೂರ್ತಿ ಎಂ.ಆರ್.– ಭಕ್ತಿಭಾಂಡಾರಿ ಬಸವಣ್ಣನವರು, ಕರ್ನಾಟಕ ಸಂಘ, ಸೆಂಟ್ರಲ್ ಕಾಲೇಜು, ಬೆಂಗಳೂರು (೧೯೩೧)

೬೯) ಸವದತ್ತಿಮಠ ಸಂಗಮೇಶ – ಕನ್ನಡ ಸಂಶೋಧನೆ ಮಾರ್ಗಮತ್ತು ಇತಿಹಾಸ, ರೂಪರಶ್ಮಿ ಪ್ರಕಾಶನ, ಧಾರವಾಡ, (೨೦೦೬)

೭೦) ಸವದತ್ತಿಮಠ ಸಂಗಮೇಶ – ಕನ್ನಡ ಸಂಶೋಧನ ಕೈಪಿಡಿ, ವಿದ್ಯಾನಿಧಿ ಪ್ರಕಾಶನ, ಗದಗ, (೧೯೯೩)

೭೧) ಸುಂಕಾಪುರ ಎಸ್, (ಸಂ) – ಚಾಮರಸ ವಿರಚಿತ ಪ್ರಭುಲಿಂಗಲೀಲೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ (೧೭೯)

೭೨) ಹೀರೇಮಠ ಆರ್. ಸಿ ಮತ್ತು– ಸುಂಕಾಪುರ ಎಂ ಎಸ್.(ಸಂ) ಷಡಕ್ಷರದೇವನ ರಾಜಶೇಖರವಿಳಾಸ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, (೧೯೬೨)

೭೩) ಹಿರೇಮಠ ಆರ್.ಸಿ. (ಸಂ) – ಭೀಮಕವಿ ಬಸವಪುರಾಣ, ಮುರುಘಾಮಠ, ಧಾರವಾಡ, (೧೯೭೧)

೭೪) ಹಿರೇಮಠ ಆರ್. ಸಿ (ಸಂ)– ಷಡಕ್ಷರದೇವನ ಬಸವರಾಜವಿಜಯಂ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ (೧೯೭೮)

೭೫) ಹಿರೇಮಠ ಬಿ. ಆರ್. (ಸಂ)– ಸಮಗ್ರ ವಚನ ಸಂಪುಟ–೮, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, (೨೦೦೧)

೭೬) ಹಿರೇಮಠ ಬಿ. ಆರ್. (ಸಂ) – ಸಮಗ್ರ ವಚನ ಸಂಪುಟ–೯, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, (೨೦೦೧)

ಆಂಗ್ಲ ಗ್ರಂಥ

Basava Darshana - Angadi(S.M)Pub:Smt Sarojini.S. Angadi, Dharwad, 1986.

ಶಾಸನ ಸಂಪುಟ

Epigraphica Cornatica
Epigraphia Indica
south Indian Inscriptions.

ನಿಯತ ಕಾಲಿಕೆ

ಕಲ್ಯಾಣ ಕಿರಣ :

ಸಂಪುಟ		ಸಂಚಿಕೆ		ಪ್ರಕಟಣಾ ವರ್ಷ
೯	–	೬	–	೧೯೮೨
೧೧	–	೩	–	೧೯೮೩
೧೪	–	೧	–	೧೯೮೫
೧೬	–	೧	–	೧೯೮೭
೨೦	–	೧–೨	–	೧೯೯೧

ತರಳಬಾಳು :

ಸಂಪುಟ		ಸಂಚಿಕೆ		ಪ್ರಕಟಣಾ ವರ್ಷ
೪	–	೩	–	೧೯೭೯
೪	–	೪	–	೧೯೭೯
೧೭	–	೩	–	೧೯೯೨
೧೮	–	೨	–	೧೯೯೨.

ಬಸವಪಥ :

ಸಂಪುಟ		ಸಂಚಿಕೆ		ಪ್ರಕಟಣಾ ವರ್ಷ
೩	–	೧	–	೧೯೮೦
೮	–	೩	–	೧೯೮೬
೧೨	–	೪	–	೧೯೯೦
೧೨	–	೮	–	೧೯೯೦
೧೨	–	೮	–	೧೯೯೦
೧೬	–	೬	–	೧೯೯೫
೧೯	–	೮	–	೧೯೯೭
೨೧	–	೧	–	೧೯೯೯
೨೨	–	೨	–	೨೦೦೦
೨೨	–	೬	–	೨೦೦೦
೨೩	–	೫	–	೨೦೦೧
೨೩	–	೧೦	–	೨೦೦೨.

ಶಿವಾನುಭವ :

ಫ.ಗು ಹಳಕಟ್ಟಿ ಸಮಗ್ರ ಸಾಹಿತ್ಯ – ಸಂ.ಡಾ. ಎಂ.ಎಸ್.ಮುದಭಾವಿ,
ಸಂಪುಟ:೧೧ ಚರಿತ್ರ ಸಾಹಿತ್ಯ–೨ ಬಿ.ಎಲ್.ಡಿ.ಇ. ಸಂಸ್ಥೆ, ವಿಜಾಪುರ,
೨೦೦೭